ವಿದ್ಯಾದಾಯಿನಿ.

ಭಾಗ ೬] ಜುಲೈ ೧೯೨೪. [ಸಂಚಿಕೆ ೩

ಸಂಪಾದಕರವರ ನೋಟ್ಸ್

ಈಗಿನ ಕಾಲದಲ್ಲಿ ವಿದ್ಯಾರ್ಥಿಗಳ ನಡೆನುಡಿಗಳು ಅಷ್ಟು ಸಮರ್ಪಕವಾಗಿಲ್ಲವೆಂದು ಯೂರೋಪ್ಯರೂ ಹಿಂದುಜನರೂ ಅಭಿಸಾಯಪಡುವರು. ಈ ವಿಷಯವು ಶೋಚನೀಯವಾದುದು. ಆರ್ಯರಲ್ಲಿ ಗುರುಶಿಷ್ಯ ಸಂಬಂಧವೆಂಬುದು ಸ್ತೋತ್ರಾರ್ಹವಾಗಿತ್ತು. ಆರ್ಯಕುಲೋತ್ಪನ್ನರಾಗಿಯೂ, ಆರ್ಯಸಂಸರ್ಗಕ್ಕೆ ಸೇರಿದವರಾಗಿಯೂ ಇರುವ ಈಗಿನ ವಿದ್ಯಾರ್ಥಿಗಳು ಅವವಾದಕ್ಕೆ ಈಡಾಗಿರುವುದು ಸಕಲರಿಗೂ ವಿಷಾದವನ್ನುಂಟುಮಾಡದಿರದು.

***

ಬಾಲಕರಿಗೆ ನಡೆನುಡಿಗಳನ್ನು ಕಲಿಸುವ ಭಾರವು ಆದಿಯಲ್ಲಿ ತಾಯಿತಂದೆಗಳಿಗೆ ಸೇರಿದುದು. ಪೂಜ್ಯರಾದ ಗುರುಹಿರಿಯರಲ್ಲಿ ವಿಶ್ವಾಸವನ್ನೂ ಭಯಭಕ್ತಿಯನ್ನು ಮಕ್ಕಳಲ್ಲಿ ಉಂಟುಮಾಡಬೇಕು. ಮಾತಾಪಿತೃಗಳು ಆಚರಿಸಿದಂತೆ ಮಕ್ಕಳೂ ಆಚರಿಸುವರು. ಮಾತಾಪಿತೃಗಳು ಪೂಜಿಸಿದವರನ್ನು ಮಕ್ಕಳೂ ಪೂಜಿಸುವರು. ಅವರು ನಿಂದಿಸಿದವರನ್ನು ಇವರೂ ನಿಂದಿಸುವರು. ಅವರು ಆಡುವ ಮಾತನ್ನೇ ಇವರೂ ಅನುಕರಿಸುವರು. ಅವರು ಮರ್ಯಾದೆಯಾದ ಮಾತುಗಳನ್ನೇ ಯಾವಾಗಲೂ ಆಡುತಿದ್ದರೆ ಇವರೂ ಅವರಂತೆಯೆ ಮಾತನಾಡಲು ಆರಂಭಿಸುವರು. ಬಾಲ್ಯದಲ್ಲಿ ಮಾತಾಪಿತೃಗಳ ಆಚರಣೆಯನ್ನೇ ಮಕ್ಕಳು ಅನುಸರಿಸುವುದರಿಂದ, ಗಂಭೀರವಾದ ನಡೆನುಡಿಗಳನ್ನು ಮಕ್ಕಳಿಗೆ ಕಲಿಸುವುದು ಮಾತಾಪಿತೃಗಳ ಕರ್ತವ್ಯವಾಗಿರುವುದು.

***

ಅಕ್ಷರಾಭ್ಯಾಸವಾದನಂತರ ಬಾಲಕರು ಪಾಠಶಾಲೆಗೆ ಬಂದು ಸೇರಿದೊಡನೆ ಅವರ ನಡೆನುಡಿಗಳನ್ನು ತಿದ್ದುವುದು ಉಪಾಧ್ಯಾಯರ ಕರ್ತವ್ಯವಾಗಿದೆ. ಬಾಲಶಿಕ್ಷೆ

ಗ್ರಂಥವಿಮರ್ಶೆ

ಚಂಡಕೌಶಿಕ.

ಮೈಸೂರು ಮಹಾರಾಜರವರ ಆಸ್ಥಾನಕವಿಗಳಾಗಿದ್ದ ಬಸವಪ್ಪಶಾಸ್ತ್ರಿಗಳು, ಸಂಸ್ಕೃತದಲ್ಲಿ ಆರ್ಯಕ್ಷೇಮೀಶ್ವರ ಮಹಾಕವಿಯಿಂದ ರಚಿಸಲ್ಪಟ್ಟ ಚಂಡಕೌಶಿಕವೆಂಬ ಹಗಿಸ್ಯಂದ್ರನಾಟಕವನ್ನು ಕನ್ನಡಿಗರಿಗೂ ಸಂಸ್ಕೃತದಲ್ಲಿರುವ ರಸವನ್ನು ಆಸ್ವಾದನೆ ಮಾಡಿಸುವುದಕ್ಕೋಸ್ಕರ ಕೆಲವು ದೊಡ್ಡಮನುಷ್ಯರಿಂದ ಪ್ರೇರಿತರಾಗಿ ಸುಲಭಶೈಲಿಯಿಂದ ಮೂಲಗ್ರಂಥದಲ್ಲಿರುವ ಅಭಿಸಾಮ್ಯಕ್ಕೆ ಸ್ವಲ್ಪವೂ ನ್ಯೂನತೆ ಬರದಂತೆ ಕನ್ನಡಿಸುವುದಕ್ಕೆ ಪ್ರಾರಂಭಿಸಿ ನಾಲ್ಕಂಕದವರಿಗೂ ಕನ್ನಡಿಗರ ಸಂಸ್ಕೃತಪರಿಪಾಕದಿಂದ ವಾಚಕರ ಕೋರಿಕೆಯನ್ನು ನರವೇರಿಸಿದರು. ಅಷ್ಟರೊಳಗೆ ಇಲ್ಲಿನ ಜನರು ಇಂಥಾ ಉತ್ಕೃಷ್ಟವಾದ ಗ್ರಂಥದ ರಸಾಸ್ವಾದನೆ ಮಾಡುವುದನ್ನು ಸಹಿಸಲಾರದೆ ವಿಧಿಯು ಈ ಸ್ಥಲವನ್ನೇ ತಪ್ಪಿಸಿ ತನ್ನಲ್ಲಿಗೆ ಕರೆದುಕೊಂಡದ್ದರಿಂದ ಕನ್ನಡಿಗರೆಲ್ಲರೂ ಅರೆಹೊಟ್ಟೆ ಉಂಡವರಂತೆ ಸಂಕಟಪಡುತ್ತಿದ್ದುದನ್ನು ನೋಡಿ ಮಾ॥ ರಾ॥ ಸಿ. ರಾಮಚಂದ್ರರಾಯರವರು ಇವರ ಶೈಲಿಗೆ ಸ್ವಲ್ಪವೂ ಭೇದವಿಲ್ಲದಂತೆ ಐದನೆಯ ಅಂಕವನ್ನು ಮಾ॥ ಮೇಲುಕೋಟೆ ದೇವಶಿಖಾಮಣಿ ಅಳಸಿಂಗಾಚಾರ್ಯರಿಂದ ಮಾಡಿಸಿ ಒಳ್ಳೇಕಾಗದದಲ್ಲಿ ಮೈಸೂರು ಗಾಜುಪಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಮುದ್ರಾಕ್ಷರಶಾಲೆಯಲ್ಲಿ ಅಚ್ಚುಹಾಕಿಸಿ ವಿಶ್ವಾಸಪೂರ್ವಕವಾಗಿ ನಮ್ಮಲ್ಲಿಗೆ ಒಂದು ಪುಸ್ತಕವನ್ನು ಕಳುಹಿಸಿಕೊಟ್ಟರು. ನಾವು ಅದನ್ನು ಆ ಮೂಲಾಗ್ರವಾಗಿ ಚೆನ್ನಾಗಿ ಓದಿನೋಡಿದೆವು. ಇದು ಬಸವಪ್ಪಶಾಸ್ತ್ರಿಗಳು ಮಾಡಿರುವ ಗ್ರಂಥಗಳಲ್ಲಿ ಅತ್ಯುತ್ತಮವಾಗಿರುವುದರಿಂದ ಅವರ ಪ್ರತಿಭೆಯನ್ನು ಚೆನ್ನಾಗಿ ಪ್ರಕಟಮಾಡುವುದು. ಇದಕ್ಕನುಗುಣವಾಗಿ ಬರೆದಿರುವ ಅಂಕವು ರತ್ನಕ್ಕೆ ವರ್ತಿಕೊಟ್ಟಂತೆ ಹೊಳೆಯುತ್ತಿರುವದು. ಮಾ॥ ರಾ॥ ಅಳಸಿಂಗಾಚಾರ್ಯರು ಅನನ್ಯಸಾಧಾರಣವಾಗಿದ್ದ ಈ ಗ್ರಂಥಕರ್ತೃಗಳ ಶೈಲಿಗೆ ಸ್ವಲ್ಪವೂ ಭೇದತೋರದಂತೆ ಬರೆದಿರುವುದು ವಾಚಕರಿಗೆ ಬಹು ಆನಂದವನ್ನುಂಟುಮಾಡುವುದರಲ್ಲಿ ಸಂಶಯವಿಲ್ಲ; ಅದುದರಿಂದ ನಮ್ಮ ವಿದ್ಯಾಭ್ಯಾಸನ ಇಲಾಖೆಯ ಟೆಕ್ಸ್ಟ್‌ಬುಕ್ ಕಮಿಟಿಯವರು ಉಪಾಧ್ಯಾಯಪರೀಕ್ಷೆಗೆ ಇಟ್ಟಿರುವರು. ಇದನ್ನು ಓದುವುದರಿಂದ ಎಲ್ಲರಿಗೂ ಕಷ್ಟಕಾಲದಲ್ಲೂ ತಮ್ಮ ಧರ್ಮವನ್ನು ಪರಿತ್ಯಾಗ ಮಾಡಬಾರದೆಂಬ ವಿಷಯವನ್ನು ಚೆನ್ನಾಗಿ ಬೋಧಿಸಿ ತಮ್ಮತಮ್ಮ ಧರ್ಮದಲ್ಲಿ ಪ್ರವೃತ್ತಿಯನ್ನುಂಟುಮಾಡುವುದರಲ್ಲಿ ಸಂಶಯವಿಲ್ಲ.

ಸ್ಥಿತಿಯಿಂದ ಈ ಪ್ರಪಂಚವು ನಿರ್ದುಷ್ಟವಾದ ಸಕಲ ಸಂಪತ್ತುಗಳಿಂದ ಪರಿಪೂರ್ಣವಾಗಿತ್ತು. ಇವರ ಮರಣದಿಂದ ಪ್ರಪಂಚವೇ ಪರದೇಶಿಯಾಯಿತೆಂದು ನಾಗರಿಕತೆಯುಳ್ಳ ಎಲ್ಲಾ ದೇಶಗಳ ವರ್ತಮಾನಪತ್ರಿಕೆಗಳು ಘಂಟಾಘೋಷವಾಗಿ ಹೇಳುತ್ತವೆ' ಇದು ವಾಸ್ತವವಾದ ಮಾತು. ಐಶ್ವರ್ಯಮದ ಅಧಿಕಾಗಮದ ಉಳ್ಳ ಪ್ರಭುಗಳಿಗೆ ಯುಕ್ತಾಯುಕ್ತ ಪರಿಜ್ಞಾನವು, ತಾವು ಮಾಡುವ ಕಾರ್ಯಗಳಿಗೆ ತಾವು ಜಗದೀಶ್ವರನಿಗೆ ಉತ್ತರವಾದಿಗಳಾಗಿರಬೇಕೆಂಬ ಜ್ಞಾನವು ಇಲ್ಲದಿದ್ದರೆ ಪ್ರಪಂಚಕ್ಕೆ ಅನೇಕ ಅನರ್ಥಗಳುಂಟಾಗುವವು. ಪ್ರಭುಗಳು ಕೃತಕೃತ್ಯರಾಗಿ ಇಹಪರಸಾಧನಗಳನ್ನು ಮಾಡಿಕೊಳ್ಳಬೇಕಾದರೆ ಗ್ಲ್ಯಾಡ್‌ಸ್ಟನ್ನಿನಂಥಾ ಧರ್ಮಮಾರ್ಗೈಕಪರಾಯಣರಾದ ಸಚಿವಶಿಖಾಮಣಿಗಳನ್ನು ಹೊಂದಬೇಕು. ಇಂಥಾ ಸಚಿವರು ಸಿಕ್ಕಬೇಕಾದರೆ ಸಂಚಿತವಾದ ಸುಕೃತವು ಇರಬೇಕು. ಅದು ಹಾಗಿರಲಿ; ಈಗ ಪ್ರಪಂಚದಲ್ಲಿ ಅನೇಕ ಚಕ್ರವರ್ತಿಗಳು, ದೊರೆಗಳು, ಸಕಲವಿದ್ಯಾವಿಶಾರದರಾದ ಪಂಡಿತರು ಇರುತ್ತಾರೆ. ಗ್ಲ್ಯಾಡ್‌ಸ್ಟನನು ಇವರೆಲ್ಲರಿಗಿಂತಲು ಶ್ರೇಷ್ಠನಾಗಿದ್ದನೇ? ಹಾಗಿದ್ದಪಕ್ಷದಲ್ಲಿ ಅಂಥಾ ಗುಣಾತಿಶಯಗಳಾವವು ಎಂದು ನಮ್ಮ ವಾಚಕರಲ್ಲಿ ಅನೇಕರು ಕೇಳಬಹುದು; ಹೀಗೆ ಕೇಳುವದು ಸುಲಭ ಆದರೆ ಸಂಗ್ರಹವಾಗಿ ಈ ಪತ್ರಿಕೆಯಲ್ಲಿ ಅಡಕವಾಗುವಂತೆ ಇವಕ್ಕೆ ಉತ್ತರವನ್ನು ಹೇಳುವದು ಕಷ್ಟ. ಈತನು ರಾಜ್ಯಭಾರ ಮಾಡತಕ್ಕವರು ಸಾಂಕುಶಪ್ರವರ್ತಕರಾಗಿ ನಡೆದುಕೊಳ್ಳುವಂತೆ ಮಾಡುವದಕ್ಕೋಸ್ಕರ ಮಾಡಿರತಕ್ಕ ಕಾರ್ಯಗಳನ್ನು ಬರೆದಿರುವ ಗ್ರಂಥಗಳನ್ನು, ಹೇಳಿರತಕ್ಕ ಉಪನ್ಯಾಸಗಳನ್ನು ಹೊಂದಿದ ಬಲಿಷ್ಠರ ವಿರೋಧವನ್ನು, ಅನಿರ್ವಚನೀಯವಾದ ಕಷ್ಟವನ್ನು, ಮಾಡಿರತಕ್ಕ ದ್ರವ್ಯವ್ಯಯವನ್ನು ಸಂಕ್ಷೇಪವಾಗಿ ಬರೆದಾಗ್ಯೂ ಅನೇಕ ಮಹಾಭಾರತಕ್ಕೆ ಸಮಾನವಾದ ಗ್ರಂಥಗಳಾಗುತ್ತವೆ. ಆದ್ದರಿಂದ ಇಂಥಾ ಭಗೀರಥಪ್ರಯತ್ನವನ್ನು ಮಾಡುವುದಿಲ್ಲ. ಆದರೆ ನಮ್ಮ ವಾಚಕರ ತಿಳುವಳಿಕೆಗಾಗಿ ದಿಗಂತವಿಶ್ರಾಂತಗಳಾದ ಈತನಕೆಲವು ಮಹಿಮೆಗಳನ್ನು ಹೇಳುತ್ತೇವೆ.

ಗ್ಲ್ಯಾಡ್‌ಸ್ಟನನು ೧೮೦೯ನೆ ಇಸವಿ ಡಿಸೆಂಬರು ೨೯ನೇ ತಾರೀಖಿನಲ್ಲಿ ಹುಟ್ಟಿದನು. ಈತನ ತಂದೆಯು ಲಿವರ್‌ಪೂಲ್ ಪಟ್ಟಣದಲ್ಲಿ ಬಹಳ ಐಶ್ವರ್ಯವುಳ್ಳ ವರ್ತಕನಾಗಿದ್ದನು. ಶ್ರೀಮಂತರು ಸಾಮ್ರಾಯಕವಾಗಿ ನಿರಕ್ಷರಕುಕ್ಷಿಗಳಾಗಿಯೂ, ಇಂದ್ರಿಯಪರವಶರಾಗಿಯೂ ಉಚ್ಛೃಂಖಲಪ್ರವರ್ತಕರಾಗಿಯು ಇದ್ದು ದ್ರವ್ಯವನ್ನು

ಇವು ಸುಲಭವಲ್ಲವು. ಬಾಲಕರಿಗೆ ಎರಡು ಅಕ್ಷರವನ್ನು ಬರೆಯಲಿಕ್ಕೂ ಓದಲಿಕ್ಕೂ ಕಲಿಸಿ ಮೇಲ್ಪಟ್ಟ ಅಧಿಕಾರಿಗಳ ಅಕ್ಷೇಪಣೆಗೆ ಗುರಿಯಾಗದಷ್ಟು ಮಾಡಿಕೊಂಡರೆ ತಾವು ಧನ್ಯರಾದೆವೆಂದು ಭಾವಿಸುವ ಉಪಾಧ್ಯಾಯರು ಉಪಾಧ್ಯಾಯರಲ್ಲವು. ಮೇತನಕ್ಕೆ ತಕ್ಕಷ್ಟು ಕೆಲಸಮಾಡುವೆವೆಂದು ಅಸಮಾಧಾನೋಕ್ತಿಗಳನ್ನು ಆಡುತ್ತಾ ಅನಾದರಣೆಯಿಂದ ಬಾಲಶಿಕ್ಷೆಯನ್ನು ಮಾಡುವರು ಕೇಡನ್ನುಂಟುಮಾಡುವರಲ್ಲದೆ ಮೇಲನ್ನುಂಟುಮಾಡರು. ಆದಿಯಲ್ಲಿ ಮಾತಾಪಿತೃಗಳ ನಡೆನುಡಿಯನ್ನು ಮಕ್ಕಳು ಹೇಗೆ ಆಚರಿಸುವರೋ ಹಾಗೆಯೆ ಮುಂದೆ ಪಾಠಶಾಲೆಯಲ್ಲಿ ಉಪಾಧ್ಯಾಯರ ಪದ್ಧತಿಗಳನ್ನೇ ಆಚರಿಸುವರು. ಇದನ್ನು ಚೆನ್ನಾಗಿ ಅರಿತು ಉಪಾಧ್ಯಾಯರು ಶ್ಲಾಘ್ಯವಾದ ಪದ್ಧತಿಯನ್ನು ತಾವು ಆಚರಿಸುತ್ತಾ ತಮ್ಮ ನಡೆನುಡಿಗಳನ್ನೇ ಬಾಲಕರೂ ಆಚರಿಸುವಂತೆ ಮಾಡಬೇಕು.

***

ಉಪಾಧ್ಯಾಯರೆಲ್ಲರೂ ಇಂಥಾ ಆಚರಣೆಗಳನ್ನೇ ಅನುಸರಿಸಬೇಕೆಂದು ಸರಕಾರದವರು ಕಟ್ಟುಮಾಡಲು ಸಾಧ್ಯವಲ್ಲವು. ಕೆಲವು ಸಾಧಾರಣವಾದ ಬಾಹ್ಯಪೂಜಾರಿಕ ನಡೆನುಡಿಗಳನ್ನು ಬಲಾತ್ಕಾರದಿಂದ ಕಲಿಸುವಂತೆ ಕಟ್ಟುಮಾಡಬಹುದು. ಆದರೆ ಇದು ಶಾಶ್ವತವಾಗಿ ನಿಲ್ಲದು. ಉಪಾಧ್ಯಾಯರು ನಿತ್ಯವೂ ಸ್ವಭಾವವಾಗಿ ಆಚರಿಸುವ ಆಚರಣೆಯೆ ಬಾಲಕರಿಗೆ ಮೇಲುಪಜ್ಞೆಯಾಗುವುದು.

ಮೆಗಾಸ್ಥಿನೀಸ್

ಪ್ರಪಂಚದಲ್ಲಿ ದುಷ್ಟನಿಗ್ರಹ ಶಿಷ್ಟಪರಿಪಾಲನೆಯ ಮೂಲಕ ಧರ್ಮಸಂಸ್ಥಾಪನೆಯನ್ನು ಮಾಡುವದಕ್ಕೆ ಜಗದೀಶ್ವರನು ಅವತರಿಸುವನೆಂದು ಹೇಳುವರಷ್ಟೆ. ಹಾಗಾದರೆ ಗ್ಲಾಸ್ಟಾಡ್‌ಸ್ಟನ್ ಇಂಥಾ ಅವತಾರಪುರುಷನು. ಈತನು ಕಳೆದ ಮೇ ತಿಂಗಳು ೧೯ನೆ ತಾರೀಖಿನಲ್ಲಿ ಪರಂಧಾಮವನ್ನೈದಿದನು. ಈತನು ಇಂಗ್ಲೀಷು ಚಕ್ರಾಧಿಪತ್ಯವಲ್ಲಿ ಮಾತ್ರವೇ ಅಲ್ಲದೆ ಪ್ರಪಂಚಕ್ಕೆಲ್ಲಾ ಧರ್ಮಮೂರ್ತಿಯಾಗಿದ್ದನು. 'ಇವನ

ಭಾರವನ್ನು ನಡಿಸುವೆನು. ಲಿಬರಲ್ ಮೆಂಬರುಗಳ ಸಂಖ್ಯೆಯು ಹೆಚ್ಚಾದಾಗ ಅವರ ಮುಖಂಡನು ಮಂತ್ರಿಯಾಗಿ ರಾಜ್ಯಭಾರವನ್ನು ನಡೆಸುವನು. ಗ್ಲ್ಯಾಡ್‌ಸ್ಟನ್ನನು ಲಿಬರಲ್ ಪಂಗಡಕ್ಕೆ ಸೇರಿದವನು. ಅನೇಕ ವರುಷಗಳಿಂದ ಈ ಪಂಗಡಕ್ಕೆ ಈತನೇ ಮುಖ್ಯಸ್ಥನಾಗಿದ್ದಾನೆ. ಈತನು ನಾಲ್ಕುಸಾರಿ ಇಂಗ್ಲೀಷ್‌ಚಕ್ರಾಧಿಪತ್ಯದ ಮುಖ್ಯ ಸಚಿವ ಪದವಿಯನ್ನು ಲೋಕೋತ್ತರವಾಗಿ ಅಲಂಕರಿಸಿದನು. ಲೋಕದಲ್ಲಿ ಅನೇಕ ಸಚಿವರು ಅನೇಕ ರಾಜ್ಯಭಾರಗಳನ್ನು ವಹಿಸಿರುತ್ತಾರೆ. ಆದರೆ ಗ್ಲ್ಯಾಡ್‌ಸ್ಟನ್ ಸಚಿವ ಕಾರ್ಯನಿರ್ವಹಣತೆಯು ಅತ್ಯಂತ ವಿಲಕ್ಷಣವಾದದ್ದು. ಸಾಮಾನ್ಯವಾಗಿ ಸಚಿವರಿಗೆ ತಮ್ಮ ಪದವಿಯನ್ನು ಅನುಭವಿಸುವದರಲ್ಲಿ ಇರತಕ್ಕ ಶ್ರದ್ಧೆಯು ಪ್ರಜೆಗಳಿಗೆ ಸರ್ಕಾರದಿಂದ ನ್ಯೂನಾತಿರಿಕ್ತಗಳನ್ನು ನಿವಾರಣೆ ಮಾಡುವದರಲ್ಲಿ ಸಮಗ್ರವಾಗಿ ಇರುವದು ಅಪೂರ್ವ. ಗ್ಲ್ಯಾಡ್‌ಸ್ಟನ್‌ಗೆ ಈ ಶ್ರದ್ಧೆಯು ಅನ್ಯಾದೃಶವಾಗಿತ್ತು. ಈ ಸಚಿವ ಪದವಿಯನ್ನು ಪ್ರಜೆಗಳ ಕ್ಷೇಮಾಭಿವೃದ್ಧಿಗೋಸ್ಕರ ಮಾತ್ರವೆ ಅಪೇಕ್ಷಿಸುತ್ತಿದ್ದನು ಪ್ರಜೆಗಳ ಕ್ಷೇವಕ್ಕೆ ಬೇಕಾದ ಕೆಲಸಗಳನ್ನು ಮಾಡುವದರಲ್ಲಿ ಶ್ರೀಮದ್ಮಹಾರಾಜ್ಞೀ ಚಕ್ರವರ್ತಿನಿಯವರೆ ಆಗಲಿ ಅಥವಾ ಪಾರ್ಲಿಮೆಂಟಿನವರೆ ಆಗಲಿ ಅನಭಿಮತವನ್ನು ತೋರಿಸಿದರೆ ತತ್‌ಕ್ಷಣದಲ್ಲೆ ಕೆಲಸಕ್ಕೆ ರಾಜಿನಾಮೆ ಕೊಡುತ್ತಿದ್ದನು ಹಾಗೆ ರಾಜಿನಾಮೆ ಕೊಟ್ಟಾಗ್ಯೂ ಪ್ರಜೆಗಳ ಯೋಗಕ್ಷೇಮಚಿಂತನೆಯನ್ನು ಮಾಡುತ್ತಾ ಪಾರ್ಲಿಮೆಂಟಿನಲ್ಲಿ ಮೆಂಬರಾಗಿ ಲಿಬರಲ್‌ಕಕ್ಷಿಗೆ ಮುಖಂಡನಾಗಿ ರಾಜ್ಯಭಾರಮಾಡತಕ್ಕ ಪ್ರತಿಕಕ್ಷಿಯುವರು ನಡಿಸತಕ್ಕ ರಾಜ್ಯಕಾರ್ಯಗಳನ್ನು ಪರೀಕ್ಷಿಸುತ್ತಾ ಅವರು ಮಾಡತಕ್ಕ ನ್ಯೂನಾತಿರಿಕ್ತಗಳನ್ನು ಉದ್ಘಾಟಿಸುತ್ತಾ ಸಾಂಕುಶಪ್ರವರ್ತನೆಗೆ ಅತ್ಯಂತ ಸಹಕಾರಿಯಾಗಿದ್ದನು. ಸಚಿವನಾಗಿದ್ದಾಗ್ಯೂ ಸಚಿವಪದವಿಯನ್ನು ಬಿಟ್ಟು ಸ್ವತಂತ್ರನಾಗಿ ಇದ್ದಾಗಲು ಸದಾ ಪ್ರಜಾರಂಜನೈಕಪರಾಯಣನಾಗಿ ಇರುತಿದ್ದನ ಲೋಕದಲ್ಲಿ ಎಲ್ಲಾ ಪದವಿಗಳಿಗಿಂತಲು ಪ್ರಭುಗಳ ಪದವಿಯು ಬಹಳ ಜನಾಬದಾರಿಯಾದದ್ದು ಯಾವ ಪ್ರಭುವು ಜಿತೇಂದ್ರಿಯನಾಗಿ ಸಕಲ ಪ್ರಜೆಗಳನ್ನು ಪುತ್ರನಿರ್ವಿಶೇಷವಾಗಿ ಪರಿಪಾಲಿಸುವನೋ ಅವನೆ ಪ್ರಭುವು. ತಾನು ತನ್ನ ಕುಟುಂಬ, ತನ್ನ ಪುತ್ರಮಿತ್ರ ಕಳತ್ರಾದಿಗಳು, ತನ್ನ ಇಂದ್ರಿಯಸುಖಗಳು, ಇವುಗಳ ತುಷ್ಟಿಗೋಸ್ಕರ ಮಾತ್ರ ಪ್ರಭುಪದವಿಯನ್ನು ಸ್ವೀಕರಿಸತಕ್ಕವನು ರಾಜನಲ್ಲವೆಂತಲೂ ಸಚಿವ ಪದವಿಯನ್ನು ಸ್ವೀಕರಿಸಿ ಪ್ರಜಾರಂಜನೆ ಮಾಡದೆ ಇರತಕ್ಕ ಸಚಿವನು ಸಚಿವಶ್ರೇಷ್ಠನಲ್ಲವೆಂತಲೂ

ಆರೋಗ್ಯವನ್ನು ಆಯುಸ್ಸನ್ನು ಯಶಸ್ಸನ್ನು ಇಹಪರಗಳನ್ನು ಕಳೆದುಕೊಳ್ಳುವದುಂಟು. ಆದರೆ ಗ್ಲಾಡ್‌ಸ್ಟನ್ನಿಗೆ ತಮ್ಮ ತಂದೆಗಿದ್ದ ಐಶ್ವರ್ಯವು ಸಕಲ ವಿದ್ಯಾವಿಶಾರದತ್ವಕ್ಕು ನಿಖಿಲಧರ್ಮಾರ್ಜನೆಗೂ ದೇವಾಂಶಪುರುಷನೆನ್ನಿಸಿಕೊಂಡು ಪ್ರಪಂಚದಲ್ಲಿ ಎಲ್ಲರಿಂದಲೂ ಕೊಂಡಾಡಲ್ಪಡುವದಕ್ಕೂ ಸಾಧಕವಾಯಿತು. ಈತನು ೨೫ ವರುಷ ವಯಸ್ಸು ಆಗುವದರೊಳಗಾಗಿ ಯೂರೋಪ್‌ಖಂಡದಲ್ಲಿ ಪ್ರಚಾರದಲ್ಲಿರುವ ಅನೇಕ ವಿದ್ಯೆಗಳಲ್ಲಿ ಅದ್ವಿತೀಯಪಂಡಿತನೆಂದು ಹೆಸರುವಾಸಿಯನ್ನು ಪಡೆದನು. ಚಿಕ್ಕ ವಯಸ್ಸಿನಿಂದಲೂ ಅನೇಕ ವಿಷಯಗಳಲ್ಲಿ ವಾಕ್ಯಾರ್ಥಗಳನ್ನು ಉಪನ್ಯಾಸಗಳನ್ನೂ ಮಾಡುತ್ತಾ ಕ್ರಮೇಣ ೨೫ ವರುಷ ವಯಸ್ಸು ಆಗುವದರೊಳಗಾಗಿ ವಾಗ್ಮಿಗಳಲ್ಲಿಯೂ ಪಂಡಿತರಲ್ಲಿಯೂ ಅದ್ವಿತೀಯನೆಂಬ ಹೆಸರನ್ನು ಪಡೆದನು. ೧೮೩೧ರಲ್ಲಿ ಈತನು ಪಾರ್ಲಿಮೆಂಟಿಗೆ ಮೆಂಬರಾದನು. ಆಗ ಈತನಿಗೆ ಸಾಂಡಿತ್ಯಪ್ರದರ್ಶನಕ್ಕೂ ಗಂಗಾಪ್ರವಾಹಕ್ಕೆ ಸನ್ನುವಾದವಾಕಿ ಗೂ ಸರ್ವಪ್ರಯತ್ನದಿಂದಲೂ ರಾಜ್ಯಭಾರವೊಡತಕ್ಕವರು ಧರ್ಮವೂ ಗರ್ವವನ್ನು ಬಿಡದಂತೆ ಮಾಡುವದಕ್ಕೂ ಅವಕಾಶವುಂಟಾಯಿತು. ೧೮೩೦ರಿಂದ ೧೮೯೪ರವರಿಗೂ ಈ ಇಂಗ್ಲಿಷ್‌ಪಾರ್ಲಿಮೆಂಟಿಗೆ ಶಿರೋಮಣಿಯಂತೆ ಆಚರಿಸಿದನು. ಹೀಗೆ ೬೦ ವರುಷಗಳು ಅವಿಚ್ಛಿನ್ನವಾಗಿ ಪ್ರಜೆಗಳಿಗೆ ಧರ್ಮವಾದ ರಾಜ್ಯಭಾರವು ದೊರೆಯಲೆಂದು ತನ್ನ ಕಾಲವನ್ನೂ ಶಕ್ತಿಯನ್ನೂ, ದ್ರವ್ಯವನ್ನೂ, ಶ್ರದ್ಧೆಯಿಂದ ವಿನಿಯೋಗಿಸಿದವರು ಇಂಗ್ಲಿಷ್ ಚರಿತ್ರೆಯಲ್ಲಾಗ್ಲಿ ರೂ ಇಲ್ಲ. ಈ ಪಾರ್ಲಿಮೆಂಟು ಸಭೆಯಲ್ಲಿ ರಾಜ್ಯಭಾರದ ಏರ್ಪಾಡುಗಳು ಕೂಡಿದವಷ್ಟಿಗೂ ಪೂರ್ವದಿಂದಲೂ ಆಚರಣೆಯಲ್ಲಿರುವ ಪದ್ಧತಿಗಳಿಗೆ ಅನುಸಾರವಾಗಿಯೇ ನಡೆಯಬೇಕೆಂದು ಒಂದು ಪಂಗಡದವರು ಪ್ರವರ್ತಿಸುವದು ಇವರಿಗೆ ಕಂಸರ್ವೇಟಿವ್ವುಗಳೆಂದು ಹೆಸರು. ಇನ್ನು ಕೆಲವರು ಪೂರ್ವದ ಪದ್ಧತಿಗಳಲ್ಲಿ ಸಾಂಕುಶಪ್ರವರ್ತನೆಗೂ, ಪ್ರಜೆಗಳ ಕ್ಷೇಮಕ್ಕೂ ಅನುಕೂಲನಾದವುಗಳು ಅನುಸರಿಸಲ್ಪಡಲಿ ; ಆದರೆ ಯಾವ ಪದ್ಧತಿಗಳು ಸಾಂಕುಶಪ್ರವರ್ತನೆಗೂ ಪ್ರಜೆಗಳ ಕ್ಷೇಮಕ್ಕೂ ಪ್ರತಿಕೂಲಗಳೋ ಅವುಗಳನ್ನು ಬಿಟ್ಟು ಸಾಂಕುಶ ಪ್ರವರ್ತನೆಗೆ ಸಾಧಕವಾದ ಏರ್ಪಾಡುಗಳನ್ನು ಮಾಡಬೇಕೆಂಬ ಪಂಗಡ ಒಂದುಂಟು. ಈ ಪಂಗಡದವರಿಗೆ ಲಿಬರಲ್‌ಗಳೆಂದು ಹೆಸರು. ಪಾರ್ಲಿಮೆಂಟಿನಲ್ಲಿ ೬೭೦ ಜನ ಮೆಂಬರುಗಳು ಇರುತ್ತಾರೆ. ಕಂಸರ್ವೇಟಿವ್ವು ಮೆಂಬರುಗಳು ಹೆಚ್ಚು ಸಂಖ್ಯೆಯವರಾದರೆ ಅವರಲ್ಲಿ ಮುಖಂಡನಾದವನು ಮುಖ್ಯಮಂತ್ರಿಪದವಿಯನ್ನು ಸ್ವೀಕರಿಸಿ ರಾಜ್ಯ

ತರುತ್ತಾ ಇದ್ದನು. ಲೋಕದಲ್ಲಿ ವೇದಾಂತಶಾಸ್ತ್ರಶಿರೋಮಣಿಗಳಾದವರು ಅನೇಕರಿರುವರು. ಆದರೆ ಶಾಸ್ತ್ರಗಳನ್ನು ತಿಳಿದುಕೊಳ್ಳುವದಕ್ಕೂ ತಿಳಿದುಕ್ಕೊಂಡದ್ದನ್ನು ಅನುಷ್ಠಾನಮಾಡುವದಕ್ಕೂ ಬಹಳ ವ್ಯತ್ಯಾಸವುಂಟು. ಯಾರು ಸಕಲಶಾಸ್ತ್ರವಿಶಾರದರಾಗಿ ಇದ್ದಾಗ್ಯೂ ಅವಗಳನ್ನು ಅನುಷ್ಠಿಸುವದಿಲ್ಲವೋ ಅಂಥಾವರು ಬ್ರಹ್ಮರಕ್ಷಸ್ಸುಗಳಾಗಿಯೂ, ಅತ್ಯಂತ ಶೋಚನೀಯವಾದ ದುರ್ಗತಿಯನ್ನು ಹೊಂದುವರು. ಗ್ಲ್ಯಾಡ್‌ಸ್ಟನ್‌ನಾದರೊ ತಾನು ಶಾಸ್ತ್ರಗಳನ್ನು ತಿಳಿದುಕೊಂಡು ಯಾವ ಧರ್ಮವನೂ ಅನುಷ್ಠಿಸದೆ ಬಿಡಲಿಲ್ಲ. ಶಾಸ್ತ್ರೋಕ್ತವಾದ ಧರ್ಮಗಳನ್ನೆಲ್ಲಾ ದೇಶಕೋಶಗಳನ್ನು ಬಿಟ್ಟು ಅರಣ್ಯವಾಸವನ್ನು ಮಾಡುತ್ತಾ ಇರತಕ್ಕ ಯತಿಗಳಿಗೆ ಮಾತ್ರ ಸಾಧ್ಯವೆಂದು ಲೋಕಧರ್ಮಾಭಿಜ್ಞರು ಹೇಳುತ್ತಾರೆ. ಆದರೆ ಗ್ಲ್ಯಾಡ್‌ಸ್ಟನ್‌ನು ಗೃಹಸ್ಥಾಶ್ರಮವನ್ನು ಅವಲಂಬಿಸಿ, ರಾಜ್ಯಭಾರವನ್ನು ಮಾಡತಕ್ಕವರಿಗೂ ಇದು ಸಾಧ್ಯವಾದದ್ದೆಂದು ಕಾರ್ಯತಃ ತೋರಿಸಿ ಇದ್ದಾನೆ. ಈತನು ೧೮೯೪ನೆ ಇಸವಿಯ ವರೆವಿಗೂ ರಾಜ್ಯಭಾರ ಕೆಲಸಗಳಲ್ಲಿ ಹೆಗಲನ್ನು ಕೊಟ್ಟು ಇದ್ದು ಆ ಇಸವಿಯಲ್ಲಿ ಪಾರ್ಲಮೆಂಟಿನಿಂದ ನಿವರ್ತನಾದನು.

೧೮೯೪ನೇ ಇಸವಿಯಿಂದ ಇದುವರೆವಿಗೂ, ಧರ್ಮಸಂಸ್ಥಾಪನಾರ್ಥವಾಗಿ ಅನೇಕ ಗ್ರಂಥಗಳನ್ನು ಮುದ್ರಿಸಿದನು. ೧೮೯೬ನೆ ಇಸವಿಯಲ್ಲಿ ಈತನಿಗೆ ಆರೋಗ್ಯವು ಸ್ವಲ್ಪವಾಗಿ ತಪ್ಪಿತು. ಕಳೆದ ಮೆ ತಿಂಗಳ ೧೮ನೆ ತಾರೀಖಿನಲ್ಲಿ ಜಗದೀಶ್ವರನ ಧ್ಯಾನವನ್ನು ಮಾಡುತ ಈತನು ಈ ಕಳೇಬರವನ್ನು ಬಿಟ್ಟನು. ಈ ಪ್ರಪಂಚದಲ್ಲಿರತಕ್ಕ ಸಮಸ್ತದೊರೆಗಳು, ವಿದ್ವಾಂಸರು, ಸಚಿವರು, ರಾಜ್ಯಭಾರದ ಸಭೆಗಳು ಇವರೆಲ್ಲರೂ ಗ್ಲಾಡ್‌ಸ್ಟನ್ನ ಮರಣದಿಂದ ಲೋಕಕ್ಕೆ ಉಂಟಾದ ಅನಿರ್ವಚನೀಯವಾದ ನಷ್ಟವನ್ನು ಕುರಿತು ತಂತೀವರ್ತಮಾನಗಳು ಲೇಖನಗಳು ಇವುಗಳನ್ನು ಬರೆಯುತಲಿದ್ದಾರೆ. ಇವುಗಳಿಗೆಲ್ಲಾ ಅನೇಕ ರೈಟರುಗಳಿದ್ದಾಗ್ಯೂ ಪ್ರತ್ಯುತ್ತರವನ್ನು ಬರೆಯುವದು ಕೂಡ ಅಸಾಧ್ಯವಾಗಿ ಇದೆ. ಯೂರೋಪ್ ಅಮೆರಿಕಾ, ಆಸ್ಟ್ರೇಲಿಯಾ, ಆಫ್ರಿಕಾ ಮತ್ತು ಏಷ್ಯಾಖಂಡಗಳ ಎಲ್ಲಾ ಹೂಣದೇವಸ್ಥಾನಗಳಲ್ಲಿಯೂ ಈತನಿಗೆ ಒಳ್ಳೆಗತಿಯನ್ನು ಕೊಡಬೇಕೆಂದು ಪ್ರಾರ್ಥನೆಮಾಡಿದರು. ಶ್ರೀಮದ್ಮಹಾರಾಜ್ಞೀ ಇಂಡಿಯಾಚಕ್ರವರ್ತಿನಿಯವರು ಈತನ ಶವವನ್ನು ವೆಸ್ಟ್‌ಮಿನಸ್ಟರ್ ಅಬೆ ಒಳಗೆ ಸಮಾಧಿಮಾಡಿ ಈತನ ಅಸದೃಶವಾದ ರಾಜಕಾರ್ಯ ಜ್ಞಾಪಕಾರ್ಥವಾಗಿ ಒಂದು ಪ್ರತಿಮೆಯನ್ನು ನಿಲ್ಲಿಸ

ರಾಜತಂತ್ರಜ್ಞರು ಹೇಳುವರು. ಗ್ಲಾಡ್‌ಸ್ಟನನು ಈ ಧರ್ಮಸೂಕ್ಷ್ಮವನ್ನು ಅರಿತು, ಪ್ರಭು ಸಚಿವರ ಕಾರ್ಯಗಳನೆಲ್ಲಾ ತಾನೆ ವಹಿಸಿ ನಮ್ಮ ಇಂಡಿಯಾ ಚಕ್ರವರ್ತಿನಿಯವರಿಗೆ ಅನನ್ಯಸಾಧಾರಣವಾದ ಯಶಸ್ಸನ್ನು ಸಂಪಾದಿಸಿ ಕೊಟ್ಟು ಅಭೂತಪೂರ್ವವಾದ ಸಾಂಕುಶಪ್ರವರ್ತನೆಯುಳ್ಳವನೆಂದು ದಿಗಂತವಿಶ್ರಾಂತವಾದ ಕೀರ್ತಿಯನ್ನು ಪಡದನು. ಈತನಿಗೆ ಇಂಗ್ಲೀಷ್‌ದೇಶವನ್ನು ಅತ್ಯಂತವಾಗಿ ವಿಸ್ತರಿಸಬೇಕೆಂಬ ತಾತ್ಪರ್ಯವು ಲೇಶವೂ ಇರಲಿಲ್ಲ ಆದರೆ ಆಂಗ್ಲೇಯರಿಗೆ ಸೇರಿದ ದೇಶದಲ್ಲೆಲ್ಲಾ ಧರ್ಮ್ಯವಾದ ರಾಜ್ಯಭಾರವು ನೆಲೆಗೊಳ್ಳಬೇಕೆಂಬ ತಾತ್ಪರ್ಯವು ಅತ್ಯಂತವಾಗಿತ್ತು. ಆಂಗ್ಲೇಯರಲ್ಲಿಯೂ ಈ ಪ್ರಯತ್ನಕ್ಕೆ ಭಂಗವನ್ನು ತರತಕ್ಕ ದುರ್ಮಾರ್ಗರಾದ ಅಧಿಕಾರಿಗಳು ಅಲ್ಲಲ್ಲಿಯೆ ಇರುತಿದ್ದರು. ಆದರೆ ಇವರ ದುರ್ಮಾರ್ಗಪ್ರವರ್ತನೆಯು ಈತನಿಗೆ ತಿಳಿದ ಕೂಡಲೆ, ಅದಕ್ಕೆ ಅನುರೂಪವಾದ ಪ್ರತಿಫಲವನ್ನು ಹೊಂದುತಿತ್ತು. ಅಧರ್ಮಪ್ರವರ್ತಕರಾದ ಅನೇಕ ಅಧಿಕಾರಿಗಳು ಈತನ ಸೆಚಿವ ಪದವಿಯಲ್ಲಿ ಅಧಿಕಾರವನ್ನು ಯಶಸ್ಸನ್ನು ಕಳೆದುಕೊಂಡು ಇದಾರೆ. ಮನುಷ್ಯನಿಗ್ರಹವನ್ನು ಮಾಡುವದರಲ್ಲಿ ಈತನು ಯಮಧರ್ಮನಿಗೆ ಸಮಾನನಾಗಿಯೂ ಧರ್ಮಪ್ರವರ್ತಕರಾದವರನ್ನು ಪ್ರೋತ್ಸಾಹಮಾಡುವದರಲ್ಲಿ ದಧೀಚಿ ಕರ್ಣರಿಗೆ ಸಮಾನನಾಗಿಯೂ ಭಾವಿಸಲ್ಪಟ್ಟಿರುತ್ತಾನೆ ಗ್ಲಾಡ್‌ಸ್ಟನು ಅಪ್ರತಿಹತವಾದ ಸಚಿವಪದವಿಯಲ್ಲಿದ್ದಾಗ್ಯೂ ತನ್ನ ಜನಗಳಲ್ಲಿಯೂ ಬಂಧುಗಳಲ್ಲಿಯೂ ಯಾರನ್ನೂ ಬಾಂಧವ್ಯಮಮತೆಯಿಂದ ಮಾತ್ರವೇ ಅಧಿಕಾರಕ್ಕೆ ತಂದಂತೆ ಇಲ್ಲ. ಅಶೇಷವಾದ ಯೋಗ್ಯತಾಬುದ್ಧಿಯುಳ್ಳ ಪರಕೀಯರ್ಯಾರನ್ನೂ ಅಧಿಕಾರಕ್ಕೆ ತರದೆ ಬಿಡಲಿಲ್ಲ. ಅಧಿಕಾರಕ್ಕೆ ಬರತಕ್ಕವರಿಗೆ ಪಾಪಭೀತಿಯೂ ಯೋಗ್ಯತೆಯೂ ಸೌಶೀಲ್ಯವೂ, ನಿಯತ್ತು ಇವುಗಳೆ ಮುಖ್ಯಕಾರಣಗಳಾಗಿ ಭಾವಿಸಿ ಇಂಥಾ ಗುಣಾತಿಶಯಗಳುಳ್ಳವರನೆಲ್ಲಾ ಅಧಿಕಾರಕ್ಕೆ ತರುತಿದ್ದನು. ಈ ಎಪರ್ಾಡು ಈ ಪ್ರಪಂಚದಲ್ಲಿ ಎಲ್ಲಾ ದೇಶಗಳಿಗಿಂತಲೂ ವಿಲಾಯತಿಯು ಇಷ್ಟು ಉನ್ನತಸ್ಥಿತಿಯಲ್ಲಿರುವದಕ್ಕೆ ಮುಖ್ಯಕಾರಣವಾಯಿತು.✓

ಈತನು ರಾಜಕಾರ್ಯಗಳಲ್ಲಿ ಮಗ್ನನಾಗಿ ಇದ್ದಾಗ್ಯೂ ದೈವಕಾರ್ಯದಲ್ಲಿ ನ್ಯೂನತೆಯುಳ್ಳವನಾಗಿರಲಿಲ್ಲ. ರಾಜಕಾರ್ಯಗಳಿಗೆ ಬಹಳ ಕಾಲವನ್ನು ವಿನಿಯೋಗಿಸಿದ್ದಾಗ್ಯೂ ಪ್ರತಿದಿನವು ವೇದಾಂತಕಾಲಕ್ಷೇಪಕ್ಕೆ ಕೆಲವು ಘಂಟೆಗಳನ್ನು ನೇಮಿಸಿ ಸಕಲಧರ್ಮಗಳನ್ನು ತಿಳಿದುಕೊಳ್ಳುತ್ತಾ, ತಿಳಿದುಕೊಂಡ ಧರ್ಮಗಳನ್ನು ಅನುಷ್ಠಾನಕ್ಕೆ

ಗಳನ್ನೂ ನೋಡಿದರೆ ಲೋಕದಲ್ಲಿರುವ ಎಲ್ಲಾ ಶಬ್ದಗಳಿಗೂ ವ್ಯಾಕರಣವನ್ನು ಬರೆದಿರುವರೆಂದಾಗಲಿ, ನಾವು ಮಾಡಿರುವ ವ್ಯಾಕರಣದಿಂದ ಸಿದ್ಧವಾದ ಶಬ್ದಗಳನ್ನೇ ಎಲ್ಲರೂ ಪ್ರಯೋಗಿಸಬೇಕೆಂದಾಗಲಿ, ಇನ್ನೂ ಮುಂದೆ ಶಬ್ದಗಳು ಈಗಿರುವ ಸ್ಥಿತಿಯನ್ನು ಬಿಟ್ಟು ಬೇರೆ ಯಾವ ವಿಕಾರವನ್ನೂ ಹೊಂದುವದಿಲ್ಲವೆಂದಾಗಲಿ, ಅಥವಾ ಒಂದುಕಡೆಲೆ ಕಾಲದೇಶಭೇದಗಳಿಂದ ವ್ಯತ್ಯಾಸವನ್ನು ಹೊಂದಿದರೂ ಅವುಗಳನ್ನು ಉಪಯೋಗಿಸಲೇಕೂಡದೆಂದಾಗಲಿ, ಸಾಧ್ಯವಿದ್ದಂತೆ ತೋರುವದಿಲ್ಲ.

ಇನ್ನೂ ಹಾಗೆ ವ್ಯತ್ಯಸ್ತವಾಗಿ ಎಲ್ಲರ ರೂಢಿಗೂ ಬಂದ ಶಬ್ದಗಳಿಗೆ ಒಂದು ಲಕ್ಷಣವನ್ನು ಕಲ್ಪಿಸಿ ಅವುಗಳನ್ನೂ ಬಾಲಕರಿಗೆ ತಿಳಿಯುವಂತೆ ಮಾಡುವದು ಒಳ್ಳೇದೆಂದು ಅವರು ಅಲ್ಲಲ್ಲಿ ಬಹುಳಂ, ವ್ಯವಸ್ಥಿತವಿಭಾಷಾ, ಆಕೃತಿಗಣ, ಮೊದಲಾದವುಗಳನ್ನು ಹೇಳಿರುವದರಿಂದ ತಿಳಿಯಬೇಕಾಗಿದೆ.

ಮತ್ತು ಸಂಸ್ಕೃತ ವ್ಯೆಯಾಕರಣರಲ್ಲಿ ಅದ್ವಿತೀಯರಾದ ಪತಂಜಲಿ ಮಹರ್ಷಿಗಳೂ, ವ್ಯಾಕರಣ ಮಹಾಭಾಷ್ಯವೆಂದು ಪ್ರಸಿದ್ಧಿಯನ್ನು ಪಡೆದಿರುವ ಗ್ರಂಥದಲ್ಲಿ ವ್ಯಾಕರಣಕ್ಕೆ ಪ್ರಯೋಜನಾದಿಗಳನ್ನು ಸಮರ್ಥಿಸುವ ಪಸ್ಪಶಾಹ್ನಿಕವೆಂಬ ವಿಚಾರ ಗ್ರಂಥವಲ್ಲಿ, " ಸಿದ್ಧೆ ಶಬ್ದಾರ್ಥಸಂಬಂಧೆ, ಲೋಕತೋಽರ್ಥಪ್ರಯುಕ್ತೆ " ಎಂಬ ವಾಕ್ಯದಿಂದ, ಲೋಕರೂಢಿಯಿಂದಲೇ ಶಬ್ದಗಳೂ ಅರ್ಥಗಳೂ, ಅವುಗಳಿಗಿರುವ ಪರಸ್ಪರ ಸಂಬಂಧಗಳೂ ಸಿದ್ಧವಾಗಿರಲು ವ್ಯಾಕರಣದಿಂದ ಪ್ರಯೋಜನವೇನೆಂದು ಶಂಕಿಸಿ, ಲೋಕದಲ್ಲಿ ಶಬ್ದಗಳು ಅನಂತವಾಗಿರುವವು, ಅವುಗಳನ್ನು ಈಗಿನವರು ಪ್ರತಿಯೊಂದನ್ನೂ ಸಾಠವಾಡಿ ತಿಳಿದುಕೊಳ್ಳಬೇಕಾದರೆ ಅಸಾಧ್ಯವಾಗುವದೆಂದು ನಿಖಿಲಶಬ್ದಜ್ಞಾನಕ್ಕಾಗಿ ಲಘುಭೂತವಾದ ಈಯುಪಾಯವು ಆಶ್ರಯಿಸಲ್ಪಟ್ಟದೆ ಎಂಬದಾಗಿ "ಬಹವೋ ಶಬ್ದಸ್ಯ ಪ್ರಯೋಗವಿಷಯಃ, ಸಪ್ತದ್ವೀಪಾವಸುಮತೀ, ತ್ರಯೋಲೋಕಾಃ, ಚತ್ವಾರೋವೇದಾಃಸಾಂಗಾಃಸರಹಸ್ಯಾಃ ಬಹುಧಾಭಿನ್ನಾಃ, ಏಕಶತಮಧ್ವರ್ಯುಶಾಖಾಃ, ಸಹಸ್ರವರ್ತ್ಮಾಸಾಮವೇದಃ, ಏಕವಿಂಶತಿಧಾಬಾಹ್ವೃಚ್ಯಂ, ನವಧಾಥರ್ವಣೋವೇದಃ, ವಾಕೋವಾಕ್ಯಮಿತಿಹಾಸಃ ಪುರಾಣಂ, ವೈದ್ಯಕಂ, ಇತ್ಯೇತಾವಾನ್ ಶಬ್ದಸ್ಯ ಪ್ರಯೋಗವಿಷಯಃ, ಇತ್ಯಾದಿ ವಾಕ್ಯಗಳಿಂದಲೂ, ಅಲ್ಲಲ್ಲಿ ಆಯಾಯ ಶಬ್ದಗಳು ನಿಯತವಿಷಯಗಳಾಗಿರುವುವು; ಹ್ಯಾಗೆಂದರೆ, "ಶವತಿರ್ಗತಿಕರ್ಮಾಕಾಮ್ಬೋಜೇಷ್ವೇವ ಭಾಷಿತೋಭವತಿ, ವಿಕಾರಮೇನಮೌರ್ವ್ಯಾಭಾಷಂತೇಶವಇತಿ, ಹಮ್ಮತಿಃ ಸುರ್ಗಾ

ಬೇಕೆಂದು ಏರ್ಪಾಡು ಮಾಡಿದಾರೆ. ವಿಲಾಯತಿಲ್ಲಿ ಈತನ ಕಕ್ಷಿಯವರು ಪ್ರತಿಕಕ್ಷಿಯವರು ಕೂಡ ತಮ್ಮತಮ್ಮ ವ್ಯತ್ಯಾಸಭಾವಗಳನ್ನು ಮರೆತು ಸ್ವಕಕ್ಷಿಯವರಂತೆ ಪರಕಕ್ಷಿಯವರು ತಮ್ಮ ಕಕ್ಷಿಗೆ ಪ್ರಾಣಭೂತನಾದವನು ಹೋದರೆ ಹ್ಯಾಗೊ ಹಾಗೆ ಭಾವಿಸುತ್ತಲಿದ್ದಾರಂ ಇಟಲಿ ಗ್ರೀಸ್, ಅಮೆರಿಕಾ, ನಾರ್ವೆ ಮೊದಲಾದ ಅನೇಕ ದೇಶಸ್ಥರು ಮೂತಾಪಿತೃವಿಯೋಗವಾದಂತೆ ಭಾವಿಸುತಲಿದ್ದಾರೆ. ಹೀಗೆ ಪ್ರಪಂಚದಲ್ಲೆಲ್ಲಾ ಜ್ಞಾನವುಂಟಾಗಬೇಕಾದರೆ ಈತನು ಪ್ರಪಂಚಕ್ಕೆ ಎಷ್ಟು ಉಪಕಾರಮಾಡಿದ್ದಾನೊ ಅದು ಊಹನೀಯವಾಗುತ್ತದೆ. ಸ್ಥಳ ಸಂಕೋಚದಿಂದ ವಿಶೇಷ ಹೇಳುವದಕ್ಕೆ ಆಗುವದಿಲ್ಲ. ಈತನ ಮಹಿಮೆಯು ಚನ್ನಾಗಿ ತಿಳಿಯುವದಕ್ಕೋಸ್ಕರ ಒಂದು ಸಂಗತಿಯನ್ನು ನೂತ್ರ ಹೇಳಿ ಈ ಲೇಖನವನ್ನು ಮುಗಿಸುತ್ತೇನೆ.

ಈಗ ಕೆಲವು ವರುಷಗಳ ಕೆಳಗೆ ಒಂದು ಹಸುವು ಈತನನ್ನು ಹಾಯಿತು. ಅದನ್ನು ನೋಡಿದವನು ಆ ಹಸುವನ್ನು ಗುಂಡಿನಿಂದ ಹೊಡೆದುಕೊಂದನು. ಪಿಕೆಗೊ ಸರ್ವವಸ್ತುಪ್ರದರ್ಶನಶಾಲೆಯಲ್ಲಿ ಆ ಹಸುವಿನ ಮಾಲೀಕನು ಒಂದು ಡೇರೆಯನ್ನು ಬಾಡಿಗೆಗೆ ತೆಗದುಕ್ಕೊಂಡು ಗ್ಯಾಲ್ಯಡ್‌ಸ್ಟನನ್ನು ಹಾದ ಹಸುವಿನ ಚರ್ಮವುಳ್ಳ ಕೊಂಬೂ ಈ ಡೇರೆಯಲ್ಲಿ ತೋರಿಸಲ್ಪಡುತ್ತದೆಂದು ನೋಟೀಸು ಕೊಟ್ಟನು. ಇದನ್ನು ನೋಡತಕ್ಕವರು ತಲೆವಂದಕ್ಕೆ ಇಷ್ಟು ಎಂಬದಾಗಿ ನಿಷ್ಕರ್ಷೆಮಾಡಿದನು. ಇದರಿಂದ ವಸೂಲಾದ ಬೊಬಲಗು ಅನೇಕ ಲಕ್ಷಗಳಾದವು. ಇದರಿಂದಲೆ ಗ್ಯಾಲ್ಯಡ್‌ಸ್ಟನನ ಮಾರುಮಯು ಸ್ವಲ್ಪಮಟ್ಟಿಗೂ ಊಹನೀಯವಾಗುತ್ತದೆ. ಇಂಥಾ ಮನುಷ್ಯನನ್ನು ಕಳೆದುಕ್ಕೊಂಡ ಲಿಂಗ್ಲೇಯರ ದುಃಖಕ್ಕೂ ಈತನ ಕುಟುಂಬದವರ ದುಃಖಕ್ಕೂ ಸಾರವನ್ನು ಹೇಳುವದು ಹ್ಯಾಗೆ?

ವ್ಯಾಕರಣದ ಪ್ರಯೋಜನ.

ನಾವು ನಿಷ್ಪಕ್ಷಪಾತವಾಗಿ ಪ್ರಾಚೀನರು ಮಾಡಿರುವ ವ್ಯಾಕರಣಗಳನ್ನೂ, ಕಾವ್ಯಾದಿಗಳಲ್ಲಿ ಪ್ರಯೋಗಿಸಿರುವ ಶಬ್ದಗಳನ್ನೂ ನೋಡಿದರೆ, ಲೋಕದಲ್ಲಿರುವ ಶಬ್ದ

ವ್ಯಾಪ್ತವಾಯಿತೆಂದು ಹೇಳಿದೆ. ಇದರಿಂದ ಮೊದಲು ಹೇಳಿದ ಶ್ರುತಿಗಳಿಗೆ ವ್ಯಾಕರಣ ವಿರುದ್ಧವಾದ ಪ್ರಯೋಗಗಳನ್ನು ಮಾಡಲೇಬಾರದೆಂದು ಹೇಳುವದಕ್ಕೆ ಆಗುವದಿಲ್ಲ. ಲೋಕದಲ್ಲಿ ಯಾವ ಶಬ್ದಗಳು ಯಾವಯಾವ ಅರ್ಥಗಳಲ್ಲಿ ಪ್ರಸಿದ್ಧವಾಗಿರುವವೊ ಅಯಾಯ ಅರ್ಥಗಳಲ್ಲಿ ಅಯಾಯ ಶಬ್ದಗಳನ್ನೇ ಉಪಯೋಗಿಸಬೇಕೆಂದು ತಾತ್ಪರ್ಯವನ್ನು ಹೇಳಬೇಕು.

ಆದುದರಿಂದಲೇ ಭಾಷ್ಯಕಾರರು—ಕುಂಚೀ ಮಂಚೀ, ಇತ್ಯಾದಿ ದೇಶಭಾಷಾ ಪ್ರಸಿದ್ಧವಾದ ಶಬ್ದಗಳಿಂದಲೂ, ದೇಶಕಾಲ ಜಾತಿಭೇದಗಳಿಂದ ವಿಕಾರವನ್ನು ಹೊಂದಿ ಗಾಯಿ, ಗಾವೀ, ಗೋಣೀ, ಗೋತಾ, ಗೋಪೋತಲಿಕಾ ಇತ್ಯಾದಿ ಶಬ್ದಗಳಿಂದಲೂ ವ್ಯಾಕರಣ ನಿಷ್ಪನ್ನವಾದ ಶಬ್ದಗಳಿಂದ ಹ್ಯಾಗೆ ವ್ಯುತ್ಪನ್ನರಿಗೆ ಅರ್ಥಬೋಧೆಯಾಗುವದೋ ಹಾಗೆ ಪಂಡಿತ ಪಾಮರ ಸಾಧಾರಣವಾಗಿ ಲೋಕರೂಢಿಯಿಂದಲೇ ಅರ್ಥಬೋಧೆಯಾಗುವದು. ವ್ಯಾಕರಣದಿಂದ ಧರ್ಮನಿಯಮವು ಮಾಡಲ್ಪಡುತ್ತದೆ. ಆ ಧರ್ಮವು ಅದೃಷ್ಟರೂಪವಾದುದು. ಪ್ರಯೋಜಯಾಃ ಸವಿಭಕ್ತಿಕಾಃ ಕಾರ್ಯಾ, ಎಂದು ಅದೃಷ್ಟಫಲಜನಕವಾದ ಯಜ್ಞಾದಿ ಕರ್ಮಗಳಲ್ಲೇ ವ್ಯಾಕರಣ ವಿರುದ್ಧ ಪ್ರಯೋಗಗಳನ್ನು ಮಾಡಬಾರದೆಂದು ಅಭಿಪ್ರಾಯವನ್ನು—ಕೊಟ್ಟಿರುವರು. ಮುಖ್ಯವಾಗಿ ಈ ವಿವಾದಗಳೆಲ್ಲ ಸಂಸ್ಕೃತಭಾಷೆಗೆ, ಎಂದು ತೋರುವದು—ಯಾಕೆಂದರೆ, ಸಾಧೂನೇವ, ಎಂಬ ಸ್ಥಳದಲ್ಲಿ ಸಾಧುತ್ವವೆಂಥಾದ್ದು, ಎಂದು ಶಂಕಿಸಿ, 'ಅನವಭ್ರಷ್ಟತಾನಾದಿರ್ಯ ದ್ವಾಭ್ಯುದಯಯೋಗ್ಯತಾ। ವ್ಯಾಕ್ರಿಯಾವ್ಯಂಜನೀಯಾನಾಜಾತಿಃಕಾಪಿಹಸಾಧುತಾ॥ ಎಂದು ಅಪಭ್ರಂಶಾದಿಗಳಲ್ಲದೆ ಇರುವದೇ ಸಾಧುಗಳೆಂದು ಹೇಳಿರುವದರಿಂದ ದೇಶಭಾಷೆಗಳು ಅಪಭ್ರಂಶರೂಪಗಳಾಗುವದರಿಂದ ಈ ಭಾಷೆಗೆ ಸಂಸ್ಕೃತವಾಸನೆಯಿಂದ ಈ ನಿರ್ಬಂಧವನ್ನು ಮಾಡುವದು ಸರ್ವಥಾ ಉಚಿತವಲ್ಲ.

ಆದರೆ ಇದುವರೆಗೂ ದೇಶಭಾಷೆಗಳಿಗೂ ವ್ಯಾಕರಣವನ್ನು ಕಲ್ಪಿಸಿರುವರು ಸಂಸ್ಕೃತವಾಸನೆಯಿಂದ ಕಲ್ಪಿಸಿರುವರೇ ಹೊರ್ತು ಬೇರೆಯಲ್ಲ ಎಂಬುವದು ಅವರವರ ಗ್ರಂಥದಿಂದಲೇ ತೋರುವದು. ಆದಾಗ್ಯೂ ಅವರಿಗೂ ಪ್ರಯೋಗವನ್ನು ನಿರೋಧಿಸುವವರಲ್ಲಿ ತಾತ್ಪರ್ಯವಿದ್ದಂತೆ ತೋರುವದಿಲ್ಲ ಮತ್ತು ಶಬ್ದಾನುಶಾಸನ ಮೊದಲಾದ ಭಾಷಾವ್ಯಾಕರಣ ಗ್ರಂಥಗಳನ್ನು ನೋಡಿದರೆ ಅದರಿಂದ ಸಾಧಿಸುವದಕ್ಕೆ ಆಗದೆ ಈಗಿನ ಪ್ರಯೋಗದಲ್ಲಿ ಪ್ರಚುರವಾಗಿರುವ ಶಬ್ದಗಳಿಗೂ ಸರಿಯಾದ ಲಕ್ಷಣಗಳನ್ನು

ಷ್ಟೈಗ್ರೀಮ್, ರಂಹತಿಃನಾಪ್ರಾಚ್ಯಮಧ್ಯೇಮ್, ಗವಿಮೀವತ್ವಾರ್ಯ್ಯಃಪ್ರಯುಂಜತೈ, ದಾತಿರ್ಲವನಾರ್ಥೇಪಾಪ್ರಾಚ್ಯೇಮ್, ದಾತ್ರಮುದೀಚ್ಯೇಮ್'' ಇತ್ಯಾದಿ ವಾಕ್ಯಗಳಿಂದ ಒಂದೂಂದು ದೇಶದಲ್ಲಿ ಬಂದೊಂದು ಅರ್ಥದಲ್ಲಿ ಉಪಯೋಗಿಸುವದರಿಂದಲೂ, ಪ್ರಯೋಗ ವಿಷಯವಾದ ಶಬ್ದಗಳು ಅನಂತವಾಗಿರುವವೆಂದು ತೋರುವುದು.

ಇಂಥಾ ಶಬ್ದಗಳು ತಿಳಿಯಬೇಕಾದರೆ ವ್ಯಾಕರಣರೂಪವಾದ ಉಪಾಯ ಒಂದೇಹೊರ್ತು ಇನ್ನಾವ ಸುಲಭೋಪಾಯವೂ ಇರವದಿಲ್ಲ. ಇದೇ ವಿಷಯವನ್ನು ಮೇಲೆ ಹೇಳಿದ ಭಾಷ್ಯದಲ್ಲೇ, ''ಬೃಹಸ್ಪತಿಶ್ಚ ಪ್ರವಕ್ತಾ ಇಂದ್ರಶ್ಚಾಧ್ಯೇತಾ, ದಿವ್ಯಂ ವರ್ಷಸಹಸ್ರಮಧ್ಯಯನಕಾಲಃ, ತಥಾಪಿಪ್ರತಿಪದೋಕ್ತಾನಾಂ ಶಬ್ದಾನಾಂ ನಾಂತಂ ಜಗಾಮ'' ಕಿಂಪುನರನ್ಯತ್ವೈ, ಯುಃಸರ್ವಥಾಚಿರಂಜೀವತಿಸವರ್ಷಶತಂಜೀವತಿ, ಚತುರ್ಭಿಶ್ಚ ಪ್ರಕಾರೈರ್ವಿದ್ಯಾಉಪಯುಕ್ತಾಭವತಿ, ಆಗಮಕಾಲೇನ, ಸ್ವಾಧ್ಯಾಯಕಾಲೇನ ಪ್ರವಚನಕಾಲೇನ, ವ್ಯವಹಾರಕಾಲೇನೇತಿ, ತತ್ರಚಾಗಮಕಾಲೇನೈವ ಆಯುಃಕೃತ್ಸ್ನಂ ಪರ್ಯ್ಯಾಪ್ತುಂಸ್ಯಾತ್ ತಸ್ಮಾದನಭ್ಯುಪಾಯಃ ಪ್ರತಿಪದಪಾಠಃ ಶಬ್ದಾನಾಂ ಪ್ರತಿಪತ್ತಾ'' ಎಂದು ಹೇಳಿರುವದರಿಂದ ವ್ಯಾಕರಣವೇ ಶಬ್ದಜ್ಞಾನಕ್ಕೆ ಮುಖ್ಯೋಪಾಯವು.

ಆದರೆ ಇಲ್ಲಿ ಕೆಲವರು, ''ನವೈಗ್ಲೇಚ್ಛಿತವೈ, ನಾಪಭಾಷಿತವೈ, ಇತ್ಯಾದಿ ಬ್ರಾಹ್ಮಣ ವಾಕ್ಯದಿಂದಲೂ 'ಅಪಶಬ್ದಂಪ್ರಯುಂಜಾನೋಸಾರಸ್ವತೀಂ ಯಷ್ಟಿಂನಿರ್ವಪೇತ್' ಎಂಬ ಶ್ರೌತವಾಕ್ಯದಿಂದಲೂ, ಸಾಧೂನೇವಪ್ರಯುಂಜೀತನಾಸಾಧೂರ್ಜ್ಞ, ಎಂಬ ನಿರುಕ್ತಕಾರರ ವಚನದಿಂದಲೂ, ಈಗಿರುವ ವ್ಯಾಕರಣಕ್ಕೆ ವಿಷಯವಾದ ಶಬ್ದಗಳೇ ಸಾಧುಗಳು, ಉಳಿದವುಗಳೆಲ್ಲಾ ಅಸಾಧುಗಳು, ಅವುಗಳನ್ನು ಪ್ರಯೋಗಿಸಿದರೆ ಮಹಾಪ್ರತ್ಯವಾಯವು ಸಂಭವಿಸುವದು ಎಂದು ಹೇಳುವರು, ಮತ್ತು ಇದಕ್ಕೆ ದೃಷ್ಟಾಂತವಾಗಿ,— ತೇಸುರಾಹೇಲಯೋಹೇಲಯಇತಿಕುರ್ವಂತಃಪರಾಬಭೂವುಃ, ಎಂಬ ವೇದವಾಕ್ಯವನ್ನೂ, ಮಂತ್ರೋಹೀನಃಸ್ವರತೋವರ್ಣತೋವಾಮಿಥ್ಯಾಪ್ರಯುಕ್ತೋನತಮರ್ಥಮಾಹ ಸವಾಗ್ವಜ್ರೋಯಜಮಾನಂಹಿನಸ್ತಿ ಯಥೇಂದ್ರಶತ್ರುಸ್ವರತೋಪರಾಧಾತ್ ॥ ಎಂಬ ಮಂತ್ರವನ್ನೂ ಉದಾಹರಿಸಿ ಶಬ್ದಪ್ರಯೋಗವನ್ನು ಮಾಡುವವರಿಗೆ ಭಯವನ್ನುಂಟುಮಾಡುವರು. ಆದರೆ ಅದೇ ಶ್ರುತಿಯಲ್ಲಿ ಮತ್ತೊಂದು ಕಡೆ ಯುದ್ವಾನಃ, ತದ್ವಾನಃ ಎಂದು ಹೇಳುವದಕ್ಕೆ ಪ್ರತಿಯಾಗಿ, ಯರ್ವಾಣಃ ತರ್ವಾಣಃ ಎಂದು ಹೇಳಿದ ಋಷಿಗಳಿಗೆ ಯಾವ ದೋಷವೂ ಬರಲಿಲ್ಲ, ಇವರಿಗೆ ಅದೇ ಹೆಸರು

(c) ಚೂರಿಯಿಂದ ಹೆರೆದರೆ, ಕೊಬ್ಬು ನಪ್ಪಡಿ ಉದರಿದಹಾಗೆ ಗಾಜಿನಪ್ಪಡಿ ಯಾಕೆ ಉದರಲಿಲ್ಲ ?

(ಗಾಜು ಕಠಿನವಾಗಿದೆ)

ಕೊಬ್ಬು ಮೃದುವಾಗಿದೆಯೆಂಬದನ್ನು ಬಾಲಕರಿಂದ ಹೇಳಿಸಬೇಕು.

(d) ಬೆಂಕಿಯು ಕಾವಿನಿಂದ ಕೊಬ್ಬು ಕರಗಿ ನೀರಾಗುತ್ತದೆಂಬುದನ್ನು ಹೇಳಿಸು.

(e) ಹೀಗೆಯೇ ನೀರಾಗಿರುವ ಕೊಬ್ಬನ್ನು ಕಾಯಿಸಿ, ಆವಿಯರೂಪಕ್ಕೆ ತರಬಹುದೆಂಬದನ್ನು ವಿವರಿಸು. ಮೇಣದಬತ್ತಿಯು ಬಣ್ಣವು ಕಪ್ಪು ಮಿಶ್ರವಾದ ಬಿಳಪು ಎಂಬುದನ್ನು ಹುಡುಗರಿಂದ ಹೇಳಿಸಬೇಕು.

ಬತ್ತಿ.

(f) 'ಬತ್ತಿಯಲ್ಲಿ ಅನೇಕ ದಾರಗಳಿವೆ. ಇವು ಹತ್ತೀದಾರಗಳು' ಎಂಬುದನ್ನು ಹೇಳಿಸು

(g) ಈ ಬತ್ತಿಯು ಮೇಣಬತ್ತಿಯು ಬುಡದಿಂದ ತುದಿಯವರಿಗೆ ಇದೆಯೆಂಬದನ್ನು ಹುಡಗರಿಂದ ಹೇಳಿಸಬೇಕು.

ಬೆಳಕಿಗೆ ಕಾರಣ.

(h) ಕೇವಲ ಹತ್ತೀಬತ್ತಿಯಿಂದಲೇ ಬೆಳಕು ಉಂಟಾಗುವದಿಲ್ಲವೆಂಬುವದನ್ನು ಹೇಳಿಸು.

(k) ಇವರಿಂದ ಬಾಲಕರು, 'ಕೇವಲ ಕೊಬ್ಬಿನಿಂದ ಬೆಳಕಾಗುವದಿಲ್ಲ' ಎಂದು ಊಹಿಸುವರು ಕೊಬ್ಬಿನ ಆವಿಯು ಉರಿಯುತ್ತದೆ ಎಂದು ಹೇಳು

(c) ಮೇಣದಬತ್ತಿಯನ್ನು ಹೆರವಂತೆ ಒಂದು ಗಾಜಿನ ಚೂರನ್ನಾಗಲಿ, ಪಾತ್ರೆಯನ್ನಾಗಲಿ ಹೆರೆಯುವದಕ್ಕೆ ಯತ್ನಿಸು. ಆದರೆ ಬತ್ತಿಯನ್ನು ಹೆರೆದಾಗ, ಉದರಿದಂತೆ ಗಾಜಿನಪ್ಪಡಿ ಉದರುವದಿಲ್ಲ.

(d) ಬಾಲಕರೆದುರಿಗೆ, ಒಂದು ಮೇಣದ ಬತ್ತಿಯನ್ನು ದೀಪಕ್ಕೆ ಹಿಡಿಯಬೇಕು.

(e) ನೀರು ಕುದ್ದು ಆವಿಯಾಗಿ ಹೊಗೆಯರೂಪದಲ್ಲಿ ಮೇಲಕ್ಕೇಳುವದನ್ನು ಬಾಲಕರಿಗೆ ಜ್ಞಾಪಿಸಬೇಕು.

(f) ಅದರಲ್ಲಿರುವ ದಾರದ ಬತ್ತಿಯನ್ನು ಪ್ರತ್ಯೇಕಿಸಿಕೊಂಡು, ಅದರಲ್ಲಿರುವ ದಾರಗಳನ್ನು ಬೇರೆ ಬೇರೆ ವಿಂಗಡಿಸಿಕೊಳ್ಳಬೇಕು.

(g) ಮೇಣದ ಬತ್ತಿಯ ಬುಡವನ್ನು ಸ್ವಲ್ಪ ಹೆರೆದು, ಅಲ್ಲಿ ಕಾಣುವ ಬತ್ತಿಯನ್ನು ಹುಡುಗರಿಗೆ ತೋರಿಸಬೇಕು.

(h) ಕೇವಲ ಹತ್ತೀಬತ್ತಿಯು ಚನ್ನಾಗಿ ಉರಿಯದೆ ಕರತುಕೊಂಡು ಹೋಗುತ್ತದೆಂಬದನ್ನು ಬಾಲಕರಿಗೆ ತೋರಿಸುವದಕ್ಕೋಸ್ಕರ ಅವರೆದುರಿಗೆ ಒಂದು ಹತ್ತೀಬತ್ತಿಗೆ ದೀಪ ಹಚ್ಚಿ ತೋರಿಸಬೇಕು.

(k) ಬರೀ ಕೊಬ್ಬನ್ನು ದೀಪಕ್ಕೆ ಹಿಡಿದರೆ, ಅದು ಕರಗುವದೇ ಹೊರತು ಉರಿಯುವದಿಲ್ಲವೆಂಬದನ್ನು ಬಾಲಕರಿಗೆ ತಿಳಿಸುವದಕ್ಕೋಸ್ಕರ, ಮೇಣದ ಬತ್ತಿಯು ಪುಡಿಗೆ ದೀಪವನ್ನು ಹಿಡಿಯಬೇಕು.

ಕಲ್ಪಿಸಿ ಪ್ರಾಯಶಃ ಶಬ್ದಗಳು ಈರೀತಿಯಾಗಿ ವಿಕಾರವನ್ನು ಹೊಂದುವದು, ಎಂದು ಬಾಲಕರಿಗೆ ವಿಷಾರ್ಥವನ್ನು ತೋರಿಸುವದು ಒಳ್ಳೇದು. ಎಂದು ನಿರಾಗ್ರಹಿಗಳಿಗೆ ಮನಸ್ಸಿನಲ್ಲಿ ಬಾರದೆ ಇರಲಾರದು.

ಮೇಣದ ಬತ್ತಿ.

ಬೋಧನ ಕ್ರಮ.

ಪೀಠಿಕೆ.	ನಿದರ್ಶನಗಳು.
ಹಗಲಿಗೂ ರಾತ್ರಿಗೂ ವ್ಯತ್ಯಾಸವೇನು ? (ಬೆಳಕು; ಕತ್ತಲೆ) ನಮಗೆ, ಹಗಲಿನಲ್ಲಿ ಸ್ವಭಾವಸಿದ್ಧವಾದ ಬೆಳಕು ಸೂರ್ಯನಿಂದ ಬರುತ್ತದೆಂಬುವದನ್ನು ವ್ಯಕ್ತಪಡಿಸು. ರಾತ್ರಿಕಾಲದಲ್ಲಿ ನಮಗೆ ಬೆಳಕನ್ನು ಕೊಡುವ ಪದಾರ್ಥಗಳಾವವು? (ಚಂದ್ರ, ದೀಪ, ಮೇಣದಬತ್ತಿ ಯದೀಪ ಮುಂತಾದವುಗಳು)	
ಕೊಬ್ಬು. (a) ಹಾಗೆ ಉಜ್ಜಿದ್ದರಿಂದ ಕಾಗದ ಏನಾಯಿತು ? (ಜಿಡ್ಡಾಯಿತು) ಆದ್ದರಿಂದ ಕೊಬ್ಬು ಒಂದು ವಿಧವಾದ ಜಿಡ್ಡು ಎಂಬುದನ್ನು ಹೇಳಿಸು. ಮೇಣದ ಬತ್ತಿಗೆ ಹಾಕಿರುವ ಕೊಬ್ಬು ಪ್ರಾಣಿ ಸಂಬಂಧವಾದದ್ದೆಂದು ವಿವರಿಸು.	(a) ಮೇಣದ ಬತ್ತಿಯನ್ನು ಒಂದು ಕಾಗದದಿಂದ ಉಜ್ಜಿ, ಆ ಕಾಗದವನ್ನು ಬಾಲಕರಿಗೆ ತೋರಿಸಬೇಕು.
ಕೊಬ್ಬಿನ ಗುಣಗಳು. (b) ಮೇಣದ ಬತ್ತಿಯನ್ನು ಸುಲಭವಾಗಿ ಹೆರೆಯಬಹುದೆಂಬುವದನ್ನು ಹೇಳಿಸು.	(b) ಬಾಲಕರೆದುರಿಗೆ ಮೇಣದ ಬತ್ತಿಯನ್ನು ಚೂರಿಯಿಂದ ಹೆರೆಯಬೇಕು.

ವ್ಯವಸಾಯ.

ರೈತ ಯಾನೆ ಜಿರಾಯತ್‌ದಾರ್

ಪ್ರಜೆಗಳಲ್ಲಿ (1) ಜಿರಾಯತ್‌ದಾರ್ ಅಥವಾ ರೈತನೆಂತಲೂ (2) ಕಸಬ್‌ದಾರ್ ಕಾರೇಗಾರನೆಂತಲೂ (3) ವರ್ತಕನೆಂತಲೂ (4) ಬೇರೋಜುಗಾರ್ ಅಥವಾ ಕುಷ್‌ಬಾಷ್‌ಜತ ಎಂತಲೂ ನಾಲ್ಕು ವಿಧವಾಗಿ ವಿಂಗಡಿಸಲ್ಪಡಬೇಕು. ಇವರಲ್ಲಿ ರೈತರೆಂಬುವರೇ ಜನಾಂಗಕ್ಕೆ ಶಿಖರಪ್ರಾಯರಾಗಿರುತ್ತಾರೆ. ಇವರು ಕಷ್ಟಪಟ್ಟು ಹೆಚ್ಚು ಕೃಷಿಮಾಡದಿದ್ದರೆ ಬಾಕಿ ಜನಗಳೆಲ್ಲಾ ಹೊಟ್ಟೆಯಮೇಲೆ ಹೊದ್ದೇಅರವಿ ಹಾಕಿಕೊಂಡು ತೊಂದರೆಪಡಬೇಕಾಗಿ ಬರುತ್ತೆ. ಇವರು ತಾವು ತಿಂದು ಇತರ ಮೂರು ವಂಗಡದವರಿಗೂ ಬೇಕಾಗುವ ಆಹಾರ ಮತ್ತು ಇತರ ವಿಧವಾದ ಸೌಲಭ್ಯಕಲ್ಪನೆಗಳಿಗೆ ಬೇಕಾಗುವ ಸಲಕರಣೆ ಸಹ ಮಾಡಿಕೊಡಬೇಕು. ಸಕಾಲದಲ್ಲಿ ಅಂದರೆ ಮಳೆಬಂದ ಒಡನೆ ರೈತ ಸೋವಾರಿತನದಿಂದ ಜವಿರ್ಾ ಉಕ್ಕೆವಾಡಿ ಬೀಜಾಬಿತ್ತಿ ಪೈರು ಸಕಾಲಕ್ಕೆ ಮಾಡದೇ ಇದ್ದಲ್ಲಿ ಸುವೃಷ್ಟಿ ಸಹ ನಿಷ್ಪ್ರಯೋಜನವಾಗುತ್ತೆ. ಊಟಕ್ಕೆ ಬೇಕಾದ ಸಾಮಗ್ರಿಗಳು ಸಾಕವಾಡದೆ ಇದ್ದರೆ ಹ್ಯಾಗೆ ಭುಂಜಕರಿಗೆ ಪ್ರಯೋಜನವಿಲ್ಲವೋ ಹಾಗೆಯೇ ಒಳ್ಳೇ ಸುವೃಷ್ಟಿ ಕಾಲಕಾಲಕ್ಕೆ ಆದಾಗ್ಯೂ ಮನಸ್ಸಿಟ್ಟು ರೈತ ವ್ಯವಸಾಯ ಕ್ರಮವನ್ನ ಜರಗಿಸದೇಹೋದರೆ ಸುವೃಷ್ಟಿಫಲವು ಉಂಟಾಗಲಾರದು. ಆದಕಾರಣ ಪ್ರಜೆಗಳ ಕ್ಷೇಮಾಭಿವೃದ್ಧಿಗೆ ರೈತನೇ ಮುಖ್ಯಕಾರಣನಾಗಿರುತ್ತಾನೆ. ರೈತನು ಪ್ರಜೆಗಳ ಉದರಭರಣಕ್ಕೆ ಬೇಕಾಗುವ ಆಹಾರಪದಾರ್ಥಗಳನ್ನ ಬೆಳೆಯುತಕ್ಕದ್ದಲ್ಲದೆ ಸ್ವದೇಶ ಮತ್ತು ಅನ್ಯದೇಶದ ಕಸಬುದಾರ್ರಿಗೆ ಬೇಕಾಗುವ ಸರಕುಗಳನ್ನ ಸಹ ಬೆಳೆದು ಒದಗಿಸಿಕೊಡಬೇಕು. ಹೀಗೆ ಮಾಡದೆ ರೈತ ತನ್ನ ಹೊಟ್ಟೆಗೆ ಮತ್ತು ಬಟ್ಟೆಗೆ ಬೇಕಾದಷ್ಟೇ ಬೆಳೆದರೆ ಪ್ರಜಾಕ್ಷೋಭೆಗೂ ಜನಾಂಗದ ಹೀನಸ್ಥಿತಿಗೂ ಅವಕಾಶವಾಗುತ್ತೆ. ಆದಕಾರಣ ರೈತನು ಕೂಡಿದಮಟ್ಟಿಗೂ ಒಂದಾವರ್ತಿ ಬೆಳೆ ಆಗುವ ಪ್ರದೇಶದಲ್ಲಿ ಎರಡುಮೇಳೆ ಬೆಳೆಮಾಡಲು ಬೇಕಾದ ಏರ್ಪಾಡು ಇಟ್ಟರೆ ತನಗೆ ಪ್ರಯೋಜನ ಬಹಳವಾಗಿ ಆಗುವುದಲ್ಲದೆ ಇತರರಿಗೂ ಅನುಕೂಲಪಡಿಸಿದಂತಾಗುತ್ತೆ. ಹೀಗೆ ಮಾಡಬೇಕಾದರೆ ರೈತನು ಬಹಳ ತಿಳಿದವನಾಗಿರಬೇಕು.

ರೈತರಿಗೆ ವಿಶೇಷ ಜವಿರ್ಾ ಇದ್ದಾಗ್ಯೂ ತಮಗೆ ಬೇಕಾದ ಧಾನ್ಯಗಳನ್ನು

(l) ಹೀಗೆ ಕರಗಿ ನೀರಾದ ಕೊಬ್ಬು ಬತ್ತಿಯ ತುದಿಯನ್ನೇರಿ, ಅಲ್ಲಿ ಕಾವಿನಿಂದ ಆವಿಯಾಗಿ ಉರಿಯುತ್ತದೆಂಬದನ್ನು ಹೇಳು.

ಜ್ವಾಲೆ.

(m) ಜ್ವಾಲೆಯ ಒಂದು ಭಾಗವು ನೀಲೀ ಬಣ್ಣವಾಗಿದೆ ಎಂಬದನ್ನೂ ಮತ್ತೊಂದು ಭಾಗವು ಹಳದೀ ಬಣ್ಣವಾಗಿದೆ ಎಂಬದನ್ನೂ ಬಾಲಕರಿಂದ ಹೇಳಿಸು. ಹಳದೀಭಾಗದಿಂದಲೇ ದೀಪ ಉರಿಯುವದೆಂದು ವಿವರಿಸು.

(n) ಮೇಣದ ಬತ್ತಿಯನ್ನು ಯಾವ ಯಾವ ರೀತಿಯಲ್ಲಿ ಹಿಡಿದರೂ ಜ್ವಾಲೆಯು ಊರ್ಧ್ವಮುಖವಾಗಿಯೇ ಇರುತ್ತದೆಂಬದನ್ನು ಹೇಳಿಸು.

ವಿಷಯಶೋಧನೆ :—

ಒಬ್ಬ ಹುಡುಗನನ್ನು ಕರೆದು, ದೀಪದ ಎಡಬಲಗಳಲ್ಲಿಯೂ, ಕೆಳಗೂ ಮೇಲೂ ಒಂದಡಿಯಷ್ಟು ದೂರದಲ್ಲಿ ಕೈಯ್ಯನ್ನಿಡಿಸಿ. ಯಾವಭಾಗದಲ್ಲಿ, ಆವನ ಕೈಗೆ ತುಂಬಾ ಶಾಖೆ ತಟ್ಟುತೆಂಬದನ್ನು ಪ್ರಶ್ನೆ ಮಾಡು. ಜ್ವಾಲೆಯು ಬಿಸಿಯೆಂಬದನ್ನೂ, ಜ್ವಾಲೆಯ ಮೇಲುಭಾಗದಲ್ಲಿ, ಇತರ ಭಾಗಗಳಿಗಿಂತ, ಕಾವು ಜಾಸ್ತಿಯೆಂಬದನ್ನೂ ಹೇಳಿಸು ಈ ಕಾರಣದಿಂದಲೇ ನೀರು ಮುಂತಾದವುಗಳನ್ನು ಕಾಯಿಸುವದಕ್ಕೆ ಪಾತ್ರೆಗಳನ್ನು ಬೆಂಕಿಯ ಕೆಳಗಿಡದೆ ಮೇಲಿಡುವದೆಂಬುವದನ್ನು ಹೇಳಿಸು.

(l) ಒಂದು ಮೇಣದ ಬತ್ತಿಗೆ ದೀಪ ಹಚ್ಚಿಸಿ, ಉರಿಯುತ್ತಿರುವ ಕೊಬ್ಬು ಕರಗುವದನ್ನು ತೋರಿಸು.

(m)

ಮೇಣದ ಬತ್ತಿಯ ದೀಪದಲ್ಲಿ ಸ್ಪಷ್ಟವಾಗಿ ಕಂಡುಬರುವ A. B. C. ಎಂಬ ಭಾಗಗಳನ್ನು ಬಾಲಕರಿಗೆ ತೋರಿಸು.

(n) ಜ್ವಾಲೆಯ ತುದಿ 'c' ಎಂಬದನ್ನು ಬಾಲಕರಿಗೆ ತೋರಿಸಿ, ಬತ್ತಿಯನ್ನು ವಾರೆಯಾಗಿಯೂ ಅಡ್ಡಲಾಗಿಯೂ ಹಿಡಿಯಬೇಕು.

ಎಂಬುವೆ ಪಂಗಡದವರೇ ದೃಷ್ಟಾಂತವಾಗಿ ಇಟ್ಟುಕೊಳ್ಳಬಹುದು. ಇವರು ತರಕಾರಿ ಸೊಪ್ಪು ಮತ್ತು ಫಲಾದಿಗಳನ್ನು ವೃದ್ಧಿಪಡಿಸಿ ಬೆಳೆಯೂಡುವದರಲ್ಲಿ ನಿಪುಣರಾಗಿದ್ದಾರೆ. ಹೀಗೆಯೇ ತೊರೆಯರು ಅಥವಾ ಪರಿವಾರದವರು ವಿಳ್ಳೇದೆಲೆತೋಟ ಮೂಡುವದರಲ್ಲಿ ಪಾರಂಗತರಾಗಿದ್ದಾರೆ. ಈಗಿನ ದೇಶಾಭಿವೃದ್ಧಿ ನಾಗರಿಕತೆ ಇವುಗಳಿಂದಲೂ ಅನ್ಯದೇಶದ ಸರಕು ಸ್ವದೇಶದ ಸರಕಿಗಿಂತ ಕವ್ಮಿಕ್ರಯಕ್ಕೆ ಸಿಕ್ಕುವದ್ದರಿಂದಲೂ ವ್ಯವಸಾಯದ ಕಸಬಿಗೆ ಜನಗಳು ಅವಲಂಬನೆ ಮಾಡಿಕೊಳ್ಳಬೇಕಾಗಿ ಬಂತು.

ಕೆ. ಶಾಮ್ಯೆಂಗಾರ್

ಫಾರೆಸ್ಟ್ ಅಸಿಸ್ಟೆಂಟ್ ಕ್ಯೂರೇಟರ್,

ಚಿತ್ರದುರ್ಗ.

ಏದನೇತರಗತಿ ವಾರ್ಷಿಕ ತಾರತಮ್ಯ ಪರೀಕ್ಷೆ, ಮೈಸೂರು ಡಿಸ್ಟ್ರಿಕ್ಟ್

1898ನೇ ಇಸವಿ ಜುಲೈ ತಾ॥ 16 ಶನಿವಾರ—ಘಂಟೆ 10ರಿಂದ 1ರವರೆಗೆ.

ಕನ್ನಡಭಾಷೆ, ವ್ಯಾಕರಣ ಮತ್ತು ವಾಕ್ಯರಚನೆ.

1ನೇ ಭಾಗ—ಪದ್ಯ

I (1) ಪದವೆಂದರೆ ಏನು? ಅನ್ವಯಕ್ರಮ ಹ್ಯಾಗೆ?

(2) ಈ ಅರ್ಧ-ಪದ್ಯಕ್ಕೆ ಅನ್ವಯಕ್ರಮವಾಗಿ ಪದಶಃ ಅರ್ಥವನ್ನು ಬರೆಯಿರಿ

ಪಾರದೆಮುಯ್ಯಂ ಪೆರರ್ಗುಪ । ಕಾರಮನಾಸತ್ತುಮಿಸಪರೊಲವಿಂ ಸುಜನರ್ ॥

II (1) ಈ ಪದ್ಯದ ಅರ್ಥವನ್ನು ವಾಕ್ಯರೂಪವಾಗಿ ಬರೆಯಿರಿ:—

ಕೆಲವರೀಸುದ್ದಿಯನು ಕೇಳ್ವಾ । ಲಲನೆ ದೊರೆಯಳೆನುತ್ತ ನಾಚಿಕೆ । ದಳೆದು ಪಿಂದಿರಿಗಿದರು ತಮ್ಮಯಪುರಕೆವಹಿಲದಲಿ ॥ ಕೆಲರು ಕಣ್ಣಿದುರಭಿಮಾನದ । ಕೆಲಸವೇಕೆನಮಗೆನುತ ತ । ಮ್ಮೊಳಗೆ ಯೋಚಿಸಿ ಮಾನನಿಧಿಗಳು ನಡೆದರಲ್ಲಿಂದ ॥

(2) ಈ ಪದ್ಯಗಳ ಭಾವಮುಖಾರ್ಥವನ್ನು ಬರೆಯಿರಿ:—

ಅಮ್ಮುಜಭವಂ, ಕರಿಗೊತಲಂ, ಭೀಮಕಾರ್ಮುಕವರವು, ಪುಂಡರೀಕಾಂಬರ, ಏಣಲೋ

ಸೂತ್ರ ಬೆಳೆದು ಕಸಬಿಗೆ ಬೇಕಾಗುವ ಮತ್ತು ಜನೋಪಕಾರನಾಗುವ ಸರಕುಗಳನ್ನ ವಿಶೇಷವಾಗಿ ಬೆಳೆಯುವದಿಲ್ಲ ಇದಕ್ಕೆಲ್ಲಾ ರೈತನ ಅಲ್ಪಆಶೆ ಮತ್ತು ಅನಾಗರಿಕ ತೆಯೇ ಕಾರಣವಾಗಿರುತ್ತೆ. ಮತ್ತು ಹಡಕಸಬಿನ ಜನಗಳು ವ್ಯವಸಾಯದ ಕಸಬಿಗೆ ಬಿದ್ದು ದೇಶದ ಜವಿರ್ಾಗಳನ್ನೆಲ್ಲಾ ಹಿಡಿದಿರುತ್ತಾರೆ. ವ್ಯವಸಾಯದ ಕಸಬಿನ ಮರ್ಮ ತಿಳಿಯುವ ಇವರು ಕಷ್ಟಪಟ್ಟಾಗ್ಲೂ ಸಕಾಲದಲ್ಲಿ ವ್ಯವಸಾಯದ ಕ್ರಮ ಜರಗಿಸದೇ ಇರುವ ಕಾರಣ ಒಕ್ಕಲಿಗನ ಹಾಗೆ ಆರಂಬವಾಡಿ ದವಸಧಾನ್ಯಗಳನ್ನ ಬೆಳೆಯುವದಕ್ಕೆ ಆಗುವುದಿಲ್ಲ. ಒಕ್ಕಲಿಗನಾದರೊ ಸ್ವಲ್ಪ ಮಳೆಬಿದ್ದಾಗ್ಲೂ ತನ್ನ ಕಸಬಿನ ಕುಶಲತೆ ಯಿಂದ ಅನುಕೂಲವಾದ ಬೆಳೆಯನ್ನ ತೆಗೆದುಕೊಳ್ಳುತ್ತಾನೆ.

ನೇಗೇಗಾರರು, ಬಣ್ಣಗಾರರು, ಚಿತ್ರಗಾರರು, ವಡ್ಡರು, ಕಲ್ಲುಕುಟಿಗರು, ಕುಲಮೇಕೆಲಸವರು, ಅಕ್ಕಸಾಲಿ, ಬಡಗಿ ಮತ್ತು ಇತರ ಕಸಬು ಮಾಡುತ್ತಾ ಇದ್ದ ವರೆಲ್ಲರೂ ಅವರ ಕಸಬಿನಲ್ಲಿ ಜೀವನವಾಗದೇ ವ್ಯವಸಾಯಕ್ಕೆ ಬಿದ್ದಿರುತ್ತಾರೆ. ಇಂಥಾ ವರಿಗೆಲ್ಲ ವ್ಯವಸಾಯದ ಮರ್ಮತಿಳಿಯಪಡಿಸದಿದ್ದರೆ ದೇಶಕ್ಕೆ ಪ್ರಯೋಜನ ಉಂಟಾಗ ಲಾರದು. ಮತ್ತು ಅನೂಚಾನವಾಗಿ ಮಾಡಿಕೊಂಡು ಬಂದ ಕಸಬನ್ನ ಬಿಟ್ಟು ಕಾರ ಣಾಂತರದಿಂದ ವ್ಯವಸಾಯವೃತ್ತಿಯನ್ನ ಅವಲಂಬಿಸಿದವರಿಗೆ ವ್ಯವಸಾಯದ ಕಸಬು ಚೆನ್ನಾಗಿ ಕಲಿಸಿದ ಹೊರ್ತು ಅವರಿಗೆ ಕ್ಷೇಮಉಂಟಾಗಲಾರದು.

ಈ ಭರತಖಂಡದಲ್ಲಿ ಕಸಬಿನಮೇಲೆಯೇ ಜಾತಿಯನ್ನ ಏರ್ಪಾಡುಮಾಡಲ್ಪಟ್ಟಿ ತೆಂದು ಹೇಳಬಹುದು. ಒಂದೊಂದು ಕಸಬಿನವರು ಒಂದೊಂದು ಜಾತಿಯವರಾಗಿದ್ದರು. ವ್ಯವಸಾಯಮಾಡತಕ್ಕ ಜಾತಿಯವರು ಮುಖ್ಯನಾಗಿ ಒಕ್ಕಲಿಗರು ರಡ್ಡಿಜಾತಿಯವರಾ ಗಿದ್ದರು. ವ್ಯವಸಾಯದ ಕಸಬಿನಲ್ಲಿ ಸಹ ಬೇರೆಬೇರೆ ತರಹ ವ್ಯವಸಾಯವನ್ನ ಮಾಡ ತಕ್ಕವರು ಬೇರೆಬೇರೆ ಪಂಗಡದವರಾಗಿದ್ದರು. ತಿನ್ನತಕ್ಕ ಧಾನ್ಯಗಳನ್ನ ಬೆಳೆಯುವದು ಒಂದುಪಂಗಡ, ಕೈತೋಟಾವಾಡುವವರೂ ತರಕಾರಿ ಸೊಪ್ಪಿನತೋಟಾವಾಡುವವ ರು ತೆಂಗು ಬಾಳಿ ಅಡಿಕೆ ತೋಟಗಳನ್ನ ಮಾಡತಕ್ಕವರ ಪಂಗಡ ಸಹ ಬೇರೆಬೇರೆಯೂ ಗಿತ್ತು. ಒಂದು ಪಂಗಡ ಮಾಡುತ್ತಾ ಇದ್ದ ಕಸಬು ಮತ್ತೊಂದು ಪಂಗಡದವರಿಗೆ ಬರುತ್ತಾ ಇರಲಿಲ್ಲ. ಒಂದೊಂದು ಪಂಗಡದ ಕಸಬನ್ನ ಒಂದೊಂದು ಕೋವಿನವರು ಮಾಡುತ್ತಾ ಇದ್ದಕಾರಣ ಆ ಕಸಬಿನ ಮರ್ಮ ಅವರಿಗೆ ಚೆನ್ನಾಗಿ ತಿಳಿದು ಅದರಲ್ಲಿ ಹೇರಳವಾಗಿ ಬೆಳೆಮಾಡುತ್ತಾ ಇದ್ದರು. ಇದಕ್ಕೆ ಬೆಂಗಳೂರಲ್ಲಿ " ತಿಗಳರು "

(2) ಹರಿಶ್ಚಂದ್ರನಿಗೆ ಅಗ್ನಿಬಾಧೆಯು ಪರಿಹಾರವಾದದ್ದು ಹ್ಯಾಗೆ ?

(3) ಚಂಡಾಲದಾಸನಾದಮೇಲೆ ಹರಿಶ್ಚಂದ್ರನಿಗೆ ಬಂದ ಹೆಸರೇನು ?

III ದಿಗಂಬರ, ಜಿತೇಂದ್ರಿಯ, ವೈಧವ್ಯ, ದಕ್ಷಿಣಾವರ್ತ, ಈ ಪದಗಳ ನಿಷ್ಕೃಷ್ಟಾರ್ಥವೇನು ?

IV ಹರಿಶ್ಚಂದ್ರೋಪಾಖ್ಯಾನವನ್ನು ಓದುವದರಿಂದ ತಿಳಿಯುವ ಸಾಮಾನ್ಯ ನೀತಿ ಏನು ?

2ನೇ ಭಾಗ—ವ್ಯಾಕರಣ.

I (I) ಕನ್ನಡದಲ್ಲಿ ಷಕಾರ ವಿಸರ್ಗಗಳಿರುವವೆಂಬುದನ್ನು ಉದಾಹರಣೆಯ ಮೂಲಕ ಸ್ಥಿರಪಡಿಸಿ.

(2) ಜಿಹ್ವಾಮೂಲಿಯೋಪದಧ್ಮಾನೀಯ್ಯಗಳು ಹುಟ್ಟುವ ಸ್ಥಾನಗಳಾವವು ?

(3) ಅವ್ಯಯದಲ್ಲಿರುವ ಭೇದಗಳೆಷ್ಟು ? ಅವ್ಯಯಶಬ್ದಾರ್ಥವೇನು ?

II (I) ಸಂಧಿಕಾರ್ಯಗಳಂದರೇನು ? ಇವುಗಳಾವುವು ?

(2) ಪದಾಂತಸಂಧಿಯು ವಿಕಲ್ಪವೆಂಬುದನ್ನು ಉದಾಹರಣೆಯುಮೂಲಕ ತೋರಿಸಿ.

(3) ಬಿವ್ಬಲ, ಪೆಡೆವಣಿ, ಇವುಗಳನ್ನು ಬಿಡಿಸಿ ಸಂಧಿಸೂತ್ರಗಳನ್ನು ಬರೆಯಿರಿ.

III (I) ಕಿರಿದು, ಶಿಶು, ಗಿಡ, ಇವುಗಳಿಗೆ ತೃತೀಯೈಕವಚನದಲ್ಲಿ ಆಗುವ ರೂಪಗಳನ್ನು ಅನುಶಾಸನಗಳೊಡನೆ ವಿವರಿಸಿ.

(2) ಮರ+ಇಗೆ. ಕೆಳಗು+ಅಲ್ಲಿ. ಇವುಗಳು ಯಾವ ರೂಪವನ್ನು ಹೊಂದುವವು?

IV (I) ಧಾತುಗಳಿಗೆ ಆಖ್ಯಾತಪ್ರತ್ಯಯಗಳಲ್ಲದೆ ಬೇರೆ ಇನ್ನಾವ ಪ್ರತ್ಯಯಗಳನ್ನು ಸೇರಿಸಬಹುದು ಉದಾಹರಿಸಿ.

(2) ಮಿದಿ, ಮೂಗು, ನೋ, ನೊಣಿ, ಒಕ್ಕು, ಈ ಧಾತುಗಳರ್ಥವೇನು ?

(3) 'ಏಳು' ಎಂಬ ಧಾತುವಿಗೆ ಪ್ರೇರಕಾರ್ಥದಲ್ಲಿ ವಿಧಿರೂಪದ ಮಧ್ಯಮಪುರುಷೈಕವಚನ, 'ಬರು' ಧಾತುವಿನ ನಿಷೇಧರೂಪದ ಉತ್ತಮಪುರುಷ ಬಹುವಚನಗಳನ್ನು ತೋರಿಸಿ.

(4) ಒಕ್ಕು, ಮೆರೆ, ನಗು, ಇವುಗಳ ಭಾವನಾಮಗಳು ಹ್ಯಾಗೆ ?

3ನೇ ಭಾಗ—ವಾಕ್ಯರಚನೆ.

I (I) ಮಾರ್ಗ (ರಸ್ತೆ), (2) ನದಿ (ಹೊಳೆ) ಇವೆರಡರಲ್ಲಿ ಯಾವದಾದರೂ

ಚನೆ, ಶೌರ್ಯವಾರಿನಿಧಿ, ಮಿಥಿಲೇಂದ್ರನಂದಿನೀ, ಪನ್ನಗಭೂಷಣ.

(3) ಈ ಪದಗಳ ಅರ್ಥವನ್ನು ಬರೆಯಿರಿ :—

ಬಗರಗೆ, ನಿರ್ಜರಂ. ನೇಸರ್, ಎಗ್ಗಂ, ಕಿತ್ತಡಿ, ಗಾಂಪಂ. ಬಯ್ತು, ಪುರುಳಂ, ಹಾಲಾಹಲಂ, ರುಜೆ, ಉದ್ವಿಗ್ನ, ಭುಗ್ನ.

III (I) ನೀತಿಮಂಜರಿಯಲ್ಲಿ ಮರವನ್ನೂ ಕಾಗೆಯನ್ನೂ ಕವಿಯು ಏತಕ್ಕೆ ಹೋಲಿಸಿದ್ದಾನೆ? ಮತ್ತು ದುಷ್ಟರಿಗೆ ಉಪಕಾರ ಮಾಡುವುದು ಅಪಾಯಕರವು; ವಿದ್ವಾಂಸನು ಅರಸನಿಗಿಂತಲೂ ಹೆಚ್ಚು ಎಂಬ ವಿಷಯಗಳಿಗೆ ಏನು ದೃಷ್ಟಾಂತವನ್ನು ಹೇಳಿದ್ದಾನೆ?

(2) ಈ ದೃಷ್ಟಾಂತಗಳಿಂದ ಏನು ತಿಳಿಯಬೇಕು?

ಚಂದ್ರನು ಕುಂದಿದರೂ ಬೆಳಕನ್ನು ಕೊಡುವನು. ಶ್ರೀಗಂಧದ ಚಕ್ಕೆಯನ್ನು ಎಷ್ಟು ತೆಗೆದರೂ ಅದರ ಪರಿಮಳ ಕಡಮೆಯಾಗುವದಿಲ್ಲ.

(3) ಪಾತಿವ್ರತ್ಯಂ, ವಿನಯಂ, ಇವು ಯಾರಿಗೆ ಭೂಷಣ?

IV (I) ಜನಕರಾಯನ ಬಳಿಯಲ್ಲಿದ್ದ ಶೈವ ಚಾಪದ ವಿಷಯವಾದ ಪೂರ್ವ ಕಥಾ ಏನು?

(2) ಈ ವಾಕ್ಯಗಳನ್ನು ಯಾರು ಯಾರಿಗೆ ಯಾವ ಸಂದರ್ಭದಲ್ಲಿ ಹೇಳಿದರು?

1 ಕೋಪದಹಾದಿಯತುಳಿಯದೆಲಾಲಿಸುಗೆ. 2 ಮಿಕ್ಕನಿರ್ಜರರಕ್ಕೆಮೆಗೊದಗದು.

(3) ಈ ಸಮಾಸಪದಗಳ ವಿಗ್ರಹವಾಕ್ಯವನ್ನು ಬರೆದು ಸಮಾಸಗಳ ಹೆಸರನ್ನು ಬರೆಯಿರಿ :—

ಕರಿಗೊರಲಂ, ಜನಕಭೂಪತಿ. ಕರವಿಡಿದು, ಭೂಮಿಶೈಲಗಳು, ಪರಮಧಾರ್ಮಿಕನು, ಭೂವಧೂವರನು.

Iನೇ ಭಾಗ—ಗದ್ಯ.

I (I) ಹರಿಶ್ಚಂದ್ರನು ಯಾವ ರಾಜವಂಶಕ್ಕೆ ಸೇರಿದವನು?

(2) ಸತ್ಯಕೀರ್ತಿ, ಸಹಜನ್ಯೆ, ಮಾತಲಿ, ತ್ರಿಶಂಕು, ಇವರು ಯಾರು?

(3) ಪಂಚಪ್ರಾಣಗಳನ್ನೂ ನಾಲ್ಕು ಪುರುಷಾರ್ಥಗಳನ್ನೂ ವಿವರಿಸಿ.

II (I) ಚಂದ್ರಮತಿಯು ಅಗ್ನಿಪ್ರವೇಶಮಾಡುವಕಾಲದಲ್ಲಿ ವಿಶ್ವೇಶ್ವರನನ್ನು ಪಾರ್ಥಿಸಿ ಕೇಳಿಕೊಂಡ ಇಷ್ಟಾರ್ಥಗಳಾವುವು?

ಕೆಲವು ಪರಸ್ಪರ ವಿರೋಧವಾಗಿಯೂ ಇರುವದು. ಗ್ರಂಥಕರ್ತರು ಕೆಲವೆಡೆಗಳಲ್ಲಿ ಈಗಿರುವುದನ್ನು ವ್ಯತ್ಯಾಸ ಮಾಡಿ ಇನ್ನೂ ಸಾಲದ ಕೆಲವು ಅಂಶಗಳನ್ನೂ ಸೇರಿಸಿ ಅಚ್ಚು ಮಾಡಿಸಿದರೆ ವಿದ್ಯಾರ್ಥಿಗಳಿಗೆ ತಕ್ಕಮಟ್ಟಿಗೆ ಈ ಗ್ರಂಥವು ಉಪಯೋಗಕ್ಕೆ ಬರುವುದೆಂದು ದೃಢವಾಗಿ ನಂಬುತ್ತೇವೆ.

ಈ ಪುಸ್ತಕಗಳು ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ದೊರೆಯುವುವು.

ಸೂಚನೆಗಳು ಮತ್ತು ಸಮಾಚಾರಗಳು

ವಿದ್ಯಾಭ್ಯಾಸದ ಇಲಾಖೆಯಲ್ಲಿ ಬಹಳಕಾಲ ಡೆಪ್ಯುಟಿ ಇನ್‌ಸ್ಪೆಕ್ಟರ್ ಆಗಿದ್ದು ಮೈಸೂರು ಯುವರಾಜರಿಗೂ ರಾಜಪುತ್ರಿಯರಿಗೂ ಬೋಧಕರಾಗಿದ್ದ ಮಾ|| ಶ್ರೀ|| ಡಿ. ಸುಬ್ಬಿಲಯ್ಯನವರು ಕಳೆದ ಮೇ ತಿಂಗಳು ೩೧ನೇ ತಾರೀಖಿನ ದಿವಸ ಮೈಸೂರಲ್ಲಿ ಜ್ವರದಿಂದ ಗತಿಸಿದರೆಂದು ತಿಳಿಸಲು ಬಹಳವಾಗಿ ವಿಷಾದಿಸುತ್ತೇವೆ. ಇವರು ೧೮೬೩ರಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದರು. ಸ್ವಲ್ಪಕಾಲ ಚಿಕ್ಕಪುಗಳೂರು ಹೈ ಸ್ಕೂಲು ಹೆಡ್‌ಮಾಸ್ಟರಾಗಿದ್ದು ನಂತರ ಶಿವಮೊಗ್ಗಾ ಕಾಲೀಜ್ ಅಸಿ|| ಮಾಸ್ಟರಾಗಿ, ತರುವಾಯ ಡೆಪ್ಯುಟಿ ಇನ್‌ಸ್ಪೆಕ್ಟರಾದರು. ಈ ಕೆಲಸವನ್ನು ಬಹಳ ಚೆನ್ನಾಗಿ ನಿರ್ವಹಿಸುತಿದ್ದುದರಿಂದ ಶ್ರೀಮನ್ಮಹಾರಾಣಿಯವರ ಬಾಲಿಕಾಪಾಠಶಾಲೆಯ ಸೂಪರಿಂಟೆಂಡೆಂಟ್ ರನ್ನಾಗಿ ಮಾಡಿದರು. ಇವರ ಕಾಲದಲ್ಲಿ ಸ್ಕೂಲು ಅಭಿವೃದ್ಧಿಗೆ ಬಂತು. ಮೈಸೂರಿನಲ್ಲಿ ಇವರು ಪ್ರಸಿದ್ಧರಾದ ವಿದ್ಯಾವಂತರಲ್ಲಿ ಒಬ್ಬರಾಗಿದ್ದರು. ವಿದ್ಯಾಭಿವೃದ್ಧಿಗಳೆಲ್ಲರೂ ಇವರ ಮರಣಕ್ಕಾಗಿ ಬಹಳ ಚಿಂತಿಸುವರು.

***

ಶ್ರೀಮನ್ಮಹಾರಾಣಿಯವರ ಬಾಲಿಕಾಪಾಠಶಾಲೆಯನ್ನು ಉತ್ತಮಸ್ಥಿತಿಗೂ ಉನ್ನತಸ್ಥಿತಿಗೂ ಬಹು ಸಾಹಸದಿಂದಲೂ, ಜಾಗರೂಕತೆಯಿಂದಲೂ ತಂದ ಲೇಡಿ ಸೂಪರಿಂಟೆಂಡೆಂಟ್ ಮಿಸ್ ಓಕಿನ್ಸ್‌ರವರು ಲಂಡನ್‌ಗೆ ಹೋಗಿದ್ದು ಹಿಂದಿರುಗಿ ತಮ್ಮ ಕೆಲಸದಮೇಲೆ ಬರುತಿರುವಾಗ ಜಹಜಿನಲ್ಲಿ ಮುಂಬೈ ಬಳಿ ದೈವಾಧೀನರಾದರೆಂದು ತಿಳಿಸಲು ಬಹಳವಾಗಿ ವಿಷಾದಿಸುತ್ತೇವೆ. ಇವರಂತವರು ಬಾಲಿಕಾಪಾಠಶಾಲೆಗೆ ಸಿಕ್ಕುವುದು ಬಹು ದುರ್ಲಭ.

ಒಂದರ ವಿಷಯವಾಗಿ ಮೂರು ಪುಟಗಳಿಗೆ ವಿಾರದೆ ಒಂದು ಉಪನ್ಯಾಸ ಬರೆಯಿರಿ.

II ಒಬ್ಬ ತಂದೆಯು ದುಂದುಗಾರನಾದ ತನ್ನ ಮಗನಿಗೆ ವಿತವ್ಯಯನಾಗಿರಹೇಳಿ ಬುದ್ಧಿವಾದಗಳೊಡನೆ ಒಂದು ಪತ್ರ ಬರೆಯುತ್ತಾನೆ. ಇದರ ಕ್ರಮವನ್ನು ವಿವರಿಸಿ.

ಗ್ರಂಥವಿಮರ್ಶೆ.

ಕರ್ಣಾಟಕ ವ್ಯಾಕರಣ.

ಚಿಕ್ಕಮಗಳೂರು ಇಂಗ್ಲೀಷ್ ಹೈಸ್ಕೂಲ್ ಕನ್ನಡಪಂಡಿತರಾದ ಮು॥ ರಾ॥ ವೈ॥ ಕೃಷ್ಣಾಚಾರ್ಯರೆಂಬುವರು ತಾವು ರಚಿಸಿದ ಕರ್ಣಾಟಕ ವ್ಯಾಕರಣವೆಂಬ ಪುಸ್ತಕವನ್ನು ವಿಶ್ವಾಸಪೂರ್ವಕವಾಗಿ ನಮ್ಮಲ್ಲಿಗೆ ಕಳುಹಿಸಿಕೊಟ್ಟದ್ದನ್ನು ಆದರದಿಂದ ಅಮೂಲಾಗ್ರವಾಗಿ ಓದಿ ನೋಡಿದೆವು. ಈ ಪುಸ್ತಕವನ್ನು ಇವರು ಬಹು ಶ್ರಮಪಟ್ಟು ಬರೆದು ಚೆನ್ನಾಗಿ ಅಚ್ಚುಮಾಡಿಸಿರುತ್ತಾರೆ. ಇದು ಕನ್ನಡಭಾಷಾಭ್ಯಾಸಿಗಳಿಗೆ ಕನ್ನಡ ಕಾವ್ಯ ಮುಂತಾದ ಗ್ರಂಥಗಳಲ್ಲಿ ಪ್ರಯೋಗಿಸಿರುವ ಎಲ್ಲಾ ಶಬ್ದಗಳ ಜ್ಞಾನಕ್ಕೆ ಸಹಾಯಕಾರಿಯಲ್ಲದಿದ್ದರೂ ಮಟ್ಟಿದಿವೊದಲಾದ ಕೆಲವು ಗ್ರಂಥದಲ್ಲಿರುವ ಕೆಲವು ಶಬ್ದಗಳಿಗೆ ಸಾಧುತ್ವವನ್ನು ಹೇಳುವುದಕ್ಕೆ ಸಾಧಕವಾಗಿರುವುದು. ಆದರೆ ಪಾಣ್ಯಶಕಿ, ಶಬ್ದಮಣಿದರ್ಪಣ, ಶಬ್ದಾನುಶಾಸನಗಳಿಂದಲೇ ಮಂಜರೀ ಮಕರಂದದಲ್ಲೂ, ಸಂಸ್ಕೃತ, ಪ್ರಾಕೃತ ವ್ಯಾಕರಣಗಳಲ್ಲೂ ಹೇಳಿರುವ ಕೆಲವು ನ್ಯಾಯಗಳನ್ನು ಅಂಗೀಕರಿಸಿ ಸಾಧುತ್ವವನ್ನು ಹೇಳಿ, ಸರ್ವಥಾ ಅವುಗಳಿಂದ ಆಗದ ಶಬ್ದಗಳಿಗೆವಾತ್ರ ಲಕ್ಷಣವನ್ನು ಕಲ್ಪಿಸಿದರೆ ಸಾಕಾಗಿತ್ತು. ಆ ಗ್ರಂಥಗಳು ಬಹಳ ದೊಡ್ಡದಾಗಿರುವುದರಿಂದ ವಾಚಕರ ಅನುಕೂಲಕ್ಕಾಗಿ ಇವರು ಈ ಪುಸ್ತಕವನ್ನು ಬರೆದಿರುವಂತೆ ತೋರುವುದು. ಇದರಲ್ಲಿ ಕೆಲವು ನ್ಯೂನಾಧಿಕಭಾವಗಳಿದ್ದರೂ ಇದನ್ನು ಓದುವವರಿಗೆ ಸ್ವಲ್ಪಮಟ್ಟಿಗೆ ವ್ಯಾಕರಣಜ್ಞಾನವು ಉಂಟಾಗುವುದರಲ್ಲಿ ಸಂಶಯವಿಲ್ಲ. ಆದರೆ ಪ್ರಾಚೀನರು ಲಕ್ಷಣಗಳನ್ನು ಕಲ್ಪಿಸಬೇಕಾದರೆ ದೋಷತ್ರಯಗಳಿಂದ ಬಿಡಿಸಿ ಅನೇಕ ಲಕ್ಷ್ಯಗಳು ಸಂಗ್ರಹಿಸುವಂತೆ ಲಕ್ಷಣವನ್ನು ಮಾಡಿರುವರು. ಇವರು ಬರೆದಿರುವ ಕೆಲವು ಲಕ್ಷಣಗಳು ಹಾಗಿಲ್ಲದಿದ್ದರೂ ಮಟ್ಟಿದಿಗಳಲ್ಲಿ ಪ್ರಯೋಗಿಸಿರುವ ಇನ್ನೂ ಕೆಲವು ಶಬ್ದಗಳು ಇದರಿಂದಲೂ ಸಾಧಿಸುವುದಕ್ಕೆ ಆಗದೆ ನಿಂತುಹೋಗುವುದು. ಮತ್ತು ಸ್ವೋಕ್ತಿಯಲ್ಲೇ

ಸ್ಕೂಲ್, ಹೆಡ್‌ಮ್ಯಾಸ್ಟರ್ ಮು॥ರಾ॥ ಕೆ. ವೆಂಕಟಶಾಮಯ್ಯ ಬಿ. ಎ. ಯವರನ್ನು ಕಳುಹಿಸಿರುವರು.

***

ವಿದ್ಯಾರ್ಥಿಗಳು ಪಾಠಶಾಲೆಯನ್ನು ಬಿಡುವಾಗ ಕೊಡುವ 'ಲೀವಿಂಗ್‌ಸರ್ ಟಿಫಿಕಿಟ್' ಗಳ ಕಾಪಿಯನ್ನು ಎಲ್ಲಾ ಸ್ಕೂಲ್ ಹೆಡ್‌ಮ್ಯಾಸ್ಟರ್‌ಗಳೂ, ಕಾಲೀಜ್ ಗಳ ಪ್ರಿನ್ಸಿಪಾಲ್‌ಗಳೂ, ಗೌರ್ನಮೆಂಟಿನಿಂದ ಕಳುಹಿಸಿಕೊಡುವ ಫೈಲ್‌ಬುಕ್ಕಿನಲ್ಲಿ ಅವಶ್ಯಇಡತಕ್ಕದ್ದು. ಸರ್ಕಾರಿಸ್ಕೂಲ್ ಅಲ್ಲದ ಇತರ ಸ್ಕೂಲ್‌ಗಳು ಆ ಫೈಲ್‌ಬುಕ್ಕನ್ನು ಡಿಪೋಇಂದ ಖರೀದಿಗೆ ತರಿಸಿಕೊಂಡು ಇಡತಕ್ಕದ್ದೆಂದು ಹೊಸದಾಗಿ ಹುಕ್ಕುಂ ಹುಟ್ಟಿರುತ್ತೆ.

***

ಶಿವಮೊಗ್ಗಾ ಗೌರ್ನಮೆಂಟ್ ಗರ್ಲ್ಸ್‌ಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದ ಮು॥ಶ್ರೀ॥ ಬಾಳಾಜಿರಾಯರನ್ನು ಚಿಕ್ಕಮಗಳೂರು ಗರ್ಲ್ಸ್‌ಸ್ಕೂಲ್ ಹೆಡ್‌ಮೊಸ್ಟರಾಗಿ ೧೫ ರೂ॥ ತಲಬಿನಿಂದ ವರ್ಗಾಯಿಸಿರುತ್ತೆ.

ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್‌ಜನರಲ್ ಹ॥ಹೆಚ್. ಜಿ. ಭಾಭಾ ಸಾಹೇಬರವರು ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಸ್ಕೂಲ್ ಇನ್‌ಸ್ಪೆಕ್ಷನ್‌ಗಾಗಿ ದಯಮಾಡಿಸಿರುವರು.

***

ಮೈಸೂರು ನಾರ್ಮಲ್‌ಸ್ಕೂಲಿನಲ್ಲಿ ಅ॥ ವ್ಯಾಸ್ಟರಾಗಿದ್ದ ಹ॥ ಗೌಸ್‌ಪೀರ್ ರವರಿಗ ೩೫ ರೂ॥ ತಲಬಿನಮೇಲೆ ಆಂಗ್ಲೋವರ್ನಾಕ್ಯುಲರ್ ಹಿಂದುಸ್ಥಾನಿಸ್ಕೂಲ್ ಹೆಡ್‌ವ್ಯಾಸ್ಟರಿಗಾಗಿ ವರ್ಗಾಯಿಸಿರುತ್ತಾರೆ.

***

ಮಹಾರಾಜರ ಕಾಲೇಜ್ ಸೀನಿಯರ್ ಎಫ್. ಎ. ಯಲ್ಲಿ ಓದುತಿದ್ದ ಹ॥ಮಹಮ್ಮದ್ ದಸ್ತಗಿರ್‌ಯವರಿಗೆ ನಾರ್ಮಲ್‌ಸ್ಕೂಲಿನಲ್ಲಿ ೨೫ ರೂ॥ ತಲಬಿನಮೇಲೆ ಅ॥ ವ್ಯಾಸ್ಟರಾಗಿ ನಿಯಮಿಸಿರುತ್ತಾರೆ.

***

ಬೌರಿಂಗ್ [illegible] ಅ॥ವ॥ ಸ್ಕೂಲ್ ಅಸಿಸ್ಟೆಂಟ್‌ವ್ಯಾಸ್ಟರ್ ಹ॥ಬಹುದೀನ್ ಸಾ॥ ರವರಿಗ ವಾಹೆಯಾನಾ ಮೂರು ರೂ॥ ಲೋಕಲ್ ಅಲೋವೆನ್ಸ್ ಸ್ಯಾಂಕ್ಷನ್ ಆಗಿರುತ್ತೆ.

***

ಮೈಸೂರು ನಾರ್ಮಲ್‌ಸ್ಕೂಲ್‌ನಲ್ಲಿ ಆರೋಗ್ಯ ವ್ಯವಸಾಯಶಾಸ್ತ್ರಗಳನ್ನು ಹಿಂದೂಸ್ಥಾನಿಯಲ್ಲಿ ಪಾಠಹೇಳಲು ೨೫ ರೂ॥ ತಲಬುನಿಶಿ ಅ॥ ವ್ಯಾಸ್ಟರಾಗಿ ಹ॥ ಷೇಕ್‌ಮಸ್ತಾರ್‌ರವರನ್ನು ಗೊತ್ತುಮಾಡಿರುತ್ತಾರೆ.

***

ಉಪಾಧ್ಯಾಯಪರಿಕ್ಷೆಗಳಲ್ಲೆಲ್ಲಾ ತೇರ್ಗಡೆಯಾಗಿರುವ ಜಾನಕಮ್ಮನವರನ್ನು ೪೦ ರೂ। ತಲಬಿನಿಂದ ಬೆಂಗಳೂರು ಆರ್ಯಬಾಲಿಕಾಪಾಠಶಾಲೆಗೂ, ಇವರಬದಲಿ ನರಸಮ್ಮನವರನ್ನು ೩೦ ರೂ। ತಲಬಿನಿಂದ ಮೈಸೂರು ಮಹಾರಾಣಿಗರ್ಲ್ಸ್‌ಸ್ಕೂಲಿಗೂ, ಬೆಂಗಳೂರು ಗೌರ್ನಮೆಂಟ್ ಗರ್ಲ್ಸ್‌ಸ್ಕೂಲಿಗೆ ೪೦ರೂ। ತಲಬಿನಮೇಲೆ ಮಂಚಮ್ಮನವರನ್ನೂ, ಇದೇಸ್ಕೂಲಿನಲ್ಲಿ ಸಹಾಯೋಪಾಧ್ಯಾಯನಿಯಾಗಿ ೨೦ರೂ। ತಲಬಿನಿಂದ ಡಿ. ಸೀತಮ್ಮನವರನ್ನೂ, ಆರ್ಯಬಾಲಿಕಾಪಾಠಶಾಲೆಗೆ ೩೦ರೂ। ತಲಬುನಿಶಿ ಯಗ್ಗಮ್ಮನವರನ್ನು ಸಹಾಯೋಪಾಧ್ಯಾಯನಿಯರಾಗಿರುವಂತೆ ನಿಯಮಿಸಿರುತ್ತಾರೆ.

***

ಗತಿಸಿದ ಮ॥ರಾ॥ಶ್ರೀ॥ ಡಿ. ಸುಬ್ಬಯ್ಯನವರ ಕೆಲಸಕ್ಕೆ ಚಿಕ್ಕಮಗಳೂರು

ವಿದ್ಯಾದಾಯಿನಿ.

ಭಾಗ ೬.] ಆಗಸ್ಟ್ ೧೯೨೧ [ಸಂಚಿಕೆ ೪

ಎಡಿಟರವರ ನೋಟ್ಸ್.

ಶ್ರೀಮನ್ಮಹಾರಾಣಿ ರೀಜಂಟರವರ ಆಳಿಯಂದಿರು ಮಾ॥ ರಾ॥ ಕಾಂತರಾಜೇ ಅರಸಿನವರು, ಮಹಾರಾಜಾ ಕಾಲೀಜ್ ಹಿಸ್ಟಾರಿಕಲ್ ಸೊಸೈಟಿ (ಚರಿತ್ರೆಯನ್ನು ಬೆದತಕ್ಕವರಸಂಘ) ಯಲ್ಲಿ 'ವಿಜಯನಗರದ ಪೂರ್ವಸ್ಥಿತಿ ಮತ್ತು ಈಗಿನಸ್ಥಿತಿ,' ಯ ವಿಷಯವಾಗಿ ಶ್ಲಾಘ್ಯವಾದ ಒಂದು ಉಪನ್ಯಾಸವನ್ನು ಓದಿದರಲ್ಲದೆ ಅಲ್ಲಿಶಿಥಿಲವಾಗಿರುವ ಕೋಟೆ, ಕೊತ್ತಲ, ದೇವಾಲಯ, ಅರಮನೆಯಭಾವ ಚಿತ್ರಗಳನ್ನು ಮ್ಯಾಜಿಕ್ ಲ್ಯಾಂಟರನ್ ಸಹಾಯದಿಂವ ವ್ಯಕ್ತಗೊಳಿಸಿದರು. ದೊಡ್ಡ ಪದವಿಯಲ್ಲಿದ್ದಾಗ್ಗೂ ದೇಶದ ಚರಿತ್ರೆಯನ್ನು ಶೋಧಿಸುವುದರಲ್ಲಿ ಆಸಕ್ತಿಯನ್ನು ಇಟ್ಟು, ಸಾಧ್ಯವಾದಮಟ್ಟಿಗೆ ವಿರಾಮವನ್ನುಪಡೆದು, ಇವರು ವಿಜಯನಗರದ ಸಂಸ್ಥಾನದ ಸ್ಥಿತಿಯನ್ನುಕುರಿತು ಉಪನ್ಯಾಸ ಮಾಡಿದ್ದಕ್ಕೆ ನಾವು ತುಂಬಾಸಂತೋಷ ಪಡುವೆವು ಇವರು ಹಾಕಿದ ಮೇಲು ಪಜ್ಜೆಯನ್ನು ಹಿಡಿದು ಇತರ ವಿದ್ವಾಂಸರು, ದೇಶದ ಚರಿತ್ರೆಯನ್ನು ಶೋಧಿಸಿ, ಸಂಗ್ರಹಿಸುವ ಕಾರ್ಯದಲ್ಲಿ ಉದ್ಯುಕ್ತರಾದಲ್ಲಿ ದೇಶಕ್ಕೆ ಮೇಲಾಗುವದರಲ್ಲಿ ಸಂದೇಹವಿಲ್ಲವು.

* * * * * *

ಬರ್ಮಾದೇಶದಲ್ಲಿ ಒಂದು ಉಪಾಧ್ಯಾಯ ಸಂಘವನ್ನು ಏರ್ಪಡಿಸಿರುವರು. ಆ ಸಂಘದಲ್ಲಿ ದೇಶಭಾಷೆಯಲ್ಲಿಯೂ, ಇಂಗ್ಲಿಷ್ ಭಾಷೆಯಲ್ಲಿಯೂ, ಅವಶ್ಯಕವಾದ ಪ್ರಸಂಗ ಮಾಡಬೇಕೆಂಬುದು ವಿಶೇಷ ವಿಷಯವು. ಈ ವರುಷ ನಡೆದ ಸಭೆಯಲ್ಲಿ ಬರ್ಮಾದೇಶ ಭಾಷೆಯಲ್ಲಿ ನಡೆಸಿದ ಉಪನ್ಯಾಸಗಳು ಬಹಳಸಮರ್ಪಕವಾಗಿದ್ದವೆಂದು ತಿಳಿದುಬರುವುದು. ಈ ವಿಷಯವನ್ನು ನಮ್ಮದೇಶದ ಉಪಾಧ್ಯಾಯರುಗಳು ಮನಸ್ಸಿಗೆ ತಂದು

ಬಾಲಕರಿಗೆ ಹೇಳುವ ಕಥೆ.

ತೋಳವು ಮತ್ತು ಕೊಕ್ಕರೆಯು.









ಒಂದು ತೋಳದ ಗಂಟಲಲ್ಲಿ ಒಂದು ಮೂಳೆಯು ಸಿಕ್ಕಿಕೊಂಡದ್ದರಿಂದ, ತೋಳಕ್ಕೆ ಬಹಳ ಹಿಂಸೆಯುಂಟಾಗಿ, ಮೇಲಕ್ಕೂ ಕೆಳಕ್ಕೂ ಹಾರಾಡುತಾ, ನಿಂತಲ್ಲಿ ನಿಲ್ಲದೆ ಬಹು ಸಂಕಟದಿಂದ ಹಾದೀಲಿಬೀದೀಲಿ ತಿರಗಾಡುವವರನ್ನೆಲ್ಲಾ ದಮ್ಮಯ್ಯ ಗುಡ್ಡೆಯಿಟ್ಟು, ಬಾಯಿಬಾಯಿಬಿಟ್ಟು ನನ್ನಕಷ್ಟವನ್ನು ಬಿಡಿಸಿ, ಎಂದು ಮೊರೆ ಇಡುತಾ, ನನಗೆ ಹಿತವನ್ನುಂಟು ಮಾಡಿದವರಿಗೆ ಬೇಕಾದಷ್ಟು ಕೊಟ್ಟು ಸಂತೋಷಗೊಳಿಸುವೆನೆಂದು ಹೋ ಎಂದು ಅರಿಚಿಕೊಳ್ಳುತಿತ್ತು. ಅಲ್ಲಿಯೆ ಹೋಗುತಿದ್ದ ಒಂದು ಕೊಕ್ಕರೆಯು ಇದರ ರೋದನೆಯನ್ನು ಕೇಳಿ ಹತ್ತಿರ ಬಂದು, ಇದರ ಸಂಕಟಕ್ಕೆ ಕನಿಕರಪಟ್ಟು, ಇದು ಕೊಡುವ ಬಹುಮಾನಕ್ಕೆ ಆಶೆಬಿದ್ದು, ಇದರ ಮಾತಿಗೆ ಮರುಳಾಗಿ ತನ್ನ ಉದ್ದವಾದ ಕುತ್ತಿಗೆಯನ್ನು ಆ ತೋಳನ ಬಾಯಿಯೊಳಗೆ ಹಾಕಿ, ಆ ಮೂಳೆಯನ್ನು ಬಹಳ ಉಪಾಯದಿಂದ ಈಚೆಗೆ ತೆಗೆದುಹಾಕಿತು. ತೋಳವು ತಲೆಯನ್ನು ಒದರಿಕೊಂಡು ಹೋಗುತಿರಲು, ಕೊಕ್ಕರೆಯು ಸ್ವಲ್ಪ ಭಯಭಕ್ತಿಯಿಂದ ನೀನು ಮಾತುಕೊಟ್ಟವೇರೆ ನನಗೆ ಮರ್ಯಾದೆ ಮಾಡಬೇಕೆಂದು ಕೇಳಲು ತೋಳನು ಹಿಂದಿರುಗಿ ಹಲ್ಲನ್ನು ಕಿರಿದು ಮುಖವೆನ್ನು ಸಿಡ್ರಿಸಿಕೊಂಡು ಅಸಹ್ಯವನ್ನು ತೋರಿಸುವಂತೆ 'ಕೃತಘ್ನ' ಪಾಪಿ! ನನ್ನ ಬಾಯಿಯಲ್ಲಿ ನಿನ್ನ ತಲೆಯನ್ನು ಇಟ್ಟು ಬದುಕಿಬಂದುದಕೆ ಸಂತೋಷಪಡದೆ ಬಹುಮಾನಬೇರೆ ನಿನಗೆ ಆಗಬೇಕೆ ? ಸಾಕು ! ಸಾಕು !

ವರೆಗೆ ಯಾವಾಗಲೂ ಆಗಿರಲಿಲ್ಲ. ಈ ಪರೀಕ್ಷೆಗ ಬಂದಿದ್ದವರು ಎಂಟು ಒಂಬತ್ತು ವರುಷ ವಯಸ್ಸು ಮೊದಲುಗೊಂಡು ಇಪ್ಪತ್ತೈದು ಇಪ್ಪತೆಂಟು ವರುಷಕ್ಕೆ ಮಿರಿದ ವಯಸುಳ್ಳ ವರಾಗಿದ್ದರು. ಆದರೆ ಕೇವಲ ಬಾಲಕರು ನೌಕರಿಯಲ್ಲಿರತಕ್ಕವರೇ ಬಂದಿದ್ದರು. ಹೆಣ್ಣುಮಕ್ಕಳು ಅನೇಕರು ತೇರ್ಗಡೆಯಾದರು. ಬ್ರಾಹ್ಮಣೇತರರು ಸರಿ ಅರ್ಧಕ್ಕಿಂತಲೂ ಹೆಚ್ಚಾಗಿದ್ದರು.

* * * * * * *

ಪಂಡಿತ ರಮಾಬಾಯಿ ಯವರು

೧ ನೇ ಭಾಗ.

ನಮ್ಮ ಭರತ ಖಂಡದ ಈಗಿನಸ್ಥಿತಿಯಲ್ಲಿ ಪಂಡಿತ ರಮಾಬಾಯಿ ಯವರು ಬಹಳ ವಿದ್ಯಾವತಿಯರು ಇವರು ಸಂಸ್ಕೃತ ಮರಾಟಿ, ಇಂಗ್ಲೀಷು ಭಾಷೆಗಳಲ್ಲಿ ಬಹಳ ದೊಡ್ಡ ಪಾಂಡಿತ್ಯವನ್ನು ಪಡೆದಿರುವದಲ್ಲದೆ ಈಭರತಖಂಡಲ್ಲಿ ಪ್ರಾಯಿಕವಾಗಿ ಎಲ್ಲಾ ಭಾಗಗಳನ್ನು ಯೂರೋಪ್ ಮತ್ತು ಅಮೇರಿಕಾ ಖಂಡಗಳಲ್ಲಿ ಅನೇಕ ದೇಶಗಳನ್ನು ಸಂಚರಿಸಿ ಅನೇಕ ಪಂಡಿತ ಸಂಭಾಷಣೆಗಳನ್ನು ಮಾಡಿದವರಾಗಿರುವರ ಸಾಮಾನ್ಯ ನಾಗಿ ಚನ್ನಾಗಿ ವ್ಯಾಸಂಗ ಮಾಡಲ್ಪಟ್ಟ ವಿದ್ಯೆಯೂ, ದೇಶಾಟನವು ಪಂಡಿತ ಭಾಷಣವು ಅನೇಕ ದುರಭಿಮಾನಗಳಿಗೆ ಮೂಲಕುಠಾರ ಗಳಾಗುತ್ತವೆ. ಇವರಿಗೂ ವಿದ್ವತ್ತು ದೇಶಾಟನ ಪಂಡಿತ ಭಾಷಣೆಗಳು ದುರಭಿಮಾನವನ್ನು ಬಿಡಿಸಿರುವದು. ಇದಕ್ಕಾಗಿ ನಮ್ಮ ಭರತಖಂಡಾಭಿಮಾನಿಗಳಾದ ಸರ್ವರು ಸಂತೋಷಿಸಬೇಕು. ಇವರು ವಿದ್ಯಾಭ್ಯಾಸವು, ದೇಶಾಟನವು, ಪಂಡಿತಭಾಷಣವು ನಮ್ಮ ದೇಶದ ಸ್ತ್ರೀಯರಿಗೆ ಎಷ್ಟು ಪ್ರಯೋಜನ ಕಾರಿಗಳಾಗ ಬಹುದೊ ಅಷ್ಟು ಪ್ರಯೋಜನ ವಾಗುವದಕ್ಕೆ ಪ್ರತಿಬಂಧಕ ವುಂಟಾಗುವಂತೆ ಇವರು ಮಾಡಿಕೊಂಡರು. ಅದಕ್ಕಾಗಿ ನಾವುಗಳೆಲ್ಲರು ವಿಷಾದಿಸ ಬೇಕಾಗಿದೆ. ಪಂಡಿತ ರಮಾಬಾಯಿಯವರು. ಕ್ರೈಸ್ತಮತವನ್ನು ಅವಲಂಬಿಸಿದರು. ಇದರಿಂದ ಇವರು ಕ್ರೈಸ್ತ ಮತಾವ ಲಂಬಿಗಳಾದ ಸ್ತ್ರೀಯರಿಗೆ ಎಷ್ಟು ಉಪಕಾರ ವನ್ನು ಮಾಡಬಹುದೊ ಅಷ್ಟು ಉಪಕಾರವನ್ನು ನಮ್ಮ ಹಿಂದು ಸ್ತ್ರೀಯರಿಗೆ ಮಾಡುವದಕ್ಕಾಗುವದಿಲ್ಲ. ಕ್ರೈಸ್ತ ಮತವು ನಿಕೃಷ್ಟ ವಾದದ್ದೆಂಬದಾಗಿಯು ನಮ್ಮ

ಕೊಳ್ಳುವುದು ಉಪ್ತಯುಕ್ತವು. ನಮ್ಮದೇಶ ಭಾಷೆಗಳಲ್ಲಿ ಪಾಠಕ್ರಮ, ಬೋಧನಾ ಕ್ರಮ, ಮುಂತಾದ ವಿಷಯಗಳನ್ನು ಚೆನ್ನಾಗಿತಿಳಿಯಲು ಉಪಾಧ್ಯಾಯ ಸಂಘವನ್ನು ಏರ್ಪಡಿಸಿ, ವಿದ್ಯಾವಿಷಯಕವಾದ ಸಂಗತಿಗಳನ್ನು ಚರ್ಚಿಸುವುದು ವಿದ್ಯಾಭಿವೃದ್ಧಿಗೆ ವಿಶೇಷ ಸಹಾಯವಾಗುವುದು.

* * * * * *

ವೈದ್ಯ, ವ್ಯವಸಾಯ ಶಾಸ್ತ್ರಗಳನ್ನು ಓದುವ ವಿದ್ಯಾರ್ಥಿಗಳಿಗೆ ಮೈಸೂರು ಸರ್ಕಾರದವರು ವಿದ್ಯಾರ್ಥಿ ವೇತನಗಳನ್ನು ಕೊಟ್ಟು ಪ್ರೋತ್ಸಾಹ ಪಡಿಸುವರೆಂದು ಪ್ರಸಿದ್ಧಿಗೊಂಡಿರುವುದು ಸರಿಯಷ್ಟೆ. ಈ ವರ್ಷವೂ ಕೆಲವುಮಂದಿ ವಿದ್ಯಾರ್ಥಿಗಳಿಗೆ ಯಾವಾಗಿನಂತ ವೇತನಗಳನ್ನು ಕೊಡುವುದಾಗಿ ಒಪ್ಪಿರುವರು. ಇದರಲ್ಲಿ ವ್ಯವಸಾಯ ಶಾಸ್ತ್ರವನ್ನು ಅಭ್ಯಾಸಿಸಿ, ಇತರ ಜೀವನೋಪಾಯವನ್ನು ಹುಡಕಿಕೊಳ್ಳದೆ ಕೃಷಿಯಿಂದಲೇ ಜೀವನ ಮಾಡುವೆನೆಂತಲೂ, ಏವತ್ತು ಎಕರೆಗೆ ಕಡಮೆಯಿಲ್ಲದಷ್ಟು ಜವಿಾನು ಸ್ವಂತವಾಗಿ ಹೊಂದಿರಬೇಕೆಂತಲೂ, ಕಟ್ಟು ಮಾಡಿರುವರು. ಎರಡನೆಯದು ಇಲ್ಲದೆಯೂ, ಮೊದಲನೆಯದಕ್ಕೆ ಒಪ್ಪದೆಯೂ ಈರತಕ್ಕವರಿಗೆ ವೇತನವು ದೊರೆಯಲಾರದೆಂದು ನಿಷ್ಕರ್ಷೆಮಾಡಿರುವರು. ಇದು ಉಚಿತವಾದುದೇಸರಿ.

* * * * *

ಗತಿಸಿದ ಮೆ। ಗ್ಲಾಡ್‌ಸ್ಟನ್ ಸಾಹೇಬರವರ ಜ್ಞಾಪಕಾರ್ಥವಾಗಿ, ಮದ್ರಾಸ್ ಆಧಿಪತ್ಯದ ಯಾವದಾದರೂ ಒಂದು ಕಾಲೇಜಿನಲ್ಲೇ ಆಗಲಿ, ಹೈಸ್ಕೂಲಿನಲ್ಲಿಯೇ ಆಗಲಿ, ಅಲ್ಲಿರತಕ್ಕ ಉತ್ತಮ ತರಗತಿಯಲ್ಲಿ ಓದತಕ್ಕ ವಿದ್ಯಾರ್ಥಿಗಳಲ್ಲಿ, ರಾಜಕೀಯ ವಿಷಯವನ್ನು ಕುರಿತು ವಿಷಯವನ್ನು ಸೂಚಿಸಿದ ಒಡನೆ ಸಮಂಜಸವಾಗಿ ಉಪನ್ಯಾಸ ಮಾಡಿದವಿದ್ಯಾರ್ಥಿಗೆ ಭಂಗಾರದ ಮೆಡಲ್ (ಬಿರದನ್ನು) ಕೊಡಬೇಕೆಂದು ರಾಮನಾಡಿನ ರಾಜರು ನಿಷ್ಕರ್ಷಿಸಿರುವರು. ರಾಜಕೀಯ ವಿಷಯವನ್ನು ಕುರಿತು ಉಪನ್ಯಾಸ ಮಾಡುವುದು ವಿದ್ಯಾರ್ಥಿಗಳಿಗೆ ಸಾಧ್ಯವಲ್ಲದ್ದರಿಂದ ಇನ್ಯಾವ ತೆರನಾಗಿಯಾದರೂ ಆ ಬಿರುದನ್ನು ಕೊಡಲು ತಕ್ಕಯೋಚನೆಯನ್ನು ಮಾಡುವ್ರದು ಉತ್ತುವವಾದುದ್ದೆಂದು ತೋರುವುದು.

* * * * * * * *

ಸ್ಟ ೧೪೯೬—೯೭ ರಲ್ಲಿ ನಡೆದ ಮದ್ರಾಸ್ ಪ್ರೈಮರಿ ಎಕ್ಸಾಮಿನೇಷನ್‌ಗಳಿಗೆ ೩೦, ೯೪೩ ಮಂದಿ ವಿದ್ಯಾರ್ಥಿಗಳು ಬಂದಿದ್ದರು. ಇಷ್ಟು ಸಂಖ್ಯೆಯು ಇದು

ವಿದ್ವತ್ತು. ಮೊದಲಾದವುಗಳನ್ನು ವಿಚಾರಿಸಿದರು. ಉತ್ತರಕ್ಷಣದಲ್ಲಿಯೆ ಅವನನ್ನು ಒಪ್ಪಿಸಿ ತಮ್ಮ ಹಿರಿಮಗಳನ್ನು ಕೊಟ್ಟು ಲಗ್ನವನ್ನು ಬೆಳಿಸಿ ವಧೂವರರನ್ನು ಮಂಗಳೂರಿಗೆ ಕಳುಹಿಸಿ ತಾವು ಅಲ್ಲಿಂದ ಯಾತ್ರಾರ್ಥಿಗಳಾಗಿ ಹೊರಟರು ಈವರೇ ಅನಂತಶಾಸ್ತ್ರಿಗಳು ಪಂಡಿತ ರಮಾಬಾಯಿಯವರ ತಂದೆಗಳು. ಇವರು ತಮ್ಮ ಹೆಂಡತಿಯನ್ನು ತಮ್ಮ ತಂದೆತಾಯಿಗಳ ವಶಕ್ಕೆ ಬಿಟ್ಟು ವಿದ್ಯಾಭ್ಯಾಸಾರ್ಥವಾಗಿ ಪುನಹೆಗೆಹೋದರು, ಅಲ್ಲಿಸಕಲಶಾಸ್ತ್ರ ವಿಶಾರದ ರೆಂಬಬಿರುದನ್ನು ಪಡೆದು ಪಂಡಿತ ರಾಮಚಂದ್ರ ಶಾಸ್ತ್ರಿಗಳು ಇದ್ದರು. ಅನಂತ ಶಾಸ್ತ್ರಿಗಳು ಅವರಲ್ಲಿ ಕೆಲವ್ವವರುಷಗಳು ಶಾಸ್ತ್ರಾಭ್ಯಾಸವನ್ನು ಮಾಡಿ ಕ್ರಮವಾಗಿ ಅವರಮುಖ್ಯ ಶಿಷ್ಯರಾದರು. ಅವರು ಬಾಜೀರಾಯರ ಕುಟುಂಬಕ್ಕೆ ಸಂಸ್ಕೃತಪಾಠವನ್ನು ಹೇಳುವುದಕ್ಕೆ ಅರಮನೆಗೆ ದಯಮಾಡಿಸುವಾಗ ಅನಂತ ಶಾಸ್ತ್ರಿಗಳನ್ನು ಕರೆದುಕೊಂಡು ಹೋಗುತ್ತಿದ್ದರು. ಬಾಜೀರಾಯರ ಪತ್ನಿಯವರು ಸಂಸ್ಕೃತದಲ್ಲಿ ಹೊಂದಿದ್ದ ಅದ್ಭುತವಾದ ಪಾಂಡಿತ್ಯವನ್ನ ಅದಕ್ಕನುರೂಪವಾಗಿದ್ದ ಅವರಗುಣಾತಿಶಯಗಳನ್ನು ನೋಡಿ ಅನಂತ ಶಾಸ್ತ್ರಿಗಳಿಗೆ ತನ್ನಹೆಂಡತಿಗೆ ಇದೇರೀತಿಯಲ್ಲಿ ವಿದ್ಯಾಭ್ಯಾಸಮಾಡಿಸಬೇಕೆಂಬ ಅಭಿಲಾಷೆಯುಂಟಾಯಿತು. ಇದೇಸಂಕಲ್ಪವು ಈತನಿಗೆ ದಿನೇದಿನೆ ಅಭಿವೃದ್ಧಿಗೆ ಬಂತು. ವಿದ್ಯಾಭ್ಯಾಸವು ಪೂರೈಸಿದಮೇಲೆ ಇವರು ಮಂಗಳೂರಿಗೆ ಹೋದರು. ನಿಷೇಕಾದಿಗಳು ಬೆಳೆದ ಕೆಲವ್ವು ದಿನಗಳಮೇಲೆ ಹೆಂಡತಿಗೆ ಸಂಸ್ಕೃತವಿದ್ಯಾಭ್ಯಾಸಕ್ಕೆ ಪ್ರಾರಂಭವಾಡಿದರು. ಇದಕ್ಕೆ ತಾಯಿತಂದೆಗಳು ಪ್ರತಿಭಟಿಸಿದರು. ಇದರ ದೆಸೆಯಿಂದ ತಂದೆಮಕ್ಕಳಿಗೆ ವೈಮನಸ್ಯಉಂಟಾಗಿ ಅನಂತಶಾಸ್ತ್ರಿಗಳು ತಮ್ಮ ಹೆಂಡತಿಯೊಡನೆ 'ಗಂಗಮಲ್' ಎಂಬ ಪಶ್ಚಿಮಘಟ್ಟದ ಅರಣ್ಯಕ್ಕೆ ಹೋಗಿ ಅಲ್ಲಿ ಒಂದು ವರಟಾದ ಮನೆಯನ್ನು ಕಟ್ಟಿಕೊಂಡು ಕಂದಮೂಲಾದಿಗಳಿಂದ ಜೀವಿಸುತ್ತಾ ವಿದ್ಯಾಭ್ಯಾಸವನ್ನು ಮಾಡಿಸುತ್ತಾ ಇದ್ದರು. ಇವರ ದೃಢಸಂಕಲ್ಪವನ್ನು ನೋಡಿ ತಂದೆತಾಯಿಗಳು ಸ್ತ್ರೀವಿದ್ಯಾಭ್ಯಾಸಕ್ಕೆ ಪ್ರತಿಭಟಿಸುವದಿಲ್ಲವೆಂದು ವಾಗ್ದಾನವಮಾಡಿ ಇವರನ್ನು ಊರಿಗೆ ಕರೆದುಕೊಂಡುಹೋದರು. ತದಾರಭ್ಯೆ ಅನಂತ ಶಾಸ್ತ್ರಿಗಳು ಅನೇಕ ವಿದ್ಯಾರ್ಥಿಗಳಿಗೆ ಪಾಠಗಳನ್ನು ಹೇಳುತ್ತಾ ಲಕ್ಷ್ಮೀಬಾಯಿರವರಿಗೆ ವಿದ್ಯಾಭ್ಯಾಸವನ್ನು ಮಾಡಿಸುತ್ತಾ ಕೆಲವು ವರುಷಗಳು ಕಳೆದರು. ಹೀಗೆ ಇರಲು ಕೆಲವ್ವು ವರುಷಗಳಲ್ಲಿ ಇವರಿಗೆ ಒಂದು ಗಂಡುಮಗುವು ಇಬ್ಬರು ಹೆಣ್ಣುಮಕ್ಕಳು ಆದರು. ಪಂಡಿತರಮಾಬಾಯಿರವರೆ ಇವರ ಕನಿಷ್ಠಪುತ್ರಿಯರು. ಇವರು ೧೮೫೮ನೆ

ಮತ ಶ್ರೇಷ್ಠ ವಾದದ್ದೆಂಬದಾಗಿಯು ಇದರಿಂದ ಯಾರು ತಿಳಿದುಕೊಳ್ಳಕೂಡದು. ಲೋಕದಲ್ಲಿ ಲಕ್ಷಾಂತರ ಮತಗಳಿರುತ್ತವೆ. ಎಲ್ಲಾ ಮತಸ್ಥರು ಅವರವರ ಮತಗಳ ಸದ್ಧರ್ಮಗಳನ್ನು ಮನೋವಾಕ್ಕಾಯಗಳಿಲ್ಲಿಯು ಪರಿಶುದ್ಧರಾಗಿ ಅನುಷ್ಠಿಸಿದರೆ ಇಹಪರಗಳನ್ನು ಹೊಂದುತ್ತಾರೆ. ಇಹಪರಗಳ ಸಾಧನೆಗೆ ಯಾವಮತಸ್ಥರಿಗೂ ಮತಾಂತರವ ನ್ನವಲಂಬಿಸುವ ಅವಶ್ಯಕತೆಯು ಇರುವದಿಲ್ಲ. ಪಂಡಿತ ರಾಮಾ ಬಾಯಿಯವರು ತಾವು ಮಾಡಿರತಕ್ಕ ಸಂಸ್ಕೃತ ವ್ಯಾಸಂಗಬಲದಿಂದ ಈ ಅಂಶವನ್ನು ಗೊತ್ತುಮಾಡಿಕೊಂಡು ಮತಭ್ರಾಂತಿಯನ್ನು ಹೊಂದದೆ ತಮ್ಮ ದೇಶಾಟನದಿಂದಲು ಪಂಡಿತ ಭಾಷಣದಿಂದಲು ತಮಗೆ ತಿಳಿದುಬಂದ ಅಂಶಗಳನ್ನು ನಮ್ಮ ದೇಶದಸ್ತ್ರೀ ಯರಿಗೆ ಕಲಿಸಿ ಅವರದುರಭಿ ಮಾನಗಳನ್ನು ಕಲ್ಪಿಸಿ ಅವರನ್ನು ವಿದ್ಯಾವತಿಯರನ್ನಾ ಗಿಯು, ವಿವೇಕಿ ಗಳನ್ನಾಗಿಯು ಮಾಡಲುಪಕ್ರಮಿಸಿದ್ದರೆ ಇವರ ದೇಶಾಟನ ಪ್ರ ಯತ್ನಗಳು ಈಗ ಶೋಭಿಸುವದಕ್ಕಿಂತಲು ಹೆಚ್ಚಾಗಿ ಶೋಭಿಸುತ್ತಿದ್ದುವು. ಅದು ಹಾಗಿರಲಿ ಪಂಡಿತ ರಮಾಬಾಯಿಯವರ ಅಸಾಧಾರಣವಾದ ಶಕ್ತಿಗು, ಸಾಹಸಕ್ಕು, ಧೈರ್ಯಕ್ಕು, ಪಾಂಡಿತ್ಯಕ್ಕು ' ಅಕೃತ್ರಿಮವಾದ ದೇಶಾಭಿಮಾನಕ್ಕು, ಮತಾಂತರಾ ವಲಂಬನೆಯಿಂದ ಯಾವನ್ಯೂ ನತೆಯುಇಲ್ಲ. ಇವರು ಕ್ರೈಸ್ತ ಮತಾವಲಂಬಿಗಳಾ ದಾಗ್ಯು ಇವರ ಚರಿತ್ರೆಯು ಓದತಕ್ಕವರಿಗು ಕೇಳತಕ್ಕವರಿಗು ಧೈರ್ಯ ಸೈರಣೆ ಗುಣ ಗಳನ್ನು, ವಿದ್ಯಾಭ್ಯಾಸದಲ್ಲಿ ಶ್ರದ್ಧೆಯನ್ನು ಧರ್ಮಮಾರ್ಗದಲ್ಲಿ ಆಸಕ್ತಿಯನ್ನು ಹುಟ್ಟಿ ಸುವದು. ಆದ್ದರಿಂದ ಇವರ ಚರಿತ್ರೆಯನ್ನು ಇವರು ನಮ್ಮವಾಚಕರ ಅವಲೋಕ ನಾರ್ಥವಾಗಿ ಸಂಕ್ಷೇಪವಾಗಿ ಬರೆಯುತ್ತೇವೆ.

* * * * * *

ಎರಡನೆ ಬಾಜೀರಾಯರ ಕಾಲದಲ್ಲಿ ಒಬ್ಬ ವೃದ್ಧನಾದ ವಿದ್ವಾಂಸನು ತನ್ನ ಹೆಂ ಡತಿ ಮತ್ತು ಇಬ್ಬರು ಹೆಣ್ಣುಮಕ್ಕಳಗಳೊಡನೆ ಗೋದಾವರೀ ತೀರದಲ್ಲಿ ಸ್ನಾನ ಮಾಡುತ್ತಲಿದ್ದನು. ಈ ಹೆಣ್ಣುಮಕ್ಕಳಲ್ಲಿ ಹಿರಿಯವರು ಲಕ್ಷ್ಮೀಬಾಯಿಯವರು ಇವ ರುಗಳು ಸ್ನಾನ ಅನುಷ್ಠಾನಗಳನ್ನು ಚನ್ನಾಗಿ ಮಾಡುತ್ತಿರುವಾಗ, ಅದೇತೀರಕ್ಕೆ ಮಂಗಳೂರು ನಿವಾಸಿಯಾದ ಒಬ್ಬ ವಿದ್ಯಾರ್ಥಿಯು ಸ್ನಾನಾರ್ಥವಾಗಿ ಅಲ್ಲಿಗೆ ಬಂದನು. ಇವನು ಬಹಳ ತೇಜಸ್ವಿಯಾಗಿಯೂ ಅತ್ಯಂತ ಸುಂದರ ನಾಗಿಯೂ ಇ ದ್ದರು ಈ ವಿದ್ವಾಂಸನು ಅವನನ್ನುನೋಡಿ ಸಂತೋಷಪಟ್ಟು ಅವನ ಕುಲಗೋತ್ರ

ಆದರಿಸಿ ಸ್ವಲ್ಪ ರೊಟ್ಟಿಯನ್ನೂ ನೀರನ್ನೂ ಕೊಟ್ಟರು. ಇದು ತಲಪುವದರೊಳಗಾಗಿ ಉತ್ಕ್ರಮಣಕಾಲವು ಬಂತು; ಸ್ವಲ್ಪಹೊತ್ತಿನಲ್ಲಿಯೆ ಲಕ್ಷ್ಮೀಬಾಯಿರವರು ಸ್ವರ್ಗಸ್ಥರಾದರು. ಅವರನ್ನು ಸಿದ್ಧಿಮಾಡಿದ ಕೂಡಲೆ ರಮಾಬಾಯಿರವರ ಸಹೋದರಿಯವರಿಗೆ ಜ್ವರವು ಉಂಟಾಗಿ ಕೆಲವು ದಿವಸಗಳಲ್ಲಿ ಅವರು ಕಾಲಾಧೀನರಾದರು. ಅವರ ಉತ್ತರಕ್ರಿಯೆಗಳನ್ನು ಪೂರೈಸಿಕೊಂಡು ಪಂಡಿತರಮಾಬಾಯಿರವರು ತೀರ್ಥಯಾತ್ರೆಯನ್ನು ಮಾಡುವದಕ್ಕೋಸ್ಕರ ತಮ್ಮ ಸಹೋದರರೊಡನೆ ಹೊರಟರು. ಈ ದುಃಖಪರಂಪರೆಗಳನ್ನು ಸಹಿಸುವದು ದುಸ್ಸಹವಾಗಿದ್ದಾಗ್ಯೂ ಇಷ್ಟು ಚಿಕ್ಕವಯಸ್ಸಿನಲ್ಲಿ ಪಂಡಿತರಮಾಬಾಯಿರವರು ಪಡೆದಿದ್ದ ಸ್ಥೈರ್ಯವು ವೈರಾಗ್ಯವು ಅದ್ಭುತವಾಗಿತ್ತು. ಇವರು ಅಸಾಧಾರಣವಾದ ತೊಂದರೆಗಳನ್ನು ಅನುಭವಿಸುತ್ತಾ ಅನೇಕ ತೀರ್ಥಯಾತ್ರೆಗಳನ್ನು ಮಾಡಿ ಕೊನೆಗೆ ೧೮೭೭ರಲ್ಲಿ ಕಲ್ಕತ್ತೆಗೆ ಬಂದು ತಲಪಿದರು.

ಮಾತಹೇಳುವಾಗ ಉಪಾಧ್ಯಾಯರು ಅನುಸರಿಸಬೇಕಾದ ಕೆಲವು ಸಾಮಾನ್ಯನಿಯಮಗಳು.

ಧ್ವನಿ. ಬಹಳ ಗಟ್ಟಿಗಾಗಲಿ ಅಥವ ಬಹಳ ಮೆಲ್ಲಗಾಗಲಿ ಮಾತಾಡದೆ ತರಗತಿಯಲ್ಲಿ ಇರುವವರಿಗೆಲ್ಲ ಕೇಳುವಂತೆ ಸ್ಪಷ್ಟವಾಗಿ ಶಬ್ದಗಳನ್ನು ಉಚ್ಚರಿಸಬೇಕು.

ಲಕ್ಷಣ. ಚಟುವಟಿಕೆಯುಳ್ಳವರಾಗಿರಬೇಕು. ಬಾಲಕರು ಹೇಳಿದ ಉತ್ತರಗಳ ಕೊನೇಭಾಗಗಳನ್ನು ಅನುಸರಿಸಿ ಹೇಳಬಾರದು; ಗೊತ್ತಾಯಿತೆ "ಏನು" ಇಂಥ ಶಬ್ದಗಳನ್ನು ಪದೇಪದೇ ಹೇಳಕೂಡದು;

ಆಳಿಕೆಯ ಸಾಮರ್ಥ್ಯ. ಉಪಾಧ್ಯಾಯರು ಕೊಟ್ಟ ಆಜ್ಞೆಯನ್ನು ಬಾಲಕರು ತಪ್ಪದೆ ಅನುಸರಿಸುವಂತೆ ಇರಬೇಕು. ಕೊಟ್ಟ ಆಜ್ಞೆಯು ತಪ್ಪದೆ ನಡೆಯಬೇಕು. ಬಾಲಕರನ್ನು ಅವಹಿತರನ್ನಾಗಿ ಮಾಡುವ್ದಕ್ಕಾಗಿ ಪ್ರಶ್ನೆಗಳನ್ನು ಒಂದು ಕಡೆಯಿಂದ ಕ್ರಮವಾಗಿ ಕೇಳದೆ ಅಲ್ಲೊಂದನ್ನು ಇಲ್ಲೊಂದನ್ನು ಕೇಳುತಿರಬೇಕು. ಯಾವ ಬಾಲಕರನ್ನಾಗಲಿ ಮಾಡುವದಕ್ಕೆ ಕೆಲಸವಿಲ್ಲದಂತೆ ಬಹಳಕಾಲ ಬಿಡಬಾರದು. ಕಪ್ಪು ಹಲಗೆ ಬಲಗಡೆ ನಿಲ್ಲಬೇಕು. ತನ್ನ ಸ್ಥಲವನ್ನು ಬದಲಾಯಿಸುತ್ತಿರಬಾರದು. ದೃಷ್ಟಿ ಸಿನೋಡುವವರಿಂದಲೇ ಬಾಲಕರನ್ನು ಕ್ರಮದಲ್ಲಿಟ್ಟಿರಬೇಕು.

ಏಪ್ರೆಲ್ ತಿಂಗಳಲ್ಲಿ ಹುಟ್ಟಿದರು. ಈ ಮಕ್ಕಳ ವಿದ್ಯಾಭ್ಯಾಸವನ್ನು ಲಕ್ಷ್ಮೀಬಾಯಿರವರೆ ನೋಡಿಕೊಳ್ಳುತ್ತ ಇದ್ದರು. ಅನಂತಶಾಸ್ತ್ರಿಗಳು ಸುಮಾರಾಗಿ ಉಪಜನ್ನರಾಗಿದ್ದರು. ಇವರ ಮನೆಯಲ್ಲಿ ಅನೇಕ ವಿದ್ಯಾರ್ಥಿಗಳು ಅನ್ನವಸ್ತ್ರಗಳಿಗೆ ಯೋಚನೆಯಿಲ್ಲದೆ ವಿದ್ಯೆಯನ್ನು ಕಲಿಯುತ್ತಿದ್ದರು. ೧೯೬೬ರಲ್ಲಿ ಕ್ಷಾಮವು ಪ್ರಾಪ್ತವಾಯಿತು ಈ ಕ್ಷಾಮಕಾಲದಲ್ಲಿ ತನ್ನ ಮತ್ತು ವಿದ್ಯಾರ್ಥಿಗಳ ಜೀವನಾರ್ಥವಾಗಿ ಇವರ ಸರ್ವಸ್ವವು ವೆಚ್ಚವಾಯಿತು. ಆದರೂ ಕ್ಷಾಮವು ತೀರದ್ದರಿಂದ ಅವರು ವಿಧಿಯಿಲ್ಲದೆ ವಿದ್ಯಾರ್ಥಿಗಳಿಗೆ ಅಪ್ಪಣೆಕೊಟ್ಟು ಕಳಿಸಿ, ಗೆಡ್ಡೆಗೆಣಸುಗಳನ್ನಾದರು ತಿಂದು ಜೀವಿಸೋಣವೆಂದು ಅರಣ್ಯಕ್ಕೆ ಹೋದರು. ಅಲ್ಲಿ ಅವುಗಳೂ ದೊರೆಯಲಿಲ್ಲ. ರಿಲೀಫ್ ಕೆಲಸಗಳನ್ನು ಮಾಡುವದಕ್ಕೆ ಮನವು ಬಾಧಿಸುತ್ತಿತ್ತು. ಆದ್ದರಿಂದ ಆತ್ಮಹತ್ಯಮಾಡಿಕೊಳ್ಳಬೇಕೆಂದು ಯೋಚಿಸಿ ರವಾಬಾಯಿರವರಿಗೆ ಬದುಕಿರುವವರಿಗೂ ಧರ್ಮಮಾರ್ಗಾವಲಂಬನೆಗೆ ನ್ಯೂನತೆಬರದಂತೆ ಇರಬೇಕೆಂದು ಹೇಳಿ ದಂಪತಿಸಮೇತ ಸ್ವರ್ಗಸ್ಥರಾಗುವ ಪ್ರಯತ್ನದಲ್ಲಿದ್ದರು. ಅಷ್ಟರಲ್ಲಿಯೇ ಇವರ ಮಗನು ರಿಲೀಫ್ ಕೆಲಸದಲ್ಲಿ ಸ್ವಲ್ಪ ದ್ರವ್ಯವನ್ನು ಸಂಪಾದಿಸಿಕೊಂಡು ಬಂದು ಇವರನ್ನು ಆತ್ಮಹತ್ಯಪ್ರಯತ್ನದಿಂದ ತಪ್ಪಿಸಿದನು. ಅಲ್ಲಿಂದ ಇವರು ಸವಿಾಪದಲ್ಲಿದ್ದ ಒಂದು ಗ್ರಾಮವನ್ನು ಪ್ರವೇಶಿಸಿ ಅಲ್ಲಿ ಒಂದು ದೇವಸ್ಥಾನಕ್ಕೆ ಹೋದರು. ಅಲ್ಲಿನ ಅಧಿಕಾರಿಗಳು ಇವರನ್ನು ಅಲ್ಲಿಂದ ನೂಕಿಸಿಬಿಟ್ಟರು. ಅದೇ ಗ್ರಾಮದಲ್ಲಿ ಕಾಡು ಮೃಗಗಳಿಗೂ ಗೂಬೆಮೊದಲಾದ ಪಕ್ಷಿಗಳಿಗೂ ಆವಾಸವಾದ ಒಂದು ಹಾಳುಗಡಿಗೆ ಹೋಗಿ ಅಲ್ಲಿ ಅಹನ್ಯಹನಿಕಾಲಕ್ಷೇಪಮಾಡುತ್ತಿದ್ದರು. ಅಲ್ಲಿ ಅನಂತಶಾಸ್ತ್ರಿಗಳಿಗೆ ಕ್ಷಾಮಜ್ವರವು ಬಂದು ಸ್ವರ್ಗಸ್ಥರಾದರು. ಈ ಜ್ವರವು ಬಂದಕೂಡಲೆ ಇವರು ಅಪತ್ಸನ್ಯಾಸವನ್ನು ತೆಗೆದುಕೊಂಡರು. ಇವರು ಸತ್ತಮೇಲೆ ಇವರನ್ನು ಸಿದ್ಧಮಾಡುವದಕ್ಕೆ ಶವವನ್ನು ಹೊರುವದಕ್ಕೆ ಕೂಡಾ ಒಬ್ಬರೂ ಬರಲಿಲ್ಲ. ಶವವನ್ನು ಒಂದು ಬಟ್ಟೆಯಲ್ಲಿ ಕಟ್ಟಿ ರವಾಬಾಯಿರವರ ಸಹೋದರನು ಹೊತ್ತುಕೊಂಡು ಹೋಗಬೇಕಾಯಿತು ಅನಂತಶಾಸ್ತ್ರಿಗಳ ದೇಹವನ್ನು ಸಿದ್ಧಮಾಡಿ ಬಂದಕೂಡಲೆ ಲಕ್ಷ್ಮೀಬಾಯಿರವರಿಗೂ ಜ್ವರವು ಬಂತು. ಇಷ್ಟರಲ್ಲೆ ಇವರೆಲ್ಲ ರಾಯಿಚೋರಿಗೆ ಹೋದರು. ಅಲ್ಲಿ ಜ್ವರವು ಹೆಚ್ಚಾಯಿತು. ಸ್ವಲ್ಪ ಅನ್ನವನ್ನು ಬೇಕೆಂದು ಹೇಳಿದರು. ರವಾಬಾಯಿರವರು ಸವಿಾಪದಲ್ಲಿದ್ದ ಒಂದು ಮನೆಯನ್ನು ಪ್ರವೇಶಿಸಿ ಯೋಚನೆಮಾಡುವದಕ್ಕೂ ತಿಳಿಯದೆ ಕಣ್ಣುನೀರನ್ನು ಸುರಿಸುತ್ತಾ ಇದ್ದರು. ಅಷ್ಟರಲ್ಲಿಯೆ ಆ ಮನೆಯವರು ಇವರನ್ನು

ವುದು. ೪ ಬೋಧಿಸಿದ ಪಾಠದ ಪುನರಾವರ್ತನೆಮಾಡುವುದು. ೫ ನಂಬರ್ ಕೊಟ್ಟು ರಿಜಿಸ್ಟರಿನಲ್ಲಿ ಬರೆಯುವುದು. ೬ ಬಾಲಕರು ಮನೆಯಲ್ಲಿ ಮಾಡಬೇಕಾದ್ದನ್ನು ನಿಯಮಿಸುವುದು.

ಭಾಷೆಯನ್ನು ಬೋಧಿಸುವಕ್ರಮ-

1 ಪದ್ಯ ಅಥವ ಪದ್ಯದ ಒಂದುಭಾಗ.

೧ ಇಬ್ಬರು ಮೂವರಿಂದ ಪದ್ಯವನ್ನು ಓದಿಸುವದು. ೨ ಪದವಿಭಾಗ-ಇದನ್ನು ಕೂಡಿದಮಟ್ಟಿಗೂ ಬಾಲಕರಿಂದಲೇ ಮಾಡಿಸಬೇಕು. ೩ ಕ್ಲಿಷ್ಟವಾದ ಪದಗಳ ಅರ್ಥವನ್ನು ತಿಳಿಸುವದು. ೪ ಅನ್ವಯಕ್ರಮ-ಇದನ್ನು ಸಾಧ್ಯವಾದಮಟ್ಟಿಗೆ ಬಾಲಕರಿಂದಲೇ ಹೇಳಿಸಬೇಕು. ೫ ಅನ್ವಯಕ್ರಮವಾಗಿ ಅರ್ಥವನ್ನು ಇಬ್ಬರು ಮೂವರಿಂದ ಹೇಳಿಸಬೇಕು. ೬ ಪದ್ಯದ ಅಭಿಪ್ರಾಯದ ವಿಷಯವಾಗಿ ಪ್ರಶ್ನೆಮಾಡುವದು. ೭ ತಾತ್ಪರ್ಯವನ್ನು ಹೇಳಿಸುವದು. ೮ ವ್ಯಾಕರಣವಿಷಯ. ೯ ಪುನರಾವರ್ತನೆ

2 ವಚನಕಾವ್ಯವನ್ನು ಬೋಧಿಸುವದು.

ಇದನ್ನು ಪದ್ಯದಂತೆಯೇ ಬೋಧಿಸಬೇಕು. ಪದವಿಭಾಗ ಮತ್ತು ಅನ್ವಯ ಮಾತ್ರ ಸಾಮಾನ್ಯವಾಗಿ ಅವಶ್ಯಕವಿರುವದಿಲ್ಲ.

ವ್ಯಾಕರಣ.

ಬಾಯಿಶಿಕ್ಷಣ-೧ ಬಾಲಕರಿಗೆ ಸುಲಭವಾಗಿ ಅರ್ಥವಾಗುವ ಉದಾಹರಣೆಗಳನ್ನು ತೆಗೆದುಕೊಳ್ಳಬೇಕು. ೨ ಅವರಿಂದ ಕೆಲವು ಉದಾಹರಣೆಗಳನ್ನು ಹುಡುಗರಿಂದ ಹೇಳಿಸಿ ಹಲಗೆಯಮೇಲೆ ಬರೆಯಬೇಕು. ೩ ಪ್ರತಿಯೊಂದು ಉದಾಹರಣೆಯ ವಿಷಯದಲ್ಲೂ ಪ್ರಶ್ನೆಮಾಡಿ ಹೋಲಿಕೆಯನ್ನು ತೋರಿಸಬೇಕು. ೪ ಇದರಿಂದ ವಿಧಿಯನ್ನು ಅವರಿಂದಲೇ ಹೇಳಿಸಬೇಕು. ಹಲಗೆಯಮೇಲೆ ಅದನ್ನು ಬರೆಯಬೇಕು. ೫ ಬೇರೊಂದು ಉದಾಹರಣೆಯನ್ನು ಕೊಟ್ಟು ಅದರಲ್ಲಿ ವಿಧಿಯನ್ನು ಅನ್ವಯಿಸಬೇಕು. ೬ ಓದುವ ಪುಸ್ತಕಗಳಲ್ಲಿರುವ ದೃಷ್ಟಾಂತಗಳನ್ನು ತೋರಿಸಬೇಕು.

ಮೂರನೇತರಗತಿಗೆ

೧ ವಿಧಿಯನ್ನು ಒಬ್ಬರಿಂದ ಓದಿಸುವದು ೨ ಅರ್ಥವಿವರಣೆ. ೩ ಉದಾಹರಣೆಗಳನ್ನು ಓದಿಸಿ ಲಕ್ಷಣಸಮನ್ವಯ ಮಾಡಿಸುವದು. ೪ ವಿಧಿಯ ಅಭಿಪ್ರಾಯದ ವಿಷಯವಾಗಿ ಪ್ರಶ್ನೆಮಾಡುವದು ೫ ಲಕ್ಷ್ಯಗಳನ್ನು ಹೊಸದಾಗಿ ಹೇಳಿ ಅಥವ

ತರಗತಿಯ ಯೋಗ್ಯತೆಗೆ ತಕ್ಕಂತಿರಬೇಕು. ಪಾಠವು ನಿಷ್ಕೃಷ್ಟವಾದ ಕಾಲದಲ್ಲಿ ಮುಗಿಯುವಂತಿರಬೇಕು. ಉಪಾಧ್ಯಾಯರು ಮೊದಲು ವಿಷಯವನ್ನು ಓದಿ ವಿಷಯ. ಯೋಚಿಸಿ ಕ್ರಮಪಡಿಸಿಕೊಂಡಿರಬೇಕು. ಹೀಗೆ ಸಿದ್ಧಪಡಿಸಿಕೊಂಡು ದನ್ನು ಟಿಪ್ಪಣಿರೂಪದಲ್ಲಿ ಬರೆಯುವುದು ಒಳ್ಳೆಯದು. ಪಾಠದ ಮುಖ್ಯೋದ್ದೇಶವನ್ನು ನಿಷ್ಕರ್ಷಿಸಿಕೊಂಡಿರಬೇಕು. ಪಾಠದ ಬೇರೆಬೇರೆ ಭಾಗಗಳಿಗಿರುವ ಸಂಬಂಧವನ್ನು ಹೊಂದಿಸಿಕೊಂಡಿರಬೇಕು. ಪ್ರಕೃತಕ್ಕೆ ಜೋಡದ ವಿಷಯಗಳನ್ನು ಹೇಳುತ್ತ ಕಾಲಕಳೆಯಬಾರದು.

ಸಮಯೋಚಿತವಾಗಿ ದೃಷ್ಟಾಂತಗಳನ್ನು ಕೊಡಬೇಕು. ಬಾಲಕರನ್ನು ಮಧ್ಯದಲ್ಲಿ ಬೋಧಶಕ್ತಿಯು. ಪ್ರಶ್ನೆಮಾಡದೆ ಉಪಾಧ್ಯಾಯರು ತಾವೇ ಬಹಳ ಹೊತ್ತು ವಿಷಯಗಳನ್ನು ಹೇಳಕೂಡದು. ಅಂಶಗಳನ್ನು ಕೂಡಿದಮಟ್ಟಿಗೂ ಬಾಲಕರಿಂದಲೆ ಹೇಳಿಸಬೇಕು. ಭಾಷೆಯು ಸುಲಭವಾಗಿಯು ಶುದ್ಧವಾಗಿಯೂ ಇರಬೇಕು.

ತರಗತಿಯನ್ನೆಲ್ಲಾ ಒಟ್ಟಾಗಿ ಪ್ರಶ್ನೆಮಾಡಿ ಅನಂತರದಲ್ಲಿ ಒಬ್ಬನನ್ನು ಹೇಳುವಂತೆ ಪ್ರಶ್ನೆಗಳು. ಸಂಜ್ಞೆಮಾಡಬೇಕು. ಪ್ರಶ್ನೆಗಳಿಗೆ ಮಧ್ಯದಲ್ಲಿ ಹೆಚ್ಚಾಗಿ ವಿರಾಮ ವಿರಬಾರದು. ಬುದ್ಧಿಶಕ್ತಿಯಲ್ಲಿ ಸ್ವಲ್ಪಮಟ್ಟಿಗೆ ಕಡಮೆಯಾಗಿರುವವರನ್ನು ಹೆಚ್ಚಾಗಿ ಪ್ರಶ್ನೆಮಾಡಬೇಕು.

ಬಾಲಕರು ತಪ್ಪಾದ ಅಥವ ಅಸಂಪೂರ್ಣವಾದ ಉತ್ತರಗಳನ್ನು ಹೇಳಿದರೆ ಪ್ರಶ್ನೆ ಉತ್ತರಗಳು. ಮಾಡಿ, ಅವರೇ ಆ ಉತ್ತರಗಳನ್ನು ತಿದ್ದಿ ಸರಿಯಾಗಿ ಹೇಳುವಂತೆ ಮಾಡಬೇಕು. ಇಬ್ಬರು ಮೂವರಿಂದ ಹೇಳಿಸುವದರಿಂದ ಮುಖ್ಯವಾದ ಉತ್ತರಗಳೂ ಎಲ್ಲರಿಗೂ ಮಂದಟ್ಟಾಗುವಂತೆ ಮಾಡಬೇಕು. ಊಹೆಯಿಂದ ಉತ್ತರಹೇಳುವುದನ್ನು ತಪ್ಪಿಸಬೇಕು.

ಪ್ರತಿಪಾಠದಲ್ಲಿಯೂ ಕಪ್ಪುಹಲಗೆಯನ್ನು ವಿಶೇಷವಾಗಿ ಉಪಯೋಗಿಸಬೇಕು. ಕಪ್ಪುಹಲಗೆ. ಬರೆಯುವುದನ್ನು ಸ್ಪಷ್ಟವಾಗಿಯೂ ಚೆನ್ನಾಗಿಯೂ ತಕ್ಕಮಟ್ಟಿಗೆ ಬೇಗಲೂ ಬರೆಯುಬೇಕು.

ಪಾಠನಡೆಸತಕ್ಕಕ್ರಮ.

ತರಗತಿಯು ಹುಡುಗರನ್ನು ಸರಿಯಾಗಿ ಕೂಡಿಸುವದು. ೨ ಹಿಂದಣಪಾಠದ ವಿಷಯವಾಗಿ ಪರೀಕ್ಷೆಯನ್ನು ಮಾಡುವುದು. ೩ ಹೊಸಪಾಠವನ್ನು ಬೋಧಿಸು

ಇನ್ನೊಬ್ಬನು ಮಾಡುವದಕ್ಕೆ ಅವಕಾಶವಿಲ್ಲದಂತೆ ವಿಸರ್ಜಿಸುವದು. ೩ ಲೆಕ್ಕವನ್ನು ಹುಡುಗರು ಸರಿಯಾಗಿ ಮಾಡುವದಕ್ಕೆ ಬೇಕಾದ ಅಂಶಗಳು ಇದ್ದರೆ ಅವುಗಳನ್ನು ಅವರಿಗೆ ತಿಳಿಸುವದು. ೪ ಹುಡುಗರು ಲೆಕ್ಕ ಮಾಡುವ ಕಾಲದಲ್ಲಿ ಉಪಾಧ್ಯಾಯನು ಎಚ್ಚರವಾಗಿ ನೋಡಿಕೊಳ್ಳುತ್ತಿರುವದು. ೫ ಮಾಡಿದ ಲೆಕ್ಕವನ್ನು ಸರಿನೋಡಿ ನಂಬರ್ ಕೊಡುವದು. ೬ ತಪ್ಪಾದವರನ್ನು ಬೇರೆ ಕೂಡಿಸಿ ಅವರಿಂದ ಅದೇ ಲೆಕ್ಕವನ್ನು ಪುನಃ ಮಾಡಿಸುವದು. ಇತರರಿಗೆ ಬೇರೆ ಲೆಕ್ಕವನ್ನು ಕೊಡುವದು.

ಭೂಗೋಳ ಮತ್ತು ಚರಿತ್ರೆ—ಬಾಯಿಶಿಕ್ಷಣ.

೧ ಪಾಠದ ವಿಷಯವನ್ನು ಗೊತ್ತುಮಾಡಿಕೊಳ್ಳುವದು. ೨ ಆ ವಿಷಯವನ್ನು ಕುರಿತು ಯೋಚಿಸಿ ಅಂಶಗಳನ್ನು ಅವುಗಳಿಗಿರುವ ಪರಸ್ಪರ ಸಂಬಂಧವನ್ನು ಅನುಸರಿಸಿ ಕ್ರಮಪಡಿಸಿಕೊಂಡು ಅದರಂತೆ ಬೋಧಿಸಬೇಕು. ೩ ಪುನರಾವರ್ತನೆ.

ಎರಡನೇ ಮತ್ತು ಮೂರನೇ ತರಗತಿಗಳಿಗೆ

೧ ಹಿಂದಿನದಿನದ ಪಾಠದ ವಿಷಯವಾಗಿ ಪರೀಕ್ಷೆ. ೨ ಹೊಸಪಾಠದ ಒಂದು ಭಾಗವನ್ನು ಪುಸ್ತಕದಲ್ಲಿ ಓದಿಸುವದು. ೩ ಆ ಭಾಗದಲ್ಲಿ ಹೇಳಿರುವ ಅಂಶಗಳನ್ನು ಸ್ಪಷ್ಟಪಡಿಸುವದು. ಪುಸ್ತಕದಲ್ಲಿಲ್ಲದಿರುವ ವಿಶೇಷಾಂಶಗಳನ್ನು ತಿಳಿಸುವ್ಹದಾದರೆ ಅವುಗಳನ್ನು ಅಲ್ಲಲ್ಲಿ ತಿಳಿಸಬೇಕು. (ಈ ಅಂಶಗಳನ್ನೆಲ್ಲಾ ಕುರಿತು ಉಪಾಧ್ಯಾಯರು ಯೋಚಿಸಿ ಅವುಗಳನ್ನು ಸರಿಯಾಗಿ ವಿಂಗಡಿಸಿಕೊಂಡಿರಬೇಕು. ಬೋಧಿಸುವಾಗ್ಗೆ ಮುಖ್ಯವಾದ ಅಂಶಗಳನ್ನು ಹಲಗೆಯಮೇಲೆ ಬರೆಯಬೇಕು. ೪ ಪುನರಾವರ್ತನೆ.

ನಾಲ್ಕನೇ ಮತ್ತು ಐದನೇ ತರಗತಿಗಳಿಗೆ

ಬಾಲಕರು ಓದಿಕೊಂಡು ಬಂದಿರುವ ಹೊಸಪಾಠದ ವಿಷಯವಾಗಿ ಪರೀಕ್ಷೆ. ೨ ಆ ವಿಷಯವನ್ನೆ ಉಪಾಧ್ಯಾಯನು ಇನ್ನೂ ಸ್ಪಷ್ಟಪಡಿಸಬೇಕು. (ವಿಶೇಷಾಂಶಗಳು ಹೇಳಬೇಕಾದವುಗಳನ್ನೂ ತಿಳಿಸಬೇಕು. ಮುಖ್ಯಾಂಶಗಳನ್ನು ಹಲಗೆಯಮೇಲೆ ಬರೆಯಬೇಕು.) ೩ ಪುನರಾವರ್ತನೆ. ೪ ಮುಂದಿನದಿನಕ್ಕೆ ಪಾಠವನ್ನು ಗೊತ್ತುಮಾಡುವದು.

ಭೂಪಠದ ಸಹಾಯದಿಂದ ದೇಶದವಿವರಣೆ.

೧ ಸ್ಥಾನ, ವೇರೆ, ಮತ್ತು ವಿಸ್ತೀರ್ಣ. ೨ ಭೂಲಕ್ಷಣ. ೩ ಇವುಗಳಿಂದ ಹವಾಗುಣವನ್ನು ನಿರ್ಣಯಿಸುವದು. ೪ ಇವುಗಳಿಂದ ವ್ಯಾಪಾರ, ಕೈಗಾರಿಕೆ, ಮುಂ

ಬಾಲಕರಿಂದ ಹೇಳಿಸಿ ಲಕ್ಷ್ಯಸಮನ್ವಯವೊಡಿಸುವದು ೬ ಪುನರಾವರ್ತನೆ.

ನಾಲ್ಕನೇ ಐದನೇ ತರಗತಿಗಳಿಗೆ

(ಬಾಲಕರು ಓದಿಕೊಂಡು ಬರುವದಕ್ಕೆ ಪಾಠವನ್ನು ನಿಯಮಿಸಿರಬೇಕು.

೧ ಓದಿ ಬಂದಿರುವ ವಿಷಯವಾಗಿ ಪರೀಕ್ಷೆ. ೨ ಆ ಭಾಗದಲ್ಲಿರುವ ಕ್ಲಿಷ್ಟಾಂಶಗಳ ವಿವರಣೆ; ಪ್ರತಿಷೇಧಗಳು, ಮುಂತಾದ ಪುಸ್ತಕದಲ್ಲಿಲ್ಲದ ಅಂಶಗಳನ್ನು ತಿಳಿಸುವುದಿದ್ದರೆ ಹಾಗೆ ಮಾಡುವದು. ೩ ಪುನರಾವರ್ತನೆ. ೪ ಮುಂದಿನದಿನದ ಪಾಠನನ್ನು ಗೊತ್ತುಮಾಡುವದು.

ಅಂಕಗಣಿತ.

1 ಹೊಸವಿಧಿಯನ್ನು ಬೋಧಿಸುವದು.

೧ ವಿಧಿಯನ್ನು ಸಾಧಿಸುವಂಥ ಚಿಕ್ಕ ಬಾಯಿಲೆಕ್ಕಗಳನ್ನು ಕೊಟ್ಟು ಹುಡುಗರಿಂದ ಉತ್ತರಹೇಳಿಸುವದು. ೨ ಇನ್ನೂ ಸ್ವಲ್ಪ ಕಷ್ಟವಾದ ಲೆಕ್ಕಗಳನ್ನು ಹಲಗೆಯಮೇಲೆ ಮಾಡಿಸುವದು. ೩ ಮಾಡಿರುವ ಲೆಕ್ಕಗಳನ್ನೆಲ್ಲಾ ಹೋಲಿಸುವದರಿಂದ ಸಾಮಾನ್ಯನಿಯಮವನ್ನು ಬಾಲಕರೇ ಹೇಳುವಂತೆ ಮಾಡುವದು. ೪ ಉಪಯೋಗಿಸುವದಕ್ಕನುಕೂಲವಾದ ಕ್ರಮದಲ್ಲಿ ವಿಧಿಯನ್ನು ಹಲಗೆಯಮೇಲೆ ಬರೆಯುವದು. ೫ ಒಂದು ಲೆಕ್ಕವನ್ನು ತೆಗೆದುಕೊಂಡು ವಿಧಿಗನುಸಾರವಾಗಿ ಅದನ್ನು ಹಲಗೆಯಮೇಲೇ ಮಾಡುವದು. ೬ ಹುಡುಗರು ಇದನ್ನು ಬರೆದುಕೊಳ್ಳುವಂತೆ ಹೇಳುವದು. ೭ ಕೆಲವು ಲೆಕ್ಕಗಳನ್ನು ಹುಡುಗರಿಂದಲೇ ಮಾಡಿಸುವದು.

2 ಮಾದರೀಲೆಕ್ಕವನ್ನು ಬೋಧಿಸುವದು.

೧ ಪ್ರಕೃತಕ್ಕೆ ಸಹಾಯಮಾಡುವ ವಿಷಯವಾಗಿ ಪ್ರಶ್ನೆಮಾಡುವದು. ೨ ಮಾದರೀಲೆಕ್ಕವನ್ನು ಬರೆಯಿಸಿ ಒಬ್ಬಿಬ್ಬರಿಂದ ಓದಿಸುವದು. ೩ ಲೆಕ್ಕದ ವಿಷಯವಾಗಿ ಪ್ರಶ್ನೆಮಾಡುವದು. ೪ ಬಾಲಕರನ್ನು ಪ್ರಶ್ನೆಮಾಡಿ ವಿಷಯಗಳನ್ನು ಹೇಳಿಸುತ್ತ ಆ ಲೆಕ್ಕವನ್ನು ಹಲಗೆಯಮೇಲೆ ಮಾಡಿಸುವದು. ೫ ಪುನರಾವರ್ತನೆ. ೬ ಬಾಲಕರು ಹಲಗೆಯಮೇಲಿರುವದನ್ನು ಬರೆದುಕೊಳ್ಳುವದು. ೭ ಅದರಂತಿರುವ ಕೆಲವು ಲೆಕ್ಕಗಳನ್ನು ಬಾಲಕರಿಂದ ಮಾಡಿಸುವದು.

3 ಹುಡುಗರಿಗೆ ತಿಳಿದಿರುವ ವಿಧಿಯಂತೆ ಲೆಕ್ಕಗಳನ್ನೂ ಅಭ್ಯಾಸಕ್ಕಾಗಿ ಮಾಡಿಸುವದು.

೧ ಲೆಕ್ಕವನ್ನು ಬರೆಯಿಸುವದು. ೨ ಒಬ್ಬನು ಮಾಡಿದುದನ್ನು ನೋಡಿಕೊಂಡು

ಕಷ್ಟವಾದ ಪದಗಳ ವರ್ಣಕ್ರಮವಿಷಯವಾಗಿ ಪ್ರಶ್ನೆ. ೧೧ ನಂಬರು ಕೊಡುವದು.

ವಸ್ತುಪಾಠ.

೧ ವಸ್ತುವನ್ನೇ ಆಗಲಿ ಅಥವಾ ವಸ್ತುವಿನ ಚಿತ್ರವನ್ನಾಗಲಿ ಬಾಲಕರಿಗೆ ತೋರಿಸಬೇಕು. ಉಪಾಧ್ಯಾಯ

ಕನ್ನಡಿ.

ಬೋಧನ ಕ್ರಮ.	ನಿದರ್ಶನ.
ಪೀಠಿಕೆ :—ನಮ್ಮ ಮುಖವನ್ನು ನಾವೇ ನೋಡಿಕೊಳ್ಳಬೇಕಾದರೇನು ಮಾಡಬೇಕೆಂದು ಬಾಲಕರನ್ನು ಪ್ರಶ್ನೆ ಮಾಡಬೇಕು. (ಕನ್ನಡಿ, ನೀರು, ಎಣ್ಣೆ ಮುಂತಾದ್ದು). ಒಂದು ಕನ್ನಡಿಯನ್ನು ತೋರಿಸಿ, ಅದು (೧) ಗಾಜು, (೨) ಚೌಕಟ್ಟು, (೩) ಹಿಂಭಾಗ ಎಂದು ಮೂರು ಭಾಗಗಳುಳ್ಳದ್ದಾಗಿದೆಯೆಂದು ಹೇಳಬೇಕು.	
೧ ಗಾಜು:—(a) ಗಾಜನ್ನು ಮುರಿಯಬಹುದೆಂಬುವದನ್ನು, ಅನೇಕವೇಳೆ ಸ್ವಲ್ಪ ಏಟುತಗಲಿದ ಮಾತ್ರದಿಂದಲೇ ಅದು ಒಡೆದು ಹೋಗುತ್ತದೆಂಬದನ್ನೂ ಬಾಲಕರಿಂದಲೇ ಹೇಳಿಸುವದು. ಆದ್ದರಿಂದ, ಕನ್ನಡಿಯ ಗಾಜು, ಹೀಗೆ ಸುಲಭವಾಗಿ ಒಡೆಯದಂತಿರುವದಕ್ಕೋಸ್ಕರ ಅದನ್ನು ದಪ್ಪವಾಗಿ ಮಾಡಿರುತ್ತಾರೆಂದು ಬಾಲಕರೇ ಊಹಿಸುವಂತೆ ಪ್ರಶ್ನೆ ಮಾಡಬೇಕು (b) ಕನ್ನಡಿಯ ಗಾಜು ಸಮವಾಗಿಲ್ಲದಿದ್ದ ಪಕ್ಷದಲ್ಲಿ	(a) ಅನುಕೂಲವಾದರೆ, ಗಾಜನ್ನು ಚೌಕಟ್ಟಿನಿಂದೀಚಿಗೆ ತೆಗೆದು, ಅದು ಎಷ್ಟು ದಪ್ಪವಾಗಿದೆಯೆಂಬದನ್ನು ಬಾಲಕರಿಗೆ ತಿಳಿಸಬೇಕು. (b) ಕನ್ನಡಿಯ ಗಾಜು, ಹಳ್ಳಉಬ್ಬುಗಳಿಲ್ಲದೆ, ಸಮವಾಗಿಯೂ ನಯವಾಗಿಯೂ ಇದೆಯೆಂಬುವದು ಬಾಲಕರಿಗೆ ತೋರುವಂತೆ ಪ್ರಶ್ನೆ ಮಾಡಬೇಕು.

ತಾದುವನ್ನೂ ಹೇಳಿಸುವದು. ೫ ಇವುಗಳಿಂದ ದೇಶದ ಉದ್ಯಿಜ್ಜಗಳನ್ನು ಮತ್ತು ಪ್ರಾಣಿಗಳನ್ನು ಗೊತ್ತುಮಾಡುವುದು. ೬ ಇವುಗಳಿಂದ ಜನಗಳ ಉದ್ಯೋಗ ಮತ್ತು ನಡತೆಯನ್ನು ಹೇಳಿಸುವದು. ೭ ಪಟ್ಟಣಗಳನ್ನು ತೋರಿಸುವದು. ಮತ್ತು ಜನಸಂಖ್ಯೆ, ರಾಜ್ಯಭಾರಕ್ರಮ, ಮತ, ಮುಂತಾದ ವಿಷಯಗಳನ್ನು ಹೇಳಿಕೊಡಬೇಕು.

ಉಕ್ತಲೇಖನ.

೧ ಒಬ್ಬನನ್ನು ನೋಡಿ ಇನ್ನೊಬ್ಬನು ಬರೆಯುವದಕ್ಕೆ ಅವಕಾಶವಿಲ್ಲದಂತೆ ವಿಘ್ನ ಡಿಸುವದು. ೨ ಬರೆಯಿಸುವದು (ಮಾತುಗಳನ್ನು ಎರಡುಸಲ ಹೇಳಬೇಕು) ೩ ಬಾಲಕರ ಸ್ಲೇಟುಗಳನ್ನೆಲ್ಲಾ ತರಿಸಿ ಇಟ್ಟುಕೊಳ್ಳುವದು. ೪ ಬರೆಯಿಸಿದುದರಲ್ಲಿ ಕಷ್ಟವಾದ ಮಾತುಗಳ ವರ್ಣಕ್ರಮವನ್ನೂ ಬಾಲಕರಿಂದಲೇ ಹೇಳಿಸುತ್ತ ಹಲಗೆಯ ಮೇಲೆ ಬರೆಯುವದು. ೫ ಬಾಲಕರು ಬರೆದಿರುವದನ್ನು ಸರಿನೋಡುವದು. ಇತರರು ಬರೆದಿರುವದನ್ನು ನೋಡುವಾಗ್ಗೆ ಸರಿನೋಡಿದ ಸ್ಲೇಟಿನವರು ತಪ್ಪಿರುವ ಮಾತುಗಳನ್ನು ಹಲಗೆಯನ್ನು ನೋಡಿಕೊಂಡು ಬರೆಯುವಂತೆ ಹೇಳಬೇಕು. ೬ ತಪ್ಪಿದ ಮಾತುಗಳನ್ನು ಎಲ್ಲರೂ ತಿದ್ದಿ ಬರೆದಿರುವರೆಂಬುದನ್ನು ಪರೀಕ್ಷಿಸುವದು. ೭ ಕಷ್ಟವಾದ ಮಾತುಗಳ ವರ್ಣಕ್ರಮವಿಷಯವಾಗಿ ಪ್ರಶ್ನೆ. ೮ ನಂಬರ್ ಕೊಡುವದು.

ಮೇಲಿನ ತರಗತಿಗಳಿಗೆ-

೧ ಒಬ್ಬನನ್ನು ನೋಡಿ ಇನ್ನೊಬ್ಬನು ಬರೆಯದಂತೆ ವಿಘ್ನಡಿಸುವದು. ೨ ಬರೆಯಿಸುವದು. (ಮಾತುಗಳನ್ನು ಒಂದೇಸಲ ಹೇಳಬೇಕು.) ೩ ಸ್ಲೇಟುಗಳನ್ನು ಹುಡುಗರು ಬದಲಾಯಿಸಿಕೊಳ್ಳುವಂತೆ ಹೇಳುವದು. ೪ ಒಬ್ಬ ಬಾಲಕನ ಸ್ಲೇಟನ್ನು ಉಪಾಧ್ಯಾಯನು ತೆಗೆದುಕೊಂಡು ಅವನು ಬರೆಯಿಸಿದುದರಲ್ಲಿರುವ ಕ್ಲಿಷ್ಟವಾದ ಪದಗಳನ್ನು ಹಲಗೆಯ ಮೇಲೆ ಬರೆಯುವಂತೆ ಹೇಳಬೇಕು. ಇದಕ್ಕಾಗಿ ಉಪಾಧ್ಯಾಯನು ಅಂಥಾ ಪದಗಳನ್ನು ಸ್ಪಷ್ಟವಾಗಿ ಬರೆದು ತಂದು ಅವನಿಗೆ ಕೊಡಬೇಕು. ೫ ಆ ಸಮಯದಲ್ಲಿ ಉಪಾಧ್ಯಾಯನು ತನ್ನಲ್ಲಿರುವ ಸ್ಲೇಟನ್ನು ತಿದ್ದುತ್ತಾ ವರ್ಣಕ್ರಮವನ್ನು ಹೇಳುತ್ತ ಹೋಗಬೇಕು. ಹುಡುಗರೆಲ್ಲರೂ ಸ್ಲೇಟುಗಳನ್ನು ತಿದ್ದಬೇಕು. ೬ ಸ್ಲೇಟುಗಳನ್ನು ಪುನಃ ಬದಲಾಯಿಸಬೇಕು. ೭ ತಿದ್ದಿರುವುದರಲ್ಲಿ ತಪ್ಪೇನಾದರು ಇದ್ದರೆ ಅದನ್ನು ಸರಿಮಾಡುವದು. ೮ ತಪ್ಪಿದ ಮಾತನ್ನು ಹಲಗೆಯನ್ನು ನೋಡಿಕೊಂಡು ಸರಿಯಾಗಿ ಬರೆಯುವಂತೆ ಹೇಳುವದು. ೯ ಹಾಗೆ ಬರೆದುದನ್ನು ನೋಡುವದು. ೧೦

ರಸವನ್ನೆಲ್ಲಾ ಈಚೆಗೆ ತಳ್ಳಿಬಿಡುವಂತೆಯೂ ವರತೆಗೂ ಗಾಜಿಗೂ ಮಧ್ಯೆ, ವಾಯುಸಂಚಾರಕ್ಕವಕಾಶವಿಲ್ಲದಂತೆಯೂ ಗಾಜಿನ ಬಿಲ್ಲೆಯನ್ನು ಜಾರಿಸುತ್ತಾರೆ.

೪ ಅನಂತರ ಗಾಜಿಗೂ ತವರತೆಗೂ ಮಧ್ಯನಿರುವ ಹೆಚ್ಚುರಸವು ಈಚೆಗೆ ಬರುವಂತೆ ಅವರಮೇಲೆಭಾರವನ್ನು ಹೇರುತ್ತಾರೆ(f)

ಹೀಗೆ ಮಾಡುವದರಿಂದ, ತೆಳ್ಳಗಿರುವ ರಸದ ಪರೆಯು ತವರದ ವರತೆಗೆ ಅಂಟಿಕೊಳ್ಳುವದು.

(f) ಗಾಜು ಸಮವಾಗಿರುವ ಪಕ್ಕದಲ್ಲಿ ಒಡೆದು ಹೋಗುವದೆಂಬುದನ್ನು ಸೂಚಿಸುವದು.

ಚೌಕಟ್ಟು :—

(g) ಚೌಕಟ್ಟು ಹಾಕದಿದ್ದರೆ, ಗಾಜಿನ ಅಂಚು ಕೈಯನ್ನು ಕುಯ್ಯುತ್ತದೆಂದು ಸೂಚಿಸುವದು ಮತ್ತು ಇದು ಅಲಂಕಾರವಾಗಿದೆಯೆಂಬವನ್ನು ಅವರೇ ಹೇಳುವಂತೆ ಪ್ರಶ್ನೆ ಮಾಡುವದು.

(g) ಗಾಜಿನ ಅಂಚುಗಳನ್ನು ತೋರಿಸು.

ಕನ್ನಡಿಯ ಹಿಂಭಾಗ :—

ಕನ್ನಡಿಯು ಚೌಕಟ್ಟಿನ ಹಿಂದೆ ಮರವನ್ನು ಹಾಕಿರುವದೇತಕ್ಕೆಂದು ಪ್ರಶ್ನೆಮಾಡಿ (ಕನ್ನಡಿಯುಮೇಲೆ ದೂಳುಬೀಳದಿರುವದಕ್ಕೋಸ್ಕರವೆಂದು ಹೇಳಿದಲ್ಲಿ) ದೂಳು ಬಿದ್ದರೆ ಬಾಧಕವೇನೂ ಇಲ್ಲವೆಂದು ಹೇಳುವದು.(h) ಹಿಂದೆ ಮರವಿಲ್ಲದಿದ್ದರೆ, ಉಗುರು ಮುಂತಾದವು ತಗಲಿ, ವರತೆಯು ಉದುರಿಹೋಗುವದೆಂಬದಾಗಿಯೂ, ಹಾಗಾಗದಿರುವದಕ್ಕೋಸ್ಕರ ಹಿಂದೆ ಮರವನ್ನು ಹಾಕುತ್ತಾರೆಂಬದಾಗಿಯೂ ಬಾಲಕರಿಂದಲೇ ಹೇಳಿಸಬೇಕು.

(h) ಒಂದು ಪಡಕುಕನ್ನಡಿಯ ಹಿಂದಿನ ವರತೆಯನ್ನು ಉಗುರಿನಿಂದ ಕೆರೆದು ತೋರಿಸುವದು. ಮುಂಚಿನಂತೆ ಮುಖಕಾಣುವದಿಲ್ಲ.

ಪ್ರತಿಫಲನ :—

(k) ಕನ್ನಡಿಯ ಹಿಂದಿನ ವರತೆಯು, ಬೆಳಕನ್ನು ಆಚೆಗೆ ಬಿಡದೆ ಹಿಂದಕ್ಕೆ ತಳ್ಳುತ್ತದೆಂ

(k) ಕನ್ನಡಿಯಲ್ಲಿ ನೋಡಿಸಿ ಅಲ್ಲಿ ಕಂಡು ಬರುವದನ್ನು ಒಬ್ಬ ಬಾಲಕನಿಂದ ಹೇಳಿಸಬೇಕು.

ಅಂತಹ ಕನ್ನಡಿಯನ್ನು ನೋಡಿಕೊಂಡರೆ, ಮುಖವು ವಿಕಾರವಾಗಿ ಕಾಣುತ್ತದೆಂಬದಾಗಿಯೂ, ಇಂತಹ ಕನ್ನಡಿಯನ್ನು ಭೂತ ಕನ್ನಡಿಯೆಂದು ಕರೆಯುವ ವಾಡಿಕೆಯುಂಟೆಂಬದಾಗಿಯೂ ವಿವರಿಸಬೇಕು.

(c) ಬಟ್ಟಲಿನಂತಿರುವ, ಲ್ಯಾಂಪುಗಳ ರಸದ ತಟ್ಟೆಯಲ್ಲಾಗಲಿ, ರಸದ ಬುರುಡೆಯಲ್ಲಾಗಲಿ ನೋಡಿಕೊಂಡರೆ ಮುಖವು ಬಹು ದಪ್ಪವಾಗಿಯಾಗಲಿ ಬಹು ಸಣ್ಣವಾಗಿಯಾಗಲಿ ಕಾಣುವದನ್ನು ಸೂಚಿಸಬೇಕು.

ಕನ್ನಡಿಯು ಮುಖಭಾಗ :—

(d) ಕನ್ನಡಿಯಲ್ಲಿ, ಹೀಗೆ ಒಂದು ಪಕ್ಕದಲ್ಲಿ ನಿಂತು ನೋಡುವವರಿಗೆ ಮತ್ತೊಂದು ಪಕ್ಕದಲ್ಲಿರುವ ಪದಾರ್ಥಗಳು ಕಾಣದಿದ್ದರೂ, ಅದರ ಗಾಜು ಕಿಟಕಿ ಲಾಂದ್ರ ಮುಂತಾದವುಗಳಿಗೆ ಹಾಕುವ ಗಾಜಿನಂತೆಯೇ ಇರುವದು.

(d) ಕಿಟಕಿಗಳಿಗೆ ಹಾಕಿರತಕ್ಕ ಗಾಜಿನ ಬಿಲ್ಲೆಗೂ, ಕನ್ನಡಿಯ ಗಾಜಿಗೂ ಇರುವ ವ್ಯತ್ಯಾಸವನ್ನು ತೋರಿಸಬೇಕು. ಕಿಟಕಿಯ ಗಾಜಿನ ಬಿಲ್ಲೆಯ ಒಂದು ಪಕ್ಕದಲ್ಲಿ ನಿಂತು ನೋಡಿದರೆ, ಅದರ ಮತ್ತೊಂದು ಪಕ್ಕದಲ್ಲಿರುವ ವಸ್ತುಗಳು ಕಾಣುತ್ತವೆ. ಕನ್ನಡಿಯಲ್ಲಿ ಹಾಗೆ ಕಾಣುವದಿಲ್ಲ.

(e) ಹೀಗೆಯೇ ಕನ್ನಡಿಯ ಗಾಜಿನ ಹಿಂದೆ ರಸವನ್ನು ಬಳಿದಿರುವದರಿಂದ, ಅದರ ಹಿಂದಿರುವ ಪದಾರ್ಥಗಳು ಕಾಣುವದಿಲ್ಲವೆಂದು ಹೇಳಬೇಕು. ಈರಸದಲ್ಲಿ ತವರದ ವರತೆಯೂ ಪಾದರಸವೂ ಸೇರಿವೆ ಎಂದು ವ್ಯಕ್ತಪಡಿಸುವದು.

(e) ಗಾಜಿನ ಬಾಗಲಿನ ಹಿಂದೆ, ಮರದ ಬಾಗಿಲನ್ನು ಹಾಕಿದರೆ, ಪೂರ್ವದಂತೆ ಹೊರಗಿನ ಪದಾರ್ಥಗಳು ಕಾಣುವದಿಲ್ಲವೆಂಬುವದನ್ನು ಸೂಚಿಸುವದು.

ರಸಬಳಿಯುವ ವಿಧಾನ :—

೧ ಬಹಳ ನಯವಾಗಿಯೂ, ಸಮವಾಗಿಯೂ ಇರುವ ಕಬ್ಬಿಣದ ಹಲಿಗೆಯ ಮೇಲಾಗಲಿ ಸ್ಲೇಟಿನಮೇಲಾಗಲಿ, ತೆಳ್ಳಗಿರುವ, ತವರದ ವರತೆಯನ್ನು ಸಮವಾಗಿ ಹಾಸುತ್ತಾರೆ.

೨ ಆ ವರತೆಯುಮೇಲೆ ಪಾದರಸವನ್ನು ಸುರಿಯುತ್ತಾರೆ.

೩ ಅನಂತರ, ತವರದ ವರತೆಗೆ ತಗಲದಂತೆಯೂ, ಮುಕ್ಕಾಲುಮೂರುವೀಸಪಾಲು

ಇಂಥಾ 36 ಅಂಶ ಅಥವಾ ಆ ಸಂಖ್ಯೆಯು $\frac{121\times36}{3\times11} = \frac{11}{1}\frac{12}{132}$ ಉತ್ತಂ.

2 ಹಡಗು 60×60 ಸಕಂಡ್‌ಗಳಲ್ಲಿ $10\times1760\times3$ ಅಡಿಗಳ ದೂರ ಹೋಗುತ್ತದೆ.

∴ ,, ,, $\frac{10\times1760\times3}{60\times60}$ ಅಥವಾ $\frac{44}{3}$ ಅಡಿ ದೂರ ಹೋಗುತ್ತದೆ.

∴ ಧ್ವನಿಯು 1140 ಅಡಿಗಳ ದೂರ ಹೋದರೆ ಹಡಗು $\frac{44}{3}$ ಅಡಿ ದೂರ ಹೋಗುತ್ತೆ.

∴ ,, ,, $\frac{44}{3\times1140}$,

∴ ,, $\frac{57\times1760\times3}{4}$,, ,, $\frac{44\times57\times1760\times3}{3\times1140\times4}$ ಅಥವಾ

968 ಅಡಿ (ಉತ್ತರ)

ಚೀ ಣ ರು .

ಚೀನರು, ವಿಸ್ತಾರವಾದ ಚೀನಾದೇಶದ ಜನರು ಇವರ ಮೈಬಣ್ಣವು ಬಿಳಿ ಅರಸಿನ ಛಾಯೆಯಾಗಿರುವುದು. ಮುಖವು ನುಣುಪು, ಕಪೋಲವು ಉಬ್ಬಿರುವ ಕಣ್ಣುಗಳು ಸಣ್ಣನಾಗಿಯೂ, ವಕ್ರವಾಗಿಯೂ ಇರುವವು. ತುಟಿಯು ಸಣ್ಣ ಮುಖದಲ್ಲಿ ಕೂದಲು ಕಡಿಮೆ.

ಗಂಡಸರು ತಲೆಯಕೂದಲನ್ನೆಲ್ಲಾ ತೆಗೆಯಿಸಿ, ಹಿಂಭಾಗದಲ್ಲಿ ಸ್ವಲ್ಪ ಭಾಗ ಮಾತ್ರ ಕೂದಲನ್ನು ಬೆಳೆಯಲಿಕ್ಕೆ ಬಿಡುವರು ಹೀಗೆ ಬೆಳೆಯಲು ಬಿಟ್ಟು ಕೂದಲು ನೀಳವಾಗಿ ಬೆಳೆದು ಸಾಧಾರಣವಾಗಿ ಎರಡು ಮೂರು ಮಳ ಉದ್ದವಿರುವುದು.

ಹೆಂಗಸರು ಪಾದವನ್ನು ಬೆಳೆಸುವುದಿಲ್ಲ. ಪಾದವು ಎಷ್ಟು ಚಿಕ್ಕದಾಗಿದ್ದರೆ ಅಷ್ಟು ಚಂದವೆಂದು ಅರಿತಿರುವುರು. ಚೀನದ ಹೆಂಗಸರು ಹೆಜ್ಜೆಯನ್ನು ಊರಿ ಗಂಭೀರವಾಗಿ ನಡೆಯುಲಾರರು ನಡೆಯುವಾಗ ಕುಪ್ಪಳಿಸಿಕೊಂಡು ಬೀಳುವ ತೆರದಿ

ಬದನ್ನು ವಿವರಿಸು 1 ನಾವು ಒಬ್ಬ ಮನುಷ್ಯನನ್ನು ನೋಡಿದರೆ, ಅವನ ಛಾಯೆಯು ಕನ್ನಡಿಯಂತಿರುವ ನಮ್ಮ ಕಣ್ಣನ್ನು ಪ್ರವೇಶಿಸಿ ಅಲ್ಲಿಂದ ಹಿಂದಕ್ಕೆ ತಳ್ಳಲ್ಪಡುವದರಿಂದ ಆ ಮನುಷ್ಯನು ನಮಗೆ ಕಾಣುತ್ತಾನೆ. ಹೀಗೆಯೇ ನಾವು ಕನ್ನಡಿಯಲ್ಲಿ ನೋಡಿಕೊಂಡರ ನಮ್ಮ ದೇಹದ ಛಾಯೆಯು ಕನ್ನಡಿಯಲ್ಲಿ ಪ್ರವೇಶಿಸಿ, ಮುಂದಕ್ಕೆ ಹೋಗದಂತೆ ವರತೆಯಿಂದ ತಡೆಯಲ್ಪಡುತ್ತದೆ. ಇತರರನ್ನು ನೋಡುವಂತೆ ನಾವು ಆಬಾಗುಯನ್ನು ನೋಡುವದರಿಂದ ನಮ್ಮನ್ನು ನಾವು ನೋಡಿಕೊಂಡ ಹಾಗಾಗುತ್ತದೆ

1 ಒಂದು ಚಂಡನ್ನು ಗೋಡೆಯಮೇಲೆ ಎಸೆದು. ಅದು ಹಿಂದಕ್ಕೆ ಪುಟಬರುವದನ್ನು ಉದಹರಿಸುವದು.

ಗಣಿತ

1 ನೋಟ್ (1) ಒಂದು ಪದಾರ್ಥದ ಅರ್ಘವನ್ನು 6 ಪಾಲು ಮಾಡಿ, ಅಂಥಾ 5 ಭಾಗಗಳನ್ನು ತೆಗೆದುಕೊಂಡರೆ, ಆ ಪದಾರ್ಥವನ್ನು 12 ಪಾಲು ಮಾಡಿ 5 ಭಾಗವನ್ನು ತೆಗೆದುಕೊಂಡಂತಾಗುವದು. ಉದಾಃ—$\frac{1}{2}$ ರೂಪಾಯನ್ನು 6 ಭಾಗ ಮಾಡಿ 5 ಭಾಗ ತೆಗೆದುಕೊಂಡರೆ 20 ದುಡ್ಡುಗಳಾಗುವುವು. ಇದು 1 ರೂಪಾಯಿನಲ್ಲಿ $\frac{5}{12}$ ಅಂಶವಾಗಿದೆ.

ಒಂದು ಸಂಖ್ಯೆಯು $\frac{13}{18}$ ಅಂಶವು (ಅದರ $\frac{1}{2}$ ರ $\frac{5}{6}+40\frac{1}{3}$) ಕ್ಕೆ ಸಮ.

$\therefore$ ಅದರ $\left(\frac{13}{18}-\frac{5}{12}\right)$ ಅಂಶವು $40\frac{1}{3}$.

$\therefore$ $\frac{11}{36}$ ಅಂಶಕ್ಕೆ $\frac{121}{3}$ ಅದರೆ

$\frac{1}{36}$ " $\frac{121}{3\times11}$ ಆಗುತ್ತದೆ.

ಇಂಥಾ 36 ಅಂಶ ಅಥವಾ ಆ ಸಂಖ್ಯೆಯು $\frac{\overset{11}{\cancel{121}}\times\overset{12}{\cancel{36}}}{\underset{1}{\cancel{3}}\times 11} = 132$ ಉತ್ತರ.

2 ಹಡಗು 60×60 ಸಕಂಡ್‌ಗಳಲ್ಲಿ $10\times1760\times3$ ಅಡಿಗಳ ದೂರ ಹೋಗುತ್ತದೆ.

∴ ,, ,, $\frac{10\times1760\times3}{60\times60}$ ಅಥವಾ $\frac{44}{3}$ ಅಡಿ ದೂರ ಹೋಗುತ್ತದೆ.

∴ ಧ್ವನಿಯು 1140 ಅಡಿಗಳ ದೂರ ಹೋದರೆ ಹಡಗು $\frac{44}{3}$ ಅಡಿ ದೂರ ಆಗುತ್ತೆ.

∴ ,, ,, $\frac{44}{3\times1140}$,,

∴ ,, $\frac{57\times1760\times3}{4}$,, ,, $\frac{44\times57\times1760\times3}{3\times1140\times4}$ ಅಥವಾ

968 ಅಡಿ (ಉತ್ತರ)

ಚೀ ಣ ರು .

ಚೀಣರು, ವಿಸ್ತಾರವಾದ ಚೀಣಾದೇಶದ ಜನರು ಇವರ ಸ್ವೈಬಣ್ಣ ಅರಸಿನ ಛಾಯೆಯಾಗಿರುವುದು. ಮುಖವು ನುಣುಪು, ಕಪೋಲವು ಉಬ್ಬಿ ಕಣ್ಣುಗಳು ಸಣ್ಣವಾಗಿಯೂ, ವಕ್ರವಾಗಿಯೂ ಇರುವವು. ತುಟಿಯು ಮುಖದಲ್ಲಿ ಕೂದಲು ಕಡಿಮೆ.

ಗಂಡಸರು ತಲೆಯಕೂದಲನ್ನೆಲ್ಲಾ ತೆಗೆಯಿಸಿ, ಹಿಂಭಾಗದಲ್ಲಿ ಸ್ವಲ್ಪ ಭಾಗ ಮಾತ್ರ ಕೂದಲನ್ನು ಬೆಳೆಯಲಿಕ್ಕೆ ಬಿಡುವರು. ಹೀಗೆ ಬೆಳೆಯಲು ಬಿಟ್ಟು ಕೂದಲು ನೀಳವಾಗಿ ಬೆಳೆದು ಸಾಧಾರಣವಾಗಿ ಎರಡು ಮೂರು ಮಳ ಉದ್ದವಿರುವುದು.

ಹೆಂಗಸರು ಪಾದವನ್ನು ಬೆಳೆಸುವುದಿಲ್ಲ. ಪಾದವು ಎಷ್ಟು ಚಿಕ್ಕದಾಗಿದ್ದರೆ ಅಷ್ಟು ಚಂದವೆಂದು ಅರಿತಿರುವರು. ಚೀಣದ ಹೆಂಗಸರು ಹೆಜ್ಜೆಯನ್ನು ಊರಿ ಗಂಭೀರವಾಗಿ ನಡೆಯುವರು. ನಡೆಯುವಾಗ ಕುಪ್ಪಳಿಸಿಕೊಂಡು ಬೀಳುವ ತೆರದಿ;

ಬದನ್ನು ವಿವರಿಸು. 1 ನಾವು ಒಬ್ಬ ಮನುಷ್ಯನನ್ನು ನೋಡಿದರೆ, ಅವನ ಛಾಯೆಯು ಕನ್ನಡಿಯಂತಿರುವ ನಮ್ಮ ಕಣ್ಣನ್ನು ಪ್ರವೇಶಿಸಿ ಅಲ್ಲಿಂದ ಹಿಂದಕ್ಕೆ ತಳ್ಳಲ್ಪಡುವದರಿಂದ ಆ ಮನುಷ್ಯನು ನಮಗೆ ಕಾಣುತ್ತಾನೆ. ಹೀಗೆಯೇ ನಾವು ಕನ್ನಡಿಯಲ್ಲಿ ನೋಡಿಕೊಂಡರೆ ನಮ್ಮ ದೇಹದ ಛಾಯೆಯು ಕನ್ನಡಿಯಲ್ಲಿ ಪ್ರವೇಶಿಸಿ, ಮುಂದಕ್ಕೆ ಹೋಗದಂತೆ ವರತೆಯಿಂದ ತಡೆಯಲ್ಪಡುತ್ತದೆ. ಇತರರನ್ನು ನೋಡುವಂತೆ ನಾವು ಛಾಯೆಯನ್ನು ನೋಡುವದರಿಂದ ನಮ್ಮನ್ನು ನಾವು ನೋಡಿಕೊಂಡ ಹಾಗಾಗುತ್ತದೆ.

|| ಒಂದು ಚೆಂಡನ್ನು ಗೋಡೆಯಮೇಲೆ ಎಸೆದು ಅದು ಹಿಂದಕ್ಕೆ ಪುಟಿಬರುವದನ್ನು ಗಮನಿಸುವದು.

ಗಣಿತ

1 ನೋಟ್ (1) ಒಂದು ಪದಾರ್ಥದ ಅರ್ಧವನ್ನು 6 ಪಾಲು ಮಾಡಿ, ಅಂಥಾ 5 ಭಾಗಗಳನ್ನು ತೆಗೆದುಕೊಂಡರೆ, ಆ ಪದಾರ್ಥವನ್ನು 12 ಪಾಲು ಮಾಡಿ 5 ಭಾಗವನ್ನು ತೆಗೆದುಕೊಂಡಂತಾಗುವದು. ಉದಾಃ—$\frac{1}{2}$ ರೂಪಾಯನ್ನು 6 ಭಾಗ ಮಾಡಿ 5 ಭಾಗ ತೆಗೆದುಕೊಂಡರೆ 20 ದುಡ್ಡುಗಳಾಗುವುವು. ಇದು 1 ರೂಪಾಯಿನಲ್ಲಿ $\frac{5}{12}$ ಅಂಶವಾಗಿದೆ.

ಒಂದು ಸಂಖ್ಯೆಯು $\frac{13}{18}$ ಅಂಶವು (ಅದರ $\frac{1}{2}$ ರ $\frac{5}{6}$ + 40 $\frac{1}{3}$) ಕ್ಕೆ ಸಮ.

$\therefore$ ಅದರ $\left(\frac{13}{18} - \frac{5}{12}\right)$ ಅಂಶವು 40 $\frac{1}{3}$.

$\therefore$ $\frac{11}{36}$ ಅಂಶಕ್ಕೆ $\frac{121}{3}$ ಆದರೆ

$\frac{1}{36}$ " $\frac{121}{3\times11}$ ಆಗುತ್ತದೆ.

ಏದನೆ ತರಗತಿ ವಾರ್ಷಿಕ ಪ್ರಾರತಪರೀಕ್ಷೆ, ಮೈ

ಇಸವಿ ಜುಲೈ ತಾ॥ ನೇ ಮಂಗಳವಾರ—ಘಂಟೆ ಂ೦ರಿಂದ ೧೧ರವರಿಗೆ

ಚರಿತ್ರೆ, ಭೂಗೋಳ ಮತ್ತು ನಕ್ಷೆ ಬರೆಯುವದು.

(ಮು. ವಿ —Iಮತ್ತು IIನೇ ಭಾಗಗಳನ್ನು ಬೇರೆಬೇರೆಯಾಗಿ ಬರೆಯಬೇಕು,

Iನೇ ಭಾಗ.

I a ನಾವುಗಳು ವಾಸವಾಡುವ ಭೂಭಾಗಕ್ಕೆ ಹಿಂದೂದೇಶವೆಂದು ಹೆಸರು ಹ್ಯಾಗೆ ಬಂತು ? 2 ಈ ದೇಶದಲ್ಲಿ ಪೂರ್ವದಿಂದಲೂ ವಾಸವಾಗಿದ್ದ ಕಾಡುಜನಗಳ ಮೂರು ಪಂಗಡಗಳು ಯಾವವು ?

b 1 ಮೆಗಾಸ್ತಿನೀಸ್ ಎಂಬ ರಾಯಭಾರಿಯು ಲೇಖನದಿಂದ ತಿಳಿದುಬರುವ ೬ ವಿಧ ಕೋಶಾಧಿಕಾರಿಗಳ್ಯಾರು ? 2 ಪಾಂಡವರ ದಿವಸದಲ್ಲಿ ಮಗಧರಾಜ್ಯದ ಧೊರೆ ಯಾರು ? 3 ಔತ್ತರೀಯ ಮಠವೆಲ್ಲಿರುವ್ವದು ?

c 1 ಶಿಲ್ಪಶಾಸ್ತ್ರ (ಕಲ್ಲುಕೆಲಸ ಮುಂತಾದ ಕುಶಲವಿದ್ಯೆಗಳು) ವನ್ನು ಬರೆದವ ನ್ಯಾರು ? 2 ವಿಕ್ರಮನ ಒಡ್ಡೋಲಗದ ನವಮಣಿಗಳಲ್ಲಿ ನಾಲ್ವರ ಹೆಸರುಗಳನ್ನು ಹೇಳಿರಿ ?

II a ಈ ಕೆಳಗಿನ ಪ್ರರಾತನ ರಾಜ್ಯಗಳನ್ನು ಜಯಿಸಿದ ಮಹಮೆದೀಯ ದೊರೆಗ ಳ್ಯಾರು ? ಮತ್ತು ಯಾವಾಗ ಜಯಿಸಿದ್ದು ?

1 ಬಂಗಾಳ. 2 ಪಂಜಾಬ್. 3 ಸಿಂಧುದೇಶ. 4 ಬಲಾಲ್ಲರಾಜ್ಯ.

b ಸುಲ್ತಾನ್ ಮಹಮೂದನ ೪ನೇ ವಿಜಯವನ್ನು ವಿವರಿಸಿ.

c 1 ಹಿಂದೂಸ್ಥಾನದಲ್ಲಿ ಆಳಿದ ಮೊದಲನೆ ಮಹಮ್ಮದೀಯರ ದೊರೆಯಾರು ? ೨ ಶತ್ರುಕ್ಷವಿಯಾ ಎಂಬ ಬಿರುದು ಪಡೆದಿರತಕ್ಕ ಮಹಮ್ಮದೀಯ ಧೊರೆಯಾರು ? ೩ ತುರುಕರಿಗೂ ಹಿಂದುಗಳಿಗೂ ನಡೆದ ಮೊದಲನೆ ವಿವಾಹವ್ಯಾವದು ? ೪ ಉಲಃಷ್ ಖಾನನನ್ನು ಯಾಕೆ ಏಲುದೊರೆ ಎಂದು ಹೇಳುತ್ತೀರಿ ?

III a ಫಿರೋಜಷಹನು ಮಾಡಿದ ಜನೋಪಕಾರ ಕಾರ್ಯಗಳ್ಯಾವವು ?

b ೧ ಸಂಗರಾಯನು ಸ್ನೇಹಿತನಾದ ಬಾಬರನನ್ನೇಲೆ ಯಾಕೆ ದ್ವೇಷಿಸಿದನು ?

ನಡೆಯುವರು. ಪಾದವು ಬೆಳೆಯದಂತೆ ಹೆಣ್ಣು ಹುಡುಗಿಯರಿಗೆ ಐದನೆಯ ವರ್ಷದಲ್ಲಿ ಕಬ್ಬಿಣದ ಪಾದರಕ್ಷೆಯನ್ನು ಮಾಡಿ ಹಾಕುವರು. ಇದನ್ನು ಯಾವಾಗಲೂ ಬಾಲ್ಯದಲ್ಲಿ ಹಾಕಿಯೇ ಇರೋಣದರಿಂದ ಪಾದವು ಬೆಳೆಯಲು ಅವಕಾಶವಿಲ್ಲ. ಪಾದದ ಮುಂಭಾಗವು (ಹೆಜ್ಜೆಯು) ಬೆಳೆಯಲು ದಾರಿಯಿಲ್ಲದೆ ರಕ್ತಕಟ್ಟಿ ಹಿಮ್ಮಡಿಯು ಊದಿಕೊಂಡಿರುವುದು.

ಹಿಂದೂದೇಶದ ಸ್ತ್ರೀಯರು ನಡುವನ್ನು ಸಣ್ಣಗೆ ಮಾಡಬೇಕೆಂದು ಹ್ಯಾಗೆ ಕಷ್ಟಪಡುವರೋ ಅದಕ್ಕೆ ನೂರುಪಾಲು ಹೆಚ್ಚಾಗಿ ಶ್ರಮಪಟ್ಟು ಪಾದವನ್ನು ಚೀನಾ ದೇಶದ ಸ್ತ್ರೀಯರು ಸಣ್ಣಗೆಮಾಡಿಕೊಳ್ಳುವರು. ತಮ್ಮ ಐಶ್ವರ್ಯಸೂಚಕವಾಗಿಯೂ ತಮ್ಮ ಕೈಯಿಂದಲೆ ಕೆಲಸವನ್ನು ಮಾಡುವರು.

ಚೀನರ ಉಡಿಗೆ :—ಗಂಡಸರು ಹೆಂಗಸರು ಸಾಮಾನ್ಯವಾಗಿ ದೊಡ್ಡದಾದ ಲಂಗದಂತೆ ಇರುವ ಅಂಗರೇಖನ್ನು ಹಾಕಿಕೊಳ್ಳುವರು. ಬಹಳ ಅಶ್ಲಕವಾದ ಲಂಗವೆಂದೇ ಹೇಳಬೇಕು. ಈ ಲಂಗವು ಕುತ್ತಿಗೆಯಿಂದ ಪಾದದವರೆಗೂ ಮುಚ್ಚಿಕೊಳ್ಳುವುದು. ಈ ಲಂಗದ ತೋಳುಗಳರಡು ಬಹಳ ಅಗಲವಾಗಿರುವುವು. ಸಾಧಾರಣ ಜನರೆಲ್ಲರೂ ಹತ್ತಿಯ ನೂಲಿನ ಬಟ್ಟೆಯ ಲಂಗವನ್ನು ಹಾಕಿಕೊಳ್ಳುವರು. ಐಶ್ವರ್ಯವಂತರು ರೇಶ್ಮೆಯ ಉಡುಪನ್ನು ಧರಿಸುವರು. ತಲೆಗೆ ಅಂಚೆಮೇಲೆ ಮಾಡಲ್ಪಟ್ಟ ಟೋಪಿಯನ್ನು ಹಾಕಿಕೊಳ್ಳುವರು. ಈ ಟೋಪಿಯ ಮೇಲುಭಾಗವು ಗೋಪುರದಂತೆ ಇರುವುದು. ಈ ಗೋಪುರದ ಅಂತ್ಯದಲ್ಲಿ ಗುಂಡುಗಳನ್ನು ಹಾಕಿರುವರು. ಜನರು ತಮ್ಮ ತಮ್ಮ ಮನಸ್ಸಿಗೆ ಬಂದ ಉಡಿಗೆಗಳನ್ನು ಹಾಕಿಕೊಳ್ಳಲು ಸ್ವಾತಂತ್ರ್ಯವಿಲ್ಲ. ಅವರ ಅವರ ಅಧಿಕಾರಕ್ಕೆ ತಕ್ಕ ಉಡಿಗೆಗಳನ್ನು ಹಾಕಿಕೊಳ್ಳಬೇಕು. ಧರಿಸಿರುವ ಬಟ್ಟೆಯು ಬಣ್ಣದಿಂದಲೂ ಟೋಪಿಯ ಮೇಲಣ ಗುಂಡಿ ಅಥವ ಗೋಲಿಯಿಂದಲೂ ಒಬ್ಬನ ಅಧಿಕಾರವನ್ನು ತತ್‌ಕ್ಷಣವೇ ಗೊತ್ತುಮಾಡಬಹುದು. ಗಣ್ಯವಾದ ದೊಡ್ಡದೊಡ್ಡ ಅಧಿಕಾರದಲ್ಲರತಕ್ಕವರೇ ಅರಸಿನವರ್ಣದ ರೇಶ್ಮೆಯ ಲಂಗವನ್ನು ಧರಿಸಿಕೊಳ್ಳುವರು. ಈ ಅಧಿಕಾರಿಗಳಿಗೆ 'ಮ್ಯಾನ್‌ಡರೀನ್ಸ್' ಎಂದು ಹೆಸರು, ಇವರುಗಳ ತಾರತಮ್ಯಸೂಚಕವಾದವು ಅವರವರ ಟೋಪಿಯಮೇಲಣ ಗುಂಡಿಗಳು, ಅಥವಾ ಗೋಲಿಗಳು. ಬಹಳ ದೊಡ್ಡಪದವಿಯಲ್ಲಿರತಕ್ಕವರ ಟೋಪಿಗೆ ಒಳ್ಳೆ ಕೆಂಪಿನ ಗುಂಡಿಗಳನ್ನು ಹಾಕಿರುವರು ; ಇವರಿಗೆ ಕಡಮೆಯಾದವರು ಹವಳದ ಗುಂಡಿಗಳನ್ನು ಹಾಕುವರು ; ಅವರಗಿಂತಲೂ ಕಡಮೆಯಾದವರು ಬೆಳ್ಳಿಯ ಗುಂಡಿಗಳನ್ನು ಹಾಕುವರು. ಬಿಳಿಬಟ್ಟೆಯು ಇವರಲ್ಲಿ ವ್ಯಸನಸೂಚಕವಾದುದು.

IV a ಸೊರಬ, ಶಿವಗಂಗೆ, ತಲಕಾಡು, ಶ್ರವಣಬಳಗುಳ, ಇವು ಯಾವಯಾ ಡಿಸ್ಟ್ರಿಕ್ಟುಗಳಲ್ಲಿವೆ? ಮತ್ತು ಇವುಗಳ ವಿಶೇಷಗಳೇನು?

b ೧ ಇಂಡಿಯಾದೇಶದ ಬಾಗಲು. ೨ ಇಂಡಿಯಾದೇಶದ ಬೀಗದಕೈ. ೩ ಇಂಡಿಯಾದೇಶದ ಲಿವರ್‌ಪೂಲ್. ಈ ವರ್ಣನೆಗಳು ಯಾವವುಗಳಿಗೆ ಏತಕ್ಕೆ ಸಲ್ಲುವವು?

V a ಗಂಗಾ, ಸಿಂಧು, ಕಾವೇರಿ, ಈ ನದಿಗಳು ಎಲ್ಲಿ ಹುಟ್ಟಿ ಯಾವಯಾವ ದೇಶಗಳಲ್ಲಿ ಹರಿದು, ಎಲ್ಲಿಗೆ ಬೀಳುತ್ತವೆ? ಮತ್ತು ಇವುಗಳ ಉಪನದಿಗಳನ್ನು, ಇವುಗಳ ಮೇಲಿರುವ ಮುಖ್ಯವಾದ ಪಟ್ಟಣಗಳನ್ನು ಹೇಳಿರಿ.

b ೧ ಅಸಿಯದ ಮೈನರ್ ಪಶ್ಚಿಮದಿಕ್ಕಿನಲ್ಲಿರುವ ಭೂಸಿರ. ೨ ಪ್ರಪಂಚದಲ್ಲಿ ಅತ್ಯಂತ ತಗ್ಗಿನಲ್ಲಿರುವ ಸರೋವರ. ೩ ಲೋಯರ್‌ಬರ್ಮ ರಾಜಧಾನಿ. ೪ ತಿಬಿಟ್ ದೇಶದ ಮುಖ್ಯನದಿ. ೫ ಟೊಕಿಯೊಬಂದರು. ೬ ಪಾರ್ಶಿದೇಶದ ಅತ್ಯಂತ ವಿಸ್ತಾರವಾದ ಪಟ್ಟಣ. ೭ ಅಮೆರಿಕಾ ಮತ್ತು ಕಾಮಶ್ಚಾಟಕ ಮಧ್ಯದಲ್ಲಿರುವ ದ್ವೀಪಗಳು. ಇವುಗಳ ಹೆಸರುಮಾತ್ರ ಹೇಳಿರಿ.

VI ಇಂಡಿಯಾದೇಶದ ಭೂಪಟವನ್ನು ಬರೆದು ಮುಖ್ಯವಾದ ಮೂರು ಪರ್ವತಗಳನ್ನೂ ಮೂರು ಬಂದರುಗಳನ್ನೂ ತೋರಿಸಿ. ತಿರುವನಂತಪುರ, ಬರೋಡ, ಕಲಕತ್ತಾ, ಶ್ರೀನಗರ, ಕತ್ಮಂಡು, ನಾಗಪುರ, ಸಿಂದ್‌ಹೈದರಾಬಾದ್ ಇವುಗಳನ್ನು ಗುರ್ತಿಸಿ.

ವಿದ್ಯಾಭ್ಯಾಸದ ಇಲಾಖೆಯ ಸರ್ಕ್ಯುಲರ್.

c ನಂಬರ್ ೩೭೨೯ ೧೮೯೭—೯೮ ಮೈಸೂರು ೯ನೇ ಜೂನ್ ೧೮೯೮

ಎಲ್ಲಾ ಸ್ಕೂಲ್‌ಗಳ ಡೆಪ್ಯುಟಿಇನ್‌ಸ್ಪೆಕ್ಟರ್‌ಗಳು ಹಿಂದುಸ್ಥಾನಿಸ್ಕೂಲ್ ವೆಸ್ಟ್ ಸರ್ಕಲ್ ಅಸಿಸ್ಟೆಂಟ್ ಡೆಪ್ಯುಟಿಇನ್‌ಸ್ಪೆಕ್ಟರ್ ಇವರುಗಳಿಗೆ—

Vನೇ ತರಗತಿಯಿಂದ ಲೋವರ್‌ಸೆಕೆಂಡರಿ ಪರೀಕ್ಷೆಗೆ ಹೋಗಲು ಅವಶ್ಯಕವಾಗಿರುವ ಅಟ್ಟೆಂಡೆನ್ಸ್ ಸರ್ಟಿಫಿಕೇಟನ್ನು ಫೆಬ್ರವರಿ ೧೫ರ ಲಾಗಾಯಿತು ಕೊಡುವುದಕ್ಕೆ IVನೇ ತರಗತಿಯಿಂದ Vನೇ ತರಗತಿಗೆ ವಿದ್ಯಾರ್ಥಿಗಳನ್ನು ಕಳುಹಿಸುವುದು ಸಾವಕಾಶವಾಗುವುದರಿಂದ ಅನಾವಶ್ಯಕವಾಲವ್ಯಂಟಾಯಿತೆಂದು ನಮಗೆ ಗೊತ್ತಾಗಿ

ಎ ಸರ್ ತಾಮಸರೊ ಎಂಬ ರಾಯಭಾರಿಯು ಇಂಡಿಯಾಕ್ಕೆ ಕಳುಹಿಸಲ್ಪಟ್ಟ ಉದ್ದೇಶವೇನು ?

c ೧ ಮೈಸೂರು ಮಹಾರಾಜರವಂಶಕ್ಕೆ ಒಡೆಯರೆಂದು ಬಿರುದು ಬರಲು ಕಾರಣವೇನು ? ಈ ಧೊರೆಗಳಲ್ಲಿ ಔರಂಗಜೇಬನಿಂದ ದಂತದ ಸಿಂಹಾಸನವನ್ನು ಪಡೆದವರ್ಯಾರು ?

IV a ೧ ಮಹಾಭಾರತವನ್ನು ಪಾರ್ಸಿಬಾಷೆಗೆ ತರ್ಜುಮೆ ಮಾಡಿದವರು ಯಾರು? ೨ ಗುಲಾಂಖಾದರನು ಮಾದಾಜೀಸಿಂಧ್ಯನಿಂದ ಯಾವ ಅಕೃತ್ಯಕ್ಕಾಗಿ ಶಿಕ್ಷಿಸಲ್ಪಟ್ಟನು?

b ೧ ಪೋರ್ಚುಗೀಸರಲ್ಲಿ ಹೆಸರುಗೊಂಡ ಇಂಡಿಯಾದ ಸರ್ವಾಧಿಕಾರಿ ಯಾರು ? ೨ ಪೂರ್ವತೀರದಲ್ಲಿ ಇಂಗ್ಲೀಷರು ಕಟ್ಟಿದ ಮೊದಲನೆ ಕೋಟಿ ಯಾವದು ?

c ಈ ಕೆಳಗಿನ ಯುದ್ಧಗಳು ಯಾರ್ಯಾರಿಗೆ ಯಾವಾಗ ನಡೆದವು ? ಮತ್ತು ಫಲಿತಾಂಶವೇನು ?

ಗನ್ನೇ ಬಕ್ವಾರ್, ಉದಯಗಿರಿ, ಭೂಪಾಲ್.

V ಈ ಕೆಳಗಿನ ಕಾಲಗಳಲ್ಲಿ ನಡೆದ ಒಂದೊಂದು ವಿಷಯವನ್ನು ತಿಳಿಸಿರಿ:—

ಕ್ರಿ. ಪೂ. ೫೬, ೪೩೨, ಕ್ರಿ. ಶ. ೧೦೯೪, ೧೩೯೪, ೧೪೩೨, ೧೬೧೧ ೧೬೬೪, ೧೭೬೬, ೧೭೬೪ ೧೭೬೪.

IIನೇ ಭಾಗ.

I ಕೊಲ್ಲಿ, ಜಲವಿಭಾಗಸ್ಥಳ, ನದೀಮೂಲ, ಅಗ್ನಿಪರ್ವತ, ಎಂದರೇನು ? ಒಂದೊಂದಕ್ಕೆ ಒಂದೊಂದು ಉದಾಹರಣೆಯನ್ನು ಕೊಡಿ.

II ೧ ಇಂಡಿಯಾದೇಶದಲ್ಲಿರುವ ಮಹೋಪಕಾರಿಣಿಯಾದ ನದಿ. ೨ ಮೈಸೂರು ಸಂಸ್ಥಾನಕ್ಕೆ ಉತ್ತರದಲ್ಲಿರುವ ಜಿಲ್ಲೆಗಳು. ೩ ಮೈಸೂರುಸಂಸ್ಥಾನಕ್ಕೆ ಅತ್ಯುನ್ನತ ಶಿಖರ. ೪ ಮೈಸೂರುಸಂಸ್ಥಾನದ ವಾಯವ್ಯಭಾಗದ ತೊರೆಗಳುಸೇರಿ ಆಗುವ ನದಿ. ೫ ಗೋದಾವರಿಯ ಉಪನದಿಗಳು—ಇವುಗಳನ್ನು ತಿಳಿಸಿರಿ.

III a ತಲಪರಿಗೆಗಳು ಮೈಸೂರಿನ ಯಾವಯಾವ ಡಿಸ್ಟ್ರಿಕ್ಟುಗಳಲ್ಲಿವೆ ? ಇವುಗಳಿಂದಾಗುವ ಪ್ರಯೋಜನವೇನು ?

b ಮದ್ರಾಸಾಧಿಪತ್ಯದ ಪಶ್ಚಿಮಭಾಗದ ಜಿಲ್ಲೆಗಳು ಯಾವವು ? ಅವುಗಳ ಭೂಮ್ಯುತ್ಪನ್ನಗಳೇನು ? ಅವುಗಳಲ್ಲಿರುವ ದೊಡ್ಡಪಟ್ಟಣಗಳು ಯಾವವು ?

ನಂತೆ ಹೆಚ್ಚುವ ಗ್ರೇಡ್‌ನಲ್ಲಿಯೂ, ಡೆ॥ ಇಕ್ಸ್‌ಪೆಕ್ಟರ್ ಮು॥ ರಾ॥ ಶ್ರೀ॥ ಎಂ. ರಾಮು ಸ್ವಾಮ್ಯಯ್ಯ ಬಿ. ಎ. ಯವರಿಗೆ ೧೦೦ರಿಂದ ೨೦೦ ರೂ॥ ವರಿಗೆ ವರ್ಷಕ್ಕೆ ೧೦ರೂ॥ ನಂತೆ ಹೆಚ್ಚುವ ಗ್ರೇಡಿನಲ್ಲಿಯೂ ಡೆ॥ ಇಕ್ಸ್॥ ಮು॥ ರಾ॥ ಕೆ. ಎಸ್. ವೀರಭದ್ರಯ್ಯ ಬಿ. ಎ. ಯವರಿಗೆ ಮೂರನೇಗ್ರೇಡ್ (೧೦೦ರೂ॥)ನಲ್ಲಿಯೂ ಕಾಯಂ ಆಯಿತು.

***

ಮದ್ರಾಸ್ ವೆ.ಡಿಕಲ್ ಕಾಲೀಜ್ (ವೈದ್ಯಶಾಲೆ)ನಲ್ಲಿ ಓದಲು ಮು॥ ರಾ॥ಶ್ರೀ॥ ಆರ್. ಸುಬ್ಬರಾವ್, ಸಾಲಿಗ್ರಾಂ ರಾಜಾರಾವ್, ಕೆ. ರಾಜಾರಾವ್ ಇವರುಗಳಿಗೆ ತಿಂಗಳಿಗೆ ೨೫ ರೂ॥ ಮೇರಿಗೆ ವಿದ್ಯಾರ್ಥಿವೇತನವು ಮೈಸೂರು ಸರ್ಕಾರದವರು ಕೊಡುವರು.

***

ತರೀಕೆರೆ ಆ॥ ವ॥ ಸ್ಕೂಲ್ ಹೆಡ್‌ಮ್ಯಾಸ್ಟರ್ ಮು॥ರಾ॥ಶ್ರೀ॥ ವೆಂಕಟರಾಮಯ್ಯನವರನ್ನು ಯಡೆಹಳ್ಳಿಗೂ, ಯಡೆಹಳ್ಳಿ ಸ್ಕೂಲ್ ಹೆಡ್‌ಮ್ಯಾಸ್ಟರ್ ಮು॥ ರಾ॥ ವೈ. ರಾಮರಾಯರನ್ನು ತರೀಕೆರೆಗೂ ಸದ್ಯಃ ಅವರು ರಜಾದಮೇಲೆ ಹೋಗುವುದರಿಂದ ಅವರ ಬದಿಲಿ, ತರೀಕೆರೆಗೆ ಮು॥ ರಾ॥ ಜಿ. ಅನಂತರಾಯರನ್ನೂ ನಿಯಮಿಸಿರುತ್ತಾರೆ.

***

ಹಾಸನದ ಹಿಂದೂಸ್ಥಾನಿ ಸ್ಕೂಲ್ ಹೆ॥ ಮೌ॥ ಸಯದ್‌ಹಸ್ಸೆನ್‌ರವರಿಗೆ ೭೦ರೂ॥ ನಿಂದ ೨೫ ರೂ ಗೆ ಪ್ರಮೋಷ್ ಆಗಿರುತ್ತೆ.

***

ತುಮಕೂರು ಸ್ಕೂಲ್ ಹಿಂದೂಸ್ತಾನಿ ಅಸಿಸ್ಟೆಂಟ್‌ಮ್ಯಾಸ್ಟರ್ ಹ॥ ಷೇಕ್ ಮೊಹದೀನ್‌ರವರನ್ನು ೨೦ ರೂ॥ ಸಂಬಳದಿಂದ ಮದ್ದಗಿರಿ ಹಿಂದೂಸ್ಥಾನಿ ಸ್ಕೂಲ್ ಹೆಡ್‌ಮ್ಯಾಸ್ಟರ್ ಕೆಲಸಕ್ಕೆ ವರ್ಗಾಯಿಸಿರುತ್ತಾರೆ.

ತಿಳಿದುಬಂದಿರುವ ಕಾರಣ. ಇಂತಹ ಅನಾನುಕೂಲಕ್ಕೆ ಅವಕಾಶಕೊಡದಂತೆ, ಡೆಪ್ಯುಟಿ ಇನ್‌ಸ್ಪೆಕ್ಟರ್‌ಗಳಿಗೆ, ನವೆಂಬರ್ ೧೫ ನೊಡಲು ಫೆಬ್ರವರಿ ೧೫ರಲ್ಲಿ, ತಮ್ಮ ಡಿಸ್ಟ್ರಿಕ್ಟಿಗೆ ಸೇರಿರುವ, ಲೋವರ್ ಸೆಕೆಂಡರಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಕಳುಹಿಸುವ ಎಲಾ ಆಂಗ್ಲೊವರ್ನಾಕ್ಯುಲರ್‌ಸ್ಕೂಲ್, ತಾಲ್ಲೂಕ್‌ಬೋರ್ಡ್ ಹೋಬಳೀಸ್ಕೂಲ್‌ಗಳನ್ನು ಪರೀಕ್ಷಿಸಿ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಕಳುಹಿಸಲು ಕಾರಣಾಂತರಗಳಿಂದ ಅನಾನುಕೂಲವಾದಲ್ಲಿ, ಪರೀಕ್ಷಿಸದೆ ನಿಂತ ಆಯಾಯಾ ಸ್ಕೂಲ್ ಹೆಡ್‌ಮ್ಯಾಸ್ಟರ್‌ಗಳಿಗೆ ಎಲ್ಲಾ ತರಗತಿಯ ಹುಡುಗರನ್ನು ಪರೀಕ್ಷಿಸಿ ಅರ್ಹರಾದವರನ್ನು ಮುಂದಿನ ತರಗತಿಗೆ ಕಳುಹಿಸುವಂತೆ ಡೆಪ್ಯುಟಿಇನ್‌ಸ್ಪೆಕ್ಟರವರು ಅಪ್ಪಣೆಕೊಡಬೇಕು. ತದನಂತರ ನಡೆಯುವ ಡೆಪ್ಯುಟಿಇನ್‌ಸ್ಪೆಕ್ಟರವರ ಪರೀಕ್ಷೆಯಲ್ಲಿ ಹೆಡ್‌ಮ್ಯಾಸ್ಟರಿಂದ ಮುಂದಣ ತರಗತಿಗೆ ಕಳುಹಿಸಿದ್ದ ವಿದ್ಯಾರ್ಥಿಗಳಲ್ಲಿ ಅನರ್ಹರಾಗಿ ಕಂಡು ಬಂದವರನ್ನು ಹಿಂದಣ ತರಗತಿಗೆ ಕಳುಹಿಸುವರು.

ರುಜು. ಹೆಚ್. ಜೆ ಭಾಭಾ,

ಇನ್‌ಸ್ಪೆಕ್ಟರ್‌ಜನರಲ್ ಆಫ್ ಎಡ್ಯುಕೇಷನ್.

ಸೂಚನೆಗಳು ಮತ್ತು ಸಮಾಚಾರಗಳು.

ಹೊಸದಾಗಿ ಕಟ್ಟಿರುವ ಮಹಾರಾಜರ ಕಾಲೇಜ್ ಸ್ಟೂಡೆಂಟ್ಸ್‌ಹೋಮಿಗೆ ಕುರ್ಚಿ ಮೇಜು ಬೀರು, ಮೊದಲಾದವುಗಳನ್ನು ತರಿಸುವುದಕ್ಕಾಗಿ ೨೯೯೩ ರೂಪಾಯಿಗಳು ಸ್ಯಾಂಕ್ಷನ್ ಆಗಿವೆ.

***

ಮೈಸೂರ್ ನಾರ್ಮಲ್‌ಸ್ಕೂಲ್ ಸ್ಟೂಡೆಂಟ್ಸ್‌ಹೋಮಿಗೆ ಕೊಡುತಿದ್ದ ಗ್ರಾಂಟನ್ನು ೩೫ರಿಂದ ೫೫ಕ್ಕೆ ಹೆಚ್ಚಿಸಿರುತ್ತೆ.

***

ಡೆಪ್ಯುಟಿಇನ್‌ಸ್ಪೆಕ್ಟರ್ ಮಾ|| ರಾ|| ಶ್ರೀ|| ಎಂ. ಶ್ರೀನಿವಾಸರಾವ್ ಬಿ. ಎ. ಯವರಿಗೆ ಈಗಿರುವ ೨೦೦ ರೂಪಾಯಿನಿಂದ ೩೦೦ ರೂ|| ವರಿಗೆ ವರ್ಧಕ್ಕೆ ೧೦ ರೂ||

ವಿದ್ಯಾದಾಯಿನಿ

ಭಾಗ ೬.] ಸೆಪ್ಟಂಬರ್ ೧೯೨೪. [ಸಂಚಿಕೆ ೯

ಎಡಿಟರವರ ನೋಟ್ಸ್.

ಸುಮಾರು ಸಾವಿರ ಚದುರಮೈಲುಗಳಿಗಿಂತ ಹೆಚ್ಚಾದ ವಿಸ್ತೀರ್ಣವುಳ್ಳ ಪುದುಕೋಟೆ ಸಂಸ್ಥಾನವು, ತಂಜಾವೂರು ಮತ್ತು ತಿರುಚನಾಪಲ್ಲಿಯ ದಕ್ಷಿಣದಿಕ್ಕಿನಲ್ಲಿ ಇರುವುದು. ಇಲ್ಲಿ ಸುಮಾರು ಮೂರುಲಕ್ಷ ಪ್ರಜೆ ಇರುವುದು. ಈ ಸಂಸ್ಥಾನದ ೧೯೨೬—೨೭ ನೇ ಇಸವಿಯ ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟಿನಿಂದ ಅಲ್ಲಿ ವಿದ್ಯಾಭಿವೃದ್ಧಿಯು ಚೆನ್ನಾಗಿ ನಡೆಯುತಲಿರುವುದೆಂದು ವ್ಯಕ್ತಗೊಳ್ಳುವುದು.

***

ಆ ಸಂಸ್ಥಾನಕ್ಕೆ ಸೇರಿದ ಪಾಠಶಾಲೆಗಳಲ್ಲಿ ಒಟ್ಟು ೭,೬೫೬ ಮಂದಿ ಬಾಲಕರೂ ೪೦೬ ಮಂದಿ ಬಾಲಕಿಯರೂ ವಿದ್ಯಾಭ್ಯಾಸ ಮಾಡುತಲಿರುವರು. ಈ ಸಂಖ್ಯೆಯಲ್ಲಿ ಬ್ರಾಹ್ಮಣೇತರರ ಸಂಖ್ಯೆಯೇ ಹೆಚ್ಚೆಂದು ತಿಳಿದು ಬರುವುದು. ಬಾಲಕಿಯರಲ್ಲಿ ಮುಸಲ್ಮಾನರ ಹೆಣ್ಣುಮಕ್ಕಳೇ ಹೆಚ್ಚಾಗಿರುವರೆಂದು ತಿಳಿಯಲು ಸಂತೋಷಿಸುವೆವು.

***

ಉತ್ತಮಜಾತಿಯುವರಿಗೋಸ್ಕರ ಇರುವ ಸರ್ಕಾರ್ ಗರ್ಲ್ಸ್‌ಸ್ಕೂಲಿನಲ್ಲಿ ಓದು, ಬರಹ, ಲೆಕ್ಕ, ಭೂಗೋಳ, ಚರಿತ್ರೆ ಮುಂತಾದವುಗಳನ್ನು ಹೇಳುವರಲ್ಲದೆ, ಸಂಗೀತ, ಹೊಲಿಗೆ, ಕಸೂತಿಕೆಲಸವನ್ನೂ ಕಲಿಸುವರು. ಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿರುವುದೆಂದು ತಿಳಿದುಬರುವುದು.

***

ಮದ್ರಾಸ್ ಅಧಿಸತ್ಯದಲ್ಲಿ ಈಗ ಇರುವ ಕೈಗಾರಿಕೆಯ ಪಾಠಶಾಲೆಗಳು ಬಹ

ಕಥೆ.



ಒಂದು ನಾಯಿಯು ಒಬ್ಬ ಕಟುಕರವನ ಅಂಗಡಿಯಿಂದ ಒಂದು ತುಂಡು ಮಾಂಸವನ್ನು ಕದ್ದುಕೊಂಡು ಓಡಿಹೋಗುತ ದಾರಿಯಲ್ಲಿ ಒಂದು ಸಣ್ಣ ಹೊಳೆಯನ್ನು ದಾಟುನಾಗ ನೀರಿನಲ್ಲಿ ತನ್ನ ನೆರಳನ್ನು ನೋಡಿತು. ಅದು ತನ್ನ ನೆರಳೆಂದು ತಿಳಿಯದೆ, ಬೇರೆಯೊಂದು ನಾಯಿಯು ಬಾಯಿಯಲ್ಲಿ ಜೆನ್ನಾದ ಮಾಂಸದ ತುಂಡನ್ನು ಕಚ್ಚಿಕೊಂಡಿರುವುದು, ಆ ತುಂಡನ್ನು ಹ್ಯಾಗಾದರೂ ಕಿತ್ತುಕೊಳ್ಳಬೇಕೆಂದು ನೀರಿನಲ್ಲಿ ಕಾಣುವ ನಾಯಿಯಮೇಲೆ ಬಾಯಿಯನ್ನು ದೊಡ್ಡದಾಗಿ ತರೆದುಕೊಂಡು ಘಕ್ಕನೆಬಿತ್ತು. ಆಗ ತನ್ನ ಬಾಯಿಯಲ್ಲಿದ್ದ ಮಾಂಸದ ತುಂಡೂ ಬಿದ್ದುಹೋಯಿತು. ಹೆಚ್ಚು ಆಶೆಗೆ ತಕ್ಕಫಲ.

ಕಥೆಯನ್ನು ಹೇಳಿದಮೇಲೆ ಕೇಳತಕ್ಕ ಪ್ರಶ್ನೆಗಳು :—

ನಾಯಿಗೆ ಮಾಂಸದತುಂಡು ಹ್ಯಾಗೆ ಸಿಕ್ಕಿತು ? ಎಲ್ಲಿಂದ ತಂದಿತು. ದಾರಿಯಲ್ಲಿ ಏನು ಸಿಕ್ಕಿತು ? ಆಗ ನೀರಿನಲ್ಲಿ ಏನು ಕಾಣಿಸಿತು? ಅದು ಏನೆಂದು ತಿಳಿದುಕೊಂಡಿತು? ಆಗ ಏನು ಮಾಡಿತು ? ಕೊನೆಗೆ ಏನು ಆಯಿತು ?

ವರು. ಆದುದರಿಂದ ಉಪಾಧ್ಯಾಯರು ವಿದ್ಯೆಯನ್ನು ದುಡ್ಡಿಗೆ ಇಷ್ಟೆಂದು ನಿಷ್ಕರ್ಷಿಸಿ ಮಾರವಂತೆ ತಮ್ಮ ಅಧೀನರಾಗಿರುವ ಬಾಲಕರನ್ನು 'ಪುರುಷ' ರನ್ನಾಗಿ ಮಾಡಲು ಯತ್ನಿಸಬೇಕು. ಉಪಾಧ್ಯಾಯರ ಕರ್ತವ್ಯವು ದೊಡ್ಡದು; ಅವರ ಕೆಲಸವು ಅಮೂಲ್ಯವಾದ್ದು ; ಅವರ ಜೀವನವು ಶ್ಲಾಘ್ಯವಾದದ್ದು.

***

ತಿದ್ದುವಿಕೆ.

ಬಾಲಕರಿಗೆ ಬುದ್ಧಿ ಸಂಸ್ಕಾರವಾಗುವಂತೆ ವಿಷಯಗಳನ್ನು ಬೋಧಿಸುವುದಕ್ಕಿಂತಲು, ಅವರನ್ನು ನಡತೆವಂತರನ್ನಾಗಿ ಮಾಡುವುದು ಮುಖ್ಯವೆಂಬುದು ಎಲ್ಲರಿಗೂ ಗೊತ್ತಾಗುವುದು. ಹೀಗೆ ಬಾಲಕರನ್ನು ನಡತೆವಂತರನ್ನಾಗಿ ಮಾಡುವುದು ತಟ್ಟನೆ ಆಗತಕ್ಕದ್ದಲ್ಲ. ಇದು ಕ್ರಮೇಣ ನಡೆಯಬೇಕು ಪ್ರತಿದಿನವೂ ಕ್ಲುಪ್ತವಾದಕಾಲದಲ್ಲಿ ವಿಹಿತವಾದ ಕೆಲಸಗಳನ್ನು ಅವರಿಂದ ಮಾಡಿಸುವುದರಿಂದ ಅವರಿಗೆ ಒಳ್ಳೇ ಕೆಲಸಗಳನ್ನು ಮಾಡುವುದರಲ್ಲಿ ಆಸಕ್ತಿಯನ್ನೂ, ಕೆಟ್ಟ ಕೆಲಸಗಳನ್ನು ಮಾಡುವುದರಲ್ಲಿ ಜಿಹಾಸೆಯನ್ನೂ ಉಂಟುಮಾಡಬೇಕು. ಅಂದರೆ ಬಾಲಕರಿಂದ ಕ್ರಮವಾಗಿ ಕೆಲಸ ಮಾಡಿಸುವುದರಿಂದ ಅವರು ಪಾಠಶಾಲೆಗಳನ್ನು ಬಿಟ್ಟು, ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಆರಂಭಿಸುವುದಕ್ಕೆ ಮುಂಚೆ ಅವರಲ್ಲಿ ಒಳ್ಳೇ ಶೀಲಗಳನ್ನುಂಟುಮಾಡಿರಬೇಕು. ಅಭ್ಯಾಸದಿಂದ ಅನುಸರಿಸಿ ಬಂದ ಗುಣಕ್ಕೆ ಶೀಲವೆಂದು ಹೆಸರು. ಬಾಲಕರು ವಿದ್ಯಾಭ್ಯಾಸವನ್ನು ಆರಂಭಿಸುವುದಕ್ಕೆ ಮುಂಚೆಯೆ ಅವರಲ್ಲಿ ಯಾವಕಾರಣದಿಂದಾಗಲಿ ಕೆಟ್ಟ ಗುಣಗಳು ನೆಲೆಸಿದ್ದರೆ ಅವುಗಳಿಗೆ ವಿರುದ್ಧವಾದ ಗುಣಗಳನ್ನು ಅವರಲ್ಲುಂಟುಮಾಡುವುದರಿಂದ ಅವುಗಳನ್ನು ಕ್ರಮೇಣ ನಿರ್ಮೂಲ ಮಾಡಬೇಕು.

ಒಳ್ಳೇ ಶೀಲಗಳು:—

1 ಸತ್ಯ—ಇದು ಒಳ್ಳೇ ನಡತೆಗೆ ಮೂಲವೆಂದು ಹೇಳಬಹುದು. ಇದನ್ನು ಬಾಲಕರಲ್ಲುಂಟುಮಾಡಿ, ಅದನ್ನು ಅವರಲ್ಲಿ ಅಭಿವೃದ್ಧಿಪಡಿಸಬೇಕಾದರೆ—

(i) ಉಪಾಧ್ಯಾಯರು ತಮ್ಮ ಚರ್ಯೆಯಿಂದ ಸತ್ಯವಾಗಿ ನಡೆಯಬೇಕೆಂದು ಬಾಲಕರಿಗೆ ತೋರಿಸಬೇಕು.

(ii) ಅಸತ್ಯವು ಕೆಟ್ಟದು, ಮತ್ತು ಹೇಡಿಗಳಿಗೆ ಉಚಿತವಾದುದು ಎಂಬ ಅಭಿ

ಳ ಕಡಮೆಯೆಂತಲೂ, ಆವಶ್ಯಕವಾಗಿ ಬೇಕಾಗುವಷ್ಟು ವಿದ್ಯೆಯನ್ನು ಕಲಿಸುತ ಇಲ್ಲವೆಂತಲೂ, ಕುಶಲರಾದ ವಿದ್ಯಾರ್ಥಿಗಳು ಬಂದು ಕೆಲಸವನ್ನು ಕಲಿಯುತ ಇಲ್ಲವೆಂತಲೂ, ಆದುದರಿಂದ ಕೈಗಾರಿಕೆಯ ಪಾಠಶಾಲೆಗಳನ್ನೆಲ್ಲಾ ಕ್ರಮಕ್ಕೆ ತರಬೇಕೆಂತಲೂ, ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ಪಾಠಶಾಲೆಯನ್ನು ಏರ್ಪಡಿಸಬೇಕೆಂತಲೂ ಮದ್ರಾಸ್ ಸರಕಾರದವರು ಯೋಚಿಸುತ್ತಿರುವರು. ಯಾವುದಾದರೂ ಒಂದುವಿಧವಾದ ಕೈಗಾರಿಕೆಯ ಕೆಲಸವನ್ನು ಪ್ರತಿಯೊಬ್ಬನೂ ಕಲಿತು ಇರುವುದು ಅತ್ಯಾವಶ್ಯಕವು. ಕೈಗಾರಿಕೆಯ ಕೆಲಸವನ್ನು ಕಲಿಯುವುದು ಅಗೌರವವೆಂದು ಭಾವಿಸಲಾಗದು. ಕೈಗಾರಿಕೆಯು ಕುಶಲವಿದ್ಯೆ ಎನ್ನಿಸಿಕೊಂಡಿರುವುದು. ಈ ವಿದ್ಯೆಯು ದೇಶದ ಏಳಿಗೆಗೆ ಮುಖ್ಯ ಕಾರಣವಾಗಿರುವುದು.

***

'ಗುರುವಿನಂತೆ ಶಿಷ್ಯನು' ಎಂಬ ನಾಣ್ನುಡಿಯು ಭಾವಗರ್ಭಿತವಾಗಿರುವುದು. ವಿದ್ಯಾರ್ಥಿಗಳಿಗೆ ಉಪಾಧ್ಯಾಯರ ಸಂಸರ್ಗವೇ ಹೆಚ್ಚಾಗಿರುವುದು. ಇದರಿಂದ ಉಪಾಧ್ಯಾಯನ ನಡೆನುಡಿಗಳನ್ನು ವಿದ್ಯಾರ್ಥಿಗಳು ಸ್ವಾಭಾವಿಕವಾಗಿ ಆಚರಿಸುವರು. ಸುಶೀಲನಾದ ಉಪಾಧ್ಯಾಯನು ಸೌಶೀಲ್ಯವನ್ನೇ ಬೀರುವನು. ಉಪಾಧ್ಯಾಯನು ದುರ್ಗುಣಿಯಾದರೆ ಬಹಳ ಕೇಡನ್ನು ಉಂಟುಮಾಡುವನು. ಇತರ ಕೆಲಸಗಾರರಂತೆ ಉಪಾಧ್ಯಾಯನನ್ನು ಎಂದಿಗೂ ಭಾವಿಸಲಾಗದು. ಕುಶಲನಾದ ಚಿನ್ನ ಬೆಳ್ಳಿಯ ಕೆಲಸದವನು ಸುಳ್ಳುಗಾರನಾಗಿರಬಹುದು; ಆದರೆ ಅವನಿಂದ ಮಾಡಲ್ಪಟ್ಟ ಕೆಲಸವು ಶ್ಲಾಘಾರ್ಹನಾಗಿ ಪರಿಣಮಿಸಬಹುದು. ಉಪಾಧ್ಯಾಯನು ಸುಳ್ಳುಗಾರನಾದರೆ ಅವನು ಕೆಲಸಕ್ಕೆ ಅನರ್ಹನಾಗುವನು. ಕಳ್ಳನಾದ ಮರಗೆಲಸದವನು ಚತುರವಾದ ಕೆಲಸವನ್ನು ಮಾಡಬಹುದು; ಆದರೆ ಕಳ್ಳ ಉಪಾಧ್ಯಾಯನು ಬಾಲಕರನ್ನು ವಿವೇಕಿಗಳಾಗಿ ಹೇಗೆವಾಡಾನು? ಇತರ ಕೆಲಸಗಾರರು ಜೀವರಹಿತವಾದ ಪದಾರ್ಥಗಳ ಮೇಲೆ ತಮ್ಮ ಕೌಶಲವನ್ನು ತೋರಿಸುವರಾದುದರಿಂದ ಆ ಕೆಲಸಗಾರರ ಕೌಶಲವು ಕಾಣಬರುವ ದೇಹೊರತು ಅವರಲ್ಲಿರುವ ದುರ್ಗುಣಗಳು, ಅವರು ಮಾಡಿದ ಕೆಲಸದಲ್ಲಿ ಕಾಣಬರಲು ಅವಕಾಶವಿಲ್ಲವು. ಉಪಾಧ್ಯಾಯನ ಕೆಲಸವಾದರೋ ಹಾಗೆ ಪರಿಣಮಿಸುವುದಿಲ್ಲವು. ಸಹಜೇತನರಾದ ಬಾಲಕರು ಇವನನ್ನು ಬಹು ಜಾಗ್ರತೆಯಲ್ಲಿ ಅನುಕರಿಸುವರು, ಸ್ವಲ್ಪ ಕಾಲದಲ್ಲಿ ಅನುಸರಿಸುವರು; ಹಾಗೆಯೇ ಕೆಲವೇಳೆ ಉಪಾಧ್ಯಾಯನನ್ನು ವಿಸರು

ಬಾಲಕರು ಪ್ರತಿದಿನವೂ ಸ್ಕೂಲಿಗೆ ಬರುವಂತೆ ಮಾಡುವುದಕ್ಕೆ ಕೆಲವು ಉಪಾಯಗಳಿವೆ. ಅವು ಯಾವುವೆಂದರೆ—

(i) ಸರಿಯಾಗಿ ಪಾಠಗಳನ್ನು ಬೋಧಿಸುವುದರಿಂದ ಪಾಠಶಾಲೆಯಲ್ಲಿ ನಡೆಯುವ ಕೆಲಸದಲ್ಲಿ ಬಾಲಕರಿಗೆ ಆದರವನ್ನುಂಟುಮಾಡುವುದು.

(ii) ಪ್ರತಿದಿನದಲ್ಲು ನಡೆಯುವ ಪಾಠಗಳಿಗೆ ಪರಸ್ಪರ ಸಂಬಂಧವಿದೆಯೆಂಬುದನ್ನು ತೋರಿಸಿ, ಎಂದು ಬಾರದಿದ್ದರೂ ನಷ್ಟವಾಗುವುದೆಂಬ ನಂಬಿಕೆಯನ್ನು ಬಾಲಕರಿಗುಂಟುಮಾಡುವುದು.

(iii) ಹಾಜರಿ ಗೈರ್‌ಹಾಜರಿ ರಿಜಿಸ್ಟರನ್ನಿಡುವುದು.

(iv) ಗೈರ್‌ಹಾಜರಾದ ಬಾಲಕರ ತಾಯಿತಂದೆಗಳಿಗೆ ಆ ವಿಷಯವನ್ನು ತಿಳಿಸುವುದು. ಇದರಿಂದ ತಂದೆತಾಯಿಗಳಿಗೆ ತಿಳಿಯದಂತೆ ಪಾಠಶಾಲೆಗೆ ತಪ್ಪಿಸಿಕೊಳ್ಳುವವರ ಸಂಖ್ಯೆಯು ಕಡಮೆಯಾಗುವುದು.

(v) ಬಾರದೆ ತಪ್ಪಿಸಿಕೊಳ್ಳುವವರು ತಾಯಿತಂದೆಗಳಿಂದ ಚೀಟಿಯನ್ನು ತರಬೇಕೆಂದು ಹೇಳುವುದು.

(vi) ಕ್ರಮವಾಗಿ ಬಂದವರಿಗೆ ಬಹುಮಾನವನ್ನು ಕೊಡುವುದು; ಹಾಗೆ ಬಾರದವರನ್ನು ದಂಡಿಸುವುದು.

ದಿನವೂ ಹೊತ್ತಿಗೆ ಸರಿಯಾಗಿ ಬರುವಂತೆ ಮಾಡುವುದಕ್ಕೆ ಉಪಾಯಗಳು:-

(i) ಉಪಾಧ್ಯಾಯರು ತಾವು ಹೊತ್ತಿಗೆ ಸರಿಯಾಗಿ ಬರುವುದು.

(ii) ಇಷ್ಟು ಹೊತ್ತಿನ ಮೇಲೆ ಬಂದವರು ಲೇಟ್ ಎಂಬುದನ್ನು ನಿಶ್ಚಯಿಸಿ, ಅದನ್ನು ಎಲ್ಲರಿಗೂ ತಿಳಿಸಿ, ಅದರಂತೆ ನಡೆಯಿಸುತ ಬರುವುದು. ಪಾಠಶಾಲೆಯಲ್ಲಿರುವ ಗಡಿಯಾರವು ಒಂದೊಂದುದಿನ ಒಂದೊಂದು ತೆರನಾಗಿರದಂತೆಮಾತ್ರ ನೋಡಿಕೊಳ್ಳಬೇಕು.

(iii) ಮೊದಲನೇ ಪಾಠವು ಮುಖ್ಯವಾದುದಾಗಿಯೂ, ಬಾಲಕರಿಂದ ಬಹಳವಾಗಿ ಅಪೇಕ್ಷಿಸಲ್ಪಟ್ಟದುದಾಗಿಯೂ ಇರುವುದು.

(iv) ಹೊತ್ತಾಗಿ ಬಂದವರನ್ನು ದಂಡಿಸುವುದು.

4 ಶುಚಿಯಾಗಿರುವುದು—ಇದು ಬಾಲಕರ ಆರೋಗ್ಯಕ್ಕೆ ಮಾತ್ರವಲ್ಲದೆ ಅವರ ಗಾಂಭೀರ್ಯಕ್ಕೂ ಅವಶ್ಯಕವಾದುದು. ಎಷ್ಟು ಬಡವನಾಗಿದ್ದರೂ ಜೊಕ್ಕಟವಿಲ್ಲ

ಸಾಮ್ರಾಯವನ್ನು ಅವರಲ್ಲುಂಟುಮಾಡಬೇಕು.

(iii) ಉಪಾಧ್ಯಾಯರು ತಾವೇ ಬಾಲಕರಲ್ಲಿ ದೋಷವನ್ನು ಆರೋಪಿಸಬಾರದು. ಸ್ಪಷ್ಟವಾಗಿ ಸುಳ್ಳುತನವು ಕಂಡಬರುವವರೆಗೂ ಯಾವನನ್ನೂ ನಿಂದಿಸಬಾರದು. ಹಾಗೆ ಕಂಡುಬಂದಾಗ ಉಪಾಧ್ಯಾಯರು ಆಶ್ಚರ್ಯವನ್ನು ತೋರಿಸಿ, ತಕ್ಕ ದಂಡನೆಯನ್ನು ವಿಧಿಸಬೇಕು.

(iv) ಒಬ್ಬ ಬಾಲಕನು ಸುಳ್ಳು ಹೇಳುವವನೆಂದು ಕಂಡುಬಂಪ ಮೇಲೆ ಕೆಲವು ದಿನಗಳವರೆಗೂ ಅವನನ್ನು ಪ್ರಾಮಾಣಿಕನನ್ನಾಗಿ ಎಣಿಸದೆ ಅವನ ಮಾತನ್ನು ನಂಬದಿರಬೇಕು.

(v) ಸುಳ್ಳು ಹೇಳಿದ್ದನ್ನು ನಿಜವೆಂದು ಒಪ್ಪಿಕೊಳ್ಳುವವರ ವಿಷಯದಲ್ಲಿ ಸ್ವಲ್ಪ ದಯೆಯನ್ನು ತೋರಿಸಬೇಕು. ಆದರೆ ಬಾಲಕರು ಬಾರಿಬಾರಿಗೂ ಹಾಗೇ ಮಾಡದಂತೆಮಾತ್ರ ನೋಡಿಕೊಳ್ಳಬೇಕು.

2 ದಯೆ—ಇದು ಮನುಷ್ಯನಿಗೆ ಅವಶ್ಯಕವಾದುದು. ಆದುದರಿಂದ ಈ ಗುಣವನ್ನು ಬಾಲಕರಲ್ಲಿ ಉಂಟುಮಾಡುವುದು ಅವಶ್ಯಕ. ಇದಕ್ಕೆ ಉಪಾಧ್ಯಾಯರು ಮುಖ್ಯವಾಗಿ ತಾವು ಬಾಲಕರ ವಿಷಯದಲ್ಲಿ ದಯೆಯುಳ್ಳವರಾಗಿರಬೇಕು. ಇದರಿಂದ ಬಾಲಕರು ತಾವು ಪರಸ್ಪರವಾಗಿ ದಯೆಯುಳ್ಳವರಾಗಿರುವಂತಾಗುವುದು. ಉಚಿತವಾದ ಸಮಯ ದೊರೆತಾಗೆಲ್ಲ ಕ್ಲೇಶದಿಂದಾಗುವ ಕೆಟ್ಟದ್ದನ್ನು ಜೆನ್ನಾಗಿ ತೋರಿಸುವುದರಿಂದಲು, ಕಥೆಮುಂತಾದವುಗಳನ್ನು ಸಮಯದಲ್ಲಿ ಹೇಳುವುದರಿಂದಲೂ ಬಾಲಕರು ದಯೆಯುಳ್ಳವರಾಗಿರುವಂತೆ ಮಾಡಬೇಕು. ಪ್ರಾಣಿಸಾಮಾನ್ಯದಲ್ಲು ಸಹ ಇದೇಪ್ರಕಾರವಾಗಿ ದಯೆಯುಳ್ಳವರಾಗಿರುವಂತೆ ಬಾಲಕರನ್ನು ಮಾಡುವುದೂ ಅವಶ್ಯಕ.

3 ಕ್ರಮವಾಗಿಯು ಮತ್ತು ಕ್ಲುಪ್ತಕಾಲದಲ್ಲೂ ಕೆಲಸ ಮಾಡುವುದು-ಪಾಠಶಾಲೆಗೆ ಬಾಲಕರು ಪ್ರತಿದಿನವೂ ತಪ್ಪದೆ ಬರುವಂತೆಯು, ಮತ್ತು ದಿನವೂ ಹೊತ್ತಿಗೆಸರಿಯಾಗಿ ಬರುವಂತೆಯೂ ಮಾಡಬೇಕು. ಹೀಗೆ ಮಾಡುವುದರಿಂದಾಗುವ ಪ್ರಯೋಜನಗಳು—

(i) ಪಾಠಶಾಲೆಯಲ್ಲಿ ಬೋಧನೆಯು ಸರಿಯಾಗಿ ನಡೆಯುವುದು.

(ii) ಪಾಠಶಾಲೆಯ ಕೆಲಸದಲ್ಲಿ ಆಸಕ್ತಿ ಹೆಚ್ಚಿ ಉಲ್ಲಾಸವುಂಟಾಗುವುದು.

(iii) ತರಗತಿಯಲ್ಲಿ ಮಧ್ಯೆಮಧ್ಯೆ ಗದ್ದಲವಿಲ್ಲದಿರುವುದರಿಂದ ಒಟ್ಟು ತಿದ್ದುವಿಕೆಯು ಜೆನ್ನಾಗಿರುವುದು.

ದುರದೃಷ್ಟ ಪರಿಪಾಕವು ಈರೀತಿಯಲ್ಲಿ ಪರಿಣಮಿಸಲು ಇವರು ಹಿಂದುಮುಂದು ತಿಳಿಯದೆ ಶೋಕಪರವಶರಾಗಿ ಕೆಲವು ದಿನಗಳು ಕಳೆದರು. ಇವರ ಸಹೋದರರು "ನಾನು ಕಾಲಾಧೀನನಾದರೆ ರಮಾಬಾಯಿಯವರಿಗೆ ಆಪ್ತಬಾಂಧವರಾರು ಎಂದು ಸ್ವಲ್ಪ ಸಂತಪಿಸಿ, ಕೊನೆಗೆ ಬಂಧುರಹಿತರಾದವರಿಗೆ ದೇವರೇ ಪರಮಬಂಧು" ಎಂದು ನಿಶ್ಚಯಿಸಿ, ಇವರಿಗೆ "ದೈವವನ್ನು ನಂಬಿರು; ಅವನೆ ನಿನ್ನನ್ನು ರಕ್ಷಿಸುವನು" ಎಂದು ಹೇಳಿ, ಸ್ವರ್ಗಸ್ಥರಾದರು.

ಪಂಡಿತರಮಾಬಾಯಿಯವರು ಇದುವರೆಗೂ ಅವಿವಾಹಿತರಾಗಿದ್ದರು. ಈಗ ಕಲ್ಕತ್ತೆ ಯೂನಿವರ್ಸಿಟಿ ಎಂ. ಎ., ಬಿ. ಎಲ್. ಪರೀಕ್ಷೆಯನ್ನು ಕೊಟ್ಟು ವಕೀಲರಾಗಿದ್ದ ಬಿ. ಬಿ. ಮಾಧವಿಯವರನ್ನು ವಿವಾಹಮಾಡಿಕೊಂಡರು. ಇವರೊಡನೆ ರಮಾಬಾಯಿಯವರು ೧೯ ತಿಂಗಳು ಬಾಳಿದರು. ಇವರುಗಳಿಗೆ ಒಂದು ಹೆಣ್ಣುಮಗುವು ಆಯಿತು. ಈ ಮಗುವಿಗೆ 'ಮನೋರಮೆ' ಎಂದು ನಾಮಕರಣವನ್ನು ಮಾಡಿದರು. ಕೆಟ್ಟವಿಧಿಯು ಪುನಃ ಇವರಲ್ಲಿ ಕೌರ್ಯವನ್ನು ತೋರಿಸಿತು. ಮ| ರಾ| ಬಿ. ಬಿ. ಮಾಧವಿಯವರು ವಾಂತಿಭೇದಿರೋಗದಿಂದ ಮೃತರಾದರು. ಹಿಂದುಗಳಲ್ಲಿ ಅಪುತ್ರವತಿಗಳಾದ ವಿತಂತುಗಳ ಅವಸ್ಥೆಯು ತಿಳಿದೇ ಇದೆ. ಇವರಿಗೆ ಪತಿವಿಯೋಗವಾದ ಕೂಡಲೆ ಸಕಲಬಂಧುಗಳು ಪ್ರತಿಭಟಿಸಿದರು. ಅಭಿಮಾನಿಗಳೇ ಇಲ್ಲದೇಹೋದರು. ಇವರು ವಿದ್ಯಾವತಿಯರಾಗಿದ್ದದ್ದರಿಂದಲು ಹಿಂದುಸಮಯಾಚಾರಗಳಲ್ಲಿ ಅಸಮಂಜಸವಾದವುಗಳನ್ನು ಉಲ್ಲಂಘಿಸಿ ನಡೆಯುತ್ತಿದ್ದದ್ದರಿಂದಲೂ ಇವರಿಗೆ ಶತ್ರುಗಳು ಬಹುಮಂದಿಯಾದರು. ಈ ಕಷ್ಟಕಾಲದಲ್ಲಿ ಇವರ ಸಹಾಯಕ್ಕೆ ಯಾರೂ ಬರಲಿಲ್ಲ. ಆಗ ಕಲ್ಕತ್ತೆಯಲ್ಲಿ ಆನಂದಬಾಯಿಜೋಷಿಯವರಿದ್ದರು. ಇವರು ಪಂಡಿತರಮಾಬಾಯಿಯವರನ್ನು ತಮ್ಮ ಮನೆಯಲ್ಲಿ ಬಂದು ಇರಬೇಕೆಂದು ಪ್ರಾರ್ಥಿಸಿದರು. ಆದರೆ ರಮಾಬಾಯಿಯವರು ಹೀಗೆ ಬಂದ ವಿಪತ್ತುಗಳಿಗೆ ಭಯಪಡದೆ ಧೈರ್ಯವನ್ನು ತಂದುಕೊಂಡು, ವೇದಶಾಸ್ತ್ರಗಳನ್ನು ಅಭ್ಯಾಸಮಾಡುತ್ತಾ ನಮ್ಮ ಸಮಯಾಚಾರಗಳು ಅವುಗಳಿಗೆ ಅನುಸಾರವಾಗಿರುವಂತೆ ಮಾಡಬೇಕೆಂದು ಉಪನ್ಯಾಸಗಳನ್ನು ಮಾಡುತ್ತಲೂ ಸ್ತ್ರೀಯರ ವಿಷಯದಲ್ಲಿರುವ ಅಧರ್ಮವಾದ ನಿರ್ಬಂಧಗಳನ್ನು ಉದಾಸ್ಪಟಿಸುತ್ತಲೂ ಇವುಗಳ ವಿಷಯದಲ್ಲಿ ಅನೇಕ ಗ್ರಂಥಗಳನ್ನು ಬರೆಯುತ್ತಲೂ ಬಂದರು. ಕೆಲವು ದಿನಗಳ ಮೇಲೆ ಇವರು ಬೊಂಬೈಸಮಾಜದ ಕಾರ್ಯಗಳಲ್ಲಿ ಭಾಗವಹಿಸಿ ತಮ್ಮ ಸಮಯಾಚಾರ ಸಂಸ್ಕಾರ

ದಿದ್ದರೆ ಮನುಷ್ಯನಿಗೆ ಸರಿಯಾದ ಮರ್ಯಾದೆಯು ದೊರೆಯುವುದಿಲ್ಲ. ಆದುದರಿಂದ ಈ ಶೀಲವನ್ನು ಬಾಲಕರಲ್ಲಿ ಹೇಗಾದರೂ ಉಂಟುಮಾಡಬೇಕು. ಇತರ ಶೀಲಗಳಂತೆ ಇದೂಸಹ ಕ್ರಮೇಣ ಉಂಟಾಗಬೇಕು. ಪ್ರತಿದಿನವೂ ಉಪಾಧ್ಯಾಯರು ಬಾಲಕನನ್ನು ನೋಡುತಿದ್ದು ಕೊಳೆಯಾಗಿರುವವರನ್ನು ಕಂಡು ಹಿಡಿದು ಅವರು ಹಾಗಿರದಂತೆ ಮಾಡುವುದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡಬೇಕು. ಉಪಾಧ್ಯಾಯರು ತಾವು ಜೊಕ್ಕಟವಾಗಿರಬೇಕು. ಕಾಗದವನ್ನು ಹರಿದು ಅಲ್ಲಲ್ಲೇ ಬಿಸಾಡುವುದು, ಶಾಯಿ ಚೆಲ್ಲುವುದು, ಗೋಡೆಯ ಮೇಲೆ ಬರೆಯುವುದು ಇಂಥ ದುಸ್ಸ್ವಭಾವಗಳನ್ನು ಬಾಲಕರಲ್ಲಿ ತಪ್ಪಿಸಬೇಕು. ಕಿಟಕಿ, ಬೆಂಚು, ಮೇಜು ಮುಂತಾದವುಗಳನ್ನು ಪ್ರತಿದಿನವೂ ಧೂಳು ಹೊಡೆಸಬೇಕು. ಪಾಠಶಾಲೆಯಲ್ಲು, ಪಾಠಶಾಲೆಯ ಸುತ್ತಲೂ ಕಸವು ಸ್ವಲ್ಪವೂ ಇಲ್ಲದಂತೆ ನೋಡಿಕೊಳ್ಳಬೇಕು. M. H.

ಪಂಡಿತೆ ರಮಾಬಾಯಿಯವರು.

ಪಂಡಿತರಮಾಬಾಯಿಯವರು ೧೮೭೭ರಲ್ಲಿ ಕಲ್ಕತ್ತೆಯನ್ನು ತಲಪಿದರು. ಆಗ ಅವರಿಗೆ ಹತ್ತೊಂಬತ್ತುವರುಷ ವಯಸ್ಸಾಗಿತ್ತು. ಇವರು ಮಾತಾಪಿತೃಗಳ ಶಿಕ್ಷೆಯಲ್ಲಿದ್ದುಕೊಂಡು ಅದ್ವಿತೀಯವಾದ ಪಾಂಡಿತ್ಯವನ್ನು ಸಂಪಾದಿಸಿದರು. ಇವರು ಮರಾಟಿ, ಕನ್ನಡ, ಹಿಂದುಸ್ಥಾನಿ ಮತ್ತು ಬಂಗಾಳಿ ಭಾಷೆಗಳನ್ನು ಅಭ್ಯಾಸಮಾಡಿ ಅವುಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿದರು. ಇವರ ತಂದೆಗಳು ಇವರಿಗೆ ಸಂಸ್ಕೃತದಲ್ಲಿ ಕ್ರಮವಾಗಿ ಪಾಠಗಳನ್ನು ಹೇಳಿ ರೂಢಮೂಲವಾದ ಪಾಂಡಿತ್ಯವನ್ನುಂಟುಮಾಡಿದರು ಕಲ್ಕತ್ತೆಯಲ್ಲಿ ಅನೇಕಪಂಡಿತರು ಇವರನ್ನು ಸಂಸ್ಕೃತದಲ್ಲಿ ಪರೀಕ್ಷಿಸಿ ಇವರ ಪಾಂಡಿತ್ಯವನ್ನು ನೋಡಿ ಬಹಳ ಆಶ್ಚರ್ಯಪಟ್ಟು ಇವರಿಗೆ ಸರಸ್ವತಿ ಎಂಬ ಅಸಾಧಾರಣವಾದ ಬಿರುದನ್ನು ಸಭಾಮುಖದಲ್ಲಿ ಕೊಟ್ಟರು. ಈ ಪ್ರತಿಷ್ಠೆಯು ಪಂಡಿತರಮಾಬಾಯಿಯವರಿಗೂ ಇವರ ಸಹೋದರರಿಗೂ ಬಹಳ ಸಂತೋಷವನ್ನುಂಟುಮಾಡಿತು. ಆದರೆ ಈ ಸಂತೋಷವು ಕ್ಷಣಭಂಗುರವಾಗಿ ಪರಿಣಮಿಸಿತು. ಕೆಲವು ದಿವಸಗಳಲ್ಲಿಯೇ ಇವರ ಸಹೋದರರಿಗೆ ಅನಾರೋಗ್ಯವುಂಟಾಗಿ ಅವರು ಮೃತಪಟ್ಟರು. ಪಂಡಿತರಮಾಬಾಯಿಯವರಿಗೆ ಹೀಗೇ ಒಬ್ಬೊಬ್ಬರಾಗಿ ಸವಿಾಪಬಂಧುಗಳೆಲ್ಲಾ ಕಾಲಾಧೀನರಾದರು. ಇವರ

ವಾಗಿ ಪರಿಣಮಿಸಿತು. ಅಮೆರಿಕಾಖಂಡದಲ್ಲಿ ವಿದ್ವಾಂಸರು ಅನೇಕರು ಇವರನ್ನು ಬಹಳವಾಗಿ ಸನ್ಮಾನಮಾಡಿದರು. ಅಮೆರಿಕಾದಲ್ಲಿ ವಿದ್ಯಾಭ್ಯಾಸದ ಏರ್ಪಾಡುಗಳು ಬಹಳ ಚೆನ್ನಾಗಿವೆ. ರಮಾಬಾಯಿಯವರು ಅಲ್ಲಿನ ವಿದ್ಯಾಭ್ಯಾಸಕ್ರಮಗಳನ್ನೆಲ್ಲಾ ಪರೀಕ್ಷಿಸಿ ನಮ್ಮ ದೇಶದ ಸ್ತ್ರೀವಿದ್ಯಾಭ್ಯಾಸವನ್ನು ಯಾವ ರೀತಿಯಲ್ಲಿ ಏರ್ಪಡಿಸಿದರೆ ನಮ್ಮ ದೇಶವು ಅಭಿವೃದ್ಧಿಗೆ ಬರುವದೋ ಅದನ್ನು ಗೊತ್ತುಮಾಡುವದರಲ್ಲಿ ಆಸಕ್ತರಾಗಿದ್ದರು. ಅಲ್ಲಿನ ಕಿಂಡರ್‌ಗಾರ್ಟ್ನ್ ವಾಠಕ್ರಮಗಳನ್ನೆಲ್ಲಾ ನೋಡಿ, ಇಂಡಿಯಾದೇಶದ ಸ್ತ್ರೀಯರಿಗೆ ಓದುಬರಹಗಳ ಮೂಲಕ ಬುದ್ಧಿಯನ್ನೂ ಧರ್ಮಾಧರ್ಮವಿವೇಚಕ್ಷಣೆಯನ್ನೂ ಕಲಿಸುವದಲ್ಲದೆ ದ್ರವ್ಯಾರ್ಜನೆಗೆ ಸಾಧಕವಾದ ಕುಶಲವಿದ್ಯೆಗಳನ್ನು ಮತ್ತು ಬೇಕಾದ ಕೈಗಾರಿಕೆ ಕೆಲಸಗಳನ್ನು ಕಲಿಸಬೇಕೆಂದು ನಿಶ್ಚೈಸಿಮಾಡಿದರು. ಅನೇಕ ಸ್ಕೂಲ್‌ಗಳು ಮತ್ತು ಕಾಲೇಜ್‌ಗಳಲ್ಲಿ ನಡೆಯುವ ಸ್ತ್ರೀಯರ ಪ್ರೌಢವಿದ್ಯಾಭ್ಯಾಸದ ಜೊತೆಗೆ ಸ್ತ್ರೀಯರೆ ಉಪಾಧ್ಯಾಯನಿಯರಾಗಿರುವ ಬಾಲಿಕಾಪಾಠಶಾಲೆಗಳನ್ನು ಎಲ್ಲಾ ಕಡೆಗಳಲ್ಲಿಯೂ ಏರ್ಪಡಿಸಿ ಸಾಮಾನ್ಯವಾದ ವಿದ್ಯಾಭ್ಯಾಸವು ಎಲ್ಲಾ ಬಾಲೆಯರಿಗೂ ದೊರೆಯುವಂತೆ ಮಾಡಬೇಕೆಂದು ಗೊತ್ತುಮಾಡಿದರು. ಈ ಅಭಿಪ್ರಾಯಕ್ಕೆ ಅನುಸಾರವಾಗಿ, ರಮಾಬಾಯಿಯವರು "ಆರ್ಯಮಹಿಳೆಯರ ಚರಿತ್ರೆ" ಎಂದು ಒಂದು ಗ್ರಂಥವನ್ನು ರಚಿಸಿ ಇದರಲ್ಲಿ ಹಿಂದುಸ್ತ್ರೀಯರ ಅಭಿವೃದ್ಧಿಗೆ ಬೇಕಾದ ಅಂಶಗಳನ್ನೆಲ್ಲಾ ವಿವರಿಸಿರುವರು. ಈ ಪುಸ್ತಕವು ಇವರ ಉದ್ದೇಶವನ್ನು ನೆರವೇರಿಸುವದಕ್ಕೆ ಬಹಳ ಸಹಾಯವನ್ನುಂಟುಮಾಡಿತು. ಈ ಗ್ರಂಥವನ್ನು ಪ್ರೊಫೆಸರ್ ಮಾಕ್ಸ್‌ಮುಲ್ಲರೆ ಮೊದಲಾದ ಅನೇಕ ವಿದ್ವಾಂಸರು ಬಹಳವಾಗಿ ಕೊಂಡಾಡುತ್ತಾರೆ. ಪಂಡಿತರಮಾಬಾಯಿಯವರು ೧೮೮೮ರಲ್ಲಿ ಇಂಡಿಯಾದೇಶಕ್ಕೆ ಬಂದು ತಮ್ಮ ಸಂಕಲ್ಪಗಳನ್ನೆಲ್ಲಾ ಜಾರಿಯಲ್ಲಿ ತರಲುಪಕ್ರಮಿಸಿದರು. ಇವರು ಇಂಡಿಯಾದೇಶಕ್ಕೆ ಬರುವಾಗ್ಗೆ ಅಮೆರಿಕಾಖಂಡದ ಸ್ತ್ರೀಯರು ಹಿಂದುಸ್ತ್ರೀಯರ ವಿದ್ಯಾಭ್ಯಾಸದ ಏರ್ಪಾಡುಗಳಿಗೋಸ್ಕರ ೬೦,೦೦೦ ರೂಪಾಯಿಗಳನ್ನು ಕೊಟ್ಟರು. ಈ ದ್ರವ್ಯವನ್ನೆ ಮೂಲಧನವನ್ನಾಗಿ ಇಟ್ಟುಕೊಂಡು ಅನಾಥರಾದ ವಿಧವೆಯರಿಗೆ ವಿದ್ಯಾಭ್ಯಾಸವನ್ನು ಮಾಡಿಸಿ ಅವರು ಸ್ವಶಕ್ತಿಯಿಂದ ಜೀವಿಸುವಂತೆ ಮಾಡುವದಕ್ಕೋಸ್ಕರ ಒಂದು ಪಾಠಶಾಲೆಯನ್ನು ಬೊಂಬಾಯಿನಲ್ಲಿ ಪ್ರತಿಷ್ಠಿಸಿ ಅಲ್ಲಿ ವಿದ್ಯಾಭ್ಯಾಸಮಾಡುವ ವಿಧವೆಯರಿಗೆ ಅವರವರ ಜಾತ್ಯನುಸಾರ ಅನ್ನೋದಕಗಳಿಗೂ ವಸ್ತ್ರವಾಸಗಳಿಗೂ ತಕ್ಕ ಏರ್ಪಾಡನ್ನು ಮಾಡಿದರು. ೧೮೮೯ರಲ್ಲಿ ಈ

ಸಂಬಂಧಪಟ್ಟ ಉಪನ್ಯಾಸಗಳನ್ನು ಪ್ರಾರಂಭಿಸಿದರು. ಪೂನಾದಲ್ಲಿ ಇವರ ಉಪನ್ಯಾಸಗಳಿಗೆ ಸಾಫಲ್ಯವುಂಟಾಗುತ್ತಾ ಬಂತು. ಅಲ್ಲಿ ಇವರು ''ಆರ್ಯಮಹಿಳಾಸಮಾಜ'' ಎಂಬ ಅಭಿಧಾನದಿಂದ ಒಂದು ಸಮಾಜವನ್ನು ಪ್ರತಿಷ್ಠಿಸಿದರು. ಈ ಸಮಾಜದ ಉದ್ದೇಶವು ಸ್ತ್ರೀಯರಿಗೆ ವಿದ್ಯಾಭ್ಯಾಸಮಾಡಿಸಬೇಕು, ಬಾಲ್ಯವಿವಾಹವನ್ನು ತಪ್ಪಿಸಬೇಕು'' ಎಂಬುವದಾಗಿತ್ತು.

ಪಂಡಿತರಮಾಬಾಯಿಯವರು ೧೮೮೨ರಲ್ಲಿ ಪೂನಾದಲ್ಲಿ ''ಎಡ್ಯುಕೇಷ್ಕಮಿಷ್ಕ''ನ ಮುಂದೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಇವರು ಸ್ತ್ರೀಯರಿಗೆ ಪಾಠವನ್ನು ಹೇಳುವದಕ್ಕೆ ಸ್ತ್ರೀಯರನ್ನೆ ಉಪಾಧ್ಯಾಯನಿಯರನ್ನಾಗಿ ತಯಾರು ಮಾಡತಕ್ಕ ವಿಷಯದಲ್ಲು ಬಾಲಿಕಾಪಾಠಶಾಲೆಗಳನ್ನು ಪರಿಕ್ಷಿಸುವದಕ್ಕೆ ಸ್ತ್ರೀಯರನ್ನೆ ಇನ್ಸ್ಪೆಕ್ಟ್ರಸ್‌ಗಳನ್ನಾಗಿ ನೇಮಿಸಬೇಕೆಂಬ ವಿಷಯದಲ್ಲು ಇಂಡಿಯಾದಲ್ಲಿ ಅನೇಕ ವಿಧವಾದ ರೋಗಗಳಿಂದ ಪಂತಪಿಸುತ್ತಾ ಗಂಡಸರ ಚಿಕಿತ್ಸೆಗೆ ಒಪ್ಪದೆ ಕಷ್ಟಪಟ್ಟು ಸಾಯುತ್ತಲೂ ಇರುವ ಆರ್ಯಸ್ತ್ರೀಯರ ಕ್ಷೇಮಾರ್ಥವಾಗಿ ಸ್ತ್ರೀಯರಿಗೆ ವೈದ್ಯಶಾಸ್ತ್ರವನ್ನು ಅಭ್ಯಾಸಮಾಡಿಸಿ ಅವರು ಸ್ತ್ರೀಯರಿಗೆ ವೈದ್ಯಮಾಡುವ ಶಕ್ತಿಯುಳ್ಳವರಾಗುವಂತೆ ಮಾಡತಕ್ಕ ವಿಷಯದಲ್ಲಿಯು ಮೊದಲಿಗ ಸಂಗತಿಗಳೆಲ್ಲಾ ಕಮಿಷ್ಕರವರು ಒಪ್ಪಿ ಮಾಡಿರತಕ್ಕ ಎಪ್ರಾಡುಗಳ ರಿಪೋರ್ಟು, ಈ ವಿಷಯವನ್ನು ಪರ್ಯಾಲೋಚಿಸಿ ನಮ್ಮ ಇಂಡಿಯಾಚಕ್ರವರ್ತಿನಿಯವರೆ ಮೊದಲಾದ ಅನೇಕರು ಮಾಡಿಸಿರುವ ಎಪ್ರಾಡುಗಳೂ ರಮಾಬಾಯಿಯವರ ದೇಶಾಭಿಮಾನವನ್ನು ಪ್ರದರ್ಶನಮಾಡುತ್ತವೆ.

ಪಂಡಿತರಮಾಬಾಯಿಯವರು ೧೮೮೩ರಲ್ಲಿ ವಿಲಾಯತಿಗೆ ದಯಮಾಡಿಸಿದರು. ಅಲ್ಲಿ ಚೆಲ್ಟನಾಂ ಎಂಬಸ್ಥಳದ ಹೆಂಗಸರ ಪಾಠಶಾಲೆಯಲ್ಲಿ ಸಂಸ್ಕೃತ ಉಪಾಧ್ಯಾಯನಿಯರಾಗಿದ್ದುಕೊಂಡು ಇಂಗ್ಲೀಷು, ಸಾಹಿತ್ಯ, ಗಣಿತಶಾಸ್ತ್ರ, ಭೌತಿಕಶಾಸ್ತ್ರ ಮೊದಲಾದವುಗಳನ್ನು ೧೮೮೫ರವರೆಗೂ ವ್ಯಾಸಂಗಮಾಡಿದರು. ಆಗ ಅಮೆರಿಕಾದಲ್ಲಿ ಬಾಬುಜೋಷಿಯವರು ಎಂ. ಡಿ. ಎಂಬ ವೈದ್ಯಶಾಸ್ತ್ರದ ಪರಿಕ್ಷೆಯನ್ನು ಕೊಟ್ಟರೆಂಬದಾಗಿಯು, ಅವರಿಗೆ ಡಿಗ್ರಿಕೊಡುತ್ತಾರೆಂಬದಾಗಿಯು ತಿಳಿದು ಆ ಡಿಗ್ರಿಕೊಡುವಾಗ್ಗೆ ಸರಿಯಾಗಿ ಅಮೆರಿಕಾಕ್ಕೆ ದಯಮಾಡಿಸಿದರು. ಇವರು ಅಮೆರಿಕಾಖಂಡಕ್ಕೆ ದಯಮಾಡಿಸಿದ್ದು ನಮ್ಮ ಭರತಖಂಡದ ಸ್ತ್ರೀಯರಲ್ಲಿ ಅನೇಕರ ಭಾಗ್ಯಪರಿಪಾಕವಾಗಿ

ಯರನ್ನು ಕರೆದುಕೊಂಡು ಹೋಗಿ ಅವರಿಗೆ ಅನ್ನವಸ್ತ್ರಗಳಿಗೆ ಏರ್ಪಾಡುಮಾಡಿ "ಖೇಡ್‌ಸೋರ್" ಎಂಬ ಸ್ಥಳದಲ್ಲಿಟ್ಟು ಅಲ್ಲಿ ಅವರ ವಿದ್ಯಾಭ್ಯಾಸಕ್ಕೋಸ್ಕರ ತಮ್ಮ ಸದನದ ಒಂದು ಶಾಖೆಯನ್ನು ಮೂಡಿದಾರೆ. ಅವರ ಜೀವನಾರ್ಥವಾಗಿ ರಮಾಬಾಯಿಯವರು "ಖೇಡ್‌ಸೋರ್"ನಲ್ಲಿ ೧೫೦ ಎಕ್ರೆ ಭೂಮಿಯನ್ನು ತೆಗೆದು ಅಲ್ಲಿ ಇವರಿಗೆ ಮನೆಗಳು ಪಾಠಶಾಲೆಗಳು ಮೊದಲಾದವುಗಳನ್ನು ಏರ್ಪಡಿಸಿದಾರೆ. ಈ ಪ್ರದೇಶವು ಜಲಸಮೃದ್ಧಿಯೂಗಿಯು ಫಲವತ್ತಾಗಿಯು ಇರುವದು. ಈ ಬಾಲೆಯರಿಗೆ ಜೀವನವಾಗುವದಲ್ಲದೆ ಇನ್ನು ನೂರಾರು ಮಂದಿಗಳ ಜೀವನಕ್ಕು ಯೋಗ್ಯನಾಗಿದೆ. ಪಂಡಿತರಮಾಬಾಯಿಯವರ ದೇಶಾಭಿಮಾನವು, ಭೂತದಯೆಯು, ಪರೋಪಕಾರ ಬುದ್ಧಿಯು ಅನ್ಯಾದೃಶವಾದದ್ದು. ಇವರು ಕಳೆದ ಸಂವತ್ಸರ ಪ್ಲೇಗ್ ಏರ್ಪಾಡುಗಳನ್ನು ಜಾರಿಗೆ ತರುವದರಲ್ಲಿ ಪ್ಲೇಗ್‌ಅಧಿಕಾರಿಗಳ ನಿರಂಕುಶಪ್ರವರ್ತನವನ್ನು ಪರೀಕ್ಷಿಸಿ ಉದ್ಘಾಟಿಸುವದರಲ್ಲಿ ತೋರಿಸಿದ ನಿರ್ಭಯವಾವ ಮನೋವ್ಯಕ್ತಿಯು ಅನನ್ಯಸಾಧಾರಣವಾಗಿರುವದಲ್ಲದೆ ಇವರು ಯುಕ್ತವಾದ ಕೆಲಸಗಳನ್ನು ಮಾಡುವದರಲ್ಲಿ ಸರ್ಕಾರಕ್ಕೆ ಮಾತ್ರವೆ ಅಲ್ಲದೆ ದೈವಕ್ಕೂ ಅಂಜುವದಿಲ್ಲವೆಂಬದಾಗಿಯು ಗೊತ್ತಾಗುತ್ತದೆ. ಇವರು ಕ್ರಿಸ್ತಮತವನ್ನವಲಂಬಿಸಿ ನಮ್ಮ ಹಿಂದುಗಳಲ್ಲಿ ಅನೇಕರ ಮೆಚ್ಚಿಕೆಯನ್ನು ಕಳೆದುಕೊಂಡರು. ಇವರು ಡಾಕ್ಟರ್‌ಆನಂದಬಾಯಿಯವರನ್ನು, ಹಿಂದುಮತದಿಂದ ಭ್ರಂಶವಮ್ಮ ಹೊಂದದೆ ಇದ್ದರೆ ನಮ್ಮ ದೇಶೀಯರಲ್ಲಿ ಅನೇಕರು ಇವರ ಪ್ರಯತ್ನಗಳೊಡನೆ ಸೇರಿ ಇವರ ಮನೋರಥಗಳೆಲ್ಲಾ ನೆರವೇರುವಂತೆ ಮಾಡಿ ಇವರಿಗೆ ಆಚಂದ್ರಾರ್ಕವಾದ ಕೀರ್ತಿಯುಂಟಾಗುವಂತೆ ಇವರ ಜೀವಮಾನಕಾಲದಲ್ಲೆ ಮಾಡುತ್ತಿದ್ದರು. ಇವರು ಕ್ರಿಸ್ತಮತವನ್ನು ಅವಲಂಬಿಸಿದಾಗ್ಯೂ ಇದರಿಂದ ಇವರ ದೇಶಾಭಿಮಾನದ ಕೆಲಸಗಳು ಇವರ ಮನೋಭಾವಕ್ಕು ಪ್ರಯತ್ನಗಳಿಗು ಅನುರೂಪವಾದ ಫಲವನ್ನು ಕೊಡದೆ ಇದ್ದಾಗ್ಯೂ ಇವರು ಮಾಡಿರತಕ್ಕ ಮಹತ್ಕಾರ್ಯಗಳು ದೇಶಾಭಿಮಾನಿಗಳಾದ ಎಲ್ಲರ ಕೃತಜ್ಞತೆಗೂ ಪಾತ್ರವಾದದ್ದಾಗಿವೆ.

ಎಂ. ವೆಂಕಟಕೃಷ್ಣಯ್ಯ.

ಸದನದಲ್ಲಿ ೬೭ ಜನಗಳು ವ್ಯಾಸಂಗಮಾಡುತ್ತಿದ್ದರು. ೧೮೯೦ರಲ್ಲಿ ಈ ಸದನವು ಅನೇಕ ಸ್ತ್ರೀವಿದ್ಯಾಭಿವೃದ್ಧಿಗಳ ಅಪೇಕ್ಷೆಗನುಸಾರವಾಗಿ ಪುನಾಕ್ಕೆ ವರ್ಗಾಯಿಸಲ್ಪಟ್ಟಿತು. ಅಲ್ಲಿ ಈ ಸದನಕ್ಕೆ ಅನುಕೂಲವಾದ ಕಟ್ಟಡಗಳನ್ನು ಉಪಕ್ರಮಿಸಿದರು. ಎರಡು ವರುಷಗಳೊಳಗಾಗಿ ಇವರು ಬಹಳ ವಸತಿಯೊಗಿರುವ ಪಾಠಶಾಲೆಯನ್ನು ನೂರಾರು ಜನಗಳಿಗೆ ವಾಸಯೋಗ್ಯವಾದ ಮನೆಗಳನ್ನು ಅವುಗಳಿಗೆ ತಕ್ಕ ಇತರ ಏರ್ಪಾಡುಗಳನ್ನು ಮಾಡಿದರು. ಇದಕ್ಕೆ ಅಮೆರಿಕಾ ಮೊದಲಾದ ದೇಶಗಳಿಂದ ದ್ರವ್ಯಸಹಾಯವು ಆಯಿತು. ಈ ಸದನದಲ್ಲಿ ವ್ಯಾಸಂಗಮಾಡುತಕ್ಕ ಸ್ತ್ರೀಯರ ಸಂಖ್ಯೆಯು ೬೦ರವರೆಗೆ ಬಂತು. ಈ ಪೈಕಿ ಬಾಲವಿತಂತುಗಳು ೪೯ ಮಂದಿ ಇದ್ದರು. ಈ ಪಾಠಶಾಲೆಯಲ್ಲಿ ಸಂಸ್ಕೃತ, ಇಂಗ್ಲೀಷು, ಮರಾಟಿ, ಕಿಂಡರ್‌ಗಾರ್ಟನ್ ಮೊದಲಾದವುಗಳನ್ನು ಹೇಳುತ್ತಾರೆ. ವಿದ್ಯಾರ್ಥಿನಿಯರೆ ಭೋಜನಶಾಲೆಯ ವಿಚಾರಣೆಗಳನ್ನು ಮಾಡಿಕೊಂಡು ಬಹಳ ವಿಚಕ್ಷಣೆಯಿಂದ ಕೆಲಸಗಳನ್ನು ನಡೆಸುತ್ತಾರೆ. ಪಾಠಗಳು ಮುಗದಮೇಲೆ ಈ ವಿತಂತುಗಳೆಲ್ಲರು, ತೋಟಗಳನ್ನು ಅಗೆದು ತರಕಾರಿ, ಹಣ್ಣು ಮೊದಲಾದವುಗಳ ವ್ಯವಸಾಯವನ್ನು ಮಾಡುವದಕ್ಕೋಸ್ಕರ ಅಗೆಯುವದು, ನೀರುಹಾಕುವದು ಗೊಬ್ಬರಕಟ್ಟುವದು ಇವೆ ಮೊದಲಾದ ಲಾಭಕರವಾದ ಕೆಲಸಗಳಿಂದ ಅಂಗಸಾಧನೆಗಳನ್ನು ಮಾಡಿಕೊಳ್ಳುತ್ತಾ ಇದಲ್ಲದೆ ಸದನದ ಕೆಲಸಗಳಲ್ಲಿ ಎಲ್ಲರು ಶ್ರದ್ಧೆಯುಳ್ಳವರಾಗಿರುತ್ತಾರೆ. ಇದರಿಂದ ಎಲ್ಲರೂ ಪ್ರಾಯಿಕವಾಗಿ ಅರೋಗದೃಢಕಾಯರಾಗಿರುತ್ತಾರೆ. ಇದಲ್ಲದೆ ಈ ವಿತಂತುಗಳೆಲ್ಲರು ವೈದ್ಯಶಾಸ್ತ್ರಾಭ್ಯಾಸಮಾಡುತ್ತಾರೆ. ಇವರಲ್ಲಿ ಯಾರು ಖಾಯಲೆಯಾದಾಗ್ಯೂ ಇತರರು ಚಿಕಿತ್ಸೆಯನ್ನು ಶುಶ್ರೂಷೆಯನ್ನು ಶಾಸ್ತ್ರೋಕ್ತಪ್ರಕಾರ ಮಾಡುತ್ತಾರೆ ಈ ಸದನಕ್ಕೆ ಕನ್ಯೆಯರು ಅನೇಕರು ಸೇರಿದಾರೆ. ಅವರಿಗೆಲ್ಲಾ ವಿದ್ಯಾಭ್ಯಾಸವನ್ನು ಮಾಡಿಸುವದಲ್ಲದೆ ಗುರುಹಿರಿಯರಲ್ಲಿ ಭಕ್ತಿಯು, ಪತಿಗಳಲ್ಲಿ ಅನುರಾಗವು ಮಕ್ಕಳಲ್ಲಿ ಪ್ರೇಮವು ಸರ್ವಭೂತಗಳಲ್ಲಿಯು ದಯೆಯು ಇರುವಂತೆ ಮನಸ್ಸು ಪರಿಪಕ್ವವಾಗುವಂತೆ ಮಾಡುತ್ತಾರೆ. ಇದಲ್ಲದೆ ಈ ವಿದ್ಯಾರ್ಥಿನಿಯರು ಆಲಸ್ಯವಿಲ್ಲದೆ ಕೆಲಸಮಾಡಬೇಕೆಂಬ ಕುತೂಹಲವುಳ್ಳವರಾಗುತ್ತಾರೆ. ಕಳೆದವರುಷ ಈ ಸದನದಲ್ಲಿ ಎಪ್ಪತ್ತು ಜನ ವಿತಂತುಗಳಿದ್ದರು. ಈಗ ಕೊಂಚಕಾಲದ ಕೆಳಗೆ ಉತ್ತರದೇಶದಲ್ಲಿ ಕ್ಷಾಮವುಂಟಾಯಿತಷ್ಟೆ. ಈ ಕ್ಷಾಮಕಾಲದಲ್ಲಿ ಅನೇಕ ಪ್ರಜೆಗಳು ನಷ್ಟವಾದರು. ಆಗ ಪಂಡಿತರವೂಬಾಯಿಯವರು ಮಧ್ಯಪ್ರಾಂತ್ಯಗಳಲ್ಲಿ ಅನ್ನೋದಕಗಳಿಲ್ಲದೆ ಸಾಯುತ್ತಲಿದ್ದ ಬಂಗಂಜನ ಬಾಲೆ

ಅಪ್ರಯುಕ್ತದೋಷಗಳನ್ನು ಹೇಳುವಾಗ ದುಶ್ಚ್ಯವನಾದಿಗಳನ್ನು ಗಣನೆಮಾಡಿರುವರು. ಅದೇ ಶಬ್ದಗಳನ್ನು ಜೈನರು ತಮ್ಮ ಗ್ರಂಥಗಳಲ್ಲಿ ವಿಶೇಷವಾಗಿ ಉಪಯೋಗಿಸಿರುವರು. ಇದರಿಂದಲೂ ಅವರಲ್ಲಿ ವಾಡಿಕೆಯೂಗಿರುವ ಶಬ್ದಗಳನ್ನುಪಹೋಗಿಸಬಹುದೆಂದು ತೋರುವದು. ಹೀಗೆ ಇನ್ನೂ ಚೆನ್ನಾಗಿ ವ್ಯಾಕರಣಗಳನ್ನೂ, ಕಾವ್ಯಾದಿಗ್ರಂಥಗಳನ್ನೂ ಪರಿಶೀಲಿಸಿ ನೋಡಿದರೆ ಪ್ರಯೋಗಕ್ಕೆ ನಿರ್ಬಂಧಪಡಿಸಿ ವ್ಯಾಕರಣಸಿದ್ಧವೆಂದು ಒಬ್ಬರಿಗೂ ತಿಳಿಯದ ಶಬ್ದಗಳನ್ನು ಪ್ರಯೋಗಿಸಿ ವಾಚಕರಿಗೆ ಕ್ಲೇಶವನ್ನುಂಟುಮಾಡಬೇಕೆಂದು ನಮ್ಮ ಪ್ರಾಚೀನರಿಗೆ ಅಭಿಪ್ರಾಯವಿದ್ದಂತೆ ತೋರುವದಿಲ್ಲ. ಆದರೆ ಕೆಲವರು ಕೇವಲ ನೈಘಂಟುಕವಾಗಿ ಕ್ಲಿಷ್ಟವಾದ ವ್ಯುತ್ಪತ್ತಿಯಿಂದ ಸಾಧಿತವಾದ ಶಬ್ದಗಳನ್ನೇ ಪ್ರಯೋಗಿಸಿ ಯಮಕಾದಿಗ್ರಂಥಗಳನ್ನು ಬರೆಯುವರು. ಅದು ಕವಿಗಳು ತಮ್ಮ ಪ್ರೌಢಿಮೆಯನ್ನು ತೋರಿಸುವದಕ್ಕಾಗಿಯೇ ಹೊರ್ತು ಇತರರು ಸುಲಭವಾಗಿ ತಿಳಿದುಕೊಳ್ಳಲಿ ಎಂಬ ಅಭಿಪ್ರಾಯದಿಂದಲ್ಲ. ಇನ್ನು ಕೆಲವರು ವ್ಯಾಕರಣವನ್ನುಲ್ಲಂಘಿಸಿದರೆ ಮಹಾಪಾಪವು ಸಂಭವಿಸುವದು ಎಂಬ ಶ್ರದ್ಧಾಜಾಡ್ಯದಿಂದ ಕೆಲವು ಕಠಿನಶಬ್ದಗಳನ್ನೇ ಉಪಯೋಗಿಸುವರು, ಇದು ನಮ್ಮ ಪ್ರಾಚೀನರ ಅಭಿಪ್ರಾಯವಲ್ಲವೆಂಬುದು ಮೇಲೆಹೇಳಿದ ಪತಂಜಲಿಮಹರ್ಷಿಗಳ ವಚನದಿಂದಲೇ ಸ್ಪಷ್ಟವಾಗುವದು.

ಹಾಗಾದರೆ ವ್ಯಾಕರಣವು ಸರ್ವಥಾ ಅನರ್ಥಕವೆಂದು ತಾತ್ಪರ್ಯವಲ್ಲ. ವ್ಯಾಕರಣವನ್ನು ಮೂಡದಿದ್ದರೆ ಲೋಕಪ್ರಯೋಗಗಳನ್ನು ಸುಲಭವಾಗಿ ತಿಳಿದುಕೊಳ್ಳುವದು ಅಸಾಧ್ಯವಾಗುವದು. ಆದುದರಿಂದ ಪ್ರಾಚೀನರು ವ್ಯಾಕರಣವನ್ನು ಬರೆದು, ಅದರಿಂದ ಈ ಶಬ್ದವು ಈ ಧಾತುವಿನಿಂದ ಹುಟ್ಟಿರುವದು ಇದಕ್ಕೆ ಇದೇ ಅರ್ಥವು, ಎಂಬ ಲೋಕಪ್ರಸಿದ್ಧಿಯನ್ನೇ ಬೋಧಿಸುವದರಿಂದ ಬಾಲಕರಿಗೆ ಕಾವ್ಯಾದಿಗಳನ್ನು ಓದಿ ಪ್ರಯೋಗಗಳನ್ನು ತಿಳಿದುಕೊಳ್ಳುವದಕ್ಕಿಂತಲೂ ಸುಲಭವಾಗಿ ಶಬ್ದಜ್ಞಾನ ಹುಟ್ಟುವದಕ್ಕೆ ವ್ಯಾಕರಣವೇ ಮುಖ್ಯಸಾಧಕವಾಗಿರುವದು.

ಹೀಗೆ ಕೆಲವು ಗ್ರಂಥಗಳಲ್ಲಿ ಮಾತ್ರ ನಿಂತು ಲೋಕವ್ಯವಹಾರಕ್ಕೆ ಬಾರದೆ ಇರುವ ಸಂಸ್ಕೃತಶಬ್ದಗಳಲ್ಲೇ ವರರುಚಿ ವಾಮನ ಮೊದಲಾದ ಪೂರ್ವಿಕರು ಪ್ರಯೋಗವಿಷಯದಲ್ಲಿ ಕಟ್ಟುಮಾಡದೆ ಮಹಾಕವಿಗಳು ಪ್ರಯೋಗಿಸಿರುವ ಶಬ್ದಗಳಿಗೂ ಸಾಧುತ್ವವನ್ನು ಹೇಳುವದಕ್ಕೆ ಕೈಲಾದಮಟ್ಟಿಗೂ ಯುಕ್ತಿಯನ್ನು ಹೇಳಿ ಸಾಲದ್ದಕ್ಕೆ

ವ್ಯಾಕರಣದ ಪ್ರಯೋಜನ.

ನಮ್ಮ ಪೂರ್ವಿಕರು ಅಂದರೆ, ರಾಮಾಯಣ, ಭಾರತ, ಭಾಗವತ ಮೊದಲಾದ ಗ್ರಂಥಗಳನ್ನು ಬರೆದ ವಾಲ್ಮೀಕಿ ಮೊದಲಾದ ಗ್ರಂಥಕಾರರು ಪ್ರಯೋಗಿಸಿರುವ ಕೆಲವು ಶಬ್ದಗಳನ್ನು ಸಾಧಿಸುವದಕ್ಕೆ ಈಗಿರುವ ವ್ಯಾಕರಣಗಳಿಂದ ಆಗದೆ ಇರುವದರಿಂದ ಪ್ರಪಂಚದಲ್ಲಿರುವ ಎಲ್ಲಾ ಶಬ್ದಗಳನ್ನೂ ವೈಯಾಕರಣರು ಸಂಗ್ರಹಿಸುವಂತೆಸೂತ್ರಗಳನ್ನು ಮಾಡಿಲ್ಲವೆಂಬದಾಗಿಯೂ, ವ್ಯಾಕರಣಗ್ರಂಥಗಳು ಹುಟ್ಟಿದಮೇಲೆ ಹುಟ್ಟಿದ ರಘುವಂಶ, ಮಾಘ, ಕುಮಾರಸಂಭವ, ಭಾರವಿ, ಭಟ್ಟಿಕಾವ್ಯ ಮೊದಲಾದ ಕಾವ್ಯಾದಿ ಗ್ರಂಥಗಳಲ್ಲಿ ಆ ವ್ಯಾಕರಣಕ್ಕೆ ವಿರುದ್ಧವಾದ ಎಷ್ಟೋ ಶಬ್ದಗಳು ಸಿಕ್ಕುವದರಿಂದ ಪ್ರಯೋಗಜ್ಞರಿಗೆ ವ್ಯಾಕರಣವು ಲೋಕರೂಢಿಯಲ್ಲಿರುವ ಶಬ್ದಗಳ ಪ್ರಯೋಗನಿರೋಧಕವಲ್ಲವೆಂಬದಾಗಿಯೂ ತೋರುವದು.

ಇಲ್ಲಿ ಕೆಲವರು, 'ನಿರಂಕುಶಾಃಕವಯಃ' ಎಂಬದಾಗಿ ಅಂಗೀಕರಿಸಿ ಕವಿಗಳು ಸ್ವೇಚ್ಛೆಯಾಗಿ ಪ್ರಯೋಗಿರುವವರು, ಅದು ಅಶುದ್ಧವೇಸರಿ, ಎಂದು ಹೇಳುವರು. ಆದರೆ ಅವು ಆಗಿನ ವ್ಯಾಕರಣಕ್ಕೆ ವಿರುದ್ಧವಾಗಿದ್ದರೂ ಲೋಕರೂಢಿಗೆ ವಿರುದ್ಧವಾಗಿರಲಾರದು. ಯಾತಕ್ಕೆಂದರೆ, ಕೆಲವು ಸಂದರ್ಭಗಳಲ್ಲಿ ಸಂಸ್ಕೃತಶಬ್ದಗಳು ಇದ್ದರೂ ಅವುಗಳನ್ನು ಬಿಟ್ಟು, ಕಹಾರ, ಲಹರೀ, ರಿಂಛೋಳೀ ಮೊದಲಾದ ದೇಶ್ಯಶಬ್ದಗಳನ್ನೂ ಉಪಯೋಗಿಸಿರುವರು, ಇದರಿಂದ ಕವಿಗಳು ಲೋಕವನ್ನನುಸರಿಸಿರುವರೆಂದು ತೋರುವದು.

ಮತ್ತು ವ್ಯಾಕರಣವನ್ನು ಬಲ್ಲವರೂ ತಾವು ಶಬ್ದಗಳನ್ನು ಪ್ರಯೋಗಿಸಬೇಕಾದರೆ ಅವನ್ನು ಎಲ್ಲರೂ ಪ್ರಯೋಗಿಸಿರುವರೋ ? ಇಲ್ಲವೋ ? ಎಂದು ಯೋಚಿಸೇ ಪ್ರಯೋಗಿಸಬೇಕು. ಆದುದರಿಂದ ಪ್ರಯೋಗಜ್ಞಾನಾರ್ಥವಾಗಿ ಮಹಾಕವಿಗಳು ಮಾಡಿರುವ ಗ್ರಂಥಗಳನ್ನು ಓದಬೇಕು. ಆದುದರಿಂದಲೆ, 'ಪ್ರಯೋಗಶರಣಾಃವೈಯಾಕರಣಾಃ' ಎಂದು ಹೇಳುವರು. ಆದುದರಿಂದ ವ್ಯಾಕರಣದಂತೆ ಇತರ ಗ್ರಂಥಗಳೂ, ಪ್ರಯೋಗಜ್ಞಾನಕ್ಕೆ ಸಾಧಕಗಳೆಂದು ಹೇಳಬೇಕಾಗುವುದು. ಹಾಗಾದರೆ ವ್ಯಾಕರಣಜ್ಞರೂ ಕವಿಗಳು ಪ್ರಯೋಗಿಸಿರುವದನ್ನೇ ನಾವು ತಿಳಿದು ಪ್ರಯೋಗಿಸಬೇಕು, ಎಂಬುವಪಕ್ಷದಲ್ಲಿ ವ್ಯಾಕರಣವು ನಿಷ್ಪ್ರಯೋಜನವೆಂದೇ ಹೇಳಬೇಕಾಗುವದು. ಮತ್ತು ಕಾವ್ಯಪ್ರಕಾಶ ಮೊದಲಾದ ಕೆಲವು ಲಕ್ಷಣಗ್ರಂಥಗಳಲ್ಲಿ

ವಸ್ತುಪಾಠ ಬೋಧನಕ್ರಮ.

ಭುಂಗಾರ (ಚಿನ್ನ)

ಬೋಧನಕ್ರಮ.	ನಿದರ್ಶನ.
I. ಸಿಕ್ಕುವ ಸ್ಥಳ:—	ಭಂಗಾರದ ಉಂಗುರವನ್ನು ಬಾಲಕರಿಗೆ ತೋರಿಸುವುದು.
1 ಲೋಹಗಳಲ್ಲೆಲ್ಲಾ ಉತ್ತಮವಾದ ಭಂಗಾರವು ಏಷಿಯೂ, ಯೂರೋಪ್, ಆಫ್ರಿಕಾ, ಆಸ್ಟ್ರೇಲಿಯೂ ಖಂಡಗಳಲ್ಲಿಯೂ ಕ್ಯಾಲಿಫೋರ್ನಿಯೂ ದೇಶಗಳಲ್ಲಿಯೂ ಹೇರಳವಾಗಿ ಸಿಕ್ಕುವುದು. 2	1 ಲೋಹಗಳಲ್ಯಾವವು? ಭಂಗಾರ, ಬೆಳ್ಳಿ, ತಾಂಬ್ರ, ಕಬ್ಬಿಣ, ಹಿತ್ತಾಳೆ, ಇವುಗಳನ್ನು ತೋರಿಸುವುದು.
ಮರಳಿನೊಡನೆ ವಿಶ್ರವಾಗಿ ನದಿಯ ದಡದಲ್ಲಿಯೂ, ಕಲ್ಲಿನೊಡನೆ ಬೆರೆತು ಭಂಗಾರವ ಗಣಿಗಳಲ್ಲಿಯೂ ಸಿಕ್ಕುವುದು. ಭಂಗಾರದ ಕಲ್ಲು ವಿಶೇಷವಾಗಿ ಸಿಕ್ಕುವ ಸ್ಥಳಕ್ಕೆ ಭಂಗಾರದ ಗಣಿಯೆಂದು ಹೆಸರು. 3	2 ಇವುಗಳು ಇರುವ ಸ್ಥಳಗಳನ್ನು ಭೂಪಠದಲ್ಲಿ ತೋರಿಸುವುದು.
	3 ಮೈಸೂರು ಸಂಸ್ಥಾನದಲ್ಲಿರುವ ಕೋಲಾರದ ಭಂಗಾರದ ಗಣಿಯನ್ನು ಜ್ಞಾಪಿಸಿ ಭೂಪಠದಲ್ಲಿ ಕೋಲಾರವಿರುವ ಸ್ಥಳವನ್ನು ತೋರಿಸುವುದು.
II. ಲಕ್ಷಣ:-	
4 ಭಂಗಾರವು ಅರಗಿನ ವರ್ಣವುಳ್ಳದ್ದು; ಕೆಂಪುವಿಶ್ರನಾದ ಅರಗಿನ ವರ್ಣವುಂಟು. ಭಂಗಾರವನ್ನು ಕರಗಿಸಬಹುದು, ಬಗ್ಗಿಸಬಹುದು, ಭಂಗಾರವು ಮೃದುನಾಗಿರುವುದು, ಭಾರವುಳ್ಳದ್ದು; ಎಷ್ಟುಕಾಲವಾದರೂ ತುಕ್ಕು ಹಿಡಿದು ಕೆಡುವುದಲ್ಲ. 5	4 ಭಂಗಾರವನ್ನು ಬಾಲಕರ ಕೈಗೆ ಕೊಟ್ಟು ಅವರಿಂದಲೆ ಅದರ ಬಣ್ಣವನ್ನು ಗುಣವನ್ನೂ ಹೇಳಿಸುವುದು.
	5 ಸ್ವಲ್ಪ ಹೆಚ್ಚುಕಡಮೆ ಈ ವೈಲಕ್ಷಣ್ಯಗಳುಳ್ಳ ಲೋಹಗಳನ್ನು ಬಾಲಕರಿಂದ ಹೇಳಿಸಬೇಕು.

ವಚನಗಳನ್ನು ಕಲ್ಪಿಸಿರುವರು. ಈಚೆಗೆ ಸಂಸ್ಕೃತದಲ್ಲಿ ಅಂಥಾ ಲಕ್ಷಣವನ್ನು ಕಲ್ಪಿಸುವದಕ್ಕೆ ಶಕ್ತರಾದ ಪಂಡಿತರು ಇಲ್ಲದ್ದರಿಂದಲೂ, ಸಂಸ್ಕೃತದಲ್ಲಿ ಮೊತನಾಡುವದು ಕಾರಣಾಂತರಗಳಿಂದ ನಿಂತುಹೋಗಿರುವದರಿಂದಲೂ, ಆ ಭಾಷೆಯು ವಿಶೇಷ ವ್ಯತ್ಯಾಸವಾಗದೆ ಇದ್ದಂತೆಯೇ ಇರುವದು.

ಇದನ್ನು ನೋಡಿ ದೇಶಭಾಷೆಗಳನ್ನೂ ಒಂದೇರೀತಿಯಲ್ಲಿ ಇರುವಂತೆ ಮಾಡಬೇಕೆಂದು ಪ್ರಯತ್ನಪಡುವರು. ಆದರೆ ಅವರ ಯತ್ನವು ಎಂದಿಗೂ ಸಫಲವಾಗಲಾರದು. ಒಂದುವೇಳೆ ಈಗಿನ ವ್ಯವಹಾರದಲ್ಲಿಲ್ಲದೆ ಗ್ರಂಥದಲ್ಲಿನೊತ್ರವಿರುವ ಭಾಷೆಗಳಿಗೆ ಇವರ ಕಟ್ಟುಗಳು ಉಪಯೋಗಿಸಬಹುದು. ಆದರೂ ಭಾಷಾವ್ಯಾಕರಣವನ್ನು ಬರೆದವರಿಗೆ ಇಂಥಾ ಅಭಿಪ್ರಾಯವಿದ್ದಂತೆ ತೋರುವದಿಲ್ಲ. ಹಾಗಿದ್ದರೆ ದರ್ಪಣದಲ್ಲಿ ಪ್ರಾಯಃ ಪ್ರಚುರತೆ, ಶಾಸನದಲ್ಲಿ ಬಹುಳ, ಆಕೃತಿಗಣ, ಮುಂತಾದ ಪದಗಳನ್ನು ಪ್ರಯೋಗಿಸುತ್ತಿರಲಿಲ್ಲ.

ಇದಂತಿರಲಿ, ಈಗ ನಾವು ಪ್ರಯೋಗಿಸಬೇಕಾದರೆ ಈಗಿನ ರೂಢಿಯಲ್ಲಿರುವ ಶಬ್ದಗಳನ್ನು ಬಿಟ್ಟು, ಪೂರ್ವಕವಿಗಳಿಂದ ಪ್ರಯುಕ್ತವಾಗಿ ಇರುವ ಶಬ್ದಗಳನ್ನೇ ಪ್ರಯೋಗಿಸಬೇಕೆ ? ಅಥವಾ ವ್ಯಾಕರಣವಿರುದ್ಧವಾಗಿದ್ದರೂ, ಪೂರ್ವಕವಿಗಳಿಂದ ಪ್ರಯುಕ್ತವಾಗಿರುವ ಶಬ್ದಗಳನ್ನೂ, ಈಗಿನ ರೂಢಿಯಲ್ಲಿರುವ ಶಬ್ದಗಳನ್ನೂ ಉಪಯೋಗಿಸಬಹುದೆ? ಅಥವಾ ಪೂರ್ವಕರು ಪ್ರಯೋಗಿಸದಿದ್ದರೂ ವ್ಯಾಕರಣಕ್ಕೆ ವಿಷಯವಾಗಿದ್ದರೆ ಸಾಕು ಎಂದು ಅಂಥಾ ಶಬ್ದಗಳನ್ನು ಪ್ರಯೋಗಿಸಬಹುದೆ ? ಎಂದರೆ ಪೂರ್ವಕವಿಗಳೂ ಪ್ರಯೋಗಿಸಿ ವ್ಯಾಕರಣಕ್ಕೂ ಸರಿಯಾಗಿರುವ ಶಬ್ದಗಳ ವಿಷಯದಲ್ಲಿ ಯಾವ ಆಕ್ಷೇಪಣೆಯೂ ಇರುವದಿಲ್ಲ. ಈಗಿರುವ ವ್ಯಾಕರಣಕ್ಕೆ ವಿರುದ್ಧವಾಗಿ ರೂಢಿಯಲ್ಲಿ ಮೊತ್ರ ಇರುವ ಅಂಥ, ಇಂಥ, ನಾಲ್ಕನೇವನು ಮೊದಲಾದ ಶಬ್ದಗಳ ವಿಷಯದಲ್ಲಿ ಕೆಲವರು ಆಗ್ರಹ ಮಾಡುವರು. ಇದು ನಮ್ಮ ಪೂರ್ವಶಾಸ್ತ್ರಕಾರರಿಗೆ ಸರ್ವಥಾ ಸಮ್ಮತವಲ್ಲವೆಂಬುದು ಪತಂಜಲಿಪ್ರಣೀತವಾದ ಭಾಷ್ಯದಿಂದ ಗೊತ್ತಾಗುವದು. ಮತ್ತು ಲೌಕಿಕಯುಕ್ತಿಯಿಂದಲೂ ತಿಳಿಯುವದು. ಆದುದರಿಂದ ಪಂಡಿತರು ಇಂಥಾ ಶಬ್ದಗಳನ್ನೆಲ್ಲಾ ಸಂಗ್ರಹಿಸಿ ಜಾತಿಗಳನ್ನು ವಿಂಗಡಿಸಿಕೊಂಡು ಅವುಗಳಿಗೆ ಸರಿಯಾದ ಲಕ್ಷಣಗಳನ್ನು ಕಲ್ಪಿಸಿ, ಅವ್ಯವಸ್ಥಿತವಾದ ಶಬ್ದಗಳಿಗೂ ಗಣಪಾಠಾದಿಗಳನ್ನು ಕಲ್ಪಿಸಿ ಪ್ರಯೋಗಿಸುವದಕ್ಕೆ ಅನುಜ್ಞೆ ಕೊಡುವದು ಉತ್ತಮವೆಂದು ತೋರುವದು.

ಇದರಿಂದ ನಮ್ಮ ಭಾಷೆಗಳೆಲ್ಲೂ ಕಾಲದೇಶಕ್ಕನುಗುಣವಾಗಿ ಅನೇಕ ಒಳ್ಳೇ ಗ್ರಂಥಗಳು ಹುಟ್ಟುವದಕ್ಕೆ ಕಾರಣವಾಗುವದೆಂದು ನಂಬುತ್ತೇನೆ.

ಕುಂಡಲಗಿರಿ ಆಚಾರ್ಯಃ

ಯನ್ನು ಪರೀಕ್ಷಿಸಿ ಅನೇಕರು ಇದು ಸಾಂಕ್ರಾಮಿಕ ಅಂದರೆ ಅಂಟುರೋಗವೆಂದು ಗೊತ್ತುಮಾಡಿದರು. ಈ ವೈದ್ಯರಲ್ಲಿ ಎರಡು ಪಂಗಡಗಳುಂಟಾದವು. ಕೆಲವರು ಅಂಟು ರೋಗವೆಂದು ಕೆಲವರು ಅಂಟುರೋಗವಲ್ಲವೆಂದು ಹೇಳುತ್ತಾರೆ. ಇದು ಪರೀಕ್ಷಿಸಲ್ಪ ಟ್ಟಿತು. ಈ ಜಾಡ್ಯದ ಸಂಪರ್ಕವನ್ನು ಮರಣದಂಡನೆಗೆ ಗುರಿಮಾಡಲ್ಪಟ್ಟ ಕೆಲವು ಜನಗಳಿಗೆ ಉಂಟುಮಾಡಿದರು. ಅವರು ಈ ಜಾಡ್ಯವನ್ನು ಹೊಂದಿ ಸತ್ತರು. ಈ ಜಾಡ್ಯದಿಂದ ಮೃತಪಟ್ಟವರ ಉಡಿಗೆಗಳನ್ನು ಉಟ್ಟು ಈ ಜಾಡ್ಯವನ್ನು ಹೊಂದಿ ಅನೇ ಕರು ಸತ್ತುಹೋದರು. ಈ ರೋಗಿಗಳು ಮಲಗಿದ ಹಾಸಿಗೆ ಮೊದಲಾದವುಗಳನ್ನು ಉಪಯೋಗಿಸಿದ್ದರಿಂದಲೂ ಈ ರೋಗಿಗಳ ಸವಿಾಪದಲ್ಲಿದ್ದುದರಿಂದಲೂ ಮೃತ ರಾದರು. ಅನೇಕರು ದೇಶಾಂತರಗಳಿಗೆ ಹೋಗಿ ಅಲ್ಲಿ ರೋಗದ ಬೀಜಗಳನ್ನು ಬಿತ್ತಿ ಆ ದೇಶದ ಪ್ರಜೆಗಳು ಸಾಯುವದಕ್ಕೆ ಅವಕಾಶಮಾಡಿದರು. ಬಿಲ್ಲರೆ ವರ್ತಕರು ಈ ರೋಗಿಗಳ ಉಡಿಗೆಗಳನ್ನು ವ್ಯಾಪಾರಾರ್ಥವಾಗಿ ತೆಗೆದುಕೊಂಡು ವಿಕ್ರಯಿಸಲು ಅವುಗಳನ್ನು ಧರಿಸಿಕೊಂಡವರಿಗೂ ಈ ವರ್ತಕರಿಗೂ ಈ ರೋಗವುಂಟಾಗಿ ಊರು ಗಳಲ್ಲಿಯೂ ಗ್ರಾಮಗಳಲ್ಲಿಯೂ ಈ ರೋಗವು ರೂಢಮೂಲವಾಗುವದಕ್ಕೆ ಅವ ಕಾಶವನ್ನು ಕೊಟ್ಟರು. ಹೀಗೆ ಅನೇಕ ಮುಖವಾಗಿ ಈ ರೋಗವು ಸಾಂಕ್ರಾ ಮಿಕವಾದದ್ದೆಂದು ಗೊತ್ತಾಯಿತು. ಕ್ರಮಕ್ರಮವಾಗಿ ಯಾವ ಊರಿನಲ್ಲಿ ಯಾವ ಮನೆಯಲ್ಲಿ ಈ ರೋಗವು ಉಂಟಾಗುತದೆಯೋ ಅದನ್ನು ಪರೀಕ್ಷಿಸಿ ಆ ರೋಗಿ ಗಳನ್ನು ಪ್ರತ್ಯೇಕವಾಗಿ ಗ್ರಾಮದಿಂದ ಹೊರಗೆ ಇಟ್ಟು ಚಿಕಿತ್ಸೆ ಮಾಡುತ್ತಾ ಬಂದರು. ಇದರಿಂದ ಗ್ರಾಮದಲ್ಲಿ ವಿಕ್ಕಜನಗಳಿಗೆ ತಗಲದೆ ಈ ರೋಗದ ಹರಡುವಿಕೆಯು ಕ್ಷೀಣ ವಾಗುತ್ತಾ ಬಂತು. ಆದಾಗ್ಯೂ ಗ್ರಾಮದ ಹೊರಗೆ ಈ ರೋಗಿಯು ಸಂಪರ್ಕದಲ್ಲಿರು ವವರಿಗೆ ತಗಲುತ್ತಲೂ ಅವರು ಮತ್ತು ಚಿಕಿತ್ಸೆಮಾಡತಕ್ಕವರು ಸಾಯುತ್ತಲೂ ಬಂದ ರು. ಹೀಗೆ ಈ ರೋಗದ ನಿದಾನವನ್ನು ಪರೀಕ್ಷಿಸಿ ಅನೇಕ ವೈದ್ಯರು "ವಾಯುಸಂಚಾ ರವು ಸೂರ್ಯನಬೆಳಕು ರೋಗಿಯನ್ನಿಟ್ಟಿರುವ ಸ್ಥಳದಲ್ಲಿ ಧಾರಾಳವಾಗಿದ್ದರೆ, ಅಲ್ಲಿ ಈ ರೋಗವು ಇತರರಿಗೆ ಅಂಟುವಷ್ಟು ಶಕ್ತಿಯುಳ್ಳದ್ದಾಗಿರುವದಿಲ್ಲವೆಂಬದಾಗಿಯೂ ಈ ರೋಗಕ್ಕೆ ಕಾರಣಭೂತವಾದದ್ದು ಒಂದು ವಿಷಮಯುವಾದ ಕ್ರಿಮಿ ಎಂಬದಾಗಿಯು ಈ ಕ್ರಿಮಿಯು ಭೂತಕನ್ನಡಿಯ ಸಹಾಯದಿಂದ ದೃಷ್ಟಿಗೆ ಗೋಚರವಾಗುವದಾಗಿಯು ಇದು ಒಂದು ಅಂಗುಲದ ಮುವ್ವತ್ತುಸಾವಿರದಲ್ಲಿ ಒಂದು ಭಾಗದಷ್ಟು ಲಿಂಗಾಕಾರವಾ

III ಉವೆಯೋಗ.	
6 ನಾಣ್ಯವನ್ನು ಹಾಕುವದು.	6 ಭಂಗಾರದ ನಾಣ್ಯಗಳನ್ನು ತೋರಿಸಿ ಅವುಗಳ ಹೆಸರನ್ನು, ಬೆಲೆಯನ್ನು ತಿಳಿಸುವುದು. ವರಹ, ಮೊಹರ್, ಸವರ್ಣ
7 ಒಡವೆಯನ್ನು ಮೂಡಿಸುವದು.	7 ಭಂಗಾರದಲ್ಲಿ ಸಾಮೂನ್ಯವಾಗಿ ಮೂಡಿಸುವ ಒಡವೆಗಳ ಹೆಸರನ್ನು ಹೇಳಿಸುವುದು.
8 ಭಂಗಾರದಿಂದ ಗಿಲೀಟನ್ನು ಮೊಡಲು ತೆಳ್ಳಗಿರುವ ಭಂಗಾರದ ರೇಖನ್ನು ಉಪಯೋಗಿಸುವದು.	8 ಭಂಗಾರದ ಗಿಲೀಟು ಮೂಡಿರುವ ಪದಾರ್ಥಗಳ ಹೆಸರನ್ನು ಬಾಲಕರಿಂದಲೇ ಹೇಳಿಸಬೇಕು.

ಪ್ಲೇಗ್ ಅಂದರೆ ಮಹಾಮಾರಿ ರೋಗ.

ಈ ರೋಗ ನೂತನವಾದ ರೋಗವಲ್ಲ. ಕಳೆದ ೩೦೦೦ ವರುಷಗಳಿಂದಲೂ ಇದು ನಮ್ಮ ದೇಶದಲ್ಲಿ ಪಾಶ್ಚಾತ್ಯರಲ್ಲಿಯೂ ಅಲ್ಲಲ್ಲಿಯೇ ಕೆಲವುಕಾಲ ದುರ್ಬಲವಾಗಿಯೂ ಕೆಲವುಕಾಲ ಉಲ್ಬಣಾವಸ್ಥೆಯಲ್ಲಿಯೂ ಇರುತಿತ್ತು. ಥೂಸಿಡೈಡಿಸ್‌ನ ಕಾಲದಲ್ಲಿ ಗ್ರೀಸ್‌ರಾಜಧಾನಿಯು ಆಥೆನ್ಸ್‌ಪಟ್ಟಣದಲ್ಲಿ ಇದರಿಂದ ಬಹುಮಂದಿ ಮೃತಪಟ್ಟರು. ರೋಮ್ ಚಕ್ರಾಧಿಪತ್ಯದಲ್ಲಿ ೨ನೆ ಮತ್ತು ೩ನೆ ಶತಮಾನಗಳಲ್ಲಿ ಅನೇಕಲಕ್ಷ ಜನರು ಈ ರೋಗದಿಂದ ಮೃತಪಟ್ಟರು. ನಮ್ಮ ದೇಶದಲ್ಲಿಯು 'ಮಹಾಮಾರಿ' ಎಂಬ ಹೆಸರಿನಿಂದ ಈ ರೋಗವು ಬಹಳ ಕ್ಷೋಭೆಯನ್ನು ಮಾಡುತ್ತಲಿತ್ತು. ಈ ರೋಗವು ಬಂದ ಕೂಡಲೆ ಅಂಥ ರೋಗಿಗಳಿರುವ ಮನೆಯವರು ಗ್ರಾಮಸ್ಥರು ಸೇರಿ ೪೦, ೫೦ ಈರೀತಿ ಸಾಯುತ್ತಿದ್ದರು. ೧೪ನೆ ಶತಮಾನದಲ್ಲಿ ಯೂರೋಪ್‌ಖಂಡದಲ್ಲಿ ಅನೇಕ ದೇಶಗಳಲ್ಲಿ ಈ ರೋಗವುಂಟಾಗಿ ನೂರಕ್ಕೆ ೩೦ ರಂತೆ ಆಗಿಯಿತು ೯೦ ರವರಿಗೂ ಜನರು ಸಾಯುತ್ತಬಂದರು. ಇದು ಸಾಂಕ್ರಾಮಿಕ ಜಾಡ್ಯವೆಂದು ಪಾಶ್ಚಾತ್ಯರಿಗು ನಮ್ಮ ಜನಗಳಿಗು ಬಹುಕಾಲದವರಿಗೂ ಗೊತ್ತಾಗಿದೆ. ಈ ರೋಗ ಬಂದಕೂಡಲೆ ಅನೇಕರು ಮನೆಗಳನ್ನು ಗ್ರಾಮಗಳನ್ನು ಬಿಟ್ಟು ಓಡಿಹೋಗುತ್ತಲಾ ಬಂದರು. ಇಂಥವರು ಈ ಜಾಡ್ಯಕ್ಕೆ ಗುರಿಯಾಗುವದು ಅಪೂರ್ವವಾಗುತ್ತಲಾ ಬಂದರು. ಈ ಸಂಗತಿ

ಈ ರೋಗವು ಕಶ್ಮಲವಾದ ಪ್ರದೇಶಗಳಲ್ಲಿ ಹುಟ್ಟಿ ವೃದ್ಧಿಗೆ ಬರುವದರಿಂದ ಈ ರೋಗವು ಯಾರಿಗಾದರು ತಗಲಿದರೆ ಅಂಥಾವರನ್ನು ಬಹಳ ಆರೋಗ್ಯವಾದ ಸ್ಥಳ ದಲ್ಲಿಟ್ಟು ಅವರಿಗೆ ಅವರ ಇಷ್ಟಾನುಸಾರಬೇಕಾದ ಚಿಕಿತ್ಸೆಗೂ ಅನ್ನೋದಕಗಳಿಗೂ ಏರ್ಪಾಡುಮಾಡಬೇಕು. ಅವರಿಗೆ ಬೇಕಾದಬಂಧುಗಳ ಸಹಾಯವನ್ನು ಕೊಡಬೇಕು.

ಆದರೆ ಈ ರೋಗವು ಅಂಥಾ ಬಂಧುಗಳಿಗೆ ತಗಲದೆ ಇರುವಂತೆ ಈಗ ವೈದ್ಯ ರು ಮಾಡಿರುವ ಪರಿಹಾರ ಕ್ರಮಗಳನ್ನು ಅನುಸರಿಸಬೇಕು.

ಈ ರೋಗ ತಗಲಿದ ಮನೆಗೆ ನೆರೆಹೊರೆಯಲ್ಲಿರುವವರಿಗೆ ಇಲಿ ಮೊದಲಾದವು ಗಳ ಮೂಲಕ ರೋಗ ತಗಲತಕ್ಕ ಸಂಭವವಿರುವದರಿಂದ ಅವರನ್ನು ಆರೋಗ್ಯವಾವ ಸ್ಥಳಗಳಲ್ಲಿ ಪ್ರತ್ಯೇಕಿಸಿ ೧೦ ದಿನಗಳವರಿಗೂ ನೋಡಿಕೊಳ್ಳಬೇಕು.

ಬಹಳ ಕಶ್ಮಲವಾದ ಪ್ರದೇಶದಲ್ಲಿ ಈ ರೋಗ ಕಾಣಬಂದರೆ ಅಂಥಾ ಪ್ರದೇಶ ದಲ್ಲಿರುವ ರೋಗಿಯ ಸಂಪರ್ಕವಿಲ್ಲದೆ ಅವನು ಸವಿಾಪದನೆರೆಯವರೂ ಅಲ್ಲದೆ ಇರುವ ಜನ ರನ್ನು ಒಳ್ಳೆ ಆರೋಗ್ಯವಾದ ಸ್ಥಳದಲ್ಲಿ ಕಟ್ಟಿರುವ ಮನೆಗಳಲ್ಲಿರಿಸಬೇಕು.

ಈ ರೋಗದ ಕ್ರಿಮಿಗಳು ರೋಗಿಗಳ ಸಂಪರ್ಕದಲ್ಲಿದ್ದವರ ದೇಹವನ್ನೂ ಉಡಿ ಗೆಗಳನ್ನೂ ಅನುಸರಿಸಿರುವದರಿಂದ ಅವುಗಳನ್ನು ಕೊಲ್ಲತಕ್ಕ ಶಕ್ತಿಯುಳ್ಳ "ಪರ್‌ಕ್ಲೋ ರೈಡ್ ಆಫ್ ಮರ್‌ಕುರಿ" ಎಂಬ ಔಷಧವಿಶ್ರವಾದ ನೀರಿನಲ್ಲಿ ಸ್ನಾನವನ್ನು ಮಾಡಿ ಸುವರು. ಅಂಥಾ ಸಂಪರ್ಕವುಳ್ಳ ಬಟ್ಟೆಗಳಲ್ಲಿ ಸಂಬಂಧಿಸಿರುವ ಕ್ರಿಮಿಗಳು ಸಾಯುವಂತೆ ಆ ಬಟ್ಟೆಗಳನ್ನು ಶುದ್ಧಿಮಾಡಿ ತೊಳೆಯುವ ಏರ್ಪಾಡುಗಳನ್ನು ಮಾಡಿರುವರು.

ಸರಕಾರದವರು ಪ್ರಜೆಗಳ ಕ್ಷೇಮವೆ ತಮ್ಮ ಕ್ಷೇಮವೆಂದು ತಮ್ಮ ಪ್ರಾಣಗಳಿಗ ಬರುವ ವಿಪತ್ತನ್ನು ಲಕ್ಷ್ಯಮಾಡದೆ ಅನೇಕಲಕ್ಷ ದ್ರವ್ಯವನ್ನು ಖರ್ಚುಮಾಡಿ ಮೇಲೆಹೇ ಳಿದ ಕ್ಯಾಂಪುಗಳನ್ನು ಚಿಕಿತ್ಸೆಮೊದಲಾದ ಏರ್ಪಾಡುಗಳನ್ನು ಮಾಡಿದಾರೆ. ಪ್ರಜೆಗಳು ಈ ಕಾಲದಲ್ಲಿ ಸರಕಾರದೊಡನೆ ಸೇರಿ ಈ ಪ್ಲೇಗ್ ನಿವಾರಣಾರ್ಥವಾದ ಏರ್ಪಾ ಡುಗಳು ತಮಗೆ ಸಂಕಟಕರವಾಗದಂತೆ ಜಾರಿಗೆ ಬರುವಂತೆ ಮಾಡಿಕೊಳ್ಳಬಹುದು.

ಈ ಮಹಾಮಾರಿ ಎಂಬ ರೋಗಕ್ಕೆ ಚಿಕಿತ್ಸೆಯೇ ಗೊತ್ತಿಲ್ಲ. ಆದರೆ ಈಚಿಗೆ ಡಾಕ್ಟರ್ ಹಾಫ್‌ಕಿನ್ ಸಾಹೇಬರು ಈ ರೋಗಬರದಂತೆ ಶಿಡಬು ಹಾಕುವದಕ್ಕೆ ಒಂದು ಧೃತಿಯನ್ನು ಕಂಡು ಹಿಡಿದು ಇದಾರೆ. ಈ ಶಿಡಬನ್ನು ಎರಡುಸಲ ಹಾಕಿಸಿಕೊಂಡ ವರಲ್ಲಿ ಸುಮಾರು ೯೭ ಜನಗಳಿಗೆ ಈ ರೋಗವು ಬರುವದಿಲ್ಲ. ಬೊಂಬೈ, ಹುಬ್ಬಳ್ಳಿ ಮೊದ

ಗಿರುತ್ತದೆಂಬದಾಗಿಯೂ, ಈ ಕ್ರಿಮಿಯು ಪುಷ್ಟಿಕರವಾದ ಆಹಾರವನ್ನು ಭುಂಜಿಸಿ ನಿರ್ಮಲವಾದ ಉದಕವನ್ನು ಪಾನಮಾಡಿ, ಸ್ನಾನಾದಿಗಳಿಂದಲೂ ದೇಹವನ್ನು ನಿರ್ಮಲವಾಗಿಟ್ಟುಕೊಂಡು, ಪ್ರತಿನಿತ್ಯವು ಒಗೆದ ಉಡಿಗೆಗಳನ್ನು ಹಾಕಿಕೊಂಡು ಶುಚಿಭೂತರಾಗಿರುವವರಿಗೆ ತಗಲಿದಾಗ್ಯೂ ಅದರ ಶಕ್ತಿಯು ಅವರಮೇಲೆ ನಡೆಯುವದಿಲ್ಲ. ದಾರಿದ್ರ್ಯದೋಷದಿಂದ ಪುಷ್ಟಿಯುಂಟುಮಾಡುವ ಆಹಾರಗಳಿಗೆ ಅವಕಾಶವಿಲ್ಲದೆ ನಿರ್ಮಲವಾದ ವಾಯು, ಬೆಳಕು ಇಲ್ಲದ ಮನೆಗಳಲ್ಲಿ ಅನೇಕರು ವಾಸಮಾಡುತ್ತ ಅಂಥಾ ಮನೆಗಳ ಸುತ್ತಲು ಪಾಯಿಖಾನಾ, ಬಚ್ಚಲಗುಂಡಿ, ಕೊಳೆಯುವ ಗೊಬ್ಬರವುಳ್ಳ ತೊಪ್ಪೆ ಮೊದಲಾದವುಗಳನ್ನು ಇಟ್ಟುಕೊಂಡು, ಅವುಗಳ ದುರ್ಗಂಧವನ್ನು ಆಘ್ರಾಣಿಸುತ್ತ ನಿತ್ಯಸ್ನಾನ ಅಭ್ಯಂಜನಾದಿಗಳಿಂದ ದೇಹವನ್ನು ಶುದ್ಧಮಾಡಿಕೊಳ್ಳದೆ, ಧರಿಸಿದ ಮೈಲಿಗೆ ಬಟ್ಟೆಗಳನ್ನೆ ಅನೇಕ ದಿನಗಳವರಿಗೂ ಧರಿಸಿಕೊಳ್ಳುತ್ತಾ ಇರತಕ್ಕ ಜನಗಳ ದೇಹಸ್ಥಿತಿಯು, ಈ ರೋಗವು ಹುಟ್ಟಿ ಬೆಳೆದು ವೃದ್ಧಿಯಾಗುವದಕ್ಕೆ ಅನುಕೂಲವಾದದ್ದೆಂದು ಗೊತ್ತುಮಾಡಿದರು. ಈಗ ಎರಡುವರುಷಗಳಲ್ಲಿ ಬೊಂಬಾಯಿಗೆ ಬಂದು ಅಲ್ಲಿಂದ ನಮ್ಮ ಭರತಖಂಡದ ಅನೇಕ ಭಾಗಗಳಿಗೆ ಹರಡಿಕೊಳ್ಳುತ್ತಲಿದೆ. ಈಚಿಗೆ ಈ ರೋಗನಿದಾನವು ವಿಶೇಷವಾಗಿ ಗೊತ್ತಾಗುತ್ತಲಿದೆ. ಈ ರೋಗದ ಕ್ರಿಮಿಗಳು ಅನುಕೂಲವಾದ ದೇಹವನ್ನು ಪ್ರವೇಶಿಸಿದ ಕೂಡಲೆ ಆ ದೇಹದ ರಕ್ತವನ್ನೆ ಆಹಾರವಾಗಿ ಮಾಡಿಕೊಂಡು ಒಂದು ಕ್ರಿಮಿಯು ೧೨ ಘಂಟೆಗಳಲ್ಲಿ ೧೯೦೦,೦೦೦ ಕ್ರಿಮಿಗಳಾಗುವವು. ಇವುಗಳು ರೋಗಿಯ ರಕ್ತದಲ್ಲೂ ಎಂಜಲಿನಲ್ಲೂ ನವದ್ವಾರಗಳಿಂದ ಬರುವ ಕಶ್ಮಲಗಳಲ್ಲಿಯು ಬೆವರಿನಲ್ಲೂ ವ್ಯಾಪಿಸಿರುವವು. ಇವುಗಳು ವಾಯುವಿಗಿಂತ ಭಾರವಾಗಿರುವದರಿಂದ ವಿಶೇಷವಾಗಿ ನೆಲದಲ್ಲಿ ಇರುವವು. ರೋಮಕೂಪಗಳಿಂದಲೂ ಕಾಲಿನಲ್ಲಿರುವ ಬಿರುಕುಗಳಿಂದಲೂ ರೋಗಿಯ ಬಳಿಗೆ ಬರುವವರಿಗೆ ಅಂಟುವದು. ರೋಗಿ ಇರುವ ಮನೆಯ ನೆಲದಮೇಲೆ ಸಂಚರಿಸುವ ಇಲಿ ಮೊದಲಾದ ಪ್ರಾಣಿಗಳಿಗೆ ತಗಲುವದು. ಅವುಗಳು ನೆರೆಮನೆಗೆ ಸಂಚಾರಮಾಡಿ ಅಲ್ಲಿರತಕ್ಕವರಿಗೆ ಆ ರೋಗವನ್ನು ಅಂಟಿಸುವವು. ಇಲಿ ಹೆಗ್ಗಣ ಮೊದಲಾದವುಗಳು ನಿಷ್ಕಾರಣವಾಗಿ ಸತ್ತರೆ ಆ ಮನೆಯನ್ನು ಬಿಟ್ಟು ಹೊರಟುಹೋಗಬೇಕೆಂಬ ಕಟ್ಟಳೆಯು ನಮ್ಮ ವೈದ್ಯಶಾಸ್ತ್ರಗಳಲ್ಲಿಯು ಇದೆ ಈ ರೋಗವು ಹರಡಿಕೊಳ್ಳದಂತೆ ಅನೇಕ ವೈದ್ಯರು ಸರ್ಕಾರಕ್ಕೆ ಹೇಳಿ ಕೆಲವು ಕಟ್ಟಳೆಗಳನ್ನು ಮಾಡಿದಾರೆ. ಅವು ಯಾವವೆಂದರೆ.

ವಿಷಯಗಳು.	ಪರೀಕ್ಷಕರ ಹೆಸರುಮತ್ತು ವಿಳಾಸ.
ಇಂಗ್ಲೀಷು ವ್ಯಾಕರಣ ಮತ್ತು ಭಾಷೆ	2 ನೇಯ ಭಾಗಕ್ಕೆ ; ಬೆಂಗಳೂರು ಪೆಸ್ಟಿಯರ್ ಮಿಷ್ ಹೈಸ್ಕೂಲು ಪ್ರಿನ್ಸಿಪಲ್ ರೆವರೆಂಡ್, ಥಾಮ್ಸನ್, ಎಂ. ಎ. ಯವರು, 1 ನೇಯ ಭಾಗಕ್ಕೆ ತುಮಕೂರು ಗೌರ್ನ್ಮೆಂಟ್ ಹೈಸ್ಕೂಲ್ ಹೆಡ್ಮಾಸ್ಟರು ಮ॥ರಾ॥ಸಿ. ಕೃಷ್ಣರಾವ್, ಬಿ. ಎ. ಯವರು
ಇಂಗ್ಲೀಷು ಬರವಣಿಗೆ ಮತ್ತು ಉಕ್ತಲೇಖನ	ಚಿತ್ರದುರ್ಗದ ಗೌರ್ನಮೆಂಟ್ ಹೈಸ್ಕೂಲು ಹೆಡ್ಮಾಸ್ಟರು, ಮೆ॥ ಜಿ ॥ ಆರ್ಬತ್‌ನಾಟ್ ಬಿ. ಎ. ಯವರು
ಲೋವರ್ ಸೆಕೆಂಡರೀ ಪರೀಕ್ಷೆಗೆ ಭಾಷಾಂತರ	ಟ್ಯೂಟರ್, ಮ॥ ಕೆ. ವೆಂಕಟಸ್ವಾಮಿಐಯರ್. ಬಿ. ಎ. ಮೈಸೂರ್ ಪ್ಯಾಲೇಸ್
ಲೊವರ್ ಸೆಕೆಂಡರೀ ಇಂಗ್ಲೀಷು ವಿದ್ಯಾರ್ಥಿಗಳಿಗೆ ಮಾತ್ರ ಗಣಿತ,	ಚನ್ನಪಟ್ಟಣದ ಗೌರ್ನಮೆಂಟ್ ಹೈಸ್ಕೂಲ್ ಹೆಡ್ಮಾಸ್ಟರು ಮ॥ ಎಂ.॥ ಕೃಷ್ಣೆಲಂಗಾರ್ ಬಿ. ಎ. ಯವರು
ರೇಖಾ ಮತ್ತು ಬೀಜಗಣಿತ, ಇಂಗ್ಲೀಷು ವಿದ್ಯಾರ್ಥಿಗಳಿಗೆ ಮಾತ್ರ	ಮೈಸೂರು ಮಹಾರಾಜಾ ಕಾಲೇಜಿನ ಅಸಿಸ್ಟೆಂಟ್ ಇಂಗ್ಲೀಷು ಪ್ರೊಫೇಸರ್ ಮೆ.॥ ಎ. ಇ. ಅಡಾಲಫೆಸ್. ಬಿ. ಎ. ಯವರು.
ಗಣಿತ, ಲೋವರ್ ಮತ್ತು ಅಪ್ಪರ್ ಸೆಕೆಂಡರೀ ಪರೀಕ್ಷೆಗೆ (ಇಂಗ್ಲೀಷುವಿದ್ಯಾರ್ಥಿಗಳಿಗೆ ಹೊರ್ತು)	ಹಾಸನದ ಗೌರ್ನಮೆಂಟ್ ಹೈಸ್ಕೂಲ್ ಅಸಿಸ್ಟೆಂಟ್ ಮಾಸ್ಟರು ಮ ॥ಎಂ. ಕ. ತಿರುಮಲಾಚಾರ್ ಬಿ. ಎ. ಯವರು.
ಅಪ್ಪರ್ ಸೆಕೆಂಡರೀ ಪರೀಕ್ಷೆಗೆ. ರೇಖಾ ಕ್ಷೇತ್ರ ಮತ್ತು ಬೀಜಗಣಿತ, ಲೋವರ್ ಸೆಕೆಂಡರೀ ಪರೀಕ್ಷೆಗೆ ಕ್ಷೇತ್ರಗಣಿತ	ಬೆಂಗಳೂರು ಸೆಂಟ್ರಲ್‌ಕಾಲೇಜ್ ಮ್ಯಾಥೆಮ್ಯಾಟಿಕ್ಸ್ ಪ್ರೊಫೇಸರಾದ ಮ ॥ ಆರ್. ವೆಂಕಟರಾಮೈಯ್ಯ, ಬಿ. ಎ. ಯವರು.
ಕನ್ನಡ ಟೆಕ್ಸ್ಟ್(ಅಪ್ಪರ್ ಸೆಕೆಂಡರೀ ಪರೀಕ್ಷೆಗೆ)	ಮೈಸೂರು ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ಸಹಾಯೋಪಾಧ್ಯಾಯರು
ಕನ್ನಡ ವ್ಯಾಕರಣ (ಲೋವರ್ ಸೆಕೆಂಡರೀ ಪರೀಕ್ಷೆಗೆ)	ಮ! ಕ. ಲಕ್ಷ್ಮೀನಾರಣಪ್ಪ ಬ. ಎ. ಯವರು.

ಲಾದಸ್ಥಳಗಳಲ್ಲಿ ಲಕ್ಷಾಂತರ ಜನಗಳು ಹಾಕಿಸಿಕೊಂಡಿದಾರೆ. ಬೆಂಗಳೂರಿನಲ್ಲೂ ಅನೇಕರು ಹಾಕಿಸಿಕೊಂಡರು. ಇದು ಹಾಕಿಸಿಕೊಂಡರೆ ಈ ರೋಗ ಬರುತ್ತದೆಂಬದಾಗಿಯೂ ಹಾಕಿಸಿಕೊಂಡು ಜನರು ಸತ್ತರೆಂಬದಾಗಿಯು ಜನರು ಸುಳ್ಳುವರ್ತಮಾನವನ್ನು ಹುಟ್ಟಿಸಿರುವರು. ಇದು ಶುದ್ಧ ಸುಳ್ಳು. ನಮ್ಮ ಮಹಾರಾಣಿಯವರು ಅರಮನೆಯಲ್ಲಿ ಎಲ್ಲರಿಗೂ ಈ ಶಿಡಬನ್ನು ಹಾಕಿಸುತ್ತಲಿದಾರೆ ಶಿಡಬು ಎದ್ದು ಗ್ರಾಮಗಳು ಊರುಗಳು ನಾಶವಾಗುತ್ತಿದ್ದವು. ಆದಾಗ್ಯೂ ಶಿಡಬುಹಾಕುವದು ಉಪಕ್ರಮವಾದಾಗ ಜನರು ಹೀಗೆ ಭಯಪಡುತ್ತಿದ್ದರು. ಈಗ ಲಕ್ಷಾಂತರ ಜನರು ತಾವಾಗಿಯೇ ಶಿಡಬು ಹಾಕಿಸಿಕೊಳ್ಳುತ್ತಾರೆ. ಇನ್ನು ಕೆಲವು ದಿನಗಳಲ್ಲಿ ಪ್ಲೇಗ್ ಸಿಡಬು ಇದೇರೀತಿ ಆಚರಣೆಗೆ ಬರುವದು. ಆದರೆ ಪ್ರಾಜ್ಞರಾದವರು ಇದನ್ನು ಪರೀಕ್ಷಿಸಿ ಜನರಿಗೆ ಇದತಕ್ಕ ಭೀತಿಯನ್ನು ಹೋಗಲಾಡಿಸಿ ಈ ಶಿಡಬು ಹಾಕಿಸಿಕೊಂಡು ಪ್ಲೇಗಿನ ಭಯವನ್ನು ತಪ್ಪಿಸಿಕೊಳ್ಳುವಂತೆ ಮಾಡಬೇಕು.

ಒಗಟಿಗಳು.

೧ ನಾಲ್ಕು ಅಕ್ಷರದ ಒಂದು ಶಬ್ದ. ಅಗ್ಯಂತ ಸೇರಿದರೆ ಒಬ್ಬ ರಾಕ್ಷಸನ ಹೆಸರು. ೧—೨ ಕೂಡಿದರೆ ಹೇಸಿಗೆ. ೩—೪ ಕೂಡಿದರೆ ನಾಶ. ೧—೩—೪ ಕೂಡಿದರೆ ಒಂದು ಬೆಟ್ಟ. ಎಲ್ಲವೂ ಸೇರಿದರೆ ಒಂದು ಯಜ್ಞಾಕಾಲ. ಆ ಶಬ್ದ ಯಾವದು?

೨ ಕರ, ದನ, ಧುರ, ರಣ ಇವುಗಳ ಪೂರ್ವದಲ್ಲಿ ಯಾವ್ರದಾದರೂ ಒಂದು ಅಕ್ಷರವನ್ನು ಸೇರಿಸಿದರೆ ನಿಧಿ, ಸುಂದರಪುರುಷ, ರಸವಿಶೇಷ, ನಾಶ ಈ ಅರ್ಥಗಳಾಗುವವು? ಅದು ಯಾವ ಅಕ್ಷರ.

ಈ ಒಗಟಿಗಳಿಗೆ ಸರಿಯಾದ ಉತ್ತರಗಳು ಯಾವ ವಿದ್ಯಾರ್ಥಿಯಿಂದ ಮೊದಲು ನಮ್ಮಲ್ಲಿಗೆ ಬರುವುದೊ ಆ ವಿದ್ಯಾರ್ಥಿಯ ಹೆಸರನ್ನೂ, ಉತ್ತರವನ್ನೂ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಪ್ಲೇಕ್ರಗಣಿತ, ವ್ಯವಸಾಯ, ಆರೋಗ್ಯ, ಶಾರೀರಶಾಸ್ತ್ರ, ಮತ್ತು ಲೋವರ್ ಸೆಕೆಂಡರೀ ಪರೀಕ್ಷೆಯ ಹಿಂದೂಸ್ತಾನಿ ಭಾಷಾಂತರ, ಗಣಿತ, ಹಿಂದೂದೇಶದಚರಿತ್ರೆ, ಭೂಗೋಳ, ನಕ್ಷೆಬರೆಯುದು ಆರೋಗ್ಯ ಮತ್ತು ವ್ಯವಸಾಯ ಶಾಸ್ತ್ರಗಳಿಗೆ	
ಸಂಸ್ಕೃತಭಾಷೆ ಮತ್ತು ವ್ಯಾಕರಣ (ಅಪ್ಪರ್ ಸೆಕೆಂಡರೀ ಪರೀಕ್ಷೆಗೆ) ಲೋವರ್ ಸೆಕೆಂಡರೀಪರೀಕ್ಷೆಯ ಸಂಸ್ಕೃತ ವ್ಯಾಕರಣ ಮತ್ತು ಭಾಷೆ, ಭಾಷಾಂತರ, ಉಕ್ತಲೇಖನ, ಕೈಬರಹ	ಮೈಸೂರು ಮಹಾರಾಜಾ ಕಾಲೇಜಿನ ಸಂಸ್ಕೃತ ಪಂಡಿತರು ಪಿ। ತಿರುಮಲಾಚಾರ್ಯರು. ಮೈಸೂರು ಗ್ವರ್ನಮೆಂಟ್ ನಾರ್ಮಲ್‌ಸ್ಕೂಲ್ ಮ। ರಾ। ಎಂ. ಹಿರಿಯಣ್ಣ ಬಿ. ಎ ಎಲ್. ಟಿ. ಯವರು.
ತೆಲುಗುಭಾಷೆ ಮತ್ತು ತೆಲುಗು ಇತರಗ್ರಂಥಗಳಿಗೆ	ಮೈಸೂರು ಗ್ವರ್ನಮೆಂಟ್ ಸಂಸ್ಕೃತಲೈಬ್ರೇರಿಕ್ಯೂರೇಟರ್ ಮ। ಮಹದೇವಶಾಸ್ತ್ರಿ ಬಿ. ಎ. ಯವರು.
ತಮಿಳುಭಾಷೆ ಮತ್ತು ಇತರ ತಮಿಳು ಭಾಗಗಳಿಗೆ	ಬೆಂಗಳೂರು ಸೆಂಟ್ರಲ್ ಕಾಲೇಜಿನ ಸಹಾಯೋಪಾ ಧ್ಯಾಯರಾದ ಮ। ಕೆ. ಕೃಷ್ಣಸ್ವಾಮೈಂಗಾರ್ ಬಿ. ಎ. ಯವರು.
ಆರೋಗ್ಯಶಾಸ್ತ್ರ (ಅಪ್ಪರ್ ಮತ್ತು ಲೋವರ್ ಸೆಕೆಂಡರೀ ಪರೀಕ್ಷೆಗೆ)	ಮೈಸೂರು ಕುದುರೆ ಮೊದಲನೇ ರಿಜಮೇಂಟಿನ ವಟರ್‌ನೇರಿ ಸರ್ಜನ್‌ರಾದ ಮೈ। ಎಸ್. ನರಸಿಂಹೈಯ್ಯಂಗಾರು.
ವ್ಯವಸಾಯಶಾಸ್ತ್ರ (ಅಪ್ಪರ್ ಮತ್ತು ಲೋವರ್ ಸೆಕೆಂಡರೀ ಪರೀಕ್ಷೆಗೆ)	ಮೈಸೂರು ಡಿಸ್ಟ್ರಿಕ್ಟಿನ ಗುಂಡ್ಲುಪೇಟೆ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್‌ಸರ್ವೇಟರ್ ಮ। ಹೆಚ್. ಶ್ರೀನಿವಾಸರಾಯರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಕನ್ನಡ ಟೆಕ್ಸ್ಟ್ (ಲೋವರ್ ಸೆಕೆಂಡರೀ ಪರೀಕ್ಷೆಗೆ)	ಮೈಸೂರು ಎಡ್ಯುಕೇಷನ್ ಡಿಪಾರ್ಟ್‌ಮೇಂಟ್ ಟ್ರಾನ್ಸ್ಲೇಟರ್ ಮಾ। ಆರ್. ನರಸಿಂಹಾಚಾರ್ ಎಂ. ಎ. ಯವರು.
ಕನ್ನಡ ವ್ಯಾಕರಣ (ಅಪ್ಪರ್ ಸೆಕೆಂಡರೀ ಪರೀಕ್ಷೆಗೆ) ಲೋವರ್ ಮತ್ತು ಅಪ್ಪರ್‌ಸೆಕೆಂಡರೀ ಪರೀಕ್ಷೆಗಳವಾಕ್ಯ ರಚನೆ	ಮೈಸೂರು ಗೌರ್ನಮೇಂಟು ಓರಿಯಂಟಲ್ ಸಂಸ್ಕೃತ ಪುಸ್ತಕಭಂಡಾರದ ಲೈಬ್ರೇರಿಯರ್ ಮಾ। ಎಸ್. ಜಿ. ನರಸಿಹಾಚಾರ್ಯರು.
ಕನ್ನಡ ಉಕ್ತಲೇಖನ (ಲೋವರ್ ಸೆಕೆಂಡರೀ ಪರೀಕ್ಷೆಗೆ)	ಮೈಸೂರು ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿನ ಮ್ಯಾನೇಜರ್ ಮಾ। ಸಿ ವಾಸುದೇವಯ್ಯನವರು.
ಕನ್ನಡ ಬರವಣಿಗೆ (ಲೋವರ್ ಸೆಕೆಂಡರಿ ಪರೀಕ್ಷೆಗೆ)	ಮೈಸೂರು ಗೌರ್ನಮೇಂಟ್ ನಾರ್ಮಲ್‌ಸ್ಕೂಲಿನ ಸಹಾಯೋಪಾಧ್ಯಾಯರಾದ ಮಾ। ಎಂ. ವೆಂಕಟಸುಬ್ಬಯ್ಯ ಬಿ. ಎ. ಎಲ್. ಟಿಯವರು.
ಹಿಂದೂಸ್ತಾನೀ ನ್ಯಾಕರಣ ಮತ್ತು ಫಾರಸೀ ಭಾಷಾ ಪುಸ್ತಕಗಳು (ಅಪ್ಪರ್ ಸೆಕೆಂಡರೀ ಪರೀಕ್ಷೆಗೆ) ಮತ್ತು ಫಾರಸಿ ವ್ಯಾಕರಣ ಮತ್ತು ಉಕ್ತಲೇಖನ ಇತರ ಭಾಷಾ ಪುಸ್ತಕಗಳು(ಲೋವರ್ ಸೆಕೆಂಡರೀ ಪರೀಕ್ಷೆಗೆ)	ಹಾಸನದ ಹಿಂದೂಸ್ತಾನೀ ಸ್ಕೂಲ್‌ಗಳ ಅಸಿಸ್ಟೆಂಟ್ ಡೆಪ್ಯೂಟಿಇನ್‌ಸ್ಪೆಕ್ಟರ್ ಹಾ। ಇಸ್ಮಾಯಿಲ್ ಷರೀಫ್ ಸಾಹೇಬರವರು.
ಅಪ್ಪರ್ ಸೆಕೆಂಡರೀ ಪರೀಕ್ಷೆಯ ಹಿಂದುಸ್ತಾನೀ ಭಾಷಾಂತರಗಳು ಮತ್ತು ಲೋವರ್ ಸೆಕೆಂಡರೀ ಪರೀಕ್ಷೆಯ ವ್ಯಾಕರಣ, ವಾಕ್ಯರಚನೆ, ಕೈಬರಹ, ಭಾಷಾಂತರ,	ಮೈಸೂರು ಮಂಡೀ ಮೊಹಲ್ಲಾದಲ್ಲಿರುವ ಮೌಲ್ವಿಸಯದ್ ಮಹಬುದೀನ್ ಸಾಹೇಬರವರು.
ಅಪ್ಪರ್ ಸೆಕೆಂಡರೀ ಪರೀಕ್ಷೆಯ ಹಿಂದೂಸ್ತಾನೀ ಜಿಯಾಮೈ, ಭೂಗೋಳ, ಗಣಿತ, ರೇಖಾ, ಮತ್ತು ಬೀಜಗಣಿತ,	ಬೆಂಗಳೂರು ಹಿಂದೂಸ್ತಾನೀ ಸ್ಕೂಲುಗಳ ಡೆಪ್ಯೂಟಿ ಇನ್‌ಸ್ಪೆಕ್ಟರ್ ಮೆ। ಸೈಯದ್ ತಾಜಾಪೀರಾನ್ ಬಿ. ಎ. ಯವರು.

ವಿದ್ಯಾದಾಯಿನಿ.

ಭಾಗ ೬.] ಅಕ್ಟೋಬರ್ ೧೯೯೪ [ಸಂಚಿಕೆ ೧೦.

ಎಡಿಟರವರ ನೋಟ್ಸ್.

ಮೇಸ್ಟರ್ ಟಾಟಾರವರು (ಮೆ॥ ಹೆಚ್. ಜೆ. ಭಾಭಾಸಾಹೇಬರ ಬೀಗರು) ವಿದ್ಯಾಭಿವೃದ್ಧಿಯಾಗುವುದಕ್ಕೋಸ್ಕರ ಬೊಂಬೈ ಯೂನಿವರ್ಸಿಟಿಗೆ ಮುವ್ವತ್ತುಲಕ್ಷ ರೂಪಾಯಿಗಳನ್ನು ಉಚಿತವಾಗಿ ಕೊಟ್ಟರುವರೆಂಬ ವರ್ತಮಾನವು ಎಷ್ಟು ಸಂತೋಷವನ್ನುಂಟುಮಾಡುವುದು ! ಇದು ಎಂಥಾ ಔದಾರ್ಯ!

***

ಇಂಡ್ಯಾಕ್ಕೆ ಗೌರ್ನರ್‌ಜನರಲ್ ಮತ್ತು ವೈಸರಾಯಿರಾಗಿದ್ದ ಲಾರ್ಡ್ ಎಲ್ಗಿನ್ ರವರು ತಮ್ಮ ಸೀಮೆಗೆ ಪ್ರಯಾಣಮಾಡುವರು. ಇವರಿಗೆ ಬದುಲಾಗಿ ಆನರೆಬಲ್ ಕರ್ ನ್‌ರವರು ದಯಮಾಡಿಸುವರು.

***

ದಕ್ಷಿಣಹಿಂದೂಸ್ಥಾನದ ಚರಿತ್ರೆಯನ್ನು ಬಹಳ ಶ್ರಮಪಟ್ಟು ಮೆ॥ ರಾಬರ್ಟ್ ಸೆವೆಲ್‌ರವರು ಸಂಗ್ರಹಿಸಿರುವುದನ್ನು ಲಂಡನ್ ಪಟ್ಟಣದಲ್ಲಿರುವ 'ಈಸ್ಟ್ ಇಂಡಿಯ ಅಸೋಸಿಯೆಷನ್'ನಲ್ಲಿ ಪ್ರಕಟಪಡಿಸಿರುವರು. ಹಿಂದೂಸ್ಥಾನದಲ್ಲಿ ಆರ್ಯರ ಪೂರ್ವ ಚರಿತ್ರೆಗೆ ಬೇಕಾದ ಸಲಕರಣಗಳು ಇನ್ನೂ ಹೇರಳವಾಗಿವೆ. ಈ ಸಲಕರಣಗಳನ್ನೆಲ್ಲಾ ಸಂಗ್ರಹಿಸುವುದು ವಿದ್ಯಾರ್ಥಿಗಳಿಗೂ ದೇಶಾಭಿಮಾನಿಗಳಿಗೂ ಶ್ಲಾಘ್ಯವಾದ ಕಾರ್ಯವಾಗಿದೆ. ಶಾಸನಾದಿಗಳ ಸಹಾಯದಿಂದ ಹಿಂದೂಸ್ಥಾನದ ಚರಿತ್ರೆಯು ಇನ್ನೂ ಸ್ಪಷ್ಟವಾಗಿ ತಿಳಿಯಬರಬೇಕಾಗಿದೆ.

***

ಬಾಲಕರಿಗೆ ನಾಲ್ಕು ಅಕ್ಷರಗಳನ್ನು ಹೇಳಿಕೊಟ್ಟ ಮಾತ್ರವೆ ಬಾಲಕರನ್ನು ವಿದ್ಯಾವಂತರನ್ನಾಗಿಮಾಡಿದೆವೆಂದು ಉಪಾಧ್ಯಾಯರು ತಿಳಿಯುವುದು ಸರಿಯಾದುದಲ್ಲ

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಭೌತಿಕಶಾಸ್ತ್ರ ಅಪ್ಪರ್ ಸೆಕೆಂಡರೀ ಪರೀಕ್ಷೆ--ಭೌತಿಕ—ಭೂಗೋಳಶಾಸ್ತ್ರ—ಲೋವರ್ ಸೆಕೆಂಡರೀಪರೀಕ್ಷೆ	ಬೆಂಗಳೂರು ಅಬ್ಸರ್ವೇಟರೀ ಚೀಫ್ ಅಬ್ಸರ್ವರ್ ಮೆ| ಎನ್. ವೆಂಕಟೇಶಯ್ಯಂಗಾರ್ ಬಿ. ಎ. ಯವರು.
ಲೋವರ್ ಸೆಕೆಂಡರೀಪರೀಕ್ಷೆಯ ಹಿಂದೂಚರಿತ್ರೆ ಮತ್ತು ಅಪ್ಪರ್ ಸೆಕೆಂಡರೀಪರೀಕ್ಷೆಯ ಚರಿತ್ರೆ	ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆ ಹಿಂದೂಚರಿತ್ರೆಯ ಎರಡನೇಭಾಗಕ್ಕೆ ತುಮಕೂರು ಸ್ಕೂಲುಗಳ ಅಸಿಸ್ಟೆಂಟ್ ಡೆಪ್ಯೂಟಿ ಇನ್‌ಸ್ಪೆಕ್ಟರಾದ ಮೆ| ಎನ್. ಶಾಮರಾವ್ ಬಿ. ಎ. ಯವರು ಎರಡನೇಭಾಗಕ್ಕೂ ಮತ್ತು ಲೋವರ್ ಸೆಕೆಂಡರೀಪರೀಕ್ಷೆಯ ಹಿಂದೂಚರಿತ್ರೆ ಮತ್ತು ಅಪ್ಪರ್ ಸೆಕೆಂಡರೀ ಪರೀಕ್ಷೆಯ ಇಂಗ್ಲೀಷು ಚರಿತ್ರೆಯ ಒಂದನೇಯಭಾಗಕ್ಕೆ ಚಿಕ್ಕಬಳ್ಳಾಪುರದ ಗೌರ್ನಮೆಂಟ್ ಹೈಸ್ಕೂಲು ಹೆಡ್ಮಾಸ್ಟರು ಮೆ| ಎನ್. ಕೇಶವೈಂಯ್ಯಂಗಾರ್ ಬಿ. ಎ. ಯವರು.
ಲೋವರ್ ಸೆಕೆಂಡರೀ ಪರೀಕ್ಷೆ ನಕ್ಷೆಬರೆಯುವದು	ಮೈಸೂರು ಮಹಾರಾಜಾ ಕಾಲೇಜ್ ಸಹಾಯೋಪಾಧ್ಯಾಯರು ಮೆ| ಬಿ. ಸುಬ್ಬರಾವ್ ಬಿ. ಎ. ಯವರು.
ಲೋವರ್ ಸೆಕೆಂಡರೀಪರೀಕ್ಷೆ ಭೂಗೋಳಶಾಸ್ತ್ರ	ಮೈಸೂರು ದೇಶೀಯ ಪರೀಕ್ಷೆಯ ಮ್ಯಾನೇಜರ್ ಮೆ| ಎಸ್. ಗೊಪಾಲರಾಯರು ಬೆಂಗಳೂರು.
ಪಾಕಶಾಸ್ತ್ರ ಲೊವರ್ ಸೆಕೆಂಡರೀಪರೀಕ್ಷೆ	ಮೈಸೂರು ಮಹಾರಾಣಿಯವರ ಬಾಲಿಕಾಪಾಠಶಾಲೆಯ ಸಹಾಯೋಪಾಧ್ಯಾಯಿನೀಯರಾದ ಸಿ। ಆರ್.। ಚಲ್ಲಮ್ಮನವರು.
ಕಸೂತಿಕೆಲಸ, ಲೋವರ್ ಮತ್ತು ಅಪ್ಪರ್ ಸೆಕೆಂಡರೀ ಪರೀಕ್ಷೆ	ಮಿಸ್‌ಹಡ್ಸನ್, ವೆಸ್ಲ್ಯಮಿಷ್, ಬೆಂಗಳೂರು. ಮಿಸ್, ಎನ್ ಎಪ್ ರಾಜಗೋಪಾಲ್, ಲೇಡಿಸೂಪರೆಂಟೆಂಡೆಂಟ್ ಗೌರ್ನಮೆಂಟ್ ಗರ್ಲ್ಸ್‌ಸ್ಕೂಲ್ ಬೆಂಗಳೂರು.
ಸಂಗೀತ, ಅಪ್ಪರ್ ಸಕೆಂಡರೀಪರೀಕ್ಷೆ	ಮು।ರಾ। ಆರ್ ನರಸಿಂಹಾಚಾರ್ಯರು ಎಂ. ಎ. ಎಡ್ಯುಕೇಷನ್ ಡಿಪಾರ್ಟಮೆಂಟ್.

ಬಹುಮಾನ ಮತ್ತು ದಂಡನೆ.

ಬಾಲಕರಿಂದ ವಿಹಿತವಾದ ಕೆಲಸಗಳನ್ನು ಮಾಡಿಸುವುದಕ್ಕೆ ಉಪಾಧ್ಯಾಯರಿಗೆ ಇವೆರಡು ಮುಖ್ಯಸಾಧಕಗಳು. ಬಹುಮಾನದ ಆಸೆಗಾಗಲಿ ದಂಡನೆಯಭಯದಿಂದಾಗಲಿ ಬಾಲಕರಿಂದ ಕೆಲಸಮಾಡಿಸುವುದು ಯುಕ್ತವಲ್ಲವೆಂದು ಹೇಳಬಹುದು. ಇಂಥ ವುಗಳಿಗಿಂತಲೂ ಗುರುತರವಾದ ಉದ್ದೇಶಗಳಿಗಾಗಿ ಕೆಲಸಮಾಡಿಸಬೇಕೆಂಬುದೇನೊ ಸರಿ. ಶಿಕ್ಷೆಯಾಗುತ್ತೆಂಬ ಭಯದಿಂದ ಕಳ್ಳತನವನ್ನು ಮಾಡದಿರುವವನಿಗಿಂತ 'ಕಳ್ಳತನವು ಕೆಟ್ಟದ್ದು; ಇದನ್ನು ನಾನು ಮಾಡಬಾರದು' ಎಂಬ ಪರಮಾರ್ಥವನ್ನು ತಿಳಿದು ಕಳ್ಳತನವನ್ನು ಮಾಡದಿರುವವನೇ ಉತ್ತಮ. ಫಲಾಫಲಗಳನ್ನು ವಿಚಾರಿಸದೆ ಸತ್ಕಾರ್ಯಗಳನ್ನು ಮಾಡುವುದಕ್ಕೂ, ಅಸತ್ಕಾರ್ಯಗಳನ್ನು ಬಿಡುವುದಕ್ಕೂ ಯತ್ನಿಸುವುದೇ ಯುಕ್ತವಾದರೂ, ಚಿಕ್ಕಂದಿನಲ್ಲಿ ಈ ಪರಮಾರ್ಥವನ್ನು ಬಾಲಕರಿಗೆ ತಿಳಿಸುವುದು ಅಸಾಧ್ಯವಾಗಿರುವುದರಿಂದ, ಆ ಕಾಲದಲ್ಲಿ ಲಘುವಾದ ಉದ್ದೇಶಗಳಿಗಾಗಿಯೂ ಅವರಿಂದ ಕೆಲಸಗಳನ್ನು ಮಾಡಿಸಬೇಕಾಗುವುದು. ಪಾಠಗಳನ್ನು ಗಟ್ಟಿಮಾಡಿದರೆ ಜ್ಞಾನಾರ್ಜನೆಯಾಗುವುದೆಂಬುದಕ್ಕೆ ಕೆಲಸಮಾಡದ ಬಾಲಕನಿಗೆ ನಾಳೆ ಈ ಪಾಠವನ್ನು ಗಟ್ಟಿಮಾಡಿಕೊಂಡು ಬಾರದಿದ್ದರೆ ಇಪ್ಪತ್ತು ನಂಬರು ಕಳೆಯುತ್ತೇನೆಂದು ಹೇಳಿದರೆ, ತನ್ನ ಪಾಠವನ್ನು ಸರಿಯಾಗಿ ಮಾಡಿಕೊಂಡು ಬರಬಹುದು. ಚಿಕ್ಕಂದಿನಲ್ಲಿ ದೂರದೃಷ್ಟಿಯು ಕಡಮೆಯಾಗಿರುವುದರಿಂದಲೂ, ಸೂಕ್ಷ್ಮವಾದ ಮತ್ತು ಗುರುವಾದ ಉದ್ದೇಶಗಳನ್ನು ತಿಳಿದುಕೊಳ್ಳುವುದಕ್ಕೆ ಶಕ್ತಿಯು ಸಾಲದ್ದರಿಂದಲೂ, ಅವರಿಗೆ ಕಾರ್ಯದ ಪರಮಫಲವನ್ನು ಕುರಿತು ಆಲೋಚಿಸಿ ಅದರಲ್ಲಿ ಆಸಕ್ತರಾಗುವುದಕ್ಕಾಗುವುದಿಲ್ಲ. ಇಷ್ಟುಮಟ್ಟಿನ ಶಕ್ತಿಯು ಅವರಿಗೆ ಬರಬೇಕಾದರೆ ಸ್ವಲ್ಪ ವಯಸ್ಸಾಗಬೇಕು. ಅದುವರೆಗೆ ಸದ್ಯಃ ಫಲಗಳನ್ನು ತೋರಿಸಿ ನಾವು ಅವರಿಂದ ಕೆಲಸಗಳನ್ನು ಮಾಡಿಸಬೇಕು. ಹೀಗೆ ಸದ್ಯಃ ಫಲಗಳನ್ನು ನಾವು ಎರಡುವಿಧವಾಗಿ ತೋರಿಸಬಹುದು. (೧) ಬಹುಮಾನಕೊಡುವುದು (೨) ದಂಡನೆಮಾಡುವುದು. ಬಹುಮಾನವನ್ನು ಹೊಂದುವುದರಲ್ಲಿ ಬಾಲಕರಿಗೆ ಒಂದು ವಿಧವಾದ ಸಂತೋಷವಿರುವುದು. ದಂಡನೆಯಿಂದ ಅವರಿಗೆ ವ್ಯಥೆಯುಂಟಾಗುವುದು. ದುಃಖವನ್ನು ತಪ್ಪಿಸಿಕೊಳ್ಳಬೇಕೆಂಬ ಮತ್ತು ಸುಖವನ್ನು ಪಡೆಯಬೇಕೆಂಬ ಆಸೆಯು ಮನುಷ್ಯಸಾಮಾನ್ಯನಿಗೂ ಸ್ವಾಭಾವಿಕವಾದ್ದರಿಂದ, ಬಾಲಕರು ಬಹುಮಾನ

ವೆಂದು ಅನೇಕರು ಹೇಳುತಿರುವರು. ವಿದ್ಯೆಯಿಂದ ಸೈರಣೆ, ಉದಾರಸ್ವಭಾವ, ಪರೋಪಕಾರದಲ್ಲಿ ಉತ್ಸಾಹ, ಯಥಾರ್ಥವನ್ನು ತಿಳಿದು ಗ್ರಹಿಸುವ ಶಕ್ತಿ, ಮೇಧಾವೃದ್ಧಿ, ಇವು ಉಂಟಾಗಬೇಕು. ರಾಜ್ಯದ ಏಳಿಗೆಗೆ ವಿದ್ಯಾವಂತರೆ ಕಾರಣವು. ಈಗ ವಿದ್ಯೆಯನ್ನು ಕಲಿಸುವ ಉಪಾಧ್ಯಾಯರ ಶಕ್ತಿಗೆ ಅನುಗುಣವಾಗಿ ವಿದ್ಯಾರ್ಥಿಗಳು ಪ್ರಖ್ಯಾತರಾಗುವರು. ಉಪಾಧ್ಯಾಯರುಗಳು ತಮ್ಮ ಕರ್ತವ್ಯವನ್ನು ಅರಿತು, ತಮ್ಮ ಭಾರವನ್ನು ತಿಳಿದು ಬಾಲಕರ ಏಳಿಗೆಗೆ ಪ್ರಯತ್ನಪಟ್ಟರೆ ಅವರ ಕೆಲಸವು ಸಾರ್ಥಕವಾಗದಿರದು.

***

ಈಗ ಗ್ರಂಥಕರ್ತರು ಅನೇಕರಾದರು. (ಕನ್ನಡದಲ್ಲಿ ಇಲ್ಲದಿದ್ದರೂ ಇತರ ಭಾಷೆಗಳಲ್ಲಿ) ಪುಸ್ತಕಗಳು ಸಾವಿರಾರು ಅಚ್ಚು ಆಗುತಲಿವೆ. ಅಚ್ಚು ಆದ ಪುಸ್ತಕಗಳೆಲ್ಲಾ ಓದಲಿಕ್ಕೆ ಯೋಗ್ಯವಾಗಿರತಕ್ಕದ್ದೆಂದು ಭಾವಿಸಿ, ಯಾವ ಪುಸ್ತಕವನ್ನೇ ಆಗಲಿ ಓದಿದರೆ ಆಯಿತೆಂಬುವುದನ್ನು ಬಿಟ್ಟು, ಬಾಲಕರು ಯಾವ ಪುಸ್ತಕಗಳನ್ನು ಓದಬೇಕು; ಯಾವದನ್ನು ಓದಬಾರದೆಂಬ ವ್ಯುತ್ಪತ್ತಿಯನ್ನುಂಟುಮಾಡತಕ್ಕದ್ದು ಉಪಾಧ್ಯಾಯರದಾಗಿರುವುದು.

***

ಧಾರವಾಡ ಕರ್ಣಾಟಕ ವಿದ್ಯಾವರ್ಧಕ ಸಂಘದವರು, ಇಂಗ್ಲಿಷ್‌ಭಾಷೆಯಲ್ಲಿ ಶ್ಲಾಘ್ಯವಾಗಿರತಕ್ಕ ಗ್ರಂಥಗಳನ್ನೇ ಕನ್ನಡಿಸಿ ದೇಶಭಾಷೆಯನ್ನು ವೃದ್ಧಿಗೊಳಿಸುತಲಿರುವರು. ನಮ್ಮ ದೇಶದವರು ಈ ಸಂಘದ ಕೋರಿಕೆಯಪ್ರಕಾರ ಪುಸ್ತಕಗಳನ್ನು ಬರೆದು ಕನ್ನಡಿಗರಿಗೆ ಸಂತೋಷವನ್ನುಂಟುಮಾಡಬಹುದು.

***

ಶುಚಿಯಾದ ಬಟ್ಟೆಯನ್ನು ತೊಟ್ಟು, ದಿನವಹಿ ಸ್ನಾನವಾಡಿ ಬಾಲಕರು ಪಾಠಶಾಲೆಗೆ ಬರುವಂತೆ ಮಾಡಲು ಈಗ ಉಪಾಧ್ಯಾಯರು ಅಗತ್ಯವಾಗಿ ಗಮನಕೊಡಬೇಕು. ಸಾಂಕ್ರಾಮಿಕರೋಗವು ಎಲ್ಲೆಲ್ಲಿಯೂ ಹೆಚ್ಚುತಲಿರುವುದರಿಂದ, ಬಾಲಕರೆಲ್ಲರೂ ಶುಚಿಯಾಗಿ ಬರೋಣದರಲ್ಲಿ, ಕೆಟ್ಟರೋಗಕ್ಕೆ ಪಾಠಶಾಲೆಯಲ್ಲಿ ಆಸ್ಪದವಿರುವುದಿಲ್ಲ.

ಯವಾಗಿ ಚೆನ್ನಾಗಿ ಪರ್ಯಾಲೋಚಿಸಿ ಅನಂತರದಲ್ಲಿ ಮಾಡಬೇಕು. ಅನುಸರಿಸುವುದಕ್ಕೆ ಸಾಧ್ಯವಲ್ಲದ ಆಜ್ಞೆಗಳನ್ನು ಹೇಳಿ ಅವುಗಳಂತೆ ಬಾಲಕರು ನಡೆಯಿಸಲಿಲ್ಲವೆಂದು ಅವರನ್ನು ಶಿಕ್ಷಿಸಬಾರದು.

(ಎ) ತಮಗೂ ಬಾಲಕರಿಗೂ ಪರಸ್ಪರವಾಗಿ ಪ್ರೀತಿಯುಂಟಾಗುವಂತೆ ನಡೆಯಬೇಕು.

(ಐ) ತಪ್ಪಿತವು ನಡೆಯುವುದಕ್ಕೆ ಮುಂಚೆಯೇ ಅದು ನಡೆಯದಂತೆ ಮಾಡುವುದಕ್ಕೆ ಸಾಧ್ಯವಾದರೆ ಹಾಗೆ ಮಾಡಬೇಕು.

(ಒ) ಬಾಲಕರಲ್ಲಿ ಕಂಡುಬಂದ ಒಳ್ಳೇತನಕ್ಕಾಗಿ ಅವರಿಗೆ ಪ್ರೋತ್ಸಾಹವನ್ನು ತೋರಿಸಬೇಕು.

(ಓ) ದಂಡನೆಯನ್ನು ಮಾಡಬೇಕಾದ ಸಂದರ್ಭಗಳಲ್ಲಿ ದಂಡನೆಯನ್ನು ಖಂಡಿತವಾಗಿ ಮಾಡಿಯೇ ತೀರಬೇಕು.

(ಔ) ಪಾಠಶಾಲೆಯ ಬಾಲಕರ ಒಟ್ಟು ಅಭಿಪ್ರಾಯವು ಉಪಾಧ್ಯಾಯರಿಗೆ ಅನುಕೂಲವಾಗಿರುವಂತೆ ಮಾಡಿಕೊಳ್ಳಬೇಕು.

ದಂಡನೆಯು ಅನೇಕವಿಧವಾಗಿರಬಹುದು. ಅದರಲ್ಲೆಲ್ಲ ಈಗ ಪಾಠಶಾಲೆಗಳಲ್ಲಿ ಉಪಾಧ್ಯಾಯರು ವಿಶೇಷವಾಗಿ ಉಪಯೋಗಿಸುತ್ತಿರುವುದು ದೇಹದಂಡನೆಯೆಂದು ಸಾಮಾನ್ಯವಾಗಿ ಹೇಳಬಹುದು ಈ ದೇಹದಂಡನೆಯನ್ನು ಈಗ ಅನೇಕಕಡೆ ಅತಿಯಾಗಿ ಮಾಡುತಿರುವುದರಿಂದ ಅದರ ವಿಷಯವಾಗಿ ಇಲ್ಲಿ ಸ್ವಲ್ಪ ಬರೆಯಬೇಕು. ದೇಹದಂಡನೆಯು ಕೂಡದೇ ಕೂಡದೆಂದು ಕೆಲವರ ಅಭಿಪ್ರಾಯ. ಇದನ್ನನುಸರಿಸಿ ನಡೆಯುವುದು ಸಾಧ್ಯವಾದರೆ ಹಾಗೆ ಮಾಡುವುದೇ ಸರ್ವೋತ್ತಮ. ಆದರೆ ಇದು ಅಸಾಧ್ಯವೆಂದು ಕೆಲವರು ಅಭಿಪ್ರಾಯಪಟ್ಟು ಉಪಾಧ್ಯಾಯರು ದೇಹದಂಡನೆಯನ್ನೂ ವಿಧಿಸಬಹುದೆಂದು ಹೇಳುವರು. ದೇಹದಂಡನೆಯನ್ನು ಮಾಡುವುದಾದರೆ ಅದನ್ನು ಬಾಲಕರಲ್ಲಿ ಕಂಡುಬಂದ ಸುಳ್ಳುತನ, ಕಳ್ಳತನ, ಅವಿಧೇಯತೆ ಇಂಥವುಗಳಿಗೆ ಮಾತ್ರ ಮಾಡಬೇಕು. ದಡ್ಡತನವೇ ಮುಂತಾದವುಗಳಿಗೆ ಇದನ್ನು ಶಿಕ್ಷೆಯಾಗಿ ಮಾಡುವುದು ಸರಿಯಲ್ಲ. ಸಾಮಾನ್ಯವಾಗಿ ಉಪಾಧ್ಯಾಯರು ಇತರವಿಧವಾಗಿ ಬಾಲಕನನ್ನು ತಿದ್ದುವುದು ಸಾಧ್ಯವಾಗಿದ್ದರೆ ದೇಹದಂಡನೆ ಮಾಡುವುದನ್ನು ಬಿಡಬೇಕು. ಇತರ ವಿಧವಾಗಿ ಸಾಗದ ಸಂದರ್ಭದಲ್ಲಿ ಮಾತ್ರ ಈ ದೇಹದಂಡನೆಯನ್ನು ವಿಧಿಸಬೇಕು. ದೇಹದಂಡನೆ

ವನ್ನು ಪಡೆಯುವುದಕ್ಕೂ, ದಂಡನೆಯನ್ನು ತಪ್ಪಿಸಿಕೊಳ್ಳುವುದಕ್ಕೂ ವಿಹಿತನಾದ ಕೆಲ ಸಗಳನ್ನು ಮಾಡುತ್ತ ಬರುವರು. ಅಂತು ಉಪಾಧ್ಯಾಯರು ಬಹುಮಾನ ಕೊಡುವು ದರಲ್ಲೂ, ದಂಡನೆಮಾಡುವುದರಲ್ಲೂ ಸಹ ಒಂದು ಅಂಶವನ್ನು ಮಾತ್ರ ಚೆನ್ನಾಗಿ ಜ್ಞಾಪಕ ವಿಡಬೇಕು. ಬಹುಮಾನವು, ದಂಡನೆಯೂ ಲಘುವಾದ ಉದ್ದೇಶಗಳಾದುದರಿಂದ, ಎದುವರೆಗೆ ಅವಶ್ಯಕವೋ ಅದುವರೆಗೆ ಮಾತ್ರ ಅವುಗಳನ್ನು ಉಪಯೋಗಿಸಿಕೊಳ್ಳುತಿದ್ದು ಆಮೇಲೆ ಕ್ರಮೇಣ ಅವುಗಳಿಗಾಗಿಯೇ ವಿಹಿತವಾದ ಕೆಲಸಗಳನ್ನು ಮಾಡಿಸುವುದನ್ನು ಬಿಡುತಬರಬೇಕು. ಅಂತು ವಿದ್ಯಾಭ್ಯಾಸ ಮುಗಿಯುವುದರೊಳಗೆ ಬಾಲಕರು ಫಲಾ ಫಲಗಳನ್ನು ಲಕ್ಷಿಸದೆ ಒಳ್ಳೇಕೆಲಸವನ್ನು ಮಾಡುನಂತೆಯೂ, ಕೆಟ್ಟಕೆಲಸಗಳನ್ನು ಬಿಡುವಂತೆಯೂ ಮಾಡಿರಬೇಕು.

ಬಹುಮಾನಗಳು:—ಯಾವುದಾದರೊಂದು ವಿಧವಾಗಿ ಸಂತೋಷವನ್ನುಂಟು ಮಾಡುವುದು ಬಹುಮಾನವನ್ನು ಕೊಡುವುದೆಂದೆನಿಸಿಕೊಳ್ಳುವುದು. ಬಹುಮಾನದ ಬೆಲೆಯನ್ನು ಅದನ್ನು ಕೊಡುವವರ ಯೋಗ್ಯತೆಯಂತೆ ಹೆಚ್ಚುತಹೋಗುವುದು. ಅಂ ದರೆ ಬಹುಮಾನವಾಗಿ ಕೊಟ್ಟ ಪದಾರ್ಥವು ಒಂದು ಬೆಲೆಯುಳ್ಳದ್ದಾಗಿದ್ದರೂ ಅದನ್ನು ಕೊಟ್ಟವರು ಹೆಚ್ಚುಹೆಚ್ಚು ಯೋಗ್ಯರಾಗಿದ್ದಹಾಗೆಲ್ಲ ಅದರ ಬೆಲೆಯು ಹೆಚ್ಚಾಗಿ ಕಾಣುವುದು.

ದಂಡನೆ—ವ್ಯಥೆಯನ್ನುಂಟುಮಾಡುವುದೇ ದಂಡನೆಯ ಉದ್ದೇಶ. ದಂಡನೆ ಯಾಗುವುದರಿಂದ ಬಾಲಕನ ಮನಸ್ಸಿನಲ್ಲಿ ಮೂಡಿದ ಕೆಲಸಕ್ಕೂ ಅದರಿಂದುಂಟಾದ ವ್ಯಥೆಗೂ ಒಂದುವಿಧನಾದ ಸಂಬಂಧ ಬೆಳೆದು ಮುಂದಕ್ಕೆ ಅಂಥ ಕೆಲಸವನ್ನು ಅವನು ಮಾಡದಂತಾಗುವುದು. ಪಾಠಶಾಲೆಗಳಲ್ಲಿ ದಂಡನೆಯನ್ನು ಮಾಡುವುದರಿಂದ ಎರಡು ಪ್ರಯೋಜನಗಳಾಗುವುವು:—

(೧) ದಂಡಿಸಲ್ಪಟ್ಟ ಬಾಲಕನು ಮುಂದಕ್ಕೆ ತಿದ್ದಿಕೊಳ್ಳುವಂತಾಗುವುದು.

(೨) ಇತರ ಬಾಲಕರು ಅಂಥ ತಪ್ಪನ್ನು ಮಾಡದಂತಾಗುವುದು. ದಂಡನೆ ಯಿಂದ ಇಷ್ಟುಮಟ್ಟಿನ ಪ್ರಯೋಜನವಿದ್ದಾಗ್ಯೂ, ಅದನ್ನು ಪಾಠಶಾಲೆಗಳಲ್ಲಿ ಕೂಡಿದ ಮಟ್ಟಿಗೂ ಕಡಮೆಮಾಡುವುದಕ್ಕೆ ಉಪಾಧ್ಯಾಯರು ಯತ್ನಿಸಬೇಕು. ಇದಕ್ಕೆ ಅವರು ಜ್ಞಾಪಕವಿಡಬೇಕಾದ ಅಂಶಗಳು ಕೆಲವು ಇವೆ.

(೧) ತಾವು ಯಾವ ಅಜ್ಞೆಯನ್ನು ಮಾಡಬೇಕಾದರೂ ಮೊದಲು ಅದರ ವಿಷ

ದ್ದರು. ಆಂಗ್ಲೇಯರು ಮತ್ತು ವಿದ್ಯಾನಿಶಾರದರಾದ ನಮ್ಮ ದೇಶದ ಪಂಡಿತರು "ಚತುರ್ವಿಧಪುರುಷಾರ್ಥಪ್ರಾಪ್ತಿಗೂ ಸದ್ವಿದ್ಯಾಭ್ಯಾಸವೇ ಮುಖ್ಯಕಾರಣವಾದದ್ದೆಂ ಬದಾಗಿಯೂ, ವಿದ್ಯೆಯು ಬೆಂಕಿಯಂತೆಯೂ, ನೀರಿನಂತೆಯೂ, ಸರಿಯೂಗಿ ವಿನಿಯೋ ಗಿಸಲ್ಪಟ್ಟರೆ ಅನೇಕ ವಿಧವಾದ ಇಷ್ಟಾರ್ಥಪ್ರಾಪ್ತಿಗೆ ಸಾಧಕವಾದದ್ದೆಂಬದಾಗಿಯೂ, ಅವುಗಳನ್ನು ದುರ್ವಿನಿಯೋಗಮಾಡಿದರೆ ಬಹಳ ಅನರ್ಥಕಾರಿಯೂಗುತ್ತದೆಯೆಂಬ ದಾಗಿಯೂ ವಿದ್ಯೆಯನ್ನು ದುಷ್ಟರಾದವರು ಉಪಯೋಗಮಾಡಿ ಕೆಟ್ಟಮಾತ್ರದಿಂದಲೆ ಸತ್ಕುಲಪ್ರಸವದಿಂದ ಶುದ್ಧರಾಗಿಯೂ ಸನ್ಮಾರ್ಗಪ್ರವರ್ತನೆಯುಳ್ಳ ನಿರತರಾಗಿಯೂ ಇರುವ ಸ್ತ್ರೀಯರು ಸದ್ವಿದ್ಯಾಭ್ಯಾಸವನ್ನು ಮಾಡಿ ದರ್ಮಾರ್ಥಗಳನ್ನು ಪಡೆಯುವದ ಲ್ಲದೆ ತಮ್ಮ ಮಕ್ಕಳಿಗೆ ಸರಿಯೂದ ವಿದ್ಯಾಭ್ಯಾಸಮಾಡಿಸುವದಕ್ಕೂ ಅರ್ಹರಾಗುವದು ಅವಶ್ಯಕವಾದದ್ದೆಂಬದಾಗಿಯೂ ಹೇಳುವರು. ಸ್ತ್ರೀಯರಿಗೆ ಪುರುಷರಿಗೆ ಹ್ಯಾಗೋ ಹಾಗೆಯೇ ಸಾಮಾನ್ಯವಾದ ವಿದ್ಯಾಭ್ಯಾಸವು. ಅದರ ಜೊತೆಗೆ ಸ್ತ್ರೀಯರಿಗೆ ವಿಶೇಷ ವಾಗಿ ಗೃಹಕೃತ್ಯಗಳಿಗೂ ಮಕ್ಕಳಪೋಷಣೆಗೂ ಅನುಕೂಲವಾದ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂಬದಾಗಿ ಯೋಚಿಸುವುದಕ್ಕೂ ಅಲ್ಲಲ್ಲಿಯೇ ಬಾಲಿಕಾಪಾಠಶಾಲೆಗಳನ್ನು ಏರ್ಪಡಿಸುವದಕ್ಕೂ ಉಪಕ್ರಮವಾಯಿತು. ಹೀಗೆ ಆದಾಗ್ಯೂ ಸ್ತ್ರೀವಿದ್ಯಾಭ್ಯಾ ಸಕ್ಕೆ ವಿರೋಧಿಗಳು ಅನೇಕರಿದ್ದರು. ವಿದ್ಯಾಭ್ಯಾಸಮಾಡತಕ್ಕ ಬಾಲೆಯರನ್ನು ನಿಂದಿ ಸುವುದು, ಬೀದಿಯಲ್ಲಿ ಹೋಗುವಾಗ ಘಂಟಾಘೋಷವಾಗಿ ಬಯ್ಯುವದು, ಕಲ್ಲುಗ ಳಿಂದ ಹೊಡೆಯುವದು, ವೇಶ್ಯಾಸ್ತ್ರೀಯರಿಗಿಂತಲೂ ಕನಿಷ್ಟವಾಗಿ ಅವರನ್ನು ಕಾಣು ವದು ಸಹಜವಾಗಿತ್ತು.

ಈ ದೇಶದ ಸ್ಥಿತಿಯು ಹೀಗೆ ಇರುವಾಗ ೧೮೬೫ನೆ ಮೊರ್ಚಿ ೩೦ರಲ್ಲಿ ಪುನೆ ಯಲ್ಲಿ ಆನಂದಬಾಯಿರವರು ಹುಟ್ಟಿದರು. ಇವರು ೬–೭ ವರುಷ ವಯಸ್ಸಿನಲ್ಲೆ ಮರಾಟಿಭಾಷೆಯನ್ನು ಓದುವದು ಬರೆಯುವದು ಕಲಿತುಕೊಂಡರು, ಇವರಿಗೆ ೯ ವರು ಷವಾಗುತ್ತಲೂ ವಿವಾಹವಾಯಿತು. ಪೋಸ್ಟ್‌ಆಫೀಸಿನಲ್ಲಿ ನೌಕರರಾಗಿದ್ದ ಮು॥ ಗೋಪಾಲವಿನಾಯಕಜೋಷಿಯವರಿಗೆ ಇವರು ಕನ್ಯಾದಾನಮಾಡಲ್ಪಟ್ಟರು. ಮು॥ ಜೋಷಿಯವರು ವಿದ್ಯಾವಂತರು ಆನಂದಬಾಯಿರವರು ಕೆಲವು ದಿನಗಳಮೇಲೆ ದೊಡ್ಡ ವರಾದ ಕೂಡಲೆ ವಿವಾಹವು ಪೂರ್ತಿಮಾಡಲ್ಪಟ್ಟು ಗಂಡನ ಮನೆಗೆ ಕಳುಹಿಸಲ್ಪಟ್ಟರು. ಇವರು ಪತಿಶುಶ್ರೂಷೆಯನ್ನು ಮಾಡಿಕೊಂಡು ಗೃಹಕೃತ್ಯಗಳನ್ನು ನೋಡಿಕೊಂಡು

ಯನ್ನು ವಿಧಿಸುವವನು ಜ್ಞಾಪಕವಿಡಬೇಕಾದ ಕೆಲವು ಅಂಶಗಳು—

(೧) ಉಪಾಧ್ಯಾಯರು ತಮಗೆ ಕೋಪವಿದ್ದಾಗ ಅಂದರೆ ರೋಷಾವೇಶದಲ್ಲಿ ಬಾಲಕರನ್ನು ಶಿಕ್ಷಿಸಬಾರದು.

(೨) ಬಾಲಕರಿಂದಾಗಲಿ, ಜವಾನಮುಂತಾದವರಿಂದ ಈ ದಂಡನೆಯನ್ನು ಮಾಡಿಸದೆ ಉಪಾಧ್ಯಾಯರು ತಾವೇ ಬಾಲಕರನ್ನು ಶಿಕ್ಷಿಸಬೇಕು. ಪ್ರತಿಪಾಠಶಾಲೆಯಲ್ಲೂ ಮುಖ್ಯೋಪಾಧ್ಯಾಯರು ಮಾತ್ರ ದೇಹದಂಡನೆಯನ್ನು ಮಾಡುವುದೆಂಬ ನಿಯಮವು ಒಳ್ಳೇದು.

(೩) ದಂಡನೆಗಾಗಿ ಉಪಯೋಗಿಸುವ ಪದಾರ್ಥಗಳು ಅಂದರೆ ಬೆತ್ತಮುಂತಾದವುಗಳನ್ನು ತಮ್ಮ ಹತ್ತಿರದಲ್ಲಿ ಇಟ್ಟುಕೊಂಡಿರಬಾರದು.

(೪) ಸಿಕ್ಕಿದ್ದರಿಂದ ಸಿಕ್ಕಿದಕಡೆ ಹೊಡೆಯಬಾರದು.

M. H.

ಡಾಕ್ಟರ್ ಆನಂದಬಾಯಿಜೋಷಿಯವರು.

ನಮ್ಮ ಆರ್ಯಮಹಿಳೆಯರಲ್ಲಿ ಅನೇಕರು ಬಹಳ ವಿದ್ಯಾವತಿಯರಾಗಿದ್ದರು. ಈ ಸಂಗತಿಯು ನಮ್ಮ ವೈದ್ಯಶಾಸ್ತ್ರಪುರಾಣೇತಿಹಾಸಗಳಿಂದ ಗೊತ್ತಾಗುತ್ತವೆ. ಅನೇಕ ಸ್ತ್ರೀಯರು ವೇದಋಕ್ಕುಗಳೇ ಮೊದಲಾದ ಅನೇಕ ಗ್ರಂಥಗಳನ್ನು ಬರೆದು ಅಚಂದ್ರಾರ್ಕವಾದ ಯಶಸ್ಸನ್ನು ಪಡೆದರು. ಆದರೆ ಈಚಿಗೆ ನಮ್ಮ ಸ್ತ್ರೀಯರಲ್ಲಿ ಪಾಶ್ಚಾತ್ಯವಿದ್ಯಾಭ್ಯಾಸವು ಕಡಮೆಯಾಗಿತ್ತು. ಈಗ ನಮ್ಮ ದೇಶದಲ್ಲಿ ಆಂಗ್ಲೇಯರ ಪ್ರಾಬಲ್ಯವು ಹೆಚ್ಚಾದಮೇಲೆ ಸ್ತ್ರೀವಿದ್ಯಾಭ್ಯಾಸಕ್ಕೆ ಅಸಾಧಾರಣವಾದ ಪ್ರೋತ್ಸಾಹವುಂಟಾಗುತ್ತಲಿದೆ. ಇನ್ನುಮೇಲೆ ಅನೇಕಸ್ತ್ರೀಯರು ನಮ್ಮಲ್ಲಿ ಬಹಳ ವಿದ್ಯಾವತಿಯರಾಗಬಹುದು. ಆದರೆ ಈಗ ೩೦ ವರುಷಗಳ ಕೆಳಗೆ ನಮ್ಮ ಜನರಲ್ಲಿ ಅನೇಕರು ಸ್ತ್ರೀಯರಿಗೆ ವಿದ್ಯಾಭ್ಯಾಸಮಾಡಿಸಿದರೆ ವಿದ್ಯೆಯು ದುರ್ವ್ಯಾಪಾರಕ್ಕೂ ಉಚ್ಛೃಂಖಲಪ್ರವರ್ತನೆಗೂ ಕಾರಣವಾಗುವದೇ ಹೊರ್ತು ಅದರಿಂದ ಪ್ರಯೋಜನವಿಲ್ಲವೆಂದು ಭಾವಿಸುತ್ತಿ

ಹೋಗುವದರಿಂದ ಆಚಾರಗಳಿಗೆ ತೊಂದರೆಬರುವದೆಂಬ ಯೋಚನೆಯು ಉಂಟಾಯಿತು. ಅದಕ್ಕೆ ಆನಂದಬಾಯಿರವರು ಬ್ರಾಹ್ಮಣಾಚಾರಕ್ಕೆ ಲೇಶವೂ ಲೋಪಬಾರದಂತೆ ವಿದ್ಯಾಭ್ಯಾಸಾರ್ಥವಾಗಿ ದೇಶಾಂತರವಾಸಕ್ಕೆ ತಕ್ಕಸನ್ನಾಹವನ್ನು ಮಾಡಿಕೊಂಡರು. ಒಳ್ಳೆ ಆಚಾರಶೀಲೆಯೂದ ವಿತಂತುವಾದ ಒಬ್ಬ ಪರಿಚಾರಿಕೆಯನ್ನು ಕರೆದುಕೊಂಡು ಅಮೆರಿಕಾಖಂಡಕ್ಕೆ ಹೋಗುವದೆಂದು ನಿಷ್ಕರ್ಷೆಮಾಡಿದರು. ಅವರಿಗೆ ಹೀಗೆ ನಿಷ್ಕರ್ಷೆ ಮಾಡಿದಾಗ ೧೪ ವರುಷವಾಗಿತ್ತು. ಈ ಪ್ರತಿಜ್ಞೆಯನ್ನು ಕೇಳಿದವರೆಲ್ಲರೂ ಪರಿಹಾಸ ಮಾಡಿದರು. ಅನೇಕರು ಇವರು ಕೇಳುವಹಾಗೆಯೆ "ಇವಳು ದೊಡ್ಡಗಂಡುಬೀರಿ" ಎಂದು ಅಂದುಕೊಂಡರು. ಈ ಪ್ರಯತ್ನಕ್ಕೆ ಬಂಧುಮಿತ್ರವರ್ಗದವರು ಹೂರೂ ಒಪ್ಪಲಿಲ್ಲ. ಜೋಷಿಯವರು ಒಬ್ಬರೆ ಇವರ ಸಂಕಲ್ಪವನ್ನು ಮೆಚ್ಚಿದರು. ಈ ಒಂದು ಮೆಚ್ಚಿಕೆ ಇವರ ಸಂಕಲ್ಪಸಿದ್ಧಿಗೆ ಪೂರ್ಣವಾದ ಸಾಧಕವಾಯಿತು. ಮಾ॥ ಜೋಷಿಯವರು ವಿಶೇಷ ದ್ರವ್ಯವಂತರಾಗಿರಲಿಲ್ಲ. ಅಮೆರಿಕಾಖಂಡದಲ್ಲಿ ಜೀವನಕ್ಕೆ ತಕ್ಕ ಮೂಲಧನವಿಲ್ಲದಿದ್ದರೂ ಭಯಪಡದೆ ದಾರೀಖರ್ಚಿಗೆ ತಕ್ಕ ಏರ್ಪಾಡುಮಾಡಿಕೊಂಡು ಹೊರಟರು. ಈ ದಂಪತಿಗಳು ದೇವರಮೇಲೆ ಭಾರವನ್ನುಹಾಕಿ ೧೪೫೩ರಲ್ಲಿ ಅಮೆರಿಕಾಕ್ಕೆ ಪ್ರಯಾಣಮಾಡಿದರು. ಬೊಂಬಾಯಿನಲ್ಲಿ ಹಡಗುಹತ್ತಿದ್ದು ಮೊದಲೊಂಡು ಆನಂದಬಾಯಿರವರು ಪುನಃ ಎಂ. ಡಿ. ಪರಿಕ್ಷೆಯನ್ನು ಕೊಟ್ಟು ಬೊಂಬಾಯಿಗೆ ಬರುವವರೆಗೂ ಬ್ರಾಹ್ಮಣಾಚಾರವನ್ನು ಲೇಶವು ಉಲ್ಲಂಘಿಸಲಿಲ್ಲ. ಜೋಷಿಯವರು ಇದರನ್ನು ಫಿಲೆಡೆಲ್ಫಿಯಾದ ಮೆಡಿಕಲ್‌ಕಾಲೀಜಿಗೆ ಸೇರಿ ಇವರ ಅನ್ನೋದಕಗಳಿಗೂ ಪಾಠಪ್ರವಚನಗಳಿಗೂ ತಕ್ಕ ಏರ್ಪಾಡುಮಾಡಿ ಅಮೆರಿಕಾಖಂಡದ ಅನೇಕಭಾಗಗಳಲ್ಲಿ ಉಪನ್ಯಾಸಗಳ ಮೂಲಕವಾಗಿಯೂ ವರ್ತಮಾನಪತ್ರಿಕೆಗಳಿಗೆ ಬರೆಯುವದರ ಮೂಲಕವಾಗಿಯೂ ದ್ರವ್ಯಾರ್ಜನೆಯನ್ನು ಮಾಡಿ ಅದನ್ನು ಆನಂದಬಾಯಿರವರಿಗೆ ಪರದೇಶವಾಸದಿಂದಲೂ ನಮ್ಮ ಆಚಾರಗಳಿಗೆ ಅನುಸಾರವಾಗಿ ಇದ್ದದ್ದರಿಂದಲೂ ಆಗಾಗ್ಗೆ ಪರಿಚಾರಕೆಯು ಖಾಯಲೆ ಆಗುತ್ತಿದ್ದದ್ದರಿಂದಲೂ ಅನೇಕ ಅನಿರ್ವಚನೀಯವಾದ ಕಷ್ಟಗಳು ಸಂಭವಿಸಿದವು. ಇವುಗಳನ್ನೆಲ್ಲಾ ಸಹಿಸಿಕೊಂಡು ಪರಿಚಾರಿಕೆಗೂ ಪರಿಚಾರಿಕೆಯೂಗಿ ವೈದ್ಯವಿದ್ಯಾವಿಶಾರದರಾಗಿ ಗಂಡಸರಿಗೂ ಅತ್ಯಂತ ಶ್ರಮಸಾಧ್ಯವಾದ ಎಂ. ಡಿ. ಪರಿಕ್ಷೆಯನ್ನು ಕೊಟ್ಟು ಆರ್ಯಮಹಿಳೆಯರಿಗೆ ಹಾಕಿರತಕ್ಕ ಮೇಲುಪಜ್ಕ್ಯೆಯ ವಿಚಾರವನ್ನು ಮುಂದಿನ ಭಾಗದಲ್ಲಿ ತಿಳಿಸುತ್ತೇವೆ.

ಉಳಿದ ಕಾಲದಲ್ಲಿ ವಿದ್ಯಾಭ್ಯಾಸವನ್ನು ತಮ್ಮ ಯಜಮಾನರಲ್ಲಿ ಮಾಡುತ್ತಾ ಇದ್ದರು. ಹೀಗೆ ಕೆಲವು ವರುಷಗಳು ಇವರು ತಮ್ಮ ಯಜಮಾನರಿಗೆ ಯಾವಯಾವ ಊರಿಗೆ ವರ್ಗವಾಗುತ್ತದೆಯೋ ಅಲ್ಲಿಗೆ ಅವರ ಜೊತೆಯಲ್ಲಿ ಹೋಗುತ್ತಾ, ಅವರಲ್ಲಿ ದೇಶ ಭಾಷೆಯನ್ನು ಮತ್ತು ಇಂಗ್ಲೀಷನ್ನು ಅಭ್ಯಾಸಮಾಡುತ್ತಾ ಇದ್ದರು. ಮಾ॥ ಜೋಷಿಯವರು ಸ್ವಯಂ ವಿದ್ಯಾವಂತರು. ದೇಶಾಟನದಿಂದಲೂ ಪಂಡಿತರ ಭಾಷಣದಿಂದಲೂ ವರ್ತಮಾನಪತ್ರಿಕಾವಲೋಕನದಿಂದಲೂ ಅನೇಕ ವಿಷಯಗಳನ್ನು ತಿಳಿದುಕೊಂಡಿದ್ದರು. ಇವರು ಪ್ರತಿನಿತ್ಯದಲ್ಲಿಯೂ ವಿರಾಮಕಾಲದಲ್ಲಿ ಲೋಕವ್ಯವಹಾರವಿಚಾರಗಳನ್ನು ಆನಂದಬಾಯಿಯವರಿಗೆ ಹೇಳುತ್ತಾ ಅವರೊಡನೆ ಅವುಗಳ ಗುಣದೋಷಗಳನ್ನು ಚರ್ಚಿಸುತ್ತಾ ಇರುವ ಸಂಪ್ರದಾಯವಿತ್ತು. ಒಂದುದಿನ ನಮ್ಮದೇಶದ ಸ್ತ್ರೀಯರು ದುರ್ಬಲರಾಗಿಯೂ, ರೋಗಿಗಳಾಗಿಯೂ, ಅಕಾಲಮರಣವನ್ನು ಹೊಂದತಕ್ಕವರಾಗಿಯೂ ಇರುವ ಪ್ರಸ್ತಾಪ ಉಂಟಾಯಿತು. ಆಗ ಜೋಷಿಯವರು ನಮ್ಮ ಸಮಯಾಚಾರಗಳನ್ನು ನಮ್ಮಲ್ಲಿ ನಡೆಯುವ ಬಾಲಿಕಾವಿವಾಹಗಳನ್ನು ದೇಹವು ಬಲಿಯುವದಕ್ಕೆ ಮುಂಚೆಯೇ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳು ಮಾತಾಪಿತೃಗಳಾಗುವದರಿಂದ ಉಂಟಾಗತಕ್ಕ ಶರೀರದ ಮತ್ತು ಬುದ್ಧಿಯ ದೌರ್ಬಲ್ಯವನ್ನೂ ಇದರಿಂದ ವಿದ್ಯಾಭಿವೃದ್ಧಿಗೆ ಉಂಟಾಗುವ ಪ್ರತಿಬಂಧಕವನ್ನು ಸ್ವೇಚ್ಛಾಪ್ರವರ್ತನೆಯಿಂದ ಸ್ತ್ರೀಯರಿಗೆ ಉಂಟಾಗುವ ಕೆಲವು ಮರ್ಮವಾದ ರೋಗಗಳನ್ನು ಅವುಗಳನ್ನು ನೋಡಿ ಚಿಕಿತ್ಸೆ ಮಾಡುವುದಕ್ಕೆ ತಕ್ಕಯೋಗ್ಯತೆಯುಳ್ಳ ವೈದ್ಯವಿದ್ಯಾಪಾರಂಗತರಾದ ಸ್ತ್ರೀಯರು ವಿರಳವಾಗಿರುವದರಿಂದ ನಮ್ಮ ಸ್ತ್ರೀಯರು ವಿಶೇಷವಾಗಿ ಅಕಾಲಮರಣವನ್ನು ಹೊಂದುವದನ್ನು ಅಥವಾ ಬದುಕಿದ್ದರು ಜೀವನ್ಮೃತರಂತೆ ಇರುವದನ್ನೂ ಯುಕ್ತಿಯುಕ್ತವಾಗಿಯೂ ದೃಷ್ಟಾಂತಪೂರ್ವಕವಾಗಿಯೂ ಹೇಳಿದರು. ಇವರ ಉಪನ್ಯಾಸವನ್ನು ಕೇಳಿದ ಕೂಡಲೆ ಆನಂದಬಾಯಿಜೋಷಿಯವರು ವೈದ್ಯವಿದ್ಯಾಭ್ಯಾಸವನ್ನು ಮಾಡಿ ತಮ್ಮ ದೇಹವನ್ನು ರೋಗದಿಂದ ಪೀಡಿತರಾದ ನಮ್ಮ ಹಿಂದೂಸ್ತ್ರೀಯರ ಕ್ಷೇಮಾರ್ಥವಾಗಿ ವಿನಿಯೋಗಿಸಬೇಕೆಂದು ಸಂಕಲ್ಪಮಾಡಿ ಈ ಸಂಕಲ್ಪವನ್ನು ನೆರವೇರಿಸುವದಕ್ಕೆ ಉಪಾಯವನ್ನು ತಮ್ಮ ಯಜಮಾನರನ್ನೆ ಕೇಳಿದರು. ಜೋಷಿಯವರು ಚೆನ್ನಾಗಿ ವಿಚಾರಿಸಿ ಸ್ತ್ರೀಯರಿಗೆ ವೈದ್ಯವಿದ್ಯಾಭ್ಯಾಸವು ಅಮೆರಿಕಾಖಂಡದ ಫಿಲಿಡೆಲ್‌ಫಿಯಾ ಪಟ್ಟಣದಲ್ಲಿ ಸಮರ್ಪಕವಾಗಿ ನಡೆಯುವದೆಂದು ಗೊತ್ತುಮಾಡಿದರು. ಆದರೆ ಅಮೆರಿಕಾಖಂಡಕ್ಕೆ

ಸುರಿದ ಮಳೆಯು ಏಕವಿಧವಾಗಿದ್ದರೂ ತಾವುಪರ್ಣಿಯಲ್ಲಿ ಕಪ್ಪೆಯುಚಿಪ್ಪಿನಲ್ಲೂ ಬೀಳುವುದರಿಂದ ಮುತ್ತುಗಳಾಗಿಯೂ, ಏಳೆಲೆ ಬಾಳೇಗಿಡಗಳಲ್ಲಿ ಬೀಳುವುದರಿಂದ ಕರ್ಪೂರವಾಗಿಯೂ ಪರಿಣಮಿಸುವುದು, ಮತ್ತು ತೋಟಗಳಲ್ಲಿ ಕಾಲವೆಗಳನ್ನು ಮಾಡಿ ಅನೇಕವಿಧವಾದ ಗಿಡಗಳಿಗೆ ಹಾಯಿಸಿದ ನೀರು ಒಂದೇ ಆಗಿದ್ದರೂ ಗಿಡಗಳು ಅನೇಕ ಜಾತಿಗಳಾದುದರಿಂದ, ಅವುಗಳ ರಸವು ಮಧುರ, ಆಮ್ಲ, ಲವಣ, ಕಟು, ಮೊದಲಾದ ನಾನಾರಸಗಳಾಗಿ ಪರಿಣಮಿಸಿರುವದು. ಇದರಂತೆ ಆ ದಿವ್ಯಧ್ವನಿಯು ಒಂದೇ ಹುಟ್ಟುವಾಗ ಸಮುದ್ರಫೇನದಂತೆ ಅವ್ಯಕ್ತಭಾಷಾರೂಪವಾಗಿದ್ದರೂ ಶ್ರೋತೃಗಳ ಕಿವಿಯನ್ನು ಹೊಂದಿ ಅವರವರ ಜಾತಿಭೇದದಿಂದ ಅನೇಕ ಭಾಷೆಗಳಾಗಿ ಪರಿಣಮಿಸುವುದು, ಎಂದು ತಿಳಿಯುವುದು. ಇದರಲ್ಲಿ, "ದೇವಾದ್ಯೇವೀಂನರಾನಾರೀಂ ಶಬರಾ ಶ್ಚಾಪಿಶಾಬರೀಂ ॥ ತಿರ್ಯಂಚೋಪಿಚತೈರಶ್ಚೀಂ ಮೇನಿರೆಭಗವದ್ಗಿರಃ" ಎಂದು ಮಹಾಪುರಾಣವೆಂಬ ಜೈನಗ್ರಂಥವೂ ಪ್ರಮಾಣವಾಗಿರುವುದು. ಇಂಥಾ ಭಾಷೆಗಳಲ್ಲಿ ಎಲ್ಲದರಲ್ಲೂ ಜಾತಿಶಬ್ದಗಳೆಂತಲೂ, ಕ್ರಿಯಾಶಬ್ದಗಳೆಂತಲೂ, ಗುಣಶಬ್ದಗಳೆಂತಲೂ, ಯದೃಚ್ಛಾ ಗಳೆಂತಲೂ ನಾಲ್ಕುವಿಧವಾಗಿರುವುವು, ಅವುಗಳಲ್ಲಿ ಸಾಮಾನ್ಯವಾಗಿ ಒಂದೊಂದು ಗುಂಪಿಗೆ ಬೋಧಕನಾಗುವ ಶಬ್ದವು ಜಾತಿಶಬ್ದವು. ಇದು ಕರ್ಣಾಟಕಭಾಷೆಯಲ್ಲಿ, ನೆಲ, ಹೊಲ, ಮನೆ, ಜನ, ಹಸು, ಮೊದಲಾಗಿ ಪ್ರಸಿದ್ಧವಾಗಿರುವುದು, ಧಾತುವಿಂದ ಹುಟ್ಟಿ ಕ್ರಿಯೆಯನ್ನುಮಾತ್ರ ನಿಮಿತ್ತ ಮಾಡಿಕೊಂಡು ಉಪಯೋಗಿಸುವ ಶಬ್ದ, ಅಂದರೆ ಪಾಚಕ, ಪರಿಚಾರಕ, ಮೊದಲಾದವು ಕ್ರಿಯಾಶಬ್ದವು. ಕರಿಯುವನು ಬಿಳಿಯುವನು, ಮೊದಲಾದ ಗುಣವನ್ನೆ ನಿಮಿತ್ತ ಮಾಡಿಕೊಂಡು ಪ್ರಯೋಗಿಸುವ ಶಬ್ದವು ಗುಣಶಬ್ದವು, ಜನಗಳು ತಮ್ಮತಮ್ಮ ಇಚ್ಛಾನುಸಾರವಾಗಿ ಕಲ್ಪಿಸಿದ, ದೇವದತ್ತ, ಕುಂಚೀ, ಮಂಚೀ ಮೊದಲಾದವು ಯದೃಚ್ಛಾಶಬ್ದಗಳು, ಹೀಗೆ ನಾನಾವಿಧವಾದ ಶಬ್ದಗಳಲ್ಲಿ ಯದೃಚ್ಛಾಶಬ್ದವೆಂಬ ಸಂಕೇತ ಶಬ್ದಗಳನ್ನು ಬಿಟ್ಟು ಉಳಿದವುಗಳೆಲ್ಲಾ ಧಾತುಗಳಿಂದ ಹುಟ್ಟಿದವುಗಳೆಂತ ಕೆಲವು ವೈಯಾಕರಣರುಮಾತ್ರ ಅಂಗೀಕರಿಸಿರುವರು. ಇನ್ನು ಕೆಲವರು ಕ್ರಿಯಾಶಬ್ದಹೊರ್ತು ಉಳಿದವುಗಳಾವುವೂ ಧಾತುನಿಷ್ಪನ್ನಗಳಲ್ಲವೆಂದು ಹೇಳುವರು. ಹೀಗೆ ವೈಯ್ಯಾಕರಣರಿಗೆ ಶಬ್ದನಿಷ್ಪತ್ತಿಯಲ್ಲಿ ಪರಸ್ಪರ ವಿವಾದಳಿದ್ದರೂ ಲೋಕದಲ್ಲಿ ಉಪಯೋಗಿಸುವುದು ಒಂದೇಜಾತಿಯಾಗಿರಬೇಕೆಂಬುದು ಸರ್ವಸಮ್ಮತವು

ಭಾಷಾವಿಚಾರ.

ಭಾಷೆಯೆಂಬುದು, 'ಭಾಷ, ವ್ಯಕ್ತಾಯಾಂವಾಚಿ, ಎಂದು ಸಂಸ್ಕೃತವ್ಯಾಕರಣದಲ್ಲಿ ಹೇಳಿರುವ ಸ್ಪಷ್ಟವಾದ ಮಾತೆಂದು ಅರ್ಥವುಳ್ಳ ಭಾಷಧಾತುವಿನಿಂದ ನಿಷ್ಪನ್ನವಾದ ಶಬ್ದವು. ಆದುದರಿಂದ ಈ ಶಬ್ದಕ್ಕೆ ಸ್ಪಷ್ಟವಾದ ಮಾತೆಂದು ಅರ್ಥವಾಗುವುದು. ಆದರೆ ಶಬ್ದಾನುಶಾಸನಕಾರನೂ, ಭಾಷತ ಇತಿಭಾಷಾ, ಭಾಷ್ಯತೆ ಅನಯೇತಿಭಾಷಾ, ಭಾಷಣಮಿತಿ ಭಾಷಾ, ಎಂದು ಕರ್ತೃರ್ಥದಲ್ಲೂ, ಕರಣಾರ್ಥದಲ್ಲೂ, ಭಾವಾರ್ಥದಲ್ಲೂ, ಭಾಷಧಾತುವಿನ ಮೇಲೆ ಅಕಾರಪ್ರತ್ಯಯವನ್ನು ಮಾಡಿ ಭಾಷಾ ಶಬ್ದನಿಷ್ಪತ್ತಿಯನ್ನು ತೋರಿಸಿರುವನು. ಆದುದರಿಂದ ಲೋಕದಲ್ಲಿ ಸಂಕೇತಗಳಿಂದ ಪದಾರ್ಥಗೋಚರವಾದ ಪ್ರವೃತ್ತಿ ನಿವೃತ್ತಿರೂಪವ್ಯವಹಾರಕ್ಕೆ ಉಪಯುಕ್ತವಾದ ಮಾತ ಗಳೆಂದು ಅರ್ಥವಾಗುವುದು. ಇಂಥಾ ಮಾತುಗಳು ಸ್ವರ, ವ್ಯಂಜನರೂಪವಾದ ವರ್ಣಾತ್ಮಕವಾಗಿರುವುವು. ಇಂಥಾ ಭಾಷೆಗಳು ಲೋಕದಲ್ಲಿ ಕರ್ಣಾಟಕ, ಆಂಧ್ರ, ಮಗಧ, ಮಾಳವ ಮೊದಲಾದ ನಾನಾ ದೇಶಭೇದಗಳಿಂದಲೂ, ಕಾಲಭೇದದಿಂದಲೂ, ಜಾತಿಭೇದದಿಂದಲೂ, ಅನೇಕಪ್ರಕಾರವಾಗಿ ಹರಡಿಕೊಂಡಿರುವುವೆಂದು ಕೆಲವರು ಹೇಳುತ್ತಾರೆ. ಆದರೆ ನಮ್ಮ ಪೂರ್ವಿಕರಲ್ಲಿ ಕೆಲವು ಭಾಷಾಭಿಜ್ಞರು ೧೪ ಮಹಾಭಾಷೆಗಳೆಂತಲೂ, ೭೦೦ ಕ್ಷುಲ್ಲಕಭಾಷೆಗಳೆಂತಲೂ, ಪರಿಗಣನೆ ಮಾಡಿರುವದಲ್ಲದೆ ಇಂಥಾ ಭಾಷೆಗಳೆಲ್ಲವೂ, ಅನಾದಿಕಾಲದಿಂದಲೂ ಲೋಕದಲ್ಲಿ ಪ್ರಸಿದ್ಧವಾಗಿರುವವೆಂದು ಹೇಳುವರು, ಇನ್ನು ಕೆಲವು ವ್ಯಾಕರಣಶಾಸ್ತ್ರಜ್ಞರು ಆದಿಯಲ್ಲಿ ಎಲ್ಲಾ ಭಾಷೆಗಳಿಗೂ ಮೂಲಭೂತವಾದ ಒಂದೇ ಭಾಷೆಯಿತ್ತು, ಅದು ಯಾವುದೆಂದರೆ ಒಂದು ದಿವ್ಯಧ್ವನಿಯು, ಇದನ್ನು ಕೇಳಿದ ದೇವ ಮನುಷ್ಯಮೊದಲಾದ ಜಾತಿಭೇದಗಳಿಂದ ಅನೇಕ ಭೇದಗಳನ್ನು ಹೊಂದಿ ಅನೇಕ ಭಾಷೆಗಳಾಗಿ ಪರಿಣಮಿಸಿರುವದೆಂದು ಹೇಳುವರು. ಇಲ್ಲಿ ಒಂದೇ ಭಾಷೆಯು ಅನೇಕ ಭಾಷೆಗಳಿಗೆ ಹ್ಯಾಗೆ ಕಾರಣವಾಗುವದೆಂದರೆ ಲೋಕದಲ್ಲಿ, ವರ್ಷಾಕಾಲದಲ್ಲಿ ಆಂತರಿಕ್ಷದಿಂದ ಬಿದ್ದ ನೀರು ಅವ್ಯಕ್ತರಸವಾಗಿ ಒಂದೇವಿಧವಾಗಿದ್ದರೂ ಲವಣ, ಕೃಷ್ಣ, ಊಷರ, ಭೂಮಿಗಳಲ್ಲಿ ಬೀಳುವದರಿಂದ ಆಯಾಯ ಭೂಮಿಯ ರಸಭೇದದಿಂದ ಭಿನ್ನವಾಗಿ ನಾನಾವಿಧನಾಗಿ ಆಗಿರುವುದು ಎಲ್ಲರಿಗೂ ತಿಳಿದೇ ಇರುವುದು. ಮತ್ತು ಶರತ್ಕಾಲದಲ್ಲಿ ಸೂರ್ಯನು ಸ್ವಾತಿನಕ್ಷತ್ರದಲ್ಲಿರಲು, ಶುಭ್ರವಾದ ಮೇಘದಿಂದ

ಬಾಳೆ.

ಗಾಳಿಯಿಂದ ಭೇದಿಸಲ್ಪಡುವಕಾರಣ ಇದಕ್ಕೆ ಕದಳೀ ಎಂಬದಾಗಿ ಮತ್ತೊಂದು ಹೆಸರು ಬಾಳೇ ವ್ಯವಸಾಯವು ಉಷ್ಣವಲಯದಲ್ಲಿ ಆಗುವುದೇ ಹೆಚ್ಚು. ಸವಃಶೀತೋಷ್ಣವಲಯಗಳಲ್ಲಿನ ಉಷ್ಣಪ್ರಾಂತ್ಯದಲ್ಲಿರುವ ಕೆಲವುಭಾಗಗಳಲ್ಲೂ ಆಗುವುದು. ಇದು ಹಿಂದೂಸ್ಥಾನ ಹಿಂದೂ ಚೀನ ಪೂರ್ವ ಹಿಂದೂದ್ವೀಪ ಸಮುದಾಯಗಳಲ್ಲಿ ಆಗುತ್ತದೆ. ಹದಿನಾರನೇ ಶತವಾನದಿಂದ ಅಮೆರಿಕಾಖಂಡದಲ್ಲೂ ಆಗುತ್ತೆ. ಕೊಲಂಬಸ್ ಎಂಬುವನು ೧೬ ನೇ ಶತವಾನದಲ್ಲಿ ಇದನ್ನು ಅಮೆರಿಕಾಖಂಡಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಹಬ್ಬುವಂತೆ ಮಾಡಿದನು. ಬಾಳೆ ಆಗದೇ ಇದ್ದ ಭೂಮಿಯೇ ಇಲ್ಲ. ಅದು ಆಯಾ ಭೂಪ್ರದೇಶಕ್ಕೆ ತಕ್ಕಂತೆ ಆಗುವುದು. ಬಾಳೇ ವ್ಯವಸಾಯಕ್ಕೆ ಬೇಸಿಗೆಯಲ್ಲಿ ಒಂದು ಗಜಮಟ್ಟದ ಕೆಳಗೆ ನೀರು ಸಿಕ್ಕುವಂತೆ ನೆಲವು ತಂಪಾಗಿರಬೇಕು. ಈ ಬೆಳೆಗೆ ಮರಳುಮಿಶ್ರವಾದ ಕರೀಮಣ್ಣಿನ ಪ್ರದೇಶವು ಅತ್ಯುತ್ಕೃಷ್ಟವಾದದ್ದು. ಈ ವಿಧವಾದ ಭೂಮಿಯಲ್ಲಿ ಬಾಳೆ ಆಗುವಹಾಗೆ ಕೆಂಪುಮಿಶ್ರವಾದ ಮರಳುಭೂಮಿಯಲ್ಲಿ ಚೆನ್ನಾಗಿ ಆಗುವುದಿಲ್ಲ. ನದೀತೀರಗಳಲ್ಲಿರುವ ಮೆಕ್ಕಲುಮಿಶ್ರವಾದ ಭೂಮಿಯು ಉತ್ಕೃಷ್ಟವಾದದ್ದು. ಶುದ್ಧವಾದ ಎರೇಭೂಮಿಯಲ್ಲಿ ರಸಬಾಳೆ ಬೂದುಬಾಳೆಗಳು ಆಗುವುವು. ಜೌಳುಮಿಶ್ರವಾದ ಭೂಮಿಯಲ್ಲಿ ರಸಬಾಳೆ ಆಗುವುದು. ಅದು ಅಲ್ಲಿ ಅದಾಗ್ಯೂ ಲಾಭಕರವಾಗಿ ಆಗುವುದಿಲ್ಲ. ಬಾಳೆ ಹಾಕಬೇಕಾದ ಭೂಮಿಯಲ್ಲಿ ಒಂದು ಗುಳಿಯಿಂದ ಮತ್ತೊಂದುಗುಳಿಗೆ ೧೨ ಮೊಳ ಅಥವಾ ೬ ಗಜ ಪ್ರಮಾಣ ಅವಕಾಶವಿರುವಂತೆ ನೋಡಿಕೊಂಡು ಪ್ರತಿ ಒಂದು ಗುಳಿಯನ್ನೂ ಮೂರು ಮೊಳ (ನಾಲ್ಕುವರೆ ಅಡಿ) ಉದ್ದ ಮೂರುಮೊಳ ಅಗಲ ಎರಡೂವರೆ ಮೊಳ (ಸುಮಾರು ೫ ಅಡಿ) ಆಳವಿರುವಂತೆ ತೆಗೆದು ಬಾಳೆಯನ್ನು ನೆಡುವುದು ಉತ್ತಮವಾದದ್ದು. ಅನೇಕರು ಹೀಗೆ ಮಾಡದೆ ಒಂದು ಗುಳಿಯಿಂದ ಮತ್ತೊಂದು ಗುಳಿಗೆ ೩ ಗಜ ಅವಕಾಶವಿರುವಂತೆಯೂ ಪ್ರತಿ ಒಂದು ಗುಳಿಯೂ ಒಂದು ಘನಗಜಪ್ರಮಾಣವಿರುವಂತೆಯೂ ತೆಗೆದುಹಾಕುವದು. ಈಪ್ರಕಾರ ಹಾಕುವುದರಿಂದ ಮುಂದಿನ ಪೈರುಗಳಿಗೆ ಮೇಲುಗಡೆ ವಿಶೇಷವಾಗಿ ನೆರಳು ಕಟ್ಟಿಕೊಳ್ಳುವುದು. ಈ ವಿಧವಾಗಿ ಹಾಕಿದ ಬಾಳೆಯು ೪-೫ ವರುಷಗಳಲ್ಲಿ ತೇಲಿ ಹೋಗುವುದು. ಇನ್ನು ಕೆಲವುಕಡೆ ಮೂರುಮೊಳ ಅಗಲ ಎರಡೂವರೆ ಮೊಳ ಆಳವಿ

ಟಿಪ್ಪಣಿ

ಗಣಿತ

Iನೇ ತರಗತಿ

ಗುಣಾಕಾರಮಾಡುವದಕ್ಕೆ ಬೇರೆಬೇರೆ ವಿಧಗಳು.

ವಿಷಯ	ಬೋಧನಾಕ್ರಮ
I. 875ನ್ನು 6ರಿಂದ ಗುಣಿಸುವದು. ಹೇಗೆಂದರೆ:— 875 × 6 = 5250	ಆದಿಯಲ್ಲಿ ಮಗ್ಗಿ ಮತ್ತು ಅಂಕಖಂಡನೆ ವಿಷಯವಾಗಿ ಪ್ರಶ್ನೆಕೇಳುವದು. (1) ಇದನ್ನು ಹುಡುಗರಿಂದ ಹಲಿಗೆ ಮೇಲೆ ಗುಣಿಸಿಸುವದು.
II 875ನ್ನು 6ರಿಂದ ಗುಣಿಸುವದಕ್ಕೆ ಬದುಲಾಗಿ 2ರಿಂದ ಗುಣಿಸಿ ಬಂದದ್ದನ್ನು 3ರಿಂದ ಗುಣಿಸಬಹುದು, ಹೇಗೆಂದರೆ:— 875 × 2 = 1750; 1750 × 3 = 5250	(2) 5ನ್ನು 6ರಿಂದ ಗುಣಿಸಬೇಕು. ಈಗ 5ನ್ನು 2ರಿಂದ ಗುಣಿಸಿದೆ; ಇನ್ನೆಷ್ಟರಿಂದ ಗುಣಿಸಿದರೆ 6ರಿಂದ ಗುಣಿಸಿದಂತಾಗುವದು? ಎಂಬಂಥಾ ಪ್ರಶ್ನೆಗಳನ್ನು ಕೇಳಿ 6ರಿಂದ ಗುಣಿಸುವದಕ್ಕೆ ಬದುಲಾಗಿ 2ರಿಂದಲೂ 3ರಿಂದಲೂ ಗುಣಿಸಿದರೆ ಉತ್ತರ ಬರುವದೆಂಬುವದನ್ನು ಅವರಿಂದಲೇ ಹೇಳಿಸುವದು. ಇಂಥಾ I–2ಲೆಕ್ಕಗಳನ್ನು ಅನುಭವ ಬರುವಂತೆ ಮೂಡಿಸುವದು.
III 875ನ್ನು 6ಮತ್ತು 2×3ರಿಂದ ಗುಣಿಸುವದಕ್ಕೆ ಬದುಲಾಗಿ 6ನ್ನು ಅಂಕಖಂಡನೆ (ಅಂದರೆ 4+2) ಮೂಡಿ ಬೇರೆ ಬೇರೆಯಾಗಿ ಆ ಎರಡು ಅಂಕಿಗಳಿಂದ ಗುಣಿಸಿ ಬಂದವುಗಳನ್ನು ಸೇರಿಸಿದರೆ ಉತ್ತರ ಬರುವದು. ಹೇಗೆಂದರೆ:— 875 × 4 = 3500; 875 × 2 = 1750; 3500 + 1750 = 4250	(3) ಇದನ್ನು ಪ್ರಶ್ನೆಮೂಡಿ ಹುಡುಗರಿಂದ ಹೊರಡಿಸುವದು. ಇಂಥಾ I–2 ಲೆಕ್ಕಗಳನ್ನು ಚೆನ್ನಾಗಿ ಮನನಮಾಡಲೆಂದು ಮೂಡಿಸುವದು.
IV 875ನ್ನು 10ರಿಂದ ಗುಣಿಸುವದು 875ಕ್ಕೆ ಒಂದು ಸೊನ್ನೆಯನ್ನು ಸೇರಿಸಿದರೆ ಉತ್ತರಬರುವದು. ಹೀಗೆಯೇ 20,30ರಿಂದ ಗುಣಿಸಬೇಕಾದರೆ 2–3ರಿಂದ ಗುಣಿಸಿ ಕೊನೆಗೆ ಒಂದು ಸೊನ್ನೆಯನ್ನು ಸೇರಿಸುವದು	II ಮತ್ತು IIIಕ್ಕೂ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ಅವರಿಂಲೇ ಹೊರಡಿಸುವದು. (4) ಪ್ರಶ್ನೆಮೂಡಿ ಹುಡುಗರಿಂದಲೇ ಹೊರಡಿಸುವದು. ಎಲ್ಲವನ್ನೂ ಪುನರಾವರ್ತನೆಮೂಡಿಸುವದು.

ಜೌಗುಪ್ರದೇಶವಾದರೆ ಜೌಗಿನ ನೀರೆಲ್ಲಾ ಕಡಗಿನ ಮೂಲಕ ಆಚೆಗೆ ಹೋಗುವುದು. ಬೇಸಿಗೆಕಾಲ ಬಂದಾಗ ಜಲವಸತಿ ಇಲ್ಲದಿದ್ದರೆ ಕಡಗುಗಳ ಉಭಯಪಾರ್ಶ್ವಗಳನ್ನೂ ಕಟ್ಟೆ ತೇವವಾರದ ರೀತಿಯಲ್ಲಿಡುವರು. ಆಗ ಬಾಳೆಗೆ ತಂಪಾಗಿರುವುದು. ಬಾಳೆ ಕಂದುಗಳನ್ನು ಆರಿಸುವುದರಲ್ಲಿ ಅವು ಹೊರುವಾಗಿಯೂ ದಪ್ಪವಾಗಿಯೂ ಬೆಳೆದಿದ್ದಾಗಿರಬೇಕ ಇವುಗಳನ್ನು ಹಾಕುವುದರಲ್ಲಿ ಒಂದು ತಿಂಗಳಿನದು ಮೊದಲೊಂಡು ನಾಲ್ಕು ತಿಂಗಳಿನ ಕಂದುಗಳವರಿಗೂ ಹಾಕುವುದುಂಟು. ಆದರೆ ಮೂರುತಿಂಗಳಿನ ಮೇಲೆ ನಾಲ್ಕು ತಿಂಗಳುಗಳೊಳಗೆ ಇರುವ ಕಂದುಗಳು ಉತ್ತಮವಾದದ್ದು. ಅದಕ್ಕಿಂತ ಕಡಮೆವಯಸ್ಸಿನ ಕಂದುಗಳಾದರೆ ಅಳಕ್ಕೆ ಹಾಕುವುದಕ್ಕೆ ಆಗುವುದಿಲ್ಲ. ಅದರಿಂದ ಬಾಳೆಯು ಮೇಲಕ್ಕೆ ತೇಲಿಹೋಗುವುದು. ನಾಲ್ಕುತಿಂಗಳಿಗೆ ವಿಾರಿದ ಕಂದುಗಳನ್ನು ಹಾಕಿದರೆ ಅದರಲ್ಲಿ ಹೊರುವಾಗಿ ಫಲಹಿಡಿಯುವದಿಲ್ಲ. ಮೊದಲು ಕಂದುಗಳನ್ನು ಗೊತ್ತುಮಾಡಿಕೊಂಡಮೇಲೆ ಗೆಡ್ಡೆಯಿಂದ ಒಂದುಗಜ ಪ್ರಮಾಣಕ್ಕೆ ಬಿಟ್ಟುಕೊಂಡು ತಲೆಯನ್ನು ಸವರಿಹಾಕಬೇಕು. ಕಂದುಗಳ ತಲೆಯನ್ನು ಕತ್ತರಿಸದೆ ಹಾಕಿದರೆ ಕಂದು ಬೇರುಬಿಟ್ಟುಕೊಳ್ಳದೆ ಇರುವುದರಿಂದಲೂ ತಲೆಕಡೆ ಎಲೆಗಳು ಇರುವುದರಿಂದಲೂ ಗಾಳಿಯಿಂದ ಬಾಗಿಸಲ್ಪಡುವವು. ಒಂದೊಂದುವೇಳೆ ಮುರಿದು ಮುಂದಿನ ಸುಳಿ ಏಳುವುದಕ್ಕೆ ಜೆನ್ನಾಗಿ ಅವಕಾಶಕೊಡದೆ ಹೋಗುವುದೂ ಉಂಟು. ಬಾಳೆ ಕಂದುಹೊರಟ ಒಂದು ವರುಷಕ್ಕೆ ಫಲಬಿಡುವುದು. ಅಂದರೆ ಒಂದು ತಿಂಗಳಿನ ಕಂದು ೧೧ ತಿಂಗಳಿಗೂ ೨ತಿಂಗಳಿನ ಕಂದು ೧೦ ತಿಂಗಳಿಗೂ ೩ತಿಂಗಳಿನಕಂದು ೯ತಿಂಗಳಿಗೂ ೪ತಿಂಗಳಿನ ಕಂದು ೮ತಿಂಗಳಿಗೂ ಗೊನೆಬಿಡುವುದು. ಬಾಳೆಕಂದಿನ ವಯಸ್ಸನ್ನು ತಿಳಿಯಬೇಕಾದರೆ ಅದರ ವ್ಯವಸಾಯಗಾರರು ಅದರ ಬೆಳವಳಿಗೆಯನ್ನೂ ಗಾತ್ರವನ್ನೂ ನೋಡಿ ಗೊತ್ತುಮಾಡುವರು. ಮೂರುತಿಂಗಳ ಕಂದಿಗೆ ಸಾಮ್ಯಶಃ ೬೦ ಅಥವಾ ೭೦ ರಟ್ಟೆಗಳು ಮೇಲುಗಡೆ ಹೊರುವಾಗಿ ಒಡೆದು ಕಾಣುವವು. ಬಾಳೇಗೊನೆಯು ಬಿಡುವಾಗ್ಗೆ ೩೦ ಅಥವಾ ೩೫ ಎಲೆಗಳು ಹೊರಟಿರುವವು. ಈ ಎಲೆಗಳು ಎರಡು ಅಡೀ ಮೊದಲೊಂಡು ೪ ಅಥವಾ ೫೦ ಅಡಿಗಳವರಿಗೆ ಇರುವವು. ಬಾಳೇಗಿಡವನ್ನು ನೋಡಿದರೆ ಮೇಲುಗಡೆ ೧೦—೧೫ ಎಲೆಗಳೇ ಕಾಣುವವು. ಉಳಿದದ್ದು ಒಣಗಿ ಬಾಳೆಕಂಬವ ಸುತ್ತಲೂ ಬಾಗಿ ಬಿದ್ದಿರುವವು. ಎಲೆಗಳು ಬುಡವಲ್ಲಿ ಅಗಲವಾಗಿಯೂ ಕೊನೆಕೊನೆಗೆ ಕಿರಿಬಾಗಿಯೂ ಇರುವ ಪಟ್ಟೆಗಳಿಂದ ಸಂಬಂಧಿಸಿಕೊಂಡಿರುವವು. ಎಲೆಯು ಸಣ್ಣ

ರುವಂತೆ ಮೂದಲು ಒಂದುಸರತಿ (ಕಾಲುವೆ) ಯನ್ನು ತೆಗೆಯುವರು. ಅನಂತರ ಪ್ರತಿ ಒಂದು ಸರತಿಗೂ ಆರಾರು ಗಜ ಅವಕಾಶವಿರುವಂತೆ ತಾವೂ ಬಾಳೆ ಹಾಕುವಷ್ಟು ಸರತಿಗಳನ್ನು ತೆಗೆಯುವರು. ಹೀಗೆ ತೆಗೆದ ಸರತಿಗಳ ಮಣ್ಣನ್ನು ಎರಡು ಸರತಿಗಳ ಮಧ್ಯೆ ಇರುವ ಸ್ಥಳದಲ್ಲಿ ಹಾಕುವರು. ಅನಂತರ ಗುಳಿ ಅಥವಾ ಸರತಿಗಳನ್ನು ತೆಗೆದ ಮೇಲೆ ಭೂಮಿಯು ಹೊರವಾಗಿರದಿದ್ದರೆ ಬಸರಿ ಆಲ ಹೊಂಗೇ ಆವರಿಕೆ ಮೊದಲಾದವುಗಳ ತರಗುಗಳನ್ನು ತೆಗೆದುಕೊಂಡು ಬಂದು ತುಂಬಿ ಆಮೇಲೆ ಬಾಳೆಕಂದುಗಳನ್ನು ನೆಡುವರು. ಇವೆಲ್ಲಕ್ಕಿಂತಲೂ ಒಣಗಿದ ಈಚಲು ಮರಗಳನ್ನು ತೆಗೆದುಕೊಂಡು ಬಂದು ಗುಳಿ ಅಥವಾ ಸರತಿಗಳನ್ನು ಇನ್ನೂ ಒಂದೊಂದು ಗೇಣುಗಿಂತ ಸ್ವಲ್ಪ ಕಡಿಮೆಯಾಗಿ ಆಗಿದು ಗುಳಿಗಳಾದರೆ ಅದು ಹಿಡಿಯುವುದಕ್ಕೆ ತಕ್ಕಂತೆ ತೂತುಗಳನ್ನು ಮಾಡಿ ಒಂದೊಂದು ಗುಳಿಗೆ ಒಂದೊಂದು ತುಂಡನ್ನೂ ಸರತಿಯಂದರೆ ಅದರಲ್ಲಿ ಉದ್ದಕೂ ಒಂದುಸಾಲು ಮರಗಳನ್ನೂ ಇಟ್ಟು ಕಂದುಗಳನ್ನು ನೆಡುವರು. ಸರತಿಯಲ್ಲಿ ಕಂದುಗಳನ್ನು ನೆಡಬೇಕಾತರೆ ಪ್ರತಿ ಒಂದು ಕಂದಿಗೂ ಮಧ್ಯೆ ಆರಾರುಗಜ ಅವಕಾಶವಿರುವಂತೆ ಇಟ್ಟು, ಸರತಿಯ ಉಭಯಪಾರ್ಶ್ವದಲ್ಲಿರುವ ದಡದ ಮಣ್ಣನ್ನು ನಾಲ್ಕು ಮೊಳದ ಪ್ರಮಾಣದ ದವರೆಗೆ ತೇಲಿಸಿ ಅಗೆದು ಬಾಳೆಬುಡದ ಕಡೆಗೆ ತುಂಬುತ್ತಾ ಬರಬೇಕು. ಈ ವಿಧವಾಗಿ ಬಾಳೆ ಹಾಕುವ ವಿಧಾನಕ್ಕೆ ದದ್ದುಸರತಿ ಎಂಬದಾಗಿ ಹೆಸರು. ಈ ದದ್ದುಸರತೀವಿಧಾನಪ್ರಕಾರ ಹಾಕುವುದು ಗುಳೀ ತೆಗೆದು ಹಾಕುವುದಕ್ಕಿಂತ ವಿಶೇಷ ಫಲಕಾರಿಯಾದದ್ದು ಹೀಗೆ ಹಾಕಿದರೆ ಒಂದು ಎಕರೆಗೆ ನೂರಿಪ್ಪತ್ತು ಬಾಳೆಬುಡಗಳು ಹಿಡಿಯುವವು. ಈ ಪ್ರಕಾರ ಹಾಕಿದ್ದು ೧೦–೧೫ ವರುಷಗಳವರೆಗೂ ಇರುವವು. ಬಾಳೆಗಳನ್ನು ಗುಳಿಗಳಲ್ಲಿ ಹಾಕಿದ್ದರೆ ಹಾಕಿದ ಒಡನೆಯೇ ಆಗಲಿ ಅಥವಾ ಒಂದೆರಡುತೀಗಳು ಬಿಟ್ಟುಕೊಂಡಾಗಲಿ ಒಂದುಮೊಳ ಭೂಮಿ ಇಳಿಯುವಂತೆ ಆಗತೇವಾಡಬೇಕು ಇಂಥಾ ಆಗತೆಗಳನ್ನು ಬಾಳೆತೋಟಕ್ಕೆ ವರುಷಕ್ಕೆ ಎರಡುಸಲ ಮಾಡಿಸುವುದುತ್ತಮ. ಕೊನೇಪಕ್ಷ ಒಂದು ಆಗತೆಯನ್ನಾದರೂ ಮಾಡಬೇಕು. ಆಗತೆಯಾದನಂತರ ಸಾಲುಗಳನ್ನಾಗಿ ಏರ್ಪಡಿಸಿಕೊಂಡು ಪ್ರತಿಒಂದುಸಾಲಿನ ಕಡೆಗೆ ತಿಟ್ಟಾಗಿಯೂ ಮಧ್ಯೆ ಹಳ್ಳವಾಗಿಯೂ ಇರುವಂತೆ ಮಾಡುವರು. ಹೀಗೆ ಮಾಡಿದ ಸಾಲುಗಳಿಗೆ ಬಾಳೇಪಟವೆಂತಲೂ ಹಳ್ಳಗಳಿಗೆ ಕಡಗೆಂತಲೂ ಹೆಸರು. ಕಡಗಿನಿಂದ ಬಾಳೆಗೆ ತುಂಬಾ ಪ್ರಯೋಜನ. ಹೆಚ್ಚಾಗಿ ಮಳೇಬಿದ್ದಾಗ ನೀರುನಿಂತು ಜೌಗಾಗದೆ ಕಡಗಿನ ಮೂಲಕ ಆಚೆಗೆ ಹೋಗುವುದು.

ಹಸುರಭಾಗವು ಕಡಿಮೆಯೂಗುತ್ತಾ ಬಿಳಪುವರ್ಣವು ಹೆಚ್ಚುವುದು. ಬಾಳೆಪಟ್ಟೆ ದಂಡಿ ಇವುಗಳ ಹಿಂಭಾಗ ಮುಂಭಾಗಗಳಲ್ಲಿ ಸೋಲೆಯಂತಿರುವ ಸಿಪ್ಪೆಯೂ ದಟ್ಟವಾದ ನಾರೂ ಇರುವವು. ಒಳಗಡೆ ಉದ್ದುದ್ದವಾಗಿಯೂ ಅಡ್ಡವಾಗಿಯೂ ಇರುವ ನಾರುಗಳು ಚಚ್ಚೌಕವಾಗಿ ರಂಧ್ರಗಳು ಬಿಟ್ಟುಕೊಂಡಿರುವವು. ಅವುಗಳಲ್ಲಿ ಲೋಳೆಯೂಗಿರುವ ಬಾಳೀರಸವು ತುಂಬಿಕೊಂಡಿರುವುದು. ಈ ರಸವು ಎಲೆಕಡೆ ಇರುವ ದಂಡಿಯಲ್ಲಿ ಬಹಳ ಕಡಿಮೆಯಾಗಿರುವುದು. ಪ್ರತಿಯೊಂದು ಪಟ್ಟೆಯ ಅಂಚಿನಲ್ಲಿರುವ ಅತ್ಯಂತ ಸೂಕ್ಷ್ಮವಾದ ನಾರು ಬಾಳೀಗಿಡವನ್ನು ಭದ್ರವಾಗಿ ಹಿಡಿದುಕೊಂಡಿರುವುದು. ಚೆನ್ನಾಗಿ ಬೆಳೆದು ಬಾಳೆ ಎಲೆಯು ೫ ಮೊಳದ ಉದ್ದವೂ ಎರಡರಿಂದ ಎರಡೂವರೆ ಮೊಳ ಅಗಲವೂ ಇರುವುದು.

ಆರೋಗ್ಯಶಾಸ್ತ್ರ.

ಪ್ರಪಂಚದ ಸುಖಗಳೊಳಗಾಗಿ ಆರೋಗ್ಯಸುಖವೇ ಉತ್ತಮವಾದುದು. ಇಲ್ಲದಿದ್ದರೆ ಪ್ರಾಣಿಗಳಿಗೆ ಯಾವ ಕೆಲಸ ಮಾಡುವುದಕ್ಕೂ, ಶಕ್ತಿಯೂ, ಹರ್ಷವೂ, ಇರದು. ಆರೋಗ್ಯಭಾಗ್ಯವಿಹೀನನಾದ ಮನುಜನು, ಅಪಾರವಾದ ಇತರ ಐಶ್ವರ್ಯಗಳಿಂದ ಯುಕ್ತನಾಗಿದ್ದರೂ, ಅನನ ರೋಗಪ್ರಭಾವದಿಂದ ಯಾವುದೂ ಬೇಕಿಲ್ಲದೆ ಸದಾ ಬೇಸರಪಡುತ್ತಾ, ಸಂತೋಷವೆಂಬುದು ಅವನಿಗೆ ಸ್ವಪ್ನದಲ್ಲೂ ದೊರೆಯಲಾರದೆ ಶೋಕಿಸುತಿರುವನು. ಅದ್ಯಾಶನರಹಿತನಾದೊಬ್ಬ ಬಡವನು ಆರೋಗ್ಯಭಾಗ್ಯವೊಂದರಿಂದಲೇ ಸದಾ ಸಂತೋಷಚಿತ್ತನಾಗಿರುವನು. ಆರೋಗ್ಯಸುಖವೆಂಬುದು ಈರೀತಿಯಾದ ಸುಖಪರಿಣಾಮವುಳ್ಳದ್ದು. ಆದುದರಿಂದ ಸಕಲರೂ, ಅಂಥಾಭಾಗ್ಯವಶವಾಡಿಕೊಳ್ಳಲು ಸರ್ವವಿಧಗಳಲ್ಲಿಯೂ ಉದ್ಯುಕ್ತರಾಗಬೇಕು. ಹಾಗೆ ಪ್ರಯತ್ನಿಸುವುದು ಅಷ್ಟು ಕಠಿನವಾದುದೆಂದು ಯೋಚಿಸಲಾಗದು. ಅತಿ ಸುಲಭವಾದ ಉಪಾಯಗಳಿಂದಲೇ ಕೈಕೊಳ್ಳಬಹುದು. ಮನುಷ್ಯನು ಈ ಕೆಳಗೆ ಹೇಳಿರುವ ಪ್ರತಿಯೊಂದು ವಿಷಯದಲ್ಲಿಯೂ ಸ್ವಲ್ಪ ಹೆಚ್ಚು ಗಮನವಿಡುವುದರಿಂದಲೇ ಅದರ ಸುಖಸ್ಪರ್ಶವು ತಲೆದೋರುವುದು.

ನಾಗಿರುವ ದಂಡಿಯು ಉಭಯಪಾರ್ಶ್ವಗಳಲ್ಲೂ ಬುಡಭಾಗದಲ್ಲಿ ಸಣ್ಣದಾಗಿಯೂ ಮಧ್ಯ ಭಾಗದಲ್ಲಿ ಅಗಲವಾಗಿಯೂ ಕೊನೆಗೆ ಸಣ್ಣದಾಗಿಯೂ ಇರುವುದು. ಗೊನೇಬಿಡುವಾಗ ಬಾಳೆಗಿಡದಲ್ಲಿ ಮೊದಲಿನಹಾಗೆ ಅಗಲವಾಗಿಯೂ ಹೊರವಾಗಿಯೂ ಎಲೆ ಹೊರಡದೆ ಚಿಕ್ಕದಾಗಿ ಹೊರಡುವುದು. ಹಾಗೆ ಎಲೆ ಹೊರಟನಂತರ ಮೊಗಸಿನಿಂದ ಯುಕ್ತವಾದ ಮೋತೆಯು ಹೊರಡುವುದು. ಮೋತೇಮೇಲೆ ಇರುವ ಪ್ರತಿಒಂದು ವರಸೆ ಸಿಪ್ಪೆಯೂ ಸಾಟಲವರ್ಗದಂತೆ ಇರುವುದಲ್ಲದೆ ಮೇಲಿನಭಾಗದಲ್ಲಿ ಬೂದುಕವಿದುಕೊಂಡಿರುವುದು. ಗೊನೆಯು ಬೆಳೆಯುತ್ತಾ ಬಂದಹಾಗೆಲ್ಲಾ ಕೆಳಕ್ಕೆ ಬಾಗುವುದು. ಆ ಸಿಪ್ಪೆಗಳ ಒಳಗಡೆ ಇರುವ ಹೂವು ದಪ್ಪನಾಗುತ್ತಾ ಬಂದಹಾಗೆಲ್ಲಾ ಸಿಪ್ಪೆಯು ಬಿಟ್ಟುಕೊಳ್ಳುತ್ತಾ ಬರುವುದು. ಅದರಲ್ಲಿರುವ ಹೂವುಗಳು ಈಚೆ ಆಚೆ ಒಂದೊಂದು ಮಧ್ಯಭಾಗದ ಮೇಲೊಂದು ಕೆಳಗೊಂದು ಸಾಲಾಗಿ ಜೊತೆಯಾಗಿರುವವು. ಇವು ಕ್ರಮೇಣ ಹೀಚಾಗಿ ಕಾಯಾಗುತ್ತಾ ಬರುವವು. ಇಂಥಾದೊಂದಕ್ಕೆ ಚಿಪ್ಪೆಂಬು ಹೆಸರು. ಕಾಯಿಹಿಡಿದ ಹೂವುಗಳು ಹೋಗುತ್ತಾ ಗೊನೆಯ ಮುಂದುಗಡೆ ಗೊಡ್ಡುಹೂವುಗಳೂ ಅದರಮೇಲೆ ಮುಚ್ಚಿಕೊಂಡಿರುವ ಸಿಪ್ಪೆಗಳೂ ಎರಡೂವರೆ ಮೊಳದವರಿಗೂ ವಿಕಸಿತವಾಗಿ ಉದುರುತ್ತಾ ಇರುವವು. ಗಿಡದಲ್ಲೇ ಗೊನೆಯು ಹಣ್ಣಾಗುವಂತೆ ಬಿಟ್ಟರೆ ಆ ಕಾಲಕ್ಕೆ ಗೊಡ್ಡುಹೂವು ಇರುವ ಭಾಗವೆಲ್ಲಾ ಉದುರಿ ಎಲ್ಲೂ ಸ್ವಲ್ಪಭಾಗ ಹತ್ತಿಕೊಂಡಿರುವುದು. ದಕ್ಷಿಣಸಾಗರವಲ್ಲಿರುವ ಕೆಲವು ದ್ವೀಪಗಳಲ್ಲಿ ಆಗುವ ಬಾಳೇಗೊನೆಯು ಕೆಳಕ್ಕೆ ಬಾಗದೆ ಮೇಲುಮುಖವಾಗಿಯೇ ಬಿಡುವುದು. ಚೆನ್ನಾಗಿ ಬೆಳೆದ ಬಾಳೇಗಿಡವು ೧೫ ಅಥವಾ ೨೦ ಅಡಿಗಳವರಿಗೆ ಇರುವವು. ಬುಡಭಾಗದಲ್ಲಿ ಬಾಳೆಕಂಭಗಳ ಸುತ್ತಳತೆಯು ಎರಡು ಅಡಿಯಿಂದ ಐದಡೀವರಿಗೆ ಇರುವವು. ಇವು ಮೇಲಕ್ಕೆ ಹೋಗುತ್ತಾ ಹೋಗುತ್ತಾ ಗಾತ್ರದಲ್ಲಿ ಸಣ್ಣನಾಗಿರುವವು. ಬಾಳೆಯಕಂಭದ ಒಳಗೆ ಗೊನೆಯ ಭಾಗನಾದ ದಿಂಡಿನಬಳಿ ಒಂದು ಪಟ್ಟೆಯು ಸುತ್ತಿಕೊಂಡಿರುವುದು. ಅದರ ಮೇಲುಗಡೆ ಎರಡುವರಸೆ (ಸುತ್ತು) ಗಳಲ್ಲೂ ಎರಡೆರಡು ಪಟ್ಟೆಗಳು ಒಂದರ ಅಂಚು ಮತ್ತೊಂದರಲ್ಲಿ ಸಂಬಂಧಿಸಿಕೊಂಡಿರುವವು. ಅದರಮೇಲೆ ಇರುವ ವರಸೆಗಳಲ್ಲಿ ಮೂರು ಮೂರು ಪಟ್ಟೆಗಳು ಸುತ್ತಿಕೊಂಡಿರುವವು. ಅಂಕು ಒಂದು ಬಾಳೆಗಿಡದಲ್ಲಿ ದಿಂಡಿನಿಂದ ಮೇಲಕ್ಕೆ ೯ ಅಥವಾ ೧೦ವರಸೆಗಳು ಇರುವವು. ಮೇಲಣ ೩–೪ ವರಸೆ ಪಟ್ಟೆಗಳು ಹಸುರಾಗಿರುವವು. ಅನಂತರ ಒಳಗಡೆಗೆ ಪ್ರತಿಒಂದು ವರಸೆಯಲ್ಲಿರುವ ಪಟ್ಟೆಗಳೆಲ್ಲೂ

ಹಸುರಭಾಗವು ಕಡಿಮೆಯೂಗುತ್ತಾ ಬಿಳಪ್ರವರ್ಣವು ಹೆಚ್ಚುವುದು. ಬಾಳೆಪಟ್ಟೆ ದಂಡಿ ಇವುಗಳ ಹಿಂಭಾಗ ಮುಂಭಾಗಗಳಲ್ಲಿ ಸೋಲೆಯಂತಿರುವ ಸಿಪ್ಪೆಯೂ ದಟ್ಟವಾದ ನಾರೂ ಇರುವವು. ಒಳಗಡೆ ಉದ್ದುದ್ದವಾಗಿಯೂ ಅಡ್ಡವಾಗಿಯೂ ಇರುವ ನಾರುಗಳು ಚಚೌಕವಾಗಿ ರಂಧ್ರಗಳು ಬಿಟ್ಟುಕೊಂಡಿರುವವು. ಅವುಗಳಲ್ಲಿ ಲೋಳೆಯೂಗಿರುವ ಬಾಳೇರಸವು ತುಂಬಿಕೊಂಡಿರುವುದು. ಈ ರಸವು ಎಲೆಕಡೆ ಇರುವ ದಂಡಿಯಲ್ಲಿ ಬಹಳ ಕಡಿಮೆಯಾಗಿರುವುದು. ಪ್ರತಿಯೊಂದು ಪಟ್ಟೆಯ ಅಂಚಿನಲ್ಲಿರುವ ಅತ್ಯಂತ ಸೂಕ್ಷ್ಮವಾದ ನಾರು ಬಾಳೇಗಿಡವನ್ನು ಭದ್ರವಾಗಿ ಹಿಡಿದುಕೊಂಡಿರುವುದು. ಚೆನ್ನಾಗಿ ಬೆಳೆದು ಬಾಳೆ ಎಲೆಯು ೫ ಮೊಳದ ಉದ್ದವೂ ಎರಡರಿಂದ ಎರಡೂವರೆ ಮೊಳ ಅಗಲವೂ ಇರುವುದು.

ಆರೋಗ್ಯಶಾಸ್ತ್ರ.

ಪ್ರಪಂಚದ ಸುಖಗಳೊಳಗಾಗಿ ಆರೋಗ್ಯಸುಖವೇ ಉತ್ತಮವಾದುದು. ಇಲ್ಲದಿದ್ದರೆ ಪ್ರಾಣಿಗಳಿಗೆ ಯಾವ ಕೆಲಸ ಮಾಡುವುದಕ್ಕೂ, ಶಕ್ತಿಯೂ, ಹರ್ಷವೂ, ಇರದು. ಆರೋಗ್ಯಭಾಗ್ಯವಿಹೀನನಾದ ಮನುಜನು, ಅಪಾರವಾದ ಇತರ ಐಶ್ವರ್ಯಗಳಿಂದ ಯುಕ್ತನಾಗಿದ್ದರೂ, ಅವನ ರೋಗಪ್ರಭಾವದಿಂದ ಯಾವುದೂ ಬೇಕಿಲ್ಲದೆ ಸದಾ ಬೇಸರಪಡುತ್ತಾ, ಸಂತೋಷವೆಂಬುದು ಅವನಿಗೆ ಸ್ವಪ್ನದಲ್ಲೂ ದೊರೆಯಲಾರದೆ ಶೋಕಿಸುತಿರುವನು. ಅದ್ಯಾಶನರಹಿತನಾದೊಬ್ಬ ಬಡವನು ಆರೋಗ್ಯಭಾಗ್ಯವೊಂದರಿಂದಲೇ ಸದಾ ಸಂತೋಷಚಿತ್ತನಾಗಿರುವನು. ಆರೋಗ್ಯಸುಖವೆಂಬುದು ಈರೀತಿಯಾದ ಸುಖಪರಿಣಾಮವುಳ್ಳದ್ದು. ಆದುದರಿಂದ ಸಕಲರೂ, ಅಂಥಾಭಾಗ್ಯ ವಶವಾಡಿಕೊಳ್ಳಲು ಸರ್ವವಿಧಗಳಲ್ಲಿಯೂ ಉದ್ಯುಕ್ತರಾಗಬೇಕು. ಹಾಗೆ ಪ್ರಯತ್ನಿಸುವುದು ಅಷ್ಟು ಕಠಿನವಾದುದೆಂದು ಯೋಚಿಸಲಾಗದು. ಅತಿ ಸುಲಭವಾದ ಉಪಾಯಗಳಿಂದಲೇ ಕೈಕೊಳ್ಳಬಹುದು. ಮನುಷ್ಯನು ಈ ಕೆಳಗೆ ಹೇಳಿರುವ ಪ್ರತಿಯೊಂದು ವಿಷಯದಲ್ಲಿಯೂ ಸ್ವಲ್ಪ ಹೆಚ್ಚು ಗಮನವಿಡುವುದರಿಂದಲೇ ಅದರ ಸುಖಸ್ಪರ್ಶವು ತಲೆದೋರುವುದು.

ನಾಗಿರುವ ದಂಡಿಯ ಉಭಯಪಾರ್ಶ್ವಗಳಲ್ಲೂ ಬುಡಭಾಗದಲ್ಲಿ ಸಣ್ಣದಾಗಿಯೂ ಮಧ್ಯ ಭಾಗದಲ್ಲಿ ಅಗಲವಾಗಿಯೂ ಕೊನೆಗೆ ಸಣ್ಣದಾಗಿಯೂ ಇರುವುದು. ಗೊನೇಬಿಡು ವಾಗ ಬಾಳೆಗಿಡದಲ್ಲಿ ಮೊದಲಿನಹಾಗೆ ಅಗಲವಾಗಿಯೂ ಹೊರವಾಗಿಯೂ ಎಲೆ ಹೊರಡದೆ ಚಿಕ್ಕದಾಗಿ ಹೊರಡುವುದು. ಹಾಗೆ ಎಲೆ ಹೊರಟನಂತರ ಮೊಗಸಿನಿಂದ ಯುಕ್ತವಾದ ಮೋತೆಯು ಹೊರಡುವುದು. ಮೋತೇಮೇಲೆ ಇರುವ ಪ್ರತಿಒಂದು ವರಸೆ ಸಿಪ್ಪೆಯೂ ಸಾಟಲವರ್ಗದಂತೆ ಇರುವುದಲ್ಲದೆ ಮೇಲಿನಭಾಗದಲ್ಲಿ ಬೂದುಕವಿದುಕೊಂಡಿರುವುದು. ಗೊನೆಯು ಬೆಳೆಯುತ್ತಾ ಬಂದಹಾಗೆಲ್ಲಾ ಕೆಳಕ್ಕೆ ಬಾಗುವುದು. ಆ ಸಿಪ್ಪೆಗಳ ಒಳಗಡೆ ಇರುವ ಹೂವು ದಪ್ಪನಾಗುತ್ತಾ ಬಂದಹಾಗೆಲ್ಲಾ ಸಿಪ್ಪೆಯು ಬಿಟ್ಟುಕೊಳ್ಳುತ್ತಾ ಬರುವುದು. ಅದರಲ್ಲಿರುವ ಹೂವುಗಳು ಈಚೆ ಆಚೆ ಒಂದೊಂದು ಮಧ್ಯಭಾಗದ ಮೇಲೊಂದು ಕೆಳಗೊಂದು ಸಾಲಾಗಿ ಜೊತೆಯಾಗಿರುವವು. ಇವು ಕ್ರಮೇಣ ಹೀಚಾಗಿ ಕಾಯಾಗುತ್ತಾ ಬರುವವು. ಇಂಥದೊಂದಕ್ಕೆ ಚಿಪ್ಪೆಂದು ಹೆಸರು. ಕಾಯಿ ಹಿಡಿದ ಹೂವುಗಳು ಹೋಗುತ್ತಾ ಗೊನೆಯ ಮುಂದುಗಡೆ ಗೊಡ್ಡುಹೂವುಗಳೂ ಅದರಮೇಲೆ ಮುಚ್ಚಿಕೊಂಡಿರುವ ಸಿಪ್ಪೆಗಳೂ ಎರಡೂವರೆ ಮೊಳದವರಿಗೂ ವಿಕಸಿತವಾಗಿ ಉದುರುತ್ತಾ ಇರುವವು. ಗಿಡದಲ್ಲೇ ಗೊನೆಯು ಹಣ್ಣಾಗುವಂತೆ ಬಿಟ್ಟರೆ ಆ ಕಾಲಕ್ಕೆ ಗೊಡ್ಡುಹೂವು ಇರುವ ಭಾಗವೆಲ್ಲಾ ಉದುರಿ ಎಲ್ಲೂ ಸ್ವಲ್ಪಭಾಗ ಹತ್ತಿಕೊಂಡಿರುವುದು. ದಕ್ಷಿಣಸಾಗರದಲ್ಲಿರುವ ಕೆಲವು ದ್ವೀಪಗಳಲ್ಲಿ ಆಗುವ ಬಾಳೇಗೊನೆಯು ಕೆಳಕ್ಕೆ ಬಾಗದೆ ಮೇಲುಮುಖವಾಗಿಯೇ ಬಿಡುವುದಾ. ಚೆನ್ನಾಗಿ ಬೆಳೆದ ಬಾಳೇಗಿಡವು ೧೫ ಅಥವಾ ೨೦ ಅಡಿಗಳವರಿಗೆ ಇರುವವು. ಬುಡಭಾಗದಲ್ಲಿ ಬಾಳೆಕಂಭಗಳ ಸುತ್ತಳತೆಯು ಎರಡು ಅಡಿಯಿಂದ ಐದಡಿವರಿಗೆ ಇರುವವು. ಇವು ಮೇಲಕ್ಕೆ ಹೋಗುತ್ತಾ ಹೋಗುತ್ತಾ ಗಾತ್ರದಲ್ಲಿ ಸಣ್ಣನಾಗಿರುವವು. ಬಾಳೆಯಕಂಭದ ಒಳಗೆ ಗೊನೆಯು ಭಾಗನಾದ ದಿಂಡಿನಬಳಿ ಒಂದು ಪಟ್ಟೆಯು ಸುತ್ತಿಕೊಂಡಿರುವುದು. ಅದರ ಮೇಲುಗಡೆ ಎರಡುವರಸೆ (ಸುತ್ತು) ಗಳಲ್ಲೂ ಎರಡೆರಡು ಪಟ್ಟೆಗಳು ಒಂದರ ಅಂಚು ಮತ್ತೊಂದರಲ್ಲಿ ಸಂಬಂಧಿಸಿಕೊಂಡಿರುವವು. ಅದರಮೇಲೆ ಇರುವ ವರಸೆಗಳಲ್ಲಿ ಮೂರು ಮೂರು ಪಟ್ಟೆಗಳು ಸುತ್ತಿಕೊಂಡಿರುವವು. ಆಂತು ಒಂದು ಬಾಳೆಗಿಡದಲ್ಲಿ ದಿಂಡಿನಿಂದ ಮೇಲಕ್ಕೆ ೪ ಅಥವಾ ೧೦ ವರಸೆಗಳು ಇರುವವು. ಮೇಲಣ ೩-೪ ವರಸೆ ಪಟ್ಟೆಗಳು ಹಸುರಾಗಿರುವವು. ಅನಂತರ ಒಳಗಡೆಗೆ ಪ್ರತಿಒಂದು ವರಸೆಯಲ್ಲಿರುವ ಪಟ್ಟೆಗಳೆಲ್ಲೂ

ರೋಗಗಳು ಬರುವುವು ಬರೀ ಹೊಟ್ಟೆಯಲ್ಲಿದ್ದುಕೊಂಡು, ಬಿಸಿಲಿನಲ್ಲಿರುವುದೂ, ಮತ್ತು ಅದೇರೀತಿ ರಾತ್ರಿಕಾಲದಲ್ಲಿ ಮಲಗುವುದೂ, ಎರಡೂ ದುಷ್ಪ್ರವೃತ್ತಿಗಳೇ. ಇವರಿಂದ ಬಲಗುಂದಿ ದೇಹವು ಕೃಶವಾಗುತ ನಾನಾರೋಗಗಳು ಬರುವುವು. ಆದು ದರಿಂದ ಸಾಧಾರಣವಾಗಿ ರಾತ್ರಿಕಾಲದಲ್ಲಿ ಹೊರತು ವಿಕ್ಕವೇಳೆಗಳಲ್ಲಿ ೨-೩ ಘಂಟೆಗಳಿಗೊಂದಾವೃತ್ತಿ ಏನಾದರೂ ತಿನ್ನುತಿರಬೇಕು. ಬೆಳಿಗ್ಗೆ ೧೦--೧೧ ಗಂಟೆಗೆ ಊಟ ಮಾಡಿ, ಮೂರನೇ ಘಂಟೆಯಲ್ಲಿ ಊಟ ಅಥವಾ, ಫಲಾಹಾರವನ್ನಾಗಲೀ ಮಾಡಬೇಕು. ಸಾಯಂಕಾಲ ೭---೮ ಗಂಟೆಯೊಳಗೆ ಊಟ ಮಾಡಬೇಕು.

೩ ಊಟಮಾಡುವಕ್ರಮ ;—ಆಹಾರವನ್ನು ನಿದಾನವಾಗಿ, ಚೆನ್ನಾಗಿ ಅಗಿದು ತಿನ್ನಬೇಕು. ದೇವರು ಹಲ್ಲುಗಳನ್ನು ನಿರ್ಮಿಸಿರುವುದು ಬರೀ ಅಲಂಕಾರಕ್ಕೋಸ್ಕರವಲ್ಲ. ಶರೀರದ ಉಪಯೋಗಕ್ಕಾಗಿಯೇ ಎಂದು ತಿಳಿದು ಉಪಯೋಗಿಸಬೇಕು. ಚೆನ್ನಾಗಿ ಅಗಿಯೋಣದರಿಂದ ಆಹಾರದಲ್ಲಿನ ಪಿಷ್ಟಭೂತವಸ್ತುಗಳೆಲ್ಲಾ, ಚೆನ್ನಾಗಿ ನುಚ್ಚು ನೂರಿಯಾಗಿ ಜೊಲ್ಲಿನೊಂದಿಗೆ ಸೇರಿ ಜೀರ್ಣವಾಗಿ ಶರೀರಕ್ಕೆ ಸುಖವನ್ನೂ, ಲಘುವನ್ನೂ ಉಂಟುಮಾಡುವುದು. ಇದೂ ಅಲ್ಲದೆ ; ನಮ್ಮ ಆಹಾರದಲ್ಲಿ ಪಿಷ್ಟಪದಾರ್ಥಗಳೇ ವಿಶೇಷವಾಗಿರುವುದರಿಂದಲೂ, ತದ್ವಸ್ತುಗಳೆಲ್ಲಾ ಜೊಲ್ಲಿನಿಂದಲೇ ಕರಗಬೇಕಾಗಿರುವ ದರಿಂದಲೂ, ನಾವುಗಳು ನಮ್ಮ ಆಹಾರವನ್ನು ಬಹಳ ನಿದಾನವಾಗಿ, ಜೊಲ್ಲಿನಸಂಗಡ ಚೆನ್ನಾಗಿ ಕಲೆ (ವಿಶ್ರ) ಯುವಹಾಗೆ ಅಗಿದು ನುಂಗಬೇಕು. ಅವಸರದಲ್ಲಿ ಅಗಿಯದೆ ನುಂಗುವುದರಿಂದ ಪದಾರ್ಥಗಳು ಹೇಗೆ ತಿನ್ನಲ್ಪಡುವುವೋ ಹಾಗೆಯೇ ಅನ್ನಕೋಶಕ್ಕೆ ಸೇರುವುವು. ಅನ್ನಕೋಶಕ್ಕೆ ಪದಾರ್ಥಗಳನು ಚೆನ್ನಾಗಿ ಪುಡಿಮಾಡುವ ಶಕ್ತಿಯಿಲ್ಲದ್ದರಿಂದ ಆಹಾರವಸ್ತುಗಳು ಬೇಗ ಅರಗುವುದಿಲ್ಲ. ಆದಕಾರಣ ಹಲ್ಲುಗಳ ಮತ್ತು ಹನುಗಳ ಸಹಾಯದಿಂದ ಚೆನ್ನಾಗಿ ಅಗಿದು ನುಂಗಿದರೆ ಜಠರವು ಅದರೊಂದಿಗೆ ವಿಶ್ರವಾಗಿ ಜೀರ್ಣಿಸುವುದಕ್ಕೆ ಅನುಕೂಲಿಸುವುವು. ಈರೀತಿ ನಿದಾನದಿಂದ ಚೆನ್ನಾಗಿ ಅಗಿದು ನುಂಗುತ್ತಾ ಬಂದರೆ, ಅನೇಕವೇಳೆಗಳಲ್ಲಿ ವೈದ್ಯನ ದಯೆಯನ್ನು ಕೋರದಿರಬಹುದು.

೪ ನಿಷಿದ್ಧವಸ್ತುಗಳು ;—ಬಹಳ ಬಿಸಿಯಾಗಿರುವ ಪದಾರ್ಥಗಳನ್ನು ಊಟ ಮಾಡುವುದರಿಂದ ಬಾಯಾರಿಕೆ ಮುಂತಾದ ಸಂಕಟಗಳು ಪ್ರಾಪ್ತವಾಗುವುವಲ್ಲದೆ, ಜೀರ್ಣಶಕ್ತಿಯುಕೂಡಾ ಕಮ್ಮಿಯಾಗುವುದು. ತಂಗಳನ್ನವನ್ನೂ, ಕೊಳೆತ ಮತ್ತು

ಆವಿಷಯಗಳಾವುವೆಂದರೆ :—೧ ಹವ, ೨ ಪಾನ, ೩ ಆಹಾರ, ೪ ಶುಚಿತ್ವ. ೫ ನಿದ್ರೆ, ೬ ಬೆಳಕು, ೭ ವ್ಯಾಯಾಮ ಮೊದಲಾದವುಗಳು.

ಇವುಗಳಲ್ಲಿ ಒಂದಾದ ಆಹಾರವಿಷಯದಲ್ಲಿ ಸ್ವಲ್ಪಮಟ್ಟಿಗೆ ಈ ಕೆಳಗಿನ ನಿಯಮಗಳನ್ನನುಸರಿಸಬೇಕಾಗಿದೆ.

ಆ ನಿಯಮಗಳು ಯಾವುವೆಂದರೆ :—

೧ ಪದಾರ್ಥಗಳ ಬದಲಾವಣೆ ;—ನಿತ್ಯದ ಪ್ರತಿಯೂಟದಲ್ಲಿಯೂ, ಒಂದೇವಿಧವಾದ ಪದಾರ್ಥಗಳನ್ನು ಉಪಯೋಗಿಸಬಾರದು. ನಿತ್ಯವೂ ಹೊಸ ತರಕಾರಿಗಳನ್ನೂ, ಆಗಾಗ್ಗೆ ಉರಳಗಡ್ಡೆಗಳನ್ನೂ, ತಿನ್ನುತಿರಬೇಕು. (ಅಪಕ್ವ ಮತ್ತು ಅತಿಪಕ್ವ ವಸ್ತುಗಳನ್ನು ನಿಷೇಧಿಸಬೇಕು.)

೨ ಕಾಲ ;—ಊಟಮಾಡುವ ಕಾಲಗಳು ಒಂದೇಕ್ರಮದಲ್ಲಿರಬೇಕು. ಪ್ರತಿನಿತ್ಯವೂ ಎರಡು ಮೂರಾವೃತ್ತಿ ಊಟ ಮಾಡಬೇಕು. ಪ್ರಾತಃಕಾಲದಲ್ಲಿ ಬಹಳ ಹೊತ್ತು ಉಪೋಷ್ಯವೇ ಇರಕೂಡದು. ಏಕೆಂದರೆ ? ಮುಂಜಾನೆಯು, ಬಹಳ ಕಷ್ಟಸಾಧ್ಯವಾದ ಕೆಲಸಗಳನ್ನು ಮಾಡಲು ಅನುಕೂಲನಾದುದರಿಂದ, ಬರೀ ಹೊಟ್ಟೆಯಲ್ಲಿದ್ದುಕೊಂಡು ಮಾಡಿದ ಕೆಲಸವು ನೆರ್ಪಡುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಚಳಿ. ಜ್ವರ ಕೂಡಾ ಬರುವುದುಂಟು. ಮತ್ತು ಬಳಲಿಕೆಯಿಂದ ಹಸಿವು ಮಾಣುವುದು, ಇದಲ್ಲದೆ ಹಿಂದಿನ ರಾತ್ರಿಯಲ್ಲಿ ಊಟ ಮಾಡಿದ್ದ ಆಹಾರವು, ಮರುದಿನ ಬೆಳಗಾಗುವಾಗ್ಗೆ ಬಹುಮಟ್ಟಿಗೆ ಜೀರ್ಣಿಸಿಹೋಗಿ, ಜಠರವು ಬರೀದಾಗಿರುವುದರಿಂದ ಬೆಳಿಗ್ಗೆ ೬—೭ ಗಂಟೆಗಳೊಳಗೆ ಏನಾದರೂ ಸ್ವಲ್ಪ ನೀರಾಗಿರುವ ಆಹಾರಗಳನ್ನು ತೆಗೆದುಕೊಳ್ಳಬೇಕು. ಅನೇಕ ಹಿಂದುಗಳಲ್ಲಿ ವಾಡಿಕೆಯಲ್ಲಿರುವಂತೆ ಒಂದುದಿನಕ್ಕೆ ಮಧ್ಯಾನ್ಹದಲ್ಲಿ ಒಂದೇ ಊಟ ಮಾಡುವುದು ಬಹಳ ಕೆಟ್ಟುದು. ಆಗ ಹಸಿವು ಬಹಳವಾಗಿರುವುದರಿಂದ ಜಾಗ್ರತೆ ಜಾಗ್ರತೆಯಾಗಿ, ಹೆಚ್ಚು ಹೆಚ್ಚು ಆಹಾರವನ್ನು ಅಗಿಯದೆ ನುಂಗಬೇಕಾಗಿ ಬರುವುದು. ಈ ರೀತಿಯಾಗಿ ತಿಂದರೆ, ಹೊಟ್ಟೆಗೆ ಆಹಾರ ಹೆಚ್ಚಾಗುವುದಲ್ಲದೆ ಹಲ್ಲುಗಳು ಮಾಡಬೇಕಾಗಿದ್ದ ಕೆಲಸವನ್ನೂ, ಮತ್ತು ತನ್ನ ಕೆಲಸವನ್ನೂ, ಸಹ ಹೊಟ್ಟೆಯೊಂದೇ ಮಾಡಬೇಕಾಗುವುದು. ಆದರೆ, ತನ್ನ ಕೆಲಸವೇ ಹೆಚ್ಚಾಗಿರುವಾಗ, ಅದರ ಜೊತೆಗೆ ಬೇರೊಂದು ಕೆಲಸವನ್ನೂ, ಮಾಡುವುದಾದರೆ ಆ ಕೃತ್ಯಗಳೆರಡೂ ಸರಿಯಾಗಲಾರವು. ಹೀಗಾಗುವುದರಿಂದ ಆಹಾರವು ಜೀರ್ಣವಾಗದೆ, ಅಜೀರ್ಣಾಂಗದ

ನೀರು ದೊರೆಯುದಿದ್ದರೆ, ಅಥವ ನೀರಿನ ಗುಣದ ವಿಷಯದಲ್ಲಿ ಸಂದೇಹ ತೋರಿದರೆ, ಮತ್ತು ಶೋಧಿಸುವುದಕ್ಕೆ ಅನುಕೂಲವಿಲ್ಲದಿದ್ದರೆ ತೇಯಲೆಯ ಕಷಾಯವನ್ನು ಕುಡಿಯುವುದೇ ಲೇಸು.

೪ ಪಾಕಗೃಹ ಮತ್ತು ಉಪಕರಣಗಳು ;-ಅಡಿಗೆಯ ವಿಷಯದಲ್ಲಿ ಸ್ವಲ್ಪವಾಗಿ ತಿಳಿದುಕೊಳ್ಳುವುದು ಬಹು ಮುಖ್ಯವಾದುದು. ಅಡಿಗೆಯ ಪಾತ್ರೆಗಳೆಲ್ಲ ಪ್ರತಿದಿನವೂ ತೊಳೆಯಲ್ಪಟ್ಟು ಶುಭ್ರವಾಗಿರಬೇಕು. ಪಾತ್ರೆಗಳಿಗೆ ಕನಿಷ್ಟಪಕ್ಷ ತಿಂಗಳಿಗೊಂದಾ ವೃತ್ತಿಯಾದರೂ, ಕಲಾಯಿ ಬೊಳಿಸುತಿರಬೇಕು. ಹಾಗೆಯೇ ಉಪಯೋಗಿಸಿದರೆ, ಪದಾರ್ಥಗಳು ಕಿಲುಬಿಹೋಗುವುವು. ಅಂಥಾ ಪದಾರ್ಥಗಳನ್ನು ತಿನ್ನುವುದರಿಂದ ವಾಂತಿಯೂ, ದೇಹಶ್ರಮವೂ, ಆಗುವುದು. ಪಾತ್ರೆಗಳಿಗೆ ತವರವನ್ನು ಬೊಳಿಯಿಸ ಬೇಕಲ್ಲದೆ, ಸೀಸವನ್ನುಪಯೋಗಿಸಬಾರದು. ತವರದಿಂದ ಕಲಾಯಿಮಾಡಿದ ಪಾತ್ರೆ ಗಳಲ್ಲಿ ಕಿಲುಬಿನ ಸಮಾಚಾರವೇ ಇರುವುದಿಲ್ಲ. ಅಡಿಗೆಯಾದನಂತರ ಪ್ರತಿಯೊಂದು ಪಾತ್ರೆಯನ್ನೂ, ಬಿಸಿನೀರಿನಿಂದ ಚೆನ್ನಾಗಿ ತೊಳೆದು, ಸ್ವಲ್ಪಹೊತ್ತು ಗಾಳಿಗೊಡ್ಡಿಡ ಬೇಕು. ಅಡಿಗೆಮನೆಯಲ್ಲಾಗಲೀ, ಊಟದ ಮನೆಯಲ್ಲಾಗಲೀ, ಆಹಾರಶೇಷಗ ಳನ್ನೂ, ಮುಸರೆಯ ನೀರು ಮುಂತಾದ ಕಲ್ಮಷಗಳನ್ನು ಚೆಲ್ಲಕೂಡದು. ಅಡಿಗೆ ಮಾಡುವುದರಲ್ಲಿಕೂಡಾ ಎಚ್ಚರಿಕೆಯೂ, ಅಸಕ್ತಿಯೂ, ಚಮತ್ಕಾರವೂ ಇರಬೇಕು. ಚೆನ್ನಾಗಿಯೂ, ರುಚಿಯಾಗಿಯೂ, ಪಕ್ವವಾಗಿಯೂ ಮಾಡಿರುವ ಪದಾರ್ಥಗಳನ್ನು ತಿನ್ನುವುದರಿಂದುಂಟಾಗುವ ಹರ್ಷವೂ, ಸುಖವೂ, ಸಮಾಧಾನವೂ, ಮುಗುಳಕ್ಕಿ ಅನ್ನವನ್ನೂ, ಚೆನ್ನಾಗಿ ಬೇಯದಿರುವ ಬೇಳೆಯ ಸಾರನ್ನೂ, ಅರ್ಧ ಪಕ್ವವಾದ ತರ ಕಾರಿಗಳನ್ನು ತಿನ್ನುವುದರಿಂದುಂಟಾಗುವುದೆ ? ನೀವೇ ಯೋಚಿಸರಿ !

ಅಡಿಗೆಯ ಮನೆಯು ಎತ್ತರವಾಗಿಯೂ, ಗಾಳಿಯಾಡುವುದಕ್ಕನುಕೂಲವಾ ಗಿಯೂ, ಹೊಗೆಯು ಸರಾಗವಾಗಿ ಹೊರಕ್ಕೆ ಹೋಗುವಂತೆಯೂ ಇರಬೇಕು. ಬೆಳ ಕುಹೆಚ್ಚಾಗಿಹಾಗೆಲ್ಲಾ ಅನುಕೂಲವು ಹೆಚ್ಚುತ ಬರುವುದು. ಅಡಿಗೆಮನೆಯ ನೆಲಕ್ಕೂ ಗೋಡೆಗಳಿಗೂ ಗಾರೆ ಹಾಕಿರಬೇಕು. ಅಡಿಗೆಯ ಕೆಲಸ ಪೂರೈಸಿದಕೂಡಲೆ ಶುದ್ಧಿ ಮಾಡಿ ಬಾಗಿಲಿಗೆ ಬೀಗವನ್ನು ಹಾಕಿಬಿಡಬೇಕು. ಅಲ್ಲದೆ ಅಡಿಗೆಯ ಮನೆಯನ್ನು ಕೂತುಕೊಳ್ಳುವ ಮತ್ತು ಮಲಗುವಮನೆಯಾಗೆ ಎಂದಿಗೂ ಉಪಯೋಗಿಸಿಕೊಳ್ಳ ಕೂಡದು. ಮತ್ತು ಅಡಿಗೆಮನೆಯಲ್ಲಿಯೇ ಊಟವನ್ನು ಮಾಡಬಾರದು. ಅದಕ್ಕೆ

ಹುಳುಹಿಡಿದ ಹಣ್ಣುಗಳನ್ನೂ, ದೋರಗಾಯಿಗಳನ್ನೂ, ಕ್ರಿಮಿಗಳು ಸೇರಿರುವ ಉಪ್ಪಿನಕಾಯಿಗಳನ್ನೂ, ಹಳಸಿದ ಭಕ್ಷ್ಯಗಳನ್ನೂ, ಹಸೀಕಡಲೆ ಮುಂತಾದ ರೋಗೋತ್ಪಾದಕ ಪದಾರ್ಥಗಳನ್ನೂ ವಿಸರ್ಜಿಸಬೇಕು.

೫ ಚಿತ್ತಶುದ್ಧಿ ;-ಊಟಮಾಡುವ ಕಾಲದಲ್ಲಿ ಯಾವ ಯೋಚನೆಯನ್ನೂ ಮಾಡಲಾಗದು. ಹಾಗೆ ಚಿಂತೆಯನ್ನಿಟ್ಟುಕೊಂಡು ಊಟ ಮಾಡುವುದರಿಂದ, ಆಹಾರವು ಎಷ್ಟು ಬೇಕಾಗಿರುವುದೋ ಅಷ್ಟನ್ನು ತಿನ್ನುವುದಕ್ಕಾಗುವುದಿಲ್ಲ. ಆದುದರಿಂದ ಆಹಾರ ಸೇವನಾಸಮಯದಲಿ ಸರ್ವಮನಸ್ಸೂ ಹರ್ಷವಾಗಿರಬೇಕು.

೬ ಭೋಜನಾತ್ಪರ ಮಾಡಬೇಕಾದುದು ;—ಊಟ ಮಾಡಿದಕೂಡಲೇ ಯಾವ ಕೆಲಸವನ್ನೂ ಮಾಡದೆ ಸಂತೋಷವಾದ ಮಾತುಗಳನ್ನಾಡುವುದಾಗಲೀ, ಯೋಗ್ಯವಾದ ಹಣ್ಣುಗಳ ಭಕ್ಷಣೆಯನ್ನಾಗಲೀ ಮಾಡುತಿರಬೇಕು. ಊಟದ ಅನಂತರ ನಿದಾನವಾಗಿ ಸಣ್ಣ ಹೆಜ್ಜೆಗಳಿಂದ ಮನೆಯೊಳಗೆಯೇ ಅಲ್ಲಿಂದಿಲ್ಲಿಗೆ ತಿರುಗುತಿರಬೇಕು.

೭ ಪಾನಗಳು :—ಪಾನೀಯಗಳಲ್ಲಿ ನೀರೇ ಅವಶ್ಯಕವಾದ ಮತ್ತು ಕೆಡಕಿಲ್ಲದ ಪಾನನಾಗಿದೆ. ಮದ್ಯ, ಸಾರಾಯಿ, ವೈನು ಮೊದಲಾದ ಮೈಕಜನ್ಯಗಳನ್ನು ಚಿಕಿತ್ಸೆಗಳಲ್ಲಿ ಉಪಯೋಗಿಸಿದರೆ ಬಾಧಕವೇನೂ ಮಾಡಲಾರವು. ದಿನಂಪ್ರತಿ ಕುಡಿಯುತಿದ್ದರೆ ಬಹಳ ಕೆಡಕನ್ನುಂಟುಮಾಡುವವು. (ಇವುಗಳಿಂದ, ಅರ್ಥ, ಮಾನ, ಪ್ರಾಣ ಈ ಮೂರು ಹಾನಿಗಳೊದಗುವುವು.)

ಊಟ ಮಾಡುವಾಗ ಪದೇಪದೆ ನೀರನ್ನು ಕುಡಿಯಬಾರದು. ಊಟ ಪೂರೈಸಿದ ಮೇಲೆಯೇ ಕುಡಿಯಬೇಕು. ಇದಕ್ಕೆ ಮುಂಚೆ, ಅಥವ ಮಧ್ಯೆ ನೀರನ್ನು ಕುಡಿದರೆ ಜಠರರಸದ ವೀರ್ಯವು ಕುಗ್ಗಿ, ಅದರ ವ್ಯಾಪಾರಧರ್ಮಗಳೆಲ್ಲಾ ನಿಂತು ಅಜೀರ್ಣವನ್ನುಂಟುಮಾಡುವುದು. ಬಿಸಿಲಿನಮೂಲಕ ಬಹಳ ಬಾಯಾರಿದಾಗ, ಹೆಚ್ಚಾಗಿ ತಣ್ಣೀರನ್ನು ಕುಡಿಯಬಾರದು. ಒಂದುವೇಳೆ ಕುಡಿಯಬೇಕಾದರೆ ಮೊದಲು ಸ್ವಲ್ಪ ನೀರಿನಿಂದ ೩—೪ ಆವೃತ್ತಿ ಬಾಯಿಮುಕ್ಕಳಿಸಿ ಅನಂತರ ಸ್ವಲ್ಪಸ್ವಲ್ಪವಾಗಿ ಕುಡಿಯಬೇಕು. ಹಾಳು (ಬರಿ) ಹೊಟ್ಟೆಯಲ್ಲಿರುವಾಗ, ಹೆಚ್ಚಾಗಿ ನೀರನ್ನು ಕುಡಿಯಕೂಡದು. ಊಟ ಮಾಡಿದನಂತರ ಹೊಸದಾಗಿ ಮಾಡಿದ ಟೀ ಯನ್ನು ಕುಡಿಯಬಹುದು. ಅಲ್ಲದೆ ಕೆಲಸ ಮಾಡುವುದರಿಂದ, ದಾರಿ ನಡೆಯುವುದರಿಂದ ಉಂಟಾದ ಆಯಾಸವನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿಯೂ ಕುಡಿಯಬಹುದು. ಶುದ್ಧವಾದ

ಪೇಕ್ಷಿಸುವವರು ಬೆಂಗಳೂರಲ್ಲಿರುವ ದೇಶೀಯಪರೀಕ್ಷಾನಿರ್ವಾಹಕರ (ಮ್ಯಾನೇಜರ) ಆಫೀಸಿಗೆ ೧೯೯೪ ನೆಯ ನವೆಂಬರ್ ೧ ನೆಯ ತಾರೀಖಿನೊಳಗಾಗಿ ಅಥವಾ ಆ ತಾರೀಖಿನಲ್ಲಿ ತಲಪುವಂತೆ ದರಖಾಸ್ತುಗಳನ್ನು ಕಳುಹಿಸಬೇಕು. ವಿದ್ಯಾರ್ಥಿಪರೀಕ್ಷ್ಯರು (Pupil Candidates) ಅಪ್ಪಣೆಯನ್ನು ಪಡೆಯಬೇಕಾದರೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರ ಎಂದರೆ ಹೆಡ್ಮಾಸ್ಟರಮೂಲಕ ದರಖಾಸ್ತುಗಳನ್ನು ಕಳುಹಿಸಬೇಕು. ಉಳಿದ ಪರೀಕ್ಷ್ಯರೆಲ್ಲಾ ದರಖಾಸ್ತುಗಳನ್ನು ದೇಶೀಯಪರೀಕ್ಷಾನಿರ್ವಾಹಕರಿಗೆ ನೇರವಾ ಕಳುಹಿಸಬೇಕು. ಈ ಪ್ರಕಟನಪತ್ರಿಕೆಯನ್ನು ಅನುಸರಿಸಿ ಒಂದಾವೃತ್ತಿ ಒಂದು ಸ್ಥಳವನ್ನು ಚುನಾಯಿಸಿಬಿಟ್ಟರೇ ಮೇಲೆ, ಅದನ್ನು ಮತ್ತೆ ಬದಲಾಯಿಸಲಾಗುವುದಿಲ್ಲ.

ಹೆಚ್. ಜಿ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

ಒಗಟುಗಳಿಗೆ ಉತ್ತರ.

ಮಾ॥ ರಾ॥ ವಿದ್ಯಾದಾಯಿನಿ ಎಡಿಟರವರ ಸಮಕ್ಷಮಕ್ಕೆ.

ಸ್ವಾಮಿ !

ಸೆಪ್ಟಂಬರ್ ತಿಂಗಳ ವಿದ್ಯಾದಾಯಿನಿಯಲ್ಲಿ ಪ್ರಕಟಿಸಿರುವ ಒಗಟುಗಳಿಗೆ ಉತ್ತರ.

೧ "ಮಹಾಲಯ"

೨ "ಮ" ಎಂಬುವ ಅಕ್ಷರವನ್ನು ಸೇರಿಸಬೇಕು.

ಎಸ್. ಶ್ರೀನಿವಾಸಮೂರ್ತಿ,
ಮರಿಮೆಲ್ಲಪ್ಪನವರ ಸ್ಕೂಲ್ ವಿದ್ಯಾರ್ಥಿ,
ಮೈಸೂರು.

ಒಗಟಿಗಳು.

೧ ಬಲನಕೊಂದವನಾರು? ದ್ರವ್ಯವ । ಗಳಿಸಿದಾನವನಾವವಮಾಡುವ । ಸೊಲಿದು ಮಖರಕ್ಷಣೆಗೆ ರಾಮನನೊಯ್ದ ಮುನಿ ಯಾರು ॥ ಜ್ವಲನಸಖಗೇನೆಂದು ಪೇಳ್ವರು । ತಿಳಿದುಪೇಳೀ ಪ್ರಶ್ನೆಯುತ್ತರ । ದೊಳಗೆ ಮಧ್ಯಾಕ್ಷರದ ದೇವನು ನಮ್ಮರಕ್ಷಿಸುಗೆ ॥

೨ ವಾಟವತೆರೆಯಲ್ಬರ್ಕುಂ । ತೋಟದೆ ದಳಿಯಿರ್ಕುವಾಜಿಯಂ ದನ ಮೆಂಬರ್ ॥ ಕೂಟಕೆವಿಗಣಂ ಬೂಷಣ । ವೋಟೆಯು ತಾಣಂ ನೃಪಂಗೆಕಾದಿಯೊಡನಿರೆ ಚಿತ್ರಂ ॥

ಪ್ರತ್ಯೇಕ ಸ್ಥಳವಿರಬೇಕು. ಅಡಿಗೆಯ ಮನೆಯ ಗೋಡೆಗಳಿಗೆ ಗಾರೆ ಹಾಕದಿದ್ದರೆ ಮೂರುತಿಂಗಳಿಗೊಂದಾವೃತ್ತಿ ಸುಣ್ಣ ಬೊಳಿಯಿಸಬೇಕು. ಅಡಿಗೆಮನೆಯಲ್ಲಿ ತಲೆಯನ್ನು ಬಾಚಿಕೊಳ್ಳದಂತೆ ಬಹಳ ಜಾಗರೂಕತೆಯಿಂದಿರಬೇಕು. ಅಡಿಗೆಮಾಡಿದ ಮತ್ತು ಊಟಮಾಡಿದ ಪಾತ್ರೆಗಳನ್ನು ಅಲ್ಲಿಯೇ ತೊಳಿಯಕೂಡದು ಈರೀತಿ ಮೇಲೆ ಹೇಳಿರುವ ವಿಧಿಗಳಿಗನುಸರಿಸಿ ಪ್ರತಿಮನುಷ್ಯನೂ, ಆಚರಿಸುವುದಾದರೆ ಅವನ ಆರೋಗ್ಯವು ಹೆಚ್ಚಿ ನಿರಂತರದಲ್ಲಿಯೂ ಆನಂದಾಬ್ಧಿಯಲ್ಲಿ ಮುಳುಗಾಡುತ್ತೇಳುತ ಇರುವನು. ಲರೂ ಆರೋಗದೃಢಗಾತ್ರರಾಗಿರುವುರೆಂಬುದಕ್ಕೆ ಯಾವಸಂಶಯವೂ ಇಲ್ಲ.

ಕೆ. ವೆಂಕಪ್ಪಜೋಸ್ಯ ಬಿ॥ ಎ॥

ಆಂಗ್ಲೊವರ್ನಾಕ್ಯುಲರ್ ಸ್ಕೂಲ್

ಕೊರಟಗೆರೆ.

ವಿದ್ಯಾವಿಲಾಸದ ಗ್ರಂಥಾವಳಿ.

ಪ್ರಕಟನಪತ್ರಿಕೆ.

ಮೈಸೂರು ದೇಶೀಯ ಪರೀಕ್ಷೆಗಳು.

೧೮೮೪ ನೆಯ ಇಸವಿ ಅಕ್ಟೋಬರ್ ೧೩ ನೆಯ ತಾರೀಖಿನ ಡಿ. ನಂಬರ್ ೯

ಇದರಿಂದ ತಿಳಿಯಪಡಿಸುವದೇನೆಂದರೆ ;—ನಾಳೆ ಡಿಸೆಂಬರ್ ತಿಂಗಳು (ಗುರುವಾರ ಮೊದಲನೇ ತಾರೀಖಿನಲ್ಲಿ) ನಡೆಯುವ ಮೈಸೂರು ದೇಶೀಯ ಪರೀಕ್ಷೆಗಳಿಗೆ ಹೋಗುವವರು, ಪ್ಲೇಗ್ ಜಾಡ್ಯದ ನಿಮಿತ್ತವಾಗಿ, ಈ ಪರೀಕ್ಷೆಗಳಿಗೆ ಸೇರಿಸಕೊಳ್ಳುವಂತೆ ಅವರು ಬರೆದುಕೊಂಡಿರುವ ದರಖಾಸ್ತುಗಳಲ್ಲಿ ನಮೂದಿಸಿರುವ ಸ್ಥಳವನ್ನು ಬಿಟ್ಟು ಈ ಪರೀಕ್ಷೆಗಳು ನಡೆಯುತಕ್ಕ ಬೇರೆ ಯಾವದಾದರೂ ಒಂದು ಸ್ಥಳಕ್ಕೆ ಹೋಗಿ ಪರೀಕ್ಷೆಕೊಡಲು ಅಪ್ಪಣೆಕೊಡಲಾದೀತು. ಆದರೆ ಹೀಗೆ ಅಪ್ಪಣೆಯನ್ನು ಪಡೆಯುಲ

ವಿದ್ಯಾದಾಯಿನಿ.

ಭಾಗ ೬.] ನವೆಂಬರ್ ೧೯೯೪ [ಸಂಚಿಕೆ ೧೧.

ಎಡಿಟರವರ ನೋಟ್ಸ್.

೪೯೯೪-೯೫ನೆ ಇಸವಿಯ ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟನ್ನು ಆದರದಿಂದ ಒದಿದೆವು. ಅದರಿಂದ ಪಾಠಶಾಲೆಗಳ ಸ್ಥಿತಿಯು ಸಮರ್ಪಕವಾಗಿರುವುದೆಂದು ವ್ಯಕ್ತವಾಗುವುದು.

***

ಹಿಂದಣ ಸಂವತ್ಸರದಲ್ಲಿ ಒಟ್ಟು ೩೯೭೪ ಪಾಠಶಾಲೆಗಳೂ, ವಿದ್ಯಾರ್ಥಿಗಳ ಸಂಖ್ಯೆಯು ೧೧೨,೦೧೪ ಇದ್ದವು. ೧೯೯೫-೯೬ನೆಯ ಇಸವಿಯಲ್ಲಿ ಪಾಠಶಾಲೆಗಳ ಸಂಖ್ಯೆಯು ೩೯೬೦ ಆಯಿತೆಂತಲೂ, ವಿದ್ಯಾರ್ಥಿಗಳ ಸಂಖ್ಯೆಯು ೧೧೪,೬೦೪ ಆಯಿತೆಂತಲೂ ಗೊತ್ತಾಗುವುದು. ಇದರಿಂದ ೨,೬೦೦ ವಿದ್ಯಾರ್ಥಿಗಳು ಹೆಚ್ಚಿದರೆಂದು ತಿಳಿಯುವುದು.

***

ಈ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಬಾಲಕಿಯರು ಒಟ್ಟು ೧೪,೫೨೦ ಮಂದಿ ವಿದ್ಯಾಭ್ಯಾಸಮಾಡುತಿರುವುರೆಂತಲೂ, ಸ್ತ್ರೀವಿದ್ಯಾಭ್ಯಾಸಕ್ಕೆ ಇದ್ದ ಅಡಚಣೆಯು ಸಡಲುತ ಬರುತಿದೆಯೆಂತಲೂ ಹೇಳಬಹುದು.

***

ಉಪಾಧ್ಯಾಯರಿಗೆ ಪಾಠಶಾಲಾಕ್ರಮ, ಬೋಧನಕ್ರಮ ಮುಂತಾದ ಉಪಯುಕ್ತ ವಿಷಯಗಳನ್ನು ತಿಳಿಯಪಡಿಸುವುದಕ್ಕೋಸ್ಕರ ೧೯೯೫ನೆಯ ಮಾರ್ಚಿಯಲ್ಲಿ ಕೋಲಾರ, ಶಿವಮೊಗ್ಗೆಯಲ್ಲಿ ಸ್ಥಾಪಿಸಿದ ಎರಡು ನಾರ್ಮಲ್‌ಸ್ಕೂಲ್‌ಗಳೂ ತೃಪ್ತಿಕರವಾಗಿವೆ.

***

ಕೆಲಸಗಾರರಿಗೆ ಓದುಬರಹವನ್ನು ರಾತ್ರಿವೇಳೆಯಲ್ಲಿ ಕಲಿಸುವುದಕ್ಕೋಸ್ಕರ

ಕೋಳಿಯು ರತ್ನವೂ.









ಒಂದು ಹೆಣ್ಣು ಕೋಳಿಯು ತನ್ನ ಮರಿಗಳನ್ನೆಲ್ಲಾ ಕರೆದುಕೊಂಡು ಎಂದಿನಂತೆ ತಾನಿದ್ದ ವಠಾರದಲ್ಲೆಲ್ಲಾ ಕಾಳುಕಡ್ಡಿಗಾಗಿ, ಕಸಕಡ್ಡಿಯನ್ನು ಕೊಕ್ಕಿನಿಂದ ಕೆದರುತ್ತಾ, ಕಾಲಿನಿಂದ ಕೆದಕುತ್ತಾ, ಕೊ, ಕೊ, ಕೊ ಎಂದು ಗಂಟಲಲ್ಲಿಯೆ ಕೂಗುತ್ತಾ ಅಲ್ಲಲ್ಲೆ ಸುತ್ತುತಲಿದ್ದಾಗ ಅಲ್ಲಿದ್ದ ಕಸದಲ್ಲೆ ಒಂದು ಕಡ್ಡಿಯ ಕೆಳಗೆ ಥಳಥಳನೆ ಹೊಳೆಯುತಲಿದ್ದುದನ್ನು ನೋಡಿತು. ಆಗ ಬಹು ಸಡಗರದಿಂದ ರೆಕ್ಕೆಯನ್ನು ಬಡೆಯುತ್ತಾ ಕೋ, ಕೋ ಎಂದು ಗಟ್ಟಿಯಾಗಿ ಕೂಗುತ್ತಾ, ಕಿಚ, ಕಿಚ್, ಕಿಚ್ಚೆನ್ನುವ ತನ್ನ ಮರಿಗಳೊಡನೆ ಕೂಡಿ ದೊಡ್ಡ ದೊಡ್ಡ ಹೆಜ್ಜೆಯನಿಟ್ಟು ಬೇಗನೆ ಆ ಸ್ಥಳಕ್ಕೆ ಹೋಗಿ ಕಾಲಿನಿಂದ ಕೆದಕಿ ಕೊಕ್ಕಿನಿಂದ ಆ ಥಳಥಳಿಸುವ ಪದಾರ್ಥವನ್ನು ತೆಗೆದುಕೊಂಡಿತು. ಅಯ್ಯೋಪಾಪ! ಆ ಕಲ್ಲನ್ನು ನೋಡಿ ಕೋಳಿಗೆ ಬಹು ಸಂಕಟವಾಯಿತು. ಈ ಥಳಥಳಿಸುವ ಕಲ್ಲಿಗಿಂತ ಒಂದು ಕಡಲೆಕಾಳಾಗಲಿ, ಹೆಸರುಕಾಳಾಗಲಿ ಸಿಕ್ಕಿದ್ದರೆ ನನಗೆ ಸಂತೋಷವಾಗುತಿತ್ತು! ಎಂದುಕೊಳ್ಳುತ್ತಾ ಆ ಕಲ್ಲನ್ನು ಉಗುಳಿ, ಅಲ್ಲಿ ಬಿದ್ದಿದ್ದ ತಿಪ್ಪೆಯಲ್ಲಿ ಕಾಳುಕಡಿಯನ್ನು ಆರಿಸಲು ಹೋಯಿತು. ನಮಗೆ ಉಪಯೋಗವಾಗುವುದಲ್ಲವೆಬೆಲೆ ಬಾಳತಕ್ಕದ್ದು.

ಕೋಳಿಯು ಏನುಮಾಡಿತು ? ಜೊತೆಯಲ್ಲಿ ಏನಿತ್ತು ? ಕೋಳಿಗೆ ಏನು ಕಾಣಿಸಿತು ? ಅಲ್ಲಿಗೆ ಹ್ಯಾಗೆ ಹೋಯಿತು ? ಅಲ್ಲಿ ಸಿಕ್ಕಿದ್ದು ಏನು ? ಅದರಿಂದ ಕೋಳಿಗೆ ಏನು ಉಪಯೋಗವಾಯಿತು ? ಇದರಿಂದ ನಾವು ಏನು ಕಲಿಯುವೆವು ?

ಪಾಠಹೇಳತಕ್ಕ ಪದ್ಧತಿಗಳು.

ಈಗ ನೂರು ವರ್ಷಗಳ ಹಿಂದೆ ವಿದ್ಯಾಭ್ಯಾಸ ಮಾಡತಕ್ಕವರು ಕೆಲವರೇ ಎಂಬ ಅಭಿಪ್ರಾಯವಿತ್ತು. ಅದರಿಂದೀಚಿಗೆ ಎಲ್ಲರಿಗೂ ವಿದ್ಯಾಭ್ಯಾಸ ಅವಶ್ಯಕ ವೆಂಬ ಅಭಿಪ್ರಾಯವು ಕ್ರಮೇಣ ತೋರುತ್ತಾ ಬಂತು. ಇದರಿಂದ ಸ್ಕೂಲಿನಲ್ಲಿ ಓದುವ ಹುಡುಗರ ಸಂಖ್ಯೆಯು ಹೆಚ್ಚಾಯಿತು. ಹೀಗೆ ಹೆಚ್ಚಾದ ಹುಡುಗರಿಗೆ ಪಾಠ ವನ್ನು ಹೇಳಲು ಉಪಾಧ್ಯಾಯರು ಬೇರೆ ಬೇರೆ ಉಪಾಯಗಳನ್ನು ಹುಡುಕುತಬಂದ ದ್ದರಿಂದ ಬೇರೆ ಬೇರೆ ಪದ್ಧತಿಗಳು ಹುಟ್ಟುವದಕ್ಕೆ ಕಾರಣವಾಯಿತು. ಈಗ ನೂರು ವರ್ಷಗಳ ಹಿಂದೆ ಇದ್ದ ಪದ್ಧತಿ ಯಾವುದೆಂದರೆ:--ಒಬ್ಬೊಬ್ಬರಿಗೂ ಬೇರೆಬೇರೆಯಾಗಿ ಪಾಠ ಹೇಳುವುದು.

ಇದರಲ್ಲಿ ಉಪಾಧ್ಯಾಯರು ಶಿಷ್ಯರಿಗೆಲ್ಲಾ ಬೇರೆಬೇರೆಯಾಗಿ ಪಾಠಹೇಳಬೇ ಕಾಗುವುದು. ಒಬ್ಬ ಓದುತ್ತಿದ್ದ ಪಾಠವನ್ನು ಮತ್ತೊಬ್ಬ ಹುಡುಗನು ಓದುತ್ತಿರು ವುದಿಲ್ಲ.

ಇದರ ಗುಣಗಳು : —

1 ಅವರವರ ಯೋಗ್ಯತೆಗೆ ತಕ್ಕಂತೆ ಬಾಲಕರಿಗೆ ವಿಷಯಗಳನ್ನು ಹೇಳಿಕೊಡಬ ಹುದು. ಈ ಪದ್ಧತಿಯಿಂದ ಬುದ್ಧಿವಂತರಾದ ಬಾಲಕರಿಗೆ ಬಹಳ ಅನುಕೂಲ. ದಡ್ಡನ ಜೊತೆಯಲ್ಲಿ ಸೇರಿ ಹಿಂದೆ ಬೀಳಬೇಕಾದ್ದಿಲ್ಲ.

2 ಪ್ರತಿಯೊಬ್ಬನು ತನ್ನ ಪಾಠವನ್ನು ಗಟ್ಟಿಮಾಡುವನೆಂಬುವದನ್ನು ಉಪಾಧ್ಯಾ ಯರು ಚೆನ್ನಾಗಿ ಗೊತ್ತುಮಾಡಬಹುದು.

ದೋಷಗಳು:—

1 ಹುಡುಗರ ಸಂಖ್ಯೆ ಹೆಚ್ಚಾದರೆ ಈ ಪದ್ಧತಿಯನ್ನನುಸರಿಸಿ ಪಾಠ ಹೇಳುವುದು ಅಸಾಧ್ಯ.

2 ಉಪಾಧ್ಯಾಯರಿಗೆ ಆಯಾಸ ಬಹಳ ಹೆಚ್ಚು. ಮತ್ತು ಅವರು ಹೇಳಿದ ಪಾಠವನ್ನೇ ತಿರಿತಿರಿಗೂ ಹೇಳಿಕೊಂಡಿರಬೇಕಾಗಿರುವುದು.

3 ಈ ಪದ್ಧತಿಯಿಂದ ಬುದ್ಧಿವಂತರಿಗೇನೋ ಅನುಕೂಲವೇಸರಿ, ಆದರೆ ಇತರ ರಿಗೆ ಅಭಿವೃದ್ಧಿಗೆ ಮಾರ್ಗವೇ ಇಲ್ಲ.

ಏರ್ಪಡಿಸಿರುವ ನೈಟ್‌ಸ್ಕೂಲ್‌ಗಳ ಸಂಖ್ಯೆಯು ಹೆಚ್ಚುತಲಿದೆ. ಒಟ್ಟು ೩೫ ನೈಟ್ ಸ್ಕೂಲ್‌ಗಳು ಇವೆಯೆಂತಲೂ, ಕೆಲಸಗಾರರು ಇವುಗಳಿಂದ ಪ್ರಯೋಜನಪಡೆಯುತ ಲಿದಾರೆಂತಲೂ ತಿಳಿದುಬರುವುದು.

***

ಕೈಗಾರಿಕೆ ಕೆಲಸವನ್ನು ಕಲಿಸುವ ಇಂಡಸ್ಟ್ರಿಯಲ್‌ಸ್ಕೂಲ್‌ಗಳ ಸಂಖ್ಯೆ ಯು ಒಟ್ಟು ೮ರು. ಮೈಸೂರು, ಹಾಸನ, ಈ ಸ್ಥಳಗಳಲ್ಲಿರತಕ್ಕ ಸ್ಕೂಲುಗಳ ವಿದ್ಯಾ ರ್ಥಿ ಸಂಖ್ಯೆಯು ಹೆಚ್ಚಾಗಿರುವುದನ್ನೂ ಇಂಡಸ್ಟ್ರಿಯಲ್‌ಸ್ಕೂಲುಗಳೆಲ್ಲಾ ತೃಪ್ತಿ ಕರವಾಗಿ ನಡೆಯುವುದನ್ನೂ ಸೂಚಿಸಲು ಸಂತೋಷಿಸುತ್ತೇವೆ.

***

ವಿದ್ಯಾಭ್ಯಾಸಕ್ಕಾಗಿ ತಗಲಿದ ಖರ್ಚು ಒಟ್ಟು ರೂ॥ ೯, ೧೬, ೬೯೪. ವಿದ್ಯಾರ್ಥಿಗಳು ಕೊಟ್ಟ ಫಿ ಒಟ್ಟು ಮೊಬಲಗು ರೂ॥ ೯೬, ೧೪೪. ಸರ್ಕಾರದ ವರು ಜನರ ವಿದ್ಯಾಭ್ಯಾಸಕ್ಕೆ ಆ ಇಲಾಖೆಯಲ್ಲಿ ಬರುವುದಕ್ಕಿಂತ ಹತ್ತುಸಾಲು ಹೆಚ್ಚಾಗಿ ಖರ್ಚು ಮಾಡುತಿರುವರೆಂದು ಚೆನ್ನಾಗಿ ತೋರಿಬರುವುದು.

***

'ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು' ಎಂದು ಆಂಗ್ಲೋವರ್ನಾಕ್ಯು ಲರ್ ಸ್ಕೂಲುಗಳ ಸ್ಥಿತಿಯನ್ನು ಪ್ರತಿತಿಂಗಳಲ್ಲಿಯೂ ಸ್ವಲ್ಪಸ್ವಲ್ಪವಾಗಿ ತಿಳಿಸುತ್ತ ಬರುವೆವು.

***

ಪ್ರಸಿದ್ಧ ಕವಿಗಳಿಂದ ರಚಿಸಲ್ಪಟ್ಟ ಪೂರ್ವಗ್ರಂಥಗಳನ್ನು ಪ್ರಕಟಿಸುತ್ತಿದ್ದ ಕರ್ಣಾಟಕ ಕಾವ್ಯಮಂಜರಿ [ಪ್ರೊಪ್ರೈಟರ್ ಅಕಾಲಮೃತ್ಯುವನ್ನೈದಿದಕ್ಕಾಗಿ, ಆ ಪತ್ರಿಕೆಯು ಎಡಿಟರುಗಳಿಗೆ ಸ್ವಲ್ಪ ಅನನುಕೂಲ ಉಂಟಾಗಿತ್ತು. ಕ್ಷಿಪ್ರದಲ್ಲಿಯೇ ಎಲ್ಲವನ್ನೂ ಕ್ರಮಪಡಿಸಿಕೊಂಡು ಎಡಿಟರುಗಳು ಉಪಯುಕ್ತವಾದ ಆ ಪತ್ರಿಕೆಯನ್ನು ಪ್ರಕಟಿಸುವರು.

ಕ್ಲಾಸಿನಲ್ಲಿಯೂ ಇಬ್ಬರಿಬ್ಬರು ಹಿರೇಮಣಿಗಳಾದರು. ಈ ವಿಷಯದಲ್ಲಿ ಲಾಂಕಾಸ್ಟರ್ ಪದ್ಧತಿಯಲ್ಲಿ ಸ್ವಲ್ಪ ಭೇದವಿದೆ. ಅದರಲ್ಲಿ ಕ್ಲಾಸಿಗೆ ಅಥವಾ ಪಂಗಡಕ್ಕೆ ಒಬ್ಬನೇ ಹಿರೇಮಣಿಯಿರುತಿದ್ದನು.

3 ಇದರಲ್ಲಿ ಸ್ಕೂಲ್ ಉಪಾಧ್ಯಾಯರು ಮಾಡಬೇಕಾದ್ದು ಮುಖ್ಯವಾಗಿ ಮೇಲು ವಿಚಾರಣೆ. ಯಾರ್ಯಾರು ಎಷ್ಟೆಷ್ಟು ಕೆಲಸ ಮಾಡಬೇಕು? ಏನೇನು ಮಾಡಬೇಕು? ಇಂಥಾದ್ದನ್ನೆಲ್ಲಾ ನಿರ್ಣಯಿಸತಕ್ಕವರು ಇವರೆ. ಮತ್ತು ಪಾಠ ಹೇಳತಕ್ಕ ಹುಡುಗರಿಗೆ ಅನುಮಾನ ಹುಟ್ಟಿದಾಗ ಅದನ್ನು ಪರಿಹಾರ ಮಾಡತಕ್ಕದ್ದು ಇವರ ಕೆಲಸ. ಸ್ಕೂಲ್‌ವೇಳೆಯಾದನಂತರ ಪಾಠ ಹೇಳುತ್ತಿದ್ದ ಹುಡುಗರಿಗೆ ಬೇರೆಯಾಗಿ ಓದಿಸತಕ್ಕದ್ದೂ ಇವರ ಕೆಲಸ.

4 ಈ ಪದ್ಧತಿಯಲ್ಲಿ ಬಹುಪೂನಗಳನ್ನು ಬಾಲಕರಿಗೆ ವಿಶೇಷವಾಗಿ ಕೊಡುತ್ತಿದ್ದರು. ಇದರಿಂದ ಬಾಲಕರಲ್ಲಿ ಸ್ಪರ್ಧೆಯನ್ನುಂಟುಮಾಡುತ್ತಿದ್ದರು.

5 ಈ ಪದ್ಧತಿಯಲ್ಲಿ ಸ್ಕೂಲು ಸಮಕೋಣ ಚತುರ್ಭುಜಾಕೃತಿಯಾಗಿರಬೇಕೆಂದು ಬೆಲ್ ಮತ್ತು ಲಾಂಕಾಸ್ಟರ್ ಇವರಿಬ್ಬರೂ ಅಭಿಪ್ರಾಯಪಟ್ಟರು. ಆದರೆ ಈ ಹಾಲಿನಲ್ಲಿ ತರಗತಿಗಳನ್ನಿಡುವ ಕ್ರಮದಲ್ಲಿ ಇವರಿಬ್ಬರೂ ಬೇರೆಬೇರೆಯಾಗಿ ಅಭಿಪ್ರಾಯಪಟ್ಟರು. ಬೆಲ್ಲಿನ ಪದ್ಧತಿಯಂತೆ ತರಗತಿಗಳು ಎರಡು ಪಕ್ಕದ ಗೋಡೆಗಳ ಮಧ್ಯಲ್ಲಿ ಇದ್ದವು. ಲಾಂಕಾಸ್ಟರಿನ ಪದ್ಧತಿಯಂತೆ ತರಗತಿಗಳು ಮುಖ್ಯೋಪಾಧ್ಯಾಯರಿಗೆ ಎದುರುಮುಖವಾಗಿರುತ್ತಿದ್ದವು. ಹಾಲಿನ ಒಂದು ಕೊನೆಯಲ್ಲಿ ಮುಖ್ಯೋಪಾಧ್ಯಾಯರಿಗೆ ಎತ್ತರವಾದ ಸ್ಥಳವಿತ್ತು.

ಈ ಪದ್ಧತಿಯ ಗುಣಗಳು--

1 ಪೂರ್ವದ ಪದ್ಧತಿಯಲ್ಲಿ ಬಾಲಕರೆಲ್ಲರಿಗೂ ಒಟ್ಟಾಗಿ ಕೆಲಸ ಕೊಡುವುದು ಅಸಾಧ್ಯವಾಗಿತ್ತು. ಇದರಲ್ಲಿ ಅದು ತಪ್ಪಿತು. ಈ ಪದ್ಧತಿಯಲ್ಲಿ ಬಾಲಕರಿಗೆ ಯಾವಾಗಲೂ ಮಾಡುವುದಕ್ಕೆ ಕೆಲಸವಿರುವಂತೆ ಇದ್ದುದರಿಂದ ಅವರಿಗೆ ಬೇಜಾರು ಕಡಿಮೆಯಾಯಿತು.

2 ಹುಡುಗರು ಯಾವಾಗಲೂ ಕೆಲಸಮಾಡುತ್ತಲೇ ಇದ್ದುದರಿಂದ ಕೆಲಸಮಾಡುವ ಸ್ವಭಾವವು ಅವರಿಗೆ ಬಂದಂತಾಯಿತು.

3 ಕೆಲವು ವಿಷಯಗಳಲ್ಲಿ ಬೋಧಿಸಿದ ಅಂಶಗಳು ಬಾಲಕರಿಗೆ ಸುಲಭವಾಗಿ ತಿಳಿಯುವಂತೆಯೂ ಆಯಿತು. ಯಾಕಂದರೆ, ಬೋಧಿಸುವವರು ಬಾಲಕರೇ ಆದುದ

4 ಒಬ್ಬನಿಗೆ ಹೇಳಿಕೊಡುವಾಗ ಇತರರಿಗೆ ಮಾಡುವುದಕ್ಕೆ ಸರಿಯಾಗಿ ಕೆಲಸ ಕೊಡುವುದಕ್ಕೆ ಆಗುವುದಿಲ್ಲವಾದುದರಿಂದ ಗಲಾಟೆಯಾಗಬಹುದು. ಇದರಿಂದ ಸ್ಕೂಲಿನ ಕ್ರಮವುಕೆಟ್ಟುಹೋಗಬಹುದು.

5 ಹುಡುಗರಿಗೆ ಸ್ಪರ್ಧೆ ಇರುವುದಿಲ್ಲ. ಇದರಿಂದ ಅವರಿಗೆ ಚಟಪಟಿಕೆ ಕಡಮೆ ಆಗುವದು. ಇದರಿಂದ ಪಾಠಶಾಲೆಯಲ್ಲಿ ಬೇಜಾರು ಹುಟ್ಟುವದು.

ಈ ಅನನುಕೂಲಗಳಿಂದ ಅನೇಕರಿಗೆ ಒಟ್ಟಾಗಿ ಪಾಠ ಹೇಳುವದು ಅವಶ್ಯಕ ವೆಂದು ತೋರಿತು.

ಹಿರೇಮಣಿ ಪದ್ಧತಿ.

ಈ ಪದ್ಧತಿಯು ಪೂರ್ವದಿಂದಲೂ ನಮ್ಮ ದೇಶದಲ್ಲಿ ಪ್ರಚಾರದಲ್ಲಿದೆ. ಬೆಲ್ ಎಂಬಾತನು (1791) ಮದರಾಸಿನಲ್ಲಿ ಈ ಪದ್ಧತಿಯನ್ನು ತಿಳಿದು ಇಂಗ್ಲೆಂಡ್ ದೇಶದ ಲ್ಲಿರುವ ದೊಡ್ಡ ಸ್ಕೂಲುಗಳಿಗೆ ಉಪಯೋಗಿಸುವಂತೆ ಅದನ್ನು ಕ್ರಮಪಡಿಸಿದನು. ಲಾಂಕಾಸ್ಟರ್ ಎಂಬಾತನೂ ಈ ಪದ್ಧತಿಯನ್ನು ಕ್ರಮಪಡಿಸುವದರಲ್ಲಿ ಕಷ್ಟಪಟ್ಟನು. ಇವರಿಬ್ಬರೂ ತಾನು ಕಂಡುಹಿಡಿದ ಪದ್ಧತಿ, ನಾನು ಕಂಡುಹಿಡಿದ ಪದ್ಧತಿ ಎಂದು ಸ್ವಲ್ಪ ಮಟ್ಟಿಗೆ ಜಗಳವಾಡಿದಂತೆಯೂ ಸಹ ತಿಳಿದುಬರುತ್ತದೆ. ಕೆಲವು ಕಾಲ ಇಂಗ್ಲೆಂಡಿ ನಲ್ಲಿ ಈ ಪದ್ಧತಿಯು ಬಹಳವಾಗಿ ಪ್ರಚಾರವಾಗಿತ್ತು. ಆದರೆ ಕ್ರಮೇಣ ಜನಗಳಿಗೆ ಅದರಲ್ಲಿ ಆದರ ಕಡಮೆಯಾಗುತ ಬಂತು. ಈಚಿಗೆ ಅದರಿಂದ ಹುಟ್ಟಿದ ಪ್ಯೂಪಿಲ್ ಟೀಚರ್ ಪದ್ಧತಿಯೆಂಬದೊಂದು ವಿಶೇಷವಾಗಿ ವಾಡಿಕೆಗೆ ಬಂದಿದೆ.

ಹಿರೇಮಣಿಯ ಪದ್ಧತಿಯ ಸ್ವರೂಪ.

1 ಇದರಲ್ಲಿ ಮುಖ್ಯವಾಗಿ ಸ್ಕೂಲಿನಲ್ಲಿರುವ ಮಕ್ಕಳನ್ನೆಲ್ಲಾ ಸಣ್ಣ ಸಣ್ಣ ಪಂಗಡ ಗಳಾಗಿ ಮಾಡುತ್ತಿದ್ದರು. ಒಂದೊಂದು ಪಂಗಡಕ್ಕೂ ಆ ಪಂಗಡದಲ್ಲೇ ತುಂಬಾ ಬುದ್ಧಿವಂತನಾದವನನ್ನು ಅಥವಾ ಮೇಲಿನ ಪಂಗಡದವನನ್ನು ಪಾಠ ಹೇಳುವುದಕ್ಕೆ ನಿಯಮಿಸುತ್ತಿದ್ದರು. ಹೀಗೆ ಪಾಠ ಹೇಳುವರನ್ನು ಆಗಾಗ್ಗೆ ಬದಲಾಯಿಸುತ್ತಲೂ ಇದ್ದರು. ಮತ್ತು ಪಾಠ ಹೇಳತಕ್ಕವರಿಗೆ ಬೇರೆಬೇರೆಯಾಗಿ ಪಾಠವೂ ನಡಿಯುತಿತ್ತು.

2 ಹೀಗೆ ಪಾಠ ಹೇಳತಕ್ಕವರಲ್ಲಿ ಎರಡು ಭೇದಗಳಿತ್ತು. ಕೆಲವರು ಪಾಠ ವನ್ನು ಮಾತ್ರ ಹೇಳತಕ್ಕವರು. ಮತ್ತೆ ಕೆಲವರು ಬಾಲಕರನ್ನು ಕ್ರಮವಾಗಿ ಇಟ್ಟು ಕೊಳ್ಳತಕ್ಕವರು ಅಂದರೆ ಆಳಿಕೆಯನ್ನು ನೋಡಿಕೊಳ್ಳತಕ್ಕವರು. ಅಂದರೆ ಪ್ರತಿ

ಈ ಪದ್ಧತಿಯನ್ನು ಸ್ವಲ್ಪವಷ್ಟಿಗೆ ಅನುಸರಿಸಬೇಕಾಗುವುದು. ಅಂದರೆ ಕೆಲವು ತರಗತಿಗಳಿಗೆ ಪಾಠ ಹೇಳುವುದಕ್ಕೆ ಬುದ್ಧಿವಂತರಾದ ಹಿರೇಮಣಿಗಳನ್ನು ನಿಯಮಿಸಬೇಕಾಗುವುದು. ಇಂಥವರನ್ನು ಗೊತ್ತುಮಾಡುವ ಪಕ್ಷದಲ್ಲಿ ಅವರಿಗೆ ಬೆಲ್ ನುತ್ತು ಲಾಂಕಸ್ಟರ್ ಇವರ ಅಭಿಪ್ರಾಯದಂತೆ ಬೋಧಿಸುವುದಕ್ಕೆ ಎಲ್ಲಾ ವಿಷಯಗಳನ್ನು ಕೊಡಕೂಡದು. ಬುದ್ಧಿಯು ಕೆಲಸವು ವಿಶೇಷವಾಗಿಲ್ಲದ ಉಕ್ತಲೇಖವೆ, ಕಾಪಿ ಬರೆಯಿಸುವುದು, ಬಾಯಿಪಾಠ ಹೇಳಿಸುವುದು ಇಂಥವುಗಳನ್ನೇ ಕೊಡಬೇಕು.

ಡಾಕ್ಟರ್ ಆನಂದಬಾಯಿರವರು.

ಆನಂದಬಾಯಿರವರು ೧೮೮೩ನೆ ಜೂಲೈ ತಿಂಗಳಲ್ಲಿ ಅಮೆರಿಕಾದೇಶವನ್ನು ತಲಪಿದರು. ಅಮೆರಿಕಾಖಂಡಕ್ಕೆ ತಲಪಿದ ಹಿಂದುಸ್ತ್ರೀಯರಲ್ಲಿ ಇವರೆ ಮೊದಲನೆಯವರು. ಇವರು ಫಿಲಡೆಲ್ಫಿಯಾ ಪಟ್ಟಣಕ್ಕೆ ಕಾರ್ಪೆಂಟರ್ ದೊರೆಸಾನಿಯವರೊಡನೆ ಹೋದರು. ಅಲ್ಲಿನ ಹೆಂಗಸರ ವೈದ್ಯಪಾಠಶಾಲೆಗೆ ಡಾಕ್ಟರ್ ಬಾಡ್ಲಿಯವರು ಅಧ್ಯಕ್ಷೆರಾಗಿದ್ದರು. ಅವರು ಆನಂದಬಾಯಿರವರ ವಿಷಯದಲ್ಲಿ ಹೇಳಿರುವದೇನೆಂದರೆ—'ನನಗೆ ಆನಂದಬಾಯಿರವರನ್ನು ನೋಡಿದ ಅವರಲ್ಲಿಯೂ ಹಿಂದೂಸ್ತ್ರೀಯರಲ್ಲಿಯೂ ಪ್ರೀತಿಯುಂಟಾಯಿತು. ಕ್ರಮಕ್ರಮವಾಗಿ ವ್ಯಾಸಂಗದಲ್ಲಿ ಇವರ ಶ್ರದ್ಧೆಯು, ನಡೆನುಡಿಗಳಲ್ಲಿ ಇವರ ಗಾಂಭೀರ್ಯವು ಸೌಶೀಲ್ಯವು ನನ್ನ ಪ್ರೀತಿಯ ಜೊತೆಗೆ ಗೌರವವನ್ನು ಹೆಚ್ಚಿಸಿತು. ಆನಂದಬಾಯಿ ತಮ್ಮ ಅಡಿಗೆಯನ್ನು ತಾವೆ ಮಾಡಿಕೊಂಡು ಶ್ರಮಪಡುತ್ತಿದ್ದರು''

೧೮೮೩ನೆ ಜೂಲೈ ತಿಂಗಳು ಮೊದಲುಗೊಂಡು ಆನಂದಬಾಯಿರವರು ೧೮೮೬ನೆ ಮಾರ್ಚಿತಿಂಗಳವರಿಗೂ ತಮ್ಮ ಕುಲಾಚಾರವನ್ನು ಬಿಡದೆ ಇರುವದಕ್ಕೋಸ್ಕರ ಬಹಳ ಶ್ರಮಪಡುತ್ತಾ ಈ ಶ್ರಮದಲ್ಲಿ ವಿದ್ಯಾವ್ಯಾಸಂಗವನ್ನು ಮಾಡಿ ಎಂ. ಡಿ. ಪರಿಕ್ಷೆಗೆ ಹೋದರು. ಇದರಲ್ಲಿ ತೇರ್ಗಡೆಯಾಯಿತು. ಈ ಪರಿಕ್ಷೆಯಲ್ಲಿ ಬಹು ಸಂಬರುಗಳನ್ನು ಹೊಂದಿ ತೇರ್ಗಡೆಯಾದವರಲ್ಲಿ ಬಹಳ ಶ್ಲಾಘ್ಯವಾದ ಅಂತಸ್ತನ್ನು ಹೊಂದಿ

ರಿಂದ ಅವರಿಗೆ ಏನು ಏನು ಕಷ್ಟಗಳಿರುವವೆಂಬುದು ದೊಡ್ಡವರಿಗಿಂತಲೂ ಸುಲಭವಾಗಿ ಮತ್ತು ಚೆನ್ನಾಗಿ ತಿಳಿಯುವುದು. ಇದರಿಂದ ಅವರು ಆ ವಿಷಯಗಳನ್ನು ಬಾಲಕರಿಗೆ ಚೆನ್ನಾಗಿ ತಿಳಿಸುವರು.

4 ಪಾಠ ಹೇಳಿಕೊಡತಕ್ಕ ಬಾಲಕರಿಗೆ ಈ ಪದ್ಧತಿಯಿಂದ ಬಹಳ ಅನುಕೂಲ. ಕಷ್ಟಪಟ್ಟು ಬೋಧಿಸಬೇಕಾದ್ದರಿಂದ ಅವರಿಗೆ ಹಳೇಪಾಠವು ಚೆನ್ನಾಗಿ ಜ್ಞಾಪಕ ನಿಲ್ಲುವುದು

5 ಉಪಾಧ್ಯಾಯನಿಗೆ ಶ್ರಮ ಕಡಮೆ.

6 ಪಾಠಶಾಲೆಗಳಿಗಾಗಿ ಆಗತಕ್ಕ ಖರ್ಚು ಕಡಮೆಯಾಗುವುದು.

ಈ ಪದ್ಧತಿಯ ದೋಷಗಳು---

1 ಬೋಧನೆಯಿಂದ ಬಾಲಕರಿಗೆ ಬುದ್ಧಿ ಸಂಸ್ಕಾರವು ಸರಿಯಾಗುವುದಿಲ್ಲ. ಯಾಕಂದರೆ, ಪಾಠ ಹೇಳತಕ್ಕವರು ಬಾಲಕರೆ ಆದುದರಿಂದ, ಅವರಿಗೆ ಬುದ್ಧಿ ಸಂಸ್ಕಾರನಾಗುವಂತೆ ಪ್ರಶ್ನೆ ಮಾಡುವುದು ಬರುವದಿಲ್ಲ.

2 ಉಪಾಧ್ಯಾಯರಿಗೆ ಬಾಲಕರ ನಡೆನುಡಿಗಳು ಸಾಕ್ಷಾತ್ತಾಗಿ ಗೊತ್ತಾಗುವುದಿಲ್ಲ. ಉಪಾಧ್ಯಾಯರು ಹಿರೇಮಣಿಗಳು ಹೇಳಿದ್ದನ್ನು ನಂಬಬೇಕಾಗುತ್ತೆ. ಇದರಿಂದ ಬಾಲಕರ ನಿಜವಾದ ಸ್ವಭಾವವನ್ನು ನಿರ್ಣಯಿಸುವುದು ಕಷ್ಟ ಕೆಲವು ಸಮಯಗಳಲ್ಲಿ ಹಿರೇಮಣಿಗಳು ತಮಗೆ ಬೇಕಾದವರನ್ನು ಭೂಷಣೆ ಮಾಡುವರು; ಬೇಡದವರನ್ನು ದೂಷಣೆ ಮಾಡುವರು.

3 ನಡತೆ ವಿಷಯದಲ್ಲಿ ಮಕ್ಕಳಿಗೆ ದೊಡ್ಡವರ ಹತ್ತಿರ ಓದಿದಷ್ಟು ಪ್ರಯೋಜನವಾಗುತಿರಲಿಲ್ಲ. ನೀತ್ಯನುಶಾಸನಕ್ಕೆ ಮುಖ್ಯವಾಗಿ ಬೇಕಾದ್ದು ಉಪಾಧ್ಯಾಯರ ಮಾತುಗಳು. ಇದಿದ್ದರೆ ಬಾಲಕರ ನಡತೆಯು ಸಂಸರ್ಗದಿಂದ ಕ್ರಮೇಣ ಒಳ್ಳೇದಾಗುವುದು. ಇದು ಹಿರೇಮಣಿ ಪದ್ಧತಿಯಲ್ಲಿ ಅಸಾಧ್ಯ.

4 ಯೋಗ್ಯರಾದ ಹಿರೇಮಣಿಗಳು ಪ್ರತಿವರ್ಷವೂ ದೊರೆಯುವುದು ಕಷ್ಟ.

ಹೀಗೆ ಹಿರೇಮಣಿಯ ಪದ್ಧತಿಯಲ್ಲಿ ದೋಷಗಳಿರುವುದರಿಂದ ಆ ಪದ್ಧತಿಯನ್ನು ಈಚೀಚೆಗೆ ಜನಗಳು ಬಿಡುತ ಬಂದಿದಾರೆ. ಈ ಪದ್ಧತಿಯನ್ನು ನಮ್ಮ ದೇಶದ ಯಾವ ಪಾಠಶಾಲೆಗಳಲ್ಲೇ ಆಗಲಿ ಸಂಪೂರ್ಣವಾಗಿ ಅನುಸರಿಸುವುದರಿಂದ ಪ್ರಯೋಜನವಿಲ್ಲ. ಆದರೆ ಉಪಾಧ್ಯಾಯರ ಸಂಖ್ಯೆಯು ಕಡಮೆಯಾಗಿರುವ ಪಾಠಶಾಲೆಗಳಲ್ಲಿ

ಸ್ತ್ರೀಯರಲ್ಲನೇಕರಿಗೆ ಇರುವ ಅನೇಕ ವಿಧವಾದ ರೋಗನಿವಾರಣೆಯ ವಿಷಯದಲ್ಲಿ ಸಹಾಯಭೂತಳಾಗಬೇಕೆಂದು ನಾನು ಬಹಳ ಕಷ್ಟಪಟ್ಟೆನು. ನನಗೆ ಉಂಟಾಗಿರುವ ರೋಗವನ್ನು ನೋಡಿದರೆ, ನಾನು ಒಂದು ವಿಧವಾಗಿ ಸಂಕಲ್ಪವಾಡಿದರೆ ದೇವರು ಅನ್ಯಥಾ ಸಂಕಲ್ಪಿಸಿರುವಂತೆ ತೋರುತ್ತದೆ. ದೇವರ ಇಷ್ಟವಿದ್ದಂತೆ ನಡೆಯಲಿ ನಾನು ಸಾಯುವೆನೆಂಬ ಸಂತಾಪವು ನನಗೆ ಇಲ್ಲ. ನಾನು ಅನಿರ್ವಚನೀಯವಾದ ಕಷ್ಟ ಪಟ್ಟು ಆರ್ಜಿಸಿದ ನನ್ನ ವಿದ್ಯೆಯು ನನ್ನ ಸೋದರಿಯರಾದ ಈ ದೇಶದ ಸ್ತ್ರೀಯರಿಗೆ ಫಲಕಾರಿಯಾಗುವಂತಿಲ್ಲವಲ್ಲಾ ಎಂದು ವಿಚಾರಪಡುತ್ತೇನೆ'' ಈ ವಿಷಯದಲ್ಲಿ ಇಂಡಿಯಾದೇಶವೇ ವಿಚಾರಪಡಬೇಕು. ಅದು ಹಾಗಿರಲಿ.

ಡಾಕ್ಟರ್ ಆನಂದಬಾಯಿಜೋಷಿಯವರು ಬೊಂಬಾಯಿಗೆ ಬಂದ ಕೂಡಲೆ ಇವರಿಗೆ ಬಹಿಷ್ಕಾರವಾಗುವದೆಂದು ಅನೇಕರು ನಂಬಿದ್ದರು. ಈ ದುಃಖವು ಅವರಿಗೆ ಉಂಟಾಗಲಿಲ್ಲ. ಇವರ ಬಂಧುಗಳು ಪರಿಚಿತರು ಮೊದಲಾದ ಎಲ್ಲರೂ ಇವರು ಬಂದ ಕೂಡಲೆ ಸಹಪಙ್ತಿಭೋಜನ ಮೊದಲಾದ ಸವ್ಯವಹಾರವನ್ನು ಇವರೊಡನೆ ಬೆಳಸಿದರು. ಇವರಿಂದ ಈ ಭರತಖಂಡದ ಸ್ತ್ರೀಯರಿಗೆ ಅನ್ಯಾದೃಶವಾದ ಉಪಕಾರವಾಗುವುದೆಂದು ಅನೇಕ ಡೊಡ್ಡಮನುಷ್ಯರು ಭಾವಿಸಿದ್ದರು. ಅವರ ಮನೋರಥಗಳೆಲ್ಲ ಭಗ್ನವಾದವು. ಕೊಲ್ಲಾಪುರದ ಮಹಾರಾಜರವರು ತಮ್ಮ ದೇಶದ ಹೆಂಗಸರ ಆಸ್ಪತ್ರೆಗೆ ಇವರನ್ನು ನಿಯಮಿಸಿಕೊಂಡು, ತಮ್ಮ ದೇಶೀಯರಿಗೆ ಉಪಕಾರ ಮಾಡಬೇಕೆಂದು ಬಹಳ ಕುತೂಹಲಪಡುತ್ತಿದ್ದರು. ಬಾಯಿಯವರು ಸ್ವರ್ಗಸ್ಥರಾದರು. ಇವರ ಅಕಾಲಮರಣವನ್ನು ಕೇಳಿ, ಅವರು ತಮ್ಮ ರಾಜ್ಯಭ್ರಂಶವಾದರೆ ಎಷ್ಟು ಸಂಕಟವಾಗಬಹುದೊ ಅಷ್ಟೂ ಸಂಕಟಪಟ್ಟರು. ಇವರ ಮರಣದ ವಿಷಯದಲ್ಲಿ ಈಗ ಬೊಂಬಾಯಿ ಹೈಕೋರ್ಟು ಜಡ್ಜಿಗಳಾಗಿರುವ ಮ|| ರಾ|| ರಾಣಡೇವರು ಬರೆದಿರುವುದು ಸಮಸ್ತರಿಗೂ ತಿಳಿಯುತಕ್ಕುದಾಗಿದೆ. ಅದೇನಂದರೆ;—

ಆನಂದಬಾಯಿಜೋಷಿಯವರು ಕಾಲಾಧೀನರಾದಾಗ್ಯೂ ಬದುಕಿಯೇ ಇದಾರೆಂದು ನಾನು ಭಾವಿಸುತ್ತೇನೆ. ಅವರ ಉತ್ಸಾಹವೂ, ಅವರ ದೇಶಾಭಿಮಾನವೂ ಹಿಂದೂಸ್ತ್ರೀಯರನ್ನು ಉನ್ನತಸ್ಥಿತಿಗೆ ತರಬೇಕೆಂದಿದ್ದ ಅವರ ಆಶಯವೂ, ದ್ವೀಪಾಂತರಗಳಿಗೆ ಹೋಗಿ ವೈದ್ಯವಿದ್ಯೆಯಲ್ಲಿ ಪಾರಂಗತರಾಗಿ, ಈ ಸ್ವದೇಶಕ್ಕೆ ಬಂದು ಪುರುಷರಿಂದ ಚಿಕಿತ್ಸೆಮಾಡಿಸಿಕೊಳ್ಳಲೊಪ್ಪದಿರುವ ಸ್ತ್ರೀಯರ ಪ್ರಬಲವಾದ ರೋಗಗಳ

ದರು. ಇವರಿಗೆ ಡಿಗ್ರೀಕೊಡುವ ಕಾನ್ವೊಕೇಷ್ಣಗೆ ಪಂಡಿತರವಾಬಾಯಿರೇ ಮೊದಲಾದ ಅನೇಕರು ದಯಮಾಡಿಸಿದ್ದರು. ಆನಂದಬಾಯಿರವರು ೩ ವರುಷಗಳಲ್ಲಿ ಪರಸ್ಥಳದ ತಾಪತ್ರಯಗಳೊಳಗೆ ಇಷ್ಟು ದೊಡ್ಡಪರೀಕ್ಷೆಯನ್ನು ಕೊಟ್ಟದ್ದು ನೋಡಿ ಅಮೆರಿಕಾ ಖಂಡದ ಸ್ತ್ರೀಪುರುಷರು ಬಹಳ ಆಶ್ಚರ್ಯಪಟ್ಟದ್ದಲ್ಲದೆ ಹಿಂದುಸ್ತ್ರೀಯರ ಬುದ್ಧಿ ಕೌಶಲ್ಯವು ಅಸಾಧಾರಣವಾದದ್ದೆಂದು ನಂಬಿದರು.

ಇವರು ಈ ಪರೀಕ್ಷೆಯಲ್ಲಿ ತೇರ್ಗಡೆಯಾದ ಸಮಾಚಾರವು ಕೇಳಿದ ಕೂಡಲೆ ಕೊಲ್ಲಾಪುರದ ಮಹಾರಾಜರು ತಮ್ಮ ಸಂಸ್ಥಾನದ ಆಸ್ಪತ್ರೆಯಲ್ಲಿ ಸ್ತ್ರೀಯರ ವೈದ್ಯಶಾಲೆಯಲ್ಲಿ ಡಾಕ್ಟರ್ ಪದವಿಯನ್ನು ಅಲಂಕರಿಸಬೇಕೆಂದು ಇವರಿಗೆ ಬರೆದರು. ಈ ಕೆಲಸವನ್ನು ಒಪ್ಪಿಕೊಂಡು ಡಾಕ್ಟರ್ ಆನಂದಬಾಯಿರವರು ೧೮೮೬ನೆ ಅಕ್ಟೋಬರು ತಿಂಗಳಲ್ಲಿ ಅಮೆರಿಕಾಖಂಡವನ್ನು ಬಿಟ್ಟು ಹೊರಟರು. ಈ ೩ ವರುಷಗಳಲ್ಲಿ ಇವರಿಗೂ ಆ ಪಾಠಶಾಲೆಯ ವಿದ್ಯಾರ್ಥಿನಿಯರಿಗೂ ಆ ಪುರನಿವಾಸಿಗಳಾದ ಸ್ತ್ರೀಯರಿಗೂ ಬಹಳ ಸ್ನೇಹವುಂಟಾಗಿತ್ತು. ಈ ಸ್ನೇಹಿತರನ್ನು ಬಿಟ್ಟು ಹೊರಡುವದೇ ಬಹಳ ಕಷ್ಟವಾಯಿತು. ಪ್ರಯಾಣವು ಇದರ ದೆಶೆಯಿಂದ ೩ ತಿಂಗಳು ಸಾವಕಾಶವಾಯಿತು. ಕೊನೆಗೆ ೧೮೮೬ನೆ ಅಕ್ಟೋಬರು ತಿಂಗಳಲ್ಲಿ ಅಮೆರಿಕಾಖಂಡವನ್ನು ಬಿಟ್ಟು ಹೊರಟರು. ಆದಿನ ಅನೇಕ ಅಮೆರಿಕಾಸ್ತ್ರೀಯರು ಇವರನ್ನು ಹಡಗುಹತ್ತಿಸಿ ವಿಯೋಗ ದುಃಖವನ್ನ ಬಹಳವಾಗಿ ಅನುಭವಿಸುತ್ತಾ ಹಿಂತಿರುಗಿದರು. ಆನಂದಬಾಯಿರವರು ದಾರಿಯಲ್ಲಿ ಸಿಕ್ಕತಕ್ಕ ಅನೇಕ ದೇಶಾಟನಗಳನ್ನು ಮಾಡಿಕೊಂಡು ೧೮೮೭ನೆ ಫೆಬ್ರವರಿ ತಿಂಗಳಲ್ಲಿ ಬೊಂಬಾಯಿಗೆ ಬಂದರು. ಇವರು ಅಮೆರಿಕಾಖಂಡದಲ್ಲಿ ಇದ್ದಾಗಲೂ ಉಡಿಗೆತೊಡಿಗೆಗಳಲ್ಲಿಯೂ ಆಚಾರಗಳಲ್ಲಿಯೂ ಹಿಂದುಪದ್ಧತಿಗೆ ಅನುಸಾರವಾಗಿದ್ದದ್ದರಿಂದಲೂ, ದೇಶಕ್ಕೂ ಹವಾಕ್ಕೂ ಅನುಸಾರವಾದ ಉಡುಗೆಳನ್ನು ಹಾಕಿಕೊಳ್ಳದೆ ಇದ್ದದ್ದರಿಂದಲೂ ಗೃಹಕೃತ್ಯಗಳನ್ನು ಮಾಡಿಕೊಂಡು ಶಕ್ತಿವಿಾರಿ ವಿದ್ಯಾವ್ಯಾಸಂಗ ಮಾಡಿದ್ದರಿಂದಲೂ ಕೆಮ್ಮು ಹುಟ್ಟಿತು. ಕ್ರಮಕ್ರಮವಾಗ ಶ್ವಾಸಕೋಶಕ್ಕೆ ರೋಗವುಂಟಾಗಿ ಕ್ಷಯುಕ್ಕೆ ತಿರುಗಿತು. ಇವರು ಬೊಂಬಾಯಿಗೆ ಬರುವಾಗೆ ಕ್ಷಯುವು ಪ್ರಾರಂಭವಾಗಿತ್ತು. ಬೊಂಬಾಯಿಗೆ ಬಂದು ಇಹರು ಜೋಷಿಯವರಿಗೆ ಬರೆದಿರುವ ಒಂದು ಲೇಖನವು ಬಹಳ ವ್ಯಸನವನ್ನುಂಟುಮಾಡುತ್ತದೆ. ಅದೇನೆಂದರೆ--

"ನನ್ನ ದೇಹಸ್ಥಿತಿಯು ಜೆನ್ನಾಗಿಲ್ಲ, ನನ್ನ ಸಹೋದರಿಯರಾದ ಈ ದೇಶದ

ಹೀಗೆಯೇ ಇತರ ಶಾಸ್ತ್ರಗಳೂ ಜನರ ಏಳಿಗೆಗೆ ಅತ್ಯಾವಶ್ಯಕವು. ಜನರ ಅಭಿವೃದ್ಧಿಗೆ ಸಹಾಯಕಾರಿಯಾದ ಶಾಸ್ತ್ರಗಳಲ್ಲಿ ಸಂಪತ್‌ಶಾಸ್ತ್ರವು ಯಾವದೊಂದಕ್ಕೂ ಕಡಿಮೆಯೆಂದ. ಭಾವಿಸಲಾಗದು.

ಈ ಶಾಸ್ತ್ರವಿಷಯವು ಸಂಪತ್ತು. ಸಂಪತ್ತನ್ನು ಗಳಿಸುವುದು ಹ್ಯಾಗೆ? ಹ್ಯಾಗೆ ಗಳಿಸಿದ ಆ ಸಂಪತ್ತನ್ನು ಅನುಭವಿಸುವುದು? ಇವೇ ನಾವು ಆದಿಯಲ್ಲಿ ತಿಳಿಯಬೇಕಾದುದು.

ಸಂಪತ್‌ಶಾಸ್ತ್ರವನ್ನು ಅಭ್ಯಾಸಿಸಿ ಪ್ರಯೋಜನವೇನು? ಹಣ, ಹಣವೆಂದು ಹಣವೇ ದೊಡ್ಡದಾಗಿ ಹೋಯಿತೆ? ಧರ್ಮ, ಸ್ನೇಹ, ಪ್ರೇಮ, ದಯೆ ಇವೇ ಮೊದಲಾದವು ಇಲ್ಲವೆ? ಹಣವು ಇವೆಲ್ಲಕ್ಕಿಂತಲೂ ದೊಡ್ಡದೇ? ಎಂದು ಈ ಶಾಸ್ತ್ರವನ್ನು ಧಿಕ್ಕರಿಸಕೂಡದು. ಲೋಭಿಯಂತೆ ಹೊಟ್ಟೆ ಬಟ್ಟೆಯನ್ನು ಕಟ್ಟಿ, ಜನಗಳನ್ನು ನಾನಾ ವಿಧವಾಗಿ ಹಿಂಸಿಸಿ ಹಣವನ್ನು ಸೇಕರಿಸಬಹುದು; ಅಂಥವನ ನಡತೆಯನ್ನು ಈ ಶಾಸ್ತ್ರವು ಎಂದಿಗೂ ಒಪ್ಪಲಾರದು. ಹಣ ಸಂಪಾದಿಸಬೇಕೆಂದರೆ ಅನ್ಯಾಯವೂ ಗರ್ವವನ್ನು ಅವಲಂಬಿಸಿ ಹಣವನ್ನು ಗಳಿಸಬೇಕೆಂದು ಯಾರು ಹೇಳುವರು? ನ್ಯಾಯಾನ್ಯಾಯ ವಿವೇಕಜ್ಞಾನವನ್ನು ಇತರ ಶಾಸ್ತ್ರಗಳಿಂದ ತಿಳಿದನಂತರವೇ ಈ ಶಾಸ್ತ್ರವು ಪ್ರಸರಿಸುವುದು. ಯುಕ್ತಾಯುಕ್ತವನ್ನು ಅರಿತವರೇ ಈ ಶಾಸ್ತ್ರಕ್ಕೆ ಅಧಿಕಾರಿಗಳು. ಒಂದು ಶಾಸ್ತ್ರವಿಷಯವನ್ನು ಕುರಿತು ಹೇಳುವಾಗ್ಗೆ ಇತರ ಶಾಸ್ತ್ರಗಳನ್ನೆಲ್ಲಾ ಬೋಧಿಸುವುದು ಹ್ಯಾಗೆ?

ಈ ಶಾಸ್ತ್ರವನ್ನು ಅಭ್ಯಾಸಮಾಡದೆ ಜನರು ಇದರ ವಿಷಯವೆಲ್ಲಾ ತಮಗೆ ಚೆನ್ನಾಗಿ ತಿಳಿದಿರುವುದೆಂದು ನಂಬಿರುವರು. ಇದಕ್ಕಿಂತ ಹೆಚ್ಚಾದ ಮೌಢ್ಯವುಂಟೆ? ವೈದ್ಯಶಾಸ್ತ್ರವನ್ನು ತಿಳಿಯದವನು ಚಿಕಿತ್ಸೆ ಮಾಡಲಿಕ್ಕೆ ಯತ್ನಿಸಿದರೆ ಏನಾಗಬಹುದು? ಶಾಸ್ತ್ರಗಳೆಲ್ಲೆಲ್ಲಾ ಕಠಿನವಾದ ಪುರುಷಾಯುಸ್ಸೆಲ್ಲಾ ಅಭ್ಯಾಸಮಾಡಿದಾಗ್ಯೂ ಮುಗಿಯದಿರುವ ಈ ಶಾಸ್ತ್ರವನ್ನು ತಾವು ತಿಳಿದಿರುವೆವೆಂಬ ಜ್ಞಾನವೆಂಥಾದ್ದು!

ದಾನವಾಗಿ ಧರ್ಮ ಮಾಡುವರಲ್ಲವೆ-- ಆ ವಿಷಯವನ್ನು ಮುಖ್ಯವಾಗಿ ವಿಚಾರ ಮಾಡೋಣ. ಯಾಚಿಸಿದವರಿಗೆ ನೀಡುವುದು ಧರ್ಮವೆಂತಲೂ, ಪುಣ್ಯವೆಂತಲೂ ಕೆಲವರು ಧರ್ಮಿಷ್ಠರು ಭಾವಿಸಿರುವರಲ್ಲವೆ? ಭಿಕ್ಷುಕರು, ದಾನವನ್ನು ತೆಗೆದುಕೊಂಡು, ಸಂತುಷ್ಟರಾಗುವುದನ್ನು ನೋಡಿ ನೋಡಿ ದಾತೃಗಳು ಮೋಹಗೊಳ್ಳುವರಷ್ಟೆ! ಅಸಾ

ನಿವಾರಣೆಗೆ ತಾವು ಕಾರಣವಾಗಿ ನಿಲ್ಲಬೇಕೆಂಬ ಉದ್ದೇಶವೂ, ಈ ಉದ್ದೇಶವನ್ನು ನೆರವೇರಿಸುವುದಕ್ಕೋಸ್ಕರ ತಮ್ಮ ಪತಿಯೊಡನೆ ಅಮೆರಿಕಾಖಂಡಕ್ಕೆ ಹೋಗಿ, ಅಲ್ಲಿ ತಮ್ಮ ಬ್ರಾಹ್ಮಣಾಚಾರಗಳನ್ನು ಬಿಡದೆ ಸರಿಯಾಗಿ ನಡೆದುಕೊಳ್ಳುತ್ತಾ ಮೂರುವರ್ಷದ ಕಾಲದೊಳಗಾಗಿ ಎಂ. ಡಿ ಎಂಬ ಪರೀಕ್ಷೆಯಲ್ಲಿ ಉತ್ತಮ ತರಗತಿಯಾಗಿ ತೀರ್ಣಳಾಗಿ ಅಮೆರಿಕಾಖಂಡಕ್ಕೆಲ್ಲಾ ಆಶ್ಚರ್ಯವನ್ನು ಉಂಟುಮಾಡಿ, ತಮ್ಮ ಪಾಂಡಿತ್ಯವನ್ನು ಈಂಡಿಯಾ ದೇಶದ ತಮ್ಮ ಸಹೋದರಿಯರಿಗೆ ಉಪಯೋಗವಾಗುವಂತೆ ವಿನಿಯೋಗಿಸಬೇಕೆಂಬ ಪ್ರಯತ್ನವಾಡುತ್ತಾ ಆ ಮಹಾಪ್ರಯತ್ನದ ಪ್ರಯಾಸದಿಂದಲೇ ದೇಹದಲ್ಲಿ ಕ್ಷಯವನ್ನು ಹೊಂದುತ್ತಾ ಬಂದು ಕೊನೆಗೆ ದೇಹವನ್ನು ಬಿಟ್ಟರು. ನಶ್ವರವಾದ ಅವರ ಶರೀರ ಮಾತ್ರವೇ ಹೋಯಿತೇಹೊರತು ಉತ್ಸಾಹಾಭಿಮಾನಾದಿ ಸುಗುಣಗಳು ಭಾರತಮಹಿಳೆಯರಿಗೆಲ್ಲಾ ಮೇಲುಪಂಕ್ತಿಯಾಗುವುದಕ್ಕಾಗಿ ಮೂರ್ತಿಗೊಂಡಿರುವುದು.

ಸಂಪತ್ ಶಾಸ್ತ್ರಂ

I.

ಸಂಪತ್ ಶಾಸ್ತ್ರವು ನಾನಾ ದೇಶಗಳ ಸಂಪದ್ವಿಷಯವನ್ನು ಬೋಧಿಸುವುದು. ಒಂದು ದೇಶದ ಜನರು ಇತರ ದೇಶೀಯರಿಗಿಂತ ಸಂಪದ್ವಂತರಾಗಿರಲು ಕಾರಣವೇನಿರಬಹುದೆಂಬುದನ್ನು ಸ್ಪಷ್ಟಗೊಳಿಸುವುದು. ದೇಶದ ಬಡತನವನ್ನು ಕಡಿಮೆ ಮಾಡುವ ಬಗೆ ಹ್ಯಾಗೆ ? ಯಾವರೀತಿಯಲ್ಲಿ ಜನರು ತಮ್ಮ ತಮ್ಮ ಪ್ರಯಾಸಾನುಸಾರವಾಗಿ ತಕ್ಕ ಫಲವನ್ನು ಪಡೆಯಬಹುದು. ಇವೇ ಮೊದಲಾದ ಕೆಲವು ಮುಖ್ಯಾಂಶಗಳನ್ನು ಈ ಶಾಸ್ತ್ರವು ವಿವರಿಸುವುದು. ಜನರ ಮೇಲ್ಮೆಯನ್ನುಂಟುಮಾಡುವ ಶಾಸ್ತ್ರಗಳಲ್ಲಿ ಇದು ಒಂದು ಮುಖ್ಯ ಶಾಸ್ತ್ರವಾಗಿರುವುದು.

ಆದರೆ ಈ ಶಾಸ್ತ್ರದಿಂದಲೆ ಜನರಿಗೆ ಸರ್ವಾಭೀಷ್ಟವು ಸಿದ್ಧಿಸುವುದೆಂದು ಎಣಿಸಕೂಡದು. ಜನರು ಸೌಖ್ಯವನ್ನು ಅನುಭವಿಸುವುದಕ್ಕೆ ನ್ಯಾಯವಿಮರ್ಶೆಯು ಚೆನ್ನಾಗಿ ನಡೆಯಬೇಕು ; ಆದುದರಿಂದ ನ್ಯಾಯಶಾಸ್ತ್ರವು ಪರಿಷ್ಕೃತವಾಗಬೇಕು.

ಸುವುದು. ಈ ಶಾಸ್ತ್ರಾನುಸಾರವಾಗಿ ನಡೆಯುವುದರಿಂದಲೆ ಸುಮಾರು ನೂರುವರ್ಷ ಗಳಿಗೆ ಮುಂದೆ ಆಡಾಂಸ್ಮಿತ್ ಎಂಬುವರು 'ಜನಾಂಗದ ಸಂಪತ್ತು' ಎಂಬ ಒಂದು ಗ್ರಂಥವನ್ನು ರಚಿಸಿದಾರಭ್ಯ ಅನೇಕರು ಅದರ ತತ್ವಗಳನ್ನು ಪ್ರಕಾಶಪಡಿಸಿದುದರಿಂದ ಯೂರೋಪ್‌ನಲ್ಲಿ ಎಲ್ಲೆಲ್ಲೂ ಈಗ ಅದರ ವಿಷಯಗಳು ಚೆನ್ನಾಗಿ ತಿಳಿದಿರುತ್ತೆ. ನಮ್ಮ ದೇಶದಲ್ಲಿಮಾತ್ರ ಇನ್ನೂ ಚೆನ್ನಾಗಿ ಪ್ರಸರಿಸಿಲ್ಲ.

ಆದಾಗ್ಯೂ ಸಮಸ್ತ ಜನಗಳಿಗೂ ಸಂಪದ್ವಿಷಯಕವಾದ ಕೆಲವು ಅಭಿಪ್ರಾಯಗಳು ಇದ್ದೇಯಿವೆ. ಅವು ಶಾಸ್ತ್ರಸಮ್ಮತವಾದ ತತ್ವಗಳಾಗಿ ಇಲ್ಲದಿದ್ದರೆ ಅಶಾಸ್ತ್ರೀಯವಾಗಿಯೂ, ಆದುದರಿಂದಲೆ ತಪ್ಪಾಗಿಯೂ, ದೋಷೋತ್ಪಾದಕಗಳಾಗಿಯೂ ಇರಲೇಬೇಕು. ಆದಕಾರಣ ನಮ್ಮ ದೇಶೀಯರಿಗೆ ಸಂಪದ್ವಿಷಯವನ್ನುಕುರಿತು ಪ್ರಸಿದ್ಧರಾದ ಜೇವನ್ಸ್, ಮಿಲ್, ಮಾರ್ಷಲ್ ಮುಂತಾದ ಸಂಪತ್‌ಶಾಸ್ತ್ರಕಾರರ ಅಭಿಪ್ರಾಯಗಳನ್ನು ಅನುಸರಿಸಿ ಆಗಾಗ್ಗೆ ಗ್ರಹಿಸಲಿಕ್ಕೆ ಅನುಕೂಲವಾಗುವಂತೆ ಸುಲಭ ಶೈಲಿಯಲ್ಲಿ ತಿಳಿಸುವೆವು.

ಗುಲಾಬಿಹೂವು.

ವರ್ಗ :—ಇದನ್ನು ವಾನಸ್ಪತ್ಯವರ್ಗದಲ್ಲಿ ಪುಷ್ಪಭಾಗವಾದ ಗೂಢಬೀಜದಲ್ಲಿ ಸೇರಿಸಬಹುದು.

ವರ್ಣ :—ಕೆಂಪು, ಹಳದಿ, ಬಿಳಿ, ಗುಲಾಬಿ ಕೆಂಪುಮುಂತಾದ ವರ್ಣವುಳ್ಳದ್ದು.

ಬೆಳೆಯುವಪ್ರದೇಶ :—ಮರಳುಮಿಶ್ರವಾದ ಕೆಂಪುಮಣ್ಣು ಭೂಮಿಯಲ್ಲಿ ಹುಲುಸಾಗಿ ಬೆಳೆಯುವುದು.

ವರ್ಣನೆ :—ಗುಲಾಬಿ ಗಿಡಗಳು ೪ ಅಡಿ ಇಂದ ೧೦—೧೨ ಅಡಿವರೆಗೂ ಬೆಳೆಯುವವು. ಇದರ ಎಲೆಗಳು ಹಸರಾಗಿಯೂ, ಚಿಕ್ಕವಾಗಿಯೂ, ಸಮವಾದ ದ್ವಿಪತ್ರವುಳ್ಳವುಗಳಾಗಿಯೂ ಇರುವವು. ಎಲೆಯ ನರಗಳು ೬ ಆಗಿರುವವು. ಕೊನೆಯು ಗರಗಸದ ಹಲ್ಲಿನಂತಿರುವುದು. ಆದರೆ ಕೊನೆಯಲ್ಲಿರುವ ಎಲೆಗಳುಮಾತ್ರ ತ್ರಿಪತ್ರ

ತ್ರರಾದ ಭಿಕ್ಷುಕರಿಗೆ ವಿವೇಚನವಿಲ್ಲದೆ ತಾವು ಮಾಡಿದ ಧರ್ಮದಿಂದ ಉಂಟಾಗುವ ಕೇಡನ್ನು ಎಂದಿಗೂ ಯೋಚಿಸರು. ಭಿಕ್ಷುಕರಿಗೆ ಕಷ್ಟವಿಲ್ಲದೆ ಕಾಲಕ್ಷೇಪವು ನಡೆಯುತಬಂದರೆ ದಿನೇದಿನೇ ಅವರ ಸಂಖ್ಯೆಯು ಹೆಚ್ಚುವುದು. ನಮ್ಮ ಕಣ್ಣಿನಲ್ಲಿ ಈಗ ನೋಡುತ್ತಿರುವ ಪಾಪಕ್ಕೂ ದಾರಿದ್ರ್ಯಕ್ಕೂ ಅವಿಮರ್ಶಿತವಾದ ಪೂರ್ವಿಕರ ಧರ್ಮವೂ ಒಂದು ಕಾರಣವಾಗಿ ಪರಿಣಮಿಸಿರುವುದು. ಭಿಕ್ಷವೆತ್ತಿಯಾದರೂ ಹೊಟ್ಟೆ ಹೊರೆಯುವೆವೆಂಬ ಧೈರ್ಯವುಳ್ಳ, ಮುಂದಾಲೋಚನೆಯಿಲ್ಲದ ಅಜನ್ಮಭಾವಿಯಾದ ಸೋಮಾರಿಗಳ ಸಂಖ್ಯಾಭಿವೃದ್ಧಿಯಲ್ಲವೆ ನಮ್ಮ ದೇಶಕ್ಕೆ ಈ ದಾರಿದ್ರ್ಯವನ್ನು ತಂದದ್ದು. ಜನಗಳಲ್ಲಿ ವಿದ್ಯಾಭಿವೃದ್ಧಿಯನ್ನು ಪಡೆಯಿಸುತಾ, ಜೀವನೋಪಾಯ ಕೆಲಸಗಳನ್ನು ಜನರಿಗೆ ಕಲಿಸುತಾಬಂದಲ್ಲಿ, ತಮ್ಮ ತಮ್ಮ ಅನ್ನವನ್ನು ತಮ್ಮ ದೇಹಶ್ರಮದಿಂದಲೇ ಸಂಪಾದಿಸಿಕೊಂಡು ಸ್ವತಂತ್ರರಾಗಿ ಜೀವಿಸುತಾ ಮುಪ್ಪಿನ ಕಾಲಕ್ಕೂ ಅನುಕೂಲಿಸುವಂತೆ ಅರ್ಜಿಸುವರೆಲ್ಲರೂ ದೇಶದ ಏಳಿಗೆಗೂ ಸಹಾಯಕರಾಗುವರು.

ಧರ್ಮವೇ ಮಾಡಕೂಡದೆಂದು ಈ ಶಾಸ್ತ್ರವು ಬೋಧಿಸುವುದು ಎಂದು ಇದರಿಂದ ತಿಳಿಯಲಾಗದು. ಧನಾಢ್ಯರು ತಮ್ಮ ಸಂಪತ್ತಿನಿಂದ ಲೋಕೋಪಕಾರವಾದ ಅನೇಕ ಕಾರ್ಯಗಳನ್ನು ಮಾಡಬಹುದು. ಅವರು ತಮ್ಮ ಬಂಧುಮಿತ್ರರಿಗೆ ಸಹಾಯ ಮಾಡಬಹುದು. ಜನಗಳ ಉಪಯೋಗಕ್ಕಾಗಿ ಪುಸ್ತಕಶಾಲೆ, ಚಿತ್ರಶಾಲೆ, ಔಷಧ ಶಾಲೆ ಮನೋಹರವಾದ ಉದ್ಯಾನ ಇವೇ ಮುಂತಾದವುಗಳನ್ನು ಏರ್ಪಡಿಸಬಹುದು. ಬಡವರಿಗೆ ವಿದ್ಯಾದಾನ ಮಾಡಲು ಪಾಠಶಾಲೆಗಳನ್ನು ಸ್ಥಾಪಿಸಬಹುದು. ದೈನೀಕವಾದ ಕಷ್ಟಗಳಿಂದ ನೊಂದವರಿಗೆ ಕೈಕೋಲು ಕೊಟ್ಟು ಉದ್ಧರಿಸಬಹುದು. ದೇಹದಾರ್ಢ್ಯವಿಲ್ಲದ, ಅಂಗಹೀನರಾದ, ಕುಂಟರು, ಕುರಡರಿಗೆ ಅನೇಕವಿಧವಾಗಿ ಸಹಾಯಮಾಡಬಹುದು. ಇವೆಲ್ಲಾ ಧರ್ಮವೆ, ಇವುಗಳೆಲ್ಲಾ ಮಾಡಕೂಡದೆಂದು ಈ ಸಂಪತ್‌ಶಾಸ್ತ್ರವು ಎಂದಿಗೂ ಹೇಳುವುದಿಲ್ಲ. ದಾನವೆಂಬುದು ನಿಜನಾದ ದಾನನಾಗಿ ದಾನವನ್ನು ತೆಗೆದುಕೊಂಡವರಿಗೆ ಸಹಾಯವಾಗಿ ಪರಿಣಮಿಸಬೇಕು

ಈ ಸಂಪತ್‌ಶಾಸ್ತ್ರವು ಬೋಧಿಸುವುದೇನೆಂದರೆ—ನಾವು ಮಾಡತಕ್ಕ ಕಾರ್ಯಗಳೆನ್ನೆಲ್ಲಾ ತತ್ಕಾಲ ಸೌಖ್ಯಮಾತ್ರ ನೋಡದೆ ಜನರಿಗೆ ದೀರ್ಘಕಾಲ ಫಲಕಾರಿಯಾಗಿರುವುದು ಯಾವದೋ ಅದನ್ನು ಯೋಚಿಸಿ ಮಾಡಬೇಕೆಂಬುದನ್ನು ಕಲಿಸುವುದು.

ಈಗ ಯೂರೋಪ್ ದೇಶದಲ್ಲಿ ಅನೇಕ ರಾಜ್ಯಗಳು ಸಂಪತ್ತನ್ನು ಅನುಭವಿ

ಕಲ್ಲುಸಕ್ಕರೆಯ ಪುಡಿಯನ್ನು ಹಾಕಬೇಕು. ಈರೀತಿಯಾಗಿ ೩—೪ ಪದರಗಳನ್ನು ಮಾಡಿ ೩—೪ ದಿವಸಪರ್ಯಂತರ ಬಿಸಿಲಿನಲ್ಲಿರಿಸಬೇಕು. ನಂತರ ಕಾಲುಭಾಗ ಜೇನು ತುಪ್ಪವನ್ನು ಏಲಕ್ಕಿಯನ್ನು ಹಾಕಬೇಕು (ಇದಕ್ಕೆ ಮಹಂಮದೀಯರು ಗುಲ್‌ಖಂ ಎಂಬದಾಗಿ ಹೇಳುವರು.) ಇನ್ನು ಕೆಲವರು ಮುಳ್ಳುಸೇವಂತಿಗೆ ಹವ್ವನ್ನು ಇದರ ಜೊತೆಯಲ್ಲಿ ಬೆರೆಸುವರು. ಇದೇ ರಸಾಯನವು.

ಗುಣಗಳು :—ಉಷ್ಣಹರವಾಗಿರುತ್ತದೆ. ಮತ್ತು ಜೀರ್ಣಕಾರಿ, ಸುವಾಸನೆಯಾಗಿಯೂ, ಮಧುರವಾಗಿಯೂ, ಇರುವುದು. ದೊಡ್ಡವರು ಒಂದುಸಳಕ್ಕೆ ೧ತೊಲ ತೆಗೆದುಕೊಳ್ಳಬಹುದು. ಚಿಕ್ಕವರಿಗೆ । ಭಾಗಕ್ಕಿಂತ ಹೆಚ್ಚು ಉಪಯೋಗವಿಲ್ಲ.

ಬಿ. ಶ್ರೀಕಂಠಶಾಸ್ತ್ರಿ,
ಪೂರೇಗಾಲಿ ಸ್ಕೂಲ್ ವ್ಯಾಸ್ಟರು.

ಗಣಿತ.

ಭಿನ್ನರಾಶಿಯ ವಿಶೇಷೋದಾಹರಣೆಗಳು.

1. ನನ್ನಲ್ಲಿದ್ದ ಹಣವನ್ನು 4 ಜನಗಳಿಗೆ ಕೊಟ್ಟೆನು. ಎ. ಗೆ $\frac{1}{7}$ ಭಾಗವೂ, ಬಿ ಗೆ ಎ ಯ 2 ರಷ್ಟು ಭಾಗವೂ ಸಿ ಗೆ ಎ ಬಿ ಗೆ ಬರುವಷ್ಟು ಭಾಗವೂ ಡಿ ಗೆ $\frac{1}{6}$ ಭಾಗವೂ ಬಂತು. ಹಾಗಾದರೆ ನನ್ನಹತ್ತಿರ ಇದ್ದದ್ದು ಎಷ್ಟು?

2. ನನ್ನ ಆಸ್ತಿಯಲ್ಲಿ $\frac{1}{5}$ ಭಾಗವನ್ನು ಎ ಎಂಬುವನಿಗೂ $\frac{1}{6}$ ಭಾಗವನ್ನು ಬಿ ಎಂಬುವನಿಗೂ $\frac{1}{12}$ ಭಾಗವನ್ನು ಸಿ ಎಂಬುವನಿಗೂ $\frac{1}{16}$ ಭಾಗವನ್ನು ಡಿ

[ಶ್ರೀದಳ]. ಇದರ ಹುವ್ವು ನೋಟಕ್ಕೆ ಬಹು ಸುಂದರವಾಗಿಯೂ ಸುವಾಸನೆಯಾಗಿಯೂ ಇರುವುದು. ಅಂಡಾಶಯದ ಪಾತ್ರದಲ್ಲಿ, ಹಸುರಾದ ಆರು ಪತ್ರಗಳು ಮೊಗ್ಗನ್ನು ಮುಚ್ಚಿಕೊಂಡಿರುವವು. ಹುವ್ವಿನಸುತ್ತ ೩ ರಲಾಗಾಯಿತು ೩ ರವರಿಗೂ ಪ್ರತಿಯೊಂದು ಸಾಲಿನಲ್ಲೂ ೩ ಪ್ರಕಾರ ದಳಗಳಿರುವವು. ಹುವ್ವು ಅಂಟಿರುವ ಭಾಗವಾತ್ರ ನಸುಬಿಳುಪಾಗಿರುವುದು. ಇದರ ಕಡ್ಡಿಗಳು ಮುಳ್ಳಿನಿಂದ ಕೂಡಿರುತ್ತವೆ.

ಬೆಳೆಸುವರೀತಿ :—ಹಸಿಯಾಗಿಯೂ, ದಪ್ಪನಾಗಿಯೂ ಇರುವ ೨ ಅಡಿ ಉದ್ದ ಉಳ್ಳ ಕಡ್ಡಿಗಳನ್ನು ಹದವಾಡಿದ ಭೂಮಿಯಲ್ಲಿ ನಾಲ್ಕು ಅಂಗುಲ ಭೂಮಿಯಲ್ಲಿರು ವಂತೆ ನೆಡಬೇಕು. ಕಡ್ಡಿಯ ಕೊನೆಗೆ ಸಗಣಿಯನ್ನು ಮೆತ್ತಬೇಕು. ಆಮೇಲೆ ದಿನ ಒಂದಕ್ಕೆ ಎರಡಾವರ್ತಿ ಸಾಯುಂಪ್ರಾತಃಕಾಲಗಳಲ್ಲಿ ನೀರನ್ನು ಹಾಕುತ್ತಾ ಇರಬೇಕು. ಸುಮಾರು ೨೦—೨೫ ದಿವಸಗಳಲ್ಲಿ ಬೇರು ಬಿಟ್ಟು ದ್ವಿಪತ್ರಗಳು ಕಾಣಿಸಿಕೊಳ್ಳುವವು. ಎರೆಗಳು ಬಿಟ್ಟು ೩-೪ ತಿಂಗಳುಗಳಲ್ಲಿ ಮೊಗ್ಗಾಗಿ ಹುವ್ವಾಗುವವು. ಹುವ್ವುಗಳ ಮಧ್ಯದಲ್ಲಿ ಭ್ರಮರಗಳು ಮಧುಪಾನ ಮಾಡುತ್ತಿರುವವು. ಸಾಧಾರಣವಾಗಿ ತೋಟ ಗಳಲ್ಲೂ, ಚರ್ಮಗಳಲ್ಲೂ, ಸುವಾಸನೆಗಾಗಿ ಹಾಕುವರು. ಒಂದು ವರ್ಷದಲ್ಲಿ ೩ ಆವರ್ತಿ ಪುಷ್ಪವು ಬಿಡುವದು.

ಪ್ರಯೋಜನ :—ಹಿಂದುಗಳು ದೇವಾರ್ಚನೆಗೂ, ಹುವ್ವುಗಳ ಜೊತೆಯಲ್ಲಿ ಕಟ್ಟಿ ಮುಡಿಯುವದಕ್ಕೂ ಉಪಯೋಗಿಸುವರು. ಮತ್ತು ವೈದ್ಯರು ಕಷಾಯಕ್ಕೂ ಕೂಡ ಉಪಯೋಗಿಸುವರು. ೬ ಹುವ್ವಿನಿಂದ ಪನ್ನೀರು ಮಾಡುವರು.

ಪನ್ನೀರು ಮಾಡುವಕ್ರಮ :—ಹೈಮಂತರುತುವಿನಲ್ಲಿ ರಾತ್ರೆವೇಳೆಯಲ್ಲಿ ಹುವ್ವಾ ಗುವ ಗುಲಾಬೀ ಮೊಗ್ಗಗಳ ಮೇಲೆ ಶುಭ್ರವಾದ ಮಜರ್ಲಿ ಬಟ್ಟೆಯನ್ನು ಹೊದಿಸ ಬೇಕು. ಮರುದಿವಸ ಸೂರ್ಯೋದಯಕಾಲಕ್ಕೆ ಮುಂಚೆ ಆ ಬಟ್ಟೆಯನ್ನು ತೆಗೆದು ಕೊಂಡು ಹಿಂಡಿ ನೀರನ್ನು ಸೀಸೆಗೆ ತುಂಬಬೇಕು. [ಇದೇ ಗುಲಾಬಿನೀರು].

ಉಪಯೋಗ :—ಇದನ್ನು ಗಂಧದ್ರವ್ಯದೊಡನೆ ಸೇರಿಸುವರು. ಉತ್ಸವಾದಿ ಗಳಲ್ಲಿ ಪನ್ನೀರು ಪಾತ್ರೆಗಳಲ್ಲಿ ತುಂಬಿ ಹರ್ಮಕ್ಕೋಸ್ಕರ ಎರಚುವರು. ಇದು ಸುಗಂಧ ವಾಗಿ ಶೋಭಿಸುತ್ತಿರುವುದು. ಮತ್ತು ತೈಲವನ್ನು ಮಾಡುವರು. (ಅತ್ತರ್)

(ರಸಾಯನ ಮಾಡುವಕ್ರಮ.)

ಹುವ್ವಿನ ದಳಗಳನ್ನೆಲ್ಲಾ ಬಿಡಿಸಿ, ಕಲಾಯಿಪಾತ್ರೆಯಲ್ಲಿ ಹರವಿ, ಸಮವಾಗಿ

$$\frac{3\frac{1}{2} \text{ ರ } 1\frac{1}{4}}{1\frac{5}{6} \text{ ರ } 3\frac{3}{4}} \div \frac{1\frac{3}{5} \text{ ರ } 2\frac{1}{4}}{1\frac{1}{10} \text{ ರ } 2\frac{1}{7}}$$

ಭಾಗವನ್ನು ಹೊಂದಿದ್ದನು. ಆ ಪೈಕಿ ತನ್ನ ಹಿರೀಮಗನಿಗೆ $\frac{2}{7}$ ಭಾಗವನ್ನೂ ಉಳಿದಿದ್ದರ ಪೈಕಿ $\frac{1}{5}$ ಭಾಗವನ್ನು ಕಿರೀಮಗನಿಗೂ ಕೊಟ್ಟನು. ಅವರ ಭಾಗಗಳ ಬೆಲೆಯು ವ್ಯತ್ಯಾಸ 12 ರೂಪಾಯಿಗಳು. ಹಾಗಾದರೆ ಅವನಲ್ಲಿ ಉಳಿದಿರತಕ್ಕ ಭಾಗದ ಬೆಲೆಯು ವ್ಯತ್ಯಾಸವೇನು?

ಬಿ. ವೆಂಕಟರಾಮ್ಮಯ್ಯ.

ನಂಜನಗೂಡು ಸ್ಕೂಲ್ ಹೆಡ್ ಮಾ.

ಕೋಲಾರ ಡಿಸ್ಟ್ರಿಕ್ಟ್—

ಕಂಪ್ಯಾರಟೀವ್ ಎಗ್ಜಾಮಿನೇಷನ್.

1898.

V ನೇ ತರಗತಿ. (ಕಾಲ— $1\frac{1}{2}$ ಘಂಟೆ)

ಆರೋಗ್ಯಶಾಸ್ತ್ರ.

I. (a) ಆರೋಗ್ಯಶಾಸ್ತ್ರದ ಮುಖ್ಯಉದ್ದೇಶಗಳಾವವು? ಇದನ್ನು ಏತಕ್ಕೆ ಅನುಸರಿಸಬೇಕು? (b) ಆರೋಗ್ಯಕ್ಕೆ ಅವಶ್ಯಕವಾದವುಗಳಾವವು?

II. (೧) ಗಾಳಿ ಕೆಡುವದಂದರೇನು? ನಿಶ್ವಾಸದವಾಯುವಿನಲ್ಲಿ ಏನೇನು ಸೇರಿರುತ್ತದೆ? ಇವುಗಳನ್ನು ಕಂಡುಹಿಡಿಯುವದು ಹೇಗೆ? (೨) ನಿರ್ಮಲವಾಯುವೆಂದರೇನು? ಇದರಲ್ಲಿ ಸೇರಿರುವ ವಸ್ತುಗಳಾವವು? (೩) ಗಾಳಿಕೆಟ್ಟರೆ ಮನುಷ್ಯರು ಬದುಕುವದಿಲ್ಲವೆಂಬುವದಕ್ಕೆ ದೃಷ್ಟಾಂತಗಳೇನು? ಅಂತಾ ಕೆಟ್ಟಗಾಳಿಯನ್ನು ನಾಶಪಡಿಸತಕ್ಕ ಉಪಾಯಕರವಾದ ವಸ್ತುಗಳಾವವಾದರೂ ಉಂಟೆ? ವಿವರಿಸಿ.

ಎಂಬುವನಿಗೂ ಕೊಟ್ಟೆನು. ನನಿಗೆ ಆ ಆಸ್ತಿಯಲ್ಲಿ ಎಷ್ಟು ಉಳಿದಿದೆ.

3. ಒಂದು ಪಾಠಶಾಲೆಯಲ್ಲಿರುನ ವಿದ್ಯಾರ್ಥಿಗಳಲ್ಲಿಕಿ $\frac{1}{3}$ ಬ್ರಾಹ್ಮಣರು, $\frac{1}{5}$ ಭಾಗ ಕ್ಷತ್ರಿಯರು, $\frac{1}{8}$ ಭಾಗ ವೈಶ್ಯರು, $\frac{1}{10}$ ಭಾಗ ಲಿಂಗಾಯಿತರು, ಉಳಿದ 58 ಜನರು ಇತರರು ಇದಾರೆ. ಹಾಗಾದರೆ ಆ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳೆಷ್ಟು? ಮತ್ತು ಪ್ರತಿಜಾತಿಯ ವಿದ್ಯಾರ್ಥಿಗಳೆಷ್ಟು?

4. ಒಬ್ಬ ಸಾಹುಕಾರನಹತ್ತರ ಇದ್ದ ಹಣದಲ್ಲಿಕಿ $\frac{5}{8}$ಭಾಗವನ್ನು ಎ ಎಂಬುವನಿಗೂ ಉಳಿದದ್ದರಲ್ಲಿ $\frac{5}{8}$ಭಾಗವನ್ನು ಬಿ ಎಂಬುವನಿಗೂ ಮತ್ತೆ ಉಳಿದದ್ದರಲ್ಲಿ $\frac{5}{8}$ಭಾಗವನ್ನು ಸಿ ಎಂಬುವನಿಗೂ ಕೊಟ್ಟನು. ಅವನಲ್ಲಿ 27 ರೂಪಾಯಿ ಉಳಿದಿದೆ. ಹಾಗಾದರೆ ಅವನಲ್ಲಿ ಮೊದಲು ಇದ್ದದ್ದು ಎಷ್ಟು?

5. 3850 ರೂಪಾಯಿ ಬಾಳುವ ಒಂದು ಗ್ರಾಮಕ್ಕೆ ಯಜಮಾನನಾದ ಒಬ್ಬನು ಅದರ$\frac{9}{11}$ಭಾಗವನ್ನು ಮಾರುತ್ತಾನೆ. ಅವನಿಗೆ ಉಳಿದಗ್ರಾಮದ ಬೆಲೆ ಏನು?

6. 4290 ರೂಪಾಯಿ ಬಾಳುವ ಒಂದು ಸ್ಥಿತಿಯು$\frac{7}{13}$ ಭಾಗಕ್ಕೆ ಯಜಮಾನನಾದ ಒಬ್ಬನು ತನ್ನ ಭಾಗದಲ್ಲಿ$\frac{5}{11}$ಭಾಗವನ್ನು ದಾನ ಮಾಡುತ್ತಾನೆ. ಅವನಿಗೆ ಉಳಿದಿರುವ ಭಾಗದ ಬೆಲೆ ಏನು?

7. ಒಬ್ಬನು ಒಂದು ಹಡಗಿನ $\left(\frac{2\frac{1}{4}-\frac{2}{3}\text{ ರ }1\frac{5}{6}}{\frac{1}{5}\text{ ರ }3\frac{1}{3}+\frac{13}{36}}-\frac{1}{2\frac{1}{2}}\right)-\frac{1}{1\frac{2}{3}}-$

ಯಾತ್ರೆಯನ್ನು ಮಾಡಿಕೊಂಡು ಅಯೋಧ್ಯೆಗೆ ಬಂದು, ತನ್ನ ಹದಿನಾರನೆಯ ವಯಸ್ಸಿನಲ್ಲಿ ಯಾವ ಕೆಲಸಕ್ಕೂ ಪ್ರವರ್ತಿಸದೆ ಏನೋ ಒಂದು ಚಿಂತೆಯಲ್ಲಿ ಮುಳುಗಿಹೋಗಿದ್ದನು. ಅದೇ ಸಮಯದಲ್ಲಿ ವಿಶ್ವಾಮಿತ್ರಮಹರ್ಷಿಯು ತಾನು ಮಾಡತಕ್ಕ ಯಜ್ಞಕ್ಕೆ ವಿಘ್ನಕಾರಿಗಳಾದ ಮಾರೀಚಾದಿರಾಕ್ಷಸರನ್ನು ಶ್ರೀರಾಮಚಂದ್ರನ ಕೈಯಿಂದ ಕೊಲಿಸಬೇಕೆಂದು ಅಯೋಧ್ಯೆಗೆ ಬಂದು ರಾಮಲಕ್ಷ್ಮಣರನ್ನು ತನ್ನೊಡನೆ ಕಳುಹಿಸುವಂತೆ ದಶರಥನನ್ನು ಕೇಳಲು ಮಕ್ಕಳನ್ನು ಕಳುಹಿಸುವದಕ್ಕೆ ದಶರಥಮಹಾರಾಯನು ವಸಿಷ್ಠ ಮಹರ್ಷಿಯ ಮಾತಿನಮೇಲೆ ಒಪ್ಪಿ, ಶ್ರೀರಾಮಚಂದ್ರನ ಅವಸ್ಥೆಯನ್ನು ವಿಶ್ವಾಮಿತ್ರನಿಗೆ ತಿಳಿಯಪಡಿಸಿದನು. ಅನಂತರದಲ್ಲಿ ರಾಜಸಭೆಗೆ ಬಂದು ಎಲ್ಲರಲ್ಲಿಯೂ ಮರ್ಯಾದಾನುಗುಣವಾಗಿ ನಡೆದುಕೊಂಡ ಶ್ರೀರಾಮಚಂದ್ರನನ್ನು ನೋಡಿ ವಿಶ್ವಾಮಿತ್ರನು ಆತನ ಮನೋರೋಗಕ್ಕೆ ಕಾರಣವನ್ನು ಕೇಳಿದ್ದಕ್ಕೆ "ಮನುಷ್ಯರು ಪ್ರಯತ್ನವಿಲ್ಲದಿದ್ದರೂ ತಮಗೆ ಬೇಡವಾದ ದುಃಖವನ್ನನುಭವಿಸುವದನ್ನೂ, ಬೇಕಾದ ಸುಖವನ್ನೆಲ್ಲಾ ಯತ್ನಪಟ್ಟರೂ ಪಡೆಯದೆ ಈರುವದನ್ನೂ, ಅಪಾತರಮಣೀಯಗಳಾದ ಪದಾರ್ಥಗಳಲ್ಲಿ ತಿಳಿದು ತಿಳಿದೂ ಆಸಕ್ತರಾಗಿರುವದನ್ನು ನೋಡಿದರೆ ಇವುಗಳೆಲ್ಲಕ್ಕೂ ದೈವ ಅಥವಾ ಅದೃಷ್ಟವೆನ್ನುವದು ಕಾರಣವಾಗಿರಬೇಕಲ್ಲದೆ ಸಾಮಾನ್ಯವೂ ಆ ದೈವಕ್ಕೆ ಅಧೀನವಾಗಿರುವಂತೆ ತೋರುವದಾದ್ದರಿಂದ ನಾನೂಕೂಡ ನನ್ನ ಅದೃಷ್ಟವಿದ್ದಂತೆ ನಡೆಯತಕ್ಕವನೇ ಹೊರತು ಬೇರೆ ಯಾವ ಕಾರಣವೂ ಇಲ್ಲ" ಎಂದು ಶ್ರೀರಾಮಚಂದ್ರನು ಹೇಳಿದನು. ಇದೆಲ್ಲವನ್ನೂ ವಿಶ್ವಾಮಿತ್ರನು ಕೇಳಿ ಈ ಶ್ರೀರಾಮಚಂದ್ರನಿಗೆ ತಕ್ಕ ಜ್ಞಾನೋಪದೇಶವನ್ನು ಮಾಡುವದಕ್ಕೆ ವಸಿಷ್ಠರೇ ಸಮರ್ಥರೆಂದು ಹೇಳಲು, ಆ ವಸಿಷ್ಠ ಮಹರ್ಷಿಗಳು "ಯಾವ ಮನುಷ್ಯನಾದರೂ ಸರಿಯಾದ ಪ್ರಯತ್ನಮಾಡಿದಲ್ಲಿ ಬೇಕಾದ ಫಲವು ದೊರೆಯುವದೆಂತಲೂ, ಪ್ರಯತ್ನದಲ್ಲಿ ಕಡಮೆಯಾದರೆ ವಿರುದ್ಧ ಅಥವಾ ನ್ಯೂನಫಲಗಳುಂಟಾಗುತ್ತವೆಯೆಂತಲೂ, ಯಾವ ಫಲಾನುಭವಕ್ಕೂ ಪ್ರಯತ್ನವೆಂಬ ಕಾರಣವಿರಬೇಕೆಂತಲೂ ದೈವ ಅಥವಾ ಅದೃಷ್ಟವೆನ್ನುವದು ಕೂಡ ಪೂರ್ವಜನ್ಮದ ಕರ್ಮವಂದರೆ—ಪುರುಷಪ್ರಯತ್ನವೆಂತಲೂ ಶ್ರೀರಾಮಚಂದ್ರನಿಗೆ ಉಪದೇಶವನ್ನು ಮಾಡಿದರು.

ಈ ಅಂಶವನ್ನೆಲ್ಲಾ ಗ್ರಂಥಕಾರರು ಪರ್ಯಾಲೋಚಿಸಿ ವಿವರವಾಗಿ ೭೭ ಪುಟಗಳಲ್ಲಿ ಬರೆದು ಸಕಲ ಕಾರ್ಯಕ್ಕೂ ಪುರುಷಪ್ರಯತ್ನವೇ ಕಾರಣವೆಂದು ಬೋಧಿಸುವ

III. (a) ವಾಸಾರ್ಹವಾದ ಸ್ಥಳವನ್ನು ಗೊತ್ತುಮಾಡುವದು ಹೇಗೆ? (b) ದೇಹ ಪೋಷಕವಾದ ಎಂತೆಂತಾ ಆಹಾರಗಳನ್ನು ಹೇಗೆ ಉಪಯೋಗಿಸಬೇಕು? (c) ಗಾಳಿಯಿಂದ ರಕ್ತಕ್ಕೂ ರಕ್ತದಿಂದ ದೇಹಕ್ಕೂ ಆಗುವ ಅನುಕೂಲಗಳೇನು? (d) ಉತ್ತಮವಾದ ಪಾನೀಯವು ಯಾವದು? ಅಳವಾದ ಭಾವಿಯನೀರೋ? ಅಥವಾ ಹರಿಯುವ ನೀರೋ? ಕಾರಣಸಹಿತ ಬರೆಯಿರಿ?

IV. (೧) ಶಾಖವೆಂದರೇನು? ಇದು ನಮ್ಮ ಶರೀರದಲ್ಲಿ ಹೇಗೆ ಉಂಟಾಗುತ್ತದೆ? ಇದನ್ನು ಕಾಪಾಡಬೇಕಾದರೆ ಏನೇನು ಮಾಡಬೇಕು? (೨) ಬನಾತು, ಕಂಬಳಿ ಮುಂತಾದ ಹೊದಿಕೆಗಳು ಎಂತಾವರ ದೇಹಕ್ಕೆ ವಿಶೇಷ ಅನುಕೂಲವಾಗಿರುತ್ತವೆ? ಶಾಖವು ನಮ್ಮ ದೇಹದಿಂದ ಹೇಗೆ ಹೊರಪಡುತ್ತಡೆ? ಕಾರಣವೇನು?

V. (a) ನೈರ್ಮಲ್ಯವೆಂದರೇನು? (b) ಬೆವರುವದೆಂದರೇನು? ಬೆವರದಿದ್ದರೆ ಆಗುವದೇನು? (c) ಸ್ನಾನಮಾಡುವಾಗ ಯಾವಯಾವ ಅಂಶಗಳನ್ನು ಗಮನಿಸಬೇಕು? ಈಗ ನಮ್ಮ ಜನಗಳಲ್ಲಿರುವ ಯಾವ ಪದ್ಧತಿಯು ಉತ್ತಮವೆಂದು ಹೇಳುತ್ತೀರಿ? ಸಕಾರಣವಾಗಿ ಬರೆಯುವದು?

ಗ್ರಂಥವಿಮರ್ಶೆ.

ಪೌರುಷಪ್ರಕಾಶ.

ಬ್ರಹ್ಮಶ್ರೀ ಕಡಲೂರು ನರಸಿಂಹಪಾರಾಣಿಕರವರು (ಗುಂಡಶಾಸ್ತ್ರಿಗಳು) ಯೋಗವಾಸಿಷ್ಠ ಅಥವಾ ಜ್ಞಾನವಾಸಿಷ್ಠವೆಂದು ಪ್ರಸಿದ್ಧವಾಗಿರುವ ವಾಸಿಷ್ಠ ರಾಮಾಯಣವೆಂಬ ಸಂಸ್ಕೃತಗ್ರಂಥವ ಆರು ಪ್ರಕರಣಗಳಲ್ಲಿ ಎರಡನೆಯದಾದ ವ್ಯವಹಾರ ಪ್ರಕರಣದಲ್ಲಿ ೪ನೆಯ ಸರ್ಗ ಮೊದಲ್ಗೊಂಡು ೯ನೆಯ ಸರ್ಗದವರೆವಿಗೆ ಹೇಳಿರುವಂಶವನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿ ಮೂಲಗ್ರಂಥಕ್ಕೆ ವಿರೋಧವಾರದಂತೆ ಕರ್ಣಾಟಕಭಾಷೆಯಲ್ಲಿ ರಚಿಸಿರುವರು.

ಗ್ರಂಥದಸಾರಾಂಶ

ದಶರಥಪುತ್ರನಾದ ಶ್ರೀರಾಮಚಂದ್ರನು ವಿದ್ಯಾಭ್ಯಾಸವನ್ನು ಮಾಡಿ ತೀರ್ಥ

ಗ್ರಂಥವನ್ನು ಅಮೂಲಾಗ್ರವಾಗಿ ನೋಡತಕ್ಕವರ ಮನಸ್ಸಿನಲ್ಲಿ ತಮ್ಮತಮ್ಮ ಫಲ ಸಿದ್ಧಿಗೆ ತಮ್ಮತಮ್ಮ ಪ್ರಯತ್ನವೇ ಮುಖ್ಯವಲ್ಲದೆ ದೈವವೆಂಬ ಪ್ರತ್ಯೇಕಕಾರಣವಿರಲಾರದೆಂದು ತೋರಿ ನಿರುದ್ಯೋಗಿಯಾಗಿರಲು ಆಲೋಚನೆಹುಟ್ಟಲಾರದು. ಈ ಗ್ರಂಥದಲ್ಲಿ ಅಲ್ಲಲ್ಲಿ ಸಂಸ್ಕೃತಶ್ಲೋಕಗಳಿರುವದರಿಂದ ಸ್ವಲ್ಪಮಟ್ಟಿಗೆ ಸಂಸ್ಕೃತಗ್ರಂಥಪರಿಚಯ ವಿರಬೇಕೆಂದು ಹೇಳಬಹುದಾದರೂ ಅವುಗಳಿಗೆಲ್ಲಾ ಕನ್ನಡದಲ್ಲಿ ಅರ್ಥಕೊಟ್ಟಿರುವದ ರಿಂದ ವಿಚಾರಮಾಡತಕ್ಕ ಕನ್ನಡಿಗರಿಗೆ ಈ ಗ್ರಂಥವಲ್ಲಿ ಹೇಳಿರತಕ್ಕಂಶಗಳು ಅವಗಾಹನೆಗೆ ಬರಬಹುದು. ಇಷ್ಟರಮಟ್ಟಿಗೆ ಈ ಕಾಲದಲ್ಲಿ ವಿಚಾರಮಾಡಿ ಬರೆದಿರತಕ್ಕ ಗ್ರಂಥಗಳು ಕನ್ನಡದಲ್ಲಿ ವಿರಳವು. ಮುಖ್ಯವಾಗಿ ಈ ಗ್ರಂಥವನ್ನು ಓದಿದವರಿಗೆ ನಿರುದ್ಯೋಗಿತೆಗೆ ಅವಕಾಶವು ದೊರೆಯುಲಾರದು. ಕನ್ನಡಿಗರೆಲ್ಲರೂ ಈ ಗ್ರಂಥವನ್ನು ಓದಿ ಪ್ರಯೋಜನವನ್ನು ಪಡೆಯಬಹುದು.

ಮದ್ರಾಸ್ ಕ್ರಿಶ್ಚಿಯನ್‌ಕಾಲೇಜ್ ಆಕ್ಟಿಂಗ್ ಕೆನರೀಸ್ ವ್ಯಾಸ್ಟರ್ ಬಿ. ರಾಮರಾವ್, ಬಿ. ಎ. ಯವರು ೧೯೧೯ನೇಇಸವಿ ಎಫ್. ಎ ಪರೀಕ್ಷೆಗೆ ನಿಯಮಿಸಿರುವ ಕರ್ಣಾಟಕ ಪಾರ್ವತೀಪರಿಣಯವೆಂಬ ನಾಟಕಕ್ಕೆ ನೋಟ್ಸ್ (ಟಿಪ್ಪಣಿ)ನ್ನು ೬೪ ಪುಟಗಳಲ್ಲಿ ಬರೆದು ಅಚ್ಚುಹಾಕಿಸಿದ ಗ್ರಂಥವನ್ನು ಆದರದಿಂದ ಸಂಪೂರ್ಣವಾಗಿ ನೋಡಲಾಯಿತು. ಇದರಲ್ಲಿ ೬ ಪುಟಗಳವರಿವಿಗೆ ದಶರೂಪಕದಲ್ಲಿ ಹೇಳಿರುವ ನಾಟಕವಿಚಾರದ ಸಾರಾಂಶವನ್ನು ಬರೆದು ಮುಂದೆ ೧೫ನೆ ಪುಟದ ವರಿವಿಗೆ ಈ ಪಾರ್ವತೀಪರಿಣಯ ನಾಟಕವನ್ನು ಸಂಸ್ಕೃತದಲ್ಲಿ ರಚಿಸಿರುವ ಬಾಣಕವಿಯ ವಿಷಯವನ್ನೂ ಮತ್ತು ಇದನ್ನು ಕನ್ನಡಿಸಿದ ವೆ॥ ಮೈಸೂರ್ ಸೀತಾರಾಮಶಾಸ್ತ್ರಿಗಳ ವಿಷಯವನ್ನೂ ವಿವರಿಸಿ, ಮುಂದಿನ ೧೮ನೇ ಪುಟದ ವರಿವಿಗೆ ನಾಟಕದ ೫ ಅಂಕದ ಕಥೆಯನ್ನೂ ಬರೆದು, ಮುಂದಕ್ಕೆ ೩ ಪುಟಗಳಲ್ಲಿ ನಾಟಕದ ಕಥಾವಿಚಾರವನ್ನೂ ಅಲ್ಲಿಂದ ಮುಂದೆ ೩೨ ಪುಟಗಳವರಿವಿಗೆ ನಾಟಕದಲ್ಲಿ ಬರುವ ಪಾತ್ರಗಳ ಗುಣದೋಷವಿಚಾರವನ್ನೂ ಮಾಡಿ ಅಲ್ಲಿಂದ ಮುಂದೆ ೬೩ನೆಯ ಪುಟದವರಿವಿಗೆ ನಾಟಕದ ೫ ಅಂಕಕ್ಕೂ ಕ್ರಮವಾಗಿ ಕ್ಲಿಷ್ಟವೆಂದು ತೋರಿದಕಡೆ ಅವಶ್ಯಕತೆ ಇದ್ದರೆ ಪದಕ್ಕರ್ಥವನ್ನೂ, ಅಲ್ಲಲ್ಲಿ ತಾತ್ಪರ್ಯವನ್ನೂ, ನ್ಯಾಕರಣ ವಿಚಾರವನ್ನೂ, ಅಲಂಕಾರವನ್ನೂ, ಕೆಲವು ಪದಗಳಿಗೆ ಪ್ರಾಚೀನ, ನವೀನ ಗ್ರಂಥಗಳ ಪ್ರಯೋಗಗಳನ್ನೂ ಮುಂದೆ ೫೫ ಪುಟಗಳಲ್ಲಿ ವಿದ್ಯಾರ್ಥಿಗಳಿಗೆ ಪರಮಾನು

ದಾದ್ದರಿಂದ ಅರ್ಥಾನುಸಾರಿಯಾದ ಪೌರುಷಪ್ರಕಾಶವೆಂಬ ಹೆಸರನ್ನು ಕೊಟ್ಟಿರುವರು. ಈ ಗ್ರಂಥಕಾರರು ವಾಸಿಷ್ಠರಾಮಾಯಣದ ವೈರಾಗ್ಯಪ್ರಕರಣದಲ್ಲಿ ಹೇಳಿರುವಂಶವನ್ನೆಲ್ಲಾ ಸಂಗ್ರಹಿಸಿ ೧೪ ಪುಟಗಳಲ್ಲಿ ಬರೆದು ೨೩ನೆಯ ಪುಟದವರಿವಿಗೆ ಪುರುಷಪ್ರಯತ್ನ (ಪೌರುಷ) ವಿದ್ದವರಿಗೆ ಲಾಭವುಂಟಾಗಿರತಕ್ಕಂಶವನ್ನೂ. ೩೬ನೆಯ ಪುಟಗಳವರಿವಿಗೆ ತೋರಿದ ಫಲವು ದೊರೆಯುಬೇಕಾದರೆ ಪುರುಷಪ್ರಯತ್ನವೇ ಕಾರಣವೆಂಬಂಶವನ್ನೂ, ೪೫ನೆ ಪುಟದವರಿವಿಗೆ ನಮ್ಮ ಕಾರ್ಯಸಿದ್ಧಿಗೆ ಪ್ರತಿಬಂಧಕ ಅಥವಾ ಅನುಕೂಲವಾದ ದೈವವೆನ್ನುವದು ನಮ್ಮ ಕಾರ್ಯಕ್ಕೆ ಪ್ರತಿಬಂಧಕಸಾಮಗ್ರಿ ಅಥವಾ ಅನುಕೂಲ ಸಾಮಗ್ರಿಯನ್ನು ಕಲ್ಪಿಸತಕ್ಕವರ ಪ್ರಯತ್ನವಾಗಿಯಾಗಲಿ ಇಲ್ಲದಿದ್ದರೆ ಪೂರ್ವಜನ್ಮದ (ಕರ್ಮ) ಪುರುಷಪ್ರಯತ್ನವಾಗಿಯಾಗಲಿ ಇರುವದೆಂಬಂಶವನ್ನೂ, ೫೮ನೆಯ ಪುಟದವರಿವಿಗೆ ಪ್ರತ್ಯಕ್ಷಾನುಮಾನ ಶಬ್ದಗಳೆಂಬ ಪ್ರಮಾಣತ್ರಯದಿಂದ ಪೌರುಷವೇ ಸರ್ವಕಾರ್ಯಸಾಧಕವೆಂದು ಗೊತ್ತಾಗುವದೆಂಬಂಶವನ್ನೂ, ೬೫ನೆಯ ಪುಟದವರಿವಿಗೆ ಯಾವ ರೀತಿಯಿಂದ ನೋಡಿದರೂ ದೈವವೆನ್ನುವದು ಯಾವ ಫಲಸಿದ್ಧಿಗೂ ನಿಯತ ಕಾರಣಾಂತರವಾಗಿ ಗೊತ್ತಾಗಲಾರದೆಂಬಂಶವಲ್ಲದೆ ಇದೊಂದು ಕಾರಣವೆಂದು ನಂಬಿದವರು ಕೆಡುತ್ತಾರೆಂಬಂಶವನ್ನೂ, ವಿವರಿಸಿ ೭೫ನೆಯ ಪುಟದವರಿವಿಗೆ ದೈವವೆಂದು ಹೇಳುವ ಪೂರ್ವಜನ್ಮಕರ್ಮದ ವಿಚಾರವನ್ನು ಮಾಡಿ ಮುಂದೆ ಎರಡು ಪುಟಗಳಲ್ಲಿ ಉಪಸಂಹರಿಸಿ ಆಮೇಲೆ ೧೧ ಪುಟಗಳಲ್ಲಿ ಈ ಗ್ರಂಥವನ್ನೋದಿ ಮಾಡಬೇಕಾದ ಕರ್ತವ್ಯಾಂಶವನ್ನೂ ಉಪಪಾದಿಸಿರುವರು. ಮತ್ತು ಈ ಭಾಗದಲ್ಲಿ ಕ್ಲಿಷ್ಟಪದಗಳಿದ್ದರೆ ಕೆಳಗೆ ಗೀಟು ಹಾಕಿ ಆ ಕ್ಲಿಷ್ಟಪದಗಳಿಗೆ ಅರ್ಥವನ್ನೂ ಕೊಟ್ಟು ಅಲ್ಲಲ್ಲಿ ವಾಸಿಷ್ಠರಾಮಾಯಣದ ಅನೇಕ ಶ್ಲೋಕಗಳನ್ನು ಬರೆದಿರುವರು ಇವುಗಳೆಲ್ಲವೂ ಮುಖ್ಯವಾಗಿರುವವು ಇದಲ್ಲದೆ ಗ್ರಂಥಾರಂಭದಲ್ಲಿ ಪ್ರತ್ಯೇಕವಾಗಿ ೬೩ ಪುಟಗಳಲ್ಲಿ ಪುರುಷಪ್ರಯತ್ನದ ವಿಷಯದಲ್ಲಿ ಒಂದುಪನ್ಯಾಸವನ್ನು ಬರೆದಿರುವರು. ಈ ಉಪನ್ಯಾಸಕ್ಕೆ ಸಾಧಕವಾದ ಶ್ಲೋಕಗಳನ್ನು ಭಾರತಪಂಚತಂತ್ರವೇ ಮೊದಲಾದ ಗ್ರಂಥಗಳಿಂದ ಎತ್ತಿ ಬರೆದಿರುವರು. ಈ ಉಪನ್ಯಾಸದಲ್ಲಿ ನಮ್ಮ ಪ್ರಾಚೀನರು ಕಾರ್ಯಸಿದ್ಧಿಗೆ ಪ್ರಯತ್ನವೇ ಕಾರಣವೆಂದೆನಿಸಿದ್ದನ್ನೂ, ಅವರಿಗೆ ಬಂದ ಪ್ರಖ್ಯಾತಿಯನ್ನೂ, ದೈವವಾದಿಮತನಿರಾಕರಣೆಯನ್ನೂ ಮಾಡಿ ಕಾರ್ಯಸಿದ್ಧಿಗೆ ಪ್ರಯತ್ನವೇ ಮುಖ್ಯವೆಂದು ವಿವರಿಸಿ ಮುಂದೆ ೫ ಪುಟಗಳಲ್ಲಿ ಗ್ರಂಥರಚನೆಗೆ ಕಾರಣವನ್ನೂ ಹೇಳಿರುವರು. ಕ್ಲಿಷ್ಟವಿಚಾರವೆಂದು ಭಾವಿಸದೆ ಈ

ಹಸನಾದೂಟ, ಹಸನಾದುಡುಪು, ಹಸನಾದ ಮನೆಯಲ್ಲಿರುವರಿಗೆ।
ಮಿಸಕದು ಪಿಡಗಿನ ಕಾಟವ್ಯಾತಕೆ ತಿಳಿಯಿರಿ ಕಾರಣ ನೀವಿದಕೆ॥೬॥
ಹೊಲೆಯುರ ಸಮಗರ ಕಟಕರ ಓಣಿಗಳ್ಯಾಕಾಗಿವೆ ರೋಗದಚಾಗ।
ಹೊಲಸುಮೈಲುಗಳ ಮೂಲಕಾರಣವೆಂದು ತಿಳಿಯಿರಿನೀವ್ ಬೇಗ॥೮॥
ಮುಂಚೆ ಹಿತ್ತಲ ಒಳಹೊರಗೆ ನೀವುರುಳರುಳ ಮಾಡಿರಿ ಮನೆಯಲ್ಲ।
ಹೆಂಚುಸಗಣಿ ಕಸ ಕಡ್ಡಿ ಇರಗೊಡದೆ ವೈದುಚಲ್ಲರಿದೂರೆಲ್ಲ॥೯॥
ಬಚ್ಚಲು ಮೊಹರಿ ಕಾಲುವೆಗಳನು।
ಸ್ವಚ್ಛ ಇಡಿರಿ ನೀನ್ ತೊಳತೊಳದು॥
ಹಸನುಕಾಣುವಂತೆ ಮನೆಯುವಾಡಿರಿ।
ಕಸವನು ಮೇಲೆಮೇಲೆ ಬಳಿ ಬಳಿದು॥೧೦॥
ರೊಳಕ ಬಿಡದಲೆ ದಿನಾಲುಮಾಡುತ ನಾರದಂತೆನೀವಿವೈಯ್ಯಾ।
ಕೊಳಕು ಹೋಗದಂತೊಗೆಯುದ ಬಟ್ಟೆಗೆ ಹಚ್ಚ ಬೇಡಿರಿ ತುಸುಕೈಯ್ಯಾ॥೧೧॥
ಸಾಗುವ ತಜುವಿಜು ಮಾಡಿದಮೇಲೆ ಚಿಂತೆಬಿಟ್ಟು ಸುಮ್ಮ ನಿರಬೇಕು।
ಲೋಕವ ಸಾಕುವ ದೇವರುಕೈಬಿಟ್ಟಾನೆಂಬಾನುಡಿಅದುಸಾಕು॥೧೨॥
ಕಲ್ಲಿನೊಳಗಿನ ಕಪ್ಪೆಗೆ ಸುಮ್ಮ ದೇವ।
ಅಲ್ಲೆ ತಂದು ಇರಿಸುವ ಅನ್ನ॥
ಒಮ್ಮನದಿಂದಲಿ ಶರಣುಹೊಕ್ಕರೆ।
ಸುಮ್ಮ ನಿಹನೆ ಕರುಣಸಂಪನ್ನ॥೧೩॥
ಗಡಬಿಡಿ ಮಾಡದೆ ಹಗಲಿರಳೆನ್ನದೆಬೇಡಿಕೊಂಡರೆ ಸರ್ವಜನ।
ಪಿಡುಗಿನ ಕಾಟವ ದೂರಓಡಿಸಿ ಸಲಹುವ ನಮ್ಮನು ಭಗವಾನ॥೧೪॥

ಅಣ್ಣಾಜಿರಾವ್ ಸವದಿಯವರುಮಾಡಿದ್ದು.

ಒಗಟಿಗಳಿಗೆ ಉತ್ತರ

1 ಮಹಾಲಯು 2 ಮ್ಮ, ಎಂಬ ಅಕ್ಷರ.

ಶ್ರೀನಿವಾಸಮೂರ್ತಿ,
ಶ್ರೀನಿವಾಸಪುರದ ಗೌ॥ ಕನ್ನಡ ಸ್ಕೂಲ್, IVನೇ ಕ್ಲಾಸ್ ವಿದ್ಯಾರ್ಥಿ.

ಕೂಲವಾಗಿರುವಂತೆ ಈ ನಾಟಕಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನೂ ಬರೆದಿರುವರು. ಈ ಗ್ರಂಥವನ್ನು ನೋಡತಕ್ಕವರಿಗೆ ಇದರಿಂದ ತಕ್ಕಮಟ್ಟಿಗೆ ಪ್ರಯೋಜನವಾಗುವದೆಂದು ಹೇಳಬಹುದು. ಸರ್ವಸಾಮಾನ್ಯವಾಗಿ ತಿಳಿದ ಪದಗಳ ಅರ್ಥವಿಚಾರವನ್ನು ಬಿಟ್ಟು ಆವಶ್ಯಕವೆಂದು ತೋರಿದಕಡೆ ಮಾತ್ರ ಬರೆಯಬೇಕೆಂಬಂಶವನ್ನು ಬರೆದಿರುವದನ್ನು ನೋಡಿದರೆ, ಈ ತರಗತಿಯ ವಿದ್ಯಾರ್ಥಿಗಳ ಯೋಗ್ಯತೆಯನ್ನು ಕಂಡುಹಿಡಿದು ಬರೆದಂತೆ ಕಾಣುವದು. ಮುಖ್ಯವಾಗಿ ಇಂಥಾ ಗ್ರಂಥಗಳಿದ್ದರೆ ವಿದ್ಯಾರ್ಥಿಗಳು ತಾವಾಗಿಯೇ ಪದ್ಯಗಳಿಗೆ ಅನ್ವಯಮುಂತಾದವುಗಳನ್ನು ತಿಳಿದುಕೊಂಡು ವ್ಯುತ್ಪತ್ತಿಯನ್ನು ಪಡೆಯಲು ತಕ್ಕಮಟ್ಟಿಗೆ ಮಾರ್ಗವಾಗುವದೆಂದು ಹೇಳಬಹುದು.

ಆದರೆ ಪಂಡಿತರ ಸಹಾಯ್ಯದೊಡನೆ ಈ ಟಿಪ್ಪಣದ ಸಹಾಯ್ಯವನ್ನು ಪಡೆದಲ್ಲಿ ವಿದ್ಯಾರ್ಥಿಗಳು ತುಂಬಾಪ್ರಯೋಜನವನ್ನು ಪಡೆಯುವರೆಂದು ಭಾವಿಸುತ್ತೇವೆ. ಈ ಪುಸ್ತಕವು ಚೆನ್ನಾಗಿ ಮುದ್ರಿತವಾಗಿರುವುದು ; ಪುಸ್ತಕ ಕರ್ತರಲ್ಲಿ ದೊರೆಯುವುದು.

ಪ್ಲೇಗಿನಾವಣೆ.

ಪಿಡಗುಬಾರದೆ ಹಂಚಿಕೆಹೇಳುವೆ, ಕೂತುಕೇಳಿರಿ ನೀವೆಲ್ಲ।
ಒಡಿಯುನ ನಂಬಿ ತಪ್ಪದೆನಡೆದರೆ, ಸುಖವಾಗೊದು ಸಂಶಯವಿಲ್ಲ॥೧॥
ಪ್ಲೇಗಿನ ಹುಳವು ನೆಲದಮೇಲೆ ತಾಹಬ್ಬುವದೆಂದು ತಿಳಿಕೊಂಡು ।
ಬೇಗನೆ ವೊಚ್ಚಿ ಬೂಟು ಕಾಲ್ಕುರಿಜೋಡನು ಹೆಪ್ಪಾಗಿರಿ ಹೊರಗೆ ಮೆಟ್ಟಿಕೊಂಡು॥೨॥
ಬೆಳಕುಗಾಳಿಗಳು ಹೋಗದ ಕಡೆಯುರಿ ರೋಗಬಂದು ತಾ ಸೇರುವದು।
ಹೊಲಸು ನಾತ ಹಾರಿ ಹೋಗಲಿಕೆ ಬೆಳ ಕಿಂಡಿ ಕಿಟಕಿ ಗಳುಮಾಡುವದು॥೩॥
ಇಟ್ಟ ಬೈಲಿನ ಹಸನಗಾಳಿಯು ಲಗುಕೊಳ್ವದು ರೋಗದಬೀಜ।
ಬಿಟ್ಟುಬಿಡದಲೆ ಹವಾತಿನ್ನಿರಿ ತಿಳಿಯಿರಿ ಯಮ್ಮ ಮಾತಿದು ನಿಜ॥೪॥
ಇಲಿಗಳು ಪಟಪಟ ಸಾಯುವ ಮನೆಗಳ ಬಿಟ್ಟುಹೋಗಿರಿ ಲಗುದೂರ ।
ಇಲಿಗಳು ಪಿಡುಗಿನ ಬೀಜವ ಬಿತ್ತುವವೆಂದು ತಿಳಿಯಿರಿ ನೀವ್ ಪೂರಾ॥೫॥
ಜ್ವರಸೇರಿದ ವೈರೋಗದಬೀಜಕೆಹಸನಾದ ಹೊಲತಾನಾಗುವದು।
ಅರಿಯುತನೀವಿದ ಹೇಳಿದ ಕೇಳುತರೋಗಬಾರದಂತೆ ಮಾಡುವದು॥೬॥

ವಿದ್ಯಾದಾಯಿನಿ.

ಭಾಗ ೬.] ಡಿಸೆಂಬರ್ ೧೮೯೪ [ಸಂಚಿಕೆ ೧೦.

ಎಡಿಟರವರ ನೋಟ್ಸ್.

ಸ೯ ೧೮೯೩—೯೪ನೆ ಇಸವಿಯವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟಿನಿಂದ ಇನ್ಸ್ಪೆಕ್ಟರ್‌ಜನರಲ್ ಮಿ॥ ಹೆಚ್. ಜಿ. ಭಾಭಾಸಾಹೇಬರವರು ಶಿವಮೊಗ್ಗಾ ಕಾಲೀಜ್‌ನ್ನೂ, ಆರು ಹೈಸ್ಕೂಲ್‌ಗಳನ್ನೂ (ಮೊದಲಿನಿಂದಲೂ, ಮೆಟ್ರಿಕ್ಯುಲೇಷನ್ ಪರೀಕ್ಷೆಯವರಿಗೆ ಪಾಠಹೇಳತಕ್ಕ ತರಗತಿಗಳುಳ್ಳ ಪಾಠಶಾಲೆಗಳನ್ನೂ) ಹತ್ತೊಂಭತ್ತು ಆಂಗ್ಲೋವರ್ನಾಕ್ಯುಲರ್ ಸ್ಕೂಲ್‌ಗಳನ್ನೂ, ಮೂರು ಗ್ರಾಂಟ್-ಇನ್-ಏಡ್ (ಸಂಸ್ಕಾರದ ಸಹಾಯವನ್ನು ಪಡೆಯತಕ್ಕ) ಆಂಗ್ಲೋವರ್ನಾಕ್ಯುಲರ್ ಸ್ಕೂಲುಗಳನ್ನೂ, ಇಪ್ಪತ್ತೊಂದುತಾಲ್ಲೂಕು ಕನ್ನಡಸ್ಕೂಲುಗಳನ್ನೂ, ಇಪ್ಪತ್ತೆರಡುತಾಲ್ಲೂಕ್ ಹಿಂದುಸ್ಥಾನಿ ಸ್ಕೂಲುಗಳನ್ನೂ, ಎರಡು ಗ್ರಾಂಟ್-ಇನ್-ಏಡ್ ಕನ್ನಡಾಸ್ಕೂಲುಗಳನ್ನೂ, ಒಂದು ಪ್ರೈವೆಟ್ ಹಿಂದುಸ್ಥಾನೀಸ್ಕೂಲ್‌ನ್ನೂ, ಇಪ್ಪತ್ತೆರಡು ಗ್ರಾಂಟ್-ಇನ್-ಏಡ್ ಗರ್ಲ್ಸ್‌ಸ್ಕೂಲುಗಳನ್ನೂ, ಇಪ್ಪತ್ತೆಂಟು ಗೌರ್ನಮೆಂಟ್ ಗರ್ಲ್ಸ್‌ಸ್ಕೂಲುಗಳನ್ನೂ, ಹನ್ನೊಂದು ಹೋಬಳೀಸ್ಕೂಲುಗಳನ್ನೂ, ಐದು ಸಂಸ್ಕೃತಪಾಠಶಾಲೆಗಳನ್ನೂ, ನಾಲ್ಕು ತಾಲ್ಲೂಕ್‌ಬ್ರಾಂಚ್ ಸ್ಕೂಲುಗಳನ್ನೂ, ಒಂದು ನೈಟ್‌ಸ್ಕೂಲನ್ನೂ, ಮೂರು ಪೆರಿಯಾಸ್ಕೂಲುಗಳನ್ನೂ, ಒಂದು ನಾರ್ಮಲ್‌ಸ್ಕೂಲನ್ನೂ ಸ್ವತಃ ಪರೀಕ್ಷೆಮಾಡಿದರೆಂದು ತಿಳಿಯಬರುತ್ತೆ. ಎಂಟು ಡಿಸ್ಟ್ರಿಕ್ಟುಗಳಲ್ಲಿಯೂ ಕೆಲಕೆಲವು ಮಠ, ಹೋಬಳಿಸ್ಕೂಲುಗಳು ಮೊದಲಾಗಿ ತಾವೆ ಪರೀಕ್ಷಿಸಿದಕಾರಣ ಶ್ರಮಪಟ್ಟು ಕೆಲಸಮಾಡತಕ್ಕ ಉಪಾಧ್ಯಾಯರ ಮನಸ್ಸಿನಲ್ಲಿ ಉತ್ಸಾಹವೂ, ಸೋಮಾರಿಗಳಾದ ಬೋಧಕರ ಹೃದಯದಲ್ಲಿ ಭಯವೂ ಉಂಟಾಗಿರುವುದರಿಂದ, ಸ೯ ೧೮೯೩—೯೪ನೆ ಇಸವಿಯ ರಿಪೋರ್ಟಿನಲ್ಲಿ ವಿದ್ಯಾಭ್ಯಾಸದ ಇಲಾಖೆಯಲ್ಲಿ ವಿಶೇಷವಾದ ಅಭಿವೃದ್ಧಿಯು ಕಾಣಬರುವುದೆಂದು ತೋರುತ್ತೆ.

೨೭. ಮೊಲವೂ ಆಮೆಯೂ.

ಒಂದು ಮೊಲವು ಒಂದು ಆಮೆ ಮೆಲ್ಲಗೆ ನಡೆಯುವುದನ್ನು ಕಂಡು ನಕ್ಕಿತು ಆದಕ್ಕೆ ಅದು ಮೊಲದೊಡನೆ "ನೀನು ಗೊತ್ತು ಮಾಡುವ ದಿನ ನಿನ್ನೊಡನೆ ಜೂಜೋಡಿ ನಿನ್ನನ್ನು ಸೋಲಿಸುವೆನು" ಎಂದಿತು. ಅದಕ್ಕೆ ಮೊಲವು "ಹಾಗೆಯೇ ಆಗಲಿ, ಹೋರಡು. ನನ್ನ ಕಾಲಿನ ಮಹತ್ವವು ನಿನಗೆ ಆಗ ಗೊತ್ತಾಗುವುದು" ಎಂದು ಹೇಳಿತು. ಬಳಿಕ ಅವು ಒಡನೆ ಹೊರಡತಕ್ಕದೆಂದು ಒಪ್ಪಂದಮಾಡಿಕೊಂಡುವು. ಆಮೆ ಒಂದು ನಿಮಿಷವೂ ನಿಲ್ಲದೆ, ಎಂದಿನಂತೆ ವಿಕಪ್ರಕಾರವಾದ ನಡಿಗೆಯಲ್ಲಿ ಮೆಲ್ಲನೆ ನಡೆದು ಹೋಯಿತು. ಮೊಲವಾದರೋ, ಎಲ್ಲಾ ಅಲಕ್ಷ್ಯವಾಗಿ ಕಂಡು, ಮೊದಲು ಸ್ವಲ್ಪಹೊತ್ತು ನಿದ್ರಮಾಡಿ ಬಳಿಕ ಬೇಗ ಓಡಿ ಆಮೆಯನ್ನು ಹಿಂದು ಹಾಕುವೆನೆಂದು ಹೇಳಿ, ಒಂದುಕಡೆ ಕುಳಿತು ಜೂಗಡಿಸಿತು. ಇಷ್ಟರಲ್ಲಿ ಆಮೆ ನಿಲ್ಲದೆ ಪ್ರಯಾಸಪಟ್ಟು ನಡೆದೇ ಹೋಯಿತು. ಮೊಲವು ನಿದ್ರೆಯಿಂದ ಮೈಮುರೆತು ಬಳಿಕ ಓಡಿ ಬಂದು, ಗೊತ್ತುಮಾಡಿದ್ದ ಸ್ಥಳವನ್ನು ತನಗಿಂತಲೂ ಮುಂಚೆ ಆಮೆಯೇ ಸೇರಿರುವುದನ್ನು ಕಂಡು ನಾಚಿಕೆಯಿಂದ ತಲೆಬಗ್ಗಿಸಿತು.



ನಿಧಾನವಾದರೂ ಎಡೆಬಿಡದೆ ದುಡಿವನೇ
ಮೊದಲು ಕಡೆಹಾಯುವನು.

ಕಿಂಡರ್‌ಗಾರ್ಟ್ನ.

[ನ್ಯಾಷನಲ್ ಇಂಡಿಯನ್ ಅಸೋಸಿಯೇಷನ್ ಎಂದು ಒಂದು ಸಂಘವಿರು ವಿರುವುದು. ಹಿಂದೂಸ್ತ್ರೀಯರು ವಿದ್ಯಾವತಿಯರಾಗಲು ಪ್ರೋತ್ಸಾಹಿಸತಕ್ಕದ್ದು ಈ ಸಭಿಕರ ಉದ್ದೇಶಗಳಲ್ಲೊಂದಾಗಿರುವುದು. ಈ ಸಭೆಯವರು 'ಚಿಕ್ಕ ಮಕ್ಕಳಿಗೆ ಕಿಂಡರ್‌ಗಾರ್ಟ್ನ ಕ್ರಮವರಿತು ಬೋಧಿಸುವ ವಿಷಯವಾಗಿ ಚೆನ್ನಾದ ಉಪನ್ಯಾಸಗಳ ನ್ನು ಬರೆದು ಕಳುಹಿಸಿದ ಸ್ತ್ರೀಯರಿಗೆ ಬಹುಮಾನಗಳನ್ನು ಕೊಡುವೆವೆಂದು ಪ್ರಕಟಿಸಿ ದರು. ಅನೇಕರು ಬರೆದು ಕಳುಹಿಸಿದರು. ಅವರುಗಳಲ್ಲಿ ಮೂವರಿಗೆ ಬಹುಮಾನಗಳು ದೊರೆದವು. ಅವುಗಳಲ್ಲಿ ಉತ್ತಮವಾದ ಉಪನ್ಯಾಸವನ್ನು ಸಂಕ್ಷೇಪಿಸಿ ಇಲ್ಲಿ ಕನ್ನಡ ದಲ್ಲಿ ಸುಲಭವಾಗಿ ಪ್ರಕಟಿಸಿರುವೆವು.]

ಮಕ್ಕಳ ವಿಹಾರವನ.

ಹೊಸಬಟ್ಟೆಗೆ ಕಟ್ಟಿದ ಬಣ್ಣವು, ಹಳೆಬಟ್ಟೆಗೆ ಕಟ್ಟಿದ ಬಣ್ಣಕ್ಕಿಂತ, ಹ್ಯಾಗೆ ಸ್ಥಿರವಾಗಿ ನಿಂತು, ಪ್ರಕಾಶಗೊಳ್ಳುವದೊ ಹಾಗೆಯೇ ಬಾಲಕರಿಗೆ ಕಲಿಸಿಕೊಟ್ಟ ವಿದ್ಯೆಯು ಮನಸ್ಸಿನಲ್ಲಿ ಸ್ಥಿರವಾಗಿ ನಿಂತು, ವಯಸ್ಸು ಹೆಚ್ಚಿದಹಾಗೆಲ್ಲ ವೃದ್ಧಿಗೊಳ್ಳು ವುದು. ಮಕ್ಕಳಿಗೆ ವಿದ್ಯೆಯನ್ನು ಕಲಿಸಲು ಆಂಗ್ಲೇಯಸ್ತ್ರೀಯರಿಗೆ ಯಾವ ಸೌಲಭ್ಯ ಅಥವ ಸಲಕರಣವುಂಟೋ ಆ ಸೌಲಭ್ಯವೇ ಆಗಲಿ ಆ ಸಲಕರಣವೇ ಆಗಲಿ ಹಿಂದೂ ಸ್ತ್ರೀಯರಿಗೆ ಇಲ್ಲವು. ಇದಕ್ಕೆ ಕಾರಣವನ್ನು ಹುಡುಕಲು ಬಹುದೂರ ಯೋಚಿಸಲವ ಶ್ಯವಿಲ್ಲ. ಆಂಗ್ಲೇಯರು ತಮ್ಮ ಮಕ್ಕಳಿಗೆ ಬಹಳ ಚಿಕ್ಕವಯಸ್ಸಿನಲ್ಲಯೇ ಅಂದರೆ ಮಕ್ಕಳಿಗೆ ಇನ್ನೂ ಎರಡು ಅಥವಾ ಮೂರುವರ್ಷ ವಯಸ್ಸು ಇರುವಹಾಗೆಯೆ ವಿದ್ಯಾಭ್ಯಾಸ ಮಾಡಿಸಲು ಆರಂಭಿಸುವರು. ಬಾಲ್ಯವಯಸ್ಸಿನಲ್ಲಿಯೇ ಅನೇಕ ವಿಷ ಯಗಳನ್ನು ಅವರಿಗೆ ತಿಳಿಯಪಡಿಸುವುದರಿಂದ ಅವು ಮನಸ್ಸಿನಲ್ಲಿ ಚೆನ್ನಾಗಿ ನಾಟು ವುವು. ಆದಕಾರಣ ಆಂಗ್ಲೇಯರಲ್ಲಿ ವಯಸ್ಸಾಗುವುದಕ್ಕೆ ಮುಂದೆಯೇ ಅನೇಕ ವಿಷಯಗ ಳಲ್ಲಿ ಅವರಿಗೆ ನಿಷ್ಕರ್ಷಿತಜ್ಞಾನವುಂಟಾಗಿರುವುದು. ಹಿಂದೂಸ್ತ್ರೀಯರು ಈ ವಿಷ

ಅನೇಕ ಸ್ಥಳಗಳಲ್ಲಿ ಇರುವ ಪಾಠಶಾಲೆಗಳು ಚಿಕ್ಕವುಗಳಾಗಿಯೂ, ಸಾಕಾದಷ್ಟು ಗಾಳಿ ಬೆಳಕು ಇಲ್ಲದೆಯೂ, ಇರುವವೆಂದು, ಡೆಪ್ಯುಟಿಇನ್ಸ್ಪೆಕ್ಟರುಗಳ ರಿಪೋರ್ಟ್‌ನಿಂದಲೂ ಹಜರತ್ ಇನ್‌ಸ್ಪೆಕ್ಟರ್‌ಜನರಲ್ ಸಾ॥ ರವರ ಸ್ವಂತಪರಾಂಬರಿಕೆಯಿಂದಲೂ ಚೆನ್ನಾಗಿ ತಿಳಿದುಬಂದು, ಪಾಠಶಾಲೆಗಳ ಕಟ್ಟಡಗಳನ್ನು ಉತ್ತಮಸ್ಥಿತಿಗೆ ತರಬೇಕೆಂಬ ತಾತ್ಪರ್ಯದಿಂದ, ಗೌರ್ನಮೆಂಟಿಗೆ ಮೆ॥ ಭಾಭಾಸಾಹೇಬರವರು, ಆ ವಿಷಯವಾಗಿ ಬರೆದು, ಉತ್ತರೋತ್ತರ ಅಭಿವೃದ್ಧಿಗೆ ಬರುವಂತೆ ತಕ್ಕ ಏರ್ಪಾಡುಗಳನ್ನು ಮಾಡಿಸಿರುವರೆಂದು ತಿಳಿದು ಬರುವುದು.

***

ರೆವಿನ್ಯು ಮತ್ತು ಇತರ ಇಲಾಖೆಗಳ ಅಧಿಕಾರಿಗಳು ವಿದ್ಯಾಭ್ಯಾಸದ ವಿಷಯವಾಗಿ ಹಿಂದಣಸಂವತ್ಸರಕ್ಕಿಂತಲೂ ಸ್ವಲ್ಪ ಹೆಚ್ಚಾಗಿ ಆಸಕ್ತಿತೋರಿಸಿರುವರೆಂದು ತಿಳಿಯಲು ಸಂತೋಷಿಸುತ್ತೇವೆ. ಅಮಲ್ದಾರ್‌ಗಳು, ಅಸಿಸ್ಟೆಂಟ್‌ಕಮಿಷನರ್‌ಗಳು ಡಿಪ್ಯುಟಿಕಮಿಷನರು, ಸರ್ಕಿಟ್‌ದಯವಾಡಿಸಿದಾಗ ಪಾಠಶಾಲೆಗಳನ್ನು ಪ್ರವೇಶಿಸಿ, ಬಾಲಕರನ್ನು ಪರೀಕ್ಷಿಸಿ, ವಿದ್ಯಾಭ್ಯಾಸದ ಇಲಾಖೆಗೆ ರಿಪೋರ್ಟುಮಾಡಿದಲ್ಲಿ ವಿದ್ಯಾಭಿವೃದ್ಧಿಗೆ ತಕ್ಕಮಟ್ಟಿಗೆ ಸಾಹಾಯ್ಯಮಾಡಿದಂತಾಗುವುದು. ಡೆಪ್ಯುಟಿಕಮಿಷನರವರ ತಮ್ಮ ಡಿಸ್ಟ್ರಿಕ್ಟಿನ ರಿಪೋರ್ಟನ್ನು ಕಳುಹಿಸುವಾಗ, ರೆವಿನ್ಯೂ ಅಧಿಕಾರಿಗಳು ಆ ಸಾಲಿನಲ್ಲಿ ಎಷ್ಟು ಸ್ಕೂಲುಗಳನ್ನು ಪರೀಕ್ಷಿಸಿದರು ಎಂಬ ಅಂಶವನ್ನು ರಿಪೋರ್ಟಿನಲ್ಲಿ ಸೂಚಿಸುವಂತೆ ಸರಕಾರವವರು ದಯವಿಟ್ಟು ಮಾಡಬೇಕೆಂಬ ಅಭಿಪ್ರಾಯವನ್ನು ಇನ್‌ಸ್ಪೆಕ್ಟರ್ ಜ॥ ಸಾ॥ ರವರು ಗೌರ್ನಮೆಂಟಿನವರಿಗೆ ಸೂಚಿಸಿರುವರು.

***

ಈ ಡಿಶಂಬರು ತಿಂಗಳು ೨೭–೨೩ನೇ ತಾರೀಖುಗಳಲ್ಲಿ ಮದ್ರಾಸ್ ಅಧಿಪತ್ಯದ ಉಪಾಧ್ಯಾಯಸಂಘವು ಮದ್ರಾಸಿನಲ್ಲಿ ಸೇರುವುದು. ಮದ್ರಾಸ್‌ಗೌರ್ನರವರಾದ ಎಚ್. ಇ ಸರ್ ಆರ್ಥರ್‌ಹ್ಯಾವಲಕ್‌ರವರು ಸಭಾಧ್ಯಕ್ಷರಾಗುವರು. ವಿದ್ಯಾನಿಧಿಗಳು ಅನೇಕರು ಈ ಸಭೆಯನ್ನಲಂಕರಿಸುವರು. ಈ ಸಭೆಯಲ್ಲಿ ಇಂಗ್ಲಿಷ್ ವ್ಯಾಕರಣವನ್ನು ಬೋಧಿಸುವಿಕೆ, ದೊಡ್ಡದೊಡ್ಡ ತರಗತಿಗಳಲ್ಲಿ ಚರಿತ್ರೆಯನ್ನು ಬೋಧಿಸುವಕ್ರಮ ಇವೇ ಮುಂತಾದ ಕೆಲವು ವಿದ್ಯಾವಿಷಯಗಳನ್ನು ಚರ್ಚಿಸುವರು. ಮುಂದಣಸಂಚಿಕೆಗಳಲ್ಲಿ ಈ ವಿಷಯಗಳನ್ನು ಸ್ವಲ್ಪಸ್ವಲ್ಪವಾಗಿ ತಿಳಿಸುವೆವು.

ದಿವಸಗಳ ಕೆಳಗೆ ಇಂಥಾ ಸುಲಭೋಪಾಯಗಳಿಂದ ಮಕ್ಕಳಿಗೆ ಆಟಪಾಟಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿಸುತಲಿದ್ದ ಪಾಠಶಾಲೆಗಳೇ ಇರಲಿಲ್ಲವು. ಆಗಿನಕಾಲದ ಮಠಗಳಲ್ಲಿ ವಿದ್ಯಾಭ್ಯಾಸ ಮಾಡಿಸಲು ಬಹು ಕ್ರೂರಮಾರ್ಗಗಳನ್ನು ಆಚರಿಸುತಿದ್ದರು. ಮಕ್ಕಳ ಪುಣ್ಯವಶಾತ್ ಅಂಥ ಮಠಗಳೂ ಇಲ್ಲ. ಹೆಸರು ಹೇಳಿದಮಾತ್ರಕ್ಕೆ ಕಣ್ಣಿನಲ್ಲಿ ನೀರು ಸುರಿಯುತಲಿದ್ದ, ಆ ಕ್ರೂರ ಉಪಾಧ್ಯಾಯರೂ ಇಲ್ಲ. ಇದು ಎಂಥಾಪುಣ್ಯ.

ಆ ಕಾಲದಲ್ಲಿ ಬಾಲಕರುಪಡುತಲಿದ್ದ ಕಷ್ಟವನ್ನೂ, ಆ ಉಪಾಧ್ಯಾಯರು ಆಚರಿಸುತಲಿದ್ದ ಶಿಕ್ಷಾಕ್ರಮವನ್ನೂ ಈಗಿನಕಾಲದ ಬಾಲಕರಿಗೋಸ್ಕರ ಇಲ್ಲಿ ಸ್ವಲ್ಪ ತಿಳಿಸಬೇಕಾಗಿರುತ್ತೆ. ಮೊದಲು ಬಾಲಕರ ಮುಂದೆ ಮರಳು ಹರವುದು, ಅದರ ಮೇಲೆ ಅಕ್ಷರವನ್ನು ತಿದ್ದಿಹಾಕುವುದು ; ಬಾಲಕರ ಬೆರಳು ಹಿಡಿದು ಅಕ್ಷರವನ್ನು ತಿದ್ದಿಸುವುದು. ಆಮೇಲೆ ತಿದ್ದುವಂತೆ ಹೇಳುವುದು. (ಮಕ್ಕಳ ಸ್ವಭಾವವು ಜಂಜಲವು. ಈ ಸ್ವಭಾವವನ್ನರಿಯದೆ ಉಪಾಧ್ಯಾಯರು) ಬಾಲಕರು ಅತ್ತಿತ್ತ ನೋಡಿದರೆ ಹೊಡೆಯುತ್ತ, ಕಣ್ಣಿನಲ್ಲಿ ನೀರು ತುಂಬಿಕೊಂಡು ತಪ್ಪುತಿದ್ದಿದರೆ ಕಂದಿಹೋಗುವಂತೆ ತೊಡೆಹಿಂಡುತ್ತಾ, ಬರಿ, ಬರಿ ಎಂದು ಅರಚಿಕೊಳ್ಳುವುದು. ಬರೆದ ಅಕ್ಷರವನ್ನ ಬಾಯಿಯಲ್ಲಿ ಒರಲಿಸುತ್ತಾ, ಬೆರಳಿಂದ ತಿದ್ದುತ್ತಾ ಇರುವ ಬಾಲಕನು, ನಿದ್ರೆಯಿಂದಲಾಗಲಿ, ಬೇಸರದಿಂದಾಗಲಿ, ಕೈಲಾಗದೆ ಆಗಲಿ ಸ್ವಲ್ಪ ತಡಮಾಡಿದರೆ, ಸ್ವಲ್ಪ ಬಿಟ್ಟರೆ, ಒಡನೆಯೆ 'ಫಟೀರ್' ಎಂದು ಏಟು ಬೀಳುವುದು ಖಂಡಿತವು. ಕೆಲವು ನಿಷ್ಕರುಣಿಗಳಾದ ಉಪಾಧ್ಯಾಯರು (ಈ ಹೆಸರು ಅವರಿಗೆ ಸಲ್ಲದು) ಬೆರಳು ಮುರಿಯುತಿದ್ದರು, ನಿಲ್ಲಿಸುತ್ತಿದ್ದರು, ಕುರ್ಚಿ ಕೂಡಿಸುತಿದ್ದರು, ಕುರ್ಚಿಕೂಡಿಸಿ, ಮೊಳಕಾಲಮೇಲೂ, ಬೆನ್ನಿನ ಮೇಲೂ ಬಾರವನ್ನು ಹೇರುತಿದ್ದರು, ಇಷ್ಟಕ್ಕೆ ಅವರು ತೃಪ್ತರಾಗುತಿರಲಿಲ್ಲ. ಕೋದಂಡವನ್ನು ಹಾಕುತಿದ್ದರು, (ಇಂಗ್ಲೀಷ್ ಸ್ಕೂಲಗಳಲ್ಲಿ ಒದುವರಿಗೂ, ಜಾಣರಾದ ಇಂಗಿತಜ್ಞರಾದ ಉಪಾಧ್ಯಾಯರಲ್ಲಿ ವಿದ್ಯಾಭ್ಯಾಸ ಮಾಡತಕ್ಕವರಿಗೂ ಕೋದಂಡವೆಂದರೆ ಅರ್ಥ ತಿಳಿಯದಿರಬಹುದು.) ಕೋದಂಡವೆಂದರೆ ಮನೆಯ ದೂಲಕ್ಕೆ ಒಂದು ಸಣ್ಣ ಹಗ್ಗವನ್ನು ಸುತ್ತುಹಾಕಿ, ಹುಡುಗರನ್ನು ಎತ್ತಿಸಿ ಆ ಹಗ್ಗವನ್ನು ಗಟ್ಟಿಯಾಗಿ ಹಿಡಿದುಕೊಳ್ಳುವಂತೆ ಹೇಳಿ ಮೇಲುಗಡೆ ಒದ್ದಾಡುವಂತೆ ಹುಡುಗರನ್ನು ನೇತುಹಾಕುವುದು. ಅವನ ಕೆಳಗೆ ಮುಳ್ಳು ಹಾಕುವುದು, ಮೆಣಸಿನಕಾಯಿ ಹೊಗೆ ಹಾಕುವುದು. ಈರೀತಿಯಾದ ಭಯಂಕರವಾದ ದಂಡನೆಗಳನ್ನು ಬಾಲಕರಿಗೆ ವಿಧಿಸುತಿದ್ದರು. ಆಕಾಲದ ಶಿಕ್ಷೆಯಲ್ಲಿ, ಈಕಾಲವೆಲ್ಲಿ ! (ಸಕೋಪ)

ಯಕ್ಕೆ ಚೆನ್ನಾಗಿ ಗಮನಕೊಟ್ಟು ಮುಂದಾಗಿ ನಮ್ಮ ಹೆಣ್ಣುಮಕ್ಕಳಿಗೆ ಅರೀತಿಯಲ್ಲಿ ಚೆನ್ನಾಗಿ ವಿದ್ಯಾಭ್ಯಾಸವನ್ನು ಮಾಡಿಸುವುದಿಲ್ಲ. ಏಳುವರ್ಷದ ಹೊತ್ತಿಗೆ ಮಕ್ಕಳಿಗೆ ಚೆನ್ನಾಗಿ ಪದಾರ್ಥಜ್ಞಾನವು, ಸ್ವಲ್ಪಮಟ್ಟಿಗೆ ಸ್ವರೂಪಜ್ಞಾನ ವೂಸ್ವಭಾವವಾಗಿ ಉಂಬಾಗಿರುತ್ತ. ಒಂದುವೇಳೆ ಏಳುವರ್ಷಕ್ಕೆ ಮುಂದಾಗಿಯೆ ವಿದ್ಯಾಭ್ಯಾಸ ಮಾಡಿಸಲಾರಂಭಿಸಿದರೆ ಮಕ್ಕಳಿಗೆ ಬಹು ಹಿಂಸೆಗೊಟ್ಟು ವಿದ್ಯಾಭ್ಯಾಸವನ್ನು ಮಾಡಿಸುವರು. ಇಗಲಾದರೋ ಮಕ್ಕಳಿಗೆ ಬೇಸರವಿಲ್ಲದಂತೆ ಆಟಪಾಟಗಳಲ್ಲಿಯೇ ವಿದ್ಯಾಭ್ಯಾಸ ಮಾಡಿಸುವ ಪಾಠಶಾಲೆಗಳು ಕಾರುವವು. ಇಂಥಾ ಪಾಠಶಾಲೆಗಳ ಮೂಲಕವಾಗಿಯೂ ತಾಯಿಯರು ಮಕ್ಕಳೊಡನೆ ಆಟವಾಡಿಸುತ, ಕಣ್ಣಿಗೆ ಕಂಡ ಪಕ್ಷಿ, ಇದಿರಿಗೆ ಇರುವ ಇನ್ನಾವದಾದರೂ ಒಂದುಪ್ರಾಣಿ, ಕೊನೆಗೆ ಕುಡಿಯುವ ನೀರು ಈ ವಿಷಯವಾಗಿ ನಿಶ್ಚಯಜ್ಞಾನವನ್ನು ಹುಟ್ಟಿಸುತ ಬಂದರೆ ಬಾಲಶಿಕ್ಷೆಯು ಚೆನ್ನಾಗಿ ನಡೆಯುವುದಲ್ಲದೆ—ಉಪಾಧ್ಯಾಯರ ಕೆಲಸವನ್ನು ಅರ್ಧ ಕಡಿಮೆ ಮಾಡಿದಂತಾಗುವುದು.

ಮಕ್ಕಳಿಗೆ ಬೇಸರ ಉಂಟಾಗದಂತೆ ಆಟಪಾಟಗಳಲ್ಲಿಯೇ ಇಂದ್ರಿಯಪಟುತ್ವ, ಜ್ಞಾನಾಭಿವೃದ್ಧಿಯನ್ನು ಮಾಡುವುದು ಸಾಧ್ಯವೆಂತಲೂ, ಸುಲಭವೆಂತಲೂ, ಪ್ರಯೋಜನಕಾರಿಯುಂತಲೂ, ತಿಳಿದು ಆ ತತ್ವವನ್ನು ಪ್ರಕಟಗೊಳಿಸಿದ ಪೆಸ್ಟಲಾಟ್ಸಿ, ಫ್ರೀಬಲ್ ಇವರುಗಳ ಶ್ಲಾಘ್ಯವಾದ ಪದ್ಧತಿಯನ್ನು ಬಾಲಶಿಕ್ಷೆಯಲ್ಲಿ ಅನುಸರಿಸುವುದು ಅತ್ಯವಶ್ಯವು.

ಯೂರೋಪ್ ಖಂಡಕ್ಕೆ ಸೇರಿದ ಜರ್ಮನಿ, ಸ್ವಿಟ್ಜರ್‌ಲೆಂಡ್ ದೇಶೀಯರು ಮುಖ್ಯವಾಗಿ ಸ್ತ್ರೀವಿದ್ಯಾಭ್ಯಾಸವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಬಹಳ ಆಸಕ್ತಿಯುಳ್ಳವರಾಗಿರುವರು. ಸ್ತ್ರೀಯರು ವಿದ್ಯಾವತಿಯರಾಗಿರುವುದರಿಂದ ತಮ್ಮ ಮಕ್ಕಳ ಜ್ಞಾನೇಂದ್ರಿಯದ ಅಭಿವೃದ್ಧಿಯಲ್ಲಿಯೇ ಆಸಕ್ತರಾಗಿ, ಎಳೆಂಟು ವರ್ಷ ವಯಸ್ಕರಾವುದಕ್ಕೆ ಮುಂದಾಗಿಯೆ ಅನೇಕ ವಿಷಯಗಳನ್ನು ಮಕ್ಕಳಿಗೆ ಚೆನ್ನಾಗಿ, ಮತ್ತು ಸರಿಯಾಗಿ ತಿಳಿಯಪಡಿಸಿರುವರು. ನಮ್ಮ ಹೆಣ್ಣುಮಕ್ಕಳಿಗೆ ಉತ್ಸಾಹದಿಂದ ವಿದ್ಯೆಯನ್ನು ಕಲಿಸಿದ್ದೇ ಆದರೆ ಅವರು ತಮ್ಮ ಮಕ್ಕಳನ್ನು ಬಾಲ್ಯವಯಸ್ಸಿನಲ್ಲಿಯೇ ಚೆನ್ನಾಗಿ ಅರಿತವರನ್ನಾಗಿ ಮಾಡುವರೆಂದು ಖಂಡಿತವಾಗಿ ಹೇಳಬಹುದು. ಹೆಣ್ಣುಮಕ್ಕಳು ಬಹಳ ಆತುರದಿಂದಲೂ, ಉತ್ಸಾಹದಿಂದಲೂ, ಸುಲಭವಾಗಿ ವಿದ್ಯೆಯನ್ನು ಕಲಿಯುವರು. ಅವರಿಗೆ ಅಭಿರುಚಿಯುಳ್ಳ ಅನೇಕ ವಿಷಯಗಳನ್ನು ತಿಳಿಸಬಹುದು. ಸ್ವಲ್ಪ

ಪೆಸ್ಟಲಾಟ್ಸಿಯವರಿಗೆ ಈ ನಡತೆಯು ಬಹಳ ವಿಷಾದವನ್ನು ಉಂಟುಮಾಡುತ್ತಿತ್ತು. ಅನೇಕ ವಿದ್ಯಾರ್ಥಿಗಳಿಗೆ ಕಜ್ಜಿ ಮೊದಲಾದ ರೋಗಗಳು, ಶೀತಾಳಸಿಡುಬೇ ಮೊದಲಾದ ಸಾಂಕ್ರಾಮಿಕ ರೋಗಗಳು ಉಂಟಾಗುತ್ತಿದ್ದವು. ಅಂಥಾ ಕಾಲಗಳಲ್ಲೆಲ್ಲಾ ಪೆಸ್ಟಲಾಟ್ಸಿಯವರು ಮತ್ತು ಅವರ ಕುಟುಂಬವು ಈ ಮಕ್ಕಳನ್ನೆಲ್ಲಾ ಸ್ವಂತ ಮಕ್ಕಳಿಗಿಂತಲೂ ಹೆಚ್ಚಾಗಿ ನೋಡಿಕೊಳ್ಳುತ್ತಾ ಇದಾರೆ. ಇವರು ಮಕ್ಕಳನ್ನು ಸೇರಿಸಿಕೊಳ್ಳುವದಕ್ಕೆ ಮುಂಚೆಯೇ ಅಂಥಾ ಮಕ್ಕಳ ತಂದೆ ತಾಯಿಗಳಿಂದ ಮಕ್ಕಳ ವಿದ್ಯಾಭ್ಯಾಸ ಪೂರೈಸುವವರಿವಿಗೂ ಆ ಮಕ್ಕಳನ್ನು ಕರೆದುಕೊಂಡು ಹೋಗುವದಿಲ್ಲವೆಂದು ಕರಾರು ಬರೆಸಿಕೊಳ್ಳುವದು ಅವಶ್ಯಕವಾದದ್ದು. ಹಾಗೆ ಮಾಡದೇ ಇರುವದರಿಂದ ಇವರ ಮೈಹನತ್ತು ಅನೇಕ ಸಂದರ್ಭಗಳಲ್ಲಿ ನಿರರ್ಥಕವಾಗುತಲಿದೆ'' ಎಂದು ಆಕಾಲದ ಒಂದು ಲೇಖನದಿಂದ ಗೊತ್ತಾಗುವುದು.

ಈ ಲೇಖನದಿಂದ ಪೆಸ್ಟಲಾಟ್ಸಿಯವರು ಮಾಡುತಲಿದ್ದ ಮೈಹನತ್ತಿಗೆ ಉಂಟಾಗುತ್ತಿದ್ದ ಪ್ರತಿಬಂಧಕಗಳಿಗೂ ಭಯಪಡದೆ ಇವರು ಮಾಡುತ್ತಿದ್ದ ವಿದ್ಯಾಭ್ಯಾಸದ ಏರ್ಪಾಡು ಗೊತ್ತಾಗುತ್ತದೆ ಕ್ರಮವಾಗಿ ಇವರ ಮನೆಯಲ್ಲಿ ಭೋಜನ ಮಾಡಿಕೊಂಡು ವಿದ್ಯಾಭ್ಯಾಸ ಮಾಡತಕ್ಕವರ ಸಂಖ್ಯೆಯು ೪೦ ರವರಿವಿಗೂ ಆಯಿತು. ಉಪಪನ್ನರಾದ ಅನೇಕ ದೊಡ್ಡಮನುಷ್ಯರು ಕೊಡತಕ್ಕ ಸಹಾಯದ್ರವ್ಯವನ್ನು ಇವರಿಗೆ ಬರತಕ್ಕ ಸ್ವಂತ ಆಯತಿಯಜೊತೆಗೆ ಸೇರಿಸಿದಾಗ್ಯೂ ಇವರೆಲ್ಲರಿಗೂ ಅನ್ನವಸ್ತ್ರಗಳನ್ನು ಸರಬರಾಜುಮಾಡುವದೇ ಬಹಳ ಕಷ್ಟವಾಯಿತು. ಈ ಮಧ್ಯದಲ್ಲಿ ದುರದೃಷ್ಟದಿಂದ ಅನಾವೃಷ್ಟಿಯುಂಟಾಗಿ ದವಸಧಾನ್ಯಗಳ ಬೆಲೆಯು ಹೆಚ್ಚಾಯಿತು. ಅನೇಕ ತಂದೆ ತಾಯಿಗಳು ತಾವು ಮಕ್ಕಳನ್ನ ಕಳುಹಿಸಿದ್ದಕ್ಕೆ ಕ್ಯೋಸ್ಕರ ತಮಗೇನಾದರೂ ಸಹಾಯ ಮಾಡಬೇಕೆಂದು ಕೇಳುವದಕ್ಕುಪಕ್ರವಿಸಿದರು. ಅನಾಥರಾದ ಅನೇಕ ಮಕ್ಕಳು ಕೃತಘ್ನರಾಗಿ ಕೈಗೆ ಸಿಕ್ಕಿದ್ದನ್ನು ತೆಗೆದುಕೊಂಡು ಓಡಿಹೋದರು. ಅನೇಕಜನ ಭೃತ್ಯರು ಬಹಳ ಅಪ್ರಾಮಾಣಿಕರಾಗಿ ಪದಾರ್ಥಗಳನ್ನು ಕದಿಯುವದಕ್ಕೆ ಉಪಕ್ರಮಿಸಿದರು. ಪೆಸ್ಟಲಾಟ್ಸಿಯವರ ಉಪಕಾರಕ್ಕೆ ಪಾತ್ರರಾದವರಲ್ಲಿಯೂ ಅನೇಕರು ತಾವು ಅಪೇಕ್ಷಿಸಿದ್ದನ್ನು ಪೆಸ್ಟಲಾಟ್ಸಿಯವರಿಂದ ಹೊಂದತಕ್ಕವಕಾಶವಿಲ್ಲದೇ ಹೋದದ್ದರಿಂದ ಅವರ ವಿದ್ಯಾಭ್ಯಾಸ ಪ್ರಯತ್ನವನ್ನು ನಿಂದಿಸುವದಕ್ಕೆ ಉಪಕ್ರಮಿಸಿದರು. ಇವರಿಗೆ ದ್ರವ್ಯ ಸಹಾಯವನ್ನು ಮಾಡುತ್ತಿದ್ದವರು ಈ ನಿಂದೆಯು ನಿಶ್ಚಯವಾದದ್ದೆಂದು ನಂಬಿ

ಪೆಸ್ಟಲಾಟ್ಸಿಯವರ ಚರಿತ್ರೆ.

"ಪೆಸ್ಟಲಾಟ್ಸಿಯವರು ಅನಾಥರಾದ ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಿಸುವದೂ ಅಲ್ಲದೆ ಅನ್ನವಸ್ತ್ರವನ್ನು ಕೊಟ್ಟು ಸಾಕುತ್ತಲಿದಾರೆ ಇವರ ಆಯತಿಗಿಂತಲೂ ಇವರು ಮಾಡತಕ್ಕ ಖರ್ಚು ಹೆಚ್ಚಾಗಿದೆ. ಇಂಥಾ ಪಾರಮಾರ್ಥಿಕ ಬುದ್ಧಿವುಳ್ಳವರಿಗೆ ಮಾಡಲ್ಪಟ್ಟ ಸಹಾಯವು ಅತ್ಯಂತ ಫಲಕಾರಿಯಾದದ್ದು. ಪೆಸ್ಟಲಾಟ್ಸಿಯವರು ಈ ವಿದ್ಯಾರ್ಥಿಗಳಿಗೆ ಅನ್ನವಸ್ತ್ರಗಳ ವಿಷಯದಲ್ಲಿ ಮಾಡಿರತಕ್ಕ ಏರ್ಪಾಟು ಬಹಳ ಶ್ಲಾಘನೀಯವಾಗಿದೆ. ವಿದ್ಯಾರ್ಥಿಗಳಿಗೆ ಬಹಳ ಬೆಲೆಯಾಗದೆ ಇರತಕ್ಕ ಭೋಜನವನ್ನು ಏರ್ಪಡಿಸಿದಾರೆ. ಹುಡುಗರು ರೊಟ್ಟಿ, ತರಕಾರಿವಿನಾ ಇನ್ಯಾವ ಆಹಾರವನ್ನೂ ತೆಗೆದುಕೊಳ್ಳುವದಿಲ್ಲ. ನಿರ್ಮಲವಾದ ನೀರುವಿನಾ ಇನ್ನ್ಯಾವದನ್ನೂ ಸೇವಿಸುವದಿಲ್ಲ. ಸುಲಭವಾದ ಬೆಲೆಯುಳ್ಳ ಶಾಖವಾದ ಉಡಿಗೆಗಳನ್ನು ಹಾಕಿಕೊಳ್ಳುತ್ತಾರೆ. ವ್ಯಾಯಾಮಾರ್ಥವಾಗಿ ಆಡತಕ್ಕ ಆಟಗಳ ಜೊತೆಗೆ ತೋಟಮೊದಲಾದವುಗಳನ್ನು ಮಾಡಿಕೊಂಡು ತರಕಾರೀ ಹಣ್ಣು ಗೆಡ್ಡೆ ಗೆಣಸು ಮೊದಲಾದವುಗಳನ್ನು ತಾವೇ ಬೆಳೆದು ತಾವೇ ಉಪಯೋಗಿಸಿಕೊಳ್ಳುತ್ತಾರೆ. ಕಾಲಿಗೆ ಮೇಜೋಡು ಮೋಜಾ ಮೊದಲಾದವುಗಳನ್ನುಕೂಡಾ ಹಾಕಿಕೊಳ್ಳುವದಿಲ್ಲ. ಆದಾಗ್ಯೂ ಆರೋಗ್ಯ ದೃಢಕಾಯರಾಗಿ ಇರುತ್ತಾರೆ. ವಿದ್ಯಾಭ್ಯಾಸದ ವಿಷಯದಲ್ಲಿ ಇವರ ಶ್ರದ್ಧೆಯೂ, ಸಾಹಸವೂ ನೋಡಿದವರಿಗೆಲ್ಲಾ ವಿಸ್ಮಯವನ್ನುಂಟುಮಾಡುತ್ತದೆ. ಈ ವಿದ್ಯಾರ್ಥಿಗಳಲ್ಲಿ ಕಿತುಂಟರಾಗಿಯೂ ದುರ್ಮಾರ್ಗಪ್ರವರ್ತಕರಾಗಿಯೂ ಅನೇಕರು ಇದ್ದರು. ಇವರನ್ನು ತಿದ್ದುವದು ಅಸಾಧ್ಯವೆಂದು ಅವರ ತಂದೆತಾಯಿಗಳು ಭಾವಿಸಿದ್ದರು. ಇಂಥಾ ಜನರೆಲ್ಲಾ ಪೆಸ್ಟಲಾಟ್ಸಿಯವರ ಶಿಕ್ಷೆಯಲ್ಲಿ ಎರಡುಮೂರು ವರುಷಗಳು ಇರುವದರೊಳಗಾಗಿ ಸಾಧುಗಳಾಗಿಯೂ, ಸನ್ಮಾರ್ಗಪ್ರವರ್ತಕರಾಗಿಯೂ ಪರಿಣಮಿಸಿದರು. ಕೆಲವುಜನ ತಂದೆತಾಯಿಗಳು ಬಹಳ ಕೃತಘ್ನರಾಗಿದ್ದರು. ವಿದ್ಯಾರ್ಥಿಗಳು ಪೆಸ್ಟಲಾಟ್ಸಿಯವರ ಪೋಷಣೆಯಲ್ಲಿ ಸ್ವಲ್ಪಮಟ್ಟಿಗೆ ಆರೋಗ್ಯದೃಢಕಾಯರಾಗಿಯೂ ವಿದ್ಯಾವಂತರಾಗಿಯೂ ಆದದ್ದನ್ನು ನೋಡಿ ಅವರು ಸಂಪೂರ್ಣವಾಗಿ ವಿದ್ಯಾವಿನಯಸಂಪನ್ನರಾಗಿ ದ್ರವ್ಯಾರ್ಜನೆಯನ್ನು ಮಾಡುವ ಶಕ್ತಿಯನ್ನು ಹೊಂದುವವರಿಗೂ ಅವರು ಎಷ್ಟು ಕೇಳಿಕೊಂಡಾಗ್ಯೂ ಅವರ ಸ್ವಾಧೀನದಲ್ಲಿ ಇಡದೆ ಕರೆದುಕೊಂಡು ಹೋಗುತ್ತಿದ್ದರು.

ಅವತಾರವು ಅಲ್ಲಿಗೆ ಪೂರ್ತಿಯಾಯಿತೆಂದು ಭಾವಿಸುತ್ತಿದ್ದರು. ದೈವಾಧೀನದಿಂದಲೂ ಪ್ರಪಂಚಕ್ಕೆ ಇವರಿಂದ ಆಗಬೇಕಾದ ಉಪಕಾರವು ವಿಶೇಷವಾಗಿ ಇದ್ದದ್ದರಿಂದಲೂ ಇವರಿಗೆ ಆಗ ಬಂದ ವಿಪತ್ಪರಂಪರೆಗಳು ಮಧ್ಯಾಹ್ನದ ಸೂರ್ಯನ ಎದುರಿಗೆ ಮಂಜು ಮಾಯವಾಗುವಂತೆ ಮಾಯವಾದವು. ವರ್ತಮಾನಪತ್ರಿಕಾಕರ್ತರಾದ ಪೆಸ್ಟಲಾಟ್ಸಿಯವರ ಮಿತ್ರರಾದ ಐಸ್‌ಲೆಬ್ ಎಂಬುವರು ಇವರಿಗೆ ಉಂಟಾದ ಅನರ್ಥಗಳನ್ನು ಕೇಳಿ ಬಹಳ ವಿಷಾದಪಟ್ಟು ಇವರಿಗೆ ಒಂದು ಹೊಸವೃತ್ತಿಯನ್ನು ಕಲ್ಪಿಸಬೇಕೆಂದು ನಿಶ್ಚಯಿಸಿದರು. ವಿದ್ಯಾಭ್ಯಾಸದ ವಿಷಯದಲ್ಲಿ ಪೆಸ್ಟಲಾಟ್ಸಿಯವರಿಗೆ ಇರತಕ್ಕ ವೈದುಷ್ಯವು ಅಸಾಧಾರಣವಾಗಿ ಇದ್ದದ್ದರಿಂದ ಆ ವಿಷಯದಲ್ಲಿ ಪೆಸ್ಟಲಾಟ್ಸಿಯವರು ತಮ್ಮ ತಾತ್ಪರ್ಯವನ್ನು ಗರ್ಭೀಕರಿಸಿ ಆಗಾಗ್ಗೆ ತಮ್ಮ ವರ್ತಮಾನಪತ್ರಿಕೆಗೆ ಬರೆಯುವಂತೆ ಮಾಡಿದರು. ಜನರು ವಿದ್ಯಾವಂತರಾಗಿಯೂ ಸ್ವಶಕ್ತಿಯಿಂದ ಜೀವಿಸುವ ಸಾಮರ್ಥ್ಯ ಉಳ್ಳವರಾಗಿಯೂ, ಧರ್ಮಮಾರ್ಗಪ್ರವರ್ತಕರಾಗಿಯೂ ಆಗಬೇಕಾದರೂ, ಇಹಪರಗಳನ್ನು ಸಾಧಿಸಬೇಕಾದರೂ, ಅವರ ವಿದ್ಯಾಭ್ಯಾಸಕ್ರಮವು ಯಾವ ರೀತಿಯಲ್ಲಿಡಬೇಕು ಎಂಬ ವಿಷಯದಲ್ಲಿ ಐಸ್‌ಲೆಬರವರ ಪತ್ರಿಕೆಯು ೪೦ ಸಂಚಿಕೆಗಳಿಗೆ ೪೦ ಲೇಖನಗಳನ್ನು ಬರೆದರು ಈ ಲೇಖನಗಳನ್ನೆಲ್ಲಾ ಸೇರಿಸಿ ಒಂದು ಪುಸ್ತಕರೂಪವಾಗಿ "ದಿ ಈವ್‌ನಿಂಗ್ ಅವರ್ ಆಫ್ ಎ ಹರ್‌ಮಿಟ್" ಅಂದರೆ "ಒಬ್ಬ ವಾನಪ್ರಸ್ಥನ ಸಾಯಂಕಾಲದ ಕಾಲಕ್ಷೇಪ" ಎಂಬ ಅಭಿಧಾನದಿಂದ ಮುದ್ರಿಸಿ ಇಹರೆ. ಈ ಗ್ರಂಥದಿಂದ ಕೆಲವು ವಿಷಯಗಳನ್ನು ಇಲ್ಲಿ ಸೂಚಿಸುತ್ತೇವೆ.

ವ್ಯಾಕರಣ.

ಲಿಂಗಶಬ್ದವು ಲೋಕದಲ್ಲಿ, ಗುರುತು, ಶಿವ, ಮೊದಲಾದ ಅನೇಕಾರ್ಥವುಳ್ಳದ್ದಾಗಿದ್ದರೂ ವ್ಯಾಕರಣದಲ್ಲಿ ಮಾತ್ರ, "ಲೀನಮರ್ಥಂಗಮಯತಿ" ಎಂಬ ವ್ಯುತ್ಪತ್ತಿಯಿಂದ ವಾಚಕಸಾಮಾನ್ಯವೂ ಲಿಂಗವೆಂದು ವ್ಯವಹರಿಸಿರುವರು. ಮತ್ತು ಇಂಥಾ ಲಿಂಗವು ನಾಮರೂಪವೆಂತಲೂ, ಧಾತುರೂಪವೆಂತಲೂ, ಎರಡು ತೆರನಾಗಿರುವುದು.

ತಾವು ಕೊಡುತ್ತಿದ್ದ ಸಹಾಯದ್ರವ್ಯವದ್ದನ್ನು ನಿಲ್ಲಿಸಿದರು. ಪೆಸ್ಟಲಾಟ್ಸಿಯವರು ತಮ್ಮ ಆಯತಿಯೆಲ್ಲಾ ಖರ್ಚಾಗುವವರಿವಿಗೂ ವಿದ್ಯಾಭ್ಯಾಸದ ಏರ್ಪಾಡುಗಳನ್ನು ಕ್ರಮವಾಗಿ ನಡೆಸಿದರು. ಇವರ ಆಸ್ತಿಯು ಹೋಯಿತು. ಇತರರ ಸಹಾಯವು ಬರಲಿಲ್ಲ. ಬಹು ಕ್ಲೇಶದಿಂದ ಇವರು ಈ ವಿದ್ಯಾಭ್ಯಾಸದ ಏರ್ಪಾಡನ್ನು ಬಿಡಬೇಕಾಯಿತು. ಈ ರೀತಿಯಲ್ಲಿ ಬಿಟ್ಟಾಗ ಇವರು ತಮ್ಮ ಆಸ್ತಿಯನ್ನೆಲ್ಲಾ ಕಳೆದುಕೊಂಡದ್ದಲ್ಲದೆ ಸ್ವಲ್ಪ ಸಾಲಗಾರರಾಗಿಯೂ ಇದ್ದರು. ಆಗ ಆ ಪುರನಿವಾಸಿಗಳ ಪರಾರ್ಥವಾಗಿ ಸರ್ವಸ್ವವನ್ನೂ ಕಳೆಕೊಂಡು ದೀನದಶೆಗೆ ಬಂದಿದ್ದ ಇವರನ್ನು ನೋಡಿ ಬಹಳ ಸಂತಾಪಪಟ್ಟು ಇವರಿಗೆ ಸಾರ್ಥವಾಗಿ ಒಂದು ಮನೆಯನ್ನು ಮಾಡಿಕೊಟ್ಟರು. ಆದಾಗ್ಯೂ ಇವರು ಕುಟುಂಬಸಮೇತವಾಗಿ ಅನ್ನೋದಕಗಳಿಗೂ ಮೊರ್ಗವಿಲ್ಲದೆ ಇದ್ದದ್ದನ್ನು ಕೇಳಿ ಎಲಿಸ ಬೆತ್ ನಾಯಸ್ ಎಂಬ ಒಬ್ಬ ದೊರಸಾನಿಯವರು ಸ್ವಲ್ಪ ಸಹಾಯವನ್ನು ಮಾಡಿದರು. ಈ ಸಹಾಯದಿಂದ ಪೆಸ್ಟಲಾಟ್ಸಿಯವರು ಪ್ರಾಣಧಾರಣೆಗೆ ಮೊರ್ಗವನ್ನು ಮಾಡಿಕೊಂಡು ಕೂಲಿ, ಕೃಷಿಮೊದಲಾದವುಗಳಿಂದ ಜೀವನವನ್ನು ಮಾಡುತ್ತಾ ಕೆಲವು ಗ್ರಂಥಗಳನ್ನು ರಚಿಸುವದಕ್ಕುಪಕ್ರಮಿಸಿದರು. ಲೆನರ್ಡ್ ಮತ್ತು ಗರಟ್ರೂಡ್ ಎಂಬ ಲೋಕೋತ್ತರವಾದ ಈ ಗ್ರಂಥದಲ್ಲಿ ಪೆಸ್ಟಲಾಟ್ಸಿಯವರು ತಮಗೆ ಉಂಟಾಗಿದ್ದ ಈ ವಿಷಮಕಾಲದಲ್ಲಿ ಅನ್ನೋದಕಗಳಿಗೆ ಏರ್ಪಾಡು ಮಾಡಿ ಪ್ರಾಣದಾನವನ್ನು ಮಾಡಿದ ಎಲಿಸ ಬೆತ್ ನಾಯಪ್‌ರವರ ಅನ್ಯಾದೃಶವಾದ ಚರಿತ್ರೆಯನ್ನು ರಚಿಸಿದಾರೆ.

ಈ ಕಾಲದಲ್ಲಿ ಪೆಸ್ಟಲಾಟ್ಸಿಯವರ ಅವಸ್ಥೆಯು ಬಹಳ ಶೋಚನೀಯವಾಗಿತ್ತು. ಅನ್ನವಸ್ತ್ರಗಳಿಗೆ ಸಂಪಾದಿಸುವುದೇ ಕಷ್ಟವಾಗಿತ್ತು. ತಾವು ಬರೆದ ಗ್ರಂಥವು ಎಷ್ಟು ಲೋಕೋತ್ತರವಾಗಿದ್ದಾಗ್ಯೂ ಉತ್ತರೋತ್ತರ ಈ ಗ್ರಂಥವು ಪುಸ್ತಕ ಮಾರತಕ್ಕವರಿಗೆ ಕಲ್ಪವೃಕ್ಷವಾಗಿ ಪರಿಣಮಿಸಿದಾಗ್ಯೂ ಅದನ್ನು ಮುದ್ರಿಸುವದಕ್ಕೂ ಇವರಿಗೆ ಗತಿ ಇರಲಿಲ್ಲ. ಉಪಪನ್ನರಾಗಿಯೂ, ಸಹಾಯ ಮಾಡುವದಕ್ಕೆ ಸಮರ್ಥರಾಗಿಯೂ ಇದ್ದ ಜನರೆಲ್ಲಾ "ತನ್ನ ಜೀವನವನ್ನು ಮಾಡಿಕೊಳ್ಳಿದವನು ಹ್ಯಾಗೆತಾನೇ ಪರೋಪಕಾರಮಾಡಾನೂ ಇವನಿಗೆ ಸಹಾಯು ಮಾಡುವದು ಪ್ರಯೋಜನಕರವಾದದ್ದಲ್ಲ" ಎಂದು ಉದಾಸೀನ ಮಾಡುವದಕ್ಕೆ ಉಪಕ್ರಮ ಮಾಡಿದರು. ಈ ಮಾತುಗಳಿಂದಲೂ ಆಗ ಉಂಟಾಗಿದ್ದ ತಾಪತ್ರಯಗಳಿಂದಲೂ ಜೀವಿಸುವದಕ್ಕಿಂತ ಮರಣವೇ ಲೇಸೆಂದು ಇವರು ಯೋಚಿಸುತ್ತಿದ್ದರು. ಸಾವಕಾಶವಾಗಿ ಜನರೆಲ್ಲರೂ ಇವರ

ಗಿರುವದು. ದೈವತವಿುವಳ್, ದೈವತವಿಾತಂ, ದೈವತವಿುದು, ಇತ್ಯಾದಿಗಳೀ ಸಂಕೀರ್ಣವೆಂದು ತಿಳಿಯುವದು. ವಿಶೇಷಣವಾಗಿ ವಿಶೇಷ್ಯದ ಲಿಂಗಕ್ಕೆ ಅಧೀನವಾದ ಸಂಸ್ಕಾರೋಪಗಾಹಿಲಿಂಗವು ಉಪಸರ್ಜನವು. ಇದಾದರೂ ಇನಿಯಳ್ಳಾದಲ್ಲಿ, ಇನಿಯಳಂಗನೆ, ಎಂಬುದು ಸ್ತ್ರೀಲಿಂಗವೆಂತಲೂ, ಇನಿಯುಂಕಾದಲಂ, ಇನಿಯಂಕಾಂತಂ ಎಂಬುದು ಪುಲ್ಲಿಂಗವೆಂತಲೂ, ಇನಿದುಘೃತಂ, ಇನಿದುನೀಲ್, ಎಂಬುದು ನಪುಂಸಲಿಂಗವೆಂತಲೂ, ಕಿರಿಯಳ್‌ಪೊಳ್ತು, ಕಿರಿಯಂತೊಳ್ತು, ಎಂಬುದು ಸ್ತ್ರೀನಪುಂಸಕಲಿಂಗವೆಂತಲೂ, ಬಿಟ್ಟದಳ್ಳೀವತೆ, ಬಿಟ್ಟತುದೇವತೆ, ಎಂಬುದು ಸ್ತ್ರೀನಪುಂಸಕಲಿಂಗವೆಂತಲೂ, ಪಿರಿಯುಂಸೂರ್ಯಂ, ಪಿರಿದುಸೂರ್ಯಂ ಎಂಬುದು ಪುನ್ನಪುಂಸಕಲಿಂಗವೆಂತಲೂ ಒಳ್ಳಿವಳ್ದೈವತಂ, ಒಳ್ಳಿದಂದೈವತಂ, ಒಳ್ಳಿತುದ್ದೈವತಂ ಎಂಬುದು ಸ್ತ್ರೀಪುನ್ನಪುಂಸಕಲಿಂಗವೆಂತಲೂ ಏಳುವಿಧವಾಗಿರುವದು.

ವಿಶೇಷಣವಾಗಿದ್ದರೂ ವಿಶೇಷ್ಯಲಿಂಗಾನಧೀನನಾಗಿ ನಿಯತಸಂಸ್ಕಾರೋಪಗಾಹಿಲಿಂಗವು ಅವಿಷ್ಟವೆಂಬುದು, ಇದೂ ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕಲಿಂಗವೆಂದು ಮೂರುವಿಧವಾಗಿರುವುದು. ಇದರಲ್ಲಿ ಅರಸಂಜಗಕ್ಕೆತಾಯ್, ಗುರುವೆಜಗಕ್ಕೆವಾತೆ, ಇತ್ಯಾದಿಗಳು ಸ್ತ್ರೀಲಿಂಗಗಳು. ಸತ್ಯಮೇತಂತಿ, ಸೈರಣೆಯೇಬಂಧು, ಇತ್ಯಾದಿಗಳು ಪುಲ್ಲಿಂಗಗಳು. ಈಯೆಡೆಯೊಳೆವುಗೆ ಗುರುವೇಪ್ರಮಾಣಂ, ಅಂಗನೆಮದನಕೈಪಿಡಿ, ಇತ್ಯಾದಿಗಳು ನಪುಂಸಕಲಿಂಗಗಳು ಎಂದು ತಿಳಿಯುವುದು. ಲಿಂಗಾಧೀನಸಂಸ್ಕಾರಗಾಹಿಯಾದುದು ಅವ್ಯಕ್ತಲಿಂಗವು. ಇದರಲ್ಲಿ ಭೇದವಿಲ್ಲವು. ನೀಂತಾಯ್, ನೀಂಮಗಳ್ ನೀಂತಂದೆ, ನೀಂಮಗಂ, ನೀಂಮರಂ, ನೀಂಗಿಡು, ಇತ್ಯಾದಿಗಳು ಅವ್ಯಕ್ತಲಿಂಗಗಳು. ಈ ಪ್ರಕಾರವಾಗಿ ಲಿಂಗವೆಂಬುದು ಅನೇಕಾವಾಂತರ ಭೇದಭಿನ್ನವಾಗಿದ್ದರೂ ಸಂಕ್ಷೇಪವಾಗಿ ಮೂರು ವಿಧವಾಗಿರುವುದು. ಮಧ್ಯಮಪಕ್ಷದಲ್ಲಿ ಆರುವಿಧವು. ವಿಸ್ತಾರವಾಗಿ ಹದಿನೆಂಟುಭೇದವುಳ್ಳದ್ದು. ಆದರೂ ಎಲ್ಲವೂ ಸ್ತ್ರೀಪುನ್ನಪುಂಸಕಲಿಂಗರೂಪನಾದ ಮೂರುಭೇದದಲ್ಲೆ ಅಂತರ್ಭಾವವನ್ನು ಹೊಂದಿರುವದರಿಂದ ಸರ್ವರೂ ಲಿಂಗತ್ರಯವೆಂದೇ ವ್ಯವಹರಿಸುವರು. ಆದುದರಿಂದ ಶಬ್ದಾನುಶಾಸನದಲ್ಲಿ ಸ್ತ್ರ್ಯರ್ಥಃ, ಸ್ತ್ರೀ, ಪುಮರ್ಥಃಪುರ್ವಾ, ನಾನ್ಯೋತ್ ಎಂದು ಸಾಮಾನ್ಯನಾಗಿ ಮೂರುಲಿಂಗವೆ ಹೇಳಲ್ಪಟ್ಟದೆ. ಇಂಥಾ ಲಿಂಗವು ಸಂಸ್ಕೃತದಲ್ಲಿ ಸತ್ವರಜಸ್ತಮೋಗುಣಗಳ ಉಪಚಯಾಪಚಯಸನುತಾದಿಭೇದಗಳಿಂದ ಅಯಾಯಲಿಂಗವ್ಯವಹಾರವನ್ನು ಹೊಂದುವುವೆಂದು ಲಿಂಗ

ಆದರೆ ಕೆಲವು ವೈಯ್ಯಾಕರಣರು ಧಾತ್ವತಿರಿಕ್ತವಾದ ನಾಚಕಗಳಿಗೆ ಲಿಂಗಸಂಜ್ಞೆಯನ್ನು ಹೇಳಿರುವರು. ಅದು ಸಂಸ್ಕೃತವ್ಯಾಕರಣದಲ್ಲಿ ಹೇಳಿರುವ ಪ್ರಕಾರ ಕಾಂಡೆ, ಕುಂಡ್ಯೈ, ಇತ್ಯಾದಿ ಲಕ್ಷ್ಯಗಳಲ್ಲಿ ದೋಷಸಂಭವಿಸುವದರಿಂದ ಅಲ್ಲಿ ಮಾತ್ರ ಧಾತುವಿಭಕ್ತ್ಯಾದಿ ವರ್ಜಿತಶಬ್ದಗಳಿಗೇ ಲಿಂಗಸಂಜ್ಞೆ ಉಂಟೆಂದು ಹೇಳಬೇಕೆ ಹೊರ್ತು ಕನ್ನಡಭಾಷೆಯಲ್ಲಿ ಪ್ರಯೋಜನವಿಲ್ಲ. ದರ್ಪಣಕಾರನು ಕನ್ನಡದಲ್ಲಿ ತನ್ನ ಸಂಕೇತಕ್ಕೆ ವಿರೋಧವಾಗುವ ದೆಂದು ಸಂಸ್ಕೃತಮಾರ್ಗವನ್ನನುಸರಿಸಿ ಧಾತುಪ್ರತ್ಯಯಗಳನ್ನು ಬಿಟ್ಟು ಲಿಂಗಸಂಜ್ಞೆ ಮಾಡಬೇಕೆಂದು ಹೇಳಿರುವನೇ ಹೊರ್ತು ಮತ್ತೇನೂ ದೋಷವಿಲ್ಲ. ಆದುದರಿಂದಲೆ ಶಬ್ದಾನುಶಾಸನಕಾರನು ಹೇಳಿರುವ ಕ್ರಮದಲ್ಲಿ ಧಾತುವಿಗೆ ಲಿಂಗಸಂಜ್ಞೆ ಇದ್ದರೂ ದೋಷವಿಲ್ಲ.

ಮತ್ತು 'ಳುಕ್ಚಸ್ತ್ರಿಯಾಂ, ಅತೇತೋತಂಪುಂಸ್ಯದ್ವಿದೂಧೋಃ, ದಗಿಮಾ ದೌನಪಿ, ಇತ್ಯಾದಿ ಸೂತ್ರಗಳಲ್ಲಿ ಸ್ತ್ರೀಲಿಂಗ ಪುಲ್ಲಿಂಗ, ನಪುಂಸಕಲಿಂಗಗಳಲ್ಲಿ, ಕಾರ್ಯ ವಿಶೇಷಗಳನ್ನು ಹೇಳಿರುವದರಿಂದ, ಅರ್ಥಗಳಲ್ಲಿರುವ ಕರ್ಮವಿಶೇಷಗಳಿಗೂ ಲಿಂಗ ವ್ಯವಹಾರವುಂಟೆಂದು ಹೇಳುವರು. ಈಯರ್ಥಗತವಾದ ಲಿಂಗವಾದರೊ ಸಾಮಾನ್ಯ ವಾಗಿ ಸ್ತ್ರೀಪುನ್ನಪುಂಸಕಭೇದಗಳಿಂದ ಮೂರು ತೆರವಾಗಿದ್ದರೂ, ಶುದ್ಧ, ವಿಶ್ರ, ಸಂ ಕೀರ್ಣ, ಉಪಸರ್ಜನ, ಅವಿಷ್ಟ, ಅವ್ಯಕ್ತ, ಎಂದು ಆರು ವಿಧವಾಗಿಯೂ ವ್ಯವಹರಿಸ ಲ್ಪಡುವದು. ಅವುಗಳಲ್ಲಿ ನಿಯತವಾಗಿ ಏಕಸಂಸ್ಕಾರೋಪಗ್ರಾಹಿಯಾದ ಲಿಂಗವು ಶುದ್ಧವೆಂಬುವದು, ಇದು ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕಲಿಂಗವೆಂದು ಮೂರುಭಾಗ ವಾಗಿ ವಿಂಗಡಿಸಲ್ಪಡುವದು. ಅವುಗಳಲ್ಲಿ ಅಕ್ಕನಿವಳ್, ತಂಗಿಯೀಕೆ, ಎಂದು ಮೊದ ಲಾದವುಗಳು ಸ್ತ್ರೀಲಿಂಗಗಳೆಂತಲೂ, ಅಣ್ಣನಿವಂ, ತಮ್ಮನೀತಂ ಮೊದಲಾದವು ಪುಲ್ಲಿಂಗಗಳೆಂತಲೂ, ನೆಲನಿದು, ಪೊಲನಿದು ಮೊದಲಾದವು ನಪುಂಸಕಲಿಂಗಗಳೆಂತಲೂ ತಿಳಿಯುವೀಕು. ಕೇವಲ ಸಂಸ್ಕಾರೋಪಗ್ರಾಹಿಯಾದುದು ಮಿಶ್ರವೆಂಬುದು, ಇದೂ, ಸ್ತ್ರೀಪುಂಸಲಿಂಗ, ನಪುಂಸಕಲಿಂಗ, ಪುನ್ನಪುಂಸಕಲಿಂಗವೆಂದು ಮೂರುವಿಧವಾಗಿರುವ ದು. ಇದರಲ್ಲಿ ತೊಳ್ತಿವಳ್, ತೊಳ್ತೀತು ಎಂಬುವದು ಸ್ತ್ರೀಪುಂಸಲಿಂಗವೆಂತಲೂ, ದೇವದತ್ತೆಯಿವಳ್, ದೇವದತ್ತೆ ಇದು, ಎಂಬುದು ಸ್ತ್ರೀನಪುಂಸಕಲಿಂಗವೆಂತಲೂ, ಸೂರ್ಯನೀತಂ, ಸೂರ್ಯನಿದು ಎಂಬುದು ಪುನ್ನಪುಂಸಕಲಿಂಗವೆಂತಲೂ, ತಿಳಿಯುವದು. ಸಂಸ್ಕಾರತ್ರಯೋಪಗ್ರಾಹಿಲಿಂಗವೇ ಸಂಕೀರ್ಣವೆಂಬುವುದು. ಇದು ಒಂದೇವಿಧವಾ

ವೀಣೆ, ಮಾಲೆ ವೇಣಿದಲಾದ ಸಂಸ್ಕೃತದಿಂದುಂಟಾದ ಶಬ್ದಗಳು ತದ್ಭವಗಳೆನಿಸಿಕೊಳ್ಳುವವೆ.

ಆದರೆ ಇಲ್ಲಿ ಕೆಲವರು ವೀಣೆ, ಮಾಲೆ, ನದಿ ಮೊದಲಾದ ಏಕದೇಶವಿಕಾರವನ್ನು ಹೊಂದಿರುವ ಶಬ್ದಗಳನ್ನು ತತ್ಸಮಗಳಲ್ಲಿ ಸೇರಿಸಿರುವರು. ಶಾಸನಕಾರನು ತದ್ಭವಗಳಲ್ಲೇ ಸೇರಿಸಿರುವನು. ಹೇಗಾದರೂ ಕನ್ನಡದಲ್ಲಿ ಈಯುಭಯಜಾತೀಯವಾದ ಶಬ್ದಗಳೂ ಉಂಟೆಂದು ನಾಮಲಿಂಗದಲ್ಲಿ ಸೇರಿಸಿರುತ್ತೆ.

ಘಟ, ಪಟ, ಮೊದಲಾದ ಸಂಸ್ಕೃತ ಶಬ್ದಗಳು ಯಾವ ವಿಕಾರವನ್ನೂ ಹೊಂದದೆ ಭಾಷೆಯಲ್ಲಿ ವಿಭಕ್ತಿಪ್ರತ್ಯಯಗಳನ್ನು ಮಾಡಿ ಪ್ರಯೋಗಿಸಿರುವದು ತತ್ಸಮಗಳೆಂದೆನ್ನುವರು. ಮತ್ತೆ ಕೆಲವರು ತತ್ಸಮ, ಸಮಸಂಸ್ಕೃತವೆಂದು ಎರಡುವಿಧವಾಗಿ ಅಂಗೀಕರಿಸಿ ತದ್ಭವ ಸೂತ್ರಗಳಿಗೆ ಅವಿಷಯವಾದ ಮಣಿಮಂಚಾದಿಗಳನ್ನು ಸಮಸಂಸ್ಕೃತವೆಂತಲೂ, ತದ್ಭವ ಸೂತ್ರಗಳಿಗೆ ವಿಷಯವಾಗಿದ್ದರೂ ಅವುಗಳಿಂದ ವಿಹಿತವಾದ ಕಾರ್ಯಗಳನ್ನು ಮಾಡದೆ, ಶ್ರೀ, ಶಶಿ, ಘಟ, ಪಟ ಮೊದಲಾದ ಶಬ್ದಗಳನ್ನು ಹಾಗೆಯೇ ಪ್ರಯೋಗಿಸಿದ್ದರೆ ಅವುಗಳನ್ನು ತತ್ಸಮಗಳೆಂತಲೂ ವ್ಯವಹರಿಸುವರು ಇವುಗಳಲ್ಲಿ ವೈಲಕ್ಷಣ್ಯವೇನೂ ಇಲ್ಲದ್ದರಿಂದ ಶಾಸನಕಾರನು ಉಭಯವಿಧವಾದ ಶಬ್ದಗಳನ್ನೂ ತತ್ಸಮವೆಂದೇ ವ್ಯವಹರಿಸಿರುವನು. ದೇಶಭಾಷೆಗಳಲ್ಲಿ ಮಾತ್ರ ಪ್ರಸಿದ್ಧವಾದ ನೆಲ, ಪೊಲ, ಬೆಟ್ಟ, ಗಟ್ಟ ಮೊದಲಾದ ಅಸಂಸ್ಕೃತ ಶಬ್ದಗಳೇ ದೇಶ್ಯಶಬ್ದಗಳೆನಿಸಿಕೊಳ್ಳುವುವು. ಇಂಥಾ ಚತುರ್ವಿಧ ಲಿಂಗಗಳೇ ಸುಬ್ವಿಭಕ್ತಿಗಳಿಗೆ ಸಾಧಕವಾದ ಪ್ರಕೃತಿಗಳು ವ್ಯಾಕರಣದಲ್ಲಿ ಪ್ರಸಿದ್ಧವಾಗಿರುವುವು.

ಧಾತುಗಳಿಗೆ ಲಿಂಗಸಂಜ್ಞೆಯನ್ನು ಹೇಳಿದ್ದರೂ ಆಖ್ಯಾತಪ್ರತ್ಯಯಗಳಿಂದ ಬಾಧಿತವಾಗುವುದರಿಂದ ಧಾತುಗಳಮೇಲೆ ಸುಬ್ವಿಭಕ್ತಿಗಳು ಒರುವದಿಲ್ಲ.

ಬಾಳೆ.

ಬಾಳೆಗೊನೆ ಹೊರಟನಂತರ ೭ ತಿಂಗಳಿಗೆ ಕಡಿಯುವುದಕ್ಕೆ ಅನುಕೂಲವಾಗುತ್ತದೆ. ಗೊನೇಮೇಲೆಯೇ ೯ ಕಾಣ್ಣಾಗಬೇಕಾದರೆ ಇನ್ನು ಎರಡು ತಿಂಗಳು ಕಾಲ

ವ್ಯವಸ್ಥೆಯನ್ನು ಪತಂಜಲಿ ಮೊದಲಾದವರು ಮಾಡಿರುವರು. ಆದರೆ ಗುಣಪ್ರಯುಕ್ತವಾದ ಲಿಂಗಗಳು ಅಜ್ಞರಿಗೆ ತಿಳಿಯುವದು ಅಸಾಧ್ಯವಾಗಿರುವದು. ಆದುದರಿಂದ ಲೋಕವ್ಯವಹಾರದಿಂದಲೂ, ಕೋಶಾದಿಗಳಿಂದಲೂ ತಿಳಿದುಕೊಳ್ಳಬೇಕೆಂದು, 'ಲಿಂಗ ಮಶಿಷ್ಯಂ ಲೋಕಾಶ್ರಯತ್ವಾಲ್ಲಿಂಗಸ್ಯ' ಎಂಬ ವಾಕ್ಯದಿಂದ ಪತಂಜಲಿ ಮಹರ್ಷಿಗಳು ಸೂಚಿಸಿರುವರು. ಭಾಷೆಯಲ್ಲಾದರೋ, 'ಸ್ತನಕೇಶವತೀಸ್ತ್ರೀಸ್ಯಾಲ್ಲೋಮಶಃಪುರುಷಸ್ಮೃತಃ' ಎಂಬ ಪ್ರಮಾಣಾನುಸಾರವಾಗಿ ಆಯಾಯ ಗುರುತಿನಿಂದ ಕೂಡಿದ ಅರ್ಥವನ್ನು ಬೋಧಿಸುವ ಶಬ್ದಗಳು ಆಯಾಯ ಲಿಂಗಗಳೆಂದು ಊಹಿಸತಕ್ಕದ್ದು ಎಂದು ಹೇಳಿರುವರು. ಇದು ಅರ್ಥಗತಲಿಂಗವು.

ಮೇಲಿಹೇಳಿದ ಧಾತುನಾಮಗಳೆಂಬ ಲಿಂಗವು ಶಬ್ದಗತವಾದುದು. ಅರ್ಥಗತವಾದ ಲಿಂಗಗಳೂ ಶಬ್ದಗತಲಿಂಗದಲ್ಲೇ ಐಕ್ಯವನ್ನು ಹೊಂದಿರುವದು. ಇಂಥಾ ಲಿಂಗಗಳಲ್ಲಿ ಸುಬ್ವಿಭಕ್ತಿಗಳನ್ನು ಸೇರಿಸುವದಕ್ಕೆ ಸಾಧಕವಾದ ಪ್ರಕೃತಿವಿಶೇಷವೇ ನಾಮರೂಪಲಿಂಗವೆನ್ನಿಸಿಕೊಳುವದು. ಇದನ್ನು ಸಂಸ್ಕೃತ ವೈಯ್ಯಾಕರಣರು ಪ್ರಾತಿಪದಿಕವೆಂದು ಕರೆಯುತ್ತಾರೆ ಇಂಥಾ ಪ್ರಾತಿಪದಿಕವು ಕೃದಂತ, ತದ್ಧಿತಾಂತ, ಸಮಾಸನಾಮ ಎಂದು ನಾಲ್ಕು ಭೇದವುಳ್ಳದ್ದಾಗಿರುವುದು. ಇವುಗಳಲ್ಲಿ—ಪಾಡಿದ, ಬೇಡಿದ, ಪಾಡಿಸಿದ, ಬೇಡಿಸಿದ. ಇತ್ಯಾದಿ ಆಖ್ಯಾತಾತಿರಿಕ್ತವಾದ, ಮೂಲಧಾತು ಪ್ರತ್ಯಯಾಂತ ಧಾತುಗಳಮೇಲೆ ವಿಹಿತವಾದ ಕೃತ್ಸಂಜ್ಞಕ ಪ್ರತ್ಯಯಗಳಿಂದ ಕೂಡಿದವು ಕೃದಂತಲಿಂಗಗಳೆಂತಲೂ, ನಾಮರೂಪಲಿಂಗಗಳಮೇಲೆ ವಿಹಿತವಾದ ತದ್ಧಿತಸಂಜ್ಞಕಪ್ರತ್ಯಯಗಳಿಂದ ಕೂಡಿದ ಮಡಿವಳ, ಮೂಲೆಗಾರ ಇತ್ಯಾದಿಗಳು ತದ್ಧಿತಾಂತ ಲಿಂಗಗಳೆಂತಲೂ, ಏಕಾರ್ಥೀಭಾವರೂಪಸಾಮರ್ಥ್ಯದಿಂದ ಕಥಂಚಿದೇಕಪದತ್ವವನ್ನು ಹೊಂದಿರುವ ಸುಬಂತಸಮುದಾಯರೂಪಪ್ರಕೃತಿಯವಾಗಿ ಸಮಾಸಾಂತಪ್ರತ್ಯಯದಿಂದ ಕೂಡಿರುವದಾಗಿಯೂ, ಇಲ್ಲದಿರುವದಾಗಿಯೂ ಇರುವ, ಕುಡುವಿಲ್ಲ, ನಿಡುದೋಳ, ಅರಮಗ, ಮೊಗದಾವರೆ ಮೊದಲಾದವುಗಳು, ಸಮಾಸಲಿಂಗಗಳೆಂತಲೂ, ಈ ಮೂರುವಿಧವಾದ ಲಿಂಗಕ್ಕಿಂತಲೂ ಬೇರೆಯಾದ ತದ್ಭವ, ತತ್ಸಮ, ದೇಶ್ಯವೆಂಬ ಭೇದಗಳಿಂದ ಮೂರುವಿಧವಾಗಿರುವ ಪ್ರಸಿದ್ಧ ಶಬ್ದಗಳು ನಾಮಲಿಂಗಗಳೆಂತಲೂ, ಕರೆಯಲ್ಪಡುವವು. ಹೀಗೆ ಮೂರುವಿಧವಾದ ನಾಮಲಿಂಗಗಳಲ್ಲಿ, ಸಮುದಾಯಗಳೆಲ್ಲಾದರೂ, ಏಕದೇಶವಲ್ಲಾದರೂ ವಿಕಾರವನ್ನು ಹೊಂದಿರುವ ಬಿಕ್ಕೆ, ವಿಕ್ಕೆ, ಹಬೆ,

ಬುಡದಲ್ಲಿ ಅಂಥಾ ಕಂದುಗಳು ಹೊರಟಿದ್ದರೆ ಮುರಿದುಹಾಕಬೇಕು. ಕಂದುಗಳು ತುಂಬಾ ಒಡೆದು ಇಕ್ಕಟ್ಟಾಗಿದ್ದರೂ ಫಲವು ಕಡಮೆಯಾಗುವುದು. ಅಂಥಾ ಸಂದರ್ಭದಲ್ಲಿ ಒಂದಕ್ಕೊಂದಕ್ಕೆ ಅವಕಾಶವಿರುವಂತೆ ನೋಡಿಕೊಂಡು ಮಧ್ಯೆ ಸಣ್ಣದಾಗಿರುವ ಕಂದುಗಳನ್ನು ತೆಗೆಯಬೇಕು. ಹೀಗೆ ತೆಗೆದ ಕಂದುಗಳಿಗೆ ಗರಿಕಂದುಗಳೆಂದು ಹೆಸರು. ಬಾಳೆಯಲ್ಲಿ ಅದಿಭಾಗದಲ್ಲೂ ಅಂತ್ಯಭಾಗದಲ್ಲೂ ಫಲವು ಕಡಮೆಯಾಗುವುದು. ಇದರಲ್ಲಿ ರಸಬಾಳೆ ಬೂದುಬಾಳೆ ಬಂಗಾಳಿಬಾಳೆ (ಕರೀಬಾಳೆ ಅಥವಾ ರಾಜಬಾಳೆ) ಮದರಾಸ್‌ಬಾಳೆ ಮದುರಂಗ ಸಕಲಾತಿಬಾಳೆ (ರಕ್ತಬಾಳೆ ಅಥವಾ ಚಂದ್ರಬಾಳೆ) ಪುಟ್ಟಬಾಳೆ ಹಾವ್ಮಬಾಳೆ ಗುಜ್ಜಾರಿಬಾಳೆ (ನರಿಬಾಳೆ) ಹೂವುಬಾಳೆ ಕಾಡುಬಾಳೆ ಸುಗಂಧರಾಜಬಾಳೆ ಎಲೆಬಾಳೆ ವುರಬಾಳೆ ಬೆಟ್ಟಬಾಳೆ ಮೊದಲಾದ ಭೇದಗಳುಂಟು. ಕಾಡುಬಾಳೆಯಲ್ಲಿ ಯಾಲಕ್ಕಿಬಾಳೆ ಎಂಬ ಮತ್ತೊಂದು ಪ್ರಭೇದ ಉಂಟು. ಇವುಗಳಲ್ಲಿ ಕೆಲವನ್ನು ಅನುಭವದಿಂದ ಗೊತ್ತುಮಾಡಿಕೊಳ್ಳಬೇಕು. ಇನ್ನು ಕೆಲವನ್ನು ಹಣ್ಣಿನಿಂದಲೂ ಕಾಯಿನಿಂದಲೂ ಎಲೆಯಿಂದಲೂ ತಿಳಿದುಕೊಳ್ಳಬೇಕು. ಕರೀಬಾಳೆಯೆಲೆಯು ಮಂದವಾಗಿರುವುದು. ಹೂವುಬಾಳೆ ರಸಬಾಳೆ ಎಲೆಗಳು ತೆಳುವಾಗಿರುವವು. ಬೂದುಬಾಳೆ ಎಲೆಯು ಎಲ್ಲಾ ಬಾಳೆ ಎಲೆಗಳಿಗಿಂತ ಅಗಲವಾಗಿರುವುದು. ಅದರ ಕಾಯಿ ಹಣ್ಣುಗಳ ಮೇಲಣ ಸಿಪ್ಪೆಯು ಕೂಡ ಬೂದುವರ್ಣವಾಗಿರುವುವು. ಸಕಲಾತಿಬಾಳೆಯು ಹಣ್ಣಾದಮೇಲೆ ಕೆಂಪು ಹಳದಿ ವಿಶ್ರವಾದ ಬಣ್ಣವಾಗಿರುವುದು. ಹಾವ್ಮಬಾಳೆಕಾಯಿ ಉದ್ದುದ್ದವಾಗಿರುವುದು ಮಧುರಂಗದ ಬಾಳೆಕಾಯಿಯು ಎಲ್ಲಾ ಬಾಳೆಕಾಯಿಗಿಂತ ದಪ್ಪವಾಗಿರುವುದು. ಮರಬಾಳೆಯು ತೆಂಗಿನಮರದಂತೆ ಉದ್ದವಾಗಿ ಬೆಳೆಯುವುದು. ಎಲೆರಟ್ಟೆಗಳು ಉದುರಿ ಗಿಡದ ಸುತ್ತಲೂ ತೆಂಗಿನಮರಕ್ಕೆ ಇರುವಂತೆ ಗುರ್ತು ಇರುವುದು. ಬೆಟ್ಟಬಾಳೆಯಲ್ಲಿ ಉದ್ದುದ್ದವಾಗಿ ಎಲೆಗಳು ಬಿಡುವವು. ಇದರ ಎಲೆಯು ಕರೀಬಾಳೆ ಎಲೆಗಿಂತ ಮಂದವಾಗಿರುವುದು. ಇದರ ಪಟ್ಟೆಗಳು ಅರ್ಧ ಅಡೀ ಪ್ರಮಾಣವಿರುವವು. ಸಕಲಾತಿಬಾಳೆ ಮಧುರಂಗ ರಸಬಾಳೆ ಬೂದುಬಾಳೆ ಮದರಾಸ್‌ಬಾಳೆಗಳಲ್ಲಿ ಕೆಲವು ಜಾತಿಗಳ ಹಿಂದೆ ಇರುವ ದಂಡಿಯು ಕೆಂಪಗೆ ಇರುವವು. ಎಲ್ಲಾವಿಧವಾದ ಬಾಳೆಕಾಯಿಗಳಲ್ಲೂ ಮಧ್ಯಭಾಗದಲ್ಲಿ ಸಣ್ಣಗೆ ಕಪ್ಪಗೆ ಇರುವ ಬೀಜಗಳು ಇರುವವು. ರಸಬಾಳೆಯಲ್ಲಿ ಬೀಜಗಳು ಸೂಕ್ಷ್ಮವಾಗಿರುವವು. ಮಧುರಂಗದಕಾಯಿನಲ್ಲಿ ಬೀಜಗಳು ಸ್ವಲ್ಪ ದಪ್ಪವಾಗಿರುವವು. ಬೆಟ್ಟಬಾಳೆಕಾಯಿ

ಕ್ಕಿಂತಲೂ ಸ್ವಲ್ಪ ಹೆಚ್ಚಾಗಿ ಹಿಡಿಯುವುದು. ಹಣ್ಣು ಮಾಡತಕ್ಕ ಗೊನೆಯನ್ನು ಕತ್ತರಿಸಿ ಹಾಗೆ ೩—೪ ದಿವಸಗಳಿಟ್ಟರೆ ಪಕ್ವವಾಗಿ ಹಣ್ಣಾಗುವುದು. ಗೊನೆಯಲ್ಲಿರುವ ಚಿಪ್ಪುಗಳನ್ನು ಬೇರೆಬೇರೆಯಾಗಿ ಎಡೆದು (ತೆಗೆದು) ಒಂದು ಮಡಕೆಯ ತಳಭಾಗದಲ್ಲಿ ಸ್ವಲ್ಪ ಅವರಿಕೆ ಸೊಪ್ಪನ್ನು ಹಾಕಿ ಅದರಮೇಲೆ ಚಿಪ್ಪುಗಳನ್ನು ವರಸೆಯಾಗಿಟ್ಟು ಮತ್ತೆ ಸೊಪ್ಪನ್ನು ಮುಚ್ಚಿ ಮಡಕೆ ಬಾಯಿಗಿಂತ ಒಳಕ್ಕೆ ಅರ್ಧ ಅಡಿ ಕಡಮೆಯಾಗಿರುವಂತೆ ಇಡಬೇಕು ಅನಂತರ ಮೇಲೊಂದು ಮಡಕೆಯನ್ನಿಟ್ಟು ಎರಡು ಮಡಕೆಗೂ ಸಂದುಬಿಡದಂತೆ ಕಲಸಿದ ಮಣ್ಣನ್ನಾಗಲಿ ಸಗಣಿಯನ್ನಾಗಲಿ ಮೆತ್ತಿ ಹಾಗೆ ೩—೪ ದಿವಸ ಬಿಸಲಿನಲ್ಲಿಟ್ಟರೆ ಹಣ್ಣಾಗುವುದು. ಬೇಗ ಹಣ್ಣಾಗಬೇಕೆಂದು ತೋರಿದರೆ ಮೇಲಿನ ಮಡಿಕೆಯಲ್ಲಿ ೫—೬ ಬೆರಣಿಗಳನ್ನು ಹಾಕಿ ಬೆಂಕಿಹಾಕುವುದು. ಮೂರನೆ ದಿನ ಅದರಲ್ಲಿರುವ ಬೂದಿಯನ್ನು ತೆಗೆದು ಮೊದಲಿನದಿನ ಹಾಕಿದಂತೆ ಮತ್ತೆ ಬೆಂಕಿಹತ್ತಿಸಿಡುವನು ಆಮೇಲೆ ಒಂದುದಿನ ಹಾಗೆ ಇಟ್ಟದ್ದು ನಾಲ್ಕನೇ ದಿನ ತೆಗೆಯುವುದು. ಮೇಲಿನ ಮಡಿಕೆಯಲ್ಲಿ ಹತ್ತಿಸಿದ ಬೆಂಕಿ ಕಾವಿನಿಂದ ಒಳಗೆ ಶಾಖವುಂಟಾಗಿ ಬಾಳೆಕಾಯಿಗಳು ಬೇಗವಾಗಿ ೩—೪ ದಿವಸಗಳಲ್ಲೇ ಬೇಗ ಹಣ್ಣಾಗುವವು. ಈ ಪದ್ಧತಿಗೆ ಅಡೆಹಾಕುವುದೆಂದು ಹೆಸರು. ಬಾಳೆಕಾಯಿಗಳು ಹಣ್ಣಾದಮೇಲೆ ಮೇಲಣಸಿಪ್ಪೆ ಹಳದೀಬಣ್ಣಕ್ಕೆ ತಿರುಗುವುದು. ಆಗ ಅಮುಕಿದರೆ ಮೆತ್ತಿಗಿರುವುದು. ಇದು ಈರೀತಿಯಾಗಿರುವಾಗ ಚೆನ್ನಾಗಿ ಕಾಣುವುದು.

ಬಾಳೆಹಣ್ಣು ಅಥವಾ ಕಾಯಿಗಳು ಒಂದೊಂದು ಚಿಪ್ಪಿನಲ್ಲಿ ೧೦ರ ಲಾಗಾಯಿತು ೩೦ರವರಿಗೂ ಇರುವವು. ರಾಜಬಾಳೆ ಚಿಪ್ಪಿನಲ್ಲಿ ೨೦ರಿಂದ ೩೦ರವರಿಗೆ ಇರುವವು. ೧೪ ಅಥವಾ ೧೫ ಹಣ್ಣುಗಳು ಇರತಕ್ಕ ಚಿಪ್ಪುಗಳು ವಿಶೇಷನಾಗಿ ದೊರೆಯುವವು. ೩೦ ಹಣ್ಣುಗಳು ಇರತಕ್ಕ ಚಿಪ್ಪುಗಳೇ ಬಹಳ ಕಡಮೆ. ಅಂಥಾದ್ದು ಸಂಗತರಹಾವಾಗಿರತಕ್ಕದ್ದರಲ್ಲಿ ಇರುವವು. ಆದರೆ ಅಡೆಹಾಕಿವಾಡಿದ್ದು ಸ್ವಲ್ಪ ಹಸರುಬಣ್ಣಯುಕ್ತವಾಗಿದ್ದಾಗ್ಯೂ ಮೆತ್ತಗಿರುವುದು. ಬಾಳೇಹಾಕಿದ ಒಂದೂವರೆ ವರುಷದಲ್ಲಿ ಒಂದು ಬುಡದಲ್ಲಿ ೨೫ರವರೆಗೂ ಕಂದುಗಳು ಒಡೆಯುತ್ತವೆ. ಆ ಕಂದುಗಳಲ್ಲಿ ಸಣ್ಣಗೂ ಮೇಲಾಬ್ಬಗದಲ್ಲಿ ಮೊನಚಾಗಿಯೂ ಈರುವ ಕಂದುಗಳು ಹೊರಡುವುದುಂಟು. ಅದಕ್ಕೆ ನೂಲುಕರಿದೆಂದು ಹೆಸರು. ಅವುಗಳಲ್ಲಿ ಫಲಬಿಡುವುದೇ ಇಲ್ಲ. ಒಂದುವೇಳೆ ಬಿಟ್ಟರೂ ಪ್ರಯೋಜನವಾಗದರೀತಿಯಲ್ಲಿರುವುದು. ಆದ್ದರಿಂದ ಬಾಳೇ

ಭೂವಿವರಣೆ.

ಪ್ರಶ್ನೋತ್ತರ.

(೧—೨ ನೇ ತರಗತಿಯ ಬಾಲಕರಿಗೋಸ್ಕರ)

(ಆಸಿಯಾಖಂಡದ ಭೂಪಠವನ್ನು ಎದಿರಿಗೆ ಹಾಕಿರಬೇಕು)

ಪ್ರ—ಹಿಂದೂಸ್ಥಾನವು ಯಾವದು ?

ಉ—ಹಿಂದೂಜನರು ಇರುವ ಸ್ಥಳವು.

ಪ್ರ—ಈ ಸ್ಥಳದಲ್ಲಿ ಇರುವವರೆಲ್ಲರೂ ಹಿಂದೂಜನರೆ ?

ಉ—ಇಲ್ಲ. ಇತರದೇಶದ ಜನರೂ ಇಲ್ಲಿ ಬಹುಕಾಲದಿಂದ ವಾಸವಾಗಿರುವರು. ಅವರು ಮಹಮ್ಮದೀಯರು.

ಪ್ರ—ಈ ಹಿಂದೂಸ್ಥಾನವು ಎಲ್ಲಿರುವುದು ? ಭೂಪಠವನ್ನು ನೋಡಿ ಹೇಳು.

ಉ—ಆಸಿಯಾಖಂಡದ ದಕ್ಷಿಣದಿಕ್ಕಿನಲ್ಲಿ.

ಪ್ರ—ಹಿಂದೂಸ್ಥಾನಕ್ಕೆ ಉತ್ತರದಲ್ಲಿ ಏನಿರುವುದು ?

ಉ—ಹಿಮಾಲಯಪರ್ವತವು.

ಪ್ರ—ಅದರ ಆಚೆ ?

ಉ—ತುರ್ಕಿಸ್ಥಾನ, ಟಿಬೆಟ್, ಚೀನಾರಾಜ್ಯದ ಸ್ವಲ್ಪಭಾಗ.

ಪ್ರ—ದಕ್ಷಿಣದಲ್ಲಿ ಏನಿರುವುದು ?

ಉ—ನೀರು. ಸಮುದ್ರ.

ಪ್ರ—ಬಲಭಾಗದಲ್ಲಿ ?

ಉ—ಬಲಭಾಗದಲ್ಲೂ ನೀರೆ. ಸಮುದ್ರವಿರುವುದು.

ಪ್ರ—ಈ ನೀರಿನ ಹೆಸರೇನು ? ಓದು.

ಉ—ಬಂಗಾಳಾಕೊಲ್ಲಿ.

ಪ್ರ—ಅದರಮೇಲೆ-ಹಿಂದೂಸ್ಥಾನಕ್ಕೆ ಬಲಭಾಗದಲ್ಲಿರುವ ದೇಶದ ಹೆಸರೇನು ?

ಉ—ಬರ್ಮಾ.

ಪ್ರ—ಎಡಭಾಗದಲ್ಲಿ ಏನಿರುವುದು ?

ಉ—ಬೆಟ್ಟಗಳು.

ಪ್ರ—ಬೆಟ್ಟಗಳ ಆಚೆ ಇರುವ ದೇಶಗಳಾವುವು ?

ಉ—ಅಫ್‌ಗಾನಿಸ್ಥಾನ, ಬೆಲೂಚಿಸ್ಥಾನ.

ಪ್ರ—ಇವುಗಳ ಕೆಳಗೆ-

ಉ—ಸಮುದ್ರ.

ಪ್ರ—ಸಮುದ್ರದ ಹೆಸರೇನು ?

ಗಳು ವೊಟಕಾಗಿರುವದು. ಅದರಲ್ಲಿ ದಪ್ಪವಾದ ಬೀಜಗಳು ವಿಶೇಷವಾಗಿರುವದು. ಕಾಡುಬಾಳೆಯು ಹಿವಾಲಯದಲ್ಲಿ ೬೫೦೦ ಅಡಿಗಳಮೇಲೆ ಕೂಡ ಆಗುವದು. ಎಲೆ ಬಾಳೆಯನ್ನು ಎಲೆಗೋಸ್ಕರ ತೋಟಗಳಲ್ಲೂ ಹಿತ್ತಲುಗಳಲ್ಲೂ ಹಾಕುತ್ತಾರೆ. ಇದರಲ್ಲಿ ೪ ವರುಷಕ್ಕೆ ಗೊನೆ ಬಿಡುವುದು. ಗೊನೆ ಬಿಟ್ಟರೂ ಅದರ ಕಾಯಿಗಳು ಪ್ರಯೋಜನಕಾರಿಯಾಗಿರುವುದಿಲ್ಲ. ರಾಜಬಾಳೆ ಪುಟ್ಟಬಾಳೆಗಳಲ್ಲಿ ೩೦೦ರಿಂದ ೪೦೦ರವರಿಗೂ ಬೂದುಬಾಳೆಯಲ್ಲಿ ೪೦೦ರವರಿಗೂ ರಸಬಾಳೆ ಯಾಲಕ್ಕಿಬಾಳೆಗಳಲ್ಲಿ ೨೦೦ರವರಿಗೂ ಮಧುರಂಗ ವೊದಲಾದ ಇತರ ಎಲ್ಲಾ ಬಾಳೆಗಳಲ್ಲಿ ೧೦೦ ರಿಂದ ೧೫೦ ರವರಿಗೂ ಕಾಯಿಗಳು ಬಿಡುವವು. ಬಾಳೆಹಣ್ಣು ಪಾಯಶಃ ಹುಳಿ ಮಿಶ್ರವಾದ ಸೀಯಾಗಿರುವುದು. ಬಿಳೀ ರಸಬಾಳೆಗಿಂತ ಕರೀ ರಸಬಾಳೆಹಣ್ಣು ಸ್ವಲ್ಪ ಹುಳಿ. ಮಧುರಂಗದ ಬಾಳೆಹಣ್ಣು ಎಲ್ಲಾ ಬಾಳೆಹಣ್ಣುಗಳಿಗಿಂತ ಹುಳಿ. ಕಾಡುಬಾಳೆಹಣ್ಣು ರುಚಿಯಾಗಿರುವುದು. ಇದಕ್ಕಿಂತಲೂ ಬಿಳೀರಸಬಾಳೆ ಯಾಲಕ್ಕಿಬಾಳೆ ಪುಟ್ಟಬಾಳೆ ಹಣ್ಣುಗಳು ಇನ್ನೂ ರುಚಿಯಾಗಿರುವವು. ಎಲ್ಲಾ ಬಾಳೆಹಣ್ಣುಗಳಿಗಿಂತ ರಸಬಾಳೆಹಣ್ಣು ಹೆಚ್ಚು ದಿವಸಗಳಿರುವುದು. ಇದಕ್ಕಿಂತಲೂ ಹೂವುಬಾಳೆ ಪುಟ್ಟಬಾಳೆಹಣ್ಣುಗಳು ಸುಮಾರಾಗಿ ಒಂದುತಿಂಗಳವರೆಗೂ ಇರುವವು. ಏಕಂದರೆ-ಇವುಗಳ ಮೇಲಣ ಸಿಪ್ಪೆಯು ತೆಳುವಾಗಿರುವುದರಿಂದ ಒಳಗಿನ ಹಣ್ಣಿನ ದ್ರವವು ಆರುತ್ತ ಸುಂಡಿಕೊಂಡಿರುವುದು. ಇತರಜಾತಿ ಹಣ್ಣುಗಳ ಸಿಪ್ಪೆಯು ದಪ್ಪನಾಗಿರುವುದರಿಂದ ೧೦---೧೫ ದಿವಸಗಳಿಗೇನೆ ಕೊಳೆಯುವವು. ಹಣ್ಣಿಗೆ ತಕ್ಕದ್ದಲ್ಲದೇಲೂ ಹಣ್ಣು ವಾಡಿ ವಾರಿದರೆ ಲಾಭ ಕಡಿವೆಯಾಗಿಯೂ ಇರುವ ಜಾತಿಯ ಕಾಯಿಗಳಾದ ಮಧುರಂಗ ಬೂದುಬಾಳೆ ಕಾಯಿಗಳನ್ನು ಪಲ್ಯಕ್ಕೆ ಉಪಯೋಗಿಸುತ್ತಾರೆ. ಇತರಜಾತೀ ಬಾಳೆಕಾಯಿಗಳನ್ನು ಪಲ್ಯಕ್ಕೆ ಉಪಯೋಗಿಸುವುದುಂಟು. ರಸಬಾಳೆಕಾಯಿಗಳನ್ನು ಪಲ್ಯಕ್ಕೆ ಉಪಯೋಗಿಸಿದರೆ ಸಪ್ಪೆಯಾಗುವುದು. ಬಾಳೆಕಾಯಿನಿಂದ ತಾಳದ ವೀಲೋಗರ ಚಟ್ನಿ ಬಜ್ಜಿ ಉಪ್ಪೇರಿ ಬೋಂಡಾ ಇವುಗಳನ್ನು ವಾಡಿ ತಿನ್ನುತ್ತಾರೆ. ಇದರ ಬಾಳಕಗಳನ್ನು ವಾಡಿಟ್ಟುಕೊಂಡಿದ್ದು ಹಾಗೆ ಬೇಯಿಸಿಆಗಲಿ ಎಣ್ಣೆ ತುಪ್ಪಗಳಲ್ಲಿ ಹುರಿದಾಗಲಿ ತಿನ್ನುವರು. ಕೆಲವು ದೇಶಗಳಲ್ಲಿ ಇದರ ಕಾಯಿಗಳನ್ನು ಬೇಯಿಸಿ ಅದೊಂದನ್ನೇ ಆಹಾರವಾಗಿ ಉಪಯೋಗಿಸುತ್ತಾರೆ. ಬಾಳೆಕಾಯಿನ ಟೀಯು(ಕಷಾಯವ)ನ್ನು ಕಾಯಿಸಿ ಕುಡಿಯುವರು. ಬಾಳೆಹೂವನ್ನು ತಾಳದಕೂಕ್ಕೆ ವೀಲೋಗರಕೂಕ್ಕೆ ಚಟ್ನಿಗೂ ಉಪಯೋಗಿಸುತ್ತಾರೆ.

ಮಾ॥ ಹಾಫ್‌ಕಿರ್‌ರವರು ಕೂಡ ಈ ಮಹಾಮಾರಿಗೆ ಈರೀತಿ ಸಿಡುಬುಹಾಕಿ ಚಿಕಿತ್ಸೆಮಾಡುವದು ಸಾಧ್ಯವೇ ಇಲ್ಲವೇ ಎಂದು ಪರೀಕ್ಷಿಸುತ್ತಿದ್ದರು. ಇವರು ಈ ಎರಡು ವರುಷಗಳಿಗೆ ಮುಂಚೆ ಬೊಂಬಾಯಿನಲ್ಲಿದ್ದರು. ಆಗ ಈ ರೋಗವು ಆ ಪಟ್ಟಣಕ್ಕೆ ಬಂತು. ಬಹುದಿನಗಳಿಂದ ಈ ವಿಚಾರದಲ್ಲಿ ವಿಚಾರಪರರಾಗಿದ್ದುದರಿಂದ ಈ ರೋಗವು ಬಂದಕೂಡಲೆ ಇವರು ಈ ರೋಗದಿಂದ ಮೃತಪಟ್ಟ ಒಬ್ಬನ ಶರೀರವನ್ನು ಶೋಧಿಸಿ, ಅವನ ಜ್ವರದ ಗಡ್ಡೆಗಳಲ್ಲಿ ಒಂದನ್ನು ಕೊಯ್ದು. ಅದರಿಂದ ಕೆಲವು ಪ್ಲೇಗ್‌ಕ್ರಿಮಿಗಳನ್ನು ತೆಗೆದು, ಅವುಗಳನ್ನು ಸಮುದ್ರದ ಜೊಂಡಿನಿಂದ ತಯಾರುಮಾಡಿದ ಒಂದುಬಗೆ ಗೊಜ್ಜಿನಲ್ಲಿ ಹಾಕಿ ಪೋಷಿಸಿದರು ಅವುಗಳು ಕೂಡಲೆ ಬೆಳೆದು ಅನೇಕಲಕ್ಷ ಪ್ರಾಣಿಗಳಾದವು. ಅವುಗಳನ್ನು ಶೀಶೆಗೆ ಹಾಕಿ ಅದಕ್ಕೆ ಬಲವಾದ ಬಿರಡೆಹಾಕಿ, ಆ ಶೀಶೆಯನ್ನು ಕುದಿಯುವ ನೀರಿನೊಳಕ್ಕೆ ಹಾಕಿದರು. ಆ ಶೀಶೆಯೊಳಗಿದ್ದ ಪ್ಲೇಗ್‌ಪ್ರಾಣಿಗಳೆಲ್ಲಾ ಸತ್ತುಹೋದವು ಈ ಸತ್ತಪ್ರಾಣಿಗಳ ದೇಹಸಾರವೆಲ್ಲಾ ಒಂದು ದೃತಿಯಾಗಲು ಆಗ ಆ ದೃತಿಯಿಂದ ಮರಣದಂಡನೆಗೆ ಗುರಿಯಾಗಿದ್ದ ಕೆಲವುಜನ ಅಪರಾಧಿಗಳಿಗೂ, ಅನಂತರ ಇತರ ಅಪರಾಧಿಗಳಿಗೂ ಸಿಡುಬು ಹಾಕಿದರು. ಅವರಿಗೆ ಪ್ಲೇಗ್‌ರೋಗ ಬಂದವರ ಸಂಪರ್ಕವು ಉಂಟುಮಾಡಲ್ಪಟ್ಟಿತು. ಆದರಿಂದ ಅವರಿಗೆ ಪ್ಲೇಗ್ ಅಂಟಲಿಲ್ಲ ಅನಂತರ ಇತರರಿಗೆ ಈ ಸಿಡುಬುಹಾಕಲ್ಪಟ್ಟಿತು. ಅವರು ಪ್ಲೇಗ್‌ಜಾಡ್ಯಕ್ಕೆ ಗುರಿಯಾಗಲಿಲ್ಲ. ತರುವಾಯ ಬರೋಡಾದೇಶದಬಳಿ ಕೆಲವು ಗ್ರಾಮಗಳಿಗೆ ಈ ಚಾಡ್ಯವು ತಗಲಿತು. ಅಲ್ಲಿ ಸಿಡುಬುಹಾಕಿಸಿಕೊಂಡವರು ಈ ರೋಗದಿಂದ ವಿಮುಕ್ತರಾದರು. ಈಚೆಗೆ ಬೊಂಬಾಯಿ, ಪುನಾ, ಹುಬ್ಬಳ್ಳಿ, ಧಾರ್‌ವಾರ್, ಬೆಲ್ಗಾಮ್, ಬೆಂಗಳೂರು ಮೊದಲಾದ ಅನೇಕ ಸ್ಥಳಗಳಲ್ಲಿ ಈ ಸಿಡುಬುಹಾಕುವದಕ್ಕೆ ಆರಂಭಿಸಿದರು. ಈ ಸ್ಥಳಗಳಲ್ಲಿಕೆ ಪ್ರಾಯಕವಾಗಿ ಸಿಡುಬುಹಾಕಿಕೊಂಡವರಿಗೆ ತಗಲುವದಿಲ್ಲ. ಹಾಕಿಕೊಳ್ಳದೆ ಇರುವವರಿಗೆ ತಗಲದೆ ಇರುವದೇ ಅಪೂರ್ವ. ಬೆಂಗಳೂರಲ್ಲಿ ನಡೆದ ಒಂದು ಪ್ಲೇಗ್ ವಿಾಟಂಗಿನಲ್ಲಿ ಪ್ಲೇಗ್‌ಜಾಡ್ಯವೆ ಸುಳ್ಳೆಂಬದಾಗಿಯೂ ಸಿಡುಬುಹಾಕಿಸಿಕೊಳ್ಳುವದು ಹುಚ್ಚುಕೆಲಸವೆಂಬದಾಗಿಯೂ ಒಬ್ಬ ಮನುಷ್ಯನು ಜನಗಳಿಗೆ ಹೇಳುತ್ತಾ ಲೇವಡಿ ಮಾಡುತ್ತಾ ಇದ್ದನು. ಅವನಿಗೆ ಮಾರನೆದಿನವೆ ಪ್ಲೇಗ್‌ತಗಲಿತು. ಅವನು ಆಗ ಈ ರೋಗದ ಕಾರ್ಯವನ್ನು ಒಂದುದಿನವೂ ತಾಳಲಾರದೆ ಸತ್ತನು. ಸಾಮಾನ್ಯವಾಗಿ ಮಾರಿಹುಣ್ಣಿನ ಸಿಡುಬುಹಾಕಿಸಿಕೊಂಡವರಲ್ಲಿ ಸಾವಿರಕ್ಕೆ ಒಬ್ಬರಿಗೆ ಸಿಡುಬೆದ್ದು ಆದ

ಉ—ಅರಬ್ಬಿ ಸಮುದ್ರ

(ಉಪಾಧ್ಯಾಯರು ಈ ರೀತಿಯಲ್ಲಿ ಸಂಕ್ಷೇಪವಾಗಿ ಹಿಂದೂಸ್ಥಾನದ ಮೇರೆಗಳನ್ನು ತಿಳಿಸುವುದು.)

ಪ್ಲೇಗ್ ಮಹಾಮಾರಿ ಸಿಡುಬುಹಾಕುವದು.

ಪ್ಲೇಗ್ ಅಥವಾ ಮಹಾಮಾರಿ ಎಂಬ ರೋಗವು ಕಳೆದ ಎರಡು ಸಾವಿರ ವರುಷಗಳಿಂದಲು ಪ್ರಪಂಚದ ಯಾವದಾದರೂ ಒಂದುಭಾಗದಲ್ಲಿ ಇರುತ್ತಿತ್ತೆಂಬದಾಗಿಯೂ ಇದು ಕ್ರಮಕ್ರಮವಾಗಿ ಅಂಟುರೋಗವೆಂದು ಗೊತ್ತಾಯಿತೆಂಬದಾಗಿಯೂ ಇದಕ್ಕೆ ಚಿಕಿತ್ಸೆ ಇದುವರಿಗೂ ಗೊತ್ತಾಗಿರಲಿಲ್ಲವೆಂಬದಾಗಿಯೂ ನಮ್ಮ ಶಾಸ್ತ್ರಜ್ಞರೇ ಮೊದಲಾದ ಅನೇಕರು ಈ ರೋಗಕ್ಕೆ ಪೂರ್ವಭಾವಿಯಾಗಿ ಉಂಟಾಗುವ ಮೂಷಿಕಗಳ ಅಕಾರಣವಾದ ಮರಣವನ್ನು ನೋಡಿ ತತ್‌ಕ್ಷಣವೆ ವನವಾಸವನ್ನು ಕೆಲವು ಹೋಮಾದಿಗಳನ್ನು ವಿಧಿಸಿದಾರೆಂಬದಾಗಿಯೂ ನಾವು ತಿಳಿಸಿದ್ದೆವಷ್ಟೆ.

ಪೂರ್ವಕಾಲದಲ್ಲಿ ಮಾರಿಹುಣ್ಣು ಅಂದರೆ ಸಿಡುಬು ಎಳುತ್ತಿತ್ತು. ಈ ಹುಣ್ಣು ಒಂದು ಮನೆಯಲ್ಲಿ ಯಾರಿಗಾದರು ಒಬ್ಬರಿಗೆದ್ದರೆ ಅವರ ಸಂಪರ್ಕದಲ್ಲಿ ಇರತಕ್ಕ ಇತರರಿಗೂ, ನೆರೆಹೊರೆಯವರಿಗೂ, ಗ್ರಾಮಸ್ಥರಿಗೂ, ಪುರನಿವಾಸಿಗಳಿಗೂ ಅಂಟುತಿತ್ತು. ಪ್ರಯಾಣಸ್ಥರ ಮೂಲಕ ದೇಶಾಂತರಗಳಿಗೂ ಹರಡಿಕೊಳ್ಳುತ್ತಿತ್ತು. ಇದರ ಅವಾಂತರದಿಂದ ಗ್ರಾಮಗಳು, ಪಟ್ಟಣಗಳು, ದೇಶಗಳು ನಿರ್ಮಾನುಷ್ಯಗಳಾಗುತ್ತಾ ಬಂದವು. ಆಗ ಡಾಕ್ಟರ್ ಜನ್ನರ್‌ಸಾಹೇಬರು ಸಿಡುಬುಹಾಕುವದರಮೂಲಕ ಈ ಅಂಟುರೋಗದಿಂದ ಆಗತಕ್ಕ ಅನೇಕ ಮರಣಗಳನ್ನು ತಪ್ಪಿಸಿದರು. ಈಚಿಗೆ ಹುಚ್ಚುನಾಯಿಗಳು ಕಡಿದು ಮುಂಗಾರುಮಳೆ ಬಂದಕೂಡಲೆ ಹುಚ್ಚು ಹಿಡಿದು ಅನೇಕರು ಸಾಯುತ್ತಿದ್ದರು. ಫ್ರೆಂಚುದೇಶದ ಡಾಕ್ಟರ್ ಪ್ಯಾಸ್ಟ್ಯರ್‌ಸಾಹೇಬರವರು ಹೀಗೆ ಹುಚ್ಚುನಾಯಿ ಮೊದಲಾದವುಗಳು ಕಡಿದ ಜನಗಳಿಗೆ ಒಂದುಬಗೆ ಸಿಡುಬುಹಾಕಿ ಅಂಥಾ ಜನರು ಹುಚ್ಚಿನಿಂದ ಸಾಯುವ ಸಂಭವವನ್ನು ತಪ್ಪಿಸಿದರು. ಈಚಿಗೆ ಕಾಲರಾ ಮೊದಲಾದ ಅನೇಕ ಸಾಂಕ್ರಾಮಿಕರೋಗಗಳಿಗೆ ಆಯಾಯ ರೋಗನಿದಾನಗಳನ್ನು ಬಲ್ಲವರು ಸಿಡುಬುಹಾಕುವದರಮೂಲಕ ಆ ರೋಗಕ್ಕೆ ಪ್ರತೀಕಾರವನ್ನು ಮಾಡಲುಪಕ್ರಮಿಸಿದಾರೆ.

ಈ ಪ್ರಪಂಚದ ಎಲ್ಲಾ ನಾಗರಿಕತೆಯುಳ್ಳ ರಾಜ್ಯಗಳಿಂದಲೂ ವೈದ್ಯರ ಡೆಪ್ಯುಟೇರ್ಷ್ ಗಳು ಕಳುಹಿಸಲ್ಪಟ್ಟಿವೆ. ಇವುಗಳು ಸುಳ್ಳುವರ್ತಮಾನಗಳೆಂಬುವದಕ್ಕೆ ಇದಕ್ಕಿಂತ ದೊಡ್ಡ ದೃಷ್ಟಾಂತರಗಳೇನೂ ಆವಶ್ಯಕವಿಲ್ಲ.

ಭಿನ್ನರಾಶಿಗಳವಿಶೇಷೋದಾಹರಣೆ.

1. ರೂಪಾಯಿಗೆ 4ಪೈಗಳಮೇರೆಗೆ ತೆರಿಗೆ ಕೊಟ್ಟಮೇಲೆ ಒಬ್ಬನ ಆದಾಯವು 489ರೂಪಾಯಿ 9ಆಣೆ 4ಪೈ ಉಳಿಯುತ್ತದೆ. ಹಾಗಾದರೆ ಅವನ ಮೊದಲಿನ ಆದಾಯವೆಷ್ಟು ?

2. ತೆರಿಗೆಯು $\frac{3}{8}$ಭಾಗ ಕಮ್ಮಿ ಆದಮೇಲೆ ರೂಪಾಯಿನಲ್ಲಿ$8\frac{4}{5}$ಪೈ ಮೇರೆಗೆ 88 ರೂಪಾಯಿಗಳಾಗುತ್ತವೆ ಹಾಗಾದರೆ ಕಮ್ಮಿಮಾಡುವುದಕ್ಕೆ ಮುಂಚೆ ಇದ್ದದ್ದೆಷ್ಟು ?

3. ರೂಪಾಯಿಗೆ 5ಪೈಮೇರೆಗೆ ಇನ್ಕಂಟ್ಯಾಕ್ಸನ್ನು ಕೊಟ್ಟು ಉಳಿದದ್ದರಲ್ಲಿ$\frac{8}{17}$ ಭಾಗವನ್ನು ಮಾರಿದಮೇಲೆ ಒಬ್ಬ ಮನುಷ್ಯನಲ್ಲಿ 297 ರೂಪಾಯಿಗಳು ಉಳಿಯಿತು. ಆ ಪದಾರ್ಥದ ಬೆಲೆ ಎಷ್ಟು ?

4. ಎ ಎಂಬುವನ ಹಣದ ಪೈಕಿ $\frac{3}{4}$ ಭಾಗವು ಬಿ ಎಂಬುವನ ಹಣದ $\frac{7}{8}$ಭಾಗಕ್ಕೆ ಸಮನಾಗಿರುತ್ತದೆ. ಬಿ ಎಂಬುವನ ಹಣದ $\frac{5}{16}$ಭಾಗವು ಸಿ ಎಂಬುವನ ಹಣದ $\frac{3}{10}$ ಭಾಗಕ್ಕೆ ಸಮನಾಗಿರುತ್ತದೆ. ಸಿ ಎಂಬುವನ ಹಣವು ಎ ಎಂಬುವನ ಹಣದ ಎಷ್ಟು ಭಾಗವಾಗಿರುತ್ತದೆ ?

5. ಒಂದು ಪೊತ್ತವು ದ್ವಿಗುಣವಾಗುತ್ತದೆ. ಅದರ ಪೈಕಿ 16—2—6ಪೈಗಳ $\frac{18}{27}$ಭಾಗವನ್ನು ತೆಗೆದುಕೊಂಡರೆ ಮೂಲಧನದ $\frac{1}{3}$ಭಾಗ ಉಳಿಯುತ್ತದೆ. ಪೊತ್ತವೆಷ್ಟು?

6. ಪ್ರತಿಯೊಂದಕ್ಕೂ 1ರೂ 3ಆ 9ಪೈ ವೇರೆಗೆ ರೂಪಾಯಿಗಳ ಒಂದು ಪೂರ್ಣಾಂಕೆಗೆ ಕೊಂಡುಕೊಳ್ಳಬಹುದಾದ ಪದಾರ್ಥಗಳ 1000 ಮತ್ತು 1500 ಈ ಸಂಖ್ಯೆಗಳ ಮಧ್ಯದಲ್ಲಿರುವ ಕನಿಷ್ಠಸಂಖ್ಯೆಯಾವುದು ?

ಬಿ. ವೆಂಕಟರಾವಯ್ಯ,
ಹೆಡ್ಮಾಸ್ಟರ್,
ನಂಜನಗೂಡ್-ಸ್ಕೂಲ್

ರಿಂದಅವರು ಸಾಯುವದುಂಟು. ಆದರೆ ಒಂಭೈನೂರತೊಂಭತ್ತೊಂಭತ್ತು ಜನರು ಇದರಿಂದ ಜ್ಯಾಗೆ ಬದುಕುವರೊ ಹಾಗೆಯೇ ಪ್ಲೇಗ್ ಸಿಡುಬು ಹಾಕಿಕೊಂಡವರು ಬದು ಕುವರೆಂದು ಶಾಸ್ತ್ರೀಯವಾರಿಯಿಂದ ಗೊತ್ತಾಗಿದೆ. ಈ ಸಿಡುಬುಹಾಕಿಸಿಕೊಂಡವರಿಗೆ ಒಂದುದಿನ ಜ್ವರವು ಬರುವದು. ೪ ದಿನ ಸಿಡುಬುಹಾಕಿದಕ್ಕೆ ನೋಯುವದು. ಕೆಲವರಿಗೆ ೩–೪ ದಿನಗಳು ಜ್ವರಬರುವದೂ ಉಂಟು. ಜ್ವರವು ಜೆನ್ನಾಗಿ ಬಂದವರಿಗೆ ಪ್ಲೇಗ್ ಜಾಡ್ಯವು ಎಂದಿಗೂ ಬರುವದಿಲ್ಲ. ಈ ಸಿಡುಬುಹಾಕಿಸಿಕೊಳ್ಳುವದು ಬಹಳ ಸುಲಭ. ಬಹಳ ನೊಯ್ಯುವದಿಲ್ಲ. ಸ್ವಲ್ಪ ಇರುವೆಕಡಿದಂತೆ ಆಗುತ್ತದೆ ಪಥ್ಯವು ಸುಲಭ. ಎಣ್ಣೆ ಮಜ್ಜಿಗೆ ವಿನಾ ಇಚ್ಛಾಪಥ್ಯದಲ್ಲಿರಬಹುದು. ಅನೇಕರು ಸಿಡುಬುಹಾಕಿಸಿಕೊಂಡು ನೂರನೆದಿನವೇ ಕೆಲಸಕ್ಕೆ ಹೋಗುತ್ತಾರೆ. ಈ ಪ್ಲೇಗ್ ಸಿಡುಬು ಎರಡುಸಲ ಹಾಕಿಸಿ ಕೊಳ್ಳಬೇಕು. ಮೊದಲುಸಲ ಹಾಕಿಸಿಕೊಂಡ ತರುವಾಯ ಹತ್ತು ದಿನಗಳಮೇಲೆ ಎರ ಡಲ ಹಾಕಿಸಿಕೊಳ್ಳಬೇಕು. ಹೀಗೆ ಎರಡುಸಲ ಹಾಕಿಸಿಕೊಂಡವರು ಒಂದೂವರೆವರು ಷದವರಿಗೂ ಪ್ಲೇಗ್‌ಜಾಡ್ಯಕ್ಕೆ ಗುರಿಯಾಗುವದಿಲ್ಲವೆಂದು ಗೊತ್ತಾಗಿದೆ. ಅಷ್ಟರೊಳ ಗಾಗಿ ಪ್ಲೇಗ್‌ಜಾಡ್ಯವು ಊರಿನಿಂದಹೋಗದೇ ಇದ್ದ ಪಕ್ಷದಲ್ಲಿ ಪುನಃ ಒಂದಾವರ್ತಿ ಸಿಡುಬುಹಾಕಿಸಿಕೊಳ್ಳಬೇಕು. ಉಪೇಕ್ಷೆಮಾಡಿ ಪ್ಲೇಗ್‌ರೋಗದಿಂದ ಪ್ರಾಣವನ್ನು ಬಿಡುವದಕ್ಕಿಂತ ೬ತಿಂಗಳಿಗೊಂದಾವರ್ತಿಸಿಡುಬುಹಾಕಿಸಿಕೊಳ್ಳುವದು ಉತ್ತಮವಲ್ಲವೆ? ಈ ಸಿಡುಬುಹಾಕಿಸಿಕೊಂಡರೆ ಕೆಲವುದಿನಗಳಾದಮೇಲೆ ಹುಚ್ಚು, ಕುಷ್ಟರೋಗ ಮೊದ ಲಾದ ಅನೇಕರೋಗಗಳುಂಟಾಗುವೆಂದು ಯಾರೊ ಸುಳ್ಳುವರ್ತಮಾನವನ್ನು ಹುಟ್ಟಿ ಸಿದಾರೆ. ಈ ಸಿಡುಬುಹಾಕತಕ್ಕ ಧೃತಿಯು ಪ್ಲೇಗಿಗೆ ಸಂಬಂಧಪಟ್ಟದ್ದು. ಇದನ್ನು ಹಾಕಿದ ಕೂಡಲೆ ಪ್ಲೇಗ್ ಎಂಬ ಜ್ವರಕ್ಕೆ ಸದೃಶವಾದ ಜ್ವರವು ಸ್ವಲ್ಪವಾಗಿ ಕೂಡಲೆ ಬಂದು ಶಮನವಾಗುತ್ತದೆ. ಮಾರೀಹುಣ್ಣಿನ ಸಿಡುಬುಹಾಕಿದರೆ ಮಾರೀಹುಣ್ಣು ಒಂ ದೆರಡು ಏಳುತ್ತದೆಯೇ ಹೊರ್ತು ಬೇರೆವಿಧವಾದ ಹುಣ್ಣು ಏಳುವದಿಲ್ಲ. ಪ್ಲೇಗ್‌ಸಿಡುಬು ಹಾಕಿದರೆ ಮಿತವಾಗಿ ಪ್ಲೇಗ್‌ಜ್ವರಬಂದು ಪರಿಹಾರವಾಗುವದೇ ಹೊರ್ತು ಬೇರೆವಿಧ ವಾದ ಯಾವ ರೋಗ ಬರುವ ಸಂಭವವು ಇರುವದಿಲ್ಲವೆಂದು ವೈದ್ಯಶಾಸ್ತ್ರಜ್ಞರು ತೀ ರ್ಮಾನಮಾಡಿದಾರೆ. ಹಾಗೆ ಕೆಲವು ದೇಶಾಂತರ ವರ್ತಮಾನಪತ್ರಿಕಾಕಾರರು ಬರೆದಿರು ವದಾಗಿ ವರ್ತಮಾನ ಹುಟ್ಟಿಸಿದಾರೆ. ಇದು ಸುಳ್ಳು. ಮಾನ್ಸ್ಯರ್ ಹಾಫ್‌ಕಿನ್ ರವ ರಿಂದ ಈ ರೋಗನಿದಾನವನ್ನೂ ಸಿಡುಬುಹಾಕುವದನ್ನು ತಿಳಿದುಕೊಂಡು ಬರಬೇಕೆಂದು

ಈ ಗ್ರಂಥಕರ್ತರಿಂದ ರಚಿಸಲ್ಪಡುವ ಪ್ರಸಿದ್ಧವಾದ ಕುಱುಳೆಂಬ ತಮಿಳು ಗ್ರಂಥದ ಭಾಷಾಂತರವನ್ನು ಓದಲು ಬಹಳ ಆತುರವಾಗಿರುವೆವು.

ಗ್ರಂಥವು ಜಿ. ಟಿ ಎ. ಪ್ರಸ್ಸಿನಲ್ಲಿ ಬಹಳ ಚೆನ್ನಾಗಿ ಮುದ್ರಿತವಾಗಿರುವುದು. ರ ಬೆಲೆ ೧೦ ಆಣೆ. ಗ್ರಂಥಕರ್ತರಲ್ಲಿಯೂ, ಗ್ಯಾಜುಯೇಟ್ಸ್‌ನಲ್ಲಿಯೂ ಗ್ರಂಥವು ರೆಯುವುದು.

ಒಗಟೆ.

ರ ಅಕ್ಷರದ ಒಂದು ಶಬ್ದವಿದೆ.

೧— ೦ ನೇ ಅಕ್ಷರ = ಕೊಳೆ

೧— ೩ ನೇ ಅಕ್ಷರ = ಬಡಗಿ

೦— ೩ ನೇ ಅಕ್ಷರ = ನಾಶ

೩— ೧ ನೇ ಅಕ್ಷರ = ಧರ್ಮಕರ್ತ

೪— ೨ ನೇ ಅಕ್ಷರ = ರಸಭೇದ

೪— ೩ ನೇ ಅಕ್ಷರ = ಮಂಗಳ

೧, ೨, ೩, ೪ ನೇ ಅಕ್ಷರ = ವೃಕ್ಷಭೇದ

ಆ ಶಬ್ದ ಯಾವದು ?

ಸುಬ್ರಹ್ಮಣ್ಯಯ್ಯ, ಅ॥ ಮಾ॥
ತಾ॥ ಬಾ೦॥ ಗೌ॥ ಕ॥ ಸ್ಕೂಲ್
ಮಿರ್ಲೆ.

ಗ್ರಂಥವಿಮರ್ಶೆ.

—ನೀತಿಮಂಜರಿ—

(ದ್ವಿತೀಯ ಮುದ್ರಣ)

ಅವ್ವೈಯಾರ್ ಮೊದಲಾದವರಿಂದ ರಚಿತವಾದ ತಮಿಳು ನೀತಿಗ್ರಂಥಗಳನ್ನು ಮು॥ ರಾ॥ ಆರ್ ನರಸಿಂಹಾಚಾರ್, ಎಂ. ಎ. ಯವರು ಕನ್ನಡಿಗರಿಗೆ ಉಪಯುಕ್ತವಾಗುವಂತೆ ಕನ್ನಡ ಕಂದಪದ್ಯಗಳಲ್ಲಿ ಬರೆದು ಕರ್ಣಾಟಕ ಗ್ರಂಥಮಾಲೆಯಲ್ಲಿ ಪ್ರಸಿದ್ಧಪಡಿಸಿದ್ದರಷ್ಟೆ. ಮೈಸೂರು ಪಠನೀಯಗ್ರಂಥನಿರ್ಣಾಯಕ ಸಭೆಯವರೂ, ಮದರಾಸ್ ವಿಶ್ವವಿದ್ಯಾಲಯ ಸಂಘದವರೂ, ಕನ್ನಡ ಪಂಡಿತರನೇಕರೂ ಈ ಪುಸ್ತಕವನ್ನು ಪಾಠಶಾಲೆಯ ಮುದ್ರಣದಲ್ಲಿ ಆದರಿಸಿದ್ದರಿಂದ ಗ್ರಂಥಕರ್ತರು ಕೆಲವು ಮಾರ್ಪಾಡುಗಳನ್ನು ಮಾಡಿ ಎರಡನೆಯಾವೃತ್ತಿ ಮುದ್ರಿಸಿರುವರು.

ಈ ಗ್ರಂಥದಲ್ಲಿ ಪದ್ಯಶೈಲಿಯು, ಸರಳವಾಗಿ ಶಾಸ್ತ್ರ್ಯವಾಗಿರುವುದು ಓದತಕ್ಕವರಿಗೆ ಅನುಕೂಲವಾಗಿರುವಂತೆ ಕ್ಲಿಷ್ಟಪದಗಳಿಗೆ ಅರ್ಥವೂ, ಅವಶ್ಯಕತೆ ತೋರಿದಕಡೆ ವ್ಯಾಕರಣ ಸಂಬಂಧವಾದ ಟಿಪ್ಪಣವೂ ಬರೆದಿರುವರು

ಹಳಗನ್ನಡದಲ್ಲಿ ಉಪಯೋಗಿಸುವ ಱ, ಱಿ, ಎಂಬ ಅಕ್ಷರಗಳಿಗೆ ಬದಲಾಗಿ ಹೊಸಗನ್ನಡದಲ್ಲಿ ರ, ಳ, ಎಂಬ ಅಕ್ಷರವನ್ನು ಉಪಯೋಗಿಸುವರಷ್ಟೆ, ಈ ಎರಡು ವಿಧವಾದ ಅಕ್ಷರಗಳಲ್ಲಿ ಒಂದಕ್ಕೆ ಪ್ರತಿಯಾಗಿ ಮತ್ತೊಂದಿದ್ದರೆ ಅನೇಕ ಪದಗಳಲ್ಲಿ ಅರ್ಥಭೇದವೂ, ಸ್ವಲ್ಪಮಟ್ಟಿಗೆ, ವ್ಯಾಕರಣಪ್ರಕ್ರಿಯಾಭೇದವೂ ಉಂಟಾಗುವುದೆಂಬ ಸೂಕ್ಷ್ಮವಾರ್ಗವನ್ನು ವಾಚಕರಿಗೆ ವ್ಯಕ್ತಗೊಳಿಸಬೇಕೆಂಬ ಉದ್ದೇಶದಿಂದ ಱ, ಱಿ ಕಾರಗಳು ಇರಬೇಕಾದಕಡೆ ಅವುಗಳನ್ನು ಈ ಗ್ರಂಥದಲ್ಲಿ ಉಪಯೋಗಿಸಿರುವರಲ್ಲದೆ ಅಂಥವುಗಳನ್ನು ಟಿಪ್ಪಣದಲ್ಲಿ ಉದಹರಿಸಿರುವರು.

ಱ, ಱಿ, ಎಂಬ ಅಕ್ಷರಗಳು ಪ್ರಾಯಕವಾಗಿ ಇತರ ದ್ರಾವಿಡಭಾಷೆಗಳಲ್ಲಿ ವಾಡಿಕೆಯಲ್ಲಿರುವುದರಿಂದಲೂ, ಕನ್ನಡಭಾಷೆಯ ಪದ್ಯಕಾವ್ಯಗಳಲ್ಲಿ ಪ್ರಚಾರಕ್ಕೆ ತರುವುದರಿಂದಲೂ ಶಬ್ದವ್ಯುತ್ಪತ್ತಿಶಾಸ್ತ್ರದ (Philology) ಜ್ಞಾನಕ್ಕೆ ಬಹಳಮಟ್ಟಿಗೆ ಸಹಕಾರಿಗಳಾಗುವವು.

ವ್ಯಾಕರಣಶುದ್ಧವಾಗಿಯೂ, ಲಲಿತವಾಗಿಯೂ, ಸಂಶೋಧನವಾಗಿಯೂ ಇರುವ ಈ ಗ್ರಂಥವು ಚಿರಕಾಲ ಜೀವಿಸುವುದೆಂದು ತೋರುವುದು.

ಈ ಗ್ರಂಥಕರ್ತರಿಂದ ರಚಿಸಲ್ಪಡುವ ಪ್ರಸಿದ್ಧವಾದ ಕುಱುಳೆಂಬ ತಮಿಳು ತಿಗ್ರಂಥದ ಭಾಷಾಂತರವನ್ನು ಓದಲು ಬಹಳ ಆತುರವಾಗಿರುವೆವು.

ಗ್ರಂಥವು ಜಿ. ಟಿ ಎ. ಪ್ರಸ್ಸಿನಲ್ಲಿ ಬಹಳ ಚೆನ್ನಾಗಿ ಮುದ್ರಿತವಾಗಿರುವುದು. ಇ ಬೆಲೆ ೧೮ ಆಣೆ. ಗ್ರಂಥಕರ್ತರಲ್ಲಿಯೂ, ಗ್ರಾಜುಯೇಟ್ಸ್‌ನಲ್ಲಿಯೂ ಗ್ರಂಥವು ಇರೆಯುವುದು.

ಒಗಟೆ.

ಕ ಅಕ್ಷರದ ಒಂದು ಶಬ್ದವಿದೆ.

೧— ಎ ನೇ ಅಕ್ಷರ = ಕೊಳೆ

೧— ಇ ನೇ ಅಕ್ಷರ = ಬಡಗಿ

ಎ— ಇ ನೇ ಅಕ್ಷರ = ನಾಶ

ಇ— ೧ ನೇ ಅಕ್ಷರ = ಧರ್ಮಕರ್ತ

ಕ— ಎ ನೇ ಅಕ್ಷರ = ರಸಭೇದ

ಕ— ಇ ನೇ ಅಕ್ಷರ = ಮಂಗಳ

೧, ಎ, ಇ, ಕ ನೇ ಅಕ್ಷರ = ವೃಕ್ಷಭೇದ

ಆ ಶಬ್ದ ಯಾವದು ?

ಸುಬ್ರಹ್ಮಣ್ಯಯ್ಯ, ಅ॥ ಮಾ॥
ತಾ॥ ಬಾ೦॥ ಗೌ॥ ಕ॥ ಸ್ಕೂಲ್
ಮಿರ್ಲೆ.

ಗ್ರಂಥವಿಮರ್ಶೆ.

—ನೀತಿಮಂಜರಿ—

(ದ್ವಿತೀಯ ಮುದ್ರಣ)

ಅವ್ವೈಯಾರ್ ಮೊದಲಾದವರಿಂದ ರಚಿತವಾದ ತಮಿಳು ನೀತಿಗ್ರಂಥಗಳನ್ನು ಮು॥ ರಾ॥ ಆರ್. ನರಸಿಂಹಾಚಾರ್, ಎಂ. ಎ. ಯವರು ಕನ್ನಡಿಗರಿಗೆ ಉಪಯುಕ್ತವಾಗುವಂತೆ ಕನ್ನಡ ಕಂದಪದ್ಯಗಳಲ್ಲಿ ಬರೆದು ಕರ್ಣಾಟಕ ಗ್ರಂಥಮಾಲೆಯಲ್ಲಿ ಪ್ರಸಿದ್ಧಪಡಿಸಿದ್ದರಷ್ಟೆ. ಮೈಸೂರು ಪಠನೀಯಗ್ರಂಥನಿರ್ಣಾಯಕ ಸಭೆಯವರೂ, ಮದರಾಸ್ ವಿಶ್ವವಿದ್ಯಾಲಯ ಸಂಘದವರೂ, ಕನ್ನಡ ಪಂಡಿತರನೇಕರೂ ಈ ಪುಸ್ತಕವನ್ನು ಮೊದಲನೆಯ ಮುದ್ರಣದಲ್ಲಿ ಆದರಿಸಿದ್ದರಿಂದ ಗ್ರಂಥಕರ್ತರು ಕೆಲವು ಮಾರುಪಾಡುಗಳನ್ನು ಮಾಡಿ ಎರಡನೆಯಾವೃತ್ತಿ ಮುದ್ರಿಸಿರುವರು.

ಈ ಗ್ರಂಥದಲ್ಲಿ ಪದಶೈಲಿಯು, ಸರಳವಾಗಿ ಶಾಸ್ತ್ರೀಯವಾಗಿರುವುದು. ಓದುವವರಿಗೆ ಅನುಕೂಲವಾಗಿರುವಂತೆ ಕ್ಲಿಷ್ಟಪದಗಳಿಗೆ ಅರ್ಥವೂ, ಅವಶ್ಯಕತೆ ತೋರಿದಕಡೆ ವ್ಯಾಕರಣ ಸಂಬಂಧವಾದ ಟಿಪ್ಪಣವೂ ಬರೆದಿರುವರು

ಹಳಗನ್ನಡದಲ್ಲಿ ಉಪಯೋಗಿಸುವ ಱ, ಱ, ಎಂಬ ಅಕ್ಷರಗಳಿಗೆ ಬದಲಾಗಿ ಹೊಸಗನ್ನಡದಲ್ಲಿ ರ, ಳ, ಎಂಬ ಅಕ್ಷರವನ್ನು ಉಪಯೋಗಿಸುವರಷ್ಟೆ, ಈ ಎರಡು ವಿಧವಾದ ಅಕ್ಷರಗಳಲ್ಲಿ ಒಂದಕ್ಕೆ ಪ್ರತಿಯಾಗಿ ಮತ್ತೊಂದಿದ್ದರೆ ಅನೇಕ ಪದಗಳಲ್ಲಿ ಅರ್ಥಭೇದವೂ, ಸ್ವಲ್ಪಮಟ್ಟಿಗೆ, ವ್ಯಾಕರಣಪ್ರಕ್ರಿಯಾಭೇದವೂ ಉಂಟಾಗುವುದೆಂಬ ಸೂಕ್ಷ್ಮವಾರ್ಗವನ್ನು ವಾಚಕರಿಗೆ ವ್ಯಕ್ತಗೊಳಿಸಬೇಕೆಂಬ ಉದ್ದೇಶದಿಂದ ಱ, ಱ ಕಾರಗಳು ಇರಬೇಕಾದಕಡೆ ಅವುಗಳನ್ನು ಈ ಗ್ರಂಥದಲ್ಲಿ ಉಪಯೋಗಿಸಿರುವರಲ್ಲದೆ ಅಂಥವುಗಳನ್ನು ಟಿಪ್ಪಣದಲ್ಲಿ ಉದಹರಿಸಿರುವರು.

ಱ, ಱ, ಎಂಬ ಅಕ್ಷರಗಳು ಪ್ರಾಯಕವಾಗಿ ಇತರ ದ್ರಾವಿಡಭಾಷೆಗಳಲ್ಲಿ ವಾಡಿಕೆಯಲ್ಲಿರುವುದರಿಂದಲೂ, ಕನ್ನಡಭಾಷೆಯ ಪದ್ಯಕಾವ್ಯಗಳಲ್ಲಿ ಪ್ರಚಾರಕ್ಕೆ ತರುವುದರಿಂದಲೂ ಶಬ್ದವ್ಯುತ್ಪತ್ತಿಶಾಸ್ತ್ರದ (Philology) ಜ್ಞಾನಕ್ಕೆ ಬಹಳಮಟ್ಟಿಗೆ ಸಹಕಾರಿಗಳಾಗುವವು.

ವ್ಯಾಕರಣಶುದ್ಧವಾಗಿಯೂ, ಲಲಿತವಾಗಿಯೂ, ಸುಬೋಧವಾಗಿಯೂ ಇರುವ ಈ ಗ್ರಂಥವು ಚಿರಕಾಲ ಜೀವಿಸುವುದೆಂದು ತೋರುವುದು.

ಚಿನ್ನದ ಮೊಟ್ಟೆಯಿಡುತ್ತಿದ್ದ ಬಾತು.

ಒಬ್ಬ ಮನುಷ್ಯನಿಗೆ ಪುಣ್ಯವಶದಿಂದ, ಪ್ರತಿದಿನವೂ ಬಂದೊಂದು ಚಿನ್ನದ ಮೊಟ್ಟೆಯನ್ನಿಡುತ್ತಿದ್ದ ಬಂದು ಬಾತು ಸಿಕ್ಕಿತು. ಇಷ್ಟು ಸಾವಕಾಶವಾಗಿ ಸಿಕ್ಕುವ ಆದಾಯಕ್ಕೆ ಅತೃಪ್ತನಾಗಿ, ಅವನು ಇರುವ ನಿಕ್ಷೇಪವನ್ನೆಲ್ಲ ಒಂದೇಬಾರಿಗೆ ಬಾಚಿಕೊಳ್ಳಬೇಕೆಂದು ಬಗೆದು, ಆ ಬಾತನ್ನು ಕೊಂದನು. ಅದರ ಹೊಟ್ಟೆಯನ್ನು ಬಗಿದು ನೋಡಲಾಗಿ, ಉಳಿದ ಬಾತುಗಳಲ್ಲಿ ಏನಿರುವುದೋ ಅದೇ ಇರುವುದೆಂದು ಗೊತ್ತಾಯಿತು.

ಆಕೆಗೆ ಪಾರವಿಲ್ಲ. ಅತ್ಯಾಶೆ ಗತಿಗೆಡಿಸಿತು.

ಈ ರೀತಿ ೬೪ ಪುಟಗಳುಳ್ಳ ಸಚಿತ್ರ ಪುಸ್ತಕವು ಸಿದ್ಧವಾಗಿರುತ್ತದೆ. ಇದರಲ್ಲಿ ಸುಮಾರು ೨೦೦ ಚಿತ್ರಗಳಿರುವವು. ಇದರ ಕ್ರಯರ ಆಣೆ ಪ್ರತಿಗಳು ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ನಲ್ಲಿ ಸಿಕ್ಕುವವು.

K7
420

ವಿದ್ಯಾದಾಯಿನಿ

೭ನೇ ಭಾಗ.

೧೯೯೯.

ಮೈಸೂರು

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್, ಮೈಸೂರು.

ವಿಷಯವನ್ನು ಬರೆದವರ ಹೆಸರುಗಳು.

೧ ಎಡಿಟರ್

೨ ಮು॥ ರಾ॥ ಎಂ. ವೆಂಕಟಕೃಷ್ಣಯ್ಯ ಹೆಡ್ಮಾಸ್ಟರ್

೩ ,, ಬಿ. ವೆಂಕಟಾಚಾರ್ ಮುನ್ಸಿಫ್

೪ ,, ಎಂ. ಹಿರಿಯಣ್ಣ ಬಿ. ಎ. ಎಲ್. ಟಿ.

೫ ,, ಎಚ್. ನರಸಿಹ್ಮಾಚಾರ್ ವೆಟರನೆರಿ ಸರ್ಜ್

೬ ,, ನರಸಿಂಹಯ್ಯಂಗಾರ್ ಅಗ್ರಿಕಲ್ಚರಲ್ ಲೆಕ್ಚರರ್ ನಂ॥ ಸ್ಕೂಲ್

೭ ,, ಜಿ. ಭೀಮರಾವ್ ಬಿ. ಎ. ಹೈಸ್ಕೂಲ್ ಚಿಕ್ಕಮಗಳೂರು

೮ ,, ಕೆ. ರಾಮಸ್ವಾಮಯ್ಯಂಗಾರ್ ಹೆಡ್ಮಾಸ್ಟರ್

೯ ಪಾ ಚೆಲ್ಲಮ್ಮ ಸಹಾಯೆ ಉಪಾಧ್ಯಾಯಿನಿ ಮಹಾರಾಣಿ ಗರ್ಲ್ಸ್ ಸ್ಕೂಲ್

೧೦ ಮು॥ ರಾ॥ ಶ್ರೀಕಂಠೇಶಗೌಡ ಬಿ. ಎ. ಬಿ. ಎಲ್.

೧೧ ,, ಕೆ. ರಾಮಯ್ಯನವರು

೧೨ ಮೇ॥ ಕುಂಡಲಗಿರ್ಯಾಚಾರ್ಯರು

೧೩ ಮು॥ ರಾ॥ ಎಂ, ಸುಬ್ಬರಾವ್ ಹೆ॥ ಮಾ॥

೧೪ ,, ಜಿ ರಾಮೈಯ್ಯ ಅ॥ ಮಾ॥

೧೫ ,, ಎಚ್. ಸೂರ್ಯನಾರಣಪ್ಪ ಅ॥ ಮಾ॥

೧೬ ,, ಕೃಷ್ಣಶಾಸ್ತ್ರಿ ಹೊಸಕೆರೆ ಸ್ಕೂಲ್ಮಾಸ್ಟರ್

೧೭ ,, —. ಹನುಮಂತರಾ॥ ಅ॥ ಮಾ॥

೧೮ ಬಿ. ವೆಂಕಟರಮಣೈಯ್ಯ ಹೆ॥ ಮಾ॥

೧೯ ,, ಜಿ ಶ್ರೀಕಂಠಶಾಸ್ತ್ರಿ ಹೆಡ್ಮಾಸ್ಟರ್

೨೦ ,, ಎಂ. ಶ್ರೀನಿವಾಸರಾವ್ ಗೌ॥ ಕ॥ ಸ್ಕೂಲ್ ಕಳ್ಳೀಕಟ್ಟೆ

೨೧ ,, ಕೆ. ಸುಬ್ರಹ್ಮಣ್ಯಶಾಸ್ತ್ರಿ ಅ॥ಮಾ॥ಗೌ॥ಗ॥ಸ್ಕೂಲ್ ಶಿವಮೊಗ್ಗ

೨೨ ,, ಜಿ. ಮುನಿಯಪ್ಪ ಅ॥ ಮಾ॥

೨೩ ,, ಸಿ, ಪುಟ್ಟಯ್ಯ ಸ್ಕೂಲ್ಮಾಸ್ಟರ್ ಚಿಕ್ಕಬಳ್ಳಾಪುರ

೨೪ ,, ಜಿ. ವೆಂಕಟೇಶಯ್ಯ ಮಾವತ್ತೂರು

೨೫ ,, ವೀಣೆ ಬಿಷ್ಟಪ್ಪ ಅ॥ ಮಾ॥ ಗೌ॥ ಕ॥ ಸ್ಕೂಲ್ ಚಿತ್ರದುರ್ಗ

೨೬ ,, ಎಲ್. ಕೋನೇರಿರಾವ್ ಶನೇಶ್ವರಂ ವಿದ್ಯಾರ್ಥಿ ಮಹಾರಾಜಾ ಕಾಲೇಜು

೨೭ ,, ಆರ್. ವೆಂಕಟಸುಬ್ಬಯ್ಯ ಶನೇಶ್ವರಂ ವಿದ್ಯಾರ್ಥಿ ಮುಳಬಾಗಲ್

೨೮ ,, ಲಕ್ಕೂರು ರಾಮಚಂದ್ರರಾವ್ ವಿದ್ಯಾರ್ಥಿ

೨೯ ,, ಹಿರಿಯಣ್ಣ

ವಿಷಯಸೂಚನೆ.

೩ ಭೂಗೋಳಶಾಸ್ತ್ರ	೧ ಭೂಪಟದ ಸಹಾಯದಿಂದ ಒಂದುದೇಶದ ವಿಷಯವನ್ನು ತೋರಿಸುವದು	೧೩, ೧೪
	೨ ಟಿಪ್ಪಣಿ	೧೧೩, ೧೧೬
	೩ ಶಾಸ್ತ್ರ	೧೪೯, ೧೫೦
೪ ಗಣಿತಶಾಸ್ತ್ರ	ಲೆಕ್ಕಗಳು	೩೫, ೩೬, ೩೪, ೩೬, ೧೩೭, ೧೩೯, ೧೩೧, ೧೩೭
೬ ಸಂಪತ್ತಿಶಾಸ್ತ್ರ	ಪೂರ್ಣಸಂಗಣಿತ	೨೭೪, ೨೭೬, ೨೭೧, ೨೭೭
	ನಾಣ್ಯಗಳು	೧೧೧, ೧೧೩
	ಶಾಸ್ತ್ರ	೪೪, ೪೬
೧೦ ವಿದ್ಯಾವಿಷಯ	೧ ತಾಯಿತಂದೆಗಳ ಕರ್ತವ್ಯ	೪೩, ೪೪
	೨ ಉಕ್ತಲೇಖನ	೪೬–೪೧
	೩ ಕಂಠಪಾಠ ಮಾಡಿಸುವಿಕೆ	೨೦೬–೨೦೪
	೪ ಬಾಲಪಾಠಗಳು	೨೪೨–೨೪೩
೧೧ ಕಿಂಡರಗಾರ್ಟನ್	೧ ಮದ್ರಾಸ್ ಸ್ಕೂಲ್ ಇನ್‌ಸ್ಪೆಕ್ಟ್ರಸ್ ಮಿಸೆಸ್ ಬ್ರಾಂಡ್ ರವರ ಪ್ರವರ್ತನ	೪೧–೪೪
	೨ ಗಾಲವ್ಯ	೧೩೪–೧೩೭
	೩ ಕಿಂಡರ್‌ಗಾರ್ಟನ್	೧೪೬–೧೪೯
	೪ ಆಡುವ ಆಟ	೨೧೧, ೨೪೬–೨೪೧, ೨೭೭–೨೭೬ [೧೪೩, ೨೭೪]
೧೨ ಕಥೆಗಳು	೧ ಗ್ರಿಸಿಲ್ಡಾ	೧೨೯–೧೩೦
	೨ ಪೋಸಗಾರ ಧೊಬಿಯನ್ನೂ ಹಾಸ್ಯಗಾರನನ್ನೂ ಕುರಿತದ್ದು	೪೬–೪೬
	೩ ನೀತಿ	೧೪೯–೧೪೬
	೪ ಹೆದರಿಕೆ ಯಿಲ್ಲದ ಹುಡುಗ	೧೧೯–೧೩೦
	೫ ಸಲಿಸ್ತಾನನ ಎಡಗಣ್ಣು	೧೪೯–೧೪೭
	೬ ಕೋಳಿಯೂ ರತ್ನವೂ	೨೪೦
	೭ ಮಾತೃಭಕ್ತಿಗೆ ಪುರಸ್ಕಾರ	೨೭೯–೨೪೧
೧೩ ವೆಸ್ತುಪಾಠಗಳು	೧ ಚಾಳಿ	೪೯–೪೬, ೨೦೯–೨೧೩
	೨ ಹಾಲು	೧೪೭–೧೪೯
	೩ ಕುರಿ	೧೪೦–೨೨೭
೧೪ ಗ್ರಂಥವಿಮರ್ಶೆ	೧ ಕಲಹಪ್ರಿಯ-ಪ್ರಹಸನ	೪೪–೪೬
	೨ ನಿರ್ಭಾಗ್ಯಮುರಾದ್	೬೧ ೬೪
	೩ ರುಕ್ಮಿಣಿ ಪರಿಣಯ	೧೪೩–೧೪೪

ವಿಷಯಸೂಚನೆ.

ವಿಷಯ.			ಪುಸಸಂಖ್ಯೆ.
೧ ಎಡಿಟರವರ ನೋಟ್ಸು	.....		೧-೪, ೬೫-೬೭ ೮೯-೯೧ ೨೩-೨೪, ೯೯-೯೯, ೧೩೧-೧೩೩ ೧೪೫-೧೪೬, ೧೬೯-೧೭೦ ೧೯೯-೧೯೮, ೨೦೭-೨೦೯ ೨೪೧-೨೪೪, ೨೬೫-೨೬೬
೨ ಪ್ರಸಿದ್ಧಪುರುಷರು	೧ ಪಿಸ್ಟಲಟ್ಸುಯವರು		೯೯-೧೦೪, ೩೫-೩೯, ೧೩೩-೧೩೪
	೨ ಫಿಲಿಪ್‌ಗಿಡ್ಡಿ		೧೪೯-೧೫೪, ೧೩೧-೧೩೪, ೧೪೪-೧೪೪
	೩ ಪರಂಜಪೆಯುವರು		೨೪೯-೨೬೩, ೨೬೯-೨೭೯, ೧೪೧-೧೪೭
			೨೫೯-೨೬೩
೩ ಪ್ರಸಿದ್ಧ ಸ್ತ್ರೀಯರು	೧ ತರಳಾದತ್ತರವರು	.....	೩-೧೧
	೨ ಊರ್ಮಿಳೆ		೨೩-೩೨
	೩ ಸೌ॥ ಪುಟ್ಟಲಕ್ಷ್ಮಮ್ಮನವರು		೪೪-೬೧
	೪ ಡಾ॥ ಆನಂದಬಾಯಿ ಜೋಷಿಯವರು		೨೦೯-೨೪೪
೪ ವ್ಯವಸಾಯ ಶಾಸ್ತ್ರ	೧ ಸಪ್ಯಗಳು ಮತ್ತು ಅವುಗಳಉಪಯೋಗ		೩೯, ೪೩, ೧೦೩, ೧೧೨
	೨ ಗೊಬ್ಬರ ಮತ್ತು ಗೊಬ್ಬರಹಾಕುವ ವಿದ್ಧೇಶಗಳು.		೧೩೪, ೧೪೧
	೩ ಟಿಪ್ಪಣಿ		೧೯೪, ೨೦೨
೫ ಆರೋಗ್ಯಶಾಸ್ತ್ರ	೧ ಪೈಲೇಗ್		೩೬, ೩೪
	೨ ಶುದ್ಧಿಕರಣಾಂಗಗಳು		೧೨೪, ೧೩೨
	೩ ಅದ್ಭುತವಾದ ದೇಹಶಕ್ತಿ		೧೩೨, ೧೩೪
	೪ ಆರೋಗ್ಯಶಾಸ್ತ್ರ		೨೩೩, ೨೪೪
೬ ವ್ಯಾಕರಣಶಾಸ್ತ್ರ	೧ ಟಿಪ್ಪಣಿ		೧೧, ೧೭
	೨ ನಾಮಪ್ರಕರಣ		೩೨, ೩೪
	೩ ವಿಭಕ್ತಿಪ್ರಕರಣ		೬೧, ೬೪
	೪ ನಾಮವಿಭಕ್ತಿಪ್ರಕರಣ		೧೦೪, ೧೧೬
	೫ ಪ್ರಥಮಾ ದ್ವಿತೀಯಾ ವಿಭಕ್ತಿಪ್ರಕರಣ		೧೪೪, ೧೪೩, ೧೪೪, ೧೩೬
	೬ ಭಾಷಾವಿಚಾರ		೨೨೬, ೨೨೨
	೭ ತೃತೀಯಾವಿಭಕ್ತಿಪ್ರಕರಣ		೨೪೬, ೨೪೪, ೨೬೬, ೨೬೪

ಹೊರಟಿವೆ. ಅವುಗಳೊಳಗೆ ನೀತಿಶಾಸ್ತ್ರವು ಮೊದಲನೆಯದು. ಈ ನೀತಿಶಾಸ್ತ್ರದ ಗ್ರಂಥಗಳು ಪ್ರತಿಯೊಂದು ಯಥೋಚಿತವಾಗಿ ಇದ್ದೇ ಇರುವವು ಕನ್ನಡದಲ್ಲಿ ದುರ್ಗಸಿಂಹನ ಪಂಚತಂತ್ರವೇ ಮುಂತಾದ ಪ್ರಾಚೀನ ನೀತಿಗ್ರಂಥಗಳು ಕೆಲವಿವೆ ಮತ್ತು ಸಂಸ್ಕೃತಭಾಷೆಯಲ್ಲಿರುವ ಭರ್ತೃಹರಿಯ ನೀತಿಯೂ ತಮಿಳಿನಲ್ಲಿರುವ ಕೆಲವು ನೀತಿಗಳೂ ಈಚೆಗೆ ಕನ್ನಡಕ್ಕೆ ಪ್ರಾಚೀನ ಸರಣಿಯಿಂದಲೇ ಪರಿವರ್ತಿಸಲ್ಪಟ್ಟವು. ಇವುಗಳು ಅಂತಿರಲಿ. ಈಗ ಹೊಸನ್ನಾಳಿ ತಾಲ್ಲೂಕು ಎ ವಿ. ಸ್ಕೂಲಿನ ಪ್ರಥಮೋಪಾಧ್ಯಾಯರಾದ ಮಾ|| ಕೆ. ರಾಮಸ್ವಾಮಯ್ಯಂಗಾರ್ಯರಿಂದ ರಚಿತವಾದ "ಒಳ್ಳಿದಿಗನ್ನಡಿ" ಎಂಬೊಂದು ಪುಸ್ತಕವು ನಮ್ಮಲ್ಲಿಗೆ ಕಳುಹಿಸಲ್ಪಟ್ಟಿದೆ. ಅದನ್ನು ಆದರದಿಂದ ಅಂಗೀಕರಿಸಿರುತ್ತೇನೆ. ಈ ಸಣ್ಣ ಪುಸ್ತಕವು ಮುಖ್ಯವಾಗಿ ಕಂದಗಳಿಗೆ ಒಳ್ಳಿದೆಯನ್ನು ತಿಳಿಸಲೆಳಸಿ, ತಾನೂ ಕಂದಮಯವಾದ ಹಾಗೆ ಇದೆ ಈಮ್ಮಟ್ಟಿಗೆ ನಮ್ಮ ದೇಶದಲ್ಲಿ ವಿದ್ಯಾಭಿವೃದ್ಧಿಯಾಗಿರುವುದಕ್ಕೆ ಬಹಳ ಸಂತೋಷಿಸದೀಕು,

ಇದರಲ್ಲಿರುವ ಕೆಲವು ವಿಷಯಗಳು ಹಿತೋಪದೇಶರೂಪದಿಂದ ತಕ್ಕಮಟ್ಟಿಗೆ ಚೆನ್ನಾಗಿವೆ. ಆದರೆ ಇನ್ನು ಹಲವು ಉಪದೇಶಗಳು ಈ ಪುಸ್ತಕದ ಉದ್ದೇಶವನ್ನು ಸರಿಯಾಗಿ ನೆರವೇರಿಸುವಂತೆ ಕಾಣುವದಿಲ್ಲ. ಹೇಳಿರುವ ಸಂಗತಿಗಳು ಒಂದು ಕ್ರಮವನ್ನು ಅನುಸರಿಸಿಲ್ಲವು. "ಸಿರಿನಿಕ್ಕುವಮೊಂದುಬಗೆದುಮೆರೆಯುದಿರ" ಎಂದು ಮೊಟ್ಟಮೊದಲು ಕಷ್ಟವಾದ ಸಂಗತಿಯನ್ನು ಆರಂಭಿಸಿ ಮುಂದೆ ಅಲ್ಲಲ್ಲಿ ಅತಿಸುಲಭವಾಗಿ ಸಣ್ಣ ವಿಷಯಗಳು ಹೇಳಲ್ಪಟ್ಟಿವೆ. ಮತ್ತು ಇದರಲ್ಲಿ ಕೆಲವು ಉಪದೇಶಗಳು ಸಣ್ಣ ಹುಡುಗರು ಮಾತ್ರ ತಿಳಿಯತಕ್ಕುವು. "ಎಂಜಲನುಣವೇಡಂ" "ಪಸಿದುಣ್" "ಪಸಿಯುದಿರಲ್ಕುಣವೇಡಂ" "ಮಳಿಯೊಳ್ನನೆಯುದಿರ" "ಅರುಣೋದಯದಲ್ಲೆಳ್ದು ರುಧಿರದಿಂಕೈಕಾಲೊಗಂಗಳಂತೊಳೆ" ಎಂಬಿವು ಮುಂತಾದುವುಗಳನ್ನು ದೊಡ್ಡಹುಡುಗರು ಓದಿದರೆ, ಇವು ಸರ್ವಸಾಧಾರಣ ವಿಷಯಗಳಾದುದರಿಂದ ಪರಿಹಾಸಮಾಡಬಹುದು. "ಉಸಿರ್ಪೆಹಿತವಂಪೆರರಿಗೆ" "ಆದಾಯವರಿತುಬೀಯವಸಾರದಿಂವ್ಯಾಡಿವಿಗಿ ಸುಪ್ಪರುಳಂ" ಇತ್ಯಾದಿಗಳನ್ನು ಅರಿಯಲು ಸಣ್ಣಹುಡುಗರ ಬುದ್ಧಿಗಿಂತ ಹೆಚ್ಚಾದ ಬುದ್ಧಿಶಕ್ತಿ ಬೇಕಾಗುವದರಿಂದ ಇವು ದೊಡ್ಡಹುಡುಗರಿಗೆ ತಕ್ಕುವು. ಮತ್ತು "ಪೆರವೆಳ್ಗೆಮನಮನಿಕ್ಕದಿರ" "ಕೆಡಿಸದಿರಬಲೆಯುರಂ" "ಬಿಲಿವೆಣ್ಣಬಗೆಗೆಸೋಲದೆ" ಎಂಬಿವು ಮುಂತಾದುವು ಬಾಲಕಸಾಮಾನ್ಯಕ್ಕೂ ದುರವಗಾಹಗಳಾದುದರಿಂದ ಯಾವನಶಾಲಿಗಳಿಗೆ ಯೋಗ್ಯಗಳು. ಹೀಗೆ ಓದತಕ್ಕವರ ಮನೋನುಗುಣವಾದ ಬುದ್ಧಿಶಕ್ತಿಯಕ್ಕುವನ್ನು ಅನುಸರಿಸದೆ, ಕಲಸುಮೇಲೋಗರದಂತೆ ವಿಷಯಗಳೂ ಜಟಿಲವಾಗಿರುವದರಿಂದ ಇದು ಓದತಕ್ಕವರಿಗೆ ದುರ್ಬೋಧವಾಗಿದೆ. ಆದರೆ ಈ ಪುಸ್ತಕವು ಪೊಲ್ಲವೆಯ್ಯೆಯ್ವುತ್ತು, ಬಳ್ಳಿದುವೆಯ್ವುತ್ತು ಎಂದು ಎರಡುಭಾಗವಾಗಿ ಗ್ರಂಥಕರ್ತೃವಿಂದಲೇ ವಿಂಗಡಿಸಲ್ಪಟ್ಟಿದೆ. ಇವುಗಳಲ್ಲಿ ಪೊಲ್ಲವೆ ಎಂದರೆ ಆಚರಣೀಯವಲ್ಲದ ವಿಷಯವು ಒಳ್ಳಿದವೆಂದರೆ ಆಚರಣೀಯವಾದ ವಿಷಯಗಳು. ಆಚರಣೀಯವಲ್ಲದ್ದ

೪	ಅಲ್ಲಾವುದ್ದೀನ ಮತ್ತು ಅದ್ಭುತ ದೀಪ	೨೪೬—೨೪೯
೫	ದೇವಿಚೌದುರಾಣಿ	೨೪೬—೨೫೨
೬	ರಾಜಧರಂಕಲಾನಿಧಿ	೨೫೩—೨೫೪
೧೫ ವೆಸೂರು ದೇಶೀಯ ಪರೀಕ್ಷೆಯ ಪ್ರಶ್ನಪತ್ರಿಕೆಗಳು	೧ ಪಾಠಕ್ರಮVI ತರಗತಿ	೬೬—೬೯
	೨ ಪರೀಕ್ಷಕರ ಹೆಸರು ವಿಳಾಸ	೧೬೪—೧೬೪
	೩ ಪಾಠಕ್ರಮVII ತರಗತಿ	೧೪೩—೧೪೪
೧೬ ವಿದ್ಯಾಭ್ಯಾಸದ ಇಲಾಖೆ ಅಧಿಕಾರಿಗಳು	೧—೧೪೯ ನೇ ಇಸವಿ ಅಕ್ಟೋಬರ್ ತಾ॥ ೧೩ ನೆಯ ಡಿ. ನವಂಬರ್ ೯	೨೩೪—೨೩೯
	೧೦ ನೇ ಸೆಪ್ಟಂಬರ್ ೧೪೯೯ ಸರ್ಕಿಲರ್ ಸಂಬಂಧ ೯. ಸ್ಕೂಲು ಡೆಪ್ಯುಟಿ ಇನ್‌ಸ್ಪೆಕ್ಟರುಗಳಿಗೆಲ್ಲಾ	೨೩೬—೨೩೩
	೩ ನಾರ್ಮಲ್ ಮತ್ತು ಇಂಡಸ್ಟ್ರಿಯಲ್ ಪಾಠಶಾಲೆಯ ಮುಖ್ಯೋಪಾಧ್ಯಾಯರುಗಳಿಗೆ	೨೪೩
೧೭ ಸೂಚನೆ ಮತ್ತು ಸವಲತ್ತುಗಳು		೪೧-೪೬, ೬೩-೭೦ ೧೬೬—೧೬೩, ೨೧೬ ೨೬೩—೨೬೪, ೨೪೪—೨೪೫
೧೪ ಹಾಡುಗಳು	ಕೃಷ್ಣರಾಜೇಂದ್ರ ವರ್ಧಂತಿ	೧೪೨—೧೪೩
೧೯ ಪ್ರೋಗಟನೆಗಳು ಉತ್ತರಗಳು		೪೪, ೭೬, ೧೨೦, ೧೪೩, ೧೯೩, ೨೩೯
೨೦ ವಿದ್ಯಾಭ್ಯಾಸದ ಇಲಾಖೆ ರಿಪೋರ್ಟು	೯೩—೯೪ ನೇ ಇಸವಿ	೨೧೪—೨೧೫
೨೧ ಸ್ಕೂಲ್ ರಿಪೋರ್ಟುಗಳು	ತಲಕಾಡು ಸ್ಕೂಲು	೧೧೬—೧೧೯

ಗ್ರಂಥವಿಮರ್ಶೆ.

ಲೋಕದಲ್ಲಿ ಮನುಷ್ಯನೆನಿಸಿದವನು ಶ್ರೇಷ್ಠವಾದ ನಡೆವಳಿಯಿಂದ ಜೀವಿಸಬೇಕು. ಆ ನಡೆವಳಿಯು ತನಗೂ, ತಾನು ಸೇರಿರುವ ಸಮುದಾಯಕ್ಕೂ ಯಾವ ರೀತಿಯಲ್ಲಿಯೂ ದುಃಖವಿಲ್ಲದೆ ಸುಖವನ್ನು ಮಾತ್ರ ಉಂಟುಮಾಡತಕ್ಕುದಾಗಿರಬೇಕು. ಹೀಗೆ ನಡೆಯುವುದು ಅಜ್ಞಾನಾಂಧಕಾರದಿಂದ ಆವೃತರಾದ ಮೂಢಜನರಿಗೆ ನಷ್ಟವು. ಆ ಅಜ್ಞಾನಾಂಧಕಾರವು ಜ್ಞಾನದೀಪದಿಂದಲೇ ನಿವೃತ್ತವಾಗುವುದು. ಜನಗಳಲ್ಲಿ ಇಂಥಾ ಜ್ಞಾನವುಂಟಾಗುವುದಕ್ಕೆ ಸಾಧಕಗಳಾಗಿ ಹಲವು ಪರಿಯಾದ ಶಾಸ್ತ್ರಗಳು

GOVERNMENT
MYSORE
ORIENTAL LIBRARY

ವಿದ್ಯಾದಾಯಿನಿ

ಭಾಗ ೭. ಜನವರಿ ೧೯೧೯

ಎಡಿಟರವರ ನೋಟ್ಸ್.

ಈಗ ಸ್ವಲ್ಪದಿವಸಗಳ ಕೆಳಗೆ ಅನಂತಶಯನದ ರೆಸಿಡೆಂಟರವರು ಒಂದು ಸಭೆಯಲ್ಲಿ ವಿದ್ಯಾಭ್ಯಾಸದವಿಷಯವಾಗಿ ಮಾತನಾಡುವಾಗ್ಗೆ, ಈ ದೇಶದಲ್ಲಿ ಬಾಲವಿದ್ಯಾಭ್ಯಾಸವು ಇಷ್ಟು ಕಡಮೆಯಾಗಿರುವುದಕ್ಕೆ 'ಟ್ರೈಯರ್' ಆದ ಉಪಾಧ್ಯಾಯರ ಸಂಖ್ಯೆಯು ಬಹಳ ಕಡಮೆಯಾಗಿರುವುದೊಂದು ಮುಖ್ಯಕಾರಣವೆಂದು ಹೇಳಿದರು. ವಿದ್ಯಾಭ್ಯಾಸ ಮಾಡುವುದರಿಂದುಂಟಾಗುವ ಪ್ರಯೋಜನವು ಜನಗಳಿಗೆ ಚೆನ್ನಾಗಿ ತಿಳಿದುಬಂದಹೊರತು ಅವರುಗಳಿಗೆ ವಿದ್ಯಾಭ್ಯಾಸದಲ್ಲಿ ಆದರ ಹುಟ್ಟುವುದಿಲ್ಲ. ಈ ಪ್ರಯೋಜನವು ಸ್ಪಷ್ಟವಾಗಿ ಗೊತ್ತಾಗಬೇಕಾದರೆ ಸರಿಯಾಗಿ ವಿದ್ಯಾಭ್ಯಾಸಮಾಡಿಸುವವರಿರಬೇಕು. ತಮ್ಮ ಕೆಲಸವನ್ನು ಹೇಗೆ ಮಾಡಬೇಕೆಂದು ನಿಷ್ಕೃಷ್ಟವಾಗಿ ತಿಳಿದು ಅದರಂತೆ ಕೆಲಸ ಮಾಡಿದರೆತಾನೇ ಆ ಕೆಲಸದಿಂದ ಸಂಪೂರ್ಣಫಲವುಂಟಾದೀತು. ಉಪಾಧ್ಯಾಯರಲ್ಲಿ ಇಂಥವರ ಸಂಖ್ಯೆಯು ಹೆಚ್ಚಿದಷ್ಟಾಗೆಲ್ಲ ವಿದ್ಯಾಭಿವೃದ್ಧಿಯೂ ಹೆಚ್ಚುತಬರುವುದು.

* * *

ಯಾವ ಕೆಲಸವನ್ನು ಮಾಡಬೇಕಾದರೂ ಅದನ್ನು ಮಾಡುವವರು ಆ ಕೆಲಸದ ಸ್ವರೂಪವನ್ನು, ಮಾಡುವ ವಿಧಾನವನ್ನೂ ತಿಳಿದಿರಬೇಕೆಂದು ಎಲ್ಲರಿಗೂ ಗೊತ್ತೇ ಇದೆ. ಆದರೆ ವಿದ್ಯಾಭ್ಯಾಸಮಾಡಿಸುವವರು ಇತರ ಕೆಲಸಗಾರರಂತೆ ತಾವೂ ಉಪಾಧ್ಯಾಯರಾಗುವುದಕ್ಕೆ ಮುಂಚಿತವಾಗಿ ಉಪಾಧ್ಯಾಯತೆಯ ಸ್ವರೂಪವನ್ನು, ಮಾಡುವ ಕ್ರಮವನ್ನೂ ತಿಳಿಯಬೇಕೆಂಬುದು ಮಾತ್ರ ಜನಗಳಿಗೆ ಗೊತ್ತಾಗದೇ ಇರುವುದು ಆಶ್ಚರ್ಯಕರವಾಗಿವೆ. ಯೂರೋಪ್‌ಖಂಡದಲ್ಲಿಯೂ ಉಪಾಧ್ಯಾಯರು 'ಟ್ರೈಯ-ಆದವರೇ ಆಗಬೇಕೆಂಬುದು ಈಚೀಚೆಗೆ ಜನಗಳಿಗೆ ಸಮ್ಮತವಾಗುತ ಬಂದಿದೆ. ನಮ್ಮ

ಲಿನಿಂದಲೂ ಸಂಪ್ರದಾಯಾನುಸಾರನಾಗಿ ಬಂದಿರತಕ್ಕ ಮಾರ್ಗದಲ್ಲಿ ಹೊರಟು ಪಾಂಡಿತ್ಯವನ್ನು ಸಂಪಾದಿಸಿ ಎಂದಿನಂತೆ ಮುಂದಕ್ಕೂ ಆರ್ಷವಿದ್ಯೆಯನ್ನು ಅನಾಯಾಸವಾಗಿ ಪ್ರಚಾರಮಾಡುವುದು. ಇದು ಸರ್ವಸಾಧ್ಯವಲ್ಲ. ರಾಜಧಾನಿಗಳಲ್ಲಿ ಕೆಲವುಕಡೆ ಈ ವಿಧವಾದ ಸಂಸ್ಕೃತಾಭ್ಯಾಸಕ್ಕೆ ಅನುಕೂಲಗಳಿವೆಯೇ ಹೊರತು ಮಿಕ್ಕಕಡೆ ಅನುಕೂಲಗಳನ್ನು ಕಲ್ಪಿಸುವುದಕ್ಕೆ ಪ್ರಯತ್ನಪಟ್ಟರೂ ಸಿದ್ಧಿಸುವುದು ಕಷ್ಟ. ಎರಡನೆಯದು : ಯೂರೋಪಿಯರ್ಯರು ಸಂಸ್ಕೃತಭಾಷೆಯನ್ನು ಅಭ್ಯಾಸಮಾಡಿ ಸಂಸ್ಕೃತಗ್ರಂಥಗಳಲ್ಲಿರತಕ್ಕ ಉಪಯುಕ್ತವಾದ ಅಂಶಗಳನ್ನು ಪ್ರಚಾರಮಾಡುತಿರುವಂತೆ ಮಾಡುವುದು. ಈ ವಿಧವಾದ ಅಭ್ಯಾಸಕ್ಕೆ ಇಂಗ್ಲೀಷಿನ ಸಾಹಾಯ್ಯವು ಬಲವಾಗಿರಬೇಕು. ಕೇವಲ ಸಂಸ್ಕೃತಭಾಷಾಭ್ಯಾಸದಿಂದಲೆ ಈ ವಿಧವಾದ ಪ್ರಯೋಜನವು ನೆರವೇರುವುದು ಕಷ್ಟ. ಮೂರನೆಯದು : ಸಂಸ್ಕೃತಗ್ರಂಥಗಳನ್ನು ಓದಿ ಅವುಗಳ ಪ್ರಸ್ತಾವನೆಯನ್ನು ಚೆನ್ನಾಗಿ ತಿಳಿದು, ಆ ಗ್ರಂಥಗಳನ್ನು ಕನ್ನಡಮುಂತಾದ ದೇಶಭಾಷೆಗಳಲ್ಲಿ ಪರಿವರ್ತನೆಮಾಡುವುದರಿಂದಲೂ, ಹೊಸದಾದ ಗ್ರಂಥಗಳನ್ನು ಈ ಭಾಷೆಗಳಲ್ಲಿ ಸಂಸ್ಕೃತಗ್ರಂಥಗಳ ಮಾದರಿಯನ್ನಿಟ್ಟುಕೊಂಡು ರಚಿಸುವುದರಿಂದಲೂ ದೇಶಭಾಷೆಗಳನ್ನು ವೃದ್ಧಿಪಡಿಸುವುದು. ಈ ಪ್ರಯೋಜನವು ನೆರವೇರಬೇಕಾದರೆ ಸಂಸ್ಕೃತಭಾಷೆಯನ್ನು ದೇಶಭಾಷೆಗಳೊಡನೆ ವ್ಯಾಸಂಗಮಾಡಬೇಕು. ಮೂರನೆಯದಾದ ಈ ಪ್ರಯೋಜನವು ಬಹಳ ಮುಖ್ಯವಾದುದು. ಇದು ನೆರವೇರುವಂತೆ ಸಂಸ್ಕೃತಭಾಷೆಯನ್ನು ಅಭ್ಯಾಸಮಾಡುವುದು ಮಿಕ್ಕೆರಡಕ್ಕಿಂತಲೂ ಸುಲಭ. ಆದುದರಿಂದ ಅನೇಕರು ಈ ಉದ್ದೇಶವಿಟ್ಟ ಸಂಸ್ಕೃತವನ್ನು ಅಭ್ಯಸಿಸಬಹುದು.

***

ನಮ್ಮ ದೇಶದಲ್ಲಿ ಡಿಸ್ಟ್ರಿಕ್ಟ್‌ಗಳ ಮುಖ್ಯಪಟ್ಟಣಗಳಲ್ಲೂ, ತಾಲ್ಲೂಕುಗಳ ಮುಖ್ಯಪಟ್ಟಣಗಳಲ್ಲಿ ಅನೇಕಕಡೆಗಳಲ್ಲಿಯೂ ಸಂಸ್ಕೃತಪಾಠಶಾಲೆಗಳಿವೆ. ಇವುಗಳಲ್ಲಿ ಸಾಮಾನ್ಯವಾಗಿ ಸಂಸ್ಕೃತಭಾಷೆಯೊಂದನ್ನೇ ಅಭ್ಯಾಸಮಾಡಿಸುವರು. ಈ ಪಾಠಶಾಲೆಗಳಲ್ಲೆಲ್ಲ ಸಂಸ್ಕೃತಭಾಷೆಯನ್ನು ಮೊದಲನೆಯ ಪ್ರಯೋಜನವು ಸಿದ್ಧಿಸುವಂತೆ ಬೋಧಿಸುವುದಕ್ಕೆ ಅನುಕೂಲಗಳು ಕಡಮೆ. ಸ್ವಲ್ಪನುಟ್ಟಿಗೆ ಮಾತ್ರ ಬೋಧಿಸಬಹುದು. ಅಷ್ಟಕ್ಕೇ ಬಾಲಕರು ಸಂಸ್ಕೃತಾಭ್ಯಾಸವನ್ನು ಬಿಡುವುದಾದರೆ ಅವರಿಗೆ ಪ್ರಯೋಜನವು ಕಡಮೆಯಾಗುವುದು. ಇಂಥ ಕಡೆಗಳಲ್ಲಿ ದೇಶಭಾಷೆಯನ್ನು ಸಂಸ್ಕೃತದ ಜತೆಯಲ್ಲಿ

ದೇಶದಲ್ಲಂತು ಇದು ಇನ್ನೂ ಬಹಳ ಹೊಸದು. ಅನೇಕರಿಗೆ ಇನ್ನೂ ಈ ವಿಷಯ ಸಹ ತಿಳಿಯದೆ ಇದೆ. ಆದರೆ ಸ್ವಲ್ಪಮಟ್ಟಿಗೆ ಯೋಚಿಸಿದರೂ ಸಾಕು, ಉಪಾಧ್ಯಾಯರು 'ಟ್ರೈನ್ಡ್' ಆದವರೇ ಆಗಬೇಕೆಂಬುದು ಚೆನ್ನಾಗಿ ಗೊತ್ತಾಗುವುದು. ಇಂಥ ಉಪಾಧ್ಯಾಯರುಗಳ ಅವಶ್ಯಕತೆಯು ಜನಗಳಿಗೆ ಚೆನ್ನಾಗಿ ತಿಳಿಯಬೇಕಾದರೆ, ಈಗ ನಾರ್ಮಲ್ ಸ್ಕೂಲುಗಳಲ್ಲಿ ಓದಿ ಹೋಗುತ್ತಿರ ವ ಕೆಲವರು ತಮ್ಮ ಕೆಲಸವನ್ನು ಶ್ರದ್ಧೆಯಿಂದಕಲಿತು ಬಂದಿರುವ ನಿಯಮಗಳಿಗನುಸಾರವಾಗಿ ಮಾಡುತಬರಬೇಕೆಂದು ಒಂದು ಮುಖ್ಯವಾದ ಅಂಶ.

***

ಇಂಗ್ಲಿಷ್ ಭಾಷೆಯನ್ನು ಅಭ್ಯಾಸಮಾಡುವವರಿಗೆ ಈಗ ಬಿ. ಎ. ಎಂ. ಎ. ಮುಂತಾದ ಪರೀಕ್ಷೆಗಳನಿಟ್ಟಿರುವಂತೆ ಸಂಸ್ಕೃತ, ದ್ರವಿಡಭಾಷೆಗಳಿಗೂ ಪರೀಕ್ಷೆಗಳನ್ನು ಏರ್ಪಡಿಸಬೇಕೆಂಬ ಉದ್ದೇಶವು ಮದರಾಸ್ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರ್ ಮುಂತಾದ ಕೆಲವರಿಗೆ ಇದೆಯೆಂದು ಪೂರ್ವದಲ್ಲೊಂದಾವೃತ್ತಿ ತಿಳಿಸಿದ್ದೆವು. ಈ ಪರೀಕ್ಷೆಗಳನ್ನು ಮದರಾಸ್ ಯೂನಿವರ್ಸಿಟಿಯವರು ಏರ್ಪಾಡುಮಾಡುವುದಾದರೆ ಒಳ್ಳೆಯದೆಂದು ಆ ಸಂಘದವರನ್ನು ಸರ್ಕಾರದವರು ಈ ವಿಷಯವಾಗಿ ಕೇಳಿದರು. ಅವರು ಅದರ ಸಾಧ್ಯತೆಯನ್ನು ಕುರಿತು ಆಲೋಚಿಸುವುದಕ್ಕಾಗಿ ತಮ್ಮ ಸಭಿಕರಲ್ಲಿ ಕೆಲವರನ್ನು ನಿಯಮಿಸಿದರು. ಅವರು ತಮಿಗೆ ತೋರಿಬಂದ ಅಂಶಗಳನ್ನು ಬರೆದು ಕಳುಹಿಸಿರುವಂತೆ ಕೇಳುತ್ತೇವೆ. ಸಂಸ್ಕೃತ, ದ್ರವಿಡ ಮುಂತಾದ ಭಾಷೆಗಳನ್ನು ಅಭ್ಯಾಸಮಾಡುವವರಿಗೂ ಬಿ. ಎ. ಮುಂತಾದ ಪರೀಕ್ಷೆಗಳನ್ನು ಮಾಡಬಹುದೆಂದು ಅವರು ಅಭಿಪ್ರಾಯಪಟ್ಟಿರುವಂತೆ ತೋರುತ್ತೆ. ಯೂನಿವರ್ಸಿಟಿಯ ಸಭಿಕರೆಲ್ಲರೂ ಸೇರಿ ಈ ವಿಷಯವನ್ನು ಪರಿಶೀಲನೆಮಾಡುವರು. ಅವರು ಒಪ್ಪಿದಲ್ಲಿ ಕೂಡ್ಲೆ ಪರೀಕ್ಷೆಗಳನ್ನು ಮಾಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವರು

***

ಈವಾಗಿನಸ್ಥಿತಿಯಲ್ಲಿ ಸಂಸ್ಕೃತಭಾಷೆಯನ್ನು ಈ ಮುಂದೆ ಹೇಳುವ ಮೂರು ಪ್ರಯೋಜನಗಳಲ್ಲಿ ಯಾವುದಾದರೊಂದಕ್ಕೆ ನ್ಯಾಸಂಗಮಾಡಬೇಕೆಂದು ತೋರುತ್ತೆ. ಅವುಗಳನ್ನು ಬಿಟ್ಟರೆ ಸಂಸ್ಕೃತಭಾಷೆಯ ಅಭ್ಯಾಸದಿಂದ ಪ್ರಕೃತದಲ್ಲಿ ಬೇರೇ ಯಾವ ಪ್ರಯೋಜನವೂ ಇರಲಾರದು. ಇವುಗಳಲ್ಲಿ ಮೊದಲನೆಯದು—ನಮ್ಮ ದೇಶದಲ್ಲಿ ಮೊದ

ಮಂದಿರವನ್ನು ಕಟ್ಟಿಸಿದನು. ಬಹಳ ದೃಢವಾದ ಕವಾಟಸಂಪುಟಗಳುಳ್ಳ ಆ ಮಂದಿರದಲ್ಲಿ ಒಂದುಬಾಕಿಲನ್ನು ಮಾತ್ರವೇ ತೆರೆದು ತಿರುಗಾಡುತ್ತಿರುವರು. ಆ ಶಾಲೆಯಲ್ಲೇ ಒಂದುಕಡೆ ಕುದುರೆಗಳ ವೈಯ್ಯಾಳಿಗೆ ತಕ್ಕಂತೆ ಅನುಕೂಲಪಡಿಸಿದ್ದಲ್ಲದೆ ಅದರ ನೆಲಮಾಳಿಗೆಯಲ್ಲಿ ಗರುಡಿಯನ್ನು ಕಲ್ಪಿಸಿ, ವ್ಯಾಯಾಮೋಪಕರಣಗಳನ್ನೆಲ್ಲ ಸಿದ್ಧಪಡಿಸಿಟ್ಟಿರುವರು. ಮುಖ್ಯವಾಗಿ ಆ ಮಂದಿರವು ವಿಶಾಲವಾಗಿಯೂ, ಆರೋಗ್ಯ ಭಾಗ್ಯಕ್ಕೆ ಅಭಿವರ್ಧಕವಾಗಿಯೂ, ಮನೋವಿನೋದಕ್ಕೆ ನಂದನವನವಾಗಿಯೂ, ಶತ್ರುಗಳಿಗೆ ಅಗಮ್ಯವಾಗಿಯೂ, ಕಾಯಶಕ್ತಿಯನ್ನೂ ಧೈರ್ಯೋತ್ಸಾಹಾದಿಗಳನ್ನೆಲ್ಲ ಬಲಪಡಿಸುವ ಆಟಪಾಟಗಳಿಗೆ ಅನುಕೂಲವಾಗಿಯೂ, ಬುದ್ಧಿವಿಕಾಸಕ್ಕೆ ತಕ್ಕ ರಚನೆಯುಳ್ಳುದಾಗಿಯೂ ಇರುವುದು.

ಇಷ್ಟರಲ್ಲೇ ಮಹಾರಾಜನು ಬಹಳ ಪ್ರಯತ್ನಮಾಡಿ ಒಂದೊಂದು ವಿದ್ಯೆಯಲ್ಲೂ ಪಾರಂಗತರಾದ ಯೋಗ್ಯರಾಗಿರುವ ಆಚಾರ್ಯ(ಉಪಾಧ್ಯಾಯ)ರುಗಳನ್ನು ಆಯ್ದು ಸಂಗ್ರಹಿಸಿ, ಅವರನ್ನು ಪೂಜಿಸಿ, ಕುಮಾರ ಚಂದ್ರಾಪೀಡನನ್ನು ವೈಶಂಪಾಯನನ ಜತೆಮಾಡಿ ಶುಭದಿವಸದಲ್ಲಿ ಆ ಆಚಾರ್ಯರುಗಳ ವಶಕ್ಕೆ ಅರ್ಪಿಸಿ, ಆ ವಿದ್ಯಾಮಂದಿರದಲ್ಲಿ ಇರಿಸಿದನು. ಪಂಜರದಲ್ಲಿ ಕೂಡಲ್ಪಟ್ಟ ಸಿಂಹಶಾಬಕನಂತೆ ಕುಮಾರನನ್ನು ಹೊರಕ್ಕೆ ಹೋಗದಹಾಗೆ ತಡೆಮಾಡಿದ್ದಲ್ಲದೆ, ಒಳಗೆ ಸಹಬಾಲ್ಯ ಕ್ರೀಡಾವ್ಯಾಸಂಗಗಳನ್ನೆಲ್ಲ ತಪ್ಪಿಸಿ, ಕೇವಲ ವಿದ್ಯಾಚಾರ್ಯರ ಕುಲಪುತ್ರವಾತ್ಸಲ್ಯರಾದ ಪರಿಜನರಿಂದ ಪರಿವೃತನಾಗಿರುವಂತೆ ಏರ್ಪಡಿಸಿ, ಅವಹಿತನಾಗಿ ವಿನಯದಿಂದ ಸಕಲ ವಿದ್ಯೆಗಳನ್ನೂ ಕಲಿಯುವಂತೆ ನಿಯಮಿಸಿರುವನು.

ಪ್ರತಿದಿನವೂ ಬೆಳಗ್ಗೆ ಎಳುತ್ತಲೇ ಮಹಾರಾಜನು ವಿಲಾಸವತೀದೇವಿಯೊಡನೆ ವಿರಳಪರಿಜನ ಪರಿವೃತನಾಗಿ ಹೋಗಿ, ಆ ವಿದ್ಯಾಮಂದಿರದಲ್ಲೇ ತನ್ನ ಪ್ರಿಯಪುತ್ರನನ್ನು ನೋಡಿಕೊಂಡು ಬರುತ್ತಿದ್ದನಲ್ಲದೆ ಕುಮಾರನನ್ನು ವಿದ್ಯಾಮಂದಿರದಿಂದೀಚೆಗೆ ಬರಲವಕಾಶಕೊಟ್ಟಿರಲಿಲ್ಲ.

ಮಹಾಭಾಗ್ಯಶಾಲಿಯಾದ ಕುಮಾರ ಚಂದ್ರಾಪೀಡನು ಆ ಅಮೂಲ್ಯವಾದ ವಯಸ್ಸಿನಲ್ಲಿ ಕಮಲಕೋಮಲವಾಗಿ ಶುದ್ಧವಾಗಿ ಯಾವೊಂದು ಕೊರತೆಯೂ ಇಲ್ಲದೆ ವಿಜೃಂಭಿಸುತ್ತಿರುವ ಹೃದಯವುಳ್ಳವನಾದುದರಿಂದಲೂ, ಮಹಾವಿವೇಕಶಾಲಿಯಾದ ತಂದೆಯು ಮಾಡಿರುವ ಸಮುಚಿತನಿಯಮಗಳಿಂದಲೂ, ಮಹಾರಾಜಪೂಜಿತರಾಗಿ

ಪೋಧಿಸಿದರೆ ಓದಿದ್ದು ವ್ಯರ್ಥವಾಗದೇ ಹೋಗುವುದು. ಕ್ರಮೇಣ ದೇಶಭಾಷೆಯ ಅಭಿವೃದ್ಧಿಗೆ ಕಾರಣವೂ ಆಗುವುದು.

ರಾಜಕುಮಾರ

ಚೆಂದಾಪೀಡನ ವಿದ್ಯಾಭ್ಯಾಸ

ಪೂರ್ವಕಾಲದಲ್ಲಿ ಉಜ್ಜಯಿನೀಪಟ್ಟಣದಲ್ಲಿ ತಾರಾಪೀಡನೆಂಬ ಕ್ಷತ್ರಿಯ ಚಕ್ರವರ್ತಿಯು ಧರ್ಮದಿಂದ ರಾಜ್ಯಪರಿಪಾಲನೆ ಮಾಡುತ್ತಿದ್ದನು. ಅವನಿಂದ ಆತನ ಪಟ್ಟಮಹಿಷಿಯಾದ ವಿಲಾಸವತೀ ದೇವಿಯು ಗರ್ಭಕಲಶೋದಧಿಯಲ್ಲಿ ಪೂರ್ಣಚಂದ್ರವಾಯನಾದ ಕುಮಾರನುದಯಿಸಿದನು. ಆ ಕುಮಾರನಿಗೆ ಉಚಿತ ಪರಿತು ಚಂದ್ರಾಪೀಡನೆಂದು ಹೆಸರಿಟ್ಟರು. ಅದೇ ಸಮಯದಲ್ಲಿ ಆ ಚಕ್ರವರ್ತಿಯ ಮುಖ್ಯಮಂತ್ರಿಯಾದ ಆರ್ಯಶುಕನಾಸನಿಗೆ ಮನೋರಮೆಯೆಂಬ ಧರ್ಮಪತ್ನಿಯ ಗರ್ಭದಲ್ಲಿ ಬೃಹತ್ತೇಜಃಪುಂಜದಂತಿರುವ ರತ್ನವು ಜನಿಸಿ ಪ್ರಕಾಶಿಸಿತು. ಆ ಮಗುವಿಗೆ ಬ್ರಾಹ್ಮಣಕುಲೋಚಿತವಾಗಿ ವೈಶಂಪಾಯನನೆಂದು ನಾಮಕರಣಮಾಡಿದರು. ಕಾಲಕ್ರಮವಾಗಿ ಆ ಕುಮಾರರಿಬ್ಬರೂ ಸಹಜವಾದ ಪ್ರೀತಿಯಿಂದ ಪರಸ್ಪರಮಿತ್ರರಾಗಿ ಬೆಳೆಯುತ್ತ ಬಂದರು. ಅವರಿಗೆ ಶೈಶವ ಕಳೆಯುವ ಸಮಯಕ್ಕೆ ಐದನೆಯ ವಯಸ್ಸಿನಲ್ಲೇ ಚೂಡಾಕರಣಮಹೋತ್ಸವವೂ ಬೆಳೆಯಿತು.

ಆಗ ಮಹಾರಾಜ ತಾರಾಪೀಡನು ತನ್ನ ಸಕಲರಾಜ್ಯಭಾರಚಿಂತೆಯನ್ನೂ ಸಕಲೈಶ್ವರ್ಯಭೋಗಸುಖವನ್ನೂ ಒಂದು ಕಡೆಯಲಿಟ್ಟು, ತನ್ನ ಕುಲದೀಪನಾದ ಪ್ರಿಯಪುತ್ರನಿಗೆ ವಿದ್ಯಾಭ್ಯಾಸಮಾಡಿಸತಕ್ಕ ಆಲೋಚನೆಯನ್ನೆ ಗುರುತರವಾಗಿ ಎಣಿಸಿ, ಮಂತ್ರಿವರನಾದ ಆರ್ಯಶುಕನನ್ನು ಆಲೋಚಿಸಿ, ರಾಜಪುತ್ರನ ವಿದ್ಯಾಭ್ಯಾಸಕ್ಕೆ ತಕ್ಕಹಾಗೆ ಊರಿನ ಹೊರಗೆ ಸ್ವಲ್ಪದೂರದಲ್ಲಿ ಶಿಪ್ರಾನದಿಯ ದಡದಲ್ಲಿ ಉಚಿತವಾದ ನಿವೇಶನದಲ್ಲಿ ಅರ್ಧಕ್ರೋಶದಷ್ಟು ವಿಸ್ತಾರಕ್ಕೆ ಸುತ್ತಲೂ ಎತ್ತರವಾದ ಕೋಟೆಯನ್ನು ಕಟ್ಟಿಸಿ, ಆ ಕೋಟೆಯು ಸುತ್ತ ಆಳವಾದ ಅಗಳನ್ನು ತೋಡಿಸಿ ಆ ಕೋಟೆಯ ನಡುವೆ ಇಂದ್ರಭವನಾಪ್ತಿತ ಗಂಭೀರವಾಗಿಯೂ ರಮಣೀಯವಾಗಿಯೂ ಇರುವ ಒಂದು ವಿದ್ಯಾ

ರನ್ನು ವಿಸ್ಮಯಗೊಳಿಸುತ್ತಿತ್ತು. ಆ ಮಹಾಶಕ್ತಿಯನ್ನು ವಾಚಾ ಹೇಳಿ ತಿಳಿಸುವುದು ಸಾಧ್ಯವಲ್ಲ; ಒಂದೆರಡು ಸಾಮಾನ್ಯವಾದ ಉದಾಹರಣೆಗಳನ್ನು ಹೇಳುವನು :— ಯಾವಾಗಲಾದರೂ ಯದೃಚ್ಛೆಯಾಗಿ ಆಡುತ್ತಿರುವ ಚಂದ್ರಾಪೀಡನೆದುರಿಗೆ ಆನೆಗಳು ಬಂದರೆ ಅವನು ಅವುಗಳ ಕಿವಿಯನ್ನು ಹಿಡಿದು ನಿಲ್ಲಿಸಿಬಿಡುವನು. ಆಗ ಆ ಮದಗಜಗಳು ಸಿಂಹಕಿಶೋರಾಕ್ರಾಂತಗಳಾದಂತೆ ಬಳಲಿ ಅಲ್ಲಾಡಲಾರದೆ ನಿಲ್ಲುವುವು. ಕುಮಾರನು ಕತ್ತಿಯುಸಾದನೆಮಾಡುವಾಗಲೇ ಒಂದೊಂದುಪೆಟ್ಟಿಗೆ ಒಂದೊಂದು ತಾಳೇ (ಓಲೇ) ಮರಗಳನ್ನು ಎಳೆಯ ತಾವರೆದಂಟುಗಳ ಹಾಗೆ ಲೀಲಾಮಾತ್ರದಿಂದ ಕಡಿದು ಬಿಸುಡುವನು. ಇವನು ಅಭ್ಯಾಸಕ್ಕಾಗಿ ಪ್ರಯೋಗಿಸಿದ ಬಾಣಗಳು ಪರಶುರಾಮನ ಬಾಣಗಳಂತೆ ಪರ್ವತಶಿಖರಗಳನ್ನೆಲ್ಲ ಭೇದಿಸುತ್ತಿರುವುವು. ಇವನು ಪ್ರತಿದಿನವೂ ಸಾಧನೆಗಾಗಿ ಉಪಯೋಗಿಸುವ ಕಬ್ಬಿಣದ ಗದೆಯನ್ನು ಹತ್ತುಮಂದಿ ಕಟ್ಟಾಳುಗಳು ಸೇರಿ ಎತ್ತಲಾರದಷ್ಟು ಘನವಾಗಿರುವುದು. ಹೀಗೆ ಚಂದ್ರಾಪೀಡನಿಗೆ ಸಮಾನವಾಗಿಯೇ ವೈಶಂಪಾಯನನೂ ಸಕಲಕಲಾಕೋವಿದನಾದರೂ ಕುಮಾರಚಂದ್ರಾಪೀಡನಿಗುಂಟಾದಂತೆ ಮಹಾಶಕ್ತಿಯೊಂದುಮಾತ್ರವೇ ವೈಶಂಪಾಯನನಿಗೆ ಉಂಟಾಗಲಿಲ್ಲ.

ಈ ರೀತಿಯಾಗಿ ಕಾಯಶಕ್ತಿಯೂ, ಬುದ್ಧಿವೈಭವವೂ, ಮನೋಭಾವವಿಶೇಷಗಳೂ ಉತ್ತಮವಾಗುವಂತೆ ಹದಿನಾರನೆಯ ವರ್ಷ ತುಂಬುವವರೆಗೂ ವಿದ್ಯಾಮಂದಿರದಲ್ಲಿ ವಿದ್ಯಾಚಾರ್ಯರ ವಶದಲ್ಲಿ ವಿದ್ಯಾರ್ಥಿಗಳ ಜತೆಯಲ್ಲಿ ವಿದ್ಯಾರ್ಥಿಯಾಗಿದ್ದು, ವಿದ್ಯೆಗಳನ್ನು ಕಲಿತು, ಸಕಲ ಕಲಾಪೂರ್ಣನಾದ ಕುಮಾರ ಚಂದ್ರಾಪೀಡನನ್ನು ಮಹಾರಾಜನು ಹದಿನಾರನೆಯ ವರ್ಷವರ್ಧನ್ತಿಮಹೋತ್ಸವದ ವೇಳೆಗೆ ಸಕಲ ರಾಜಮರ್ಯಾದೆಗಳೊಡನೆ ಅರಮನೆಗೆ ಕರೆಯಿಸಿದನು.

ತರಳಾದಿತ್ಯ.

ಬಂಗಾಳಾದೇಶದಲ್ಲಿ ಬಾಬೂಗೋವಿಂದಚಂದ್ರದತ್ತೆಂಬ ಒಬ್ಬ ದೊಡ್ಡಮನುಷ್ಯರಿದ್ದರು. ಇವರು ಸತ್ಕುಲಪ್ರಸೂತರಾಗಿ ವಿಶೇಷವಿದ್ಯಾವಂತರಾಗಿಯೂ ಉದಾರಬುದ್ಧಿಯುಳ್ಳವರಾಗಿಯೂ ಸಮಯೋಚಾರವಿಚಾರಗಳಲ್ಲಿ ಯುಕ್ತವಾದವುಗಳನ್ನು ಧೈರ್ಯವಾಗಿ ಮಾಡುವುದಕ್ಕೂ ಅಯುಕ್ತವಾದವುಗಳನ್ನು ನಿರ್ಭೀತಿಯಾಗಿ ಬಿಡುವುದಕ್ಕೂ

ತಮ್ಮತಮ್ಮ ಶಕ್ತ್ಯತಿಶಯಗಳನ್ನು ಮಹಾರಾಜನಿಗೆ ತೋರಿಸಲುತ್ಸುಕರಾಗಿರುವುದು ವಿಚಿತ್ರವಲ್ಲದೆ. ಅಸಾಧಾರಣವಾದ ಬುದ್ಧಿಶಕ್ತಿಯುಳ್ಳ ಶಿಷ್ಯರ ಸುಗುಣಗಳಿಗೆ ಪರವಶರಾಗಿ ಉತ್ಸಾಹದಿಂದ ಉಪದೇಶಿಸುತ್ತಿರುವ ವಿದ್ಯಾಚಾರ್ಯರ ಬೋಧನಚಾತುರ್ಯಗಳಿಂದಲೂ ಬಹುಬೇಗ ಸ್ವಲ್ಪಕಾಲದಲ್ಲೇ ಸಕಲವಿದ್ಯೆಗಳನ್ನೂ ಕಲಿತುಕೊಂಡನು. ಮಣಿದರ್ಪಣದಂತೆ ಅತಿನಿರ್ಮಲವಾದ ಆ ಕುಮಾರನ ಹೃದಯದಲ್ಲಿ ಸಕಲಕಲೆಗಳೂ ಪೂರ್ಣವಾಗಿ ಪ್ರತಿಬಿಂಬಿಸಿ ನಿಲೆಗೊಂಡುದು ಸರ್ವಜನಾಹ್ಲಾದಕವಾಗಿತ್ತೆಂಬುದು ಅತಿಶಯೋಕ್ತಿಯಲ್ಲ. ಆ ಕುಮಾರಕಂಠೀರವನು ವ್ಯಾಕರಣ, ತರ್ಕ, ವಿಚಾರಮೀಂಸ, ಧರ್ಮಶಾಸ್ತ್ರ, ರಾಜನೀತಿ, ನಾನಾವಿಧವಾದ ವ್ಯಾಯಾಮವಿದ್ಯೆಗಳು, ಧನುರ್ವಿದ್ಯೆ, ಚಕ್ರಪ್ರಯೋಗ, ಚರ್ಮ ಅಂದರೆ ಗುರಾಣಿಯ ಉಪಯೋಗ, ಕತ್ತಿಯಪ್ರಯೋಗ, ಶಕ್ತಿ ತೋಮರ ಪರಶು ಗದೆ ಈವೇ ಮೊದಲಾದ ಆಯುಧವಿಶೇಷಗಳ ಪ್ರಯೋಗ, ರಥಗಳನು ನಡೆಸುವುದು, ಆನೆಗಳನ್ನು ಏರುವುದು, ಕುದುರೆಗಳನ್ನು ಏರಿ ನಡಿಯಿಸ, ವುದು, ಆನೆಗಳನ್ನು ಒಗ್ಗಿಸುವುದು, ಕುದುರೆಗಳ ವಯೋಲಕ್ಷಣಗಳನ್ನು ಪರೀಕ್ಷಿಸಿ ನಿರ್ಣಯಿಸುವುದು, ಪುರುಷಲಕ್ಷಣಗಳ ಪರೀಕ್ಷೆ, ಆಯುರ್ವೇದ, ಮಂತ್ರಪ್ರಯೋಗ, ವಿಷವಿಷಹರ. ಕಾವ್ಯಕಥಾನಾಟಕಾಖ್ಯಾಯಿಕಾಚಾತುರ್ಯ, ಮಹಾಭಾರತಪುರಾಣೇತಿಹಾಸರಾಮಾಯಣಗಳು, ವೀಣೆ ವೇಣು ಮುರಜ ತಾಳ ದರ್ದುರಪ್ರಭೃತಿ ಇವೇ ಮೊದಲಾದ ವಾದ್ಯಗಳನ್ನು ಬಾಜಿಸುವುದು, ಭರತಾದಿಮಹರ್ಷಿಪ್ರಣೀತಗಳಾದ ನೃತ್ಯಶಾಸ್ತ್ರಗಳು, ನಾರದೀಯಾದಿಗಾಂಧರ್ವವಿಶೇಷಗಳು, ನಾನಾದೇಶಭಾಷೆಗಳು, ಸಕಲಲಿಪಿಗಳು, ಸಮಸ್ತಸಂಜ್ಞೆಗಳು, ಶಿಲ್ಪಶಾಸ್ತ್ರ, ಛಂದಶ್ಶಾಸ್ತ್ರ, ಚಿತ್ರಕರ್ಮಗಳು, ಯಂತ್ರಕಾರ್ಯಗಳು, ಪುಸ್ತಕರಚನೆ, ಪುಸ್ತಕಲೇಖನ, ಸಕಲವಿಧವಾದ ದೂತಕಲೆ, ಗಂಧಶಾಸ್ತ್ರ, ಪಕ್ಷಿಭಾಷಾಜ್ಞಾನ, ಗ್ರಹಗಣಿತ, ರತ್ನಪರೀಕ್ಷೆ, ಮರಗೆಲಸ, ದಂತದ ಕೆಲಸ, ವಾಸ್ತುವಿದ್ಯೆ, ಸುರಂಗ ಕೊರೆವುದು, ಈಜುವುದು, ಹಾಡುವುದು, ಕುಪ್ಪುವುದು, ಮರಗಳನ್ನು ಹತ್ತುವುದು, ನೆಗೆವುದು, ರತಿತಂತ್ರಗಳು, ಇಂದ್ರಜಾಲ ಮಹೇಂದ್ರಜಾಲಗಳು, ಇವೇ ಮೊದಲಾದ ಇನ್ನೂ ಅನೇಕ ಕಲಾವಿಶೇಷಗಳಲ್ಲಿ ಅಸಾಧಾರಣವಾದ ಕೌಶಲವನ್ನು ಹೊಂದಿದನು.

ಸಹಜವಾದ ಆ ರಾಜಕುಮಾರನ ಕಾಯಬಲವು ದಿನೇದಿನೆ ಚೆನ್ನಾಗಿ ಗರುಡಿಯಲ್ಲಿ ಶ್ರಮಪಡುತ್ತಿದ್ದಕಾರಣ ಬಾಲ್ಯದಲ್ಲೇ ಭೀಮಸೇನನ ಶಕ್ತಿಯಂತೆ ಸರ್ವಜನ

ಫ್ರೆಂಚ್‌ಜನಗಳ ಅಸಾಧಾರಣವಾದ ಸಾಮರ್ಥ್ಯದಿಂದ ಉತ್ತರೋತ್ತರ ಉಂಟಾಗಬ
ಹುದಾದ ಅನರ್ಥನಿವಾರಣೆಯನ್ನು ವರ್ಣಿಸಿ ಬರೆದಿರತಕ್ಕ ಪದ್ಯಕಾವ್ಯವನ್ನು
ನೋಡಿದ ಅನೇಕರು ಇವರ ಗ್ರಂಥವು ಮಹಾಕವಿಪ್ರಣೀತಗಳಾದ ಗ್ರಂಥಗಳಿಗೆ ಕಡ
ಮೆಯಾಗಿಲ್ಲವೆಂದು ಹೇಳುವದಲ್ಲದೆ ಇವರು ಸ್ವೀಕೃತಫ್ರೆಂಚ್‌ದೇಶದ ವಿಷಯ
ದಲ್ಲಿ ಪ್ರದರ್ಶನವಾಡಿರತಕ್ಕ ನಿಸರ್ಗವಾದ ದೇಶಾಭಿಮಾನವನ್ನುಕುರಿತು ಬಹಳ
ವಿಸ್ಮಯಪಡುತ್ತಾರೆ. ಇವರು ವಿಲಾಯತಿಯಲ್ಲಿ ನಾಲ್ಕುವರ್ಷವಿದ್ದರು. ಕೇಂಬ್ರಿ
ಜ್ಜನಲ್ಲಿ ಸ್ತ್ರೀಯರಿಗೋಸ್ಕರ ಮಾಡಲ್ಪಡುತ್ತಿದ್ದ ವಿದ್ಯಾಭ್ಯಾಸದ ಏರ್ಪಾಡುಗಳಿಂದ
ಬಹಳ ಪ್ರಯೋಜನವನ್ನು ಹೊಂದಿದರು. ಕೇಂಬ್ರಿಜ್ಜ ಮತ್ತು ಸೆಂಟ್‌ಲಿನಿಡ್ಸ್
ಎಂಬ ಪಾಠಶಾಲೆಗಳಲ್ಲಿ ನಡೆಯುತ್ತಿದ್ದ ಪ್ರತಿಯೊಂದು ಉಪನ್ಯಾಸದಲ್ಲಿಯೂ ಇರುತ್ತಿ
ದ್ದರು. ಈ ನಾಲ್ಕುವರ್ಷಗಳಲ್ಲಿ ಇಂಗ್ಲೀಷ್ ಭಾಷೆಯಲ್ಲಿಯೂ, ಸಾಹಿತ್ಯದಲ್ಲಿಯೂ
ಸಂಗೀತದಲ್ಲಿಯೂ ಚಿತ್ರಕೆಲಸಗಳಲ್ಲಿಯೂ ಶ್ರದ್ಧೆಯಿಂದ ವ್ಯಾಸಂಗಮಾಡಿ ಬಹಳ
ಪಾಂಡಿತ್ಯವನ್ನು ಹೊಂದಿದರು. ಇಂಗ್ಲೀಷ್ ವಿದ್ಯಾಭ್ಯಾಸವು ಪೂರೈಸದಕೂಡಲೆ
ಇವರು ಇಂಡಿಯಾದೇಶಕ್ಕೆ ಹಿಂದಿರುಗಿದರು. ಆ ಕಾಲದಲ್ಲಿ ಬೆಂಗಾಲ್ ಮ್ಯಾಗಜಿನ್
ಎಂಬ ಒಂದು ಮಾಸಪತ್ರಿಕೆಯು ಮುದ್ರಿಸಲ್ಪಡುತ್ತಿತ್ತು. ಆ ಪತ್ರಿಕೆಗೆ ಒಬ್ಬ ಫ್ರೆಂಚ್
ಕವೀಶ್ವರನ ಗ್ರಂಥಗಳನ್ನುಕುರಿತು ಒಂದು ಉಪನ್ಯಾಸವನ್ನು ಬರೆದರು. ಇಂಗ್ಲೀಷ್
ಭಾಷೆಯಲ್ಲಿ ಅಂಗ್ಲೇಯರು ಬರೆಯುವದು ಶುದ್ಧವಾಗಿಯೂ ಬಿಗಿಯಾಗಿಯೂ ರಸಭರಿ
ತವಾಗಿಯೂ ಇರುವದು ಎಂಬದಾಗಿಯೂ ಇಂಗ್ಲೀಷ್‌ಭಾಷೆಯನ್ನು ವ್ಯಾಸಂಗಮಾ
ಡಿದ ಈ ದೇಶದ ಜನರು ಬರೆದ ಲೇಖನಗಳು ಈ ಗುಣಾತಿಶಯಗಳನ್ನು ಹೊಂದಿರುವ
ದಿಲ್ಲ ಎಂಬದಾಗಿಯೂ ಒಂದು ಪ್ರತೀತಿ ಇತ್ತು. ಆದರೆ ತರಳಾದತ್ತರವರು ಬರೆದ
ಲೇಖನವು ಈ ದೇಶೀಯರು ಇಂಗ್ಲೀಷ್ ಜನರಂತೆ ಶುದ್ಧವಾಗಿಯೂ ರಸಭಿಗರ್ಭಿತವಾ
ಗಿಯೂ ಇರುವಂತೆ ಇಂಗ್ಲೀಷ್ ಭಾಷೆಯನ್ನು ಬರೆಯಬಲ್ಲರೆಂದು ತಮ್ಮ ಲೇಖನದಿಂ
ದಲೇ ಸಿದ್ಧಾಂತ ಮಾಡಿದರು. ೧೮೭೨ ನೇ ಇಸವಿಯಲ್ಲಿ ಇವರ ಅಕ್ಕಂದರಾದ ಅರೂ
ದತ್ತರವರು ಸ್ವರ್ಗಸ್ಥರಾದರು. ಅವರು ಬಾಲ್ಯದಿಂದಲೂ ಸಹಪಾಠಿಗಳಾಗಿಯೂ
ಬಂಧುಗಳಾಗಿಯೂ ಇಷ್ಟರಾಗಿಯೂ ಇದ್ದುಕೊಂಡಿದ್ದರು. ಅವರ ಮರಣವು ತರ
ಳಾದತ್ತರವರಿಗೆ ಅಸಾಧಾರಣವಾದ ಶೋಕವನ್ನುಂಟುಮಾಡಿತು. ಕೆಲವುಕಾಲದತರು
ವಾಯ: ತರಳಾದತ್ತದವರು ಯೂರೋಪ್‌ಖಂಡದ ನಡೆನುಡಿವೊದಲಾದವುಗಳನ್ನು

ಅವಶ್ಯಕವಾದ ಸ್ಥೈರ್ಯವನ್ನು ಹೊಂದಿದ್ದರು. ತರಳಾದತ್ತರವರು ಇವರ ಕನಿಷ್ಠಪುತ್ರಿಯವರಾಗಿದ್ದರು. ೧೮೫೬ನೇ ಇಸವಿಯಲ್ಲಿ ಕಲ್ಕತ್ತಾಪಟ್ಟಣದಲ್ಲಿ ತರಳಾದತ್ತರವರು ಜನಿಸಿದರು. ಇವರಿಗೆ ಅಬ್ಜೀ ಎಂಬ ಒಬ್ಬ ಸಹೋದರನು ಅರೂದತ್ತೆಂಬ ಒಬ್ಬ ಸಹೋದರಿಯು ಇದ್ದರು. ಈ ಮೂರು ಜನಕ್ಕೂ ಬಾಬೂಗೋವಿಂದಚಂದ್ರದತ್ತರವರೇ ದೇಶಭಾಷೆಯಲ್ಲಿಯೂ ಇಂಗ್ಲಿಷ್‌ಭಾಷೆಯಲ್ಲಿಯೂ ಸ್ವಲ್ಪವಃಟ್ಟಿಗೆ ಪರಿಚಯವನ್ನುಂಟುಮಾಡಿ ಅನಂತರ ಬಾಬೂಪಿಬ್ಯಾನರ್ಜಿಯವರನ್ನು ಉಪಾಧ್ಯಾಯರನ್ನಾಗಿ ನೇಮಿಸಿದರು. ಈ ಮೂವರಲ್ಲಿ ತರಳಾದತ್ತರವರು ಅನ್ಯಾದೃಶವಾದ ಶ್ರದ್ಧೆಯಿಂದ ವ್ಯಾಸಂಗಮಾಡಿ ಕೆಲವು ವರ್ಷಗಳಲ್ಲಿ ಇಂಗ್ಲೀಷಿನಲ್ಲಿ ಬಹಳ ಪಾಂಡಿತ್ಯವನ್ನು ಹೊಂದಿದರು. ಇವರು ೧೮೬೮ರಲ್ಲಿ ಮಿಲ್ಟ್ನ್ ಷೇಕ್ಸ್‌ಪಿಯರ್ ಮೊದಲಾದ ಇಂಗ್ಲಿಷ್‌ಮಹಾಕವಿಗಳ ಗ್ರಂಥಗಳಲ್ಲಿ ಅನೇಕ ಭಾಗಗಳನ್ನು ಬಾಯಿಗೆ ಗಟ್ಟಿಮಾಡಿ ಇವರನ್ನು ಪರೀಕ್ಷೆಮಾಡಿದ ಅನೇಕ ದೊಡ್ಡಮನುಷ್ಯರಿಗೆ ಬಹಳ ಸಂತೋಷವನ್ನುಂಟುಮಾಡಿದರು. ಅದೆ ವರ್ಷ ಇವರ ಸಹೋದರರು ಕಾಲಾಧೀನರಾದರು. ಬಾಬೂಗೋವಿಂದದತ್ತರವರು ಪುತ್ರಶೋಕದಿಂದ ಪರವಶರಾಗಿ ಕೆಲವು ಕಾಲವನ್ನು ಕಲ್ಕತ್ತೆಯಲ್ಲಿ ಕಳೆದು ಅನಂತರ ತಮ್ಮ ಇಬ್ಬರು ಹೆಣ್ಣುಮಕ್ಕಳಿಗೂ ಪಾಶ್ಚಾತ್ಯವಿದ್ಯಾಭ್ಯಾಸವನ್ನು ಯೂರೋಪ್‌ಖಂಡದಲ್ಲಿ ಮಾಡಿಸಬೇಕೆಂದು ಸಂಕಲ್ಪಮಾಡಿ ಫ್ರಾನ್ಸ್‌ದೇಶದಲ್ಲಿರುವ ನೀಸ್ ಎಂಬ ಪಟ್ಟಣಕ್ಕೆ ಕರೆದುಕೊಂಡುಹೋದರು. ಅಲ್ಲಿ ಈ ಇಬ್ಬರು ಮಕ್ಕಳೂ ಫ್ರೆಂಚ್‌ವಿದ್ಯಾಭ್ಯಾಸವನ್ನು ಮಾಡಿ ಆ ಭಾಷೆಯಲ್ಲಿ ಬಲವಾದ ಪಾಂಡಿತ್ಯವನ್ನು ಸಂಪಾದಿಸಿದರು. ಗೋವಿಂದಚಂದ್ರದತ್ತರವರು ಫ್ರೆಂಚ್‌ದೇಶದಿಂದ ಅವರನ್ನು ಇಟಲೀಮೊದಲಾದ ಯೂರೋಪ್‌ಖಂಡದ ದೇಶಗಳಿಗೆ ಕರೆದುಕೊಂಡುಹೋಗಿ ಅಲ್ಲಿ ತಿಳಿಸಬೇಕಾದ ಸಂಗತಿಗಳನ್ನು ಅವರಿಗೆ ತಿಳಿಸಿ, ಅಲ್ಲಿಂದ ಇಂಗ್ಲೆಂಡ್‌ದೇಶಕ್ಕೆ ಕರೆದುಕೊಂಡುಹೋದರು. ಇವರು ಇಂಗ್ಲೆಂಡ್‌ದೇಶದಲ್ಲಿ ಇಂಗ್ಲಿಷ್‌ಭಾಷೆಯನ್ನಭ್ಯಾಸಮಾಡುತ್ತಿರುವಾಗ ಫ್ರೆಂಚ್‌ದೇಶಕ್ಕೂ ಜರ್ಮನಿದೇಶಕ್ಕೂ ಯುದ್ಧವು ಪ್ರಾಪ್ತವಾಯಿತು. ಈ ಯುದ್ಧದಲ್ಲಿ ಫ್ರಾನ್ಸ್‌ದೇಶವು ಸೋತುಹೋಯಿತು ಫ್ರೆಂಚ್‌ದೇಶಕ್ಕೆ ಸೇರಿದ ಅನೇಕ ಕೋಟೆಗಳೂ ಪಟ್ಟಣಗಳೂ ನಿರ್ಮೂಲವಾದವು. ಫ್ರಾನ್ಸ್‌ದೇಶಕ್ಕೆ ಅನಿರ್ವಚನೀಯವಾದ ಅರ್ಥಹಾನಿ ಮಾನಹಾನಿಗಳುಂಟಾದವು. ತರಳಾದತ್ತರವರು ಈ ಸಂಗತಿಗಳನ್ನೆಲ್ಲಾ ತಿಳಿದುಕೊಂಡು ಈ ಯುದ್ಧದಿಂದ ಫ್ರಾನ್ಸ್‌ದೇಶಕ್ಕುಂಟಾಗಿರತಕ್ಕ ಅನರ್ಥಗಳನ್ನು

ರೀಖನಲ್ಲಿ ಇವರು ಅಕಾಲಮರಣವನ್ನು ಹೊಂದಿದರು. ನಮ್ಮ ಭರತಖಂಡದ ಸ್ತ್ರೀಯರಲ್ಲಿ ಇವರು ಅತ್ಯಂತ ವಿದ್ಯಾವತಿಯರಾಗಿ, ನಮ್ಮದೇಶದ ಸ್ತ್ರೀಯರಿಗೆ ಮೇಲುಪಜ್ಯಯನ್ನು ತಾಕುವರೆಂದು ಸ್ತ್ರೀವಿದ್ಯಾಭಿಮಾನಿಗಳಸೇಕರು ಎದುರುನೋಡುತ್ತಿದ್ದರು. ಇವರ ಮರಣದಿಂದ ಈ ಮನೋರಥಗಳೆಲ್ಲಾ ಭಗ್ನವಾದವು.

ಸಿಪ್ಪಣಿ

ತರಗತಿ IV ಕಾಲ 40 ಮಿನಿಟ್

ವ್ಯಾಕರಣ (ಕನ್ನಡಸಂಧಿ)

೧. ಲೋಪಸಂಧಿ

ಅರ್ಥ

೧ ಲೋಪ

ಊರಿನ + ಒಳಗೆ = ಊರಿನೊಳಗೆ

ಊ + ರ್ + ಇ + ನ್ + ಅ + ಒ + ಳ್ + ಅ + ಗ್ + ಎ = ೧೦ ಊ + ರ್ + ಇ + ನ್ + ಒ + ಳ್ + ಅ + ಗ್ + ಎ = ೯

[ಮುಂಚೆ ಇದ್ದದ್ದು ಕಾಣಿಸದೆ ಹೋದರೆ ಲೋಪ]

೨ ಸಂಧಿ

ರಾಮ + ಅಯ್ಯ = ರಾಮಯ್ಯ

ಕೃಷ್ಣ + ಅಪ್ಪ = ಕೃಷ್ಣಪ್ಪ.

[ಅಕ್ಷರಗಳೊಂದಕೊಂದು ಸೇರುವದೇ ಸಂಧಿ]

೩ ಲೋಪಸಂಧಿ

ಮಾವಿನ + ಎಲೆ = ಮಾವಿನೆಲೆ.

ಉದಾಹರಣೆಗಳ ಸಹಾಯದಿಂದ ವಿಧಿಯನ್ನು ಬಾಲಕರಿಂದ ಹೇಳಿಸಿ ಹಲಿಗೆಯಮೇಲೆ ಬರೆದು ದೃಢಪಡಿಸುವದು.

ಕಾಣಿಸಲಿಲ್ಲ = ಲೋಪ, ಎಂಬದಾಗಿ ಹಲಿಗೆಯಮೇಲೆ ಬರೆಯುವದು. ಪುನರಾವರ್ತನ ಮಾಡಿಸುವದು

ಉದಾಹರಣೆಗಳ ಸಹಾಯದಿಂದ ವಿಧಿಯನ್ನು-ಬಾಲಕರಿಂದ ಹೇಳಿಸಿ ಇತರ ಉದಾಹರಣೆಗಳಿಂದ ದೃಢಪಡಿಸಿ ವಿಧಿಯನ್ನು ೩—೪ ಬಾಲಕರಿಂದ ಹೇಳಿಸಿ ಕಪ್ಪು ಹಲಿಗೆಯಮೇಲೆ ಬರೆದು ದೃಢಪಡಿಸುವದು. ಪುನರಾವರ್ತನ ಮಾಡಿಸುವದು.

ಉದಾಹರಣೆಗಳ ಸಹಾಯದಿಂದ ವಿಧಿಯನ್ನು-ಬಾಲಕರಿಂದ ಹೇಳಿಸಿ ಕಪ್ಪು ಹಲಿಗೆಯಮೇಲೆ ಬರೆದು ಬಾಲಕರಿಗೆ ತಿಳಿದಿರುವ ಇತರಉದಾಹರಣೆಗಳನ್ನು ಬರೆದು

ವರ್ಣಿಸಿ ಒಂದು ನಾಟಕವನ್ನು ಬರೆದರು. ಈ ನಾಟಕವು ಯೂರೋಪ್‌ಖಂಡದವರಿಗೆ ಅಷ್ಟು ಅಭಿಮತವಾಗಿಲ್ಲ. ಈ ಗ್ರಂಥದಲ್ಲಿ ಇವರು ಬರೆದಿರತಕ್ಕ ಅಂಶಗಳಲ್ಲಿ ಕೆಲವು ಈಗ ಆಚರಣೆಯಲ್ಲಿರತಕ್ಕ ಯೂರೋಪಿಯರ್ ಸಂಪ್ರದಾಯಗಳಿಗೆ ಕೆಲವುಭಾಗಗಳಲ್ಲಿ ವ್ಯತ್ಯಾಸವಿರುವಂತೆ ಹೇಳುತ್ತಾರೆ. ಇದು ಸಹಜವೇಸರಿ ಇವರು ಯೂರೋಪ್‌ಖಂಡವನ್ನಿಳಿದ ೬ ವರ್ಷಗಳಲ್ಲಿ ಅನೇಕ ಸಂಪ್ರದಾಯಗಳೆಲ್ಲಾ ಅವರಿಗೆ ತಿಳಿದಂತೆ ಇವರಿಗೆ ತಿಳಿಯುವದು ಅಸಾಧ್ಯ. ಹೀಗಿದ್ದಾಗ್ಯೂ ಈ ಗ್ರಂಥವು ಇವರ ಅನ್ಯಾದೃಶವಾದ ಸಾಮರ್ಥ್ಯವನ್ನು ಪ್ರದರ್ಶನ ಮಾಡುತ್ತದೆ. ತರಳಾದತ್ತರವರು ತಮ್ಮ ತಂದೆಗಳ ಹತ್ತರಲೇ ಸಂಸ್ಕೃತಭಾಷಾಭ್ಯಾಸವನ್ನು ಪ್ರಾರಂಭಿಸಿದರು. ೧೨ವರ್ಷಗಳಲ್ಲಿಯೇ ಸಂಸ್ಕೃತಭಾಷೆಯಲ್ಲಿ ಬಹಳ ಪರಿಚಯವನ್ನು ಮಾಡಿದರು. ಇವರ ಜ್ಞಾಪಕಶಕ್ತಿಯು ಅತ್ಯದ್ಭುತವಾಗಿತ್ತು. ಫ್ರೆಂಚ್‌ಭಾಷೆ ಇಂಗ್ಲೀಷ್‌ಭಾಷೆ ಸಂಸ್ಕೃತಭಾಷೆಗಳಲ್ಲಿ ಎರಡು ಮೂರಾವೃತ್ತಿ ಓದಿದ ಭಾಗಗಳನ್ನು ಒಂದೂ ತಪ್ಪದಂತೆ ಒಪ್ಪಿಸುತ್ತಿದ್ದರಂತೆ ಇವರ ಎಷ್ಟನೆಯ ವಯಸ್ಸಾದ ಹಿಂದೂ ಇಂಗ್ಲೀಷ್ ಫ್ರೆಂಚ್ ಸ್ತ್ರೀಯರೂಕೂಡ ಅಯಾಯ ಭಾಷೆಗಳಲ್ಲಿ ಇವರಿಗೆ ಜ್ಞಾಪಕವಿದ್ದ ಪದ್ಯಕಾವ್ಯಗಳಲ್ಲಿ ಒಂದು ದಶಾಂಶವನ್ನು ಜ್ಞಾಪಕವಿಟ್ಟುಕೊಳ್ಳತಕ್ಕವರೂ ಸಿಕ್ಕುತ್ತಿರಲಿಲ್ಲ. ೧೮೭೬ ರಲ್ಲಿ ಇವರು ಕೆಲವು ಫ್ರೆಂಚ್ ಪದ್ಯಕಾವ್ಯಗಳನ್ನು ಇಂಗ್ಲೀಷ್‌ಭಾಷೆಗೆ ತರ್ಜುಮೆ ಮಾಡಿದರು. ಈ ಗ್ರಂಥವನ್ನು ಇಂಡಿಯಾದೇಶದಲ್ಲಿಯೇ ಮುದ್ರಿಸಿದರು. ಆದರೆ ಈ ಪುಸ್ತಕದ ಮುದ್ರಣವೂ ಕಾಗದವೂ ಬೈಂಡಿಂಗೂ ಮೊದಲಾದವುಗಳು ಚೆನ್ನಾಗಿರಲಿಲ್ಲ. ಈ ಕಾರಣದಿಂದ ಕೆಲವುದಿವಸಗಳವರಿಗೂ ಪ್ರಚಾರಕ್ಕೆ ಬರಲಿಲ್ಲ. ಕೆಲವುದಿವಸಗಳ ಮೇಲೆ ವಿಲಾಯತಿಯಲ್ಲಿ ಒಂದು ಪತ್ರಿಕಾಕರ್ತರು ಅಕಸ್ಮಾತ್ತಾಗಿ ಈ ಗ್ರಂಥವನ್ನು ನೋಡಿ ಆಗ್ರಂಥದ ಶಯ್ಯೆಯುಲಾಲಿತ್ಯವನ್ನು ಮೆಚ್ಚಿ ಅದನ್ನು ಇತರ ಮಹಾಕವಿಗಳ ಗ್ರಂಥಗಳೊಡನೆ ಹೋಲಿಸಿ ಆ ಗ್ರಂಥವು ಪ್ರಚಾರವಾಗುವಂತೆಯೂ ಗ್ರಂಥಕರ್ತರಿಗೆ ಯಶಸ್ಸು ಬರುವಂತೆಯೂ ಮಾಡಿದರು. ಇವರು ಬಹಳ ಶ್ರದ್ಧೆಯಿಂದ ಸಂಸ್ಕೃತವನ್ನು ವ್ಯಾಸಂಗಮಾಡುತ್ತ ಬಂದು ಸಂಸ್ಕೃತಕಾವ್ಯಗಳಿಗೂ ಇಂಗ್ಲೀಷ್ ಮತ್ತು ಫ್ರೆಂಚ್‌ಕಾವ್ಯಗಳಿಗೂ ಇರತಕ್ಕ ವೈಲಕ್ಷಣ್ಯಾಂಶಗಳನ್ನು ಗೊತ್ತುಮಾಡಿ ಈ ಪ್ರತಿಯೊಂದು ಭಾಷೆಯ ಗ್ರಂಥಗಳು ಇತರಭಾಷೆಗಳ ಕಾವ್ಯರಸಗಳಿಂದ ಪ್ರಚುರವಾಗಿ ಶೋಭಿಸುವಂತೆ ಮಾಡಬೇಕೆಂದು ಪ್ರಯತ್ನ ಮಾಡುತ್ತಾ ಇದ್ದರು. ಅಷ್ಟರಲ್ಲಿಯೇ ೧೮೭೭ನೇ ಇಸವಿ ಆಗಮಿಸಿ ನೇ ತಾ

ಭೂವಿವರಣೆ

ಭೂಪಠದ ಸಹಾಯದಿಂದ ಒಂದುದೇಶದವಿಷಯವನ್ನು ತಿಳಿಸುವ ಕ್ರಮ

ಸಾಧಾರಣ ಚಿಕ್ಕಚಿಕ್ಕ ಸ್ಕೂಲುಗಳಲ್ಲಿ(ಹೋಬಳಿ ಗ್ರಾಮ)ಭೂಗೋಳ ಪಾಠವನ್ನು ಬೋಧಿಸಬೇಕಾದರೆ ವ್ಯಾಪುಗಳನ್ನು ತೋರಿಸದೆ ಮೊದಲು ಸಾಮಾನ್ಯ ವರ್ಣನೆಯನ್ನು ತಿಳಿಸಿ ಅನಂತರ ಯಾವದಾದರೂ ಒಂದುದೇಶದ ವಿಷಯಮುಂತಾದವುಗಳನ್ನು ಸಾಮಾನ್ಯವರ್ಣನೆಯನ್ನು ತಿಳಿಸಿದಂತೆ ತಿಳಿಸುವದಕ್ಕೆ ಪ್ರಯತ್ನಪಡಬೇಕು. ಹೀಗೆ ದೇಶವನ್ನು ತಿಳಿಸುವಾಗ್ಯೆ ಬರೀಹೆಸರನ್ನು ಹೇಳಿಕೊಡಲು ಪ್ರಯತ್ನಪಡಬಾರದು ಅದರ ವಿಷಯದಲ್ಲಿ ಸ್ವಲ್ಪ ಹೆಚ್ಚಿನ ಸಮಾಚಾರವನ್ನು ತಿಳಿಸಿದರೆ ಹುಡುಗರು ಗಮನ ಕೊಟ್ಟು ಮನಸ್ಸಿನಲ್ಲಿ ಆ ವಿಷಯವು ನಿಲ್ಲುವದಕ್ಕೆ ಮಾಡಬೇಕಾದ ಕೆಲಸಮಾಡುವರು ಮತ್ತು ಅಂಥಾಪಾಠದಲ್ಲಿ ಅವರಿಗೆ ಆಸಕ್ತಿಯುಂಟಾಗುವದು.

ವ್ಯಾಪಿನ ಸಹಾಯದಿಂದ ತಿಳಿಸತಕ್ಕಕ್ರಮ

೧ ವ್ಯಾಪನ್ನು ನೆಲದಮೇಲೆ ಹರಡಿ ದೇಶದ ಮೇರೆಗಳೂ ಮತ್ತು ಅದು ಇರತಕ್ಕ ವಲಯ ಇವುಗಳ ವಿಷಯದಲ್ಲಿ ಪ್ರಶ್ನೆಮಾಡಿ ಉತ್ತರವನ್ನು ಕಲಗೆಯಮೇಲೆ ಬರೆಯಬೇಕು.

೨ ವ್ಯಾಪನ್ನು ನೋಡಿ ಭೂಸ್ವರೂಪವನ್ನು ಅವರೇ ನೋಡಿ ಹೇಳುವಂತೆ ಮಾಡಬೇಕು. ಪರ್ವತಗಳು ಇರತಕ್ಕ ಸ್ಥಳಗಳಲ್ಲಿಯೂ ಮತ್ತು ಇವುಗಳಲ್ಲಿ ಹುಟ್ಟುವ ನದಿಗಳು ಹರಿಯುವರೀತಿಯಿಂದಲೂ ಭೂವಿಯು ಯಾವಕಡೆಗೆ ಇಳಿಜಾರಾಗಿದೆಯೋ ಅದನ್ನು ಅವರೇ ಊಹಿಸುವಂತೆ ಮಾಡಬೇಕು.

೩ ಮೇಲೆ ತಿಳಿಸಿರುವ ಎರಡುವಿಷಯಗಳಿಂದ ಹವಾಗುಣವನ್ನು ಅವರೇ ಯೋಚಿಸುವಂತೆ ಮಾಡಬೇಕು. ಯಾತಕ್ಕಂದರೆ ಒಂದುದೇಶದ ಹವಾಗುಣವು ಅದು ಯಿರುವ ವಲಯದಂತೆಯೂ ಮತ್ತು ಭೂಸ್ವರೂಪದಂತೆಯೂ ವ್ಯತ್ಯಾಸವಾಗುವದು.

೪ ಮೇಲಿನ ಮೂರು ವಿಷಯಗಳಿಂದ ದೇಶದ ಬೆಳೆಯನ್ನು ಸಾಮಾನ್ಯವಾಗಿ ಅವರಿಂದಲೇ ಪ್ರಶ್ನೆಯಮೂಲಕವಾಗಿ ಹೊರಡಿಸಬಹುದು.

೫ ಹಿಂದಿನ ನಾಲ್ಕುವಿಷಯಗಳಿಂದ ಜನರ ಉದ್ಯೋಗ ಮತ್ತು ಇತರಕೆಲಸಗಳ

ನನ್ನ + ಅರಸನು = ನನ್ನರಸನು.

[ವಿಧಿ] ಸ್ವರಕ್ಕೆ ಸ್ವರಪರವಾದರೆ ಪೂರ್ವಸ್ವರಕ್ಕೆ ಲೋಪ ಬರುತ್ತದೆ

ಪ್ರತಿಷೇಧ

ಅರ್ಥ—ಪ್ಲುತ = ದೀರ್ಘಸ್ವರಗಳಿಗಿಂತಲೂ ಸ್ವಲ್ಪಕಾಲ ಹೆಚ್ಚಾಗಿ ಉಚ್ಚರಿಸತಕ್ಕ ಸ್ವರ.

ಅಣ್ಣಾ + ಓಡಿಬಾ = ಅಣ್ಣಾ ಓಡಿಬಾ.

ರಾವೊ + ಎಂದು ಅತ್ತಳು = ರಾವೊ ಎಂದು ಅತ್ತಳು

[ವಿಧಿ] ಪ್ಲುತಕ್ಕೆ ಸ್ವರಪರವಾದರೆ ಸಂಧಿಕಾರ್ಯ ಬರುವದಿಲ್ಲ.

ಮನುಷ್ಯನೋ + ಎತ್ತೋ = ಮನುಷ್ಯನೋ ಎತ್ತೋ

ಬಿಟ್ಟವೋ + ಅನಿಯೋ = ಬಿಟ್ಟವೋ ಅನಿಯೋ.

ಂ [ವಿಧಿ]

ಸಂದೇಹಾರ್ಥದಲ್ಲಿ ಸ್ವರಕ್ಕೆ ಸ್ವರಪರವಾದರೆ ಸಂಧಿಕಾರ್ಯ ಬರುವದಿಲ್ಲ.

ಲಕ್ಷಣಸಮನ್ವಯ ಮಾಡಿಸುವದು. ಪುನರಾವರ್ತನ ಮಾಡಿಸುವದು.

ಇದನ್ನು ಹಲಿಗೆಯಮೇಲೆ ಬರೆದು ೪—೫ ಬಾಲಕರಿಂದ ಹೇಳಿಸಿ ದೃಢಪಡಿಸುವದು.

ಉದಾಹರಣೆಗಳ ಸಹಾಯದಿಂದ ವಿಧಿಯನ್ನು-ಬಾಲಕರಿಂದ ಹೇಳಿಸಿ ಕಪ್ಪು ಹಲಿಗೆಯಮೇಲೆ ಬರೆದು ೩—೪ ಬಾಲಕರಿಂದ ಹೇಳಿಸಿ ದೃಢ ಪಡಿಸುವದು.

ಇತರಉದಾಹರಣೆಗಳನ್ನು—ಕೇಳಿಸಿ ಲಕ್ಷಣಸಮನ್ವಯ ಮಾಡಿಸುವದು. ಪುನರಾವರ್ತನಮಾಡಿಸುವದು.

ಉದಾಹರಣೆಗಳ ಸಹಾಯದಿಂದ ವಿಧಿಯನ್ನು—ಬಾಲಕರಿಂದ ಹೇಳಿಸುವದು. ವಿಧಿಯನ್ನು-ಹಲಿಗೆಯಮೇಲೆ ಬರೆಯುವದು. ಲಕ್ಷಣಸಮನ್ವಯ ಮಾಡಿಸುವದು. ಪುನರಾವರ್ತನ ಮಾಡಿಸುವದು. ಒಟ್ಟುಪುನರಾವರ್ತನ ಮಾಡಿಸುವದು.

[ನೋಟ್]ಇದನ್ನು ಓದುವ ಉಪಾಧ್ಯಾಯರಗಳು ಇದರಂತೆ ಕೆಲಸಮಾಡಿ ಬರುವ ತೊಂದರೆಗಳನ್ನು ನಿವಾರಣೋಪಾಯಗಳನ್ನೂ ಪ್ರಕಟಿಸುತ್ತಾ ಬರಬೇಕೆಂದು ಪ್ರಾರ್ಥಿಸುತ್ತೇನೆ

ಜೆ॥ರಾಮಯ್ಯ
ತಲಕಾಡುಸ್ಕೂಲ್ ಅ॥ಮಾಸ್ಟರ್
ತಿರುಮಕೂಡಲ್ ನರಸೀಪುರ ತಾಲ್ಲೂಕು

೨೦—೧—೯೯

ಕಾಸಂಡಿಂಂ, ಅನೇಕವೇಳೆ ಪದಾರ್ಥಗಳು ಕಳ್ಳರ ಪಾಲಾಗುತ್ತಿದ್ದವು, ಇಲ್ಲವೆ ದುಷ್ಟಸೈನಿಕರು ಲೂಟಿಮಾಡಿಕೊಂಡು ಹೋಗುತ್ತಿದ್ದರು. ಬೆರಳುಗಳಿಗೆ ಎಣ್ಣೆ ಬಟ್ಟೆಯನ್ನು ಸುತ್ತಿ ದೀಪಹತ್ತಿಸುವುದು, ಉಗುರು ಕಣ್ಣುಗಳಲ್ಲಿ ಸೂಜಿಯಿಂದ ಚುಚ್ಚುವುದೂ, ಹೀಗೆ ವಿಚಿತ್ರವಾದ ಹಿಂಸೆಗಳಿಂದ ಸುಲಿಗೆ ಮಾಡಿಕೊಳ್ಳುತ್ತಿದ್ದರು. ಆತಂಕ ಇಂಗ್ಲಿಷರ ಪ್ರಭುತ್ವವು ಸ್ಥಿರವಾಗಿ ನಿಂತಮೇಲೆ ಈ ದುರ್ದೆಸೆ ತಪ್ಪಿ, ಪ್ರತಿಯೊಬ್ಬನು ಆಯುಸ್ಸುಳ್ಳವನಾದರೆ ತಾನುಹೂತಿಟ್ಟ ಮಡಿಕೆ ಹಣ್ಣನ್ನು ತಾನೇ ತಿನ್ನಬಹುದೆಂದು ಧೈರ್ಯ ಪಡಬಹುದು. ಆಸೇತು ಹಿಮಾಚಲ ಪರ್ಯಂತ ದಿಗಲುಪಡದೆ ಸಂಚಾರ ಮಾಡಬಹುದು; ನೆಗ ನಾಣ್ಯಗಳನ್ನು ಸ್ವಲ್ಪ ಜಾಗರೂಕತೆಯಿಂದ ನೋಡಿಕೊಂಡರೆ ಯಾರೂ ಅಪಹಾರಮಾಡಲಾರರು, ನಮ್ಮಲ್ಲಿರುವ ಹಣವನ್ನು ವ್ಯಾಪಾರ ಮೂಲಕವಾಗಲಿ ಬಡ್ಡಿ ಮೂಲಕವಾಗಲಿ, ವೃದ್ಧಿಪಡಿಸಬಹುದು; ಅಥವಾ ಭೂಸ್ಥಿತಿಗಳನ್ನು, ಪ್ರತಿಸಲ ವಿಲ್ಲದೆ ಅನ್ಯಾಕ್ರಾಂತವಾಗುತ್ತೆಂಬ ಹೆದರಿಕೆಯಿಲ್ಲದೆ, ಮಾಡಬಹುದು.

ಹೀಗೆ ಸೌಕರ್ಯಗಳುಂಟಾಗಿರುವದರಿಂದ, ಜನರು ತಮ್ಮವರ ಮಾನಗಳನ್ನು ಪೂರ್ವದಂತೆ ಇತರರ ಕಣ್ಣಿಗೆ ಗೋಚರ ಇಟ್ಟುಕೊಳ್ಳದೆ ಇನ್ನೂ ಅದಾಯವನ್ನು ಪಡೆಯಲು ಪ್ರಯತ್ನಪಡುತಲಿದಾರೆ. ಕೆಲವರು ಕಾಪಿತೋಟಗಳನ್ನು ಮಾಡುವದರಲ್ಲಿ ಹಣವನ್ನು ವ್ಯಯಮಾಡುತ್ತಾರೆ. ಕೆಲವರು ದೇಶಾಂತರ ವ್ಯಾಪಾರಮಾಡುತ್ತಾರೆ, ಕೆಲವರು ಬ್ಯಾಂಕಗಳಲ್ಲಿಟ್ಟು ಬಡ್ಡಿಯನ್ನು ಸಂಸಾದಿಸುತ್ತಾರೆ. ಈ ಪತ್ರಿಕೆಯಲ್ಲಿ ಬ್ಯಾಂಕುಗಳ ವಿಚಾರವು ಸ್ವಲ್ಪಮಟ್ಟಿಗೆ ತಿಳಿಸಲ್ಪಡುತ್ತೆ.

ಬ್ಯಾಂಕುಗಳನ್ನು ಕ್ರಮವಾಗಿ ನಡಸಿದರೆ ಜನರಿಗೆ ಬಹಳ ಪ್ರಯೋಜನ ವುಂಟು. ಸಾಲ ಮಾಡತಕ್ಕವನು ತನ್ನ ಗ್ರಹಕೃತ್ಯಕ್ಕಾಗಿ ನೋಡಬಹುದು, ಇಲ್ಲವೆ ಲಾಭ ಪಡೆಯುವದಕ್ಕಾಗಿ ಮಾಡಬಹುದು, ಮದುವೆ ಮುಂಜಿ ಮೊದಲಾದ ಕಾರ್ಯಗಳು ಕಾಪಿ ತೋಟವನ್ನು ಮಾಡುವದಕ್ಕೆ ಬಂಜರು ಭೂಮಿಯನ್ನು ಸಾಗುವಳಿಗೆ ತರುವದಕ್ಕೆ ಸಾಲ ಟೀಕಾಗಬಹುದು. ಸಾಲಮಾಡತಕ್ಕವನು ಸಾಲಕೊಡುವವನಿಗೆ ತಕ್ಕ ಆಧಾರವನ್ನು ತೋರಿಸಿದ ಹೊರತು ಸಾಲವನ್ನು ಸುಲಭ ಬಡ್ಡಿಗೆ ಹೊಂದಲಾರನು, ಈ ಆಧಾರವು ಚರಸ್ಥಿರಸ್ವರೂಪವಾಗಿರುವದುಂಟು, ನಂಬಿಕೆ ರೂಪವಾಗಿರುವದೂ ಉಂಟು. ಸಾಲ ಕೊಡುವವನಿಗೆ ಆಧಾರವು ಸಮರ್ಪಕವಾಗಿದ್ದು ಹಣಕ್ಕೆ ಮೋಸ ಉಂಟಾಗಲಾರದೆಂಬ ನಂಬಿಕೆಯೂ ಇದ್ದರೆ ಅವನು ವಾಡಿಕೆಯಾದ ಬಡ್ಡಿಗೆ ವಿಾರಿ ಬಡ್ಡಿಯನ್ನು ಕೇಳುವ

ನ್ನೂ ಆಮದು ರಫ್ತುಗಳನ್ನೂ ಬಾಲಕರೇ ಊಹಿಸಿ ಹೇಳುವಂತೆ ಮಾಡಬಹುದು.

ಒಪ್ಪಣಗಳ ಹೆಸರುಗಳನ್ನು ಅವುಗಳಿರುವ ಸ್ಥಳದಿಂದಲೂ ಮತ್ತು ಅವುಗಳಲ್ಲಿರುವ ವಿಶೇಷವಾದ ವಿಷಯಗಳ ಸಹಾಯದಿಂದಲೂ ಅವರೇ ನೆನಪು ಇಡುವಂತೆ ಮಾಡಬೇಕು.

ನೀಶದಭಾಷೆ. ಮತ ಜನಸಂಖ್ಯೆ, ರಾಜ್ಯಭಾರದಕ್ರಮ ಮುಂತಾದ ವಿಷಯಗಳನ್ನು ಉಪಾಧ್ಯಾಯರೇ ಹೇಳಿಕೊಡತಕ್ಕದ್ದು

ಪಾಠಾಂತ್ಯದಲ್ಲಿ ಹಲಗೆಯ ಮೇಲೆ ಪಾಠದ ಮುಖ್ಯಾಭಿಪ್ರಾಯವು ಇರಬೇಕು. ಮತ್ತು ಹಲಗೆಯಮೇಲೆ ದೇಶದ ಆಕಾರವಾತ್ರ ಬರೆದು ಪುನರಾವರ್ತನೆ ಮಾಡಬೇಕು.

ಈರೀತಿ ಪಾಠವನ್ನು ಆದಿಯಿಂದಲೂ ನಡೆಸುತಾ ಬಂದಪಕ್ಷದಲ್ಲಿ ಬಾಲಕರಿಗೆ ಕ್ರಮದಿಂದ ನಡೆಯುತ್ತಿರುವ ಪಾಠಗಳಲ್ಲಿ ಕಷ್ಟತೋರುವದಿಲ್ಲ. ಮತ್ತು ಬುದ್ಧಿಶಕ್ತಿಗೆ ಕೆಲಸಕೊಡುವದರಿಂದ ಚಟುವಟಿಕೆಯು ಅಭಿವೃದ್ಧಿಯಾಗುವದು. ಆದ್ದರಿಂದ ಉಪಾಧ್ಯಾಯರು ಮ್ಯಾಪಿನ ಸಹಾಯದಿಂದ ಮೇಲಿಹೇಳಿರುವ ಕ್ರಮದಲ್ಲಿ ಕೆಳಗಣ ತರಗತಿಯಿಂದಲೂ ಪಾಠವಾಡುತ್ತಾ ಬಂದರೆ ಮುಂದಕ್ಕೆ ಒಳ್ಳೇದ

ಎಚ್. ಸೂರ್ಯನಾರಣಪ್ಪ, ಅ–ಮಾಸ್ಟರ್
ನಜರ್‌ಬಾದ್ ತಾಲ್ಲೂಕು ಕನಡಾಸ್ಕೂಲ್
ಮೈಸೂರು

ಬ್ಯಾಂಕುಗಳ ಉಪಯೋಗ

ಪೂರ್ವದಲ್ಲಿ ದಂಡಿನ ಹಾವಳಿಯಿಂದಲು, ಕಳ್ಳಕಾಕರ ಭಯದಿಂದಲೂ ಈಗಿನಂತೆ ಪದಾರ್ಥಗಳನ್ನು ಜೋಪಾನ ಮಾಡುವುದಕ್ಕಾಗುತ್ತಿರಲಿಲ್ಲ. ಪ್ರತಿಯೊಬ್ಬನು ತನ್ನ ಆಸ್ತಿಯನ್ನು ಪರರ ವಶಕ್ಕೆ ಕೊಡುವದಕ್ಕೆ ಹೆದರಿ ತನ್ನಲ್ಲಿಯೇ ಇಟ್ಟುಕೊಳ್ಳುತ್ತಿದ್ದನು, ದವಸವನ್ನು ಗುಳಿಗಳಲ್ಲಿಯೂ, ಚಿನ್ನ ಬೆಳ್ಳಿ ನಗಗಳನ್ನು ಹೆಂಗಸರ ವೈವೇಲಿಯೂ. ನಗದುಹಣವನ್ನು ನೆಲದಲ್ಲಿಯೂ ಇಡುವ ವಾಡಿಕೆ ಹೆಚ್ಚಾಗಿತ್ತು. ಹೀಗೆ

ಗ್ರಿಸಿಲ್ಡಾ.

ಇಟಲಿದೇಶಕ್ಕೆ ಪಶ್ಚಿಮಭಾಗದಲ್ಲಿ ಸೆಲ್ಯೂನಿಸ್ ಎಂದು ಒಂದು ದೇಶವಿರ ವುದು. ಈ ದೇಶವನ್ನು ವಾಲ್ಟರ್‌ನೆಂಬುವನು ಆಳುತ್ತಿದ್ದನು. ಈತನು ಪ್ರಜಾಕ್ಷೇಮ ಚಿಂತನೆಯನ್ನು ಮಾಡದೆ, ಪ್ರಭೋವೃದ್ಧಿಯನ್ನುತಾರದೆ ಮತ್ತನಂತೆ ಆಟಪಾಟಗಳಲ್ಲಿ ಯೂ, ಬೇಟೆಯಲ್ಲಿಯೂ ಕಾಲವನ್ನು ಕಳೆಯುತ್ತಾ ವಿಹಾರಲೋಲನಾಗಿದ್ದನು. ರಾಜನು ಈರೀತಿಯಲ್ಲಿ ವೈಮರೆತಿರುವುದನ್ನು ನೋಡಿ ಪ್ರಜೆಗಳೆಲ್ಲಾ ಬಹಳ ಚಿಂತಿ ಸುತ್ತಿದ್ದರು. ಹೀಗಿರುವಾಗ ಒಂದಾನೊಂದುದಿವಸ ಪುರನಿವಾಸಿಗಳೆಲ್ಲರೂ ಸಭೆ ಗೂಡಿ, ರಾಜನಾದರೋ ಲೋಲನಾಗಿರುವನು ; ರಾಜನಿಗಾದರೋ ಸಂತಾನವಿಲ್ಲ. ಇವನ ಅನಂತರ ದೇಶವು ಪರರಾಜರ ವಶವಾಗಿ, ಅನ್ಯರ ಸುಲಿಗೆಗೆ ಈಡಾಗುವುದು ; ಇದಕ್ಕೆ ಏನು ಉಪಾಯ ಮಾಡಬೇಕೆಂದು ಬಹಳವಾಗಿ ಯೋಚಿಸಿ ಕೊನೆಗೆ ಹೇಗಾದ ರೂ ಮಾಡಿ ರಾಜನಿಗೆ ವಿವಾಹಮಹೋತ್ಸವವನ್ನು ಬೆಳೆಯಿಸಿ ಯುವರಾಜನನ್ನಾದರೂ ಪಡೆಯುಬೇಕೆಂದು ನಿಶ್ಚಯಿಸಿ ಅನುಭವಶಾಲಿಗಳಾದ, ವಿವೇಕಿಗಳಾದ ಕೆಲವುಮಂದಿ ವೃದ್ಧರನ್ನು ರಾಜನಬಳಿಗೆ ಕಳುಹಿಸಿದರು. ಇವರು ಸಮಯವನ್ನು ನಿರೀಕ್ಷಿಸಿ ಪ್ರಜೆ ಗಳ ಸಂತಾಪವನ್ನು ಅದಕ್ಕೆತಕ್ಕ ಪರಿಹಾರಮಾರ್ಗವನ್ನು ನಯಭಯಪುರಸ್ಸರವಾಗಿ ರಾಜನನ್ನು ಬೇಡಿಕೊಳ್ಳಲು, ಅವನು ಸಾವಧಾನವಾಗಿ ಇವರ ವಿಜ್ಞಾಪನೆಯನ್ನು ಆಲಿಸಿದನು. ಇದಕ್ಕಾಗಿ ತುಂಬಾ ಸಂತೋಷಗೊಂಡು ಬಂದಿದ್ದವರಲ್ಲಿ ವಿವೇಕ ಶಾಲಿಯಾಗಿಯೂ ಪ್ರಜೆಗಳ ವಿಶ್ವಾಸಕ್ಕೆ ಪಾತ್ರನಾಗಿಯೂ, ಮುಖಂಡನಾಗಿಯೂ ಇದ್ದ ಅತಿ ವೃದ್ಧನೊಬ್ಬನು ರಾಜಾಜ್ಞೆಯಿಂದ ಅನುರೂಪಳಾದ, ಸುಂದರಳಾದ, ಸುಗುಣವತಿಯಾದ ರಾಜಪುತ್ರಿಯನ್ನು ಹುಡುಕಿಕೊಂಡು ಬರಲು ಸಿದ್ಧನಾಗಿರುವೆವು ಎಂದನು. ಅದಕ್ಕೆ ರಾಜನು, ಅಯ್ಯಾ ಪುರನಿವಾಸಿಗಳಿರಾ, ನಿಮ್ಮ ಇಷ್ಟಾರ್ಥ ವನ್ನು ನೆರವೇರಿಸಲು ಸಿದ್ಧನಾಗಿರುವೆನು. ಆದರೆ ನಾನು ಮದುವೆಯಾಗಬೇಕಾದರೆ ನಾನೇ ಕನ್ಯಾಮಣಿಗಳಲ್ಲಿ ನನಗೆ ಇಷ್ಟರಾದವರನ್ನು ಆರಸಿ ವರಿಸಬೇಕು. ನಾನು ಮದುವೆಯಾದ ನಾರೀಮಣಿಯು ಯಾರೇ ಆಗಲಿ ನೀವು ಅಕೆಯನ್ನು ರಾಜಕುಲೋ ತ್ಪನ್ನೆ, ಚಕ್ರವರ್ತಿತನೂಜೆ, ಎಂದು ಭಾವಿಸಿ ಪುರಸ್ಕರಿಸಬೇಕು. ಇದಕ್ಕೆ ಸಮ್ಮತಿ

ದಿಲ್ಲ. ಹಾಗಿಲ್ಲದೆ ಸಾಲಕೇಳುವ ಮನುಷ್ಯನು ದುಂದುಗಾರನೆಂತಲೂ ಸಾಲವನ್ನು ಮುಂದೆ ಲಾಭವಿಲ್ಲದ ಕೆಲಸಕ್ಕೆ ಉಪಯೋಗಿಸುತ್ತಾನೆಂತಲೂ ತಿಳಿದರೆ ಆಧಾರವು ಚೆನ್ನಾಗಿದ್ದರೂ, ಅವನು ಅಧಿಕ ಬಡ್ಡಿಯನ್ನು ಕೊಡಬೇಕಾಗಿಬರುವುದು. ಸಾಲಗಾರರಿಗೆ ಯಾವ ಆಸ್ತಿಯೂ ಇಲ್ಲದೆ ಬರೀ ನಂಬಿಕೆ ಮೇಲೆ ಸಾಲ ಹುಟ್ಟುವುದು ಸ್ವಲ್ಪ ಕಷ್ಟ, ಆದರೆ ಮೋಸಗಾರನಲ್ಲದೆ, ಮಾತಿಗೆ ತಪ್ಪದೆ ಪ್ರಾಮಾಣೀಕತೆಯಿಂದ ನಡೆಯುವ ಮನುಷ್ಯನಿಗೆ ಸುಲಭವಾಗಿ ಸಾಲ ದೊರೆಯುವದುಂಟು. ಏವಂಚ ತಕ್ಕ ಆಧಾರ ಅಥವಾ ನಂಬಿಕೆ ಇವೆರಡರಲ್ಲಿ ಯಾವದೂ ಇಲ್ಲದಿದ್ದರೆ ಸಾಲವು ಸಿಕ್ಕುವುದಿಲ್ಲ.

ಆದರೆ ಕೆಲವು ವೇಳೆಗಳಲ್ಲಿ ತಕ್ಕ ಆಧಾರವೂ, ನಂಬಿಕೆಯೂ, ಎರಡೂ ಇದ್ದರು ಸಾಲವನ್ನು ತೆಗೆಯುವುದು ಕಷ್ಟವಾಗುತ್ತೆ. ಸಾಹುಕಾರನ ಬಳಿಯಲ್ಲಿ ಹಣವೆಲ್ಲ ವೆಚ್ಚವಾಗಿರಬಹುದು, ಕೇಳಿದಷ್ಟು ಹಣವಿಲ್ಲದೆ ಇರಬಹುದು, ಸಾಲಕೇಳುವವನ ಪರಿಚಯವು ಚೆನ್ನಾಗಿಲ್ಲದೆ ಇರಬಹುದು, ಹೀಗೆಯೇ ಮತ್ತಾವಕಾರಣಗಳಾದರೂ ಇರಬಹುದು. ಇತರಸ್ಥಳಗಳಲ್ಲಿ ಸಾಲತೆಗೆಯುವದಕ್ಕೆ ಸಾಲಗಾರನಿಗೆ ತಕ್ಕ ಸಹಾಯವಿಲ್ಲದೆ ಇರಬಹುದು ಬ್ಯಾಂಕುಗಳಿದ್ದರೆ ಈ ತೊಂದರೆಗಳೆಲ್ಲ ಸಂಭವಿಸುವದಿಲ್ಲ. ಬ್ಯಾಂಕುಗಳಿಗೆ ಅನೇಕಜನರು ಸೇರುವದ್ದರಿಂದ ಮೂಲಧನವನ್ನು ಅಗಿಂದಾಗ್ಗೆ ಜೇಕಾಗುವಷ್ಟು ಹೆಚ್ಚಿಸಬಹುದು, ಮತ್ತು ಬ್ಯಾಂಕಿನವರು ಬ್ಯಾಂಕಿನ ಹೆಸರಿನ ಭರವಸೇಮೇಲೆ ಇತರ ಸ್ಥಳಗಳಲ್ಲಿ ಸಾಲ ತೆಗೆದು ಕೊಡಬಹುದು.

ಬ್ಯಾಂಕುಗಳಿಂದ ಅನೇಕ ಪ್ರಯೋಜನಗಳುಂಟು. ಕೆಲವರು ಸ್ವಂತವಾಗಿ ಲೇವಾದೇವಿ ಮಾಡಲು ವಿರಾಮವಿಲ್ಲದೆ ಬಂದಹಣವನ್ನು ಚಿನ್ನ ಬೆಳ್ಳಿ ಮುಂತಾದವುಗಳನ್ನು ಕೊಂಡುಕೊಳ್ಳುವದರಲ್ಲಿ ಉಪಯೋಗಿಸುತ್ತಲ್ಲರೆ, ಇದರಿಂದ ತಾವು ಸಂಪಾದನೆ ಮಾಡಿದ ಹಣದಲ್ಲಿ ವೃದ್ಧ್ಯಂಶವೇನನ್ನೂ ಪಡೆಯುವದಕ್ಕಾಗುವದಿಲ್ಲ. ಮತ್ತೆ ಕೆಲವರು ತಮ್ಮ ವೆಚ್ಚಕಳೆದು ಉಳಿಯುವ ಹಣವು ಅಲ್ಪವೆಂದು ಅದನ್ನು ಖರ್ಚುಮಾಡುತ್ತಾರೆ. ತಿಂಗಳೊಂದಕ್ಕೆ ೧೦೦ರೂಪಾಯಿ ಸಂಬಳ ಬರುವ ಮನುಷ್ಯನಿಗೆ ತನ್ನ ಖರ್ಚೆಲ್ಲವು ಕಳೆದು ಕೊನೆಯಲ್ಲಿ ಅರ್ಧರೂಪಾಯಿ ಮಿಕ್ಕರೆ, ಸೇವಿಂಗ್ಸಬ್ಯಾಂಕಿರುವ ಕಡೆ ಅದನ್ನು ಅಲ್ಲಿಡಬಹುದು, ಸೇವಿಂಗ್ಸಬ್ಯಾಂಕಿಲ್ಲದಕಡೆ ಅರ್ಧರೂಪಾಯಿ ಅಲ್ಪವಾಗಿರುವದ್ದರಿಂದ ಅದನ್ನೂ ಖರ್ಚುಮಾಡಿ ಬಿಡುತ್ತಾನೆ, ಇದಲ್ಲದೆ ಹಣವು ಹತ್ತರವಿದ್ದರೆ ಯಾವದಕ್ಕಾದರೂ ಉಪಯೋಗಿಸುವ ಪ್ರಕೃತವುಂಟಾಗೇ ಆಗುತ್ತೆ. ಇದಲ್ಲದೆ ಬ್ಯಾಂಕಗಳ ಸಂಖ್ಯೆಯು ವೃದ್ಧಿಯೂದ ಹಾಗೆಲ್ಲ ಬಡ್ಡಿಯದರವು ತಗ್ಗುವುದು. (ಸಶೇಷ)

ದ್ದನು. ಈವಿಷಯವಾಗಿ ಯಾರಿಗೂ ಒಂದು ಮಾತನ್ನಾದರೂ ಹೇಳಲಿಲ್ಲ. ಯಾ ರೊಡನೆಯೂ ಸೂಚನೆಸಹ ಮಾಡಲಿಲ್ಲ. ಈಕೆಯು ಮನಸ್ಸನ್ನಾಗಲಿ ಈಕೆಯ ತಂದೆ ಯು ಅನುಮತಿಯನ್ನಾಗಲಿ ತೆಗೆದುಕೊಂಡಿರಲಿಲ್ಲ. ಆದಾಗ್ಯೂ ಈಕೆಗೆ ತಕ್ಕ ವಸ್ತ್ರಾ ಭರಣಗಳು ಸಿದ್ಧವಾಗುತಲಿದ್ದವು. ನಾನಾದೇಶದಿಂದ ರತ್ನಖಚಿತವಾದ ಆಭರಣ ಗಳೂ, ನಿರಾಜಿಮಯವಾದ ಉಡಿಗೆಗಳೂ ವಿವಾಹಕಾಲಕ್ಕೆ ಬಂದೊದಗಿದವು. ಪಟ್ಟಣವೆಲ್ಲ ಅಲಂಕಾರವಾಗುತಿತ್ತು. ಅರಮನೆಯು ಶೃಂಗಾರವೂ ಪೂರ್ಣಿಸುತಿತ್ತು. ನಾನಾದೇಶದ ಜನರೂ ಪಟ್ಟಣವನ್ನು ತುಂಬುತಿದ್ದರು. ಎಲ್ಲವೂ ಸಿದ್ಧವಾಗಿತ್ತು. ಆದರೆ ಎಲ್ಲೆಲ್ಲಿ ಕೇಳಿದರೂ ರಾಣಿಯು ಯಾರು ? ಯಾವ ರಾಜಪುತ್ರಿ ? ಯಾರಮಗಳು? ಯಾವದೇಶದ ರಾಣಿ ? ಎಂಬ ಪ್ರಶ್ನೆಯೂ, ಆಕೆ ಬಹು ಸ್ಫುರದ್ರೂಪಿ, ಗುಣಶಾಲಿ ಯೆಂತಲೂ; ನಮ್ಮ ರಾಜನಂತೆ ಬೇಟೆಯಲ್ಲಿ ನಿಪುಣೆಯೆಂತಲೂ, ಚಕ್ರವರ್ತಿ ತನುಜೆ ಯೆಂತಲೂ, ಪ್ರಜಾಪರಿಪಾಲನಾಶಕ್ತಿಯುಳ್ಳವಳೆಂತಲೂ, ಸಂಗೀತಸಾಹಿತ್ಯ ನೃತ್ಯ ಗಳಲ್ಲಿ ಆಕೆಯು ಅದ್ವಿತೀಯ.ಳೆಂಬ ಸಮಾನಾನೋಕ್ತಿಯು ತುಂಬಿತ್ತೇಹೊರತು ಇಂಥ ವಳೆಂದು ಯಾರಿಗೂ ತಿಳಿದಿರಲಿಲ್ಲ. ಕನ್ಯಾವಸ್ಥೆಯಲ್ಲಿದ್ದ ಅನೇಕ ರಾಜಪುತ್ರಿಯರು ಆದಿನ ನಮ್ಮನ್ನು ವರಿಸುವನು ತಮ್ಮನ್ನೆ ವರಿಸುವನೆಂಬ ಕುತೂಹಲದಿಂದ ಬೇಕಾದ ವಸ್ತ್ರಾಭರಣಗಳನ್ನು ಧರಿಸಿಕೊಂಡು ರಾಜನ ಕಟಾಕ್ಷಕ್ಕೆ ಪಾತ್ರರಾಗುತಿದ್ದರು.

ವಿವಾಹಕ್ಕೆ ನಿಶ್ಚೈಸಿದ್ದ ದಿವಸವು ಪ್ರಾಪ್ತವಾಯಿತು. ತಮ್ಮನ್ನು ಸಂರಕ್ಷಿಸುವ ರಾಜನ ವಿವಾಹ ಮಹೋತ್ಸವವನ್ನು ನೋಡಿ ಸಂತೋಷಪಡತಕ್ಕದ್ದು ಪ್ರಜೆಗಳಿಗೆ ಸ್ವಭಾವವಲ್ಲವೆ ! ಭವಿಷ್ಯತ್ತು ಯಾರಿಗೆತಾನೆ ತಿಳಿದಿರುವುದು. ಗ್ರಿಸಿಲ್ಡೆ ಯು ಎಲ್ಲರಂತೆ ತಾನೂ ರಾಜನ ವಿವಾಹಮಹೋತ್ಸವವನ್ನು ನೋಡಲು ಕುತೂ ಹಲವುಳ್ಳವಳಾಗಿ ಪ್ರಾತಃಕಾಲಕ್ಕೆ ಮುಂಚೆಯೆ ಎದ್ದು ನೀರುತರಲು ಭಾವಿಯಬಳಿಗೆ ಹೋಗಲು, ಅಲ್ಲಿ ನೆರೆದಿದ್ದ ಇತರ ಸ್ತ್ರೀಜನರಿಂದ ರಾಜನು ಆ ಮಾರ್ಗವಾಗಿಯೇ ತನ್ನ ಪ್ರಿಯಳನ್ನು ಕರೆದುಕೊಂಡು ವಿವಾಹಮಂಟಪವನ್ನು ಪ್ರವೇಶಿಸುವನು. ಎಂಬ ವಾರ್ತೆಯನ್ನು ತಿಳಿದು ಆ ಉತ್ಸವವನ್ನು ನೋಡಲು, ಕೂಡಿದಮಟ್ಟಿಗೆ ಜಾಗ್ರತೆಯಲ್ಲಿ ನೀರನ್ನುತೆಗೆದುಕೊಂಡು ಹೋಗಿ ಮನೆಯ ಕೆಲಸವನ್ನು ಮಾಡಿಕೊಂಡು ತಂದೆಯನ್ನು ಪರಿಚರಿಸಿ, ಆ ಮಾರ್ಗವಾಗಿ ಬರುವ ದೊರೆಯನ್ನೂ ಆತನ ಪತ್ನಿಯನ್ನೂ ನೋಡಲು ಅನುಕೂಲವಾಗುವಂತೆ ಮಾಡಿಕೊಳ್ಳಬೇಕೆಂದು ಜಾಗ್ರತೆಯಲ್ಲಿ ಪಾತ್ರೆಯನ್ನು ತೊಳೆ

ಸುವುದಾದರೆ ನಾನು ಜಾಗ್ರತೆಯಲ್ಲಯೆ ನಿಮ್ಮ ಮನಸ್ಸನ್ನು ಸಂತೋಷಪಡಿಸುವೆನು ಎಂದನು. ಬಂದವರೆಲ್ಲರೂ ಜಯಘೋಷವನ್ನು ಮಾಡಿದರು. ರಾಜನು ಅವರುಗಳಿಗೆ ಅಪ್ಪಣೆಯನ್ನು ಕೊಟ್ಟು ವಿವಾಹಮುಹೂರ್ತವನ್ನು ನಿಶ್ಚೈಸಿ ಇಂಥಾದಿವಸ ರಾಜನಿಗೆ ಲಗ್ನ ಬೆಳೆಯುವದೆಂದು ಪಟ್ಟಣದಲ್ಲಿ ಸಾರಿಸಿದನು. ಪಟ್ಟಣವೆಲ್ಲಾ ಬಹು ಸಂಭ್ರಮದಿಂದ ಅಲಂಕರಿಸಲ್ಪಟ್ಟಿತು. ಎಲ್ಲೆಲ್ಲಿಯೂ ಚಪ್ಪರ, ಎಲ್ಲಾಕಡೆಯೂ ತೋರಣ; ಯಾವಬೀದಿಯಲ್ಲಿಯೂ ಮಂಗಳದ್ರವ್ಯ, ಮಂಗಳಧ್ವನಿ ತುಂಬಿದವು. ಸೆಲ್ಯೂಸಸ್ ರಾಜನಿಗೆ ವಿವಾಹವು ಬೆಳೆಯುವುದೆಂದು ನಾನಾದೇಶದ ರಾಜರೂ, ರಾಜಪುತ್ರರೂ, ರಾಯಭಾರಿಗಳೂ, ರತ್ನವ್ಯಾಪಾರಿಗಳೂ, ಸಂಗೀತ ನಾಟ್ಯ ವಿದ್ಯಾಕುಶಲರೂ ಆ ಪಟ್ಟಣವನ್ನು ಅಲಂಕರಿಸಿದರು.

ನಾಲ್ಟರನ ಅರಮನೆಗೆ ಸ್ವಲ್ಪ ದೂರದಲ್ಲಿಯೇ ಒಂದು ಹಳ್ಳಿಯು ಇತ್ತು. ಆ ಹಳ್ಳಿಯಲ್ಲಿ ಕೇವಲ ಬಡವರಾದ, ಬಡವರಲ್ಲಿಯೂ ಅತ್ಯಂತ ಬಡವರಾದ ಜನರು ನಾಸವಾಗಿದ್ದರು. ಅವರಲ್ಲಿ ಅಹನ್ಯಹನಿ ಕಾಲಕ್ಷೇಪದಿಂದ ಹೊಟ್ಟೆಯನ್ನು ಹೊರೆಯುತಿದ್ದ ಜಾನಿಕೂಲ ಎಂಬ ವೃದ್ಧನೊಬ್ಬನಿದ್ದನು. ಈತನಿಗೆ ಗ್ರಿಸೆಲ್ಡಿಸ್ ಎಂಬ ಒಬ್ಬ ಮಗಳಿದ್ದಳು. ಈಕೆಯು ರೂಪದಲ್ಲಿ ಅತ್ಯಂತ ಸುಂದರಳು. ಗುಣದಲ್ಲಿ ಶ್ರೇಷ್ಠಳು. ಸೌಂದರ್ಯಕ್ಕೆ ತಕ್ಕ ಗುಣವೂ, ಗುಣಕ್ಕೆತಕ್ಕ ಸೌಂದರ್ಯವೂ ಇವಳಲ್ಲಿ ಶೋಭಾಯಮಾನವಾಗಿತ್ತು. ಇವಳ ಅಪೂರ್ವವಾದ ಸುಂದರಾಕೃತಿಯಲ್ಲಿ ಗಾಂಭೀರ್ಯವೂ ವಿಶ್ವಾಸವೂ, ಧೈರ್ಯವೂ ಸತ್ಯಸಂಧತೆಯೂ, ವಿಧೇಯತೆಯೂ, ಕೌಶಲವೂ ಆಶ್ರಯವನ್ನುಪಡೆದು ವೃದ್ಧಿಗೊಳುತಿತ್ತು. ಕೇವಲ ವೃದ್ಧನಾದ, ಅತ್ಯಂತ ರಿಕ್ತನಾದ ತಂದೆಯಲ್ಲಿ ಈಕೆಗೆ ವಿಶೇಷ ವಿಶ್ವಾಸವೂ ಗೌರವವವೂ ಇದ್ದುದರಿಂದ ಕುರಿಯನ್ನು ಕಾಯಿದು, ತುಬಟವನ್ನು ಹೆಣೆದು ಬಂದ ಹಣದಲ್ಲಿ ತಂದೆಯನ್ನು ಅತ್ಯಂತ ಆದರದಿಂದ ಉಪಚರಿಸುತ್ತಾ ಪೋಷಿಸುತಿದ್ದಳು. ಈಕೆಯನ್ನೂ, ಇವಳ ಸ್ವಭಾವವನ್ನೂ, ರಾಜನು ಬೇಟೆಗೆ ಇದೇ ದಾರಿಯಲ್ಲಿ ಹೋಗುತಿದ್ದುದರಿಂದ ಪ್ರತಿದಿವಸವೂ ನೋಡುತಿದ್ದನು. ಪ್ರಜೆಗಳು ವಿವಾಹ ಮಾಡಿಕೊಳ್ಳಬೇಕೆಂದು ಇವನನ್ನು ವಿಶೇಷವಾಗಿ ಪ್ರಾರ್ಥಿಸಲು, ನಾನು ವಿವಾಹವನ್ನು ಮಾಡಿಕೊಳ್ಳಬೇಕಾದರೆ ಸುಂದರಿಯಾಗಿಯೂ, ಗುಣಶಾಲಿಯಾಗಿಯೂ, ಪಿತೃಸೇವಾನಿರತಳಾಗಿಯೂ, ಸತ್ಯಸಂಧಳಾಗಿಯೂ, ಇರುವ ಈಕೆಯನ್ನು ಬಿಟ್ಟು ಮತ್ತಾರನ್ನೂ ಮದುವೆಮಾಡಿಕೊಳ್ಳುವುದಿಲ್ಲವೆಂದು ಮನಸ್ಸಿನಲ್ಲಿ ನಿಶ್ಚಯಿಸಿ

ವಿದ್ಯಾದಾಯಿನಿ

ಭಾಗ ೭.] ಫಿಬ್ರವರಿ ೧೯೧೯ [ಸಂಚಿಕೆ ೨

ಎಡಿಟರವರ ನೋಟ್ಸ್.

ದೇಶಭಾಷಾಭಿವೃದ್ಧಿಯು ಅತ್ಯವಶ್ಯಕವೆಂತಲೂ, ತನ್ಮೂಲಕ ಇತರ ಭಾಷಾತತ್ವಗಳನ್ನು ಬೋಧಿಸುವುದು ಸುಲಭವೆಂತಲೂ, ಬಾಲಕರಿಗೆ, ಅನ್ಯಭಾಷಾಪರಿಚಯವನ್ನು ಮಾಡಿಸುವುದಕ್ಕೆ ಮುಂದಾಗಿ ದೇಶಭಾಷೆಯನ್ನು ಚೆನ್ನಾಗಿ ಕಲಿಸಿರಬೇಕೆಂತಲೂ, ಅನೇಕರು ಅಭಿಪ್ರಾಯಪಡುವರು. ಈಚೆಗೆ ಸ್ವಲ್ಪದಿವಸಗಳ ಕೆಳಗೆ, ಶ್ರೀಮನ್ಮಹಾರಾಜರವರ 'ಟ್ಯೂಟರ್' ಮೇಸ್ಟರ್ ಎಸ್. ಎಂ. ಫ್ರೇಜರ್ ಸಾಹೇಬರವರು ವೆಸ್ಲ್ಯನ್ ಮಿಷನ್ ಕನ್ನಡ ಪಾಠಶಾಲಾ ನವೀನ ಗೃಹಪ್ರವೇಶವಾದಿದ ಸಂದರ್ಭದಲ್ಲಿ ಮೇಲೆಹೇಳಿದ ಅಭಿಪ್ರಾಯವನ್ನೇ ಚೆನ್ನಾಗಿ ವ್ಯಕ್ತಪಡಿಸಿದರು. ಮುಖ್ಯವಾಗಿ ಕೈಗಾರಿಕೆ ಕೆಲಸಗಾರರು ದೇಶಭಾಷೆಯನ್ನು ಕಲಿಯುವುದು ಅವಶ್ಯಕವು; ಅನ್ಯಭಾಷೆಯಲ್ಲಿರುವ ವಿಶೇಷ ಸಂಗತಿಗಳನ್ನು ಬೋಧಿಸಪ್ರದಕ್ಕೆ ದೇಶಭಾಷೆಯು ಸಾಲದಿರಬಹುದು; ಆದರೆ ಸಾಮಾನ್ಯವಿಷಯಗಳನ್ನು ದೇಶಭಾಷಾ ಮೂಲಕ ಚೆನ್ನಾಗಿ ಬೋಧಿಸಬಹುದು. ಈ ವಿಷಯವನ್ನು ಅರಿಯದ ಅನೇಕರು ಮೈಸೂರು ದೇಶಭಾಷೆಯಾದ ಕನ್ನಡವನ್ನು ಆದಿಯಲ್ಲಿಯೇ ಮಕ್ಕಳಿಗೆ ಬೋಧಿಸದೆ-ಇಂಗ್ಲಿಷನ್ನು ಬೋಧಿಸಲಾರಂಭಿಸುವರು. ಈ ಭಾಷೆಯನ್ನು ಬೋಧಿಸಲಾರಂಭಿಸಿದಾಗ ಅನೇಕ ವಿಷಯಗಳನ್ನು ತನ್ಮೂಲಕ ಬೋಧಿಸಲುಪಕ್ರಮಿಸುವುದರಿಂದ ಇವುಗಳನ್ನು ಗ್ರಹಿಸಲು ಸಾಮರ್ಥ್ಯವಿಲ್ಲದೆ ಬಾಲಕರು ಅನೇಕರು ಕ್ಲೇಶಕ್ಕೊಳಗಾಗಿ ಮುಂಕಾಗುವರು. ಹಾಗೆಯೆ ಕಷ್ಟದಿಂದ ವ್ಯಾಸಂಗ ಮಾಡಿದ ಕೆಲವ್ರಮಂದಿ ಸ್ವಲ್ಪವಿಟ್ಟಿಗೆ ಓದಿ ನಿಲ್ಲುವರು. ಇವರುಗಳಿಗೆ ಯಾವಭಾಷೆಯೂ ಚೆನ್ನಾಗಿ ಬರದೆ, ಇರುವಕಾರಣ ಹ್ಯಾಗಾದರೂ ಜೀವನೋಪಾಯವನ್ನು ಕಲ್ಪಿಸಿಕೊಳ್ಳಬೇಕೆಂಬ ಆತುರದಿಂದ ಯಾವದಾದರೂ

ಮ ನೀರನ್ನು ಹೊತ್ತುಕೊಂಡು ಹೋಗುತಿದ್ದಳು. ಆ ವೇಳೆಗೆಸರಿಯಾಗಿ ರಾಜನು ತನ್ನ ಪರಿವಾರಸಮೇತ, ಗೀತ, ವಾದ್ಯಾದಿನರ್ತನಗಳಿಂದಕೂಡಿ, ಇವಳು ವಾಸವಾ ಹುತಿರುವ ಗುಡಸಲಿನ ಬಾಗಲ ಬಳಿಗೆ ಬಂದುನಿಂತು, ಅತ್ಯಾಶ್ಚರ್ಯಭರಿತರಾದ ಪರಿವಾ ರಜನರೂ, ಆಪುರವಾಸಿಗಳೂ ನೋಡುತಿರುವ ಹಾಗೆ ನೀರನ್ನು ಹೊತ್ತುಕೊಂಡು ಬರುತಲಿದ್ದ ಗ್ರಿಸಿಲ್ಡೆಯನ್ನು 'ನಿಮ್ಮ ತಂದೆಯು ಎಲ್ಲಿ'? ಎಂದು ರಾಜನು ಕೇಳಲು ಅದಕ್ಕ ಅವಳು 'ಮಹಾಸ್ವಾಮಿ, ಅತನು ಇಲ್ಲಿ ಇದಾನೆ' ಎಂದು ನೆಯಭಯದಿಂದ ಬೆನ್ನವಿಸಿ ಒಳಗೆಹೋಗಿ ತಂದೆಯನ್ನು ಕರೆದುಕೊಂಡು ಬಂದಳು. ದೊರೆಯು ಆ ವೈದ್ಯನ ಕೈಯನ್ನು ಹಿಡಿದು ಗ್ರಿಸಿಲ್ಡೆಯನ್ನು ತನಗೆ ಮದುವೆ ಮಾಡಿಕೊಡಬೇಕೆಂದು ನಾರ್ಥಿಸಿದನು. ವೃದ್ಧನಾದ ಚಾನಕಾಲನಿಗ ಆಶ್ಚರ್ಯ—ಅತಿಭಯದಿಂದ ಮಾತನಾ ಡಲಾಗದಂತೆ ಗಂಟಲುಶರೆಯು ಬಿಕ್ಕಿಬೀರಲು, ಹಾ್ಯಗೋ ಸ್ವಾಧೀನಪಡಿಸಿಕೊಂಡು ಮಹಾರಾಜನ ನಿನ್ನ ಅಭಿಮತವೇ ನನ್ನಮತವು ಎಂದನು. ತರುವಾಯ ಗ್ರಿಸಿ ರ್ಡಾ ಮನಸ್ಸನ್ನು ತಿಳಿಯಬೇಕೆಂದು ಗ್ರಿಸಿಲ್ಡೆಯು ಇದ್ದ ಒಂದು ಸಣ್ಣ ಕೊಠಡಿಯ ಒಳಕ್ಕೆ ರಾಜನೂ ಗ್ರಿಸಿಲ್ಡೆಯ ತಂದೆಯೂ ಹೋದರು. ಅಲ್ಲಿ ರಾಜನು ತನ್ನ ಪ್ರಿಯಳನ್ನು ನೋಡಿ ಮನಸ್ಸಿನಲ್ಲ ಸಂತೋಷಗೊಂಡು—'ಗ್ರಿಸಿಲ್ಡೆ! ನೀನು ನನ್ನೆನ್ನು ವಂಸುವುದು ನಿನ್ನ ತಂದಗೂ ನನಗೂ ಸಮ್ಮತವಾದದ್ದು. ಅದಕ್ಕೆ ನಿನ ಗೂ ಸಮ್ಮತವೆ? ನೀನೂ ಸಮ್ಮತಿಸುವದಾದರೆ ನನ್ನ ಮನಸ್ಸಿನಂತೆ ಸದಾಕಾಲವೂ, ಪೂರ್ವಅಭ್ಯಂತರವೂ, ಜರ್ಜರಿಯೂ ಇಲ್ಲದೆ ವಿಧೇಯಳಾಗಿ ನಡೆಯಲು ಮಾತುಕೊಡು ವಿಯಾ?' ಎಂದು ರಾಜನು ಕೇಳಲು—'ರಾಜಾಧಿರಾಜನೆ! ನಿನ್ನ ವರಿಸುವಷ್ಟು ಪುಣ್ಯ ವು ನನಗಿಲ್ಲ. ನಿನ್ನ ಸಲಹವು ನನ್ನ ಯೋಗ್ಯತೆಗ ಅತಿಶಯವಾದುದು. ಆದರೆ ನಿನ್ನನ್ನು ನಾನುವರಿಸಬೇಕಾದುದು ನಿಮಗೂ ನನ್ನತಂದೆಗೂ ಸಮ್ಮತವಾದುದಾದರೆ ನಾನೂ ಅದಕ್ಕೆ ಸಮ್ಮತಿಸುವೆನು. ಕಾಯೇನ ವಾಚಾ ಮನಸಾ ನಿಮ್ಮ ಆಜ್ಞೆಗೆ ವಿರೋಧವಾಗಿ ಎಂದಿಗೂ ನಡೆಯತಕ್ಕಳಲ್ಲವೆಂದು ವಾಗ್ದಾನವನ್ನು ಮಾಡುವೆನು' ಎನಲು, ರಾಜನು—'ಇಮೆ್ಟ ಸಾಕು' ನನ್ನಪ್ರಿಯೆ, ಎಂದು ಅವಳ ಕೈಯನ್ನು ಹಿಡಿದು ಹೊರಕ್ಕೆ ಕರೆದುಕೊಂಡು ಬಂದು ಆಶ್ಚರ್ಯಗೊಂಡು ನಿಂತಿರುವ ತನ್ನ ಪ್ರಜೆ ಗಳಿಗೆ—'ನನ್ನಬಳಿ ನಿಂತಿರುವ ಈ ಕನ್ಯಾರತ್ನವೇ ನನ್ನ ಧರ್ಮಪತ್ನಿ. ನನ್ನನ್ನು ಪ್ರೀತಿ ಸುವ ಪ್ರಜೆಗಳೆಲ್ಲರೂ ಈಕೆಯನ್ನು ಪ್ರೀತಿಸಿ, ಪುರಸ್ಕರಿಸಿ. ನಾನು ಇನ್ನೇನೂ ಹೆಚ್ಚಾ ಗಿ ಹೇಳಬೇಕಾಗಿಲ್ಲ.' ಎಂದು ಸಂತೋಷಭರಿತನಾಗಿ ಹೇಳಿದನು. (ಸಶೇಷ;)

ಎಂ. ಎಂ ರಿಡ್ಸ್‌ಡೇಲ್‌ರವರು ' ಮಹಾರಾಜ್ಞೀ ಬಾಲಿಕಾಪಾಠಶಾಲಾ ಪತ್ರಿಕೆ ' * ಎಂಬ ಹೆಸರಿನಿಂದ ಇಂಗ್ಲಿಷ್‌ನಲ್ಲಿಯೂ ಮತ್ತು ಕನ್ನಡದಲ್ಲಿಯೂ ಒಂದು ಮಾಸಪತ್ರಿಕೆಯನ್ನು ಪ್ರಕಟಿಸಲು ಆರಂಭಿಸಿರುವರು ಇದರ ಮೊದಲನೆಯ ಸಂಚಿಕೆಯು ಜನವರಿ ತಿಂಗಳಿಲ್ಲಿ ಮುದ್ರಿತವಾಯಿತು. ' ನಮ್ಮಲ್ಲಿಗೆ ಕಳುಹಿಸಿದ ಆ ಸಂಚಿಕೆಯನ್ನು ಆದರದಿಂದ ನೋಡಿದೆವು ಗೃಹಕೃತ್ಯ, ಜನಸಾಂಸರ್ಗಿಕವಿಷಯ, ವಿದ್ಯಾವಿಷಯ ಶಾಸ್ತ್ರವಿಷಯಗಳನ್ನು ತಕ್ಕಮಟ್ಟಿಗೆ ಸುಲಭರೂಪವಾಗಿಯೂ, ಲೋಕವ್ಯವಹಾರರೂಪವಾಗಿಯೂ ಸಾಮಾನ್ಯಜನರಿಗೆ ತಿಳಿಸಬೇಕೆಂಬುದು ಪತ್ರಿಕಾಕರ್ತರ ಮುಖ್ಯೋದ್ದೇಶವು. ಪ್ರತಿ ಸಂಚಿಕೆಯಲ್ಲಿಯೂ ಬುದ್ಧಿಗಲಿಸುವ ಸಣ್ಣ ಸಣ್ಣ ಹಾಡುಗಳನ್ನೂ ಕಥೆಗಳನ್ನೂ ಮಕ್ಕಳಿಗಾಗಿಯೇ ಬರೆಯಲು ಒಂದೆರೆಡು ಪುಟಗಳನ್ನು ವಿನಿಯೋಗಿಸಿಕೊಂಡು, ಪಂಡಿತರಿಗೋಸ್ಕರ ಪತ್ರಿಕೆಯಲ್ಲೊಂದುಭಾಗವನ್ನು, ಕೇವಲ ವಿದ್ಯಾರ್ಥಿನಿಗಳಿಗೋಸ್ಕರನೇ ಕೆಲವು ಪುಟಗಳನ್ನು ಬಿಡುವೆವೆಂದು ಪತ್ರಿಕಾ ಸಂಪಾದಕರು ತಿಳಿಸುವರು. ಈ ವಿಧವಾದ ಏರ್ಪಾಡುಳ್ಳ ಈ ಪತ್ರಿಕೆಯು ಉಪಯುಕ್ತವಾಗಿರುವುದೆಂದು ನಾವು ನಂಬುವೆವು ಇದು ಚ್ಯುತಿ ಇಲ್ಲದೆ ಬಹುಕಾಲ ನಡೆಯಬೇಕೆಂದು ನಾವು ಕೋರುವೆವು. *

ಊರ್ಮಿಳೆ.

ಸ್ತುತಂಸ್ತುವನ್ನಿಕವಯೊ ನಸ್ವತೋಗುಣದರ್ಶಿನಃ ।
ಕೀಟಃಕಶ್ಚಿದಳೆನಾರ್ಮ ಕಿಯತೀತತ್ರವರ್ಣನಾ ॥

ಎಂಬಂತೆ ಪ್ರಪಂಚದಲ್ಲಿ ವರ್ಣಿಸಿದ್ದನ್ನೇ ವರ್ಣಿಸುತ ಹೊಗಳಿದ್ದನ್ನೇ ಹೊಗಳುತ, ನಾನಾವಿಧಗಳಾದ ಅತಿಶಯೋಕ್ತಿಗಳನ್ನು ಸೇರಿಸಿ, ಉತ್ಪ್ರೇಕ್ಷೆ, ಉಲ್ಲೇಖಗಳಿಂದ ಗ್ರಂಥವನ್ನು ತುಂಬಿಸಿ, ಕವಿಸಾರ್ವಭೌಮರೆಂಬ ಬಿರುದನ್ನು ಪಡೆಯುವುದೇ

---

* ಚಂದಾ—(ಅಂಚೇಹಣವಿಲ್ಲದೆ ಸಹಿತ) ವರ್ಷಕ್ಕೆ ೦—೪—೦
ಪ್ರತಿ ಸಂಚಿಕೆಗೂ ೦—೪—೦

ಒಂದು ಕೆಲಸವನ್ನು ಮಾಡುವುದಕ್ಕೆ ಇವರು ಒಪ್ಪಿ, ಇಷ್ಟಾನುಸಾರವಾದ ಕೆಲಸವಲ್ಲವಾದುದರಿಂದ ಅದರಲ್ಲಿ ಅಭಿರುಚಿ ತಪ್ಪಿ, ಮುಂದೆ ನೆರಳುವರು. ಇಂಥಾ ಸಂಕಟಕ್ಕೆ ಗುರಿಯಾಗದೆ ಜನರು ದೇಶಭಾಷೆಯನ್ನು ಚೆನ್ನಾಗಿ ಅಭ್ಯಾಸಿಸಿ, ತಮಗೆ ಇಷ್ಟಬಂದ ಕ್ಷೇಗಾರಿಕೆ ಕೆಲಸಗಳನ್ನು ಅಭ್ಯಾಸಮಾಡೋಣದರಿಂದ ತಮಗೂ, ತಮ್ಮದೇಶಕ್ಕೂ ಸೌಖ್ಯವುಂಟಾಗುವುದು.

***

ಬಾಲಿಕಾಪಾಠಶಾಲೆಗೆ ಚಿಕ್ಕ ಚಿಕ್ಕ ಹುಡುಗರನ್ನು ಸೇರಿಸಿ, ಹೆಣ್ಣುಮಕ್ಕಳೊಡನೆ ವಿದ್ಯೆಯನ್ನು ಕಲಿಸುವುದು ಉತ್ತಮವೆಂದು ಕೆಲವರು ಅಭಿಪ್ರಾಯಪಡುವರು. ಬಾಲಿಕಾಪಾಠಶಾಲೆಗೆ ಚಿಕ್ಕಚಿಕ್ಕ ಹುಡುಗರನ್ನು ಕಳುಹಿಸುವುದರಿಂದ ಹುಡುಗರ ನಡೆನುಡಿಯು ಶ್ಲಾಘನೀಯವಾಗಿ ಪರಿಣಮಿಸುವುದು. ಈಗ ಬಾಲಿಕಾಪಾಠಶಾಲೆಗಳೇ ಹೇರಳವಾಗಿಲ್ಲ. ಬಾಲಿಕಾಪಾಠಶಾಲೆ ಇದ್ದಕಡೆ ಚಿಕ್ಕ ಚಿಕ್ಕ ಹುಡುಗರನ್ನು ಸೇರಿಸುವ ವಾಡಿಕೆಯು ಇನ್ನೂ ಬಂದಿಲ್ಲ. ಆದರೆ ಬಾಲಕರ ಪಾಠಶಾಲೆಗೆ ಹೆಣ್ಣುಮಕ್ಕಳನ್ನು ಕಳುಹಿಸುವ ಪದ್ಧತಿಯು ಮಾತ್ರ ಬೀಳುತಲಿದೆ. ಹೀಗೆ ಬಾಲಕರ ಪಾಠಶಾಲೆಗೆ ಹೋಗತಕ್ಕ ಹೆಣ್ಣುಮಕ್ಕಳು ಸ್ವಲ್ಪಮಂದಿಯಾದರೂ, ಬಹಳ ದಿವಸ ಒಟ್ಟಿಗೆ ಬಾಲಕರೊಡನೆ ಓದಲು ಅನುಕೂಲವಿಲ್ಲದಂತಿರುವುದು. ಪಾಠಶಾಲೆಗೆ ಸೇರಿದ ಎರಡು ಮೂರು ವರ್ಷದಲ್ಲಿಯೇ ಅಂದರೆ ಹೆಣ್ಣುಮಕ್ಕಳಿಗೆ ಏಳು-ಎಂಟು ವರ್ಷವಾಗುವಷ್ಟರಲ್ಲಿಯೇ ಅವರನ್ನು ಬಾಲಕರೊಡನೆ ಓದಲೀಸದೆ ತಪ್ಪಿಸುವರು. ಇದರಿಂದ ಬಾಲಿಕಾಪಾಠಶಾಲೆಯೇನೋ ಅವಶ್ಯಕತಾದುದು. ಬಾಲಿಕಾಪಾಠಶಾಲೆಯು ಮಕ್ಕಳ ತರಗತಿಗೆ ಮಾತ್ರ (Infant classes) ಚಿಕ್ಕ ಚಿಕ್ಕ ಗಂಡುಮಕ್ಕಳನ್ನು ಸೇರಿಸುವುದರಲ್ಲಿ ಪ್ರಯೋಜನ ಉಂಟಾದೀತು.

***

ಪತಪನಾಡಿನ ರಾಜಾರಾದ ರಾಮನವರ್ಮರೆಂಬುವರು ತಿರುವಾಂದ್ರಂ ಪಾಠಶಾಲೆಯ ಬಾಲಕರೆಲ್ಲರಿಗೂ (೧) ದೇವರಲ್ಲಿ ಭೀತಿ, (೨) ರಾಜರಲ್ಲಿ ಪ್ರೀತಿ, (೩) ಉಪಾಧ್ಯಾಯರಲ್ಲಿ ಭಕ್ತಿ, (೪) ಹಿರೇರಲ್ಲಿ ವಿಶ್ವಾಸವಿರಬೇಕೆಂಬ ಬುದ್ಧಿವಾದವನ್ನು ಹೇಳಿದರು.

***

ಮಹಾರಾಜ್ಞೀ ಬಾಲಿಕಾ ಪಾಠಶಾಲಾ ಸೂಪರ್ಟಿಂಡೆಂಟರಾದ ಎಲ್ಲಾ.

ಅನುಸರಿಸಿ ಸೀತೆಯೂ ಹೊರಟಳು. ಊರ್ಮಿಳೆಯಾದರೋ ತಾನೂ ಹೊರಡಬೇಕೆಂದು ಪ್ರಯತ್ನಪಟ್ಟಳು; ಆದರೆ ಲಕ್ಷ್ಮಣನು 'ನೀನು ಬರಕೂಡದು; ಇಲ್ಲಿಯೇ ಇದ್ದುಕೊಂಡು ಅತ್ತೆ ಮಾವಂದಿರ ಶುಶ್ರೂಷೆಯನ್ನು ಮಾಡಿಕೊಂಡಿರಬೇಕು' ಎಂದು ಆಜ್ಞಾಪಿಸಿದುದರಿಂದ ಪತಿವಾಕ್ಯವನ್ನುಲ್ಲಂಘಿಸಿ ವ್ಯಸನವನ್ನುಂಟುಮಾಡುವುದಕ್ಕಿಂತಲೂ ಅವನ ಅಪ್ಪಣೆಯಂತೆ ನಡೆಯುವುದೇ ಮುಖ್ಯಕರ್ತವ್ಯವೆಂದೆಣಿಸಿ ಮನೆಯಲ್ಲಿಯೇ ನಿಂತು ಗುರುಶುಶ್ರೂಷೆಯಲ್ಲಿ ನಿರತೆಯಾದಳು.

ಈ ಸಮಯದಲ್ಲಿ ಸೀತೆಯ ಗುಣಕ್ಕೂ ಊರ್ಮಿಳೆಯ ಗುಣಕ್ಕೂ ಇರುವ ವ್ಯತ್ಯಾಸವನ್ನು ವಿಚಾರಮಾಡುವುದು ಅಪ್ರಕೃತವಾಗಲಾರದು. ಪ್ರಪಂಚದಲ್ಲಿ ಉತ್ತಮಸ್ಥಿತಿಯುಳ್ಳಿರತಕ್ಕವರನ್ನು ಅನುಸರಿಸುವುದು ಅಷ್ಟು ಶ್ಲಾಘನೀಯವಲ್ಲ ಹೀನದಶೆಯಲ್ಲಿರುವವರನ್ನು ಅನುಸರಿಸುವುದು ಕೇವಲ ಶ್ಲಾಘನೀಯವಾಗುವುದು. ಆದುದರಿಂದ ಪ್ರಪಂಚಕ್ಕೆಲ್ಲಾ ಮೇಲಾಗಿದ್ದ ರಾಮನನ್ನು ಊರಿಗೂರೇ ಅನುಸರಿಸಿ ಹೊರಟಕಾಲದಲ್ಲಿ ಕೈಹಿಡಿದ ಹೆಂಡತಿಯಾದ ಸೀತೆಯು ಅನುಸರಿಸಿ ಕಾಡಿಗೆ ಹೋದುದು ಏನಾಶ್ಚರ್ಯವು? ಊರ್ಮಿಳೆಯಾದರೋ ತನ್ನ ಪತಿಯು ರಾಮನ ದಾಸಾನುದಾಸನಾಗಿರುವ ಕಾಲದಲ್ಲಿಯೂ ಅವನ ವಾಕ್ಯವನ್ನು ಮೀರಿನಡೆಯದಿದ್ದುದು ಅತ್ಯಂತ ಆಶ್ಚರ್ಯವೇಸರಿ. ಸೀತೆಯು ಅರಣ್ಯಕ್ಕೆ ಹೊರಡುವುದಕ್ಕೆ ಅನೇಕ ಕಾರಣಗಳುಂಟು. ತಾನು ಊರಲ್ಲಿಯೇ ನಿಂತರೆ ಅತ್ತೆ ಮಾವಂದಿರ ಸೇವೆಯನ್ನು ಮಾಡಬೇಕಾಗುತ್ತದೆಂದೋ, ಮುಂದೆ ಭರತನು ಧೊರೆಯಾದರೆ ಆಗ ಅವನ ಅಧಿಕಾರಕ್ಕೊಳಗಾಗಬೇಕಾಗುತ್ತದೆಂದೊ, ಅರಣ್ಯವನ್ನು ನೋಡಬೇಕೆಂದೋ, ಯಾವ್ವುದೋ ಕಾರಣದಿಂದ ಅವಳು ಅರಣ್ಯಕ್ಕೆ ಹೊರಟಿರಬಹುದು. ಊರ್ಮಿಳೆಗೂ ಈ ಕಾರಣಗಳೆಲ್ಲವೂ ಸಮಾನವಾಗಿದ್ದರೂ ಪತಿವಾಕ್ಯವನ್ನು ವಿಚಾರಲಾರದೆ ಗುರುಸೇವಾನಿರತಳಾದಳು ಸಾಮಾನ್ಯವಾಗಿ ಸ್ತ್ರೀಯರಿಗೆ ಪತಿಯು ಜೊತೆಯಲ್ಲಿದ್ದು ಕಷ್ಟವನ್ನನುಭವಿಸುವುದಕ್ಕಿಂತಲೂ ಪತಿಯನ್ನಗಲಿ ನಾನಾ ಸೌಖ್ಯಗಳನ್ನು ಅನುಭವಿಸಿದರೂ ಅದು ಎಂದಿಗೂ ಸುಖಕರವಾಗಿರುವುದಿಲ್ಲ. ಇದನ್ನು ತಿಳಿದೇ ಸೀತೆಯು ಗಂಡನೊಡನೆ ಅರಣ್ಯವನ್ನು ಸೇರಿ ಸುಖವಾಗಿದ್ದಳು. ಊರ್ಮಿಳೆಯೂ ಇದನ್ನು ತಿಳಿದಿದ್ದರೂ ಪತಿವಾಕ್ಯಪರಿಪಾಲನೆಕ್ಕಾಗಿ ಪತಿವಿಯೋಗಖೇದವನ್ನೂ ನಾನಾ ಕಷ್ಟವನ್ನೂ ಅನುಭವಿಸಿಕೊಂಡು ಮನೆಯಲ್ಲಿದ್ದಳು. ಸೀತೆಯು ರಾವಣನ ಮಾತನ್ನು ಕೇಳಿ ಮನೆಯಲ್ಲಿಯೇ ನಿಂತಿದ್ದರೆ, ರಾವಣನಿಗೆ ರಾಕ್ಷಸರ ಬಾಧೆ

ಮುಖ್ಯಕರ್ತವ್ಯವೆಂದೆಣಿಸಿ, ಗ್ರಂಥಗಳನ್ನು ರಚಿಸತೊಡಗಿರುವ ಮಹನೀಯರು ಪದಾರ್ಥಗಳಲ್ಲಿರುವ ಗುಣದೋಷಗಳನ್ನು ತಾವು ನಿರ್ಪೇಕ್ಷಪಾತವಾಗಿ ಪರೀಕ್ಷಿಸುವುದು ಅಪೂರ್ವವು. ಹೀಗಿರುವಾಗ ಅಂತವರು ಬರೆದ ಗ್ರಂಥಗಳಲ್ಲಿ ತಮಗೆ ಯಾವವಸ್ತುವು ಪ್ರಕೃತವರ್ಣನೀಯವೋ ಅದನ್ನು ವಿಸ್ತರವಾರಿ ವರ್ಣಿಸಿ, ಉಳಿದುವುಗಳನ್ನು ಅಲಕ್ಷ್ಯತೆಯಿಂದ ಬಿಟ್ಟಿರುವುದೇನಾಶ್ಚರ್ಯವು? ಹೀಗಿರುವ ಗ್ರಂಥಗಳನ್ನೇ ಓದುತ್ತಿರುವವರು ಅಲ್ಲಿ ವಿಶೇಷ ವರ್ಣಿತವಾದ ವಸ್ತುವನ್ನೇ ಲೋಕೋತ್ತರವೆಂದು ಭಾವಿಸುವುದೂ ಸಹಜವೇ ಅಲ್ಲವೆ!

ಪ್ರಪಂಚಸ್ಥಿತಿಯೇ ಈರೀತಿಯಾಗಿದ್ದಾಗ್ಯೂ ತಮ್ಮ ತಮ್ಮ ಬುದ್ಧಿಯನ್ನು ಜಾಣ್ಮೆಗಿ ಉಪಯೋಗಿಸಿ, ಪದಾರ್ಥಗಳ ಗುಣದೋಷಗಳನ್ನು ತಿಳಿದು, ಯಾವುದುತ್ತಮವೆಂದು ನಿರ್ಧರಿಸುವುದೇ ವಿವೇಕಿಗಳ ಕರ್ತವ್ಯವು. ಹೀಗೆ ಪ್ರಕೃತ ವಿಚಾರಾಸ್ಪದವಾದ ಪದಾರ್ಥವು ಊರ್ಮಿಳೆ.

ಈ ಮಹನೀಯಳಾದ ಪತಿವ್ರತಾಶಿರೋಮಣಿಯು ಪ್ರಸಿದ್ಧನಾದ ಜನಕ ಚಕ್ರವರ್ತಿಯ ಔರಸಪುತ್ರಿಯು. ಜನಕರಾಯನು ಇವಳನ್ನು ಪಡೆಯುವುದಕ್ಕಾಗಿ ದೊಡ್ಡ ಕ್ರತುವನ್ನೇ ಮಾಡಬೇಕಾಯಿತು. ಅವನು ಮಾಡಿದ ಮಹಾ ಯಜ್ಞಕ್ಕೆ ಫಲರೂಪವಾಗಿ ಈ ಪುತ್ರಿಯು ಅವನ ಪತ್ನಿಯಲ್ಲಿ ಜನಿಸಿದಳು. ಸೀತೆಯಾದರೋ ಅವನು ಯಜ್ಞಕ್ಕಾಗಿ ಭೂಮಿಯನ್ನು ಶೋಧಿಸುವಾಗ ಭೂಮಿಯಲ್ಲಿ ಅನಾಯಾಸವಾಗಿ ಸಿಕ್ಕಿದಳು. ಜನ್ಮ ಮೊದಲು ಮಕ್ಕಳ ಹೆಸರನ್ನೇ ಅರಿಯದ ಜನಕನಿಗೆ ಮೊದಲು ಸಿಕ್ಕಿದಕಾರಣದಿಂದ ಸೀತೆಯನ್ನು ಬಹುಪ್ರೇಮದಿಂದ ಕಾಪಾಡಿದನು. ಬಳಿಕ ಊರ್ಮಿಳೆಯು ತನ್ನ ಪತ್ನಿಯ ಗರ್ಭದಲ್ಲಿ ಜನಿಸಲು, ಅವಳನ್ನು ಸೀತೆಯ ಜತೆಯಲ್ಲಿ ಬೆಳೆಸಿದನು. ಕಾಲಕ್ರಮದಿಂದ ಊರ್ಮಿಳೆಗೆ ವಿವಾಹಕಾಲವು ಪ್ರಾಪ್ತವಾಗಲು, ದಶರಥನ ಪುತ್ರನಾದ ಲಕ್ಷ್ಮಣನಿಗೆ ಕೊಟ್ಟು ವಿವಾಹಮಾಡಿದನು. ಮದುವೆಯಾದ ಬಳಿಕ ಊರ್ಮಿಳೆಯು ಮಾವನ ಮನೆಯನ್ನು ಸೇರಿ, ಅಲ್ಲಿ ಪತಿಯೊಡನೆ ಸುಖವಾಗಿದ್ದಳು.

ಮಂಥರೆಯೆಂಬ ಪಿಶಾಚವು ಆಕ್ರಮಿಸಲು, ಕೈಕೇಯಿಯು ಶ್ರೀರಾಮನ ಪಟ್ಟಾಭಿಷೇಕಕ್ಕೆ ವಿಘ್ನಮಾಡಿದುದೂ ಅವಳ ಮನೋರಥವನ್ನು ಪೂರ್ತಿಮಾಡುವುದಕ್ಕಾಗಿ ದಶರಥನು ರಾಮನನ್ನು ಅರಣ್ಯಕ್ಕೆ ಕಳುಹಿಸಿದುದೂ ಸರಿಯಷ್ಟೆ! ಆ ಸಮಯದಲ್ಲಿ ಅಣ್ಣನನ್ನು ಹಿಂಬಾಲಿಸಿ ಲಕ್ಷ್ಮಣನೂ ಅರಣ್ಯಕ್ಕೆ ಹೊರಟನು. ಗಂಡನನ್ನು

ಡೋದರೀತಥಾ । ಪಂಚಕನ್ಯಾಃ ಸ್ಮರೇನ್ನಿತ್ಯಂ ಮಹಾಪಾತಕ ನಾಶನಂ ॥ ಎಂಬ ಶ್ಲೋಕದಲ್ಲಿ ಹೇಳಿರುವ ಸ್ತ್ರೀಯರಲ್ಲಿಯೂ ಕಳಂಕವು ಇದ್ದೇಇರುವುದಲ್ಲವೆ ! ನಮ್ಮವರು ಹೀಗೆ ಕಳಂಕಾಸ್ಪದರಾದವರನ್ನು ಬಿಟ್ಟು ಅವರ ಸ್ಥಾನದಲ್ಲಿ ಊರ್ಮಿಳೆ ಸೀತೆ, ದಮಯಂತಿ, ಚಂದ್ರಮತಿ, ಸಾವಿತ್ರಿ, ಇವರೈದುಮಂದಿಯನ್ನೂ ಸೇರಿಸಿಕೊಂಡು ಪ್ರಾತಃ ಸ್ಮರಣೆಗಾಗಿಟ್ಟುಕೊಳ್ಳುವಂತೆ ಏರ್ಪಡಿಸಿದ್ದರೆ ಯಾವಿಧವಾದ ಶಂಕೆಗೂ ಅಸ್ಪದವಿಲ್ಲದಂತೆ ಬಹುಜೆನ್ನಾಗಿರುವುದಲ್ಲವೇ ? ಅರುಂಧತಿ, ಅನಸೂಯೆ ಮುಂತಾದ ಅಸಂಖ್ಯಾತರಾದ ಪತಿವ್ರತೆಯರಿದ್ದರೂ ಅವರನ್ನು ಬಿಟ್ಟು ' ಅಹಲ್ಯಾ ದ್ರೌಪದೀ ತಾರಾ ' ಎಂಬ ಶ್ಲೋಕವನ್ನು ಯಾರೋ ಹಾಸ್ಯಕ್ಕಾಗಿ ಸೇರಿಸಿರಬಹುದು. ಅದನ್ನು ಯೋಚಿಸದೆಯೇ ಕೇವಲ ಶ್ರದ್ಧಾಳುಗಳಾದ ಕೆಲವರು ಅದನ್ನೇ ನಂಬಿ ಆಚರಣೆಯಲ್ಲಿ ತಂದಂತೆ ತೋರುತ್ತದೆ. ಈ ಅಪ್ರಕೃತವಿಚಾರ ಇಲ್ಲಿಗಿರಲಿ.

ನಮ್ಮ ಭರತಖಂಡವು ಚಿರಕಾಲದಿಂದಲೂ ಪಾತಿವ್ರತ್ಯಕ್ಕೆ ತೌರುಮನೆಯಾಗಿತ್ತು. ಎಂದಿನವರೆಗೆ ಸ್ತ್ರೀಯರು ತಮ್ಮ ಕರ್ತವ್ಯವನ್ನು ವಿಚಾರದಿರುತ್ತಾರೋ, ಅಂದಿನವರೆಗೇ ಆ ದೇಶವು ಉತ್ತಮಸ್ಥಿತಿಯಲ್ಲಿರುವುದು. ಯಾವ ದೇಶಸ್ಥಿತಿಯು ಹೇಗಾದರೂ ಇರಲಿ. ನಮ್ಮ ಭರತಖಂಡಕ್ಕಂತು ಸ್ತ್ರೀಯರ ಪಾತಿವ್ರತ್ಯವೇ ಚಿರಕಾಲದಿಂದ ಆಸ್ತಿಭಾರವಾಗಿತ್ತು. ಬರಬರುತ ಸಕಲ ವಿಷಯಗಳಲ್ಲಿಯೂ ಉಂಟಾದ ವ್ಯತ್ಯಾಸದಂತೆ ಅವರಲ್ಲಿಯೂ ಹೇಳಲಾರದಷ್ಟು ವ್ಯತ್ಯಾಸವುಂಟಾಗಿದೆ.

ನಮ್ಮ ಹಿರಿಯರಲ್ಲಿ ಕೆಲವುಕಾಲ ಸ್ತ್ರೀಯರ ವಿದ್ಯಾಭ್ಯಾಸವು ಜೆನ್ನಾಗಿ ನಡೆಯುತ್ತಿತ್ತು ; ಕೆಲವುಕಾಲ ನಿಂತುಹೋಗಿತ್ತು. ಅದು ಹೇಗಾದರೂ ಇರಲಿ. ವಿದ್ಯಾಭ್ಯಾಸಕ್ಕೆ ಮುಖ್ಯ ಪ್ರಯೋಜನವಾದ ಧರ್ಮಮಾರ್ಗಪ್ರವೃತ್ತಿಯು ಸರ್ವಕಾಲದಲ್ಲಿಯೂ ಒಂದೇರೀತಿಯಾಗಿತ್ತು. ಕೆಲವುಕಾಲದಿಂದ ಬಿಟ್ಟುಹೋಗಿದ್ದ ಸ್ತ್ರೀ ವಿದ್ಯಾಭ್ಯಾಸವು ನಮ್ಮ ಮಹಿಳೆಯರಿಗೆ ಈಗೀಗ ಅಂಕುರಿಸುತ್ತಿದೆ. ಆದರೆ ಆ ವಿದ್ಯಾಭ್ಯಾಸಕ್ಕೆ ಫಲವಾದ ಧರ್ಮಪ್ರವೃತ್ತಿಯು ಹೆಚ್ಚಿದಲ್ಲದೆ ವಿದ್ಯಾಭ್ಯಾಸವು ಜೆನ್ನಾಗಿದೆಯೆಂದು ಹೇಳಿಸಿಕೊಳ್ಳಲಾಗದು. ಅದೂಹೋಗಿ ವಿದ್ಯಾಭ್ಯಾಸವು ಹೆಚ್ಚುತಬಂದಹಾಗೆ ಅವರ ಉಚ್ಛೃಂಖಲಪ್ರವೃತ್ತಿಯೇ ಹೆಚ್ಚುತಬಂದರೆ, ಅಂತವರಿಗೆ ವಿದ್ಯಾಭ್ಯಾಸವೇ ಬೇಡವೆಂದು ಯಾರುತಾನೇ ಹೇಳಲಾರರು ?

ಪ್ರಕೃತಕಾಲದಲ್ಲಿ ನಮ್ಮ ದೇಶದ ಏಳಿಗೆಗೆ ಮುಖ್ಯಕಾರಣರಾದ ನಮ್ಮ ಅಂಗ

ಯೂ, ಸೀತಾನ್ವೇಷಣಕ್ಕಾಗಿ ಅನುಭವಿಸಿದ ಕಷ್ಟವೂ, ರಾವಣನೊಡನೆ ಅಪಾರವಾದ ಯುದ್ಧವೂ. ಇನ್ನೂ ಅನೇಕವಾದ ವ್ಯಸನಗಳೂ ಒಂದೂ ಇರುತ್ತಿರಲಿಲ್ಲ. ಇವಳನ್ನು ಕರದುಕೊಂಡುಹೋದುದರಿಂದ ನಾನಾವಿಧವಾದ ಕಷ್ಟವನ್ನು ಅನುಭವಿಸಬೇಕಾಯಿತು. ಇದಕ್ಕಾಗಿಯೇ ರಾವಣ ಸಂಹಾರನಾದನಂತರ ಅಶೋಕವನದಿಂದ ಸೀತೆಯನ್ನು ವಿಭೀಷಣನು ಕರೆತಂದೊಡನೆ ರಾಮನು ಅವಳನ್ನು ನೋಡಿ ಬೆಂಕಿಯಂತೆ ಉರಿಯುತ ಕೋಪವಾಡಿ ನಾನಾವಿಧನಾದ ಮಾತುಗಳನ್ನಾಡಿದನು. ಇಷ್ಟಾದರೂ ಇವಳನ್ನು ಅರಣ್ಯಕ್ಕೆ ಕರೆದುಕೊಂಡು ಹೋದುದರಿಂದ ಕೊನೆಗೂ ರಾಮನು ಲೋಕಾಪವಾದಕ್ಕೆ ಗುರಿಯಾಗಬೇಕಾಗಿಬಂದಿತು. ಲಕ್ಷ್ಮಣನಿಗಾದರೋ ತನ್ನ ಪತ್ನಿಯು ವಿವೇಕದಿಂದ ಸೀತೆಯಂತೆ ಮೂರ್ಖತನವನ್ನು ಮಾಡದೆ ಮನೆಯಲ್ಲಿಯೇ ನಿಂತುದುದರಿಂದ ಯಾವತೊಂದರೆಯೂ ಇಲ್ಲದಂತಾಯಿತು. ಹೀಗೆ ಸೀತೆ ಊರ್ಮಿಳೆ ಇವರಿಬ್ಬರ ಗುಣಗಳನ್ನೂ ಪತಿಭಕ್ತಿಯನ್ನೂ ನಿಷ್ಪಕ್ಷಪಾತನಾಗಿ ಚೆನ್ನಾಗಿ ಪರಿಶೀಲಿಸಿದರೆ, ಸೀತೆಗಿಂತಲೂ ಊರ್ಮಿಳೆಯೇ ಗುಣಶಾಲಿನಿಯೆಂದೂ ಪತಿಭಕ್ತಿಪರಾಯಣಳೆಂದೂ ಯಾರುತಾನೇ ಒಪ್ಪಲಾರರು

ಹೀಗೆ ಪತಿವಾಕ್ಯಪರಿಪಾಲನೆಗಾಗಿಯೇ ಮನೆಯಲ್ಲಿ ನಿಂತು ಗುರುಶುಶ್ರೂಷೆ ಮಾಡುತ್ತಿದ್ದ ಊರ್ಮಿಳೆಯು ರಾಮನ ವನವಾಸದವಧಿಯು ಮುಗಿದನಂತರ ತನ್ನ ಪ್ರಾಣೇಶ್ವರನು ಸುಖವಾಗಿ ಮನೆಯನ್ನು ಸೇರಲು, ಅವನನ್ನೇ ಕರಣತ್ರಯದಲ್ಲಿಯೂ ದೇವತೆಯೆಂದು ಭಾವಿಸಿ, ಸರ್ವದಾ ಅವನ ಶುಶ್ರೂಷೆಯನ್ನು ಮಾಡುತ, ಪತಿವ್ರತೆಯರಲ್ಲಿ ಅಗ್ರಗಣ್ಯಳೆನ್ನಿಸಿಕೊಂಡು ತಾನು ಹುಟ್ಟಿದ ಕುಲವನ್ನೂ ಸೇರಿದ ಕುಲವನ್ನೂ ಪವಿತ್ರವಾಡಿದಳು.

ಇಂತ ಲೋಕೋತ್ತರ ಪತಿವ್ರತೆಯಾದ ಊರ್ಮಿಳೆಯನ್ನು ಇಂದ್ರನಲ್ಲಿ ಆಸೆಪಟ್ಟ ಅಹಲ್ಯೆಯು ಹೋಲಬಲ್ಲಳೇ ? ' ಮಸ್ಕೋಪಿಮವರೋಚತೆ ' ಎಂದು ತನ್ನ ಚಾಪಲ್ಯವನ್ನು ತಾನೇ ಹೇಳಿಕೊಂಡ ದ್ರೌಪದಿತಾನೇ ಅವಳಿಗೆ ಸರಿಯಾದಾಳೇ ? ತನ್ನ ಪತಿಯು ಶಿಷ್ಯನಾದುದರಿಂದ ಪುತ್ರಸದೃಶನೆಂದೂ ಭಾವಿಸದೆ ಚಂದ್ರನೊಡನೆ ಸೇರಿದ ತಾರೆಗೆತಾನೇ ಇವಳ ಮಹಿಮೆ ಎಲ್ಲಿಂದಬಂದೀತು ? ತಮ್ಮ ಸೌಮಿತ್ರನಾದ ಸುಗ್ರೀವ ವಿಭೀಷಣರನ್ನು ಕೂಡಿದ ತಾರೆ ಮಂಡೋದರಿಯರ ಪ್ರಸಾಧನವೇತಕ್ಕೆ ?

ಹೀಗೆ ಪರ್ಯಾಲೋಚಿಸಿದರೆ ' ಅಹಲ್ಯಾ ದ್ರೌಪದೀ ತಾರಾ ತಾರಾಮಂ

ಶಬ್ದರಾಶಿಗಳಲ್ಲಿ ಕೇವಲ ನಾಮಗಳೆಂದೂ, ಅವ್ಯಯಗಳೆಂದೂ, ನಿಪಾತಗಳೆಂದೂ ಮೂರು ಭೇದಗಳುಳ್ಳವುಗಳಾಗಿರುವವು.

(೧) ಇವುಗಳಲ್ಲಿ ಕೇವಲ ನಾಮಗಳೆಂದರೆ—ಕೃದಂತ, ತದ್ಧಿದಾಂತ, ಸಮಾಸವೆಂಬ ಪ್ರಭೇದಗಳಿಂದ ಭಿನ್ನಭಿನ್ನವಾದ ಶಬ್ದಸಮೂಹಗಳು. ಇವುಗಳಲ್ಲಿ ಕೆಲವರು ಕೆಲವು ಪದಾರ್ಥಗಳಿಗೆ ತಮ್ಮ ತಮ್ಮ ಇಚ್ಛೆಗೆ ಅನುಸಾರವಾಗಿ ಶಬ್ದಗಳನ್ನು ಕಲ್ಪಿಸಿ ಹೆಸರಿಟ್ಟುಕೊಂಡು ವ್ಯವಹರಿಸುವ, ನೆಲ, ಹೊಲ, ಘಟ, ಪಟ, ಚೈತ್ರ, ಮೈತ್ರ, ಡಿತ್ಥ, ವಿತ್ಥ ಮೊದಲಾದ ಧಾತು ಪ್ರಕೃತಿ ಪ್ರತ್ಯಯಗಳ ವಿಭಾಗವಿಲ್ಲದ ಶಬ್ದಗಳನ್ನೂ ಸೇರಿಸಿ ನಾಲ್ಕುಭಾಗಗಳಾಗಿರುವವೆಂದು ಹೇಳುವರು. ಇವುಗಳನ್ನೇ ಸಂಸ್ಕೃತಜ್ಞರು ಯದೃಚ್ಛಾ ಶಬ್ದಗಳೆಂದು ವ್ಯವಹರಿಸುವರು. ಆದರೆ ಕೆಲವರು ವೈಯಾಕರಣರು ಅಂದರೆ ಶಾಕಟಾಯನ ಪ್ರಭೃತಿಗಳು, ಎಲ್ಲಾ ಶಬ್ದಗಳೂ, " ಧಾತ್ವರ್ಥಂ ಸಮುಪಾದಿಕೃತ್ಯಂ ಪಾಣಿನ್ಯಾದೀಪಟ್ಟಸಿದ್ಧಯೆ ॥ " ಎಂಬ ಪ್ರಮಾಣದಿಂದ ಧಾತು ಮೂಲಕವಾದುವು. ಆದುದರಿಂದ ಎಲ್ಲಾ ಶಬ್ದಗಳಿಗೂ ಪ್ರಕೃತಿ ಪ್ರತ್ಯಯ ವಿಭಾಗವನ್ನು ತೋರಿಸಿ ವ್ಯಾಕರಣದಲ್ಲಿ ಸಾಧುತ್ವವನ್ನು ತಿಳಿಸಬೇಕೆಂದು ಹೇಳುವರು. ಇವರ ಮತದಲ್ಲಿ ಯದೃಚ್ಛಾ ಶಬ್ದಗಳೆಂಬುವದೇ ಇಲ್ಲ ಪಾಣಿನಿಮತದಲ್ಲಾದರೋ ಘಟಪಟಾದಿರೂಢಶಬ್ದಗಳಿಗೆ ಪ್ರಕೃತಿ ಪ್ರತ್ಯಯಗಳನ್ನು ಕಲ್ಪಿಸುವದು ಅಸಾಧ್ಯವೆಂದ ಅಂಥಾ ಶಬ್ದಗಳ ಸಂಗ್ರಹಕ್ಕಾಗಿ ಉಣಾದಿಗಳೆಂದು ಒಂದು ಗುಣವನ್ನು ಕಲ್ಪಿಸಿ ಅಲ್ಲಿ ಅಂಥಾ ಶಬ್ದಗಳನ್ನೇ ಪಾಠಮಾಡಿರುವದು. ಆದುದರಿಂದಲೇ ವರರುಚಿಯು " ಉಣಾದಯೋವ್ಯುತ್ಪನ್ನಾನಿ ಪ್ರಾತಿಪದಿಕಾನಿ " ಎಂದು ಹೇಳಿರುವನು. ಶಾಂತನವಾದಿಗಳೂ ಶಾಕಟಾಯನ ಮತವನ್ನವಲಂಬಿಸಿ ಉಣಾದಿಗಣಪಠಿತನಾದ ಶಬ್ದಗಳಿಗೂ ಧಾತು ಪ್ರತ್ಯಯಗಳನ್ನು ಕಲ್ಪಿಸಿ, " ಉಣಾದಯೋವ್ಯುತ್ಪನ್ನಾನೀತ್ಯಪಿ " ಎಂದು ಹೇಳುವರು ಹೀಗೆಯೇ ಭಾಷೆಗಳಲ್ಲೂ ವ್ಯವಹರಿಸಲು ಯಾವ ಬಾಧಕವೂ ತೋರುವದಿಲ್ಲ. ಆದುದರಿಂದಲೇ ಶಬ್ದಾನುಶಾಸನಕಾರನು ಕರಂಬಾದಿ ಗಣವನ್ನು ಕಲ್ಪಿಸಿ ಅದರಲ್ಲಿ ಅನೇಕವಿಧವಾದ ಶಬ್ದಗಳನ್ನು ಪಾಠಮಾಡಿ ಇತ್ತೊ ಲೋಕವ್ಯವಹಾರದಲ್ಲಿ ಮೂತ್ರವಿದ್ದು ವ್ಯಾಕರಣಸೂತ್ರಗಳಿಂದ ಸಾಧಿಸುವದಕ್ಕೆ ಅಸಾಧ್ಯವಾದ ಶಬ್ದಗಳನ್ನು ಗ್ರಹಿಸುವದಕ್ಕೆ ಅಕೃತಿಗಣವೆಂದು ಹೇಳಿ ಇದರಲ್ಲಿ—

" ವರ್ಣಾಗಮೋವರ್ಣವಿಪರ್ಯಯಶ್ಚದ್ವೌಚಾಪರೌವರ್ಣವಿಕಾರನಾಶೌ ।

ನೆಯುರು ಪಾತ್ರಃಸ್ಮರಣೀಯಳಾದ ಊರ್ಮಿಳೆಯನ್ನು ನಿರಂತರವೂ ನೆನಪಿನಲ್ಲಿಟ್ಟು, ಅವಳಲ್ಲಿದ್ದ ಸೌಜನ್ಯವನ್ನೂ ಸೌಶೀಲ್ಯವನ್ನೂ, ಧರ್ಮಮಾರ್ಗದಲ್ಲಿ ಆಸಕ್ತಿಯನ್ನೂ, ಕೃತ್ಯಾಕೃತ್ಯವಿವೇಕವನ್ನೂ ಅವಲಂಬಿಸಿ, ಆ ಪತಿವ್ರತಾಶಿರೋಮಣಿಯಂತೆ ಎಂದು ತಾವೂ ಪತಿವ್ರತೆಯರೆನ್ನಿಸುವರೋ. ಎಂದು ಅವಳಂತೆ ಪತಿವಾಕ್ಯವನ್ನು ತಪ್ಪದೆ ನಡೆಸುವರೋ, ಎಂದು ತಮ್ಮ ಸೌಖ್ಯಕ್ಕಿಂತ ಪತಿಚಿತ್ತಾನುವರ್ತನವನ್ನೇ ಮೇಲಾಗಿಭಾವಿಸುವರೋ, ಎಂದು ತಮ್ಮ ದೇಹಪೋಷಣೆಗಿಂತ ಅತ್ತೆ ಮಾವಂದರ ಸೇವೆಯೇ ದೊಡ್ಡದೆಂದು ತಿಳಿಯುವರೋ. ಎಂದು ತಮ್ಮ ಪತಿಗೆ ವ್ಯಸನಬಂದೊದಗಿದಕಾಲದಲ್ಲಿ ಅವನ ಮನಸ್ಸಂತೋಷಣಕ್ಕಾಗಿ ತಾವು ಎಂತಹ ಕಷ್ಟವನ್ನಾದರೂ ಅನುಭವಿಸುವುದಕ್ಕೆ ಸಿದ್ಧರಾಗುವರೋ, ಎಂದು ಅವಳಂತೆ ಎಂತಹ ಕಾಲದಲ್ಲೂ ಅನಾದಿಸಿದ್ಧಗಳಾದ ತಮ್ಮ ಸದಾಚಾರಗಳನ್ನು ಬಿಡದೆ ನಡೆಸುವರೋ, ಎಂದು ಆ ಪತಿವ್ರತಾಮೂರ್ಧನ್ಯಳಂತೆ ಸಕಲವಿಷಯಗಳಲ್ಲಿಯೂ ತಾವೂ ಅಗಲೆಳಿಸುವರೋ, ಎಂದು ಈ ನಮ್ಮ ಭಾರತಭೂಮಿಯು ಪ್ರಸವಿಜ್ಜೀವಿತವಾಗದಿರದು.

ಕಂ॥ ಇಳೆಯೊಳಗುತ್ತಮಳಾದೂ ।
ರ್ಮಿಳೆಯಂ ಸಾವಿತ್ರಿಸೀತೆದಮಯಂತಿಯರಂ ॥
ಸಲೆಜಾನಿಸಲೆಮ್ಮಾರ್ಯೆಯ ।
ಹಂಳೆಯುರ್ಮೀಲಾದಚಂದ್ರಮತಿಯಂ ಮತ್ತಂ ॥

ವ್ಯಾಕರಣಶಾಸ್ತ್ರಂ.

ನಾಮಪ್ರಕರಣಂ.

೧೪೯ ನೇ ಇಸವಿಯ ವಿದ್ಯಾದಾಯಿನಿಯಲ್ಲಿ ವಿವರಿಸಿರುವಂತೆ ನಾಮಪದಗಳು ಅರ್ಥಗತವಾದ ಸ್ತ್ರೀತ್ವರೂಪಧರ್ಮವನ್ನು, ಪುಂಸ್ತ್ವರೂಪಧರ್ಮವನ್ನು, ನಪುಂಸಕತ್ವರೂಪಧರ್ಮವನ್ನು ಇವುಗಳ ವ್ಯತ್ಯಾಸದಿಂದ ಅನೇಕ ಲಿಂಗಗಳಾಗಿ ಲೋಕದಲ್ಲಿ ವ್ಯವಹರಿಸಲ್ಪಡುತ್ತಿರುವ ತದ್ಭವ ತತ್ಸಮ, ದೇಶ್ಯಗಳೆಂಬ ಭೇದಗಳುಳ್ಳ

ಪ್ರಕೃತಿ ಪ್ರತ್ಯಯವಿಭಾಗವಿಲ್ಲದವು. ಆದುದರಿಂದ ಅಖಂಡಾವ್ಯಯಗಳೆಂತಲೂ, ನಡೆವನ್ನಂ, ನುಡಿವಿನೆಗಂ, ಮೊದಲಾದ ಕೆಲವು ಶಬ್ದಗಳು ಕೃದಂತಾವ್ಯಯಗಳೆಂತಲೂ, ಇಂದ್ರಂಬೋಲ್, ಒರ್ಮೆ, ಅಂತುಟು, ಮೊದಲಾದವು ತದ್ಧಿತಾಂತಾವ್ಯಯಗಳೆಂತಲೂ, ಮೂರುತೆರನಾಗಿರುವವು.

(೩) ನಿಪಾತಗಳೆಂದರೆ, ಮೇಲಿಹೇಳಿದ ಅವ್ಯಯಗಳಲ್ಲಿ, ಓಹೋ, ಅಯ್ಕೊ, ಅಲ್ತೆ, ಅಕ್ಕಟಾ ಮೊದಲಾದ ಕೆಲವು ಶಬ್ದಗಳು ನಿಪಾತಗಳೆನ್ನಿಸಿಕೊಳ್ಳುವವು. ಇವುಗಳಿಗೆ ನಿಪಾತವೆಂಬ ಸಂಜ್ಞೆಯು ಸ್ವರಸಂಧಿ ನಿಷೇಧಾರ್ಥವಾಗಿ ಭಾಷೆಯುಲ್ಲಿ ಅಂಗೀಕರಿಸಲ್ಪಟ್ಟರುವುದೇ ಹೊರತು ಸಂಸ್ಕೃತದಂತೆ ಉದಾತ್ತಾದಿ ಸ್ವರಗಳ ನಿಧಿನಿಷೇಧಾರ್ಥವಾಗಿಲ್ಲವೆಂದು ತಿಳಿಯುವದು. ಸಂಸ್ಕೃತದಲ್ಲಿ ಇಂಥಾ ಅವ್ಯಯಗಳಲ್ಲೇ ಕೆಲವು ಶಬ್ದಗಳಿಗೆ ಉಪಸರ್ಗಗಳೆಂದೂ ವ್ಯವಹರಿಸುವರು. ಭಾಷೆಯಲ್ಲಿ ಅಂಥಾ ಉಪಸರ್ಗಗಳು ಇಲ್ಲವಾದುದರಿಂದ ಇಲ್ಲಿ ಅದನ್ನು ವಿವರಿಸಲಿಲ್ಲ.

---

98 ನೇ ನವಂಬರು ತಿಂಗಳ ಲೆಕ್ಕದ ಉತ್ತರಗಳು

—o—

1 ಎ, ಗೆ $\frac{1}{7}$ ಭಾಗ; ಬಿ, ಗೆ $\frac{1}{7}$ ರ 2 ಅಥವಾ $\frac{2}{7}$ ಭಾಗ; ಸಿ, ಗೆ $\frac{1}{7}+\frac{2}{7}$ ಅಥವಾ $\frac{3}{7}$ ಭಾಗ; ಡಿ, ಗೆ $\frac{1}{6}$ ಭಾಗ; ∴ ನನ್ನ ಹತ್ತರ ಇದ್ದದ್ದು $\frac{1}{7}+\frac{2}{7}+\frac{3}{7}+\frac{1}{6}$ ಅಥವಾ $1\frac{1}{42}$ ಭಾಗ.

2 ನನ್ನ ಆಸ್ತಿ = 1 ಭಾಗ. ಇದರಲ್ಲಿ ಎ, ಗೆ ಕೊಟ್ಟದ್ದು $\frac{1}{5}$ ಭಾಗ; ಬಿ, ಗೆ $\frac{1}{6}$ ಭಾಗ; ಸಿ, ಗೆ $\frac{1}{12}$ ಭಾಗ; ಡಿ, ಗೆ $\frac{1}{16}$ ಭಾಗ; ∴ ನನಿಗೆ ಉಳಿ

ಧಾತೋಸ್ತದರ್ಥಾತಿಶಯೇನಯೋಗಸ್ತದುಚ್ಯತೇಪಂಚವಿಧಂನಿರುಕ್ತಂ ॥ ''

ಎಂದು ಐದುವಿಧವಾದ ನಿರುಕ್ತಿಯಿಂದ ಶಬ್ದಗಳಿಗೆ ಸಾಧುತ್ವವನ್ನು ಕಲ್ಪಿಸಬಹುದೆಂದು ಹೇಳಿರುವನು.

(a) ಇಂಥಾ ನಾಮಗಳು ಕೃದಂತನಾಮಗಳೆಂದರೆ ಧಾತುಗಳಮೇಲೆ ಉಣ್ಣಾದಿ ಪ್ರತ್ಯಯಗಳಲ್ಲದೆ ಭಾವಕರ್ಮಕರ್ತೃ ಕ್ರಿಯಾರ್ಥದಲ್ಲಿ ಬರುವ ಪ್ರತ್ಯಯಗಳಿಂದ ಕೂಡಿದ ಮಾಡುತ, ಮಾಡುತ್ತೆ, ಅಡುಕುಳಿ, ಕಲ್ಕುಟಿಗ, ಓದುಗಳ್, ತಿರುಕೆ, ಬಾಳ್ಕೆ ಮೊದಲಾದ ಶಬ್ದಗಳು.

(b) ಮೇಲೆ ಹೇಳಿರುವ ಕೃದಂತನಾಮಗಳ ವಿಲಾಗಲಿ, ಅವ್ಯುತ್ಪನ್ನವಾದ ರೂಢಶಬ್ದಗಳ (ಯದೃಚ್ಛಾ ಶಬ್ದಗಳ) ವಿಲಾಗಲಿ ಬರುವ ವಿಭಕ್ತಿಪ್ರತ್ಯಯ, ಸ್ತ್ರೀ ಪ್ರತ್ಯಯಾಗಳನ್ನುಳಿದ ಶೀಲಾದ್ಯರ್ಥಕಪ್ರತ್ಯಯಗಳಿಂದ ಕೂಡಿದ ಮಾತಾಳಿ, ಜೂದಾಳಿ, ತಂಬುಲಿಗ, ಉಪವಾಸಿಗ, ಸರವಂದಿಗ, ಗುಣವಂತ, ಜಗಳವಂತ, ಹಾಲೆಗಾರ, ಪಟ್ಟಣಿಗ, ತೆಂಕಣ, ಬಡಗಣ, ಸೂಳಾಯ್ತು, ಅಂತು, ಇಂತು ಮೊದಲಾದ ಶಬ್ದಗಳು ತದ್ಧಿತಾಂತ ನಾಮಗಳು.

(c) ಮೇಲೆಹೇಳಿರುವ ನಾಮಪದಗಳು ಅರ್ಥಾನುಗುಣವಾಗಿ ಆಕಾಂಕ್ಷೆಯಿಂದ ಪರಸ್ಪರವಾಗಿ ಸೇರಿ ಅಯಾಯ ಪದಗಳ ವಿಲಿರುವ ವಿಭಕ್ತಿ ಪ್ರತ್ಯಯಗಳು ಲುಪ್ತವಾಗಿ ಪದಸಮುದಾಯವಾದಮೇಲೆ ವಿಭಕ್ತಿ ಪ್ರತ್ಯಯಗಳನ್ನು ಹತ್ತಿಸುವದಕ್ಕೆ ಯೋಗ್ಯವಾದ ಬೀಸುವ ಚಾಮರ, ಪೂಡೆವಭೋರಿ, ಕರಿವೇಂಟೆಗಾರ, ಮಂಗಳಾರತಿ, ಪಾಲ್ಮಡಿಂ ಮೊದಲಾದ ಶಬ್ದಗಳು ಸಮಾಸಗಳು. ಈ ಸಮಾಸಗಳಲ್ಲಿ ಅನೇಕ ಭೇದಗಳಿರುವವು. ಅವು ಮುಂದೆ ವಿವರಿಸಲ್ಪಡುವವು.

(d) ಅವ್ಯಯಗಳೆಂದರೆ,—ಎಲ್ಲಾ ಲಿಂಗಗಳಲ್ಲೂ, ವಿಭಕ್ತಿಗಳಲ್ಲೂ, ವಚನಗಳಲ್ಲೂ ಯಾವವ್ಯತ್ಯಾಸವನ್ನೂ ಹೊಂದದಿರುವ, ಅಂತೆ, ಇಂತೆ, ಅಂತುಟು, ಅವಗಂ, ಕಮ್ಮನೆ, ಕಮ್ಮಗೆ, ತಣ್ಣನೆ, ತಣ್ಣಗೆ, ಒಡನೆ, ನಾಳೆ, ನಾಡಿದು, ಮತ್ತೆ ಮೊದಲಾದ ಶಬ್ದಗಳು ಇವುಗಳಿಗೆ ನವ್ಯೋತೀತ್ಯವ್ಯಯಂ, ಎಂಬ ವ್ಯುತ್ಪತ್ತಿಯಿಂದ ಈ ಹೆಸರು ಬಂದಿರುವದೆಂಬುದು,—'' ಸದೃಶಂತ್ರಿಷ್ವಲಿಂಗೇಷು ಸರ್ವಾಸುಚವಿಭಕ್ತಿಷು । ವಚನೇಷುಚಸರ್ವೇಷು ಯನ್ನವ್ಯೇತಿತದವ್ಯಯಂ॥ '' ಎಂಬ ಪ್ರಮಾಣದಿಂದ ಸಿದ್ಧವಾಗಿರುವದು. ಇವುಗಳಲ್ಲಿ, ನಾಳೆ, ನಾಡಿದು ಮೊದಲಾದ ಕೆಲವು ಶಬ್ದಗಳು

ದ್ದಪ್ರದೇಶದಲ್ಲಿದ್ದ ಮನುಷ್ಯನು ಒಂದು ಬಂಡೆಯುಮೇಲಿಡುತ್ತಿದ್ದನು. ಅದನ್ನು ಅನಂತರ ದಾಖ್ರವುಕಗಳಿಂದ ತೊಳೆದು ತೆಗೆದುಕೊಳ್ಳುತ್ತಿದ್ದರು. ಹೀಗೆಯೇ ಇಂಗ್ಲಂಡ್ ದೇಶಕ್ಕೆ ಎರಡುನೂರು ಸಾರಿ ಬಂದಿತ್ತು. ಈಚೆಗೆ ಚೈನಾ ದೇಶದಲ್ಲಿ ಮೂರುನಾಲ್ಕು ವರುಷಗಳಿಂದ ಪ್ರಾರಂಭವಾಗಿ ಎರಡುವರೆ ವರುಷಗಳ ಕೆಳಗೆ ಬೊಂಬಾಯಿಪಟ್ಟಣಕ್ಕೆ ಬಂತು. ಅಲ್ಲಿ ಇದರ ಹಾವಳಿಯನ್ನು ಹೇಳುವದಕ್ಕಾಗುವದಿಲ್ಲ ಸುಮಾರು ಅನೇಕಸಾವಿರ ಪ್ರಜೆಗಳನ್ನು ಆಹಾರವನ್ನಾಗಿ ಮಾಡಿಕೊಂಡಿತು. ಈಗ ಆರು ತಿಂಗಳ ಕೆಳಗೆ ಬೆಂಗಳೂರಿಗೆ ಬಂತು. ಇಲ್ಲಿಯೂ ಅನೇಕ ಜನರು ಸತ್ತುಹೋದರು ಮೈಸೂರಲ್ಲಿಯೂ ಸಾಯುತಲಿದಾರೆ

ಅದರ ಲಕ್ಷಣಗಳು:— ಈ ಮಾರಿ ಜಾಡ್ಯವು ಅಂಟುಜಾಡ್ಯವು. ಇದರ ಹುಳಿಗಳು, ಮನುಷ್ಯನ ಕಣ್ಣಿಗೆ ಅಗೋಚರವಾಗುವಷ್ಟು ಬಹಳ ಸಣ್ಣವಾಗಿವೆ. ಈ ಕ್ರಿಮಿಯು ಒಂದು ಇದ್ದರೆ ಬಂದು ನಿಮಿಷದಲ್ಲಿ ಲಕ್ಷಾಂತರವಾಗುವದು. ಇದು ತಗಲಿದ ಮನುಷ್ಯನಿಗೆ ಬಹಳ ಜ್ವರಬರುವದು. ಕಣ್ಣುಗಳು ಕೆಂಪಗಾಗುವವು. ಮದ್ಯಪಾನ ಮಾಡಿದವನಂತೆ ಹುಚ್ಚುಹುಚ್ಚಾಗಿ ಮಾತನಾಡುವನು. ಕೆಲವರಿಗೆ ಕೊಂಕಳ ಸಂದಿಯಲ್ಲೂ, ಕೆಲವರಿಗೆ ಕುತ್ತಿಗೆ ಸಂದಿಯಲ್ಲೂ, ಅಥವಾ ತೊಡೆಗಳ ಸಂದಿಯಲ್ಲೂ ಗಡ್ಡೆಗಳು ಏಳುವದುಂಟು ಗಡ್ಡೆಗಳು ಏಳದೇ ಇರುವದೂ ಉಂಟು. ಇವರಲ್ಲಿ ಗಡ್ಡೆ ಎದ್ದರೆ ಉತ್ತಮ. ಇದು ತಗಲಿದವನು ೨೪ ಘಂಟೆಗಳಲ್ಲಿಯೆ ಅಥವಾ ೩ ದಿವಸಗಳಲ್ಲಿಯೆ ಸಾಯುವನು. ಇದು ಒಂದು ಮನೆಗೆ ಕಾಲಿಟ್ಟರೆ ಆ ಮನೆಯವರು ತಕ್ಕಹಾಗೆ ನಡೆದುಕೊಳ್ಳದಿದ್ದರೆ ಅದನ್ನು ಬರೇದು ಮಾಡಿದಹೊರತು ಬಿಟ್ಟು ಹೋಗುವದಿಲ್ಲ.

ಇದನ್ನು ತಡೆಮಾಡುವ ರೀತಿ :—

ಒದ್ದೆಯಾದ ಪ್ರದೇಶವು ಇದರ ತೌರುಮನೆಯಾದ್ದರಿಂದ ಅಂಥಾ ಜಾಗವನ್ನು ಬಿಡುವದು.

ಬಿಸಿಲು ಮತ್ತು ಗಾಳಿಯಿಂದ ಇದರ ಕ್ರಿಮಿಗಳು ಸಾಯುವದರಿಂದ ಅವಕ್ಕೆ ತಡೆಯಿಲ್ಲದೆ ಸಂಚರಿಸುವದಕ್ಕೆ ಅವಕಾಶಕೊಡಬೇಕು.

ಸಾಧ್ಯವಾದರೆ ಇದು ವ್ಯಾಪಿಸಿರುವ ಸ್ಥಳವನ್ನು ಬಿಡಬೇಕು ಆಗ ಮನೆ ಹೆಂಚುಗಳನ್ನು ಸ್ವಲ್ಪದೂರದವರೆಗೆ ತೆಗೆದುಬಿಡಬೇಕು.

ದದ್ದು $1-\left(\frac{1}{5}+\frac{1}{6}+\frac{1}{12}+\frac{1}{16}\right)$ ಅಥವಾ $\frac{117}{240}$ ಭಾಗ.

ವಿದ್ಯಾರ್ಥಿಗಳ ಸಂಖ್ಯೆ = 1 ಭಾಗ. ಇದರಲ್ಲಿ ಬ್ರಾಹ್ಮಣರು $\frac{1}{3}$ ಭಾಗ ಕ್ಷತ್ರಿಯರು $\frac{1}{5}$ ಭಾಗ ; ವೈಶ್ಯರು $\frac{1}{8}$ ಭಾಗ ; ಲಿಂಗಾಯಿತರು $\frac{1}{10}$ ಭಾಗ ಒಟ್ಟು $\frac{1}{3}+\frac{1}{5}+\frac{1}{8}+\frac{1}{10}$ ಭಾಗ ಅಥವಾ $\frac{91}{120}$ ಭಾಗ.

ಉಳಿದದ್ದು $1-\frac{91}{120}$ ಅಥವಾ $\frac{22}{120}$ ಭಾಗ ಅಥವಾ 58 ಜನ.

ಪೂರಾಭಾಗ $\frac{58\times120}{29}=240$ ಜನರು.

ಬ್ರಾಹ್ಮಣರು $=\frac{240\times1}{3}=80$ ಜನರು ಕ್ಷತ್ರಿಯರು $=\frac{240\times1}{5}$ $=48$ ಜನರು.

ವೈಶ್ಯರು $=\frac{240\times1}{8}$ 30 ಜನರು; ಲಿಂಗಾಯಿತರು $\frac{240\times1}{10}=$ 24 ಜನರು.

ಪ್ಲೇಗ್.

ಪ್ಲೇಗ್ ಮಾರಿ ಜಾಡ್ಯವು ಮೊದಲು ಆಫ್ರಿಕಾಖಂಡದ ನೈಲ್ ನದಿಯ ಹತ್ತಿರ ಇರುವ ಜೌಗುಪ್ರದೇಶದಮೇಲೆ ಅಲ್ಲಿನ ಶೀಕ್ಷ್ಣವಾದ ಬಿಸುಲಿನ ಕಿರಣಗಳು ಬಿದ್ದು ಅದು ಕಾದು ಆ ಕೆಟ್ಟಗಾಳಿಯು ಹರಡಿಕೊಳ್ಳಲು ಆರಂಭಿಸಿತೆಂದು ತಿಳಿಯಬಂದಿದೆ. ಈ ರೋಗವು ಅಲ್ಲಿ ವ್ಯಾಪಾರಕ್ಕಾಗಿ ಸಂಚರಿಸುತ್ತಿದ್ದ ಹಡಗುಗಳ ಮೂಲಕ ವಾಗಿ ಇಂಗ್ಲೆಂಡ್ ದೇಶಕ್ಕೆ ಮೊದಲು ಕ್ರಿ. ಶ. ೧೩೪೮ನೇ ವರ್ಷದಲ್ಲಿ ಬಂತು. ಅಲ್ಲಿನ ಜನಗಳು ಈ ಪ್ಲೇಗಿಗೆ ಎಷ್ಟು ಭಯಪಡುತ್ತಿದ್ದರೆಂದರೆ, ಒಬ್ಬರನ್ನೊಬ್ಬರು ಮುಟ್ಟುತ್ತಿರಲಿಲ್ಲ. ಮತ್ತು ಹಣ ಕಾಸು ತೆಗೆದುಕೊಳ್ಳಬೇಕಾದರೆ ಅದನ್ನು ರೋಗವಿ

ಬಾಳೆ.

(ವಿಶೇಷ ಉಪಯೋಗಗಳು.)

ಬಾಳೆದಿಂಡನ್ನು ಕಚ್ಚಡಿ ತಾಳದ ಮೇಲೋಗರ ಹುಳಿ ಇವುಗಳಿಗೆ ಉಪಯೋಗಿಸುತ್ತಾರೆ. ಇದನ್ನು ಸಣ್ಣನಾಗಿ ಹೆಚ್ಚಿ ಹೆಸರುಬೇಳೆ ಜೊತೆಯಲ್ಲಿ ಸೇರಿಸಿ ಒಗ್ಗರಣೆಹಾಕಿ ತಿನ್ನುವುದುಂಟು. ಇದನ್ನು ಸುಂಡಿಗೆಗೆ ಉಪಯೋಗಿಸುವುದೂ ಉಂಟು. ಎಲ್ಲಾ ಬಾಳೆದಿಂಡುಗಿಂತಲೂ ರಸಬಾಳೆದಿಂಡು ಮೃದುವಾಗಿಯೂ, ರುಚಿಯಾಗಿಯೂ ಇರುವುದು. ಇದಕ್ಕಿಂತಲೂ ಬೂದ ಬಾಳೆದಿಂಡು ಮೃದುವಾಗಿಯೂ, ರುಚಿಯಾಗಿಯೂ ಇರುವುದು. ಬಾಳೆಯೆಲೆ ಸೀಳು ಸುರುಗುಗಳನ್ನು ಊಟದೆಲೆಗೆ ಉಪಯೋಗಿಸುತ್ತಾರೆ. ಅಗ್ರದೆಲೆಗಳನ್ನು ಶುಭಾಶುಭ ಕರ್ಮಗಳಲ್ಲಿ ಮುಖ್ಯವಾಗಿ ಉಪಯೋಗಿಸುತ್ತಾರೆ. ಅದಕ್ಕೆ ಗೌರವವು ಹೆಚ್ಚು. ಮದುವೆ ಮೊದಲಾದ ಸಂದರ್ಭಗಳಲ್ಲಿ ಗೌರವಕ್ಕೋಸ್ಕರಲೂ ಮತ್ತು ಹಚ್ಚಿದ ಎಲೆಗಳನ್ನು ಒದಗಿಸುವುದು ಕಷ್ಟವಾದುದರಿಂದಲೂ ಇದನ್ನ ಉಗಯೋಗಿಸುವುದು ಹೆಚ್ಚು. ಬಾಳೆ ಸೀಳುಗಳನ್ನು ಒಬ್ಬಿಟ್ಟು ತಟ್ಟುವುದಕ್ಕೂ ಕಡಬುಗಳನ್ನು ಮಾಡುವದಕ್ಕೂ ಉಪಯೋಗಿಸುತ್ತಾರೆ. ಇದರ ಸುರಗುಗಳಿಂದ ದೊನ್ನೆಗಳನ್ನು ಮಾಡಿ ಉಪಯೋಗಿಸುವರು ಒಣಗಿದ ಸುರಗುಗಳನ್ನು ಕಟ್ಟಿಟ್ಟುಕೊಂಡಿದ್ದು ಊಟದೆಲೆಗಳು ಸಿಕ್ಕದಕಾಲದಲ್ಲಿ ಉಗಯೋಗಿಸುತ್ತಾರೆ. ಬಾಳೆಸುರಗುಗಳನ್ನು ತೆಗೆಯುಬೇಕಾದರೆ ಮಳೆಗಾಲ ಹಿಮಗಾಲದಲ್ಲಿ ತೆಗೆಯುವರು. ಮಳೆಗಾಲದಲ್ಲಿ ತೆಗೆದದ್ದು ಸ್ವಲ್ಪ ತೇವವಾಗಿರುವುದ್ದರಿಂದ ಅವು ಕೆಲವುಕಾಲಕ್ಕೆ ಮುಗ್ಗುವವು. ಹಿಮಗಾಲದಲ್ಲಿ ತೆಗೆದದ್ದು ಮುಗ್ಗದೆ ಚೆನ್ನಾಗಿರುವುದು. ಫಲ ಬಿಡತಕ್ಕ ಗಿಡಗಳಲ್ಲಿ ಸುರಗು ಸೀಳು ಎಲೆ ತರಗುಗಳನ್ನು ಕಾಯಿದರೆ ಅದಕ್ಕೆ ಸೊಂಪು ಕಡಿಮೆಯಾಗಿ ಫಲವು ಕಡಮೆಯಾಗುವುದು. ಗೊನೆ ಕಡಿದ ಗಿಡದಲ್ಲಿ ಸುರಗಿದ್ದರೆ ಅದನ್ನು ತೆಗೆಯುವರು. ಬಾಳೆತೋಟವು ಕ್ಷೀಣದೆಸೆಗೆ ಬರುವಕಾಲವಾಗಿದ್ದರೆ ಆಗ ಸುರಗುಗಳನ್ನು ತೆಗೆಯುವರು. ಇದರ ಜಟ್ಟೆಗಳಿಗಾಗಿ ಮೊಟ್ಟ ಮೊದಲು ಗೊನೇ ಕಡಿದ ಬಾಳೇಕಂಭವನ್ನು ಕಡಿಯುಬೇಕಾದರೆ ಬುಡದಲ್ಲಿ ಕಂದುಗಳು ಹೆಚ್ಚಾಗಿ ಬಿಟ್ಟದ್ದಪಕ್ಷದಲ್ಲಿ ಬುಡದಿಂದ ಮೇಲಕ್ಕೆ ಒಂದು ಗೇಣುಪ್ರಮಾಣ ಬಿಟ್ಟು ಕಡಿಯುವರು. ಹೆಚ್ಚಾಗಿ ಕಂದು ಒಡೆಯದಿದ್ದಪಕ್ಷದಲ್ಲಿ ತೋಳುದ್ದ ಬಿಟ್ಟು ಕಡಿಯುವರು. ಕಂಭವನ್ನು ಕಡಿದಮೇಲೆ ಅದನ್ನು ಒಂದೊಂದು ಮೊಳ ಪ್ರಮಾಣಕೆ

ಯಾವಾಗಲೂ ಜೋಡುಗಳನ್ನು ಹಾಕಿಕೊಂಡು ತಿರಗಬೇಕು. ತಂಗಳು ಪದಾರ್ಥ ಮತ್ತು ಬಹಳ ಭೇದಿಯಾಗತಕ್ಕ ಕಾಯಿಪಲ್ಯಗಳನ್ನು ಬಿಡಬೇಕು.

ಒದ್ದೆಬಟ್ಟೆಗಳನ್ನುಟ್ಟುಕೊಂಡು ಬಿಸಿಲಿನಲ್ಲಿ ಒಣಗಿಸಬಾರದು.

ಬಚ್ಚಲು ಮುಂತಾದವುಗಳನ್ನು ಚೊಕ್ಕಟವಾಗಿಟ್ಟಿರಬೇಕು.

ಎಣ್ಣೆಹಚ್ಚಿಕೊಂಡು ನೀರನ್ನು ಪದೇಪದೇ ಹಾಕಿಕೊಳ್ಳುತ್ತಿರಬೇಕು.

ಇದೆಲ್ಲಕಿಂತಲೂ ಈಗ್ಗೆ ವರ್ಷಗೆ ಕಂಡುಹಿಡಿದಿರುವ ಔಷಧಗಳಲ್ಲಿ ಉತ್ತಮವಾದ್ದೆಂದು ತಿಳಿದುಬರುವ "ಇನಾಕ್ಯುಲೇಷನ್" ಅಂದರೆ ಒಂದುತರಹ ಸಿಡುಬು ಅದನ್ನು ಹಾಕಿಸಿಕೊಳ್ಳಬೇಕು. ಅನೇಕ ಜನರು ಇದರಿಂದ ಕೆಡಕುಂಟಾಗುವದೆಂದು ತಿಳಿದಿದ್ದಾರೆ. ಇದೆಲ್ಲಾ ಸುಳ್ಳು. ಮನುಷ್ಯ ಪ್ರಯತ್ನವನ್ನು ಮಾಡಿ ಆಮೇಲೆ ನಮ್ಮ ಭಾರವನ್ನು ಆ ಭಗವಂತನಮೇಲೆ ಬಿಟ್ಟು ಅವನನ್ನು ಪ್ರಾರ್ಥಿಸಬೇಕು.

ಈ ಜಾಡ್ಯಕ್ಕಾಗಿ ಸರ್ಕಾರದವರು ನಮಗೆ ಮಾಡಿರುವ ಅನುಕೂಲತೆ ಮತ್ತು ನಿಬಂಧನೆಗಳು :—

ಈಗ ನಮ್ಮ ಮೈಸೂರು ಸರ್ಕಾರದವರು ನಮಗೆ ಮಹೋಪಕಾರವನ್ನು ಮಾಡಿದ್ದಾರೆ ಅವರು ಅನೇಕಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಅನೇಕ ಡಾಕ್ಟರುಗಳನ್ನು ನೇಮಿಸಿ ಮತ್ತು ಪ್ಲೇಗ್ ಆಫೀಸ್ ಎಂಬದಾಗಿ ಒಂದು ಕಛೇರಿಯನ್ನು ಏರ್ಪಡಿಸಿ ಹೀಗೆಯೇ ನಮ್ಮಗಳ ಹಿತಕ್ಕಾಗಿ ಬಹಳ ಉಪಕಾರ ಮಾಡುತ್ತಿರುವರು. ಈಗ ರೋಗಬಂದು ತಗಲಿದವರನ್ನು ಅವರಿಂದ ಇತರರಿಗೆ ತಗಲದಂತೆ ಅವರನ್ನು ಪ್ರತ್ಯೇಕಿಸುವದಕ್ಕೆ ಊರುಹೊರಗೆ ಕ್ಯಾಂಪುಗಳನ್ನು ಕಟ್ಟಿಸಿ ಅಲ್ಲಿ ಊಟ ಉಪಚಾರಕ್ಕನುಕೂಲವಾದ ಏರ್ಪಾಡುಗಳನ್ನು ಮಾಡಿ ಔಷಧಿಗಳನ್ನು ಕೊಡುವರು. ರೋಗ ತಗಲಿದ ಪ್ರದೇಶದ ಜನಗಳನ್ನು ಇಲ್ಲದಿರುವ ಪ್ರದೇಶಗಳಿಗೆ ಬಿಡುವದಿಲ್ಲ. ಹಾಗೆ ಬಿಟ್ಟರೂ ಅವರ ಬಟ್ಟೆಬರೆಗಳನ್ನು ದ್ರಾವುಕಗಳಿಂದ ಶುದ್ಧಿಮಾಡುವರು. ರೋಗಿ ಸತ್ತಮನೆಗೆ ಸುಣ್ಣ ಹಚ್ಚಿ ಅದನ್ನು ದ್ರಾವುಕಗಳಿಂದ ಪರಿಶುದ್ಧಮಾಡುವರು.

ಎಲ್. ಕೋನೇರಿರಾವ್
೪ನೇ ಫಾರಂ ವಿದ್ಯಾರ್ಥಿ,
ಮಹಾರಾಜ ಕಾಲೇಜ್ ಮೈಸೂರು.

ಸುಟ್ಟು ಕರಕುಮಾಡಿ ನೀರು ಹಾಕಿ ತೇದ ಅರಸಿನಕ್ಕೆ ಇದನ್ನು ಹಾಕಿ ಕಲಿಸಿ ಹಿಂದೂಗಳು ಹಣೆಗೆ ಇಟ್ಟುಕೊಳ್ಳುವರು. ಹೀಗೆ ಇಟ್ಟುಕೊಂಡಿದ್ದಕ್ಕೆ ಅಕ್ಷತೆ ಎಂದು ಹೆಸರು. ಒಟ್ಟಿಗೆ ಇವುಗಳನ್ನೆಲ್ಲಾ ಸುಟ್ಟು ೨ ಬೂದಿಗೆ ದಿಂಡಿನ ರಸವನ್ನು ಹಾಕಿ ಕಲಿಸಿ ಉಂಡೆ ಮಾಡಿಟ್ಟುಕೊಂಡಿದ್ದು ಅಕ್ಷತೆಗೆ ಉಪಯೋಗಿಸುವರು. ಇದರ ತರಗು ಮೊದಲಾದವುಗಳನ್ನು ಗುಡಿಸಲುಗಳಿಗೆ ಉಪಯೋಗಿಸುವರು. ಬಾಳೆಲೆಯ ತರಗು ಗಳು ದನಗಳಿಗೆ ಒಳ್ಳೇ ಮೇವಾಗುವದು. ಬಾಳೇಗೆಡ್ಡೆಯನ್ನು ಔಷಧಿಗಳಿಗೆ ಉಪ ಯೋಗಿಸುತ್ತಾರೆ. ಫಿಲಿಪ್ಪೈನ್ ದ್ವೀಪದ ಬಾಳೆಗಿಡದಲ್ಲಿ ಹೊರಗಿರುವ ಪಟ್ಟೆಗಳ ನಾರು ಸ್ವಲ್ಪ ಒರಟಾಗಿಯೂ ಒಳಗಿನ ಪಟ್ಟೆಗಳ ನಾರು ಬಹಳ ಮೃದುವಾಗಿಯೂ, ಸೂ ಕ್ಷ್ಮವಾಗಿಯೂ ಇರುವದು. ಒಳಗಿನ ನಾರಿನಲ್ಲಿ ಬಟ್ಟೆ ಮಾಡಿದರೆ ಅದನ್ನು ಮಡಿಸಿ ಕಾಣಿಸದಂತೆ ಒಂದು ಹಿಡಿಯಲ್ಲಿ ಹಿಡಿದುಕೊಳ್ಳಬಹುದು. ಅದರ ಹಣ್ಣುಗಳು ಗಟ್ಟಿ ಯಾಗಿಯೂ ಒಗರಾಗಿಯೂ ಇರುವವು. ಅಲ್ಲಿನ ವ್ಯವಸಾಯಗಾರರು ನಾರಿಗೋಸ್ಕರ ಗೊನೆ ಬಿಟ್ಟ ಒಡನೆಯೇ ಕಡಿದುಬಿಡುವರು. ಅದರ ನಾರಿನಿಂದ ರೇಷ್ಮೆ ಮಿಶ್ರಿತ ಬಟ್ಟೆಗಿಂತಲೂ ಸೂಕ್ಷ್ಮವಾದ ಬಟ್ಟೆಯನ್ನು ಮಾಡುತ್ತಾರೆ. ಅನೇಕರು ಬಾಳೆತೋಟಗಳಿಂದಲೇ ಜೀವಿಸುತ್ತಾರೆ ಆದ್ದರಿಂದಲೇ ಬಡತನ ಬಂದರೆ ಬಾಳೆ ಹಾಕು. ಬಾಳೆ ಹಾಕಿದರೆ ಆಳಕ್ಕೆ ಹಾಕು, ಆಳಕ್ಕೆ ಹಾಕಿದರೂ ಅತ್ತಿತ್ತ ಹಾಕು. ಬಾಳೆಗೆ ಕಡಸು ಸೂಳೆಗೆ ಬಿಡಸು ಎಂಬ ಲೋಕೋಕ್ತಿಯುಂಟಾಗಿದೆ.

ಸೂಚನೆ ಮತ್ತು ಸಮಾಚಾರಗಳು

ಫಬ್ರವರಿ ತಾ॥ ೫ ರಲ್ಲು ಇಲ್ಲಿ ಸ್ಕೂಲ್‌ಗಳ ಪರೀಕ್ಷಾರ್ಥವಾಗಿ ಬಂದಿದ್ದ ಮೆ॥ ರಾ॥ ಡೆಪ್ಯುಟಿ ಇನ್‌ಸ್ಪೆಕ್ಟರ್ ಸಾಹೇಬರವರು ದಯಮಾಡಿಸಿದ್ದಾಗ ಅವರ ಜೊತೆ ಯಲ್ಲಿ ದಯಮಾಡಿಸಿದ್ದ ಮು॥ ರಾ॥ ಕೃಷ್ಣಯ್ಯಂಗಾರ್ರವರು ಮ್ಯಾಜಿಕ್‌ಲ್ಯಾಂಟರ್ನ್ ಎಂಬ ನೋಟವನ್ನು ಚಿತ್ರಗನ್ನಡಿ, ದೀಪ ಇವುಗಳ ಸಹಾಯದಿಂದ ಅನೇಕ ದೊಡ್ಡ ಪಟ್ಟಣಗಳನ್ನೂ, ಕಟ್ಟಡಗಳನ್ನೂ, ಕಾಡುಗಳನ್ನೂ, ಬೆಟ್ಟಗಳನ್ನೂ, ನದಿಗಳನ್ನೂ

ಕತ್ತರಿಸಿ ಪಟ್ಟಿಗಳನ್ನು ಬಿಡಿಸಿ ಅದರ ಹಿಂಭಾಗದ ತೊಕ್ಕಿನ ಭಾಗವನ್ನು ಹೆರೆದು ೨—೩ ಪಟ್ಟಿಗಳ ಅಂಚುಗಳನ್ನು ಒಂದಕ್ಕೊಂದು ಸೇರಿಸಿ ಕಡ್ಡಿಯಿಂದ ಹಚ್ಚಿ ಊಟದಲಯವಾಗಿ ಉಪಯೋಗಿಸುವರು. ನಾರುಮಾಡತಕ್ಕವರು ಹಸೀಪಟ್ಟೆಯನ್ನು ಒಂದು ಹಲಿಗೆಯಮೇಲಿಟ್ಟು ಗುಂಡಾದ ಅಂಚಿರುವ ಮಣೆಯಿಂದ ಎರಡುಮೂರುಸಲ ಉಜ್ಜುವರು. ಆಗ ಅದರ ರಸವೆಲ್ಲಾ ಹೋಗಿ ನಾರಿನ ಭಾಗ ನಿಂತುಕೊಳ್ಳುವುದು. ೪ ನಾರನ್ನು ಹೂವು ಕಟ್ಟುವುದಕ್ಕೂ ಇನ್ನೂ ನಾನಾವಿಧವಾದ ಕೆಲಸಗಳಿಗೂ ಉಪಯೋಗಿಸುತ್ತಾರೆ. ಇದರಿಂದ ಹಗ್ಗವನ್ನು ಹೊಸೆಯುವರು. ಆದರೆ ಅದು ತೆಂಗಿನ ಹಗ್ಗದಷ್ಟು ಗಟ್ಟಿಯಾದದ್ದಲ್ಲ ಬಾಳೆನಾರಿನಿಂದ ಬಟ್ಟೆ ಮತ್ತು ಕಾಗದಗಳನ್ನು ಕೂಡ ಮಾಡುವರು. ಬಾಳೆಪಟ್ಟೆಗಳಿಂದ ಮಂಟಪಗಳನ್ನು ಕಟ್ಟುವರು. ಇದು ಬಹಳ ಅಂದವಾಗಿ ಕಾಣುವುದು. ಬಣಗಿದ ಪಟ್ಟೆಗಳನ್ನು ದೊನ್ನೆ ಕಟ್ಟಲು ಕಟ್ಟುವುದಕ್ಕೂ ಎರೆಪಿಂಡಿ ಮೂಡೆ ಹುಣಸೇಹಣ್ಣು ಹೊಗೇಸೊಪ್ಪು ಸುರುಗು ಮೊದಲಾದವುಗಳನ್ನು ಕಟ್ಟುವುದಕ್ಕೂ ಉಪಯೋಗಿಸುತ್ತಾರೆ. ಒಣಗಿದ ಪಟ್ಟೆಗಳಲ್ಲಿ ಮೃದುವಾದದ್ದನ್ನು ಪುಡಿನೈವೇದ್ಯ ತುಂಬತಕ್ಕ ಚೀಲಗಳಿಗೆ ತಕ್ಕಷ್ಟು ಪ್ರಮಾಣ ಕತ್ತರಿಸಿ ಮಣೆಮೇಲಿಟ್ಟು ಉಜ್ಜಿ ದಾರದಿಂದ ಹೊಲೆದು ಚೀಲಗಳನ್ನು ಮಾಡಿ ಉಪಯೋಗಿಸುವರು. ಬಾಳೆಕಂಭಗಳನ್ನು ಮದುವೇ ಚಪ್ಪರಗಳಿಗೂ ದೇವರ ಮಂಟಪಗಳಿಗೂ ಉತ್ಸವಕಾಲದಲ್ಲಿ ಮನೆಬಾಗಲಿಗೂ ಕಟ್ಟುವುದುಂಟು. ಬಾಳೆಹಣ್ಣನ್ನು ರಸಾಯನ ಪಚ್ಚಡಿ ಭಕ್ಷ್ಯ ಇವುಗಳಿಗೆ ಉಪಯೋಗಿಸಿ ತಿನ್ನುವರು. ಬಾಳೆಹಣ್ಣು ಒಂದನ್ನೇ ತಿನ್ನುವುದುಂಟು. ಇದರಿಂದ ಒಂದು ತರಹ ಸಾರಾಯಿಯನ್ನೂ ಇಳಿಸಿ ಪಾನಮಾಡುವರು. ಹಿಂದೂಗಳಲ್ಲಿ ಶುಭಾಶುಭ ಕರ್ಮಗಳಿಗೆ ಕದಳೀಪಂಚಕಗಳೆಂಬ ಹಣ್ಣು ಕಾಯಿ ದಿಂಡು ಎಲೆ ಹೂವುಗಳು ಅವಶ್ಯಕವಾಗಿ ಉಪಯೋಗವಾಗುವವು. ಶುಭ ಕರ್ಮಗಳಿಗೆ ದಿಂಡು ಹೂವುಗಳನ್ನು ಬಿಟ್ಟು ಉಳಿದದ್ದನ್ನೆಲ್ಲಾ ಉಪಯೋಗಿಸುವರು. ಅರಸಿನಬಾಳೆಹಣ್ಣುಗಳನ್ನು ಇಟ್ಟಹೊರ್ತು ಮದುವೆಯು ಉಪಕ್ರಮಿಸಲ್ಪಡುವುದಿಲ್ಲ. ಶ್ರಾದ್ಧಗಳಲ್ಲಿ ಐಮಭಾಗಗಳನ್ನೂ ಉಪಯೋಗಿಸುವರು. ಇಲ್ಲದಿದ್ದರೆ ಸಿಕ್ಕಿದಷ್ಟು ಬಾಗಗಳನ್ನು ಉಪಯೋಗಿಸುವರು. ಪರುಷೆ ಮೊದಲಾದವುಗಳಲ್ಲಿ ಬಾಳೆಹಣ್ಣಿನ ಉಪಯೋಗವು ಹೆಚ್ಚು. ಬಾಳೆಹಣ್ಣಿನ ಮೇಲಣ ಸಿಪ್ಪೆ ಹೂವಿನಮೇಲಣ ಸಿಪ್ಪೆ ಬಾಳೇಯೆಲೆಯ ಹಿಂಭಾಗದ ದಿಂಡು ಇವುಗಳನ್ನು ತೆಗೆದು ಒಣಗಿಸಿಟ್ಟುಕೊಂಡು

ಯಾರಾಗಲಿ, ಲೇಡೀ ಸೂಪರಿಂಟೆಂಡೆಂಟರವರಿಗೆ ಬರೆದುಕೊಂಡರೆ ಅವರ ವಿಷಯವು ಯೋಚಿಸಲ್ಪಡುವುದು.

ಆದರೆ ಅಪ್ಲಿಕೇಷನ್ನಿನಲ್ಲಿ ಸ್ಪಷ್ಟವಾಗಿ ತಿಳಿಸಬೇಕಾದ ವಿಷಯಗಳು ಯಾವ ವಂದರೆ—

(೧) ಜಾತಿ

(೨) ವಯಸ್ಸು

(೩) ವ್ಯಾಸಂಗವಮಾಡಿದ ಸ್ಥಳ

(೪) ಪರೀಕ್ಷೆಯಲ್ಲಿ ತೇರ್ಗಡೆಯಾದ ಯೋಗ್ಯತಾ ಪತ್ರಗಳ ಪ್ರತಿಗ

(೫) ತಮ್ಮ ನಡೆನುಡಿಗಳ ವಿಷಯದಲ್ಲಿ, ಪದವಿಯಲ್ಲಿರತಕ್ಕ ಇಬ್ಬರ ಮನುಷ್ಯರು ಕೊಟ್ಟಿರುವ ಯೋಗ್ಯತಾಪತ್ರಗಳು

(೬) ತಂದೆ ಅಥವಾ ಪೋಷಕನ ಹೆಸರು ಮತ್ತು ಕಸಬು

ಪ್ರತಿಯೊಂದು ಅಪ್ಲಿಕೇಷನ್ನಿನಲ್ಲಿಯೂ ಈ ಆರು ವಿಷಯಗಳೂ ಸಂಕ್ಷೇಪವಾಗಿ ಸೂಚಿಸಿರಬೇಕು.

ಈ ವಿಷಯಗಳಿಲ್ಲದ ಅಪ್ಲಿಕೇಷನ್ನುಗಳನ್ನು ಕುರಿತು ವಿಚಾರಮಾಡುವುದಿಲ್ಲ.

ವಿತಂತುಗಳ ವಿದ್ಯಾಭ್ಯಾಸಕ್ಕೆ ವಿಶೇಷಾನುಕೂಲ್ಯಗಳನ್ನು ಕಲ್ಪಿಸಿರುವುದರಿಂದ ಇಂಗ್ಲೀಷಿನಲ್ಲಾಗಲೀ, ಕನ್ನಡದಲ್ಲಾಗಲೀ ೩ನೇ ಸ್ಟ್ಯಾಂಡರ್ಡ್‌ವರೆಗೆ ಓದಿರತಕ್ಕ ವಿತಂತುಗಳು ವ್ಯಾಸಂಗಮಾಡಲಿಚ್ಛೆಪಟ್ಟು ಅಪ್ಲಿಕೇಷನ್ ಬರೆದುಕೊಂಡರೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವುವರೆಗೂ ಎಂದರೆ ಅವರು ಓದಬೇಕಾದ ೩ ವರುಷಗಳವರೆಗೂ ತಿಂಗಳಿಗೆ ೪, ೫, ಅಥವಾ ೧೦ ರೂಪಾಯಿಗಳ ವೇತನವು ದೊರೆಯುವುದು. ಲೋವರ್‌ಸೆಕಂಡರಿ ಪರೀಕ್ಷೆಯಾದನಂತರ ಮೇಲಿನ ತರಗತಿಗಳಲ್ಲಿ ಓದುವಾಗ ಹೆಚ್ಚಾದ ವೇತನವು ದೊರೆಯುವುದು.

ಈಗ ಈ ಪಾಠಶಾಲೆಯಲ್ಲಿ ಉಪಾಧ್ಯಾಯಿನಿಯರಾಗಿಯೂ, ವಿದ್ಯಾರ್ಥಿನಿಯರಾಗಿಯೂ ಸುಮಾರು ೪೦ ಬ್ರಾಹ್ಮಣ ವಿತಂತುಗಳಿರುವರು. ಇವರ ವಯಸ್ಸು ೬ರ ವರುಷದಿಂದ ೫೦ ರವರೆವಿಗಿರುವುದು. ನಮ್ಮ ಕೆಲಸದಲ್ಲೆಲ್ಲಾ ಅತ್ಯಾಸಕ್ತಿಯನ್ನುಂಟುಮಾಡುವ ಈ ವಿಷಯದಲ್ಲಿ ವಿಶೇಷವಾದ ವಿವರಣೆಯನ್ನು ಮುಂದಿನ (ಮಾರ್ಚಿ ತಿಂಗಳ) ಸಂಚಿಕೆಯಲ್ಲಿ ಪ್ರಕಟಿಸಬೇಕಾಗಿರುವೆವು

ಬಹು ಚಮತ್ಕಾರವಾಗಿರುವಂತೆ ತೋರಿಸಿ ಬಾಲಕರಿಗೆ ಬಹು ಆನಂದವನ್ನುಂಟುಮಾಡಿದ್ದಲ್ಲದೆ ಅಲ್ಲಿ ನೆರೆದಿದ್ದ ದೊಡ್ಡವರಿಗೂ ಆಶ್ಚರ್ಯವನ್ನುಂಟುಮಾಡಿದರು.

ಆದರೆ ಹಿಂದಣಕಾಲದಲ್ಲಿ ರಾಜ್ಯವನ್ನಾಳುತ್ತಿದ್ದ ರಾಜರಲ್ಲಿ ಯಾರೂ ಇಂಥಾ ಚಮತ್ಕಾರವಾದ ನೋಟಗಳನ್ನು ತೋರಿಸಿ ಬಾಲಕರಿಗೆ ವಿದ್ಯಾಭ್ಯಾಸದಲ್ಲಿ ಅಭಿರುಚಿಯನ್ನುಂಟುಮಾಡಿ ವಿದ್ಯಾಭಿವೃದ್ಧಿಗೆ ಸಹಾಯಮಾಡುತ್ತಿದ್ದಂತೆ ಕಾಣುವುದಿಲ್ಲ. ಈಗ ಇಂಥಾ ವಿದ್ಯೆಯನ್ನು ಕಲಿತು ಅಲ್ಲಲ್ಲಿ ಆಗಾಗ್ಗೆ ಬಾಲಕರಿಗೆ ಈ ಮೂಲಕ ಅನೇಕವಿಧ ವಾದ ವಸ್ತುಗಳನ್ನು ಪ್ರತ್ಯಕ್ಷವಾಗಿರುವಂತೆ ತೋರಿಸಿದರೆ ಬಾಲಕರು ಸುಲಭವಾಗಿ ವಸ್ತುಸ್ವರೂಪವನ್ನು ತಿಳಿದು ಜ್ಞಾನವಂತರಾಗುವರಲ್ಲಿ ಸಂಶಯವಿಲ್ಲ ಎಂದು ನಂಬುತ್ತೇನೆ.

ಹೋಬಳಿಸ್ಕೂಲ್‌ಮಾಸ್ಟರ್
ಕಿರುಗಾವಲ್.

ಇಂಗ್ಲಿಷ್ ಓದುವವನ್ನು ಪ್ರೋತ್ಸಾಹಪಡಿಸುವ್ರದಕ್ಕೋಸ್ಕರ, ಮೈಸೂರು ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಯಲ್ಲಿ ಹೈಸ್ಕೂಲ್ ಮತ್ತು ಕಾಲೇಜು ತರಗತಿಗಳಲ್ಲಿ ಓದಲಪೇಕ್ಷಿಸುವ ವಿದ್ಯಾರ್ಥಿನಿಯರಿಗೆ ವೇತನಗಳು ಕೊಡಲ್ಪಡುತ್ತವೆ.

ಇಂಗ್ಲಿಷ್ ಲೋವರ್‌ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಹೈಸ್ಕೂಲ್ ತರಗತಿಗಳಲ್ಲಿ ಓದಲಪೇಕ್ಷಿಸುವ ಉತ್ತಮವರ್ಣದ ಯಾವ ಹಿಂದೂ ವಿದ್ಯಾರ್ಥಿನಿಯೇ ಆಗಲಿ, IV ನೆಯ ಫಾರಂ (ತರಗತಿಯಲ್ಲಿ) ಓದುವಾಗ ತಿಂಗಳಿಗೆ ೧೫ ರೂಪಾಯಿ ವೇತನವನ್ನೂ, V ನೆಯ ಫಾರಂ ಮತ್ತು ಮೆಟ್ರಿಕ್ಯುಲೇಷನ್ ತರಗತಿಗಳಲ್ಲಿ ಓದುವಾಗ ೨೦ ರೂಪಾಯಿ ವೇತನವನ್ನೂ ಪಡೆಯುವಳು.

ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಎಫ್. ಎ. ಪರೀಕ್ಷೆಗೆ ಓದಲಪೇಕ್ಷಿಸುವ ವಿದ್ಯಾರ್ಥಿನಿಯರಿಗೆ ಹೆಚ್ಚಾದವೇತನವು ದೊರೆಯುವುದು.

ಇಂಡಿಯಾದೇಶದಲ್ಲಿ ಕರ್ಣಾಟಭಾಷೆ ದೇಶಭಾಷೆಯಾಗಿರುವ ಯಾವಪ್ರದೇಶದ ವಿದ್ಯಾರ್ಥಿನಿಯರೇ ಆಗಲಿ, ಅಥವಾ ಇಂಗ್ಲಿಷ್ ಭಾಷೆಯಲ್ಲಿ ಬೋಧಿಸಿದುದನ್ನು ಚೆನ್ನಾಗಿ ಗ್ರಹಿಸುವಷ್ಟು ಆ ಭಾಷೆಯಲ್ಲಿ ವ್ಯುತ್ಪತ್ತಿಯನ್ನು ಪಡೆದಿರುವ ವಿದ್ಯಾರ್ಥಿನಿ

ಕದಲ್ಲಿ ಯಾರಾದರೂ ಸ್ನೇಹವನ್ನೂ ಗೌರವವನ್ನೂ ಸಂಪಾದಿಸಿಕೊಳ್ಳಬೇಕಾದರೆ ಎಲ್ಲರಲ್ಲೂ ಯಾವಾಗಲೂ ಕೆಟ್ಟಮಾತುಗಳನ್ನಾಡದೆ ಪ್ರಿಯವಾದ ಮಾತುಗಳನ್ನೇ ಆಡುತ್ತಿರಬೇಕೆಂಬ ಬುದ್ಧಿವಾದವನ್ನು ಬಾಲಕರಿಗೆ ಬೋಧಿಸಲ್ಪಡುವದು. ಈ ಪುಸ್ತಕವು ಚಿಕ್ಕದಾಗಿದ್ದರೂ ಓದುವರಿಗೆ ಚಮತ್ಕಾರವಾಗಿ ಇರುವದು. ಇದು ಧಾರ್ವಾಡ: ಕರ್ಣಾಟಕ ವಿದ್ಯಾವರ್ಧಕ ಸಂಘದಲ್ಲಿ ಬೆಲೆಗೆ ದೊರೆಯುವದು.

ಗ್ರಂಥದ ಸಾರಾಂಶ.

ರಾಜಮಹೇಂದ್ರಪುರದಲ್ಲಿ ಭೀಮಯ್ಯನೆಂಬೊಬ್ಬ ಕರ್ಮಾಕರವನಿದ್ದನು. ಇವನಿಗೆ ಒಬ್ಬಳು ಹೆಂಡತಿಯೂ, ಒಬ್ಬ ಹೆಣ್ಣುಮಗಳೂ ಇದ್ದರು. ಭೀಮಯ್ಯನು ಕಾರಣಾಂತರದಿಂದ ಹೆಂಡತಿಯನ್ನೂ, ಮಗಳನ್ನೂ ತವ್ವರುಮನೆಗೆ ಕಳಿಸಿಕೊಟ್ಟನು. ಆಗ ಮಗಳಿಗೆ ಒಂದು ವರುಷ ತುಂಬಿತ್ತು. ಅಲ್ಲಿ ಇವರಿಬ್ಬರಿಗೂ ಮಾರೀರೋಗವು ತಗಲಿ ಸತ್ತುಹೋದರು. ಈ ಸಮಾಚಾರವನ್ನು ತಿಳಿದ ಭೀಮಯ್ಯನು ಚಿಂತಾಕ್ರಾಂತನಾಗಿ ಕೆಲವು ದಿನಗಳವರೆಗೂ ಊರಿಗೆ ಬಾರದೆ ಎಲ್ಲೋ ಅಲೆಯುತ್ತಿದ್ದು ಕೊನೆಗೆ ದುಃಖವನ್ನು ಕಳೆದುಕೊಳ್ಳುವದಕ್ಕೋಸ್ಕರ ತನ್ನ ಸ್ನೇಹಿತನ ಮಗಳನ್ನು ಕರೆದುಕೊಂಡು ಬಂದು ಪ್ರೇಮದಿಂದ ಸಾಕುತ್ತಿದ್ದನು. ಇವಳೇ ವೀರಭದ್ರನ ತಂಗಿಯಾದ ಕನಕಾಂಗಿಯು. ಎಲ್ಲರೂ ಇವಳನ್ನು ಭೀಮಯ್ಯನ ಮಗಳೆಂದು ತಿಳಿದುಕೊಂಡಿದ್ದರು. ಆದರೆ ಸುಬ್ಬಮ್ಮನ ತಾಯಿಯು ಮಾತ್ರ ಈ ಗುಟ್ಟನ್ನು ತಿಳಿದಿದ್ದಳು. ಅವಳು ತನ್ನ ಮಗಳಿಗೆ ಮಾತ್ರ ಬಹುರಹಸ್ಯವಾಗಿ ಹೇಳಿದ್ದಳು. ಇವಳು ತನ್ನ ಸ್ನೇಹಿತರಾದ ನಾಲ್ಕಾರುಮಂದಿಗೆ ಹೇಳಿದ್ದಳು. ಹೀಗಿರುವಾಗ ಭೀಮಯ್ಯನು ಕನಕಾಂಗಿಗೆ ಮದುವೆಮಾಡಬೇಕೆಂದು ಯೋಚಿಸಿ ಆ ಊರಲ್ಲಿ ಇದ್ದಮಟ್ಟಿಗೆ ಚನ್ನಾಗಿದ್ದ ವಿಶ್ವಕರ್ಮನೆಂಬುವನಿಗೆ ಕೊಟ್ಟು ಮದುವೆಮಾಡಬೇಕೆಂದು ನಿಶ್ಚಯಿಸಿ ಬೇಕಾದ ಸಾಮಗ್ರಿಗಳನ್ನು ಹವಣಿಸಿಕೊಂಡು ವರನನ್ನು ನಿರೀಕ್ಷಿಸುತ್ತಿರಲು, ಅವನ ಮನೆಯ ಎದಿರಿಗೆ ಅಗಸರಕಟ್ಟೆಯಲ್ಲಿ ಬಟ್ಟೆಯೊಗೆಯುತ್ತಿದ್ದ, ಬುಚ್ಚಮ್ಮ, ಶೇಷಮ್ಮ, ವೆಂಕಮ್ಮ, ಸುಬ್ಬಮ್ಮ ಎಂಬ ನಾಲ್ಕುಮಂದಿ ಅಗಸಗಿತ್ತಿಯರೂ ಸೇರಿ ಊರಪ್ರಸ್ತಾಪವನ್ನೆಲ್ಲಾ ಆಡುತ್ತಿರಲು, ಇವರಲ್ಲಿ ಕಲಹಪ್ರಿಯೆಯೆಂದು ಸಾರ್ಥಕವಾದ ಹೆಸರುಳ್ಳ ಸುಬ್ಬಮ್ಮನು ಕನಕಾಂಗಿಯ ಮದುವೆಯ ಮಾತನ್ನೂ ತಾನಾಗಿಯೇ ಎತ್ತಿ ಈ ಮದುವೆ

ಪ್ರಕೃತದಲ್ಲಿ ಈ ಪಾಠಶಾಲೆಯಲ್ಲಿ ದೇಶಭಾಷೆಯಾದ ಕನ್ನಡವಲ್ಲದೆ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳು ಮಾತ್ರ ಕಲಿಸಲ್ಪಡುತ್ತವೆ. ಆದರೆ ಇಲ್ಲಿನ ಉಪಾಧ್ಯಾಯರುಗಳು ತೆಲಗು ಮತ್ತು ತಮಿಳು ಭಾಷೆಗಳಲ್ಲಿಯೂ ತಕ್ಕಮಟ್ಟಿಗೆ ಪರಿಚಯ ಪಟ್ಟವರಾಗಿದಾರೆ ; ಮತ್ತು ಆವಶ್ಯಕವಾದ ಸಂದರ್ಭದಲ್ಲಿ ಆ ಭಾಷೆಗಳಲ್ಲಿಯೂ ಬೋಧಿಸಬಲ್ಲರೆಂಬ ವಿಷಯವನ್ನು ವಾಚಕರು ತಿಳಿಯಬೇಕು.

ಎಲ್ಲಾ. ಎಂ. ಎಂ. ರಿಡ್ಸ್‌ಡೇಲ್
ಲೇಡಿ ಸೂಪರಿಂಟೆಂಡೆಂಟ್.
ಮಹಾರಾಣೀ ಗರಲ್ಸ್‌ಸ್ಕೂಲ್
ಮೈಸೂರು.

ಗ್ರಂಥವಿಮರ್ಶೆ.

ಕಲಹಪ್ರಿಯಾಪ್ರಹಸನವೆಂಬ ಒಂದು ನವೀನ ಗ್ರಂಥವು ಮು॥ ರಾ॥ ರಾ ॥ ಪಂಡಿತ ವೀರೇಶಲಿಂಗಂಪಂತರವರು ತೆನುಗುಭಾಷೆಯಲ್ಲಿ ನಿರ್ಮಿಸಿ ಆಂಧ್ರರಿಗೆ ಮಾತ್ರ ಅದರ ರಸವನ್ನು ಪಾನಮಾಡಿಸುತ್ತಿದ್ದರು. ಇಂಥಾ ರಸಾಸ್ವಾದನೆಯು ನಮ್ಮ ಕನ್ನಡಿಗರಿಗೆ ಇಲ್ಲದಿರುವ ಕೊರತೆಯನ್ನು ಹೋಗಲಾಡಿಸುವೆವಕ್ಕೋಸ್ಕರ ಮು॥ ರಾ॥ ರಾ॥ ರಾಮರಾವ್, ಬೆನಗಲ್ ಬಿ. ಎ. ಯವರು ಸುಲಭವಾದ ಶೈಲಿಯಲ್ಲಿ ಕನ್ನಡಿಸಿ, ಕರ್ಣಾಟಕ ವಿದ್ಯಾವರ್ಧಕ ಸಂಘದ ಹೆಸರಿಂದ ಪ್ರತಿ ಮಾಸದಲ್ಲೂ ಅಚ್ಚುಹಾಕುತ್ತಿರುವ ವಾಗ್ಭೂಷಣವೆಂಬ ಮಾಸಪತ್ರಿಕೆಯಲ್ಲಿ ಒಳ್ಳೇ ಕಾಗದದಲ್ಲಿ ಅಚ್ಚುಮಾಡಿಸಿ ಆ ಸಂಘದವರು ನಮ್ಮಲ್ಲಿಗೆ ವಿಶ್ವಾಸಪೂರ್ವಕವಾಗಿ ಒಂದು ಪುಸ್ತಕವನ್ನು ಕಳಿಸಿದರು. ಅದನ್ನು ಆಮೂಲಾಗ್ರವಾಗಿ ಓದಿನೋಡಲು, ಇದರ ಭಾಷೆಯು ನಮ್ಮ ದೇಶದ ಭಾಷೆಗೆ ಅಲ್ಲಲ್ಲಿ ಸ್ವಲ್ಪಸ್ವಲ್ಪ ವ್ಯತ್ಯಾಸ ತೋರುತ್ತಿದ್ದರೂ, ಇದರಿಂದ ಲೋ

ನು ಜಿಪಣ ಹೆಸರು ಪಡೆಯುದೇಕೆಂದು ತನ್ನ ಸ್ಥಲಗಕ್ಕೆ (ದರಬಾರ್‌ಗೆ) ಬಂದ ವಿದ್ವಾಂಸರಿಗೆಲ್ಲಾ ಬೇಕಾದಷ್ಟು ಮರ್ಯಾದೆ (ಖಿಲ್ಲತ್) ಗಳನ್ನು ಕೊಟ್ಟು ಕಳಿಹಿಸುತ್ತಿದ್ದನು. ಒಡನೆಯೇ, ಅವರ ಹಿಂದುಗಡೆಯೇ ಗುಟ್ಟಾಗಿ ಹೋಗಿ, ದಾರಿ ಕಾದು, ತಾನು ಕೊಟ್ಟದ್ದನ್ನೂ, ಅವರಲ್ಲಿದ್ದುದನ್ನೂ ಹೊಡೆದು ಕಿತ್ತುಕೊಂಡು ಬರುವಂತೆ ರಾಹುತರನ್ನು ಕಳಿಸುತ್ತಿದ್ದನು. ಹೀಗೆಯೇ ಅನೇಕರಿಗೆ ಖಿಲ್ಲತ್ತು ಕೊಟ್ಟದ್ದೂ ಆಯಿತು, ಕಿತ್ತುಕೊಂಡದ್ದೂ ಆಯಿತು. ಇವನೇ ಈರೀತಿ ಮಾಡಿಸುವನೆಂದು ತಿಳಿಯದೆ, ಇವನು ಬಹಳ ಚೆನ್ನಾಗಿ ಮರ್ಯಾದೆ ಮಾಡುವನೆಂದು ಅನೇಕಮಂದಿ ವಿದ್ವಾಂಸರು ಬರುತ್ತಿದ್ದರು. ಒಂದುದಿನ ಇವನ ದರಬಾರಿಗೆ ಈ ವೋಸವನ್ನು ತಿಳಿದ ಒಬ್ಬ ಹಾಸ್ಯಗಾರನು ವಿದ್ವಾಂಸ ವೇಷವನ್ನು ಹಾಕಿಕೊಂಡು ಬಂದು, ದೊರೆಗೆ ಸಂತೋಷ ಪಡಿಸಿದನು. ದೊರೆಯು ಎಂದಿನಂತೆ ' ಈ ವಿದ್ವಾಂಸನಿಗೆ—ಶಾಲು ಕೊಡಿ, ತೋಡೆ ಹಾಕಿ, ಸಾವಿರರೂಪಾಯಿ ಕೊಡಿ, ತುಂಬಾ ಮರ್ಯಾದೆ ಮಾಡಿ ' ಎಂದು ಹೇಳಿದನು. ಹಾಸ್ಯಗಾರನು ಇವೆಲ್ಲವನ್ನೂ ತೆಗೆದುಕೊಂಡು ದೊರೆಗೆ ಕೈಮುಗಿದು, ' ಸ್ವಾಮಿ ! ನಾನು ದೂರದೇಶ ಹೋಗತಕ್ಕವನು; ಒಂದು ಕುದುರೆ ಅಪ್ಪಣೆಯಾಗಬೇಕು ' ಎಂದು ಕೇಳಲು ದೊರೆಯು, ಎಲ್ಲವೂ ಬರುವುದೆಂದು ಕುದುರೆಯನ್ನೂ ಕೊಡಿಸಿದನು. ಈ ಹಾಸ್ಯಗಾರನು ಕೊಟ್ಟ ಖಿಲ್ಲತ್ತುಗಳನ್ನು ಕಟ್ಟಿ ಗಂಟನ್ನು ಹೆಗಲಮೇಲೆ ಹಾಕಿ ಶಾಲು ತಲೆಗೆ ಕಟ್ಟಿಕೊಂಡು, ಕುದುರೆಯಮೇಲೆ ಹತ್ತಿ ಹಿಂದುಮುಂದಾಗಿ ಕೂತನು. ಆಗ ಎಲ್ಲರೂ ನಗಲು, ಅಲ್ಲಿಯೇ ಕೂತಿದ್ದ ಧೊರೆಯು ಇದೇನೆಂದು ಕೇಳಲು, ಹಾಸ್ಯಗಾರನು ' ಸ್ವಾಮಿ ! ನನ್ನ ಹಿಂದುಗಡೆ ಬರುವ ತಮ್ಮ ಭಂಟರನ್ನೇ ಕಾದು ಕೂತಿರುತ್ತೇನೆ ' ಅವರು ಬಂದೊಡನೆ, ಪೆಟ್ಟುತಿನ್ನಲಾರದೆ, ಇದನ್ನೆಲ್ಲಾ ಕೊಟ್ಟು ಇಳಿದು ಹೋಗೋಣವೆಂದು ಈರೀತಿ ಕೂತಿರುತ್ತೇನೆ, ಮತ್ತೇನೂ ಚಿತ್ತಕ್ಕೆ ಆಯಾಸಕೆಲಸವಿಲ್ಲ ! ಎಂದರು. ಅದಕ್ಕೆ ದೊರೆಯು ನಾಚಿಕೊಂಡು, ತಲೆ ತಗ್ಗಿಸಿದನು. ತರುವಾಯ ಧೊರೆಯು ಕೊಡುವುದೂ ಕಡಮೆಯಾಯಿತು. ವಿದ್ವಾಂಸರು ಬರುವುದೂ ಇಲ್ಲವಾಯಿತು.

ನಡಯುವಾದೀ ಇಲ್ಲ. ಒಂದುವೇಳೆ ನಡೆದರೂ ದಂಪತಿಗಳು ಸುಖವಾಗಿರಲಾರರು ಎಂದು ಎಲ್ಲರಿಗೂ ಒಂದು ಕಳಂಕವನ್ನು ಹುಟ್ಟಿಸಿ, ಮದುವಣಿಗನಾದ ವಿಶ್ವಕರ್ಮನೂ ಕನಕಾಂಗಿಯೂ ಸೇರಿದಕಾಲದಲ್ಲಿ ಅವರವರಿಗೆ ವೈರಸ್ಯವನ್ನುಂಟುಮಾಡಿ ವಿವಾಹಕ್ಕೆ ವಿಘ್ನವಾಡಿದ್ದಲ್ಲದೆ ತನ್ನ ತಂಗಿಯಾದ ಕನಕಾಂಗಿಯನ್ನು ನೋಡುವದಕ್ಕೆ ಬಂದ ವೀರ ಭದ್ರನಿಗೂ ಕನಕಾಂಗಿಯಲ್ಲಿ ವಿಶ್ವಾಸ ತಪ್ಪುವಂತೆ ಮಾಡಿ ಎಲ್ಲರಿಗೂ ದ್ವೇಷಿಯಾಗಿ

ಆದರೂ ಭೀಮಯ್ಯ, ವೀರಭದ್ರ, ಕನಕಾಂಗಿ, ವಿಶ್ವಕರ್ಮ ಈ ನಾಲ್ವರೂ ವಿವೇಕಿಗಳಾದುದರಿಂದ ಸ್ವಲ್ಪಕಾಲದಪರೆಗೂ ಸುಬ್ಬಮ್ಮನ ಮಾತಿನಿಂದ ವೈಮನಸ್ಯವನ್ನು ಹೊಂದಿದ್ದರೂ ಪುನಃ ಎಲ್ಲರೂಸೇರಿ ಸಹವಾಸದೋಷದಿಂದುಂಟಾದ ದ್ವೇಷವನ್ನು ತ್ಯಜಿಸಿ ಸಹಜಪ್ರೇಮದಿಂದ ಎಲ್ಲರೂ ಒಟ್ಟಾಗಿ ಸೇರಿರಲು, ಸುಬ್ಬಮ್ಮನು ಅದನ್ನು ನೋಡಿ ಸಹಿಸಲಾರದೆ ತಿರಿಗಿ ಇವರ ಸ್ನೇಹಭಂಗವನ್ನು ಮಾಡಬೇಕೆಂದು ಯತ್ನಿಸುತ್ತಿರಲು, ಆ ಕಾಲಕ್ಕೆ ಆ ಗ್ರಾಮಸ್ಥರು ಕೆಲವರು ತಮತಮಗೆ ಬೇಕಾದಕಡೆಯಲ್ಲಿ ವಿಶ್ವಾಸವನ್ನು ತಪ್ಪಿಸಿ ಜಗಳವನ್ನು ತಂದುಹಾಕಿದುದಕ್ಕೆ ತಕ್ಕ ಶಿಕ್ಷೆಯನ್ನು ಮಾಡಬೇಕೆಂದು ಸುಬ್ಬಮ್ಮನನ್ನೇ ಬಯ್ಯುತ್ತ ಹುಡುಕಿಕೊಂಡುಬಂದು ಎಲ್ಲರೂ ಆಳಿಗೊಂದು ಗುದ್ದಿನಂತೆ ಅವಳನ್ನು ಹೊಡೆದು ತಳ್ಳಿದರು. ಆಗಲೆ ಇವಳಿಗೆ ಕಲಹದ ಮಾರಿ ಎಂಬ ಬಿರುದೂ ಬಂದಿತು. ಆದುದರಿಂದ ನಾವು ಲೋಕದಲ್ಲಿ ಸ್ನೇಹವನ್ನೂ, ಗೌರವವನ್ನೂ ಸಂಪಾದಿಸಿಕೊಳ್ಳಬೇಕಾದರೆ ಯಾರ ವಿಷಯದಲ್ಲೂ ಕೆಟ್ಟಮಾತುಗಳನ್ನಾಡಬಾರದು. ಒಳ್ಳೆಯಮಾತನ್ನು ಅಡುವದಕ್ಕೆ ಇಷ್ಟವಿಲ್ಲದೆ ಇದ್ದರೂ ಕೆಟ್ಟದ್ದನ್ನಾಡುವದಕ್ಕಿಂತ ಸುಮ್ಮನಿರುವದೇ ಲೇಸು.

ಕಥೆ.

ಮೋಸಗಾರ ದೊರೆಯನ್ನೂ, ಹಾಸ್ಯಗಾರನನ್ನೂ ಕುರಿತದ್ದು.

ಒಂದು ಸಣ್ಣದೇಶವನ್ನು ಒಬ್ಬ ದೊರೆಯು ಆಳುತ್ತಿದ್ದನು. ದೊರೆಗೆ ತಾನು ಬಹಳ ಧಾರಾಳಿಯೆಂದು ಹೆಸರು ಪಡೆಯಬೇಕೆಂಬ ಆಸೆ ಹೆಚ್ಚಾಗಿತ್ತು. ಆದರೆ ಇವ

ವಿದ್ಯಾದಾಯಿನಿ

ಭಾಗ ೭.] ಮಾರ್ಚಿ ೧೮೯೯. [ಸಂಚಿಕೆ ೩

ಎಡಿಟರವರ ನೋಟ್ಸ್.

ನಮ್ಮ ದೇಶದಲ್ಲೂ ಮದ್ರಾಸ್ ಆಧಿಪತ್ಯದಲ್ಲೂ ಸಹ ಈಗ ಕಲವು ಸಂವತ್ಸರಗಳಿಂದ ಲೋವರ್ ಸೆಕೆಂಡರಿ ಪರೀಕ್ಷೆಯು ನಡೆಯುತ್ತಿರುವುದು ಎಲ್ಲರಿಗೂ ತಿಳಿದಿದೆಯಷ್ಟೆ. ಈ ಪರೀಕ್ಷೆಯು ಜತೆಗೆ ಇನ್ನೂ ದೊಡ್ಡ ಪರೀಕ್ಷೆಗಳು ಅನೇಕನವಾಗಿರುವವು. ಮತ್ತು ಈಚೆಗೆ ನಡೆಯುತಲಿರುವ ವಿದ್ಯಾಭ್ಯಾಸದಂತೆ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದೇ ಅತ್ಯಂತ ಮುಖ್ಯವೆಂದು ಎಣಿಸುವುದು ವಾಡಿಕೆಯಾಗಿದೆ. ಇಷ್ಟುವರೆಗೆ ಪರೀಕ್ಷೆಗಳಿಗೆ ಪ್ರಾಮುಖ್ಯತೆಯನ್ನು ಕಲ್ಪಿಸದುದು ಸರಿಯಲ್ಲವೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಆದರೆ ಪ್ರಕೃತದಲ್ಲಿ ಪ್ರೌಢವಿದ್ಯಾಭ್ಯಾಸ ಮಾಡಿದವರೆಂದು ನಿರ್ಧರಿಸುವುದಕ್ಕೆ ಬೇರೆ ಮಾರ್ಗಗಳು ಸುಲಭವಾಗಿಲ್ಲದುದರಿಂದ ಆ ವಿಷಯದಲ್ಲಿ ಪರೀಕ್ಷೆಗಳನ್ನು ಇಡತಕ್ಕದ್ದೇನೋ ಆವಶ್ಯಕವೆಂದು ತೋರುತ್ತೆ. ಇದಲ್ಲದೆ ಪ್ರೌಢವಿದ್ಯಾಭ್ಯಾಸ ಮಾಡುವವರು ಪ್ರಾಪ್ತವಯಸ್ಕರಾಗಿರುವುದರಿಂದ ಅಂಥವರಿಗೆ ಪರೀಕ್ಷೆಗಳನ್ನು ಇಡುವುದರಿಂದ ವಿಶೇಷವಾದ ಕೆಡಕು ಉಂಟಾಗಲಾರದು. ಆದರೆ ಇದೇ ಮಾರ್ಗವನ್ನೆನು ಸರಿಸಿ ಚಿಕ್ಕಮಕ್ಕಳ ಯೋಗ್ಯತೆಯನ್ನು ತಿಳಿಯತಕ್ಕದ್ದು ಯುಕ್ತವಲ್ಲ. ಈಗಿನ ಏಪರ್ಾಡಿನಂತೆ ಲೋವರ್ ಸೆಕೆಂಡರಿ ಪರೀಕ್ಷೆಗೆ ಬರತಕ್ಕವರು ಹದಿಮೂರು, ಹದಿನಾಲ್ಕು ವರ್ಷದವರಾಗಿರಬೇಕು. ಇದು ಸಹ ಚಿಕ್ಕವಯಸ್ಸಿನ ಸದ್ಯದಲ್ಲಿ ಅನುಕೂಲ್ಯವುಳ್ಳವರೆ ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಮಾಡುವುದರಿಂದ ಬಹಳ ಚಿಕ್ಕವಯಸ್ಸಿನಲ್ಲೇ ವಿದ್ಯೆಯನ್ನು ಆರಂಭಿಸುವರು. ಇಂಥವರು ಕೆಲವು ವರ್ಷಗಳಲ್ಲೇ ಅಂದರೆ ಹತ್ತು, ಹನ್ನೊಂದು ವಯಸ್ಸಾಗುವುದರೊಳಗೆ ಪರೀಕ್ಷೆಗೆ ಸಿದ್ಧರಾಗುವರು. ಈ ವಯಸ್ಸಿನವ

ಶು॥ ರಾ॥ ವಿದ್ಯಾದಾಯಿನಿ ಎಡಿಟರವರ ಸನ್ನಿಧಾನಂಗಳಿಗೆ.

ಸಾ॥ವಿ॥ ೧೮೯೯ ನೇ ಡಿಸಂಬರ್ ತಿಂಗಳ ವಿದ್ಯಾದಾಯಿನಿಯಲ್ಲಿ ಪ್ರಕ

೪.

ನಾಲ್ಕಕ್ಷರದ ಶಬ್ದ.

೧— ೩ ಮಲ = ಕೊಳೆ.

೨—೩ ಲಯ = ನಾಶ.

೧— ೩ ಮಯ = ಮಯನೆಂಬ ದೇವತೆಗಳ ಬಡಗಿ.

೩— ೧ ಯಮ = ಧರ್ಮಕರ್ತ.

೪— ೨ ಜಲ = ನೀರು.

೪— ೩ ಜಯ = ಶುಭಕರ

ಮಲಯಜ ?? ಶ್ರೀಗಂಧವೃಕ್ಷ.

ಆರ್. ವಂಕಟನಾಮಿ.

೫ ನೇ ಕ್ಲಾಸ್ ವಿದ್ಯಾರ್ಥಿ

ಎ. ವಿ. ಸ್ಕೂಲ್,

ಮುಳಬಾಗಲ

ಯವನ್ನು ಕುರಿತು ಉಪನ್ಯಾಸವನ್ನಾಡಿದರು. ಪ್ರತಿದಿನದಲ್ಲೂ ಬಾಲಕರು ಉಪಾಧ್ಯಾಯರ ಬಳಿಯಲ್ಲಿ ಸ್ವಲ್ಪಕಾಲ ಮಾತ್ರವೇ ಇರಬಹುದು; ಮಿಕ್ಕಕಾಲದಲ್ಲೆಲ್ಲಾ ತಂದೆ ತಾಯಿಗಳ ಪತ್ತಿರತಾನೇ ಅವರಿರಬೇಕು. ಉಪಾಧ್ಯಾಯರ ಮತ್ತು ತಂದೆ ತಾಯಿಗಳ ಉದ್ದೇಶಗಳು ಬೇರೆಬೇರೆಯಾದ ಪಕ್ಷದಲ್ಲಿ ಹುಡುಗರ ಅಭಿವೃದ್ಧಿಯು ಹ್ಯಾಗೆ ತಾನೇ ಸಿದ್ಧಿಸೀತು! ಅದುದರಿಂದ ತಂದೆ ತಾಯಿಗಳು ಉಪಾಧ್ಯಾಯರ ಪ್ರಯತ್ನಕ್ಕೆ ಅನುಸಾರವಾಗಿ ತಾವೂ ಕೆಲಸವಾಡಿ ತಮ್ಮ ಮಕ್ಕಳನ್ನು ಮುಂದಕ್ಕೆ ತರಬೇಕು. ಮಿಸ್‌ವ್ಯಾನಿಂಗ್‌ರವರು ಇನ್ನೂ ಅವಿವಾಹಿತರು. ಇವರು ಈ ದೇಶದ ಅಭಿವೃದ್ಧಿಯ ವಿಷಯವಾಗಿ ಇಷ್ಟು ಕೆಲಸವಾಡುವದಕ್ಕಾಗಿ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು.

***

ಕಳೆದ ನವಂಬರ್ ಲಾಗಾಯಿತು ಮೈಸೂರಿನಲ್ಲಿ ಪ್ಲೇಗ್ ರೋಗವು ಹರಡುವುದಕ್ಕೆ ಆರಂಭಿಸಿದುದರಿಂದ ಡಿಶಂಬರ್ ತಿಂಗಳಲ್ಲಿ ಮುಚ್ಚಿದ ಸ್ಕೂಲುಗಳನ್ನು ಇದುವರೆಗೂ ತೆರೆದಿಲ್ಲ. ಬೊಂಬಾಯಿನಲ್ಲಿ ಈಗ ಮೂರುವರ್ಷದಿಂದಲೂ ತಿರುತಿರುಗಿ ಕಾಣಿಸಿಕೊಂಡಿರುವಂತೆ ಈ ವ್ಯಾಧಿಯು ದುರದೃಷ್ಟವಶಾತ್ ಈ ದೇಶದಲ್ಲೂ ಹ್ಯಾಗೆಯೇ ಆದರೆ ಅದರಿಂದ ಈಗ ಏಕರೀತಿಯಾಗಿ ನಡೆಯುತ್ತಲಿರುವ ವಿದ್ಯಾಭಿವೃದ್ಧಿಗೆ ದೊಡ್ಡ ಕುಂದಕ್ಕೆ ಉಂಟಾಗುವುದು ದೇಶಕ್ಕೆ ಸಂಭವಿಸಿದ ಅನಿಷ್ಟದಿಂದ ವಿದ್ಯಾಭ್ಯಾಸಕ್ಕೆ ಕೊರತೆಯಾಗುವುದೆಂಬುದಕ್ಕೆ ಇದು ಒಂದು ದೃಷ್ಟಾಂತ.

ಕಿಂಡರ್‌ಗಾರ್ಟ್ನ್.

[ಮದರಾಸಿನಲ್ಲಿ ಸ್ಕೂಲ್ ಇನ್‌ಸ್ಪೆಕ್ಟ್ರೆಸ್ ಆಗಿರುವ ಮಿಸೆಸ್ ಬ್ರಾಂಡ್‌ರವರು ಮದರಾಸ್ ಉಪಾಧ್ಯಾಯ ಸಂಘದವರ ಮುಂದೆ ಮಾಡಿದ ಉಪನ್ಯಾಸದ ಸಾರಾಂಶ]

ನೂತನವಾದ ವಿದ್ಯಾಭ್ಯಾಸವು ಸರಿಯಾಗಿ ನೆರವೇರಬೇಕಾದರೆ

ರಿಗೆ ಹೀಗೆ ಪರೀಕ್ಷೆಗಾಗಿ ಕ್ಲೇಶಪಡಿಸತಕ್ಕದ್ದು ಸುತರಾಂ ಸರಿಯಲ್ಲವೆಂದು ಮದ್ರಾಸ್ ಪಟ್ಟಣದ ವಿದ್ಯಾಭಿವೃದ್ಧಿಗಳಲ್ಲಿ ಅನೇಕರಿಗೆ ಈಚೆಗೆ ತೋರಿದೆ. ಅಲ್ಲಿಯ ಗವರ್ನರ್ ಸಾಹೇಬರವರೂ ಕಳೆದ ಡಿಶಂಬರ್ ತಿಂಗಳಲ್ಲಿ ನಡೆದ ಸಭೆಯೊಂದರಲ್ಲಿ ಈ ವಿಷಯವಾಗಿ ಯುಕ್ತಾಯುಕ್ತವನ್ನು ವಿಚೇಚಿಸಿ ಶೀಘ್ರದಲ್ಲೇ ತೀರ್ಮಾನವನ್ನು ಸರ್ಕಾರದವರು ಮಾಡುವೆಂದು ತಿಳಿಸಿದರು. ಈ ವಿಷಯವಾಗಿ ಆವ ತೀರ್ಮಾನವನ್ನು ನಮ್ಮ ವಾಚಕರಿಗೆ ಕೂಡ್ಲೆ ಸೂಚಿಸುವೆವು.

***

ಈಗ ಸ್ವಲ್ಪ ದಿವಸಗಳ ಹಿಂದೆ ಮೈಸೂರು ವಿದ್ಯಾಭ್ಯಾಸದ ಇಲಾಖೆಗೆ ಸೇರಿದವರಾಗಿ ಕಾಲೇಜ್‌ಗಳಲ್ಲೂ ಮತ್ತು ಕೆಲವು ಹೈಸ್ಕೂಲುಗಳಲ್ಲೂ ಚೆನ್ನಾಗಿ ಕೆಲಸಮಾಡುತ್ತಿರುವವರಿಗೆ ಒಳ್ಳೆ ಬಡತಿಯನ್ನು ಸರಕಾರದವರು ಕೊಟ್ಟಿರುತ್ತಾರೆ. ಇನ್‌ಸ್ಪೆಕ್ಟರ್ ಜನರಲ್‌ರವರಾದ ಮೆ॥ ಥಾಭಾಸಾಹೇಬರಿಗೆ ೨೦೦ ರೂ॥ ಬಡತಿಯಾಗಿದೆ ಎಂದು ತಿಳಿಸಲು ಸಂತೋಷಿಸುವೆವು. ಇವರು ವಿದ್ಯಾಭ್ಯಾಸದ ಇಲಾಖೆಗೆ ಮುಖಂಡರಾದಂದಿನಿಂದ ಈಚೆಗೆ ದೇಶಭಾಷೆಯ ಪುರೋಭಿವೃದ್ಧಿಗೆ ಮಾಡಿರತಕ್ಕ ಸಹಾಯವನ್ನು ಕಾರಂತು ಯೋಚಿಸಿದರೆ ಈ ವಿಧವಾದ ಸರ್ಕಾರದ ಪ್ರೋತ್ಸಾಹಕ್ಕೆ ಇವರು ಸಂಪೂರ್ಣವಾಗಿ ಅರ್ಹರೆಂದು ಚೆನ್ನಾಗಿ ಗೊತ್ತಾಗುವುದು. ಇಂಗ್ಲಿಷ್ ಮತ್ತು ಕನ್ನಡ ಸ್ಕೂಲುಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯರಿಗೂ ಗ್ರೇಡ್‌ಗಳನ್ನು ಮಾಡಿ ಯೋಗ್ಯರಿಗೆ ಬಡತಿಕೊಡುವರೆಂದು ಕೇಳುವೆವು. ಇದು ಎಷ್ಟುಮಟ್ಟಿಗೆ ಆವಶ್ಯಕವೆಂಬುದನ್ನು ನಾವು ಪದೇಪದೇ ಈ ಪತ್ರಿಕೆಯಲ್ಲಿ ತಿಳಿಸಿದ್ದೇವೆ.

***

ಹಿಂದೂದೇಶದ ವಿದ್ಯಾಭ್ಯಾಸಾಭಿವೃದ್ಧಿಗೆ ಸಹಾಯಕವಾದ ಸಭೆಯೊಂದು ಇಂಗ್ಲೆಂಡ್ ದೇಶದಲ್ಲಿ ಬಹಳ ವರ್ಷಗಳಿಂದಿದೆ. ಈ ಸಭೆಗೆ ಕಾರ್ಯದರ್ಶಿಯರಾದ ವಿ.ಸ್ ಟೈಯ್ಯನಿಂಗ್‌ರವರು ಕೆಲವು ವರ್ಷಗಳ ಹಿಂದೆ ಇಲ್ಲಿಗೆ ಬಂದು ಇಲ್ಲಿನ ವಿದ್ಯಾಭ್ಯಾಸಕ್ರಮವನ್ನು ಯಥಾಸ್ಥಿತವಾಗಿ ತಿಳಿದುಕೊಂಡು ತಮ್ಮ ಅಭಿಪ್ರಾಯವನ್ನೂ ತಿಳಿಸಿ ಹೋಗಿದ್ದವರು ಪುನಃ ಈ ದೇಶಕ್ಕೆ ಬಂದಿರುತ್ತಾರೆ. ಇವರು ಕೆಲವು ದಿವಸಗಳ ಕೆಳಗೆ ಮದ್ರಾಸಿನಲ್ಲಿ ಬಾಲಕರ ವಿದ್ಯಾಭ್ಯಾಸವು ಸಂಪೂರ್ಣವಾಗಿ ನೆರವೇರಬೇಕಾದರೆ ಉಪಾಧ್ಯಾಯರೂ, ಬಾಲಕರ ತಂದೆತಾಯಿಗಳು ಏಕಮನಸ್ಕರಾಗಿ ಪ್ರಯತ್ನಪಡಬೇಕೆಂಬ ವಿಷ

ಕಿಂಡರ್‌ಗಾರ್ಟ್ನ್ ವಿಷಯವಾಗಿ ಫ್ರೋಬೆಲ್ ಎಂಬಾತನಿಗೆ ಇದ್ದ ಅಭಿಪ್ರಾಯವು ಆ ಮಾತಿನ ಅರ್ಥದಿಂದ ಸ್ಪಷ್ಟವಾಗುವುದು. ಕಿಂಡರ್‌ಗಾರ್ಟ್ನ್ ಅಂದರೆ ಮಕ್ಕಳ ತೋಟ ಮಕ್ಕಳೇ ಸಸಿಗಳು. ಉಪಾಧ್ಯಾಯನೇ ತೋಟಗಾರ. ತೋಟಗಾರನು ಸಸಿಗಳನ್ನು ಬೆಳೆಯುವುದಕ್ಕೆ ಅನುಕೂಲವಾದ ಕಡೆ ನೆಡುವನು; ಅವುಗಳ ಅಭಿವೃದ್ಧಿಗೆ ಬೇಕಾದ ಪದಾರ್ಥಗಳನ್ನೆಲ್ಲಾ ಹೊಂದಿಸಿಕೊಟ್ಟು ಅವುಗಳ ನಾಶಕ್ಕೆ ಅವಕಾಶ ಕೊಡದಂತೆ ಕಾಪಾಡುವನು. ಕಿಂಡರ್‌ಗಾರ್ಟ್ನ್ ಉಪಾಧ್ಯಾಯನು ಇದರಂತೆಯೇ ನಡೆಯಬೇಕು. ಮಕ್ಕಳ ಸ್ವಾಭಾವಿಕವಾದ ಬೆಳೆವಳಿಕೆಗೆ ತಕ್ಕ ಅನುಕೂಲ್ಯಗಳನ್ನು ಕಲ್ಪಿಸುತ್ತಾ ಇದ್ದು ಅವರ ದೇಹದಾರ್ಢ್ಯವೇ ಆಗಲಿ ತಿಳುವಳಿಕೆಯೇ ಆಗಲಿ ನಡತೆಯೇ ಆಗಲಿ ಸ್ವಲ್ಪವೂ ಕೆಡದಂತೆ ಸಂರಕ್ಷಿಸಬೇಕು ಆರೋಗ್ಯಶಾಲಿಯಾದ ಮಗುವು ಯಾವಾಗಲೂ ಸಂತೋಷವುಳ್ಳದ್ದಾಗಿಯೂ ಚಟುವಟಿಕೆಯುಳ್ಳದ್ದಾಗಿಯೂ ಇರುವುದು. ಸದಾ ತನ್ನ ಪಂಚೇಂದ್ರಿಯಗಳ ಮೂಲಕವಾಗಿಯೂ, ತನಗಿಂತ ದೊಡ್ಡವರಾದವರನ್ನು ಪದೇಪದೇ ಪ್ರಶ್ನೆ ಕೇಳುವುದರಿಂದಲೂ ಜ್ಞಾನಾಂಶಗಳನ್ನು ಸಂಪಾದಿಸುತಲೇ ಇರುವುದು. ಬೇರೆಬೇರೆಯಾಗಿರುವ ಪದಾರ್ಥಗಳನ್ನು ತೆಗೆದುಕೊಂಡು ಅವುಗಳನ್ನು ಒಟ್ಟಾಗಿ ಸೇರಿಸುವುದಕ್ಕೆ ಪ್ರಯತ್ನಪಡುವುದರಿಂದ ತನಗೆ ಕೆಲಸವಾಡುವುದರಲ್ಲಿರುವ ಆಸಕ್ತಿಯನ್ನು ತೋರಿಸುವುದು. ತಾನು ನೋಡಿದುದನ್ನೂ ಕೇಳಿದುದನ್ನೂ ಅನುಕರಿಸುವುದು. ಇತರ ಮಕ್ಕಳೊಡನೆ ಸೇರುವುದಕ್ಕೂ ಬೆಕ್ಕು, ಗಿಣಿ, ಮುಂತಾದವುಗಳೊಡನೆ ಆಡುವುದಕ್ಕೂ ಆಶೆಪಡುವುದು ತನ್ನ ಸಹವಾಸಕ್ಕೆ ಅನುಗುಣವಾಗಿ ಕೆಟ್ಟದ್ದನ್ನೋ ಒಳ್ಳೆದನ್ನೋ ತನ್ನಲ್ಲಿ ವೃದ್ಧಿಗೊಳಿಸುವೆಂಬುದೂ ಈ ಕಾಲದಲ್ಲಿ ನಮಗೆ ವ್ಯಕ್ತವಾಗುವುದು. ಮೇಲೆಹೇಳಿದ ಮಕ್ಕಳ ಸ್ವಭಾವಕ್ಕೆ ಕಿಂಡರ್‌ಗಾರ್ಟ್ನ್ ಕ್ರಮವು ತಕ್ಕದ್ದಾಗಿದೆ. ಅದರಲ್ಲಿ ಮಕ್ಕಳ ಚಟುವಟಿಕೆಗೆ ಡ್ರಿಲ್, ಆಟಗಳು ಇವೆ; ಅವರ ಕೌತುಕಕ್ಕೆ ಪದಾರ್ಥಗಳ ಪರೀಕ್ಷೆಣೆ ಇದೆ. ಚಿತ್ರ ಬರೆಯುವುದು, ವಿಧವಿಧವಾದ ಕರಣಿಗಳನ್ನು ಮಾಡುವುದು ಬಾಲಕರ ಅನುಕರಣ ಶಕ್ತಿಗೂ ಕೆಲಸ ಮಾಡಬೇಕೆಂಬ ಆಶೆಗೂ ಸರಿಯಾಗಿದೆ ಇತರ ಮಕ್ಕಳುಗಳೊಡನೆ ಸೇರುವುದೂ ಬೆಕ್ಕು, ಗಿಣಿ ಮುಂತಾದವುಗಳನ್ನು ಸಾಕುವುದೂ ಮಕ್ಕಳ ಸ್ವಭಾವಕ್ಕೆ ಅನುಗುಣವಾದುದೇ. ಆದಿಯಿಂದ ಕಥೆಗಳ ಮೂಲಕವಾಗಿಯೂ ಗಾನಗಳ ಮೂಲಕವಾಗಿಯೂ ನೀತ್ಯುಪದೇಶಕವಾಗಿ ಅಭಿನವ್ಯಾಯಗಳು ಅವರ ಮನಸ್ಸಿನಲ್ಲಿ ನೆಲೆಗೊಳ್ಳುವವು.

ಗಾರ್ಟ್ನ ಮಾರ್ಗವನ್ನು ಕ್ರಮವಾಗಿ ಅನುಸರಿಸುವುದು ಅವಶ್ಯಕ. ಇದರಿಂದ ಬಾಲ ವಿದ್ಯಾಭ್ಯಾಸಕ್ಕೆ ಸಾಫ್ಷಾತ್ತಾಗಿ ಪ್ರಯೋಜನ ಉಂಟಾಗುವುದು. ಕಿಂಡರ್‌ಗಾರ್ಟ್ನ ನ್ನು ಅಭ್ಯಸಿಸಿದವರ ತ್ವಗಿಂದ್ರಿಯವು ಮತ್ತು ನೇತ್ರೇಂದ್ರಿಯಗಳು ಸಂಸ್ಕಾರವನ್ನು ಹೊಂದುವುವು. ಆದರಿಂದ ಅವರು ಲೋಕವ್ಯಾಪಾರಕ್ಕೆ ಬೇಕಾದ ಶಕ್ತಿಯನ್ನು ಪಡೆಯುವರು. ಪ್ರೌಢವಿದ್ಯಾಭ್ಯಾಸಕ್ಕೂ ಸಹ ಈ ಮಾರ್ಗದಿಂದ ಪ್ರಯೋಜನವುಂಟು. ಕಿಂಡರ್‌ಗಾರ್ಟ್ನಿನಲಿ ಮುಖ್ಯವಾಗಿ ವಿಷಯಗಳನ್ನು ಉಪಾಧ್ಯಾಯರು ತಾವಾಗಿ ಹೇಳದೆ ಬಾಲಕರು ತಾವೇಕಂಡು ಹಿಡಿಯುವಂತೆ ಮಾಡಬೇಕು. ಇದೇ ಕ್ರಮವನ್ನು ನು ಸರಿಸಿ ಮುಂದಿನ ವಿದ್ಯಾಭ್ಯಾಸವನ್ನು ನಡೆಯಿಸುವುದು ಒಳ್ಳೀದು. ಹೀಗೆ ಹೇಳಿ ಕೊಟ್ಟ ವಿಷಯಗಳು ಬಾಲಕರಿಗೆ ಚೆನ್ನಾಗಿ ಮಂದಟ್ಟಾಗಿ ಬಹಳಕಾಲ ಜ್ಞಾಪಕ ನಿಲ್ಲುವುವು. ಮತ್ತು ಬಾಲಕರು ತಾವಾಗಿಯೇ ಯೋಚಿಸಬೇಕಾದುದರಿಂದ ಈ ಕ್ರ ಮದಲ್ಲಿ ಅವರಿಗೆ ಬುದ್ಧಿಸಂಸ್ಕಾರವು ವಿಶೇಷವಾಗಿ ಆಗುವುದು. ಕಿಂಡರ್‌ಗಾರ್ಟ್ನ ಕ್ರಮವು ಜರ್ಮನ್ ದೇಶದಲ್ಲಿ ಹುಟ್ಟಿದ ಫ್ರೋಬೆಲ್ ಎಂಬಾತನಿಂದ ಈಗ ಸುಮಾರು ೬೦ ವರುಷಗಳ ಹಿಂದೆ ಕಲ್ಪಿಸಲ್ಪಟ್ಟ ತೆಂಬುದು ನಮ್ಮ ವಾಚಕರಿಗೆ ತಿಳಿದಿ ಇದೆ. ವಿದ್ಯಾ ಭ್ಯಾಸದ ವಿಷಯವಾಗಿ ಫ್ರೋಬೆಲ್ ಎಂಬಾತನಿಗೆ ಇದ್ದ ಅಭಿಪ್ರಾಯಗಳನ್ನು ಸಂಕ್ಷೇ ಪವಾಗಿ ಹೀಗೆಂದು ಹೇಳಬಹುದು:

(೧) ಬಾಲಕರ ದೇಹದಾರ್ಢ್ಯ, ತಿಳುವಳಿಕೆ, ನಡತೆ ಈ ಮೂರನ್ನೂ ವೃದ್ಧಿ ಪಡಿಸುವುದೇ ಸರಿಯಾದ ವಿದ್ಯಾಭ್ಯಾಸ ಕ್ರಮ. ಮಕ್ಕಳಿಗೆ ಇತರರು ಹೇಳಿಕೊಟ್ಟ ದ್ದನ್ನು ಮಾತ್ರ ಕಲಿತುಕೊಳ್ಳುವುದರಿಂದ ಆಗುವ ಪ್ರಯೋಜನಕ್ಕಿಂತಲೂ ತಾವೇ ಪ್ರ ವರ್ತಿಸಿ ಕೆಲಸ ಮಾಡುವುದರಿಂದ ಹೆಚ್ಚಾದ ಪ್ರಯೋಜನವಾಗುವುದು. ಆದುದರಿಂದ ಉಪಾಧ್ಯಾಯರು ಬಾಲಕರಿಗೆ ವಿಷಯಗಳನ್ನು ಹೇಳಿಬಿಡುವುದಕ್ಕಿಂತಲೂ ಉಚಿತ ವಾದ ತನ್ನಿವೇಶಗಳನ್ನು ಕಲ್ಪಿಸಿ ಅವರು ತಾವೇ ಅವುಗಳ ವಿಷಯವಾಗಿ ಯೋಚಿಸು ವಂತೆ ಮಾಡಬೇಕು.

(೨) ಹೀಗೆ ಕಲ್ಪಿಸತಕ್ಕ ಸನ್ನಿವೇಶಗಳು ಬಾಲಕರ ಸ್ವಭಾವಕ್ಕೆ ಅನುಗುಣ ವಾಗಿಯೂ, ವಿದ್ಯಾಭ್ಯಾಸದ ಮುಖ್ಯೋದ್ದೇಶಕ್ಕೆ ಉಚಿತವಾಗಿಯೂ ಇರಬೇಕು. ಮತ್ತು ಬಾಲಕರಲ್ಲಿ ಒಬ್ಬೊಬ್ಬರಿಗೆ ಇರತಕ್ಕ ವ್ಯತ್ಯಾಸಕ್ಕೆ ತಕ್ಕಂತೆ ಇವುಗಳನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿಕೊಳ್ಳತಕ್ಕದ್ದು ಆವಶ್ಯಕ.

ಸೌ॥ ಪುಟ್ಟಲಕ್ಷಮ್ಮನವರು.

ಶ್ರೀಮನ್ಮಹಾರಾಜ್ಞಿಯವರ ಬಾಲಿಕಾಪಾಠಶಾಲೆಯು ಸಹಾಯೋಪಾಧ್ಯಾಯಾನಿಯರಾದ ಸೌ॥ ಪುಟ್ಟಲಕ್ಷಮ್ಮನವರು ೧೮೯೯ನೇ ಇಸವಿ ಜನವರಿ ೧೮ನೇ ತಾರೀಕು ರಾತ್ರಿ ಸ್ವರ್ಗಸ್ಥರಾದರು. ಇವರು ಪಂಡಿತ ರಮಾಬಾಯಿ, ಆನಂದಬಾಯಿ ಜೋಷಿ, ತರಳಾದತ್ ಮೊದಲಾದ ವಿದ್ಯಾವತಿಯರಂತೆ ಇಂಗ್ಲಿಷ್‌ನಲ್ಲಿ ಪೌಢ ವಿದ್ಯಾಭ್ಯಾಸವನ್ನೂ ದೇಶಾಟನವನ್ನೂ ಮಾಡಿ ದಿಗಂತವಿಶ್ರಾಂತವಾದ ಯಶಸ್ಸನ್ನು ಪಡೆದವರಲ್ಲ. ಅಂಥಾ ಯಶಸ್ಸು ಎಲ್ಲರಿಗೂ ಲಭಿಸುವದು ಕಷ್ಟ. ಆದರೆ ಕೂಡಿದ ಮಟ್ಟಿಗೂ ಕನ್ನಡ, ಸಂಸ್ಕೃತ, ಇಂಗ್ಲಿಷ್ ಪೌಢವಿದ್ಯಾಭ್ಯಾಸವನ್ನು ಮಾಡಿ ಹಾಗೆ ಮಾಡಲ್ಪಟ್ಟ ವಿದ್ಯಾಭ್ಯಾಸಕ್ಕೆ ಸಹಜವಾದ ಗುಣಾತಿಶಯಗಳನ್ನು ಹೊಂದಿದವರಲ್ಲಿ ಇವರು ಒಬ್ಬರಾಗಿರುವರು. ಇವರು ೧೮೭೧ನೇ ನವಂಬರು ತಿಂಗಳಲ್ಲಿ ಕಾಸಕಾನಹಳ್ಳಿಯಲ್ಲಿ ಜನಿಸಿದರು. ಇವರ ತಂದೆಗಳು ಮೇ॥ ತಿರುಮಕೂಡ್ಲು ವೆಂಕಟಾಚಲ ಶಾಸ್ತ್ರಿಗಳು. ಇವರು ಸಂಸ್ಕೃತಭಾಷೆಯಲ್ಲಿ ನಾಟಕಕಾಂತ ಸಾಹಿತ್ಯದಲ್ಲಿ ಉದ್ದಾಮ ಪಂಡಿತರಾಗಿಯೂ, ಧರ್ಮಶಾಸ್ತ್ರ, ಜ್ಯೋತಿಶ್ಶಾಸ್ತ್ರ, ವೈದ್ಯಶಾಸ್ತ್ರ, ಮಂತ್ರಶ್ಶಾಸ್ತ್ರ ಮೊದಲಾದವುಗಳಲ್ಲಿ ಜೆನ್ನಾದ ತಿಳುವಳಿಕೆಯುಳ್ಳವರಾಗಿಯೂ, ಸಂಸ್ಕೃತ ಭಾಷೆಯಲ್ಲಿ ಸಮಸ್ಯ ಚಿತ್ರಕವಿತ್ವಗಳಲ್ಲಿ ಬಹಳ ನಿಪುಣರಾಗಿಯೂ ಇದ್ದರು. ಸೌ॥ ಪುಟ್ಟಲಕ್ಷಮ್ಮನವರು ಪ್ರಥಮತಃ ತಮ್ಮ ತಂದೆಗಳ ಬಳಿಯಲ್ಲಿಯೂ, ಅನಂತರ ಚಾಮರಾಜನಗರದ ಮೇ॥ ಶ್ರೀಕಂಠಶಾಸ್ತ್ರಿಗಳು, ಮೇ। ಗೀತಾಚಾರ್ಯರು ಇವರೇ ಮೊದಲಾದವರ ಬಳಿಯಲ್ಲಿ ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡಿದರು. ೧೮೮೬ನೇ ಈಸವಿಯಲ್ಲಿ ಮು॥ ಎಂ ವೆಂಕಟಕೃಷ್ಣಯ್ಯನವರೊಡನೆ ಇವರು ವಿವಾಹ ಮಾಡಲ್ಪಟ್ಟರು. ಮು॥ ಎಂ. ವೆಂಕಟಕೃಷ್ಣಯ್ಯನವರು ಸ್ವತಃ ವಿದ್ವಾಂಸರಾಗಿಯೂ, ಶ್ರೀಮನ್ಮಹಾರಾಜ್ಞಿಯವರ ಬಾಲಿಕಾ ಪಾಠಶಾಲೆಯ ಸೂಪರಿಂಟೆಂಡಿಂಗ್ ಕಮಿಟಿ ಮೆಂಬರುಗಳಾಗಿಯೂ ಇದ್ದರು. ಅನೇಕ ವಿದ್ಯಾವಂತರು ವಿದ್ಯಾವತಿಯು ಸೌಶೀಲ್ಯಾದಿ ಗುಣಸಂಪನ್ನೆಯರಾದ ಪತ್ನಿಯರನ್ನು ಹೊಂದುವದು ಅಪೇಕ್ಷಣೀಯವೆಂದು ಭಾವಿಸುವರು. ಹಾಗೆಯೇ ಅನೇಕ ವಿವೇಕಿನಿಯರಾದ ಪತಿಯು ವಿದ್ವಾಂಸರಾದ ಪತಿಗಳನ್ನು ಅಪೇ

ಸಾಂಭವಿಕವಾದ ಪದಾರ್ಥಗಳನ್ನು ಸಾಕಾರತಾ ಗಿ ತಿಳಿದುಕೊಡಬೇಕೆಂದು ಫ್ರೋಬೆಲ್ ಎಂಬಾತನ ಅಭಿಪ್ರಾಯ. ಇದಕ್ಕಾಗಿಯೇ ಕಿಂಡರ್‌ಗಾರ್ಟ್ನ್ ಸ್ಕೂಲ್ ಗಳಲ್ಲಿ ಸಣ್ಣ ತೋಟವನ್ನು ಮಾಡಿ ಅಲ್ಲಿನ ಗಿಡಗಳನ್ನು ಮಕ್ಕಳಿಂದ [illegible] ಮಾಡಿಸುತ್ತಾರೆ. ಕೆಲಸಗಳೆಲ್ಲಾ ಪರಸ್ಪರ ಸಂಬದ್ಧಗಳಾಗಿರಬೇಕೆಂಬುದು ಈತನ ಇನ್ನೊಂದು ಅಭಿಪ್ರಾಯ. ಕಿಂಡರ್‌ಗಾರ್ಟ್ನ್ ಕರಣಗಳೆಲ್ಲಾ ಇದರಕ್ಕನುಸಾರವಾಗಿ ಕ್ರಮಪಡಿಸಲ್ಪಟ್ಟಿವೆ. ಇವುಗಳು ಒಂದು ಸರಪಣಿಯಲ್ಲಿರುವ ಕೊಂಡಿಗಳಂತೆ ಒಂದಕ್ಕೊಂದು ಹೊಂದಿಕೊಂಡಿವೆ.

ಕಿಂಡರ್‌ಗಾರ್ಟನನ್ನು ಪ್ರಾರಂಭಿಸುತ್ತಕ್ಕದ್ದು ಮನೆಯಲ್ಲಿ ಮತ್ತು ಮಗುವಿಗೆ ಕೆಲವು ತಿಂಗಳುಗಳಾದೊಡನೆಯೇ ತಾಯಿಯೇ ಪ್ರಾರಂಭಿಸಿ ಶಿಕ್ಷಕಳಾಗಿರಬೇಕು. ಮಗುವಿಗೆ ೩ವರ್ಷವಾದಮೇಲೆ ಕಿಂಡರ್‌ಗಾರ್ಟ್ನ್ ಸ್ಕೂಲಿಗೆ ಕಳುಹಿಸಿಕೊಡಬೇಕು. ೬—೭ ವರ್ಷಗಳು ತುಂಬುವವರೆಗೂ ಅಲ್ಲಿ ವಿದ್ಯೆಯನ್ನು ಕಲಿಯಬೇಕು. ಆದರೆ ಈಕಾಲದಲ್ಲಿ ಮಗುವಿಗೆ ಓದುವುದಕ್ಕಾಗಲೀ, ಬರೆಯುವುದಕ್ಕಾಗಲೀ, ಅಥವಾ ಇನ್ನಾವ ಪ್ರಾಥಮಿಕ ವಿಷಯವನ್ನಾಗಲಿ ಹೇಳಿಕೊಡಬೇಕಾದ್ದಿಲ್ಲ. ಕಿಂಡರ್‌ಗಾರ್ಟ್ನ್ ಕ್ರಮದಂತೆ ಮಗುವಿಗೆ ಆಟಕ್ಕೆ ಕೊಟ್ಟು ಅದರ ವಿಧವಿಧವಾದ ಶಕ್ತಿಗಳನ್ನೆಲ್ಲಾ ವೃದ್ಧಿಪಡಿಸಬೇಕು. ಈ ವಿಧವಾಗಿ ವಿದ್ಯಾಭ್ಯಾಸ ಮಾಡಿದವರು ಮುಂದಕ್ಕೆ ಬಹಳ ಶೀಘ್ರವಾಗಿ ವಿಷಯಗಳನ್ನು ಗ್ರಹಿಸುವುರೆಂದು ಅನುಭವದಿಂದ ಗೊತ್ತಾಗಿದೆ ಕಿಂಡರ್‌ಗಾರ್ಟ್ನ್ ಸ್ಕೂಲುಗಳಲ್ಲಿ ಕಲಿಯುವ ಈ ಮೂರು ನಾಲ್ಕು ವರ್ಷಗಳಲ್ಲಿ ಮಕ್ಕಳು ಓದದೇ ಬರೆಯದಿದ್ದರೆ ಏನುಕಲಿಯುವರೆಂದು ಅನುಮಾನಪಡಬಹುದು. ಅವರು ಆ ಕಾಲದಲ್ಲಿ ಕಲಿಯುವುದು ಬಹಳನಾಗಿದೆ. ಬಣ್ಣ, ಆಕಾರ, ಸಂಖ್ಯೆ, ಪ್ರಾಣಿಗಳ ಮತ್ತು ವಸ್ತುಗಳ ಸ್ವಭಾವ, ಗಾಳಿ, ಮಳೆ, ಸೂರ್ಯ, ಚಂದ್ರ ಇವುಗಳ ವಿಷಯ; ಎಲ್ಲೆಕಪ್ಪೆಚಿಪ್ಪು, ವಿಧವಿಧವಾದ ಕಲ್ಲುಗಳು, ಬೀಜಗಳು, ಧಾನ್ಯ ಮುಂತಾದವುಗಳು. ಇವುಗಳನ್ನೆಲ್ಲಾ ತಿಳಿದುಕೊಳ್ಳುವುದರಿಂದ ಬಾಲಕರ ಇಂದ್ರಿಯಗಳಿಗೆ ಪಾಟವ ಉಂಟಾಗುವುದು. ಉಲ್ಲಾಸದೊಡನೆ ಈ ವಿಷಯಗಳನ್ನು ಗ್ರಹಿಸುವುದರಿಂದ ಅನೇಕ ಅಂಶಗಳು ಚೆನ್ನಾಗಿ ಮುಂದಟ್ಟಾಗಿ ನಿಂತು ಮುಂದಿನ ವಿದ್ಯಾಭ್ಯಾಸಕ್ಕೆ ಸಹಾಯವಾಡುವುದು.

ಸಭೆಯುವರಲ್ಲಿ ಶ್ರೀಮನ್ಮಹಾರಾಜರವರ ಕೌನ್ಸಲ್ ಮೆಂಬರಾದ ಮು॥ ಚಂಚಲ್ ರಾವ್ ಪಂತುಲು ಸಿ. ಐ. ಇ. ರವರು ಅಗ್ರಾಸನವನ್ನು ವಹಿಸಿದ್ದರು. ಸಾವಿರಾರು ಜನ ದೊಡ್ಡ ಮನುಷ್ಯರು ಸ್ತ್ರೀಯರು ಬಂದಿದ್ದರು. ಆಗ ಆದ ಉಪನ್ಯಾಸದಿಂದ ಅಗ್ರಾಸನಾಧಿಪತಿಗಳೇ ಮೊದಲಾದ ಸಭಾಸ್ತಾರರು ಬಹಳ ಸಂತೋಷಪಟ್ಟರು. ಆ ಉಪನ್ಯಾಸದಲ್ಲಿ ಉದಹರಿಸಿದ ಒಂದು ಸಂಗತಿಯನ್ನು ಉದಹರಿಸುತ್ತೇವೆ. ಅದರಿಂದಲೇ ಇವರಿಗೆ ಇದ್ದ ಲೋಕವ್ಯವಹಾರಜ್ಞಾನವು ಸ್ವಲ್ಪ ಮಟ್ಟಿಗೆ ಗೊತ್ತಾಗುತ್ತದೆ. " ಬುದ್ಧಿಯು ಕರ್ಮಾನುಸಾರವಾಗಿರುವದು. ಅಂದರೆ ಜನ್ಮಾಂತರ ಕರ್ಮವಲ್ಲ. ಹುಟ್ಟಿದ್ದು ಮೊದಲು ಸ್ತ್ರೀ ಪುರುಷರು ಎಂಥಾ ಸಹವಾಸ ಮಾಡುತ್ತಾರೆಯೋ ಯಾವಯಾವ ಕರ್ಮಗಳು ಅಂದರೆ ಏನೇನು ಕೆಲಸಗಳನ್ನು ಮಾಡುತ್ತಾರೆಯೋ ಅದಕ್ಕೆ ಅನುಸಾರವಾಗಿ ಅವರ ಬುದ್ಧಿಯು ಪರಿಣಮಿಸುವದು. ತಾಯಿತಂದೆಗಳು ಒಳ್ಳೆಯವರಾಗಿಯೂ, ಸದಾ ಸನ್ಮಾರ್ಗಪ್ರವರ್ತಕರಾಗಿಯೂ ಇದ್ದರೆ ಹುಟ್ಟತಕ್ಕ ಮಕ್ಕಳು ಹಾಗೆಯೇ ಆಗುವರು. ಇದು ಸಹಜ. ಬೇವಿನಬೀಜ ಹಾಕಿದರೆ ದಾಳಿಂಬೆ ಗಿಡ ಹುಟ್ಟುವದೇ ? ಎಂದಿಗೂ ಇಲ್ಲ. ಆದಾಗ್ಯೂ ಜನರು ಸನ್ಮಾರ್ಗಪ್ರವರ್ತಕರಾಗ ಬೇಕಾದರೆ ಸತ್ಕುಲದಲ್ಲಿ ಹುಟ್ಟುವದು ಮಾತ್ರ ಸಾಲದು. ಒಳ್ಳೇ ಸಹವಾಸವು ಬೇಕು. ಅನೇಕ ಹುಳುಗಳು ಕೂಡ ತಾವು ತಿನ್ನತಕ್ಕ ಎಲೆಬಣ್ಣವನ್ನು ಹೊಂದುವವು. ಅಂದರೆ ಕೆಟ್ಟ ಸಹವಾಸದಿಂದ ಕೆಟ್ಟ ಗುಣವೂ ಒಳ್ಳೇ ಸಹವಾಸದಿಂದ ಒಳ್ಳೇ ಗುಣವೂ ಬರುತ್ತದೆ. ವಿದ್ಯಾಭ್ಯಾಸವು ಬೆಂಕಿಯಹಾಗೆಂದು ಹೇಳಬಹುದು. ಬೆಂಕಿಯು ಸರಿಯಾಗಿ ಉಪಯೋಗಿಸಿದರೆ ರೈಲ್‌ಬಂಡಿಗಳನ್ನು ಎಳೆಯುತ್ತದೆ ಯಂತ್ರಗಳಿಂದ ಕೋಟ್ಯಾಂತರ ಜನರು ಮಾಡತಕ್ಕ ಕೆಲಸವನ್ನು ಜಾಗ್ರತೆಯಾಗಿ ಲೋಕಪ್ರಯೋಜನಾರ್ಥವಾಗಿ ಮಾಡಿಸುತ್ತದೆ. ಸಕಲ ಆಹಾರಗಳನ್ನು ಪಕ್ವಮಾಡುತ್ತದೆ ಹಾಗಿಲ್ಲದಿದ್ದರೆ ಅಂದರೆ ಅಕ್ರಮದಲ್ಲಿ ಉಪಯೋಗಿಸಿದರೆ ನಮ್ಮ ಪ್ರಾಣಗಳನ್ನು ನಾಶಮಾಡುತ್ತದೆ. ಲೋಕವನ್ನು ಬೇಕಾದರೂ ಸುಟ್ಟುಬಿಡುತ್ತದೆ. ವಿದ್ಯಾಭ್ಯಾಸವೂ ಹಾಗೆಯೇ ಸರಿ. ವಿದ್ಯಾಭ್ಯಾಸದಿಂದ ಇಹಪರ ಸಾಧನೆಗಳು ಆಗುವವು. ಅವುಗಳನ್ನು ಆರ್ಜಿಸುವದಕ್ಕೋಸ್ಕರ ವಿದ್ಯೆಯನ್ನು ಸಯೋಗಿಸಿದವರು ಕೃತಾರ್ಥರಾಗುವರು. ಹಾಗಿಲ್ಲದೆ ವಿದ್ಯೆಯನ್ನು ದುರ್ಮಾರ್ಗಪ್ರವರ್ತನೆಯಲ್ಲಿ ವಿನಿಯೋಗಿಸಿದರೆ ವಿದ್ಯೆಯು ಬೆಂಕಿಗಿಂತಲೂ ಹೆಚ್ಚಾದ ಕೆಡಕನ್ನುಂಟುಮಾಡುವದು. ಈ ಕೇಡು ಪರರಿಗೆ ಮಾತ್ರವೇ ಅಲ್ಲ. ಕೊನೆಗೆ ತನಿ

ಕ್ಷಿಸುವರು. ಪುಟ್ಟಲಕ್ಷ್ಮಮ್ಮನವರಿಗೆ ಚಿಕ್ಕವಯಸ್ಸು, ರೂಪ, ಐಶ್ವರ್ಯ ಮೊದಲಾದವು ಗಳುಳ್ಳ ವರವಿದ್ದಾಗ್ಯೂ ವಿದ್ಯಾವಂತರಾದ ಪತಿಯನ್ನು ವರಿಸುವದು ಶ್ಲಾಘನೀಯ ವಂದು ಇವರನ್ನೇ ವಿವಾಹಮಾಡಿಕೊಂಡರು. ಇವರು ಎಂ. ವೆಂಕಟಕೃಷ್ಣಯ್ಯನವ ರನ್ನು ವಿವಾಹ ಮಾಡಿಕೊಂಡಿದ್ದು ಇವರ ವಿದ್ಯಾಭಿವೃದ್ಧಿಗೆ ವಿಶೇಷ ಸಹಕಾರಿಯಾ ಯಿತು. ವಿವಾಹವಾದಕೂಡಲೇ ಇವರು ಶ್ರೀಮನ್ಮಹಾರಾಜ್ಞಿಯವರ ಬಾಲಿಕಾಪಾ ಠಶಾಲೆಗೆ ಸೇರಿದರು. ಇವರು ಸೇರಿದ ಮೂರು ವರುಷಗಳೊಳಗಾಗಿ ೬—೭ ವರು ಷಗಳಿಂದ ಓದುತ್ತಲಿದ್ದ ಬಾಲೆಯರ ತರಗತಿಗೆ ಅರ್ಹರಾದರು. ಪ್ರಥಮತಃ ಈ ಪಾ ಠಶಾಲೆಯಲ್ಲಿ ಬಾಲೆಯರನ್ನು ಪರೀಕ್ಷೆಗೆ ತಯಾರ್ಮಾಡುತ್ತಿರಲಿಲ್ಲ. ಬಾಲೆಯರಿಗೆ ಕನ್ನಡ, ಸಂಸ್ಕೃತ, ಇಂಗ್ಲಿಷ್, ವಸ್ತುಶಾಸ್ತ್ರ, ಭೌತಿಕಶಾಸ್ತ್ರ ಶಾರೀರಕ ಧರ್ಮಶಾ ಸ್ತ್ರ, ಹೊಲಿಗೆ ಕಸೂತಿ ಮೊದಲಾದವುಗಳನ್ನು ಕಲಿಸುತ್ತಿದ್ದರು. ಆಗ ಮಾ॥ ಡಿ. ಸುಬ್ಬಯ್ಯನವರು, ಮಾ॥ ಜಿ ಕೃಷ್ಣರಾಯರು, ಮಾ॥ ಸಿ. ಸುಬ್ಬರಾಯರು, ಮಾ॥ ಡಾಕ್ಟರ್ ರಾಮಸ್ವಾಮಯ್ಯಂಗಾರ್ಯರು ಇವರೇ ಮೊದಲಾದ ಅನೇಕ ಪಂಡಿತರು ಪಾಠ ಗಳನ್ನು ಹೇಳುತ್ತಿದ್ದರು. ಅನೇಕರಿಗೆ ಪಾಠಶಾಲೆಯಲ್ಲಿ ಕಲಿತದ್ದನ್ನು ಆಚರಣೆಗೆ ತರು ವುದಕ್ಕೆ ಅವಕಾಶವಿಲ್ಲದೆ ಇರುವದುಂಟು. ಪುಟ್ಟಲಕ್ಷ್ಮಮ್ಮನವರಿಗಾದರೆ ಇದಕ್ಕೆ ವಿಶೇಷ ಅವಕಾಶವಿತ್ತು. ಇವರ ತಂದೆಮನೆ ಮತ್ತು ಪತಿಯ ಮನೆಗಳೇ ಒಂದು ಪಾಠಶಾಲೆ ಯಾಗಿ ಪರಿಣಮಿಸಿತ್ತು. ಈಕೆಯ ಅಕ್ಕನ ಮಕ್ಕಳು ಅವರ ಬಳಿಯಲ್ಲಿದ್ದುಕೊಂಡು ಪ್ರತಿನಿತ್ಯವೂ ವರ್ತಮಾನಪತ್ರಿಕೆಗಳನ್ನು ಓದುತ್ತಾ ಲೋಕವ್ಯವಹಾರಜ್ಞಾನವನ್ನು ಅಭಿವೃದ್ಧಿಗೊಳಿಸುತ್ತ ಅನೇಕ ಗ್ರಂಥಗಳ ವಿಷಯಗಳನ್ನು ಒಬ್ಬರಿಗೊಬ್ಬರು ಹೇಳು ತ್ತ ಪ್ರತಿನಿತ್ಯವೂ ಅನೇಕ ಮುಖವಾಗಿ ಜ್ಞಾನವನ್ನು ವೃದ್ಧಿಮಾಡಿಕೊಳ್ಳುತ್ತಿದ್ದರು. ಇದರಿಂದ ಇವರು ಓದಿದ್ದು ಸ್ವಲ್ಪವಾದರೂ ವಿದ್ವಾಂಸರಾದ ಅಕ್ಕನ ಮಕ್ಕಳ ಮತ್ತು ಅಣ್ಣ ತಮ್ಮಂದಿರ ಸಹವಾಸದಿಂದಲೂ ಸಂಭಾಷಣೆಯಿಂದಲೂ ಅನೇಕವಿಧ ವಾಗಿ ಲೋಕವ್ಯವಹಾರಜ್ಞಾನವನ್ನು ಪಡೆದಿದ್ದರು. ಇದಲ್ಲದೆ ಇವರು ನ್ಯಾಷನಲ್ ಇಂಡಿಯನ್ ಅಸೋಸಿಯೇಷನ್ ಸಂಬಂಧದಲ್ಲಿ ಒಂದು ಉಪನ್ಯಾಸವನ್ನು ಮಾಡಬೇ ಕೆಂದು ಶ್ರೀಮನ್ಮಹಾರಾಜ್ಞಿ ಬಾಲಿಕಾ ಪಾಠಶಾಲೆಯ ಸೂಪರಿಂಟೆಂಡೆಂಟರವರಿಂದ ಅಪೇಕ್ಷಿಸಲ್ಪಟ್ಟರು. ೧೮೯೦ ನೇ ಜುಲೈ ೫ ರಲ್ಲಿ ಮೈಸೂರು ಟೌನ್ ಹಾಲಿನಲ್ಲಿ ಸ್ತ್ರೀ ವಿದ್ಯಾಭ್ಯಾಸವನ್ನು ಕುರಿತು ಒಂದು ಉಪನ್ಯಾಸವನ್ನು ಮಾಡಿದರು. ಆಗ ಸೇರಿದ್ದ

ನವ್ಮ ಆರ್ಯಸ್ತ್ರೀಯರು ನಿರಕ್ಷರಕುಕ್ಷಿಗಳೆಂಬ ಅಪಯಶಸ್ಸನ್ನು ತಪ್ಪಿಸುವರೆಂದು ನಾನು ಭಾವಿಸುತ್ತೇನೆ. ಈ ಉಪನ್ಯಾಸವು ಬಹುವಿಷಯಗರ್ಭಿತವಾಗಿಯೂ ಬಹಳ ಶ್ಲಾಘ್ಯವಾಗಿಯೂ ಇದೆ. ಸಾವಮಾನ್ಯವಾಗಿ ಸ್ತ್ರೀಯರು ಈ ಉಪನ್ಯಾಸವನ್ನು ಅವಲೋಕಿಸಿ ಇದರಲ್ಲಿ ಹೇಳಿರತಕ್ಕ ವಿಷಯಗಳನ್ನು ಪರ್ಯಾಲೋಚಿಸಿ ಆಚರಣೆಗೆ ತರುವರೆಂದು ನಂಬಿದೇನೆ ನವ್ಮ ಭಾರತಖಂಡ ಸ್ತ್ರೀಯರು ಈರೀತಿಯಲ್ಲಿ ವಿದ್ಯಾಸಕ್ತಿಯುಳ್ಳವರಾದರೆ ನವ್ಮ ದೇಶಕ್ಕೆ ಅನ್ಯಾದೃಶವಾದ ಮೇಲುಂಟಾಗುವುದರಲ್ಲಿ ಏನೇನೂ ಸಂದೇಹವಿಲ್ಲ. ಈ ಸಭಿಕರನ್ನೂ ಉಪನ್ಯಾಸಕರನ್ನೂ ಉಪನ್ಯಾಸ ಮಾಡುವಂತೆ ಪ್ರೋತ್ಸಾಹಿಸಿದ ಶ್ರೀಮನ್ಮಹಾರಾಜ್ಞೀ ಬಾಲಿಕಾಪಾಠಶಾಲೆಯ ಸೂಪರ್ಟಿಂಡೆಂಟರವರನ್ನು ನಾನು ಮನಃಪೂರ್ವಕವಾಗಿ ವಂದಿಸುತ್ತೇನೆಂದು ಹೇಳಿದರು.

ಸೌ॥ ಪುಟ್ಟಲಕ್ಷಮ್ಮನವರು "೧೯೧೦ ನೇ ಇಸವಿಯಿಂದ ಈಚೆಗೆ ಸಂಸ್ಕೃತ ಕನ್ನಡ ಭಾಷೆಗಳನ್ನು ಬಹಳ ಶ್ರದ್ಧೆಯಿಂದ ವ್ಯಾಸಂಗ ಮಾಡಿದರು. ಇವರು ಲೋಕಲ್ ಎಗ್ಜಾಮಿನೇಷನ್ನಲ್ಲಿ ಲೋವರ್ ಸೆಕೆಂಡರಿ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗಳಲ್ಲಿ ಸಾಕಶಾಸ್ತ್ರದಲ್ಲಿ ಪರೀಕ್ಷಿತರಾಗಿದ್ದರು. ಕಳೆದ ೫—೬ ವರ್ಷಗಳಿಂದ ರಾಮಾಯಣ ಭಾರತ ಭಾಗವತ ಮೊದಲಾದವುಗಳನ್ನು ವ್ಯಾಸಂಗಮಾಡಿದವರಲ್ಲಿ ಕೇವಲ ಅಸಕ್ತಿಯುಳ್ಳವರಾಗಿದ್ದರು. ಶ್ರೀಮದ್ರಾಮಾಯಣವನ್ನು ಅನೇಕ ಸಾರಿ ಓದಿದ್ದರು. ಭಗವದ್ಗೀತೆ ಭಾಗವತ ಇವುಗಳನ್ನು ವ್ಯಾಸಂಗಮಾಡುತ್ತಿದ್ದರು. ಪುಟ್ಟಲಕ್ಷಮ್ಮನವರು ಪಾಠಶಾಲೆಗೆ ಸೇರಿದಾಗ ಬಾಲೆಯರು ೧೦—೧೧ ವರುಷ ವಯಸ್ಸಾವಕೂಡಲೇ ಪಾಠಶಾಲೆಗೆ ಬರುವದನ್ನು ಬಿಟ್ಟುಬಿಡುತ್ತಿದ್ದರು ಸಾವಮಾನ್ಯವಾಗಿ ತಂದೆ ತಾಯಿಗಳು ಕೂಡ ವಯಸ್ಸಿಗೆ ಬಂದ ಬಾಲೆಯರನ್ನು ಪಾಠಶಾಲೆಗೆ ಕಳುಹಿಸುವದಕ್ಕೆ ಒಪ್ಪುತ್ತಿರಲಿಲ್ಲ. ಪುರುಷರು ವಿದ್ಯಾಭ್ಯಾಸ ಪೂರೈಸುವವರೆಗೂ ಎಷ್ಟೇ ವಯಸ್ಸಾದಾಗ್ಯೂ ಪಾಠಶಾಲೆಗೆ ಹೋಗುವರು ಸ್ತ್ರೀಯರಿಗೆ ಮಾತ್ರ ೧೦—೧೨ ವರ್ಷ ವಯಸ್ಸಾದಕೂಡಲೆ ಪಾಠಶಾಲೆಗೆ ಹೋಗುವದಕ್ಕೆ ಪ್ರತಿಬಂಧಕವುಂಟಾಗುತಿತ್ತು. ಇದರಿಂದ ಅದುವರೆಗೆ ಕಲಿತದ್ದನ್ನು ಕೂಡ ಕ್ರಮವಾಗಿ ಮರೆಯುವದಕ್ಕೆ ಅವಮ ಕಾಶವುಂಟಾಗುತ್ತಿತ್ತು. ಸ್ತ್ರೀ ಪುರುಷರಲ್ಲಿ ಯಾವವಿದ್ಯಾಭ್ಯಾಸವು ರೂಢಮೂಲವಾಗುವದೋ ಅದು ನಿಲ್ಲುವದು. ವಿದ್ಯೆಯು ರೂಢಮೂಲವಾಗಬೇಕಾದರೆ ಸ್ತ್ರೀಯರು ಪುರುಷರಂತೆ ಸರಿಯಾದ ಪಾಂಡಿತ್ಯವುಂಟಾಗುವವರೆಗೂ ವ್ಯಾಸಂಗ ಮಾಡಬೇಕು.

ಗೂ ಲಭಿಸುವದು. ವಿದ್ಯಾವಂತರ ವಿದ್ಯಾಬಲದಿಂದ ಮೋಸಗಾರನಾದರೆ ಕೆಲವು ದಿನಗಳಲ್ಲೇ ನಂಬಿಕೆಯನ್ನು ತಪ್ಪಿಸಿಕೊಂಡು ಕೊನೆಗೆ ಜ್ಞಾನಮಂಟಪವನ್ನು ಹೊಂದುವನು. ಸ್ವೇಚ್ಛಾಪ್ರವರ್ತಕನಾದರೆ ಆರೋಗ್ಯವನ್ನೂ ದ್ರವ್ಯವನ್ನೂ ಮಾನವನ್ನೂ ಕಳೆದುಕೊಳ್ಳುವದಲ್ಲದೆ ಅಕಾಲಮರಣವನ್ನುಕೂಡ ಹೊಂದುವನು. ಯಾವರೀತಿಯಲ್ಲಿ ನೋಡಿದಾಗ್ಯೂ ವಿದ್ಯೆಯನ್ನು ಕೆಟ್ಟವಿನಿಯೋಗಮಾಡುವದರಿಂದ ಫಲವಿಲ್ಲ. ಅದುಹಾಗಿರಲಿ. ಬೆಂಕಿಯು ದುರ್ವಿನಿಯೋಗದಿಂದ ಕೇಡಾಗುವದೆಂದು ಅದರ ಉಪಯೋಗವನ್ನೇ ನಿಷೇಧಿಸಬಹುದೆ? ಹಾಗೆ ನಿಷೇಧಿಸಿದರೆ ಜನಗಳು ಒಪ್ಪುವರೆ? ಎಂದಿಗೂ ಇಲ್ಲ. ಇದಕ್ಕಿಂತಲೂ ಉಪಯೋಗಕಾರಿಯಾದ ವಿದ್ಯಾಭ್ಯಾಸವನ್ನು ಸ್ತ್ರೀಯರಿಗೆ ಏಕೆ ನಿಷೇಧವಾಡಿದಾರೆ? ಈ ನಿಷೇಧಕ್ಕೆ ಕಾರಣವುಂಟು. ಬೆಂಕಿಯ ನಿಷೇಧ್ಯದಿಂದುಂಟಾಗತಕ್ಕ ನಷ್ಟವು ಎಲ್ಲರಿಗೂ ತಿಳಿದಿದೆ. ವಿದ್ಯಾಭ್ಯಾಸದಿಂದುಂಟಾಗತಕ್ಕ ಅನರ್ಥಗಳು ಯೋಚನಾಪರರಿಗೆ ವಿನಾ ಮಿಕ್ಕವರಿಗೆ ಗೊತ್ತಿಲ್ಲ. ಗೃಹಚ್ಛಿದ್ರಗಳಿಗೆಲ್ಲಾ ಹೆಂಗಸರ ಅಜ್ಞಾನವೇ ಮುಖ್ಯಕಾರಣವೆಂದು ಗೊತ್ತಾದಹಾಗೆಲ್ಲಾ ಈ ನಿಷೇಧವು ಕಡಮೆಯಾಗುತ್ತದೆ. ಹೀಗೆಯೇ ಇನ್ನೂ ಆದ ಉಪನ್ಯಾಸ ಪೂರೈಸಿತು. ಕೂಡಲೆ ಮಾ|| ಚಂಚಲ್‌ರಾವ್ ಪಂತುಲುರವರು ಸಾವಿರಾರು ಜನ ಸ್ತ್ರೀಪುರುಷರುಳ್ಳ ಈ ಸಭೆಯಲ್ಲಿ ಸಾ||ಪುಟ್ಟಲಕ್ಷ್ಮಮ್ಮನವರು ಮಾಡಿದ ಉಪನ್ಯಾಸವು ಅತ್ಯಂತ ಹೃದಯಂಗಮವಾಗಿದೆ. ಇವರು ಹೇಳಿರತಕ್ಕ ಸಂಗತಿಗಳೆಲ್ಲಾ ಯುಕ್ತಿಯುಕ್ತವಾಗಿಯೂ ನಿಷ್ಪಕ್ಷಪಾತವಾಗಿಯೂ ಇದೆ. ಶ್ರೀಮನ್ಮಹಾರಾಜ್ಞಿಯವರೂ ಮತ್ತು ಶ್ರೀಮನ್ಮಹಾರಾಜಾಸರ್ಕಾರದವರೂ ಮಾಡಿರತಕ್ಕ ಅನ್ಯಾದೃಶವಾದ ಪ್ರೋತ್ಸಾಹವು ಸಫಲವಾಯಿತೆಂದು ನಾನು ಭಾವಿಸುತ್ತೇನೆ. ಸ್ತ್ರೀಯರು ವಿದ್ಯಾವತಿಯರಾದರೆ ಅವರ ಮಕ್ಕಳು ವಿದ್ಯಾವಂತರಾಗುವರು. ಹಾಗೆಯೇ ಪ್ರಪಂಚದಲ್ಲಿ ಜ್ಞಾನವೃದ್ಧಿಗೆ ಅವಕಾಶವಾಗುವದು. ಇವರು ಹೇಳಿರುವಂತೆ ಬೀವಿನಬೀಜ ಹಾಕಿದರೆ ದಾಳಿಂಬಿಗಿಡ ಹುಟ್ಟುವದಿಲ್ಲ. ತಾಯಿಯಾದವಳು ವಿದ್ಯಾವಿಹೀನೆಯಾಗಿದ್ದರೆ ಮಕ್ಕಳು ವಿಶೇಷ ವಿದ್ಯಾವಂತರಾಗುವದಕ್ಕೆ ಸರಿಯಾದ ಅವಕಾಶವು ಹ್ಯಾಗೆತಾನೇ ಆಗಬಹುದೀತು? ಶ್ರೀಮನ್ಮಹಾರಾಜ್ಞಿಯವರ ಬಾಲಿಕಾಪಾಠಶಾಲೆಯಲ್ಲಿ ಈ ಉಪನ್ಯಾಸಕರಂತೆ ವಿದ್ಯಾವತಿಯರಾದವರು ಇನ್ನು ಕೆಲವರು ಇರಬಹುದು. ಕ್ರಮಕ್ರಮವಾಗಿ ಇವರು ಈ ದಿವಸ ಹಾಕಿದ ಮೇಲುಪಜ್ಞೆಯನ್ನು ಇನ್ನು ಅತಿಶಯವಾಗಿ ಅನುಸರಿಸಿ ಅನೇಕ ಬಾಲೆಯರು,

ವವ್ವಂ - ಈಗ ಎರಡು ವರುಷಗಳ ಕೆಳಗೆ ಇವರಿಗೆ ಸೂಚಿಕಾವಾಯುವೂ ಅದರಮೇರೆ ಕ್ಷಯವೂ ಪ್ರಾಪ್ತವಾಯಿತು. ಇದೇ ಇವರ ಅಕಾಲಮರಣಕ್ಕೆ ಸಾಧಕವಾಯಿತು. ಶ್ರೀಮ್ಮ ಮಹಾರಾಜ್ಞೀಪಾಠಶಾಲೆಯ ಕಮಿಟಿಯವರು ಕಾರ್ಯದರ್ಶಿಗಳಾದ ರಾಯ ಬಹದೂರ್ ಮಾ|| ಅಂಬಿಲ್ ನರಸಿಹ್ಮಯ್ಯಂಗಾರ್ಯರವರ ಮೂಲಕ ವಯಸ್ಸಾದ ಸ್ತ್ರೀ ಯರು ಪಾಠಶಾಲೆಗೆ ಬರುವುದಕ್ಕೆ ಇವರು ವೇಲುಪಜ್ಜೆ ಹಾಕಿದ ವಿಷಯಗಳಲ್ಲಿ ಬರೆ ದಿರತಕ್ಕ ಲೇಖನಾದಿಗಳು ಇವರ ಗುಣಾತಿಶಯಗಳನ್ನು ಪ್ರಕಟಿಸುತ್ತದೆ. ಗುಣವತಿ ಯರಾದವರು ಚಿರಕಾಲ ಬದುಕದೆ ಅಕಾಲದಲ್ಲಿ ಮರಣಹೊಂದಿದಾಗ್ಯೂ ಅವರ ವೇಲು ಪಜ್ಜೆಯು ಸನ್ಮಾರ್ಗಪ್ರವರ್ತನದಲ್ಲಿ ಎಷ್ಟೋ ಸಾಧಕವಾಗುವುದು. ಇವರು ಕೊನೆ ಕೊನೆಗೆ ಯಾವಾಗ್ಯೂ ಆತ್ಮವಿಚಾರಣೈಕಪರರಾದರು. ಸ್ವರ್ಗಸ್ಥರಾಗುವುದಕ್ಕೆ ಮೂರು ದಿನಗಳಿಗೆ ಮೊದಲೇ ಇಂಥಾ ದಿವಸವೇ ನಾನು ಕಳೇಬರವನ್ನು ಬಿಡುವೆನೆಂಬದಾಗಿ ಹೇಳಿ ಮುಂದೆ ನಡೆಯುತಕ್ಕ ಕಾರ್ಯಗಳ ವಿಷಯದಲ್ಲಿ ತಕ್ಕ ಏರ್ಪಾಡು ಮಾಡಿ ನಾರಾ ಯಣಸ್ಮರಣೆಯನ್ನು ಮಾಡುವುದಕ್ಕೆ ಉಪಕ್ರಮಿಸಿದರು. ದೇಹವನ್ನು ಬಿಡುವುದಕ್ಕೆ ಎರಡು ಗಂಟೆಗಳ ಮುಂಚೆ ತಮ್ಮ ಯಜಮಾನರನ್ನು ಕರೆದು " ನಾನು ಅಜ್ಞಾನಸರ ವಶಳಾಗಿ ನಮ್ಮ ಬಂಧುವರ್ಗದಲ್ಲಿ ಅನೇಕರ ಮನಸ್ಸಿಗೆ ಅಸಮಾಧಾನಕರವಾದ ಮಾತು ಗಳನ್ನಾಡಿರಬಹುದು ಅಂಥಾ ನನ್ನ ಅಪರಾಧಗಳನ್ನೆಲ್ಲಾ ಕ್ಷಮಿಸಬೇಕೆಂದು ನನ್ನ ಪಕ್ಷವಾಗಿ ಎಲ್ಲರನ್ನೂ ಪ್ರಾರ್ಥಿಸಬೇಕೆಂದು " ಹೇಳಿ ಪುನಃ ಭಗವನ್ನಾಮಸ್ಮರಣೆಗೆ ಪ್ರಾರಂಭ ಮಾಡಿ, ತಾವು ಹೇಳಿದ್ದ ಕಾಲಕ್ಕೆ ಸರಿಯಾಗಿ ದೇಹವನ್ನು ಬಿಟ್ಟರು. " ಮಂಚಿವಾಣಿಕಿ ಮರಣಮೇ ಸಾಕ್ಷಿ " ಎಂಬಂತೆ ಇಂಥಾ ಮರಣವೇ ಅವರ ಸೌಶೀ ಲ್ಯಾದಿ ಗುಣಗಳನ್ನು ಪ್ರಕಟಿಸುತ್ತದೆ.

ವ್ಯಾಕರಣ ಶಾಸ್ತ್ರಂ.

ವಿಭಕ್ತಿಪ್ರಕರಣಂ.

ವಿಭಕ್ತಿಯೆಂದರೆ, ' ವಿಭಜ್ಯತೆ ವಿವಿಚ್ಯ ಬೋಧ್ಯತೆ ಅಂತರ್ಗತಪ್ರಕೃತ್ಯರ್ಥಃ ' ಎಂಬ ವಿಗ್ರಹದಿಂದ ವಿಭಕ್ತಿಶಬ್ದವು ನಿಷ್ಪನ್ನವಾಗಿರುವುದರಿಂದ ಪ್ರಕೃತಿಗಳ ಅರ್ಥವನ್ನು

ಹಾಗಿಲ್ಲದ ಪಕ್ಷದಲ್ಲಿ ಪಾಠಶಾಲೆಗೆ ಹೋಗಿ ಓದುವುದರಿಂದ ಯಾವ ಪ್ರಯೋಜನವೂ ಇಲ್ಲ. ಸಾಮಾನ್ಯವಾಗಿ ಬಾಲೆಯರು ಜೀವನ್ಮಾರ್ಗಕ್ಕಾಗಿ ವಿದ್ಯೆ ಬರುವವರೆಗೂ ಪಾಠಶಾಲೆಗೆ ಹೋಗುವಂತೆ ಏರ್ಪಾಡು ಮಾಡಬೇಕು. ಹಾಗೆ ಏರ್ಪಾಡು ಆಗುವದಕ್ಕೆ ವಯಸ್ಸಾದಾಗಲೂ ಹೋಗತಕ್ಕ ಮೇಲುಪಜ್ಞೆಯನ್ನು ನಾನೇ ಹಾಕುತೇನೆ ಎಂದು ಸಂಕಲ್ಪ ಮಾಡಿ ತರಿಯಾದ ವಯಸ್ಸಿಗೆ ಬಂದಮೇಲೂ ಪಾಠಶಾಲೆಗೆ ಹೋಗುವ ಬಗ್ಗರು. ಇದು ಈಚೆಗೆ ಎಲ್ಲರಿಗೂ ಮೇಲುಪಜ್ಞೆಯಾಯಿತು. ಇದನ್ನು ಅನುಸರಿಸಿ ಅನೇಕರು ವಯಸ್ಸಾದಮೇಲೂ ಪಾಠಶಾಲಗ ಹೋಗುವುದಕ್ಕೆ ಉಪಕ್ರಮಿಸಿದರು. ಮೂವತ್ತು ವರುಷ ವಯಸ್ಸಿನವರು ಕೂಡ ಪಾಠಶಾಲೆಯಲ್ಲಿ ವಾಚಿಕೆಯಗಳಿಗೆ ವಿದ್ಯಾಭ್ಯಾಸಮಾಡೋಣವೇ ಮುಖ್ಯವಾದ ತಲವೆಂದು ದಾರಾಳವಾಗಿ ಹೋಗಿಬರುತ್ತಾರೆ.

ಇವರು "ಪುರಾಣೇತಿಹಾಸಗಳನ್ನು ಒದ ಅವುಗಳಲ್ಲಿ ಮಹಾಪತಿವ್ರತೆ ಯರ ಚರಿತ್ರೆಗಳನ್ನು ಅವರ ವೈದುಷ್ಯವನ್ನು ಶೀಲಸ್ವಭಾವಗಳನ್ನು ಪರ್ಯಾಲೋಚಿಸಿ ಸ್ವಕೀಯನಾದ ಗುಣದೋಷಗಳನ್ನು ವಿಮರ್ಶೆಮಾಡಿಕೊಳ್ಳುತ್ತಾ ಸನ್ಮಾರ್ಗ ಪ್ರವರ್ತಕರಾಗಿರತಕ್ಕ ಪ್ರಯತ್ನವನ್ನು ಮಾಡುತ್ತಿದ್ದರು. ಹೀಗೆ ಇದ್ದಾಗ್ಯೂ ನಮ್ಮ ಆಚಾರಗಳಲ್ಲಿ ಗುಣವಾದವುಗಳನ್ನೆಲ್ಲಾ ಅವಲಂಬಿಸುತ್ತಿದ್ದರು. ಪುರುಷರಿಗೆ ಹ್ಯಾಗೋ ಹಾಗೆ ಸ್ತ್ರೀಯರಿಗೂ ಆರೋಗ್ಯಕ್ಕೆ ಮೂಲಕಾರಣವಾದದ್ದು ದೇಹದಂಡನೆ ಎಂಬದಾಗಿ ಭಾವಿಸಿ ಅಂಥಾ ದೇಹದಂಡನೆಗಾಗಿ ಗೃಹಕೃತ್ಯಗಳನ್ನು ನೋಡಿಕೊಳ್ಳುವುದು ವ್ಯಾಯಾಮಾರ್ಥವಾಗಿ ನಿರ್ಮಲವಾದ ವಾಯುಸಂಚಾರ ಪ್ರದೇಶಗಳಲ್ಲಿ ಗಂಡ ಅಥವಾ ಮಕ್ಕಳು ಅಥವಾ ಸಹೋದರರೊಡನೆ ಸಂಚಾರಮಾಡುವುದು ಇವೆರಡೂ ನಿರ್ದುಷ್ಟವಾದವುಗಳೆಂದು ಭಾವಿಸಿ ಮನೆಯಲ್ಲಿ ದೇವತಾರ್ಚನೆ ಗೃಹಕೃತ್ಯಗಳಿಗೆ ಅನುಕೂಲವಾದ ಫಲಪುಷ್ಪ ವೃಕ್ಷಗಳನ್ನು ಪೋಷಿಸುವುದು ಇದರಲ್ಲಿ ಜಿಜ್ಞಾಸೆ ತೋರಿದಾಗ ಗಾಳಿಸಂಚಾರ ಹೊರಡುವುದು ಇವನ್ನು ಮಾಡುತ್ತಿದ್ದರು. ಇದಲ್ಲದೆ ಇವರಲ್ಲಿ ಇನ್ನೊಂದು ವಿಶೇಷವಾದ ಗುಣವಿತ್ತು. ತಾವು ಯಾವ ಕೆಲಸ ಮಾಡಬೇಕೆಂದು ತೋರಿದಾಗ್ಯೂ ಅದರ ಗುಣದೋಷಗಳನ್ನು ವಿಚಾರಮಾಡಿ ಕೆಲಸವು ನಿರ್ದುಷ್ಟವಾದದ್ದೆಂದು ಗೊತ್ತಾದರೆ ಅಂಥಾ ಕೆಲಸವನ್ನು ಮಾಡುತ್ತಿದ್ದರು. ಇವರ ಮತ್ತು ಈವರ ಸಹಪಾಠಿಗಳಾದ ಕೆಲವ್ರಜನ ಸ್ತ್ರೀಯರ ಶೀಲಸ್ವಭಾವಾದಿ ಗುಣಗಳು ಸ್ತ್ರೀವಿದ್ಯಾಭ್ಯಾಸಕ್ಕೆ ಆರೋಪಿಸಲ್ಪಡುತ್ತಿದ್ದ ಅನೇಕ ದೋಷನಿವಾರಣೆಗೆ ಬಹಳ ಸಾಧಕವಾಗಿರು

ಇಂತಹ ನಾಮವಿಭಕ್ತಿಪ್ರತ್ಯಯಗಳು ಪ್ರಕೃತಿಗಳ ಮೇಲೆ ಬರಬೇಕಾದರೆ,—"ಕರ್ತಾರಕರ್ಮೋಚಿಕರಣಂ ಸಂಪ್ರದಾನಂ ತಥೈವಚ॥

ಅಪಾದಾನಂಚಾಧಿಕರಣಂ ಷಡ್ವಿಧಂಕಾರಕಂಸ್ಮೃತಂ।

ಎಂಬ ಶ್ಲೋಕದಲ್ಲಿ ಹೇಳಿರುವ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ, ಎಂಬ ಷಟ್ಕಾರಕದಲ್ಲೂ, ಈ ಕರ್ತಾರ್ದಿಕಾರಕ ವ್ಯವಹಾರವಿಲ್ಲದ ಸಂಬಂಧ ಸಾಮಾನ್ಯರೂಪಾರ್ಥದಲ್ಲೂ, ಬರುವುದು.

ಇಲ್ಲಿಕಾರಕವೆಂದರೆ,—'ಕರೋತಿಕ್ರಿಯಾಂ ನಿರ್ವರ್ತಯತಿ, ಎಂಬ ವಿಗ್ರಹದಿಂದ ಕ್ರಿಯೆಯನ್ನು ಹುಟ್ಟಿಸುವದು ಕಾರಕವೆಂದು ಅರ್ಥವಾಗುವುದು. ಇದಕ್ಕೆ ಕೆಲವರು,—'ಕರೋತಿ ಕರ್ತೃ, ಕರ್ಮ, ಇತ್ಯಾದಿವ್ಯಪದೇಶಾರ್ಹ, ಎಂಬ ವ್ಯುತ್ಪತ್ತಿಯನ್ನು ತೋರಿಸುವರು. ಈ ಎರಡು ತೆರವಾದ ವಿಗ್ರಹದಿಂದಲೂ, ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ, ಎಂಬಿವುಗಳೇ ಕಾರಕ ಸಂಜ್ಞೆಯನ್ನು ಹೊಂದಿರುವವೆಂದರ್ಥವಾಗುವುದು. ಆದುದರಿಂದಲೇ ಪತಂಜಲಿ ಮೊದಲಾದ ಸಂಸ್ಕೃತ ವ್ಯಾಕರಣಜ್ಞರು, 'ಕ್ರಿಯಾಜನಕಂ ಹಿಕಾರಕಂ, ಎಂದು ಹೇಳಿರುವರು.

ಆದರೆ, ಮೇಲೆ ಹೇಳಿರುವಂತೆ ಕಾರಕಶಬ್ದಾರ್ಥವು ಕರೋತಿ, ಎಂಬ ವಿಗ್ರಹವನ್ನು ತೋರಿಸಿ ಕರ್ತ್ರರ್ಥದಲ್ಲಿ, ಕೃ, ಎಂಬ ಧಾತುವಿನಮೇಲೆ ಪ್ರತ್ಯಯವನ್ನು ಮಾಡಿರುವದರಿಂದ ಯಾವದು ಕ್ರಿಯೆಯನ್ನು ಸ್ವತಂತ್ರವಾಗಿ ಹುಟ್ಟಿಸುವುದೋ, ಅದೆ ಕಾರಕ ಎಂದು ಅರ್ಥವಾಗುವುದು. ಇದರಿಂದ ಕರ್ತೃವೊಂದೇ ಕಾರಕಸಂಜ್ಞೆಯುಳ್ಳದ್ದು, 'ಕ್ರಿಯತೆ ಇತಿಕರ್ಮ, ಎಂಬ ವಿಗ್ರಹದಿಂದ ಒಂದು ಕ್ರಿಯೆಯಿಂದ ಹುಟ್ಟಿದ ಮುಖ್ಯ ಫಲಕ್ಕೆ ಆಶ್ರಯವಾದುದು ಕರ್ಮವೆಂತಲೂ, 'ಕ್ರಿಯತ ಅನೇನೇತಿಕರಣಂ, ಎಂಬ ವಿಗ್ರಹದಿಂದ ಕ್ರಿಯೆಗೆ ಮುಖ್ಯಸಾಧಕವಾದುದು ಕರಣವೆಂತಲೂ, ಸಮ್ಪ್ರದೀಯತೆ ಅಸ್ಮೈ ಇತಿಸಂಪ್ರದಾನಂ, ಎಂಬ ವಿಗ್ರಹದಿಂದ ದಾನಕ್ರಿಯೆಗೆ ಉದ್ದೇಶ್ಯವಾದುದು ಎಂದರೆ,—ಯಾರಿಗೆ ದಾನವಾಡುತ್ತಾನೋ ಅವನು ಸಂಪ್ರದಾನವೆಂತಲೂ, ಅಪಾದೀಯತೆ ಅಸ್ಮಾದಿತ್ಯಾಪಾದಾನಂ, ಎಂಬ ವಿಗ್ರಹದಿಂದ ಒಂದಕ್ಕೊಂದಕ್ಕೆ ಇರುವ ಸಂಬಂಧವು ಬಿಡುವಾಗ ಯಾವದು ಅವಧಿಭೂತವಾಗಿರುವುದೋ ಎಂದರೆ ಪ್ರಕೃತದಲ್ಲಿ ಪ್ರಯೋಗಿಸಲ್ಪಟ್ಟ ಧಾತುವಿನ ಕ್ರಿಯೆಗೆ ಆಶ್ರಯವಾಗದೆ ಆ ಕ್ರಿಯೆಯಿಂದುಂಟಾಗುವ ವಿಭಾಗಕ್ಕೆ ಮಾತ್ರ ಆಶ್ರಯವಾಗಿರುವುದೋ ಅದು ಅಪಾದಾನವೆಂತಲೂ

ಸ್ಪಷ್ಟವಾಗಿ ವಿಭಾಗಿಸಿ ಬೋಧಿಸುವ ಪ್ರತ್ಯಯಗಳಿಗೆ ಹೆಸರಾಗುವುದು. ಈ ವಿಭಕ್ತಿ ಶಬ್ದಕ್ಕೆ ಇಂತಹ ಅರ್ಥವನ್ನು ಅಂಗೀಕರಿಸಿರುವುದರಿಂದ ಲೋಕದಲ್ಲಿ ವಿಭಕ್ತಿಪ್ರತ್ಯಯಗಳೆಂದು ವ್ಯವಹಾರವನ್ನು ಹೊಂದದಿರುವ ಕೆಲವು ನಾಮಪದಗಳಮೇಲೂ, ಧಾತುಗಳಮೇಲೂ, ಬರತಕ್ಕ ಪ್ರತ್ಯಯಗಳಿಗೂ ಈ ಸಂಜ್ಞೆಯು ಬರಲೆಂದು ಶಂಕೆಯು ಹುಟ್ಟುವುದು ಆದರೆ ವಿಭಕ್ತಿಶಬ್ದವು, ಪಂಕಜ, ಪೊಳೆ, ತಳಿ, ತೆರೆ, ಮೊದಲಾದ ಶಬ್ದಗಳಂತೆ ಯೋಗರೂಢವೆಂದರಿವುದು. ಆದುದರಿಂದ ನಾಮಗಳಮೇಲೂ, ಧಾತುಗಳಮೇಲೂ ಬಂದು ಪದಸಂಜ್ಞೆಯುಂಟಾಗುವುದಕ್ಕೆ ಯೋಗ್ಯವಾದ ಕೆಲವು ಪ್ರತ್ಯಯಗ

ಇದರಲ್ಲಿ ಹಿಂದಿನಸಂಚಿಕೆಯಲ್ಲಿ ಹೇಳಿರುವ ಪ್ರಕಾರ, ಪ್ರಾತಿಪದಿಕ, ಲಿಂಗ, ಎಂಬ ಸಂಜ್ಞೆಯುಳ್ಳ ಪ್ರಕೃತಿಗಳ ಮೇಲೆ ಬರುವ ಪ್ರತ್ಯಯಗಳು ನಾಮವಿಭಕ್ತಿಗಳೆಂತಲೂ, ಧಾತುಗಳ ಮೇಲೆ ಕರ್ತೃರ್ಥದಲ್ಲೂ ಕರ್ಮಾರ್ಥದಲ್ಲೂ, ಭಾವಾರ್ಥದಲ್ಲೂ, ಬಂದು ಪದಸಂಜ್ಞೆಯನ್ನುಂಟುಮಾಡುವ ಪ್ರತ್ಯಯಗಳು ಆಖ್ಯಾತವಿಭಕ್ತಿಗಳೆಂತಲೂ ವ್ಯವಹರಿಸಲ್ಪಡುವುವು. ಇವುಗಳನ್ನೇ ಸಂಸ್ಕೃತ ವ್ಯಾಕರಣದಲ್ಲಿ ನಾಮವಿಭಕ್ತಿಗಳಿಗೆ ಸುಪ್ಪ್ರತ್ಯಯವೆಂತಲೂ, ಆಖ್ಯಾತವಿಭಕ್ತಿಗಳಿಗೆ ತಿಙ್ಪ್ರತ್ಯಯವೆಂತಲೂ, ವ್ಯವಹರಿಸುವರು. ಇವುಗಳಲ್ಲಿ ಸುಪ್ಪ್ರತ್ಯಯಗಳನ್ನು ಮಾತ್ರ, ಪ್ರಥಮೆ, ದ್ವಿತೀಯೆ, ತೃತೀಯೆ, ಚತುರ್ಥಿ, ಪಂಚಮಿ, ಷಷ್ಠಿ, ಸಪ್ತಮಿ, ಎಂದು ಏಳುಭಾಗಗಳನ್ನಾಗಿ ಮಾಡಿ, ಅವುಗಳಿಗೆ ಪ್ರಥಮಾವಿಭಕ್ತಿ, ದ್ವಿತೀಯಾ ವಿಭಕ್ತಿ, ಎಂದು ಮೊದಲಾದ ಸಂಜ್ಞೆಗಳನ್ನಿಟ್ಟು ಪ್ರತಿ ವಿಭಕ್ತಿಗಳಲ್ಲೂ, ಏಕವಚನ' ದ್ವಿವಚನ, ಬಹುವಚನ, ವೆಂದು ಮೂರುಮೂರು ವಚನಗಳಿರುವವೆಂದು, ಹೇಳಿರುವರು. ಆದರೆ ಸಂಬೋಧನ ವಿಭಕ್ತಿಯೆಂದು ಸರ್ವ ಪ್ರಸಿದ್ಧವಾದ ವ್ಯವಹಾರವಿರುವುದು. ಆದುದರಿಂದ ಎಂಟುವಿಭಕ್ತಿಗಳೆಂದು ಹೇಳಬೇಕು. ಎಂದು ಶಂಕೆಯು ಹುಟ್ಟುವುದು. ಆದಾಗ್ಯೂ ಸಂಬೋಧನಾರ್ಥದಲ್ಲೂ ಪ್ರಥಮೆಯನ್ನೇ ಉಪಯೋಗಿಸುವದರಿಂದ ಏಳೇ ವಿಭಕ್ತಿಗಳೆಂದೂ ಇಪತ್ತೊಂದೇ ವಚನಗಳೆಂದೂ ಹೇಳಬೇಕು. ಈ ವ್ಯವಹಾರವು ಅನಾದಿಕಾಲದಿಂದ ಸಂಸ್ಕೃತಕ್ಕೆ ಬಂದಿರುವುದು. ಇದರಂತೆ ಕೆಲವು ದೇಶಭಾಷೆಗಳಲ್ಲೂ ಭಾಷಾಭಿಜ್ಞರು ಕಲ್ಪಿಸಿರುವರು. ಪ್ರಕೃತದಲ್ಲಿ ಕನ್ನಡಭಾಷೆಗೆ ಏಳುವಿಭಕ್ತಿಗಳನ್ನು ಅಂಗೀಕರಿಸಿದ್ದರೂ ದ್ವಿವಚನವನ್ನು ಮಾತ್ರ ಅಂಗೀಕರಿಸದೆ ಇರುವುದರಿಂದ ನಾನಾವಿಭಕ್ತಿಪ್ರತ್ಯಯಗಳು ಹದಿನಾಲ್ಕೆಂದು ತಿಳಿಯಬೇಕು.

98 ನೇ ನವಂಬರು ತಿಂಗಳ ಲೆಕ್ಕದ ಉತ್ತರಗಳು.

ಗಣಿತ

4. ಎ, ಹಣವ $\frac{3}{4}$ ಭಾಗವು ಬಿ, ಹಣದ $\frac{7}{8}$ ಭಾಗಕ್ಕೆ ಸಮ.

∴ ,, ,, 1 ,, $\frac{7}{8}\times\frac{4}{3}=\frac{7}{6}$ ಭಾಗಕ್ಕೆ ಸಮ.

ಬಿ, ಹಣದ $\frac{5}{16}$ ಭಾಗವು ಸಿ. ಹಣದ $\frac{3}{10}$ ಭಾಗಕ್ಕೆ ಸಮ.

∴ ,, 1 ,, ,, $\frac{3}{10}\times\frac{5}{16}$,,

∴ ,, ,, $\frac{7}{6}$,, ,, $\frac{3\times16\times7}{10\times5\times6}=\frac{28}{25}$ ಭಾಗಕ್ಕೆ ಸಮ

∴ ಸಿ, ಹಣವು ಎ, ಹಣವ $\frac{1}{\frac{28}{25}}=\frac{25}{28}$ ಭಾಗವಾಗಿದೆ.

5. 16 ರೂ 2 ಆ 6 ಪೈಗಳ $\frac{18}{27}$ = 10 ರೂ 12 ಆ 4 ಪೈ. ಮೊತ್ತ ದ್ವಿಗುಣವಾಗಿದೆ. ಅಂದರೆ 2 ಭಾಗವಾಗಿದೆ, ಈಗ ಇರುವದು = $\frac{1}{2}$ ಭಾಗ;

∴ ತೆಗೆದುಕೊಂಡದ್ದು = $2-\frac{1}{2}$ ಅಥವಾ $1\frac{1}{2}$ ಭಾಗ. ಅಥವಾ 10 ರೂ 12 ಆ 4 ಪೈ ∴ 1 ಭಾಗ = 7 ರೂ 2 ಆ $10\frac{2}{3}$ ಪೈ.

6 1 ಪದಾರ್ಥಕ್ಕೆ 1 ರೂ 3 ಆ 9 ಪೈ ಅಥವಾ $\frac{79}{64}$ ರೂಪಾಯಿ.

∴ 64 ,, $\frac{79\times64}{64}$ = 79 ರೂಪಾಯಿ.

ಅಧಿಕ್ರಿಯತೆ ಅಸ್ಮಿನ್ನಿತ್ಯಧಿಕರಣಂ, ಎಂಬ ವಿಗ್ರಹದಿಂದ ಕರ್ತೃಕರ್ಮಗಳ ಮೂಲಕ ಕ್ರಿಯಾಶ್ರಯವಾದುದು ಯಾವದೋ ಅದು ಅಧಿಕರಣವೆಂತಲೂ, ವ್ಯವಹರಿಸಲ್ಪಡುವುದು. ಅದರಿಂದ ಕರ್ಮಾದಿಗಳು ಕಾರಕಗಳೆಂದು ವ್ಯವಹರಿಸುವದಕ್ಕಾಗದು, ಎಂದು ಶಂಕಿಸಬಹುದು. ಆದರೆ,—ಇಲ್ಲಿ ಕ್ರಿಯೆ ಎಂಬುದು ಮುಖ್ಯ, ಅಮುಖ್ಯ, ಎಂಬ ಭೇದಗಳಿಂದ ಎರಡು ತೆರವಾಗಿರುವುದು. ಅಲ್ಲಿ ಯಾವದು ಧಾತುವಿನಿಂದ ಸಾಕ್ಷಾತ್ತಾಗಿ ಹೇಳಲ್ಪಡುತ್ತೋ ಅದು ಮುಖ್ಯಕ್ರಿಯೆಯು, ಯಾವದು ಆ ಮುಖ್ಯ ಕ್ರಿಯೆಯು ಹುಟ್ಟುವುದಕ್ಕೆ ಸಾಧಕವಾಗಿರುವುದೋ ಅದೇ ಆ ಮುಖ್ಯಕ್ರಿಯೆಯು. ಇವು ರಾಮನು ಕಟ್ಟಿಗೆಯಿಂದ ಗಡಿಗೆಯಲ್ಲಿ ಅನ್ನವನ್ನು ಬೇಯಿಸುತ್ತಾನೆ, ಎಂಬ ವಾಕ್ಯದಲ್ಲಿ, ರಾಮನು ಬೆಯಿಸುತ್ತಾನೆ, ಕಟ್ಟಿಗೆ ಉರಿಯುತ್ತದೆ, ಗಡಿಗೆ ನೀರನ್ನೂ ಅಕ್ಕಿಯನ್ನೂ ಧರಿಸುತ್ತದೆ, ಅನ್ನವು ಮೆತ್ತಗಾಗುತ್ತೆ ಎಂದು ತೋರುವುದು. ಇಲ್ಲಿ ಬೆಯಿಸುವುದು ಸಾಕ್ಷಾತ್ತಾಗಿ ಧಾತ್ವರ್ಥವಾಚ್ಯವಾದುದರಿಂದ ಮುಖ್ಯವೆಂದು ತಿಳಿಯಬೇಕು. ಇದಕ್ಕೆ ಸಹಾಯವಾಗಿ ಕಟ್ಟಿಗೆ ಉರಿಯುತ್ತದೆ, ಗಡಿಗೆ ನೀರನ್ನು ಧರಿಸುತ್ತೆ, ಅಕ್ಕಿ ಮೆತ್ತಗಾಗುವದ ಇವೆಲ್ಲ ಧಾತುವಿಗೆ ಅರ್ಥವಾಗಿದ್ದರೂ ರಾಮನ ಕ್ರಿಯೆಯು ಮುಖ್ಯವು. ಕಟ್ಟಿಗೆ ಮೊದಲಾದವುಗಳ ಕ್ರಿಯೆಯು ಅಮುಖ್ಯವು ಆದುದರಿಂದ ಕರ್ತೃ ಮೊದಲಾದ ಆರರಲ್ಲಿ ಮುಖ್ಯ ಕ್ರಿಯೆಯುಳ್ಳದ್ದೂ ಅಮುಖ್ಯ ಕ್ರಿಯೆಯುಳ್ಳದ್ದು, ಎಂಬ ಪ್ರಭೇದವಿರುವದು. ಆದುದರಿಂದ ಎಲ್ಲವೂ ಕ್ರಿಯಾಶ್ರಯವಾಗಿ ಕ್ರಿಯೆಯನ್ನುಹುಟ್ಟಿಸುವುದರಿಂದ ಇವುಗಳಿಗೆ ಕಾರಕಸಂಜ್ಞೆ ಬರುವುದು. ಈ ಕಾರಕಗಳಲ್ಲಿ ಸ್ವತಂತ್ರವಾಗಿ ಕ್ರಿಯಾಶ್ರಯವಾದುದಕ್ಕೆ ಅದೇ ಕರ್ತೃಸಂಜ್ಞೆಯನ್ನು ಹೊಂದಿರುವುದು. ಯಾವುವು ಪರಾಧೀನವಾದ ಕ್ರಿಯಾಶ್ರಯವಾಗುವುವೋ ಅವು ಕರ್ಮಾದಿಸಂಜ್ಞೆಗಳನ್ನು ಹೊಂದುವುವು. ಆದರೆ ಕರ್ಮಾದಿಗಳಲ್ಲೂ ಅದರದರ ಕ್ರಿಯೆಗಳಲ್ಲಿ ಅದಕ್ಕದಕ್ಕೆ ಸ್ವಾತಂತ್ರ್ಯವಿರುವದರಿಂದ ಅದನ್ನು ವಿವಕ್ಷೆಯನ್ನು ಮಾಡಲು ಅವಕ್ಕೂ ಕರ್ತೃಸಂಜ್ಞೆಯು ಬರಬಹುದು. ಆದುದರಿಂದಲೆ ಸಂಸ್ಕೃತದಲ್ಲೂ ಶಬ್ದಾನುಶಾಸನದಲ್ಲೂ, ‘ವಿವಾಕ್ಷಾತಃಕಾರಕವಿಭಕ್ತ್ಯಯೋ ನಾನಾವಿಧಂತಿ, ಎಂದು ಅವರವರ ಇಚ್ಛಾನುಸಾರನಾಗಿ ಕಾರಕಗಳನ್ನು ಹೇಳಬಹುದು ಎಂದು ಹೇಳಿ, ಕಾಷ್ಠಂ ಪಚತಿ, ಸ್ಥಾಲೀ ಪಚತಿ, ಪೂವಿಂದರ್ಚಿಸಿದಂ, ಎಳ್ಳೊಳೆಣ್ಣೆ, ಎಳ್ಳೆಣ್ಣೆ, ಅಕ್ಕಿಯನ್ನು ಬೇಯಿಸುತ್ತಾನೆ ಅಕ್ಕಿ ಬೆಂದುದು, ಮೊದಲಾದ ಉದಾಹರಣೆಗಳನ್ನು ಕೊಟ್ಟಿರುವುದು.

4. (a) 5 ಎಂಬ ಸಂಖ್ಯೆಯನ್ನು ಬಾಲಕರಿಗೆ ತಿಳಿಸುವದಕ್ಕೆ ಅನುಕೂಲಿಸುವಂತೆ ಟಿಪ್ಪಣಿಯನ್ನು ಸರಿಯಾದಕ್ರಮದಲ್ಲಿ ಬರೆಯಿರಿ

(b) ವ್ಯವಕಲನವನ್ನು ಬೋಧಿಸುವುದಕ್ಕಿರುವ ಮಾರ್ಗಗಳಲ್ಲೊಂದನ್ನು ವಿವರಿಸಿ.

5. (a) ಪದ್ಯವನ್ನು ಬೋಧಿಸುವ ಕ್ರಮವು ಹೇಗೆ?

(b) ನಾಲ್ಕನೇ ತರಗತಿಗೆ ಉಕ್ತಲೇಖನವನ್ನು ನಡೆಯಿಸತಕ್ಕ ಕ್ರಮವನ್ನು ವಿವರಿಸಿ.

6. (a) ಒಂದೇ ಅಜ್ಞೆಯನ್ನು ಅನೇಕಾವೃತ್ತಿ ಹೇಳಬಾರದು (2) ಅಂಶಗಳನ್ನು ಕೂಡಿದಮಟ್ಟಿಗೂ ಬಾಲಕರಿಂದಲೇ ಹೇಳಿಸಬೇಕು. (3) ಬೋಧಿಸಿದ ಅಂಶಗಳನ್ನು ಆಗಾಗ್ಗೆ ಆವೃತ್ತಿಮಾಡಿಸುತ್ತಿರಬೇಕು. (4) ಹೇಳಿಕೊಟ್ಟ ಅಂಶಗಳಿಗೆ ಪರಸ್ಪರ ಸಂಬಂಧವನ್ನು ಚನ್ನಾಗಿ ಸ್ಪಷ್ಟಪಡಿಸಬೇಕು. (5) ಉಪಾಧ್ಯಾಯರಲ್ಲಿರಬೇಕಾದ ಗುಣಗಳಲ್ಲಿ ಬಾಲಕರು ತಪ್ಪಾಗಿ ಉತ್ತರ ಹೇಳಿದರೆ ಸರಿಯಾಗಿ ಪ್ರಶ್ನೆಮಾಡಿ ಅವರಿಂದಲೇ ಅವುಗಳನ್ನು ತಿದ್ದಿಸುವಂತೆ ಮಾಡುವದೊಂದು. (6) ಬೋಧಿಸುವಾಗ ಎಷ್ಟೆಷ್ಟು ಇಂದ್ರಿಯಗಳ ಮೂಲಕ ಬಾಲಕರಿಗೆ ಅಂಶಗಳನ್ನು ತಿಳಿಸಬಹುದೊ ಅಷ್ಟು ಇಂದ್ರಿಯಗಳ ಮೂಲಕವಾಗಿಯೂ ತಿಳಿಸಬೇಕು.

ನಮ್ಮ ಮೈಸೂರು ಸಂಸ್ಥಾನದ ಮಹಾವಿದ್ವಾಂಸರಾದ ಪಂಡಿತರತ್ನಂ—ಬೆಂಗಳೂರು ಸೀತಾರಾಮ ಶಾಸ್ತ್ರಿಗಳು ಈ ವಿಳಂಬಿ ಸಂವತ್ಸರದ ವೈಶಾಖ ಬಹುಳ ೧೨ ಗುರುವಾರ (೯-೫-೯೯) ಮಧ್ಯಾಹ್ನ ಪರಂಧಾಮವನ್ನು ಹೊಂದಿದರೆಂದು ತಿಳಿಸಲು ಬಹಳ ವ್ಯಸನಪಡುತ್ತೇವೆ.

ಇವರ ಜನ್ಮಸ್ಥಳ ಬೆಂಗಳೂರು. ಬಾಲ್ಯದಲ್ಲಿ ಇವರು ಸಾಮಾನ್ಯವಾಗಿ ಸಂಸ್ಕೃತಕಾವ್ಯಗಳನ್ನು ಓದಿಕೊಂಡಿದ್ದರು. ಇವರಿಗೆ ಮೈಸೂರಲ್ಲಿ ಅಸ್ಥಾನ

79 ರೂಪಾಯಿ ಕೂಟ್ಟರ ೬೪ ಪದಾರ್ಥ ಬರುತ್ತೆ. ಆದರೆ ಲೆಕ್ಕದಲ್ಲಿ I000 ದಮೇಲೆ I500 ರ ಒಳಗೆ ಕನಿಷ್ಟ ಸಂಖ್ಯೆ ಬೇಕಾಗಿದೆ.

∴ $64 \times I6 = I024$.

ಬಿ. ವೆಂಕಟರವಣಯ್ಯ,
ಹೆಡ್‌ಮಾಸ್ಟರ್
ನಂಜನಗೂಡು ತಾ॥ ಗೌ॥ ಕನ್ನಡಸ್ಕೂಲ್

ಗೌರ್ನಮೆಂಟ್ ನಾರ್ಮಲ್‌ಸ್ಕೂಲ್ ಮೈಸೂರು.

12—12—98. ತರಗತಿ VI ಪಾಠಕ್ರಮ. ಕಾಲ 10–I

1—ನೀವು ಬರೆಯುವ ಉತ್ತರಗಳನ್ನು ಅವಶ್ಯಕವಾದಾಗ ಉದಾಹರಣೆಗಳಿಂದ ಸ್ಪಷ್ಟಪಡಿಸಬೇಕು.

(a) ಬಾಲಕರಿಗೆ ಅಕ್ಷರ ಪರಿಚಯವನ್ನುಂಟುಮಾಡುವುದಕ್ಕೆ ಎಷ್ಟುಮಾರ್ಗಗಳಿವೆ? ಅವುಗಳು ಯಾವವು?

(b) ಸದ್ಯದಲ್ಲಿ ನಮ್ಮ ದೇಶದ ಬಾಲಕರಿಗೆ ಯಾವಕ್ರಮವನ್ನನುಸರಿಸಿ ಅಕ್ಷರ ಪರಿಚಯವನ್ನುಂಟುಮಾಡಬೇಕು? ವಿವರಿಸಿ?

2. (a) ಚೆನ್ನಾಗಿ ಬರೆಯುವುದೆಂದರೇನು? ಇದು ಬಾಲಕರಿಗೆ ಬರುವಂತೆ ಬರವಣಿಗೆಯನ್ನು ಕಲಿಸುವ ಕ್ರಮ ಹೇಗೆ?

(b) ತರಗತಿಯಲ್ಲಿ ಕಾಪಿ ಬರೆಯಿಸುವ ಕ್ರಮವನ್ನು ವಿವರವಾಗಿ ತಿಳಿಸಿ?

3. (a) ಅಂಕಗಣಿತಬೋಧನೆಯಿಂದ ಫಲವೇನು?

(b) ಅಂಕಗಣಿತ ಬೋಧನೆಯಲ್ಲಿ ಈಗ ಸಾಮಾನ್ಯವಾಗಿರುವ ಕೊರತೆಗಳಲ್ಲಿ ಎರಡನ್ನು ಬರೆದು, ಅವುಗಳನ್ನು ನೀವು ಹೇಗೆ ತಪ್ಪಿಸುವರೆಂಬುದನ್ನು ಬರೆಯಿರಿ.

ವೇಶೇಷಿಕ ಪಂಡಿತಪರೀಕ್ಷೆಗಳಿಗೂ ಪರೀಕ್ಷಾಧಿಕಾರಿಗಳಾಗಿದ್ದುದು ಆ ಪರೀಕ್ಷೆಗಳಿಗೆ ಬಹಳ ಗೌರವಾಸ್ಪದವಾಗಿತ್ತೆಂಬುದು ಅತಿಶಯೋಕ್ತಿಯಲ್ಲ (ಇವರು ರಚಿಸಿರುವ ಗ್ರಂಥಗಳ ವಿಷಯವನ್ನು ಮತ್ತೊಂದು ವೇಳೆ ತಿಳಿದು ಪ್ರಕಟಿಸುವೆವು.)

ಶಾಸ್ತ್ರಿಗಳು ದೇಶಾಂತರದ ಅನೇಕ ರಾಜಾಸ್ಥಾನಗಳಲ್ಲಿ ಉತ್ತಮವಾದ ವಿದ್ವದ್ಬಹುಮಾನಗಳನ್ನು ಪಡೆದಿದ್ದುದು ಮೈಸೂರು ಸಂಸ್ಥಾನದ ವಿದ್ವನ್ಮಂಡಲಿಗೆ ಪ್ರತಿಷ್ಠಾವಹವಾಗಿತ್ತು. ರಾಜಾಸ್ಥಾನಕ್ಕೆ ಇಂಥಾ ವಿದ್ವಾಂಸರು ಭೂಷಣವಾಗಿರುವುದನ್ನು ಪರ್ಯಾಲೋಚಿಸಿ, ನಮ್ಮ ಸಂಸ್ಥಾನಾಧಿಪತಿಗಳಾಗಿದ್ದ ಮಹಾರಾಜ ಶ್ರೀ ಚಾವ.ರಾಜೇಂದ್ರವಡೆಯರವರು ತಮ್ಮ ದರ್ಬಾರಿನಲ್ಲಿ ಶಾಸ್ತ್ರಿಗಳವರಿಗೆ "ಪಂಡಿತ ರತ್ನಂ" ಎಂಬ ಹೆಸರನ್ನೂ ರತ್ನಕಟಕರೂಪವಾದ ತೋಡಿಗೆಯನ್ನೂ ಬಿರುದಾಗಿ ಕೊಡಿಸಿ, ತಮ್ಮ ನಿಜವಾದ ವಿದ್ವದಭಿಮಾನವನ್ನು ಪ್ರಕಟಿಸಿದರು. [ಎಂಥಾ ಪ್ರಭು! ಎಂಥಾ ಪಂಡಿತರು!]

ಶಾಸ್ತ್ರಿಗಳು—ವಿದ್ಯಾಪ್ರಿಯರು ; ಗುಣೈಕಪಕ್ಷಪಾತಿಗಳು ; ; ಶಿಷ್ಯವತ್ಸಲರು ; ರಸಿಕರು ; ಸಹೃದಯಾಗ್ರಮಣಿಗಳು ಮುಖ್ಯ ಬಹುಸುಲಭರು. ಇಂಥವರ ಅಕಸ್ಮಿಕಮರಣವು ಯಾರಿಗೆತಾನೇ ಸಂಕಟಕರವಲ್ಲ.

ಶಾಸ್ತ್ರಿಗಳಿಗೆ ಇನ್ನೂ ೬೩ ವಯಸ್ಸು. ಕಾಯಶಕ್ತಿಯೇನೂ ಕಡಮೆಯಾಗಿರಲಿಲ್ಲ. ಪಾಠಪ್ರವಚನಮಾಡುವುದರಲ್ಲಿ ಈಷದಪಿ ಆಲಸ್ಯವಾಗಲಿ ಅನಾದರವಾಗಲಿ ಇರಲಿಲ್ಲ. ವ್ಯಾಸಂಗವಾಡತಕ್ಕ ಶಿಷ್ಯರನ್ನು ಕಂಡರೆ ಪ್ರಾಣ. ಇವರು ೧೦—೧೫ ದಿನದ ಪ್ಲೇಗ್ ಜ್ವರದಿಂದಲೇ ಇಹಲೋಕವನ್ನು ಬಿಟ್ಟರೆಂಬುದು ಬಹಳ ಶೋಚನೀಯವೇ ಸರಿ.

ಇಂಥಾ ಪೂರ್ಣಪಂಡಿತರ ವಿಯೋಗವು ಸಂಸ್ಕೃತವಿದ್ಯೆಗೆ ಬಹಳ ಕೊರತೆಯನ್ನು ಉಂಟುಮಾಡುತ್ತದೆ [ಅಹಾ ! ಭರತಖಂಡದ ದುರ್ದೆಶೆಯೇ !]

ಆಸೇತುಹಿಮವಾಚಲಪರ್ಯಂತವಾಗಿ ಹುಡುಕಿ ಎಣಿಸಿದರೆ ನಮ್ಮ ಶಾಸ್ತ್ರಿಗಳಂತಹ ಪೂರ್ಣಪಂಡಿತರು ಈಗ್ಗೆ ಕೆಲವರೇ ಸಿಕ್ಕಾರು. ಅಂಥಾವರ ಸಂಖ್ಯೆಯು ಕಾಲಕ್ರಮವಾಗಿ ಕಡಮೆಯಾಗುತ್ತಾ ಬರುವುದು. ಇವರಲ್ಲಿರುವ ಶಾಸ್ತ್ರಾರ್ಥ ರಹಸ್ಯಗಳನ್ನು ತಿಳಿದುಕೊಂಡು ಮುಂದಕ್ಕೆ ಅಯ್ಯರ್ಯರಿಗಳನ್ನು ಬೇಹುದಮಟ್ಟಿಗಾದರೂ ಸಂರಕ್ಷಿಸಿಕೊಂಡಿರುವಂತೆ ಶಕ್ಯ ಏರ್ಪಾಡುಗಳನ್ನು ಮಾಡುವುದರಲ್ಲಿ ಸಂಸ್ಥಾನಾಧಿಪತಿಗಳು

ಪಂಡಿತರಾಗಿದ್ದ ರಾಮಾಜೋಯಿಸರು ತಮ್ಮ ಮಗಳನ್ನು ಕೊಟ್ಟು ಮದುವೆಮಾಡಿ ಇವರ ತಂದೆಗಳಾದ ರಾಮಶಾಸ್ತ್ರಿಗಳಿಗೆ ಅರಮನೆಯಲ್ಲಿ ಸಂಬಳ ಮಾಡಿಸಿ ಇಲ್ಲೇ ಇರಿಸಿಕೊಂಡರು. ಶಾಸ್ತ್ರಿಗಳು ಕಾವ್ಯಚಂಪುಗಳನ್ನು ಓದುವಾಗಲೇ ಬಹಳ ವ್ಯಾಸಂಗ ಮಾಡುವರೆಂದೂ ಬುದ್ಧಿಶಾಲಿಗಳೆಂದೂ ತಿಳಿದು, ಈ ರಾಜಧಾನಿಯಲ್ಲಿ ಪ್ರಸಿದ್ಧ ಪಂಡಿತರಾಗಿದ್ದ ವಿದ್ವಾ-ಕುಣಿಗಲು—ರಾಮಶಾಸ್ತ್ರಿಗಳು ಇವರಿಗೆ ತರ್ಕಶಾಸ್ತ್ರವನ್ನು ಓದುವಂತೆ ಪ್ರೋತ್ಸಾಹಪಡಿಸಿ, ತಾವೇ ತರ್ಕಶಾಸ್ತ್ರದ ೭—೮ ಗ್ರಂಥಗಳನ್ನು ಪಾಠಹೇಳಿದರು. ಇವರಲ್ಲೇ ಕುಣಿಗಲು- ರಾಮಶಾಸ್ತ್ರಿಗಳ ಪ್ರಿಯಶಿಷ್ಯರಾಗಿದ್ದ ವಿದ್ವಾ—ರವಾಸದಾಚಾರ್ಯರವರು ಸೀತಾರಾಮಶಾಸ್ತ್ರಿಗಳಿಗೆ ತಾವೇ ಪಾಠಹೇಳಿಕೊಡುವುದಕ್ಕೆ ಅಳಿಯಪ್ಪ, ತಮ್ಮ ಗುರುಗಳ ಆಜ್ಞೆ ಪಡೆದು ತರ್ಕ ಅಲಂಕಾರ ಸಾಹಿತ್ಯಗಳನ್ನು ಸಾಂಗೋಪಾಂಗವಾಗಿ ಪಾಠಹೇಳಿ ಪೂರ್ಣಪಂಡಿತರಾಗುವಂತೆ ಮಾಡಿದರು. ಶಾಸ್ತ್ರಿಗಳ ಪಾಠಾಚಾರ್ಯರ ವಿಶ್ವಾಸಪೂರ್ವಕವಾದ ಉಪದೇಶಗಳಿಂದಲೂ, ತಮ್ಮ ಮೇಧಾಶಕ್ತಿ ವ್ಯಾಸಂಗಗಳ ಬಲದಿಂದಲೂ ಬಹಳ ಬೇಗ ಅಸಾಧಾರಣವಾದ ಪಾಂಡಿತ್ಯವನ್ನು ಪಡೆದರು. ಹಿಂದೆ ಮಹಾಪ್ರಭುಗಳಾದ ಶ್ರೀಕೃಷ್ಣರಾಜ ವಡೆಯರವರ ಕಾಲದಲ್ಲಿ ದೂರದೇಶಗಳಿಂದಲ್ಲ ಮಹಾಮಹಾ ವಿದ್ವಾಂಸರನೇಕರು ಈ ರಾಜಧಾನಿಗೆ ಬಂದು ಅಸಾಮಾನ್ಯ ಶಾಸ್ತ್ರವಾದಗಳನ್ನು ನಡೆಸಿ, ವಿದ್ವದ್ಬಹುಮಾನಗಳನ್ನು ಪಡೆಯುತ್ತಿದ್ದರೆಂಬುದು ಸುಪ್ರಸಿದ್ಧವಾಗಿಯೇ ಇದೆಯಷ್ಟೆ ಶಾಸ್ತ್ರಿಗಳವರು ತಮ್ಮ ಪಾಂಡಿತ್ಯದಿಂದಲೂ ರಸಿಕತೆಯಿಂದಲೂ ವಿದ್ವತ್ಸಭೆಗಳಲ್ಲಿ ಶಾಸ್ತ್ರವಾದಗಳನ್ನು ನಡೆಸುತ್ತಾ, ಮಹಾಪ್ರಭುಗಳವರ ವಿಶೇಷ ವಿಶ್ವಾಸಕ್ಕೆ ಪಾತ್ರರಾಗಿ ಅಸ್ಥಾನದ ಮಹಾವಿದ್ವಾಂಸರನ್ನಿಸಿಕೊಂಡು, ಶಾಸ್ತ್ರವಾದಾರ್ಥಗಳನ್ನು ಪ್ರಬಲಪಡಿಸುತ್ತಾ ಬಂದುದಲ್ಲದೆ ಅನೇಕ ಶಿಷ್ಯಜನರಿಗೆ ಶಾಸ್ತ್ರಪ್ರವಚನ ಮಾಡುತ್ತಲೂ ಬಂದರು.

ಈ ರಾಜಧಾನಿಯಲ್ಲಿ ಮಹಾರಾಜರವರ ಸರಸ್ವತೀ ಪ್ರಾಸಾದವೆಂಬ ಸಂಸ್ಕೃತಸರ್ವವಿದ್ಯಾಶಾಲೆಯನ್ನು ಏರ್ಪಡಿಸಿದುದು ಮೊದಲೊಂಡು ಶಾಸ್ತ್ರಿಗಳವರು ಪಾಠಶಾಲೆಯಲ್ಲಿ ಪ್ರಧಾನಪಂಡಿತರಾಗಿದ್ದುಕೊಂಡು, ತರ್ಕ ಅಲಂಕಾರ ಸಾಂಖ್ಯಯೋಗ ಮುಂತಾದ ಶಾಸ್ತ್ರಗಳನ್ನು ಅನೇಕಶಿಷ್ಯವರ್ಗಗಳಿಗೆ ಪ್ರವಚನಮಾಡುತ್ತಾ ಇದ್ದುದಲ್ಲದೆ, ಮನೆಯಲ್ಲಿ ಕೆಲವರಿಗೆ ವೇದಾಂತ ಶಾಸ್ತ್ರಪ್ರಸ್ಥಾನಗಳನ್ನೂ ಅನುಗ್ರಹಿಸುತ್ತಿದ್ದರು. ಶಾಸ್ತ್ರಿಗಳು ಸಂಸ್ಥಾನದ ಸಂಸ್ಕೃತಶಾಸ್ತ್ರ ವಿದ್ವತ್ಪರೀಕ್ಷೆಗಳಿಗೂ;

ಅನಂತರದಲ್ಲಿ ಮು॥ ರಾ॥ ಕೃಷ್ಣಸ್ವಾಮೈಯ್ಯಂಗಾರ್ಯರು ಲ್ಯಾಂಟ್‌ಮ್ಯೂಜಿಕ್ ಶಾಸ್ತ್ರದಲ್ಲಿ ಅಲ್ಪಭಾಗವಾದ ಚಿತ್ರವಿಚಿತ್ರತರವಾದ ಮೃಗ, ಪಕ್ಷಿ, ದೇಶ, ಬೆಟ್ಟ, ಸೌಧ ಮುಂತಾದ ಚಿತ್ರಗಳನ್ನು ಸಭಿಕರುಗಳಿಗೆಲ್ಲಾ ಅತ್ಯಾನಂದವಾಗುವ ಹಾಗೆ ತೋರಿಸಿದರು. ನಂತರ ಸಭಿಕರುಗಳೆಲ್ಲಾ ಇಂಥಾ ಆಶ್ಚರ್ಯವನ್ನು ನಾವು ಇಂದಿನವರೆಗೂ ನೋಡಿದ್ದೇ ಇಲ್ಲವೆಂಬದಾಗಿ ಬಹಳ ಸಂತೋಷಪಡುತ್ತಿದ್ದರು.

ಆ ಕಾಲದಲ್ಲಿ ಸ್ಕೂಲು ವಿದ್ಯಾರ್ಥಿಗಳೆಲ್ಲಿ ರಾಮಚಂದ್ರ, ವೆಂಕಟನಾರಾಯಣ, ಗೋಪಾಲಸ್ವಾಮಿ ಎಂಬ ವಿದ್ಯಾರ್ಥಿಗಳು ಈ ಚಿತ್ರವನ್ನು ನೋಡಿದಮೂತ್ರದಲ್ಲಿಯೇ ವಸ್ತುಪಾಠ, ಕಥೆ, ಚರಿತ್ರೆ, ಭೂಗೋಳ ಇವುಗಳಲ್ಲಿ ಹೇಳಿರುವ ವಿಷಯವೆಲ್ಲಾ ಬಂದಿರುತ್ತೆಂಬದಾಗಿ ಜ್ಞಾಪಿಸಿಕೊಂಡು ಪ್ರಶ್ನೆಪೂರ್ವಕವೂದ ಸದುತ್ತರಗಳನ್ನು ಅಲ್ಲಿಯೇ ಹೇಳಿದರು.

ಅನಂತರ ಡೆ॥ ಇನ್‌ಸ್ಪೆಕ್ಟರವರ ಅಪ್ಪಣೆಯನ್ನು ಪಡೆದು ಸ್ಕೂಲ್ ಹೆ॥ ಮಾಸ್ಟರು ಹೇಳಿದ್ದೇನೆಂದರೆ—ಈ ರೀತಿ ನಮ್ಮ ಮೇಲೆ ಪೂರ್ಣ ಕೃಪೆಯಿಟ್ಟು ವಿದ್ಯಾಭಿವೃದ್ಧಿಗೆ ಮಾರ್ಗವನ್ನು ತೋರಿಸಿಕೊಟ್ಟ (ಮ್ಯೂಜಿಕ್) ಪಂಡಿತರಾದ ಕೃಷ್ಣಸ್ವಾಮೈಯ್ಯಂಗಾರ್ಯರ ಪ್ರಯತ್ನವು ಸಫಲವಾಗದೇ ಇರಲಾರದು. ಇವರು ಈ ಶಾಸ್ತ್ರದಲ್ಲಿ ಪಂಡಿತರಾದ ಗಾಯಕವಾಡಿ ಮುಂತಾದ ಅನೇಕ ವಿದ್ವಾಂಸರಾಜರ ಆಸ್ಥಾನಪಂಡಿತರಿಂದಲೂ, ಇನ್ನೂ ಇತರ ಇಂಗ್ಲಿಷ್ ಪಂಡಿತರಿಂದಲೂ (ಸರ್ಟಿಫಿಕೆಟ್) ಯೋಗ್ಯತಾಪತ್ರಿಕೆಯನ್ನು ಪಡೆದಿರುತ್ತಾರೆ. ಮತ್ತು ಬೊಂಬೈ, ಇಂಗ್ಲೆಂಡ್ ಮುಂತಾದ ದೂರದೇಶದಿಂದ ಅನೇಕ ದ್ರವ್ಯವನ್ನು ವ್ಯಯಮಾಡಿ ಸಾಮಾನುಗಳನ್ನು ತರಿಸಿರುತ್ತಾರೆ. ಇಂಥಾವರ ವಿಷಯದಲ್ಲಿ ನಮ್ಮ ವಿದ್ಯಾಭ್ಯಾಸದ ಇಲಾಖೆಯವರು ಈಗಿರುವುದಕ್ಕಿಂತಲೂ ವಿಶೇಷ ಪ್ರೋತ್ಸಾಹಪಡಿಸಿ ಪ್ರತಿಯೊಂದು ಪಾಠಶಾಲೆಯಲ್ಲೂ ವಿದ್ಯಾರ್ಥಿಗಳಿಗೆ ಈರೀತಿ ಉತ್ಸಾಹ ಕೊಟ್ಟರೆ ಇತಃಪರ್ ಬಾಲವಿದ್ಯಾಭ್ಯಾಸವು ಅಭಿವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ.

ಈ ವಿಷಯದಲ್ಲಿ ಡೆ॥ ಇನ್‌ಸ್ಪೆಕ್ಟರವರೂಕೂಡ ಲೋಕದಲ್ಲಿ ಪ್ಲೇಗ್‌ಜಾಡ್ಯದ ಪ್ರವಾಂತರವಿದ್ದಾಗ್ಯೂ ತಮ್ಮ ಗೃಹಕೃತ್ಯವನ್ನು ಲೇಶವೂ ಎಣಿಸದೆ ಕೇವಲ ವಿದ್ಯಾಭಿವೃದ್ಧಿಯಲ್ಲೂ, ಲೋಕೋಪಕಾರದಲ್ಲೂ ಪಂಡಿತ ಪಾಮರರನ್ನು ವಿದ್ಯಾಕೌಶಲ್ಯದಿಂದ ತೃಪ್ತಿಪಡಿಸುತ್ತಾ ಇರುತ್ತಾರೆ ಎಂಬದಾಗಿ ಸ್ಕೂಲುಮಾಸ್ಟರು ಹೇಳಿದರು. ನಂತರ ಸಭೆಯು ಪೂರೈಸಿತು.

ಶ್ರೀಮಂತರೂ ತಕ್ಕ ಪ್ರಯತ್ನಗಳನ್ನು ಮಾಡದೇ ಉಪೇಕ್ಷಿಸುವುದು ಸುತರಾಂ ಉಚಿತವಲ್ಲ. ವಿದ್ಯಾಧನವೆಂದು ಪ್ರಸಿದ್ಧರಾದವರ ಕುಲದಲ್ಲಿ ಹುಟ್ಟಿದ ವೈದಿಕರೂ ಸಹ ಇತರರಂತೆ ಸುಖೋಪಭೋಗಗಳಿಗೆ ಆಸೆಪಟ್ಟು ಕಾಲ ಕಳೆಯದೆ ಲೋಕೋಪಕಾರಾರ್ಥವಾಗಿ ಶಾಸ್ತ್ರಗಳಂತಹ ನಮ್ಮ ಹಿರಿಯರಹಾಗೆ ಶಾಸಾಭ್ಯಾಸಗಳಲ್ಲಿ ಆದರವಿಟ್ಟು ತ್ವರೆಪಡುವುದು ಬಹಳ ಅವಶ್ಯಕವಾದುದೆಂಬುದು ಈ ಸಂದರ್ಭದಲ್ಲಿ ಚಿತ್ತಕ್ಕೆ ತರತಕ್ಕ ವಿಷಯವಾಗಿದೆ

ಮಳವಳ್ಳಿ ತಾ॥ ವ್ಯೂರೇಗಾಲಿ ಸ್ಕೂಲ್.

ಕಂ—ಜಳದಿಂ ಕೊಳಗಳ್ ರೆಯಿಂ ।
ಪೊಳೆವಂದದೆ ವೃದ್ಧಿಪೊಂದಿಮೆರೆವರ್ವಿಬುಧರ್ ॥
ತಿಳಿವಿಂ ಒಯ್ಯನೆ ಬಳೆಯುಂ ।
ತ್ತಳಿವಿಲ್ಲದ ಸುಖಸಮೃದ್ಧಿಪಡೆದುಜ್ವಳಿಪರ್ ॥

ಈ ತಿಂಗಳು ೪ನೇ ಬುಧವಾರ ಸಾಯಂಕಾಲ ಘನವನ್ನು ಹೊಂದಿದ ಡಿಪ್ಯೂಟಿ ಇನ್ಸ್ಪೆಕ್ಟರವರು ಮ॥ರಾ॥ ಶ್ರೀನಿವಾಸರಾವ್ ಬಿ. ಎ, ಯವರು ದಯವಾಡಿಸಿದ್ದರು. ಇವರಕೂಡ ಇಂದ್ರಜಾಲ (ಲ್ಯಾಂಟ್‌ಮ್ಯೂಜಿಕ್) ಮಹೇಂದ್ರಜಾಲ (ಮ್ಯೂಸ್‌ಮ್ಯಾಜಿಕ್) ನಲ್ಲಿ ಪಂಡಿತರಾದ ಎಂ. ಡಿ, ಕೃಷ್ಣಸ್ವಾಮ್ಯಯ್ಯಂಗಾರ್ಯರೂ ದಯವಾಡಿಸಿದರು.

ಮರುದಿವಸ ಪ್ರಾತಃಕಾಲ ಸ್ಕೂಲ್ ಪರೀಕ್ಷೆಯು ನಡೆಯಿತು. ರಾತ್ರಿ ೭॥ ಗಂಟೆಗೆ ಸರಿಯಾಗಿ ಒಂದು ಸಭೆಯು ಸೇರುವಹಾಗೆ ಡೆಪ್ಯೂಟಿ ಇನ್ಸ್ಪೆಕ್ಟರವರು ಅಪ್ಪಣೆಯನ್ನು ಕೊಟ್ಟರು. ಅದೇಪ್ರಕಾರ ಕಾಲಕ್ಕೆ ಸರಿಯಾಗಿ ಸಭೆಯು ಸೇರಿಸಲ್ಪಟ್ಟಿತು. ಆ ಸಭೆಯಲ್ಲಿ " ಡೆಪ್ಯೂಟಿ ಇನ್ಸ್ಪೆಕ್ಟರು ಮ ॥ ರಾ ॥ ಶ್ರೀನಿವಾಸರಾವ್, ಬಿ, ಎ, ಯವರು. " ಅಗ್ರಾಸನವನ್ನು ಅಲಂಕರಿಸಿದರು. ಇವರ ಉಭಯ ಪಾರ್ಶ್ವಗಳಲ್ಲೂ, ಶಾಸ್ತ್ರಜ್ಞರಿಂದಲೂ, ಕರಣೀಕರೇ ಮುಂತಾದ ಗ್ರಾಮಸಭಿಕರಿಂದಲೂ, ಎದುರು ಪಾರ್ಶ್ವದಲ್ಲಿ ವಿದ್ಯಾರ್ಥಿಗಳಿಂದಲೂ, ಸಭೆಯು ಪ್ರಕಾಶಿಸುತ್ತಿತ್ತು. ಕೂಡಲೇ:—ಛಂದಸ್ಸು, ಅಲಂಕಾರ, ರಸಭಾವವೇ ಮೊದಲಾದ ಕಾವ್ಯಲಕ್ಷಣಗಳಿಂದೊಡಗೂಡಿದ ಸಭಾವಂದನೆಯನ್ನು ಮಾಡಿದರು.

ವಿದ್ಯಾದಾಯಿನಿ

ಭಾಗ ೭.] ಏಪ್ರಿಲ್ ೧೮೯೯. [ಸ

ಎಡಿಟರವರ ನೋಟ್ಸ್.

ಯೂರೋಪ್‌ದೇಶದಲ್ಲಿ ಅನೇಕಕಡೆ ಬಾಲವಿದ್ಯಾಭ್ಯಾಸ ಮಾಡಿಸತಕ್ಕವರು ಹೆಂಗಸರೇ ಎಂಬುದು ನಮ್ಮ ವಾಚಕರಲ್ಲಿ ಅನೇಕರಿಗೆ ತಿಳಿಯದೆ ಇರಬಹುದು. ಯೂರೊಪ್ ದೇಶದಲ್ಲಿ ಅನೇಕಕಾಲದಿಂದಲೂ ನಾಡಿಕೆಯಾಗಿರುವ ಈ ಪದ್ಧತಿಯು ಎಷ್ಟು ಒಳ್ಳೇದೆಂಬುದು ಸ್ವಲ್ಪಮಟ್ಟಿಗೆ ಯೋಚಿಸಿದರೂ ಸಹ ಚೆನ್ನಾಗಿ ಗೊತ್ತಾಗುವುದು. ಚಿಕ್ಕ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದಕ್ಕೆ ಹೆಂಗಸರು ಇರುವುದೇ ಅವಶ್ಯಕವೆಂದು ಹೇಳಬಹುದು. ಸ್ವಾಭಾವಿಕವಾಗಿ ಮೊದಲಲ್ಲಿ ಮನುಷ್ಯನಿಗೆ ತಾಯಿಯೇ ಮೊದಲಾದ ಧ್ಯಾಯಿನಿಯಾಗಿರುವಳು. ಹುಟ್ಟುತಲೂ ತಾಯಿಯಿಂದಲೇ ಮಗುವು ಬಾಷೆಯನ್ನು, ನಡತೆಯನ್ನು, ವಿಕ್ಕೆಲ್ಲವನ್ನೂ ಸಹ ಕಲಿಯಬೇಕು. ಆದುದರಿಂದ ಹೆಂಗಸರಿಗೆ ಸ್ವಾಭಾವಿಕವಾಗಿಯೇ ಚಿಕ್ಕವರ ವಿದ್ಯಾಭ್ಯಾಸಕ್ಕೆ ಅವಶ್ಯಕವಾದ ಗುಣಗಳಿರುವುವು. ತಾಳ್ಮೆ ಮುಂತಾದ ಈ ಗುಣಗಳು ಅವರಲ್ಲಿ ಹೆಚ್ಚಾಗಿರುವುದು ನಮ್ಮೆಲ್ಲರಿಗೂ ತಿಳಿದೇ ಇರುವುದು, ಆದುದರಿಂದ ಚಿಕ್ಕವಯಸ್ಸಿನಲ್ಲಿ ಹೆಂಗಸರ ಹತ್ತಿರ ವಿದ್ಯಾಭ್ಯಾಸವಾಗುವುದೇ ಒಳ್ಳೇದು

* * *

ಇಷ್ಟೇಅಲ್ಲ. ಗಂಡಸರಿಗೆ ಈ ವಿಧವಾದ ಬಾಲವಿದ್ಯಾಭ್ಯಾಸವನ್ನು ಮಾಡಿಸುವುದು ತಪ್ಪಿದರೆ ಅವರು ತಮ್ಮ ಗುರುತರವಾದ ಶಕ್ತಿಯನ್ನು ಬೇರೆಯಾಗಿ ಉಪಯೋಗಿಸಿ ವಿಶೇಷ ಕೆಲಸವನ್ನು ಮಾಡುವುದಕ್ಕೆ ಅವಕಾಶದೊರೆಯುವುದು. ಪ್ರೌಢವಿದ್ಯಾಭ್ಯಾಸಕ್ಕೇನೋ ಪಂಡಿತರಾಗಿರುವ ಗಂಡಸರೇ ಉಪಾಧ್ಯಾಯರಾಗಬೇಕು. ಆದರೆ ಬಾಲವಿದ್ಯಾಭ್ಯಾಸಕ್ಕೂ ಇವರನ್ನೇ ಅಪೇಕ್ಷಿಸಬೇಕಾದುದಿಲ್ಲ. ಈ ಕೆಲಸಕ್ಕೆ ಹೆಂಗಸರು

ಈರೀತಿಯಲ್ಲಿ ವಿದ್ವಜ್ಜನಂದರಲ್ಲಿ ಶ್ರೇಷ್ಠರಾದ ಸಾಧುಜನರನ್ನು ಪ್ರೀತಿಸಿ ವಿದ್ಯಾಭಿವೃದ್ಧಿಗೆ ಅನೇಕವಿಧವಾಗಿ ಪ್ರೋತ್ಸಾಹಪಡಿಸುವ ಹಿ॥ ಎ॥ ಸೆಕ್ರಟರಿ ಹೆಚ್ ಹೆ ಭಾಭಾಸಾಹೇಬರವರಿಗೂ, ಡೆ॥ ಇ೯ಸ್ಪೆಕ್ಟರವರಿಗೂ ಸಹ ದೇವರು ದೀರ್ಘಾಯುರಾರೋಗ್ಯ ಐಶ್ವರ್ಯಗಳನ್ನು ಇತ್ತು ರಕ್ಷಿಸಲಿ ಎಂಬದಾಗಿ ದೇವರನ್ನು ಪ್ರಾರ್ಥಿಸುತ್ತೇನೆ

ಜೆ. ಶ್ರೀಕಂಠಶಾಸ್ತ್ರಿ,
ಸ್ಕೂಲ್ ಹಿ॥ ವ.

ಒಗಟಿಗಳು.

ನಾಲ್ಕು ಅಕ್ಷರದ ಒಂದು ಶಬ್ದವಿದೆ.

೧ನೇ ಅಕ್ಷರ, ಒಳ್ಳೆದು
೨ನೇ ಅಕ್ಷರ ಕೆಟ್ಟದ್ದು ಮತ್ತು ಭೂಮಿ
೩ನೇ ಅಕ್ಷರ, ಲಕ್ಷ್ಮೀ
೧–೩ನೇ ಅಕ್ಷರ, ಪುಷ್ಪ
೨–೧–೩ನೇ ಅಕ್ಷರ, ಹೂವು
೩–೪ನೇ ಅಕ್ಷರ ಲಯದೇವತೆ
೩–೧ನೇ ಅಕ್ಷರ, ಮಲಿನಾರ್ಥದಲ್ಲಿ ಕರ್ನಾಟಕ ಧಾತು
೧–೪ನೇ ಅಕ್ಷರ ಕುರುಬನ ಜೀವನ
೨–೪ನೇ ಅಕ್ಷರ ದ್ರವ ಭೋಜನಾರ್ಥಕ ಕರ್ನಾಟಕಧಾತು
೩–೨–೪ನೇ ಅಕ್ಷರ ಪುತ್ರಳು

ಆದ್ಯಂತ ಸೇರಿದರೆ ಸ್ತ್ರೀವಾಚಕ ಇಕಾರಾಂತ ಪ್ರಕೃತಿ,
ಈ ಶಬ್ದ ವಾವದು?

ಪೆಸ್ಟಲಾಟ್ಸಿಯವರ ಚರಿತೆ

ಕಳೆದ ಡಿಶಂಬರ ಸಂಚಿಕೆಯಲ್ಲಿ " ನಾನಪ್ರಸ್ಥನ ಸಾಯಂಕಾಲದ [illegible]
ಕ್ಷೇಪ " ಎಂಬ ಹೆಸರಿನಿಂದ ಇವರು ಮುದ್ರಿಸಿದ ಪುಸ್ತಕದ ವಿಚಾರವನ್ನು ತಿಳಿಸಿದ್ದ
ವಷ್ಟೆ. ಆ ಪುಸ್ತಕದಲ್ಲಿನ ಕೆಲವು ಸಂಗತಿಗಳು ನಮ್ಮ ವಾಚಕರಿಗೆಲ್ಲಾ ಶ್ರೋತವ್ಯ
ವಾಗಿದೆ. ಅವುಗಳ ಯಾವವಂದರೆ :— " ಸಿಂಹಾಸನಾರೂಢರಾದ ಚಕ್ರವರ್ತಿಗ
ಳಿಗೂ ನೇಗಲನ್ನು ಹಿಡಿದು ವ್ಯವಸಾಯ ಮಾಡತಕ್ಕ ರೈತನಿಗೂ ವ್ಯತ್ಯಾಸವೇನು?
ಚಕ್ರವರ್ತಿಯು ಅರಮನೆಯಲ್ಲಿ ವಾಸಮಾಡುವನು. ಅನೇಕ ಭೃತ್ಯರಿಂದ ಆವರಿಸಲ್ಪ
ಟ್ಟಿರುವನು. ದ್ರವ್ಯದಿಂದ ಆರ್ಜಿಸುವದಕ್ಕೆ ಸಾಧ್ಯವಾದ ಸಕಲ ಸಂಪತ್ತುಗಳೂ ಉಳ್ಳ
ವನಾಗಿರುವನು. ರೈತನಾದರೋ ಒಂದು ಗುಡಿಸಿಲಿನಲ್ಲಿ ವಾಸಮಾಡುತ್ತಾ ಆ ಗುಡಿಸ
ಲಿಗೆ ತಾನೇ ಪ್ರಭುವಾಗಿಯೂ ಮತ್ತು ತಾನೇ ಭೃತ್ಯನಾಗಿಯೂ ಇರುವನು. ಆಹಾರ
ನಿದ್ರಾದಿಗಳು ಉಭಯತ್ರರಿಗೂ ಸಮನಾಗಿದ್ದಾಗ್ಯೂ ಚಕ್ರವರ್ತಿಗೆ ರೈತನಿಗಾ
ಟಾಗತಕ್ಕ ಜೀರ್ಣಶಕ್ತಿಯೂ ಗಾಢನಿದ್ರೆಯೂ ಉಂಟಾಗುವದು ಕಷ್ಟ. ಅದ
ಹಾಗಿರಲಿ. ಈ ಉಭಯತ್ರರಿಗೂ ಇರತಕ್ಕ ವ್ಯತ್ಯೋಂದು ತಾರತಮ್ಯವು ಪರಿಶೀಲನಿ
ಯನಾಗಿದೆ. ರೈತನು ತಾನು ಮಾಡತಕ್ಕ ವ್ಯವಸಾಯದ ವಿಷಯದಲ್ಲಿ ಕೂಡಿದವ
ಟ್ಟಿಗೂ ಸಾಕ್ಷಾತ್ತಾಗಿ ಪ್ರಜ್ಞೆಯುಳ್ಳವನಾಗಿರುತ್ತಾನೆ. ಭೂಗುಣ ವಿಶೇಷ ದವ
ಧಾನ್ಯಗಳಾಗಬೇಕಾದರೆ ಗೊಬ್ಬರ ಗೋಡು ಮೊದಲಾದವುಗಳನ್ನು ಉಪಯೋಗಿ
ತಕ್ಕ ಕ್ರಮ, ದನ, ಕರುಗಳು, ಕುರಿಗಳು ಮೊದಲಾದವುಗಳನ್ನು ವೃದ್ಧಿಮಾಡಿಕೊಳ್
ತಕ್ಕ ವಿಧಾನ, ಇವುಗಳಲ್ಲೆಲ್ಲಾ ಕೂಡಿದಮಟ್ಟಿಗೂ ಪ್ರಜ್ಞೆಯುಳ್ಳವನಾಗಿರುತ್ತಾನೆ. ಈ
ಪ್ರಜ್ಞೆಯನ್ನು ಸರಿಯಾಗಿ ವಿನಿಯೋಗಿಸುವದರಿಂದ ಅವನು ಕೃತಕೃತ್ಯನಾಗುತ್ತಾನೆ
ಪ್ರಭುಗಳಾದರೋ ಅನೇಕಜನ ಭೃತ್ಯರನ್ನು ಉಳ್ಳವರು. ಅವರು ದೇಶವನ್ನು ಆಳ
ವರು. ಜನರಿಗೆ ಮಾರ್ಗದರ್ಶಿಗಳಾಗಿರುವರು. ರೈತರು ತಮ್ಮ ಕುಟುಂಬವನ್ನು
ಆಳಿದರೆ ಪ್ರಭುಗಳು ಲಕ್ಷಾಂತರ ಕುಟುಂಬಗಳನ್ನು ಆಳಬೇಕಾಗುವದು. ಮನುಷ್ಯನು
ಯಾವವಿಧವಾದ ಪ್ರಾಣಿಯು ಅವನಿಗೆ ಇಹಪರಸಾಧನೆಗಳಿಗೆ ಯಾವ ಕೆಲಸಗಳು ಸಾಧ
ಕಗಳಾಗುವವೋ, ಯಾವಕೆಲಸಗಳನ್ನು ಮಾಡುವದರಿಂದ, ಅವನು ಗುರು ಲಘುತ್ವ
ಗಳನ್ನು ಐದುವನೋ, ಯಾವಕೆಲಸಗಳನ್ನು ಮಾಡುವದರಿಂದ ಅವನು ಬಲಿಷ್ಠನ

ಇನ್ನೂ ಉತ್ತಮ; ಮತ್ತು ಆ ಕೆಲಸವಮಾಡುವ ಗಂಡಸರೆಲ್ಲ ಇನ್ನೂ ಕಮ್ಮವಾದ ಮತ್ತು ತಮ್ಮ ಸ್ವರೂಪಕ್ಕೆ ಸರಿಯಾದ ಬೇರೇ ಕೆಲಸಗಳಲ್ಲಿ ಉದ್ಯುಕ್ತರಾಗಬಹುದು.

***

ಈ ಸಂದರ್ಭದಲ್ಲಿ ಗರ್ಲ್‌ಸ್ಕೂಲುಗಳಿಂದಾಗಬೇಕಾದ ಒಂದು ಮುಖ್ಯಪ್ರಯೋಜನವನ್ನು ತಿಳಿಸಬಹುದು. ಹೆಣ್ಣು ಹುಡುಗರಿಗೆಲ್ಲ ಸವಿಸ್ತರವಾಗಿ ವಿದ್ಯಾಭ್ಯಾಸ ಮಾಡಿಸಿ, ಅವರಲ್ಲಿ ಉಪಾಧ್ಯಾಯತೆಗೆ ವಿಶೇಷವಾದ ಯೋಗ್ಯತೆಯನ್ನೂ ಆದರವನ್ನೂ ತೋರಿಸುವವರನ್ನು ಬಾಲವಿದ್ಯಾಭ್ಯಾಸ ಮಾಡಿಸುವುದಕ್ಕೆ ಸಿದ್ಧರನ್ನಾಗಿ ಮಾಡಬೇಕು. ಅನುಕೂಲವಾದ ಕಡೆಗಳಲ್ಲಿ ಇಂಥವರನ್ನು 'ಟ್ರೈಯ್ನ್' ಮಾಡಿ ಉಪಾಧ್ಯಾಯತೆಗೆ ಅರ್ಹರನ್ನಾಗಿ ಮಾಡುತ ಬಂದರೆ ನಮ್ಮ ದೇಶದಲ್ಲಿ ಬಾಲವಿದ್ಯಾಭ್ಯಾಸಕ್ರಮವು ಬಹಳ ಶೀಘ್ರವಾಗಿಯೇ ತುಂಬಾ ಅಭಿವೃದ್ಧಿಯಾಗುವುದೆಂಬುದರಲ್ಲಿ ಸಂಶಯವಿಲ್ಲ. ನಮ್ಮ ದೇಶದಲ್ಲಿ ವಿತಂತುಗಳ ಸಂಖ್ಯೆಯು ಬಹಳ ಹೆಚ್ಚಾಗಿರುವುದರಿಂದಲು, ನಮ್ಮ ಸಂಪ್ರದಾಯಾನುಸಾರವಾಗಿ ಅಂಥವರಿಗೆ ಪುನರ್ವಿವಾಹವು ಇಲ್ಲವಾದುದರಿಂದಲೂ ಅಂಥವರು ಉಪಾಧ್ಯಾಯತೆಗೆ ಸಿದ್ಧರಾಗುವುದು ಬಹಳ ಉತ್ತಮವೆಂದು ತೋರುತ್ತೆ. ಅದರಿಂದ ಅವರಿಗೆ ಇಹಪರಗಳೆರಡರಲ್ಲೂ ಫಲವುಂಟಾಗುವುದು.

***

ಬಾಲವಿದ್ಯಾಭ್ಯಾಸ ಮಾಡಿಸುವವರೆಲ್ಲ ಹೆಂಗಸರೇ ಆಗಿರಬೇಕೆಂದು ಇದರಿಂದ ತಿಳಿಯಕೂಡದು. ಸಾಧ್ಯವಾದವಮಟ್ಟಿಗೂ ಇವರನ್ನು ಆ ಕೆಲಸಕ್ಕೆ ನಿಯಮಿಸಿದರೆ ಸಾಕು. ಕೆಲವುಕಡೆ ಮಾತ್ರ ಹೆಂಗಸರೇ ಉಪಾಧ್ಯಾಯರಾಗಬೇಕಾದುದು ಅವಶ್ಯಕ. ಇದಕ್ಕೆ ಕಿಂಡರ್‌ಗಾರ್ಟ್ನ್ ಸ್ಕೂಲುಗಳನ್ನು ದೃಷ್ಟಾಂತನಾಗಿ ಹೇಳಬಹುದು. ಕಿಂಡರ್‌ಗಾರ್ಟ್ನ್ ವಿದ್ಯಾಭ್ಯಾಸ ಮಾಡುವವರ ವಯಸ್ಸು ಬಹಳ ಚಿಕ್ಕದಾದುದರಿಂದ ಅಲ್ಲಿಗೆ ಹೆಂಗಸರೇ ಉಪಾಧ್ಯಾಯರಾಗಿರುವುದು ಒಳ್ಳೆಯದು. ಕಿಂಡರ್‌ಗಾರ್ಟನ್ನು ಏರ್ಪಡಿಸಿದ ಫ್ರೊಬೆಲ್ಲರವರು ಅಂಥ ವಿದ್ಯಾಭ್ಯಾಸಕ್ಕೆ ಹೆಂಗಸರೇ ಸರಿಯಾದ ಬೋಧಕರೆಂದು ಅಭಿಪ್ರಾಯಪಟ್ಟರು. ಅದರಂತೆ ಯೂರೊಪ್‌ದೇಶಗಳಲ್ಲಿ ಅನೇಕಕಡೆ ಹೆಂಗಸರೇ ಕಿಂಡರ್‌ಗಾರ್ಟ್ನ್ ಪಾಠವನ್ನು ನಡೆಸುಸುತ್ತಿದ್ದಾರೆ.

ದಕ್ಕೆ ಸದ್ವಿದ್ಯಾಭ್ಯಾಸವೂ ಪ್ರಭುಗಳಿಗೂ ಪ್ರಜೆಗಳಿಗೂ ಏಕರೀತಿಯಾಗಿ ಅವಶ್ಯಕವಾ
ದವುಗಳು. ಇಂಥಾ ವಿದ್ಯಾಭ್ಯಾಸವನ್ನು ಮಾಡಿಸುವದರಲ್ಲಿ ಪಾಠಕರು ಬಹಳ ತಾರತ
ಮ್ಯಜ್ಞಾನವುಳ್ಳವರಾಗಿರಬೇಕು. ಜನರ ಬುದ್ಧಿಗಳು ಅನೇಕವಿಧವಾಗಿರುವವು. ಕೆಲ
ವರ ಬುದ್ಧಿಯು ಮಂದವಾಗಿಯೂ ಸಾಮಾನ್ಯವಾದ ವಿಷಯಗಳನ್ನು ತಿಳಿದುಕೊಳ್ಳು
ವದರಲ್ಲಿಯೂ ನಿಧಾನವಾಗಿಯೂ ಇರುವದು. ಮತ್ತೆ ಕೆಲವರ ಬುದ್ಧಿಯು ಬಹಳ
ತೀಕ್ಷ್ಣವಾಗಿಯೂ, ಬಹಳ ಸೂಕ್ಷ್ಮಾಂಶಗಳನ್ನು ಸಲಭವಾಗಿ ಸಹಿಸತಕ್ಕದ್ದಾಗಿ
ಯೂ ಇರವದು. ಪಾಠಕರಾದವರು ವಿದ್ಯಾರ್ಥಿಗಳ ಬುದ್ಧಿ ಶಕ್ತಿಗಳನ್ನು ಗೊತ್ತು
ಮಾಡಿಕೊಂಡು ಆ ಶಕ್ತಿಗೆ ಅನುಸಾರವಾಗಿ ಬೋಧನೆಯನ್ನು ಮಾಡಬೇಕು. ಅನೇಕ
ಪಾಠಕರು ಮಂದಬುದ್ಧಿಯುಳ್ಳವರಿಗೆ ಕ್ರೂರೋಕ್ತಿಗಳಿಂದಲೂ ಇತರವಿಧವಾದ ದಂ
ಡನೆಗಳಿಂದಲೂ ಮನಃಕ್ಲೇಶವನ್ನುಂಟುಮಾಡುತ್ತಾರೆ. ಇದರಿಂದ ಏನುಪ್ರಯೋಜ
ನವೂ ಇಲ್ಲ ಬುದ್ಧಿ ಇಲ್ಲದವರನ್ನು ದಂಡಿಸಿದರೆ ಬುದ್ಧಿ ಬಂದೀತೆ? ಹಿತೋಕ್ತಿಗಳಿಂ
ದಲೂ ಅವರ ಬುದ್ಧಿ ಶಕ್ತಿಗೆ ಅನುಸಾರವಾಗಿ ಪಾಠಗಳನ್ನು ಹೇಳಿಕೊಡುವದರಿಂದಲೂ
ಅವರನ್ನು ವೈದ್ಯರಿಗೆ ತರಬಹುದೇ ಹೊರತು ದಂಡನೆಯಿಂದ ಅವರನ್ನು ಬುದ್ಧಿವಂತರ
ನ್ನಾಗಿಯೂ, ಧರ್ಮಿಷ್ಠರನ್ನಾಗಿಯೂ ಮಾಡುವದು ಅಸಾಧ್ಯ. ಅನೇಕರು ಬೋಧಿ
ಸತಕ್ಕ ವಿಷಯವನ್ನು ಸುಲಭವಾದ ಮಾರ್ಗದಲ್ಲಿ ತಿಳಿಸದೆ ವಿಪರೀತ ವಾಗ್ವಾಡಂಬರ
ವನ್ನು ಮಾಡುತ್ತಾರೆ. ತಿಳಿಯದೇ ಇರತಕ್ಕ ಪದಗಳನ್ನು ಉಪಯೋಗಿಸಿ ಹಿಂದೂ
ಮುಂದೂ ತಿಳಿಯದಂತೆ ಮಾಡುತ್ತಾರೆ. ಇದರಿಂದ ಮಂದಮತಿಗಳಾದವರಿಗೆ ವಿಷಯ
ಜ್ಞಾನವೇ ಉಂಟಾಗುವದಿಲ್ಲ. ಆದ್ದರಿಂದ ಸರಿಯಾದ ಶಿಕ್ಷೆ ಇಲ್ಲದೆ ಧರ್ಮಾಧರ್ಮ
ವಿಮರ್ಶೆಯನ್ನು ಮಾಡುವ ಶಕ್ತಿಗೆ ಲೋಪವುಂಟಾಗುವದು. ಈ ಲೋಪದಿಂದಲೆ
ಪ್ರಪಂಚದಲ್ಲಿ ಧರ್ಮಕ್ಕೆ ನ್ಯೂನತೆಯುಂಟಾಗುತ್ತದೆ ಸಕಲರಿಗೂ ಸದ್ವಿದ್ಯಾಭ್ಯಾ
ಸದ ಮೂಲಕ ಧರ್ಮಮಾರ್ಗಪ್ರವರ್ತನೆಯಲ್ಲಿ ಆಸಕ್ತಿಯನ್ನೂ, ಅಧರ್ಮಮಾರ್ಗಪ್ರವ
ರ್ತನೆಯಲ್ಲಿ ಪರಾಙ್ಮುಖತೆಯನ್ನೂ ಉಂಟುಮಾಡತಕ್ಕದ್ದು ಪ್ರಭುಗಳಿಗೆ ಹ್ಯಾಗೊ
ಹಾಗೆ ಪ್ರಜೆಗಳಿಗೂ ಕರ್ತವ್ಯವಾದದ್ದು." ಈಮೇಲೆ ಹೇಳಿರುವ ವಚನಗಳು ಈ
ಗ್ರಂಥದಿಂದ ಸಂಗ್ರಹಿಸಲ್ಪಟ್ಟವುಗಳು ಕೆಲವು ದಿವಸಗಳಲ್ಲಿಯೇ ಈ ಗ್ರಂಥವು
ಯಥಾಯೋಗ್ಯವಾದ ಪ್ರಾಶಸ್ತ್ಯವು ಉಂಟಾದೀತು.

ಪೆಸ್ಟಲಾಟ್ಸಿಯವರು ಈ ಕಾಲದಲ್ಲಿ ಕೃಷಿಯನ್ನು ಅವಲಂಬಿಸಿ ರೈತರ ಮಧ್

ಗುವನೋ, ಯಾವಕಾರ್ಯವಲಂಬನೆಯು ಅವನನ್ನು ದುರ್ಬಲನನ್ನಾಗಿ ಮಾಡುವ ದೋ, ಯಾವವಿಧವಾದ ವಿಪರ್ಯಾಯಗಳಿಂದ ಸಕಲ ಪ್ರಜೆಗಳಿಗೂ ಸುಖವುಂಟಾಗು ವದೋ ಇವುಗಳೆಲ್ಲಾ ಪ್ರಭುಗಳಿಗೆ ಜ್ಞಾತವ್ಯಗಳಾದವುಗಳು. ರೈತರಿಗೆ ವ್ಯವಸಾಯ ವಿಧಾನಕ್ರಮವು ಚನ್ನಾಗಿ ತಿಳಿಯುವದು ಹ್ಯಾಗೆ ಅವಶ್ಯಕವಾದದ್ದೋ ಹಾಗೆ ದುಷ್ಟ ನಿಗ್ರಹ, ಶಿಷ್ಟಪರಿಪಾಲನೆಗೆ ಸಾಧಕವಾದ ರಾಜತಂತ್ರವಿಶಾರದತ್ವವು ಪ್ರಭುಗಳಿಗೆ ಅವ ಶ್ಯಕವಾದವುಗಳು. ಆದ್ದರಿಂದ ಸಮಸ್ತರೂ ಅವರವರ ಸುಖದುಃಖಗಳಿಗೆ ಅವ ಶ್ಯಕವಾದ ವಿಷಯಗಳನ್ನು ತಿಳಿದುಕೊಳ್ಳುವದು ಅವಶ್ಯಕವಾದದ್ದು. ಆರೀತಿಯಲ್ಲಿ ತಿಳಿದುಕೊಳ್ಳಬೇಕಾದರೆ ಪ್ರಸಿದ್ಧರಾದ ಪೂರ್ವಿಕರು ಯಾವಯಾವರೀತಿಯಲ್ಲಿ ಅವರ ವರ ಕಸಬುಗಳನ್ನು ನಡೆಸಿದರೋ ಹಾಗೆ ನಡೆಸಿದ ಕೆಲಸಗಳು ಯಾವಯಾವ ಗ್ರಂಥಗ ಳಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿವೆಯೋ ಅವುಗಳನ್ನು ವ್ಯಾಸಂಗಮಾಡಿ ತಿಳಿದುಕೊಳ್ಳ ಬೇಕು. ಪ್ರಜಾರಂಜನೆಗೆ ಸಾಧಕಗಳಾದ ವಿಪರ್ಯಾಯಗಳು ಶ್ರಮಪಡದೇ ಲಭ್ಯವಾಗು ವದಿಲ್ಲ. ಬಹಳ ಶ್ರಮಪಟ್ಟು ಗಣಿಗಳನ್ನು ತೆಗದಹೊತ್ತು ಬೆಳ್ಳಿ, ರತ್ನ, ಚಿನ್ನ ಮೊ ದಲಾದವುಗಳು ಸಿಕ್ಕುವದಿಲ್ಲ. ಹಾಗೆಯೇ ಲೋಕದ ಯೋಗಕ್ಷೇಮಕ್ಕೆ ಸಾಧಕವಾದ ಧರ್ಮಗಳೂ ಕೂಡ ಕಷ್ಟಸಾಧ್ಯವಾದವುಗಳು. ಇಂಥಾ ಧರ್ಮಸೂಕ್ಷ್ಮಗಳನ್ನು ವಿದ್ಯಾಭ್ಯಾಸದ ಮೂಲಕ ತಿಳಿದುಕೊಂಡು ಅವುಗಳನ್ನು ಆಚರಣೆಗೆ ತರತಕ್ಕ ಪ್ರಭು ಗಳೇ ಪ್ರಭುಗಳು. ಅಂಥಾ ಧರ್ಮಸೂಕ್ಷ್ಮಗಳನ್ನು ತಿಳಿದುಕೊಳ್ಳದ ಅಜ್ಞಾನರು ಪ್ರಭು ಪದವಿಗೆ ಹ್ಯಾಗೆತಾನೇ ಅರ್ಹರಾದಾರು ? ಇಂಥಾ ಧರ್ಮಸೂಕ್ಷ್ಮಗಳನ್ನು ತಿಳಿದು ಕೊಂಡು ಅವುಗಳನ್ನು ಸರಿಯಾದ ಆಚರಣೆಗೆ ತರದೆ ದುರ್ವಿನಿಯೋಗ ಮಾಡತಕ್ಕ ಪ್ರಭುಗಳ ವಿಷಯದಲ್ಲಿ ಹೇಳತಕ್ಕದ್ದೇನು. " ವಿದ್ಯಾವಿಹೀನಃಪಶುಃ " ಎಂಬ ಲೋಕೋಕ್ತಿಗೆ ಇಂಥಾ ದೊಡ್ಡವರೂ ಗುರಿಯಾಗಬೇಕಾಗುತ್ತದೆ. ನಿಜವಾದ ವಿವೇ ಕವನ್ನು ಶಾಂತಿಯನ್ನೂ ದುಷ್ಟನಿಗ್ರಹ ಶಿಷ್ಟಪರಿಪಾಲನೆಗೆ ಸಾಧಕವಾದ ಧರ್ಮಸೂ ಕ್ಷ್ಮಜ್ಞಾನವನ್ನು ಸಂಪಾದಿಸಿಕೊಡತಕ್ಕದ್ದು ವಿದ್ಯೆಯು. ಪ್ರಜೆಗಳು ತಮ್ಮ ತಮ್ಮ ಕಸಬುಗಳನ್ನು ಮಾಡಿಕೊಂಡು ದ್ರವ್ಯವನ್ನಾರ್ಜಿಸಿ ಇಹಪರಗಳನ್ನು ಸಾಧಿಸಿಕೊಳ್ಳು ವಂತೆ ಮಾಡತಕ್ಕ ಶಕ್ತಿಯುಳ್ಳದ್ದು ವಿದ್ಯೆಯು ಅಂಗಸಾಧನೆಯಿಂದ ಶರೀರಕ್ಕೆ ಶಕ್ತಿ ಬರುವಂತೆ ವಿದ್ಯಾಭ್ಯಾಸದಿಂದ ಬುದ್ಧಿ ಶಕ್ತಿಯೂ ಬರುವದು. ಆದ್ದರಿಂದ ದೇಹ ಶಕ್ತಿ ಉಂಟಾಗುವದಕ್ಕೆ ಸರಿಯಾದ ವ್ಯಾಯಾಮಾದಿಗಳು ಬುದ್ಧಿ ಶಕ್ತಿ ಉಂಟಾಗುವ

ದಕ್ಕೆ ಸಕ್ಕ ಭಾಗಗಳನ್ನು ತಮ್ಮ ಪತ್ರಿಕೆಗಳಲ್ಲಿ ಮುದ್ರಿಸಿದರು. ಬರ್ಮಪಟ್ಟಣದ ವ್ಯವ ಹಾರಸ್ಥ ಸಮಾಜದ ಮೆಂಬರುಗಳು ಸಭೆಯನ್ನು ಮಾಡಿ, ಈ ಗ್ರಂಥವನ್ನು ಓದಿಸಿ ಗ್ರಂಥಕರ್ತರು ಇದನ್ನು ಬರೆದು ಪ್ರಪಂಚಕ್ಕೆ ಬಲೆ ಇಲ್ಲದ ಉಪಕಾರ ಮಾಡಿದಾ ಪ್ಪೆಂದು ರೆಜಲ್ಯೂಷ್ಯನ್ ಮಾಡಿ ಅದನ್ನು ಐವತ್ತು ವರಹಗಳನ್ನು ಐವತ್ತು ವರಾಹ ಬಾಳಿತಕ್ಕ ಲೋಕೋಪಕಾರಿಯೆಂಬ ಅಂಕಿತವುಳ್ಳ ಒಂದು ಚಿನ್ನದ ಬಿರುದು ಬಿಲ್ಲೆ ಯನ್ನು ಕಳುಹಿಸಿದರು

ಸಸ್ಯಗಳು ಮತ್ತು ಅವುಗಳ ಆಹಾರ

ಸಸ್ಯಗಳಲ್ಲಿರುವ ವಸ್ತುಗಳು.

ಹಸಿ ಗಿಡಗಳಲ್ಲಿ ನೀರು ಹೆಚ್ಚಾಗಿರುತ್ತದೆ, ಒಣಗಿದ ಗಿಡಗಳಲ್ಲಿ ಬಹಳ ಸ್ವಲ್ಪ ವಾಗಿರುತ್ತದೆ. ಹಸುರೆಲೆಗಳಲ್ಲಿಯೂ ರಂಬೆಗಳಲ್ಲಿಯೂ ನೀರಿರುವುದಲ್ಲದೆ ಹೂ, ಬೀ ಜ, ಹಣ್ಣು, ಗೆಡ್ಡೆ, ಇವುಗಳಲ್ಲಿಯೂ ಇದೆ. ಎಳೆಸಾದ ಗಿಡಗಳಲ್ಲಿ ನೀರು ಹೆಚ್ಚಾಗಿದೆ, ಬಲಿತ ಗಿಡಗಳಲ್ಲಿ ಕಡಮೆಯಾಗಿದೆ. ಗೆಡ್ಡೆ, ಹಣ್ಣು ಇವುಗಳಲ್ಲಿ ಹೆಚ್ಚಾಗಿರು ತ್ತದೆ. ಆದುದರಿಂದ ಎಲ್ಲಾ ಸಸ್ಯಗಳಲ್ಲಿಯೂ ನೀರು ಇರುತ್ತದೆ ಎಂದು ತಿಳಿಯ ಬೇಕು

ಕಬ್ಬು ಸೀಯಾಗಿರುತ್ತದೆಂಬ ಸಂಗತಿ ನಿಮ್ಮೊಬ್ಬರಿಗೂ ತಿಳಿಯದೊ ? ಕಬ್ಬಿನ ಮಾತನ್ನೆತ್ತಿದರೆ ನಿಮ್ಮ ಬಾಯಿಗಳಲ್ಲಿ ಜೊಲ್ಲು ಸುರಿಯುತ್ತಲ್ಲವೆ ? ಕಬ್ಬು ರುಚಿಯಾಗಿರುವುದಕ್ಕೆ ಕಾರಣವೇನು ? ಅದರಲ್ಲಿ ಹೆಚ್ಚಾದ ಸಕ್ಕರೆ ಇರುವುದೇ ಕಾರಣ. ಕಬ್ಬಿನಲ್ಲಿ ಸಕ್ಕರೆ ಇರುವಹಾಗೆ ಇತರ ಸೈರುಗಳಲ್ಲಿಯೂ ಇರುತ್ತದೆ ರಾಗಿಯ ಸೈರು, ಜೋಳದ ಸೈರು, ಬತ್ತದ ಸೈರು, ಮೊದಲಾದ ಎಲ್ಲಾ ಸೈರುಗಳಲ್ಲಿಯೂ ಸಕ್ಕರೆ ಇರುತ್ತದೆ. ಆದರೆ ಕಬ್ಬಿನಲ್ಲಿರುವಷ್ಟು ಹೆಚ್ಚಾಗಿಲ್ಲ. ಅನೇಕ ಹಣ್ಣುಗಳಲ್ಲಿ ಸಕ್ಕರೆ ಹೆಚ್ಚಾಗಿರುವುದು. ಎಲ್ಲಾ ಸೈರುಗಳಲ್ಲಿಯೂ ಸಕ್ಕರೆ ಇರುತ್ತದೆ.

ದಲ್ಲಿ ವಾಸವಾಗುತ್ತಿದ್ದರು. ರೈತರು ಅಜ್ಞಾನಿಗಳಾಗಿಯೂ ವಿದ್ಯಾವಿಹೀನವಾಗಿಯೂ ದುರ್ಮಾರ್ಗಪ್ರವರ್ತಕರಾಗಿಯೂ ಇದ್ದದ್ದನ್ನು ಸಾಕ್ಷಾತ್ತಾಗಿ ನೋಡಿ ತ್ತುವಷ್ಟಿಕೊಂಡಿದ್ದರು ಇವರಲ್ಲಿ ಅನೇಕರು ಗುಣಾಢ್ಯರಾಗಿಯೂ, ಅಡಿದ ನುಡಿ ತಪ್ಪದವರಾಗಿಯೂ ಪಾಪಭೀತರಾಗಿಯೂ ಇದ್ದದ್ದನ್ನು ತಿಳಿದುಕೊಂಡಿದ್ದರು. ವರಿಗೆ ವಿದ್ಯಾಭ್ಯಾಸದಿಂದ ಉಂಟಾಗತಕ್ಕ ಪ್ರಯೋಜನಗಳು ತಿಳಿಸುವದು ಅತ್ಯಾವಶ್ಯಕವಾದದ್ದೆಂದು ತಿಳಿದುಕೊಂಡ, ಎನರ್ಡ್, ಮತ್ತು ಜರಟೂಲ್ರೀ ಎಂಬ ಹೆಸರುಳ್ಳ ಇಬ್ಬರು ರೈತರ ಕಥೆಯನ್ನು ಬೋಧಿಸುವ ಒಂದು ಗ್ರಂಥವನ್ನು ಬರೆದರು. ಈ ಗ್ರಂಥವನ್ನು ಕೆಲವು ವಾರಗಳ ಒಳಗಾಗಿ ಪೂರೈಸಿ ಒಬ್ಬ ಸ್ನೇಹಿತನಿಗೆ ತೋರಿಸಿದರು. ಆತನು " ಇದು ಒಳ್ಳೇ ಗ್ರಂಥ ಬೇಕಾದರೆ ನಾನು ಅದನ್ನು ತಿದ್ದಿ ಸರಿಮಾಡಿ ಕೊಡುತ್ತೇನೆಂದು ಹೇಳಿದನು. ಪೆಸ್ಟಲಾಟ್ಸಿಯವರು ಅದಕ್ಕಾಗಿ ಅವರನ್ನು ವಂದಿಸಿ ಗ್ರಂಥವನ್ನು ಅವರ ಕೈಗೆ ಕೊಟ್ಟರು. ಅವರು ಅದನ್ನು ಸರಳವಾಗಿಯೂ ಪಂಡಿತರಿಗೆ ಹಾಗೂ ಪಾಮರರಿಗೂ ತಿಳಿಯುವಂತೆ ಬರೆಯಲ್ಪಟ್ಟಿದ್ದನ್ನು ಪಂಡಿತರಿಗೆ ವಿನಹಾ ಮತ್ತಾರಿಗೂ ತಿಳಿಯದಂತೆ ಅತಿ ಕಠಿನವಾದ ಶೈಲಿಯಲ್ಲಿ ಬರೆದ ತಂದುಕೊಟ್ಟರು. ಅದನ್ನು ಓದಿದಕೂಡ್ಲೇ ಪೆಸ್ಟಲಾಟ್ಸಿಯವರು ಬಹಳ ಕ್ಲೇಶಪಟ್ಟು ಇನ್ನು ಪುನಃ ಈ ಗ್ರಂಥವನ್ನು ಪೂರ್ವದಂತೆ ಬರಿಯಬೇಕಾಯಿತಲ್ಲಾ ಎಂದು ವ್ಯಸನಪಡುತ್ತಿದ್ದರು. ಅಷ್ಟರಲ್ಲಿಯೇ ಅದೃಷ್ಟವಶದಿಂದ ಏಸೆರ್ಡರವರು ಇವರಲ್ಲಿಗೆ ಬಂದರು. ಆಗ ಪೆಸ್ಟಲಾಟ್ಸೇಯವರು ಈ ಗ್ರಂಥದ ಪೂರ್ವೋತ್ತರಗಳನ್ನು ಹೇಳಿದರು. ಅವರು ಮೊದಲು ಪ್ರತಿಯನ್ನು ತರಿಸಿಕೊಂಡು ಎರಡನೇ ಪ್ರತಿಯನ್ನೂ ಅದನ್ನೂ ಹೋಲಿಸಿ ಎರಡನೇ ಪ್ರತಿಯು ನಿಮ್ಮ ಪ್ರಯೋಜನವಾದದ್ದೆಂದು ಗೊತ್ತುವಷ್ಟಿಕೊಂಡು ಪೆಸ್ಟಲಾಟ್ಸೇಯವರು ಮೊದಲು ಬರೆದ ಪ್ರತಿಯನ್ನೇ ತಿದ್ದಿ ನಕಲು ಮಾಡಿಸಿ ಅದನ್ನು ಮುದ್ರಿಸುವದಕ್ಕೆ ಏರ್ಪಾಡು ಮಾಡಿದರು. ಈ ಗ್ರಂಥವು ೧೭೮೧ ರಲ್ಲಿ ಮುದ್ರಿಸಲ್ಪಟ್ಟಿತು. ಈ ಗ್ರಂಥವು ಪೂರ್ತಿಯಾಗುವದರೊಳಗಾಗಿ ನಾಲ್ಕು ಪುಸ್ತಕಗಳಾಗಿ ಪರಿಣಮಿಸಿತು. ಈ ಗ್ರಂಥದಿಂದ ಇವರ ಪ್ರತಿಷ್ಠೆಯು ರೂಢಮೂಲವಾಯಿತು. ಈ ಪುಸ್ತಕವು ವಾಚಕರ ಕೈಗೆ ಬಿದ್ದಕೂಡ್ಲೇ ಅದರ ಗುಣಾತಿಶಯಗಳು ಚರ್ಚಿಸಲ್ಪಡುವದಕ್ಕೆ ಆರಂಭವಾಯಿತು. ಎಲ್ಲಾ ವರ್ತಮಾನಪತ್ರಿಕಾಕರ್ತರು ಇದರ ಗುಣಾತಿಶಯಗಳನ್ನು ವರ್ಣಿಸಿ ಲೋಕಪ್ರತ್ಯಯಾರ್ಥವಾಗಿ ಈ ಗ್ರಂಥಗಳಿಂ

ಅನೇಕ ಭಾಗಗಳನ್ನು ತಮ್ಮ ಪತ್ರಿಕೆಗಳಲ್ಲಿ ಮುದ್ರಿಸಿದರು. ಬರ್ಮಪಟ್ಟಣದ ವ್ಯವಸಾಯ ಸಮಾಜದ ಮೆಂಬರುಗಳು ಸಭೆಯನ್ನು ಮಾಡಿ, ಈ ಗ್ರಂಥವನ್ನು ಓದಿಸಿ ಈ ಗ್ರಂಥಕರ್ತರು ಇದನ್ನು ಬರೆದು ಪ್ರಪಂಚಕ್ಕೆ ಬಲೆ ಇಲ್ಲದ ಉಪಕಾರ ಮಾಡಿದಾರೆಂದು ರೆಜಲ್ಯೂಷನ್ ಮಾಡಿ ಅದನ್ನು ಐವತ್ತು ವರಹಗಳನ್ನು ಐವತ್ತು ವರಾಹ ಬಾಳತಕ್ಕ ಲೋಕೋಪಕಾರಿಯೆಂಬ ಅಂಕಿತವುಳ್ಳ ಒಂದು ಚಿನ್ನದ ಬಿರುದು ಬಿಲ್ಲೆಯನ್ನು ಕಳುಹಿಸಿದರು.

ಸಸ್ಯಗಳು ಮತ್ತು ಅವುಗಳ ಆಹಾರ

ಸಸ್ಯಗಳಲ್ಲಿರುವ ವಸ್ತುಗಳು.

ಹಸಿ ಗಿಡಗಳಲ್ಲಿ ನೀರು ಹೆಚ್ಚಾಗಿರುತ್ತದೆ, ಒಣಗಿದ ಗಿಡಗಳಲ್ಲಿ ಬಹಳ ಸ್ವಲ್ಪವಾಗಿರುತ್ತದೆ. ಹಸುರೆಲೆಗಳಲ್ಲಿಯೂ ರಂಬೆಗಳಲ್ಲಿಯೂ ನೀರಿರುವುದಲ್ಲದೆ ಹೂ, ಬೀಜ, ಹಣ್ಣು, ಗೆಡ್ಡೆ, ಇವುಗಳಲ್ಲಿಯೂ ಇದೆ. ಎಳೆಸಾದ ಗಿಡಗಳಲ್ಲಿ ನೀರು ಹೆಚ್ಚಾಗಿದೆ, ಬಲಿತ ಗಿಡಗಳಲ್ಲಿ ಕಡಮೆಯಾಗಿದೆ. ಗೆಡ್ಡೆ, ಹಣ್ಣು ಇವುಗಳಲ್ಲಿ ಹೆಚ್ಚಾಗಿರುತ್ತದೆ. ಆದುದರಿಂದ ಎಲ್ಲಾ ಸಸ್ಯಗಳಲ್ಲಿಯೂ ನೀರು ಇರುತ್ತದೆ ಎಂದು ತಿಳಿಯಬೇಕು.

ಕಬ್ಬು ಸೀಯಾಗಿರುತ್ತದೆಂಬ ಸಂಗತಿ ನಿಮ್ಮೊಬ್ಬರಿಗೂ ತಿಳಿಯದೊ? ಕಬ್ಬಿನ ಮಾತನ್ನೆತ್ತಿದರೆ ನಿಮ್ಮ ಬಾಯಿಗಳಲ್ಲಿ ಜೊಲ್ಲು ಸುರಿಯುತ್ತಲ್ಲವೆ? ಕಬ್ಬು ರುಚಿಯಾಗಿರುವುದಕ್ಕೆ ಕಾರಣವೇನು? ಅದರಲ್ಲಿ ಹೆಚ್ಚಾದ ಸಕ್ಕರೆ ಇರುವುದೇ ಕಾರಣ. ಕಬ್ಬಿನಲ್ಲಿ ಸಕ್ಕರೆ ಇರುವಹಾಗೆ ಇತರ ಸೈರುಗಳಲ್ಲಿಯೂ ಇರುತ್ತದೆ ರಾಗಿಯ ಸೈರು, ಜೋಳದ ಸೈರು, ಬತ್ತದ ಸೈರು, ಮೊದಲಾದ ಎಲ್ಲಾ ಸೈರುಗಳಲ್ಲಿಯೂ ಸಕ್ಕರೆ ಇರುತ್ತದೆ. ಆದರೆ ಕಬ್ಬಿನಲ್ಲಿರುವಷ್ಟು ಹೆಚ್ಚಾಗಿಲ್ಲ ಅನೇಕ ಹಣ್ಣುಗಳಲ್ಲಿ ಸಕ್ಕರೆ ಹೆಚ್ಚಾಗಿರುವುದು. ಎಲ್ಲಾ ಸೈರುಗಳಲ್ಲಿಯೂ ಸಕ್ಕರೆ ಇರುತ್ತದೆ.

ದಲ್ಲಿ ವಾಸವಮಾಡುತ್ತಿದ್ದರು. ರೈತರು ಅಜ್ಞಾನಿಗಳಾಗಿಯೂ ವಿ
ಗಿಯೂ ದುರ್ಮಾರ್ಗಪ್ರವರ್ತಕರಾಗಿಯೂ ಇದ್ದದ್ದನ್ನು ಸಾಕ್ಷಾತ್ತಾಗಿ ನೋ
ತ್ತು ಮಡಿಕೊಂಡಿದ್ದರು ಇವರಲ್ಲಿ ಅನೇಕರು ಗುಣಾಢ್ಯರಾಗಿಯೂ, ಅಡಿದ ವಾ
ತಪ್ಪದವರಾಗಿಯೂ ಪಾಪಭೀತರಾಗಿಯೂ ಇದ್ದದ್ದನ್ನು ತಿಳಿದುಕೊಂಡಿದ್ದರು.
ವರಿಗೆ ವಿದ್ಯಾಭ್ಯಾಸದಿಂದ ಉಂಟಾಗತಕ್ಕ ಪ್ರಯೋಜನಗಳು ತಿಳಿಸುವದು ಅತ್ಯಾ
ವಶ್ಯಕವಾದದ್ದೆಂದು ತಿಳಿದುಕೊಂಡ, ಲಿನರ್ಡ್, ಮತ್ತು ಜರಟ್ರೂಡ್ ಎಂಬ ಹೆಸ
ರುಳ್ಳ ಇಬ್ಬರು ರೈತರ ಕಥೆಯನ್ನು ಬೋಧಿಸುವ ಒಂದು ಗ್ರಂಥವನ್ನು ಬರೆದರು.
ಈ ಗ್ರಂಥವನ್ನು ಕೆಲವು ವಾರಗಳ ಒಳಗಾಗಿ ಪೂರೈಸಿ ಒಬ್ಬ ಸ್ನೇಹಿತನಿಗೆ ತೋರಿಸಿ
ದರು. ಆತನು " ಇದು ಒಳ್ಳೇ ಗ್ರಂಥ ಬೇಕಾದರೆ ನಾನು ಅದನ್ನು ತಿದ್ದಿ ಸರಿಮಾಡಿ
ಕೊಡುತ್ತೇನೆಂದು ಹೇಳಿದನು. ಪೆಸ್ಟಲಾಟ್ಸಿಯವರು ಅದಕ್ಕಾಗಿ ಅವರನ್ನು ವಂದಿಸಿ
ಗ್ರಂಥವನ್ನು ಅವರ ಕೈಗೆ ಕೊಟ್ಟರು. ಅವರು ಅದನ್ನು ಸರಳವಾಗಿಯೂ ಪಂಡಿತ
ರಿಗೆ ಹ್ಯಾಗೋ ಹಾಗೆ ಸಾಮಾನ್ಯರಿಗೂ ತಿಳಿಯುವಂತೆ ಬರೆಯಲ್ಪಟ್ಟಿದ್ದನ್ನು
ಪಂಡಿತರಿಗೆ ವಿನಹಾ ಮತ್ತಾರಿಗೂ ತಿಳಿಯದಂತೆ ಅತಿ ಕಠಿನವಾದ ಶೈಲಿಯಲ್ಲಿ ಬರೆದು
ತಂದುಕೊಟ್ಟರು. ಅದನ್ನು ಓದಿದಕೂಡ್ಲೇ ಪೆಸ್ಟಲಾಟ್ಸಿಯವರು ಬಹಳ ಕ್ಲೇಶಪಟ್ಟ
ಇನ್ನು ಪುನಃ ಈ ಗ್ರಂಥವನ್ನು ಪೂರ್ವದಂತೆ ಬರಿಯಬೇಕಾಯಿತಲ್ಲಾ ಎಂಬ ವ್ಯಸನ
ಪಡುತ್ತಿದ್ದರು. ಅಷ್ಟರಲ್ಲಿಯೇ ಅದೃಷ್ಟವಶದಿಂದ ಏಸೆರ್ಡರವರು ಇವರಲ್ಲಿಗೆ
ಬಂದರು. ಆಗ ಪೆಸ್ಟಲಾಟ್ಸೀಯವರು ಈ ಗ್ರಂಥದ ಪೂರ್ವೋತ್ತರಗಳನ್ನು ಹೇಳಿ
ದರು. ಅವರು ಮೊದಲು ಪ್ರತಿಯನ್ನು ತರಿಸಿಕೊಂಡು ಎರಡನೇ ಪ್ರತಿಯನ್ನೂ
ಬರೆಸಿ ಹೋಲಿಸಿ ಎರಡನೇ ಪ್ರತಿಯು ನಿಷ್ಪ್ರಯೋಜನವಾದದ್ದೆಂದು ಗೊತ್ತು
ಮಾಡಿಕೊಂಡು ಪೆಸ್ಟಲಾಟ್ಸೀಯವರು ಮೊದಲು ಬರೆದ ಪ್ರತಿಯನ್ನೇ ತಿದ್ದಿ ನಕಲು
ಮಾಡಿಸಿ ಅದನ್ನು ಮುದ್ರಿಸುವದಕ್ಕೆ ಏರ್ಪಾಡು ಮಾಡಿದರು. ಈ ಗ್ರಂಥವು ೧೭೮೧
ಲ್ಲಿ ಮುದ್ರಿಸಲ್ಪಟ್ಟಿತು. ಈ ಗ್ರಂಥವು ಪೂರ್ತಿಯಾಗುವದರೊಳಗಾಗಿ ನಾಲ್ಕು
ಪುಸ್ತಕಗಳಾಗಿ ಪರಿಣಮಿಸಿತು. ಈ ಗ್ರಂಥದಿಂದ ಇವರ ಪ್ರತಿಷ್ಠೆಯು ರೂಢಮೂಲ
ವಾಯಿತು. ಈ ಪುಸ್ತಕವು ವಾಚಕರ ಕೈಗೆ ಬಿದ್ದಕೂಡ್ಲೇ ಅದರ ಗುಣಾತಿಶಯ
ಗಳು ಚರ್ಚಿಸಲ್ಪಡುವದಕ್ಕೆ ಆರಂಭವಾಯಿತು. ಎಲ್ಲಾ ವರ್ತಮಾನಪತ್ರಿಕಾಕರ್ತರು
ಇದರ ಗುಣಾತಿಶಯಗಳನ್ನು ವರ್ಣಿಸಿ ಲೋಕಪ್ರತ್ಯರ್ಥವಾಗಿ ಈ ಗ್ರಂಥಗಳಿಂದ

ಗಳನ್ನು ಸಸ್ಯಗಳೂ ತಿನ್ನುವುದಿಲ್ಲ. ಈ ಪದಾರ್ಥಗಳು ಸಸ್ಯಗಳಲ್ಲಿ ಉಂಟಾಗುತ್ತವೆ. ಇವು ಉಂಟಾಗುವುದಕ್ಕೆ ಅವಶ್ಯಕವಾದ ಇತರವಸ್ತುಗಳನ್ನು ಸಸ್ಯಗಳು ತೆಗೆದುಕೊಳ್ಳುತ್ತವೆ. ಆ ವಸ್ತುಗಳಿಂದ ಈ ಪದಾರ್ಥಗಳು ಉಂಟಾಗುತ್ತವೆ.

ಮನುಷ್ಯರು ದನಕರುಗಳೇ ಮೊದಲಾದ ಪ್ರಾಣಿಗಳು ಹೊರಕ್ಕೆ ಬಿಡುವ ಉಸಿರಿನಲ್ಲಿ ಕೆಟ್ಟವಾಯುವು ಬರುತ್ತದೆಂತಲೂ, ಸತ್ತ ಸಸ್ಯಗಳು ಮತ್ತು ಪ್ರಾಣಿಗಳು ಕೊಳೆಯುವುದರಿಂದಲೂ, ಬೆಂಕಿ, ದೀಪ ಮೊದಲಾದವುಗಳು ಉರಿಯುವುದರಿಂದಲೂ ಕೆಟ್ಟವಾಯುವುಂಟಾಗಿ ವಾಯುಮಂಡಲವನ್ನು ಸೇರುತ್ತದೆಂತಲೂ ಸರಳವಾದೊಂದು ಪಾಠದಿಂದ ನೀವು ಅರಿತಿರಬಹುದು. ಈ ಕೆಟ್ಟವಾಯುವು ಸಸ್ಯಗಳಿಗೆ ಆಹಾರವಾಗುತ್ತದೆ.

ಸಸ್ಯಗಳ ಪ್ರತಿ ಒಂದು ಎಲೆಗಳಲ್ಲಿಯೂ ಸಾವಿರಾರು ರಂಧ್ರಗಳಿವೆ. ಈ ರಂಧ್ರಗಳು ಬರಿಯಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾಗಿ ಇವೆ. ಈ ರಂಧ್ರಗಳ ಮೂಲಕ ವಾಯುಮಂಡಲದಲ್ಲಿರುವ ಕೆಟ್ಟವಾಯುವನ್ನು ಎಲೆಗಳು ಹೀರಿಕೊಳ್ಳುತ್ತವೆ ಎಲೆಗಳು ವಾಯುವಿನಿಂದ ಹೀರಿಕೊಂಡ ಕೆಟ್ಟವಾಯುವು ಸಸ್ಯಗಳಿಗೆ ಆಹಾರವಾಗಿರುತ್ತದೆ.

ಎಲ್ಲಾ ಸಸ್ಯಗಳಿಗೂ ತೆಳುವಾದ ಅನೇಕ ಬೇರುಗಳು ಇವೆ ಎಂದು ನಿಮಗೆ ತಿಳಿದೇ ಇದೆ. ಈ ಬೇರುಗಳಿಗೆ ತೆಳುವಾದ ಚರ್ಮವಿದೆ. ಮಣ್ಣಿನಲ್ಲಿರುವನೀರು ಬೇರುಗಳತೆಳುವಾದ ಚರ್ಮದಲ್ಲಿ ಪ್ರವೇಶಿಸಿ ಸಸ್ಯದೊಳಕ್ಕೆ ಹೋಗಿ ಎಲೆಗಳನ್ನು ಸೇರುತ್ತದೆ. ಸುಣ್ಣ, ತುಕ್ಕು, ಗಂಧಕ ಮೊದಲಾದ ಮಣ್ಣಿನಲ್ಲಿರುವ ಇತರ ವಸ್ತುಗಳು ನಾನಾರೂಪದಲ್ಲಿ ನೀರಿನಲ್ಲಿ ಕರಗಿ ನೀರಿನೊಡನೆ ಸಸ್ಯದೊಳಕ್ಕೆ ಹೋಗುತ್ತವೆ ಇವುಗಳೂ ಸಸ್ಯಗಳಿಗೆ ಆಹಾರವಸ್ತುಗಳಾಗಿವೆ ಎಲೆಗಳಿಂದ ಹೀರಲ್ಪಟ್ಟ ಕೆಟ್ಟವಾಯುವೂ ಬೇರುಗಳ ಮೂಲಕ ಬಂದ ನೀರೂ ಸೇರಿ ಸಕ್ಕರೆ, ಜಿಡ್ಡುವಸ್ತುಗಳು, ಬಲಕಾರಿವಸ್ತುಗಳು ಮೊದಲಾದ ಇತರ ಅನೇಕ ವಸ್ತುಗಳು ಉಂಟಾಗುತ್ತವೆ. ನೀರಿನೊಡನೆ ಮಣ್ಣಿನಿಂದ ಬಂದ, ಸುಣ್ಣ, ತುಕ್ಕು ಮೊದಲಾದ ಇತರ ವಸ್ತುಗಳು ಈ ವಸ್ತುಗಳು ಉಂಟಾಗುವುದಕ್ಕಾಗಿ ಸಸ್ಯಗಳಲ್ಲಿ ನಾನಾವಿಧವಾಗಿ ಉಪಯೋಗಕ್ಕೆ ಬರುವವು.

ಮೇಲೆ ತಿಳಿಸಿದ ಸಂಗತಿಗಳನ್ನು ಮರೆಯಬಾರದು. ಬೆಕ್ಕಿನ ಮರಿಗೂ ಮತ್ತು ಇತರಪ್ರಾಣಿಗಳಿಗೂ ತಿಂಡಿ ತಿನ್ನುವುದಕ್ಕೆ ಒಂದು ಬಾಯಿ ಇದೆ. ಆದರೆ ಸಸ್ಯ

ಗಾಣಿಗರು ಗಾಣದಲ್ಲಿ ಒಳ್ಳೆ ಎಳ್ಳನ್ನು ತಿರುವಿ ಎಣ್ಣೆ ತೆಗೆಯುವುದನ್ನು ನಿಮ್ಮಲ್ಲಿ ನೀವೇಕರು ನೋಡಿರಬಹುದು, ಒಳ್ಳೆ ಎಳ್ಳಿನಲ್ಲಿ ಎಣ್ಣೆ ಇದೆ ಎಂದು ತಿಳಿಯಬೇಕು. ಹರ ಳೆಣ್ಣೆ, ಹುಚ್ಚೆಳ್ಳೆಣ್ಣೆ, ಕೊಬರಿ ಎಣ್ಣೆ, ಕಳ್ಳೆಕಾಯಿ ಎಣ್ಣೆ ಇವುಗಳನ್ನು ಬೀಜಗ ಳಿಂದಲೇ ತೆಗೆಯುವರು. ಬೀಜಗಳಿಗೆ ಎಣ್ಣೆ ಪೈರುಗಳಿಂದ ಬರುತ್ತದೆ. ಆದುದರಿಂದ ಎಲ್ಲಾ ಪೈರಿನಲ್ಲಿಯೂ ಎಣ್ಣೆ ಇರುತ್ತದೆಂದು ತಿಳಿಯಬೇಕು. ಕೆಲವು ಪೈರುಗಳಲ್ಲಿ ಹೆಚ್ಚಾಗಿರುತ್ತದೆ. ಕೆಲವು ಪೈರುಗಳಲ್ಲಿ ಕಡಮೆಯಾಗಿರುತ್ತದೆ ಎಣ್ಣೆ ಜಿಡ್ಡುವಸ್ತು ವಾದುದರಿಂದ ಅದನ್ನು ಜಿಡ್ಡುಪದಾರ್ಥವೆನ್ನಬಹುದು. ತುಪ್ಪವೂ ಜಿಡ್ಡುವಸ್ತುವಾ ಗಿದೆ. ಜಿಡ್ಡುಪದಾರ್ಥವು ಎಲ್ಲಾ ಸಸ್ಯಗಳಲ್ಲಿಯೂ ಇರುತ್ತದೆ.

ಕೆಲವು ದಿನಗಳ ವರೆಗೆ ನಿಮ್ಮ ಮನೆಯಲ್ಲಿರುವ ಕರುವಿಗೆ ಸಾಕಾಗುವಷ್ಟು ಕುಲ್ಲುಹಾಕದಿದ್ದರೆ ಅದು ಬಡವಾಗುವುದಿಲ್ಲವೆ? ಮೊದಲಿನಹಾಗೆ ತಿಂದರೆ ಮೈ ಬೆಳೆದು ಆದು ಮೊದಲಿದ್ದ ಸ್ಥಿತಿಗೆ ಬರುವುದು. ಹುಲ್ಲಿನಲ್ಲಿ ಮೈಯನ್ನು ಬೆಳೆಯಿಸುವ ಪದಾರ್ಥ ವಿದೆ ಈ ಪದಾರ್ಥವನ್ನು ಬಲಕಾರಿ ಪದಾರ್ಥವೆನ್ನಬಹುದು ಬಲಕಾರಿಪದಾರ್ಥವು ಹುಲ್ಲಿನಲ್ಲಿರುವುದಲ್ಲದೆ ಇತರ ಎಲ್ಲಾ ಸಸ್ಯಗಳಲ್ಲಿಯೂ ಇರುತ್ತದೆ. ಬಗೆಬಗೆಯ ಕಾಳು ಗಳಲ್ಲಿ ಹೆಚ್ಚಾಗಿರುತ್ತದೆ

ಎಲ್ಲಾ ಸಸ್ಯಗಳಲ್ಲಿಯೂ ನೀರು, ಸಕ್ಕರೆ, ಜಿಡ್ಡುಪದಾರ್ಥಗಳು, ಬಲಕಾರಿ ಪದಾರ್ಥಗಳು, ಇರುತ್ತವೆಂದು ಜ್ಞಾಪಕದಲ್ಲಿಡಬೇಕು. ಇವುಗಳಲ್ಲದೆ ಸುಣ್ಣ, ಕಬ್ಬಿಣ, ಉಪ್ಪು, ಗಂಧಕ ಮೊದಲಾದ ಮಣ್ಣಿನಲ್ಲಿರುವ ಇತರ ವಸ್ತುಗಳೆಲ್ಲಾ ಸಸ್ಯಗಳಲ್ಲಿ ಬಗೆ ಬಗೆಯು ರೂಪಗಳಲ್ಲಿ ಇರುತ್ತವೆ ಎಂದು ತಿಳಿಯಬೇಕು.

ಮೇಲೆ ತಿಳಿಸಿದ ವಸ್ತುಗಳೆಲ್ಲಾ ಸಸ್ಯಗಳಿಗೆ ಎಲ್ಲಿಂದ ಬರುತ್ತವೆ? ಅವುಗಳು ಈ ವಸ್ತುಗಳನ್ನು ಹೇಗೆ ತೆಗೆದುಕೊಳ್ಳುತ್ತವೆ. ಈ ಎರಡು ಪ್ರಶ್ನೆಗಳಿಗೂ ಈಗ ಉತ್ತರ ವನ್ನು ತಿಳಿದುಕೊಳ್ಳುವುದು ನಮ್ಮ ಕೆಲಸವಾಗಿದೆ. ಸಸ್ಯಗಳು ಬಿಕ್ಕಿನಮರಿಯಹಾಗೆ ಕಾಲು ಮೊಸರುಗಳನ್ನು ಕದ್ದು ತಿನ್ನಲಾರವು. ಇದ್ದ ಸ್ಥಳದಲ್ಲಿಯೇ ತಮ್ಮ ಬೆಳೆವಳಿ ಗೆ ಬೇಕಾದ ಆಹಾರ ವಸ್ತುಗಳನ್ನು ತೆಗೆದುಕೊಳ್ಳುವ ಶಕ್ತಿ ಅವುಗಳಿಗೆ ಇದೆ.

ಸಸ್ಯಗಳು ಆಹಾರವನ್ನು ಹೊಂದುವರೀತಿ.

ಸಕ್ಕರೆ, ಜಿಡ್ಡುವಸ್ತುಗಳು, ಬಲಕಾರಿ ಪದಾರ್ಥಗಳು ಇವುಗಳನ್ನು ಬಿಕ್ಕಿನ ಮರಿಯೂ ನಾವೇ ಮೊದಲಾದ ಇತರ ಪ್ರಾಣಿಗಳು ತಿನ್ನುತ್ತೇವೆ. ಆದರೆ ಇವು

ಆಹಾರವಸ್ತುಗಳಿಂದ ಸಸ್ಯಗಳಲ್ಲಿ ಸಕ್ಕರೆ ಮೊದಲಾದ ಬಗೆಬಗೆಯ ವಸ್ತುಗಳು ಉಂಟಾಗುತ್ತವೆ. ಉಂಟಾದ ಈ ವಸ್ತುಗಳು ಸಸ್ಯದ ನಾನಾಭಾಗದಲ್ಲಿ ನಿಲ್ಲುತ್ತವೆ. ಈರೀತಿಯಲ್ಲಿ ಸಸ್ಯಗಳು ಬೆಳೆಯುತ್ತವೆ.

ತಾಯಿತಂದೆಗಳ ಕರ್ತವ್ಯ.

ಮಕ್ಕಳಿಗೆ ಬಾಲ್ಯಶಿಕ್ಷಣವು ಅವರ ಮುಂದಿನ ಅಭಿವೃದ್ಧಿಗೆ ಕಾರಣವು. ಅಲ್ಲದೆ ಪ್ರಪಂಚಸಂಬಂಧವಾದ ವಿಷಯಗಳಲ್ಲಿನ ನೈಜಾಭಿಪ್ರಾಯವು ಸ್ಥಿರವಾಗುವದಕ್ಕು ಸಾಧಕವಾಗಿರುತ್ತೆ.

ಹೀಗಿರುವಲ್ಲಿ ನಮ್ಮ ದೇಶೀಯಜನಗಳಲ್ಲಿ ಕೆಲವರು ತಮ್ಮ ತಮ್ಮ ಮಕ್ಕಳುಗಳಿಗೆ ಬಾಲ್ಯವಿದ್ಯಾಭ್ಯಾಸವಾಡಿಸುವದರಲ್ಲಿ ಸೋವಾರಿತನವನ್ನೂ ನಂಬಿಕೆಗೆ ವಿರುದ್ಧವಾದದ್ದರಲ್ಲಿ ನಂಬಿಕೆಯುನ್ನೂ ಬಾಲಕರಲ್ಲಿ ಪ್ರಾರಂಭದಲ್ಲೇ ಬಲವಡಿಸುವರಾಗಿರುವರು; ಎಂಬುವದು ಅನೇಕವಿದ್ವಾಗ್ಯೂ ನನಗೆ ಅನುಭವ ಕಂಡು ಬಂದ ವಿಷಯಗಳನ್ನು ಈಕೆಳಗೆ ಸ್ವಲ್ಪರ ಅವಲೋಕನಕ್ಕೆ ವಿಜ್ಞಾಪಿಸುತ್ತೇನೆ.

ಪ್ರಥಮತಃ ಸಣ್ಣಮಕ್ಕಳಲ್ಲಿ ಜೇಷ್ಟಗಳೂ, ಪ್ರತಿ ವಸ್ತುವನ್ನೂ ಪರಿಶೀಲಿಸಿ ಶಬ್ದಸ್ಪರ್ಶ ರೂಪ, ರಸ, ಗಂಧಗಳನ್ನೂ ಪಂಚೇಂದ್ರಿಯಗಳಿಗೆ, ಗೋಚರಪಡಿಸುವದೂ, ಮಕ್ಕಳ ಸ್ವಾಭಾವಿಕ ವಯೋಧರ್ಮದಕೆಲಸವಾಗಿವೆ. ಹೀಗಿರುವ ಮಕ್ಕಳ ಆಟಸಾಟಗಳನ್ನು, ಅಭಿವೃದ್ಧಿಪಡಿಸಲು ತಂದೆತಾಯಿಗಳು, ಪ್ರಯತ್ನಪಟ್ಟಲ್ಲಿ ಮುಂದೆ ಅನೇಕ ವಿಧವಾದ ಪ್ರಯೋಜನಗಳು ಮಕ್ಕಳ ಗಳಿಗೆ ದೊರೆಯುವದೆಂಬುವದು ಬಿಟ್ಟು, ಮಕ್ಕಳು ಮಾಡುವ ಜೆಷ್ಟೆಗಳು ಕೆಟ್ಟವುಗಳೆಂದು ಎಣಿಸಿ ಆ ಜೇಷ್ಟೆಗಳನ್ನು ನಿಲ್ಲಿಸುವದಕ್ಕೆ ತಕ್ಕ ಉಪಾಯವನ್ನೂ ತಿಳಿಯದೆ ಬೆದರಿಸುವರು.

ಎಂದರೆ ನಂಬಿಕೆಯಿಲ್ಲದ, ದೆವ್ವ, ಭೂತ, ಗುಮ್ಮ, ಗೊಗ್ಗ, ಇವುಗಳ ಕೈಯಲ್ಲಿ ಹಿಡಿದುಕೊಡುತ್ತೇನೆ ನೋಡು ಸುಮ್ಮನೆ ಇರು ಎಂಬದಾಗಿ, ಭಯಪಡಿಸುವದು ಅದಕ್ಕೂ ಮಕ್ಕಳು ತನ್ನ ಆಟಪಾಟ ಜೇಷ್ಟೆಗಳನ್ನು ಮಾಡುತ್ತಿದ್ದರೆ ಮಕ್ಕಳನ್ನು, ಮತ್ತೂ ಹೆದರಿಸಲು, ಕಂಬಿ, ಹೊಗ್ಗುಕೊಂಡು ವಿಕಾರಸ್ವರೂಪ

ಗಳ ಪ್ರತಿ ಒಂದು ಎಲೆಯಲ್ಲಿಯೂ ಸಾವಿರಾರು ಬಾಯಿಗಳು ಇವೆ ಎಂದು ಹೇಳಬಹುದು. ಅನೇಕ ಬಾಯಿಗಳನ್ನು ಪಡೆದಿರುವ ಸಸ್ಯದ ಎಲೆಗಳೆಲ್ಲವೂ ಸೂರ್ಯನ ಬೆಳಕಿನಲ್ಲಿ ವಾಯುಮಂಡಲದಲ್ಲಿರುವ ಕೆಟ್ಟ ವಾಯುವನ್ನು ಹೀರಿಕೊಳ್ಳುತ್ತವೆ. ಸೂರ್ಯನ ಬೆಳಕಿಲ್ಲದಿದ್ದರೆ ಕೆಟ್ಟ ವಾಯುವನ್ನು ಎಲೆಗಳು ಹೀರಿ ಉಪಯೋಗಿಸಿಕೊಳ್ಳುವುದಿಲ್ಲ. ಈ ಕೆಲಸವನ್ನು ಅವು ರಾತ್ರಿಕಾಲದಲ್ಲಿ ಮಾಡುವುದಿಲ್ಲ. ಕೆಟ್ಟ ವಾಯುವು ಸಸ್ಯಗಳಿಗೆ ಅವಶ್ಯಕವಾದ ಆಹಾರವಸ್ತುವಾಗಿದೆ. ಇದಲ್ಲದೆ ಅನೇಕ ಸಣ್ಣ ಬೇರುಗಳ ಮೂಲಕ ನೀರು, ಗಂಧಕ, ಸುಣ್ಣ ಮೊದಲಾದ ಇತರ ವಸ್ತುಗಳನ್ನು ಅವು ತೆಗೆದುಕೊಳ್ಳುತ್ತವೆ. ಈ ವಸ್ತುಗಳಲ್ಲಿ ಅನೇಕ ವಸ್ತುಗಳು ಸಸ್ಯಗಳಿಗೆ ಅವಶ್ಯಕವಾದ ಆಹಾರವಸ್ತುಗಳಾಗಿವೆ.

ಮನೆಯ ಹಿತ್ತಲಿನಲ್ಲಿಯಾದರೂ ಊರುಹೊರಗಿನ ಬೈಲುಗಳಲ್ಲಿಯಾದರೂ ಕಲ್ಲುಗುಂಡುಗಳು ಬಿದ್ದಿರುತ್ತವಲ್ಲವೇ ? ಈ ಗುಂಡುಗಳ ಸಂದುಗಳಲ್ಲಿ ಬೆಳೆದಿರುವ ಬಿಳಿಯಗರಿಕೆ ಹುಲ್ಲನ್ನು ನೀವು ನೋಡಿರಬಹುದು. ಸೂರ್ಯನ ಬೆಳಕು ಬೀಳದಿದ್ದರೆ ಸಸ್ಯಗಳಲ್ಲಿ ಹಸುರುಬಣ್ಣ ಉಂಟಾಗುವುದಿಲ್ಲ. ಇದಲ್ಲದೆ ಅವು ಕೆಟ್ಟ ವಾಯುವನ್ನು ಉಪಯೋಗಿಸಿಕೊಂಡು ಹುಲುಸಾಗಿ ಬೆಳೆಯುವುದಿಲ್ಲ ಆದುದರಿಂದ ಸಸ್ಯಗಳು ಚನ್ನಾಗಿ ಬೆಳೆಯಬೇಕಾದರೆ ಸೂರ್ಯನ ಬೆಳಕು ಅವಶ್ಯಕವೆಂದು ಜ್ಞಾಪಕದಲ್ಲಿಡಬೇಕು.

ಹಿಂದೆ ಹಾಕಿದ ಎರಡು ಪ್ರಶ್ನೆಗಳಿಗೂ ಸರಿಯಾದ ಉತ್ತರ ಈಗ ತಿಳಿದಿರಬಹುದು. ಆ ಪ್ರಶ್ನೆಗಳನ್ನು ಜ್ಞಾಪಕಕ್ಕೆ ತಂದುಕೊಂಡು ಈ ಉತ್ತರಗಳನ್ನು ಮರೆಯಬೇಡಿರಿ.

1 ಬೆಳಕಿನ ಸಹಾಯದಿಂದ ಸಸ್ಯಗಳು ಹೊಂದುವ ಕೆಟ್ಟವಾಯುವಿನಿಂದಲೂ ಮಣ್ಣಿನಿಂದ ಬರುವ ನೀರು, ಗಂಧಕ ಮೊದಲಾದ ಇತರವಸ್ತುಗಳಿಂದಲೂ ಸಸ್ಯಗಳಲ್ಲಿರುವ ವಸ್ತುಗಳು ಉಂಟಾಗುತ್ತವೆ.

2 ಎಲೆಗಳು ಕೆಟ್ಟ ವಾಯುವನ್ನು ತಮ್ಮಲ್ಲಿರುವ ಸೂಕ್ಷ್ಮರಂಧ್ರಗಳ ಮೂಲಕ ಹೀರಿಕೊಂಡು ಸೂರ್ಯನ ಬೆಳಕಿನ ಸಹಾಯದಿಂದ ಉಪಯೋಗಿಸಿಕೊಳ್ಳುತ್ತವೆ. ಸುಣ್ಣ, ಗಂಧಕ ಮೊದಲಾದ ಇತರವಸ್ತುಗಳು ಕರಗಿರುವ ನೀರನ್ನು ಬೇರುಗಳು ಮಣ್ಣಿನಿಂದ ತೆಗೆದುಕೊಳ್ಳುತ್ತವೆ

ವಾಯುವಿನಿಂದ ಬರುವ ಕೆಟ್ಟವಾಯುವನ್ನು ಮಣ್ಣಿನಿಂದ ಬರುವ ನೀರು, ಗಂಧಕ, ಸುಣ್ಣ ಮೊದಲಾದ ವಸ್ತುಗಳನ್ನು ಸಸ್ಯಾಹಾರವಸ್ತುಗಳೆನ್ನಬಹುದು. ಈ

ವಸ್ತುಪಾಠಗಳೂ ಯಂತ್ರಸಹಾಯವೂ.

ಮನುಷ್ಯನಿಗೆ ಮಾಡಬೇಕಾದ ಕಾರ್ಯಗಳನ್ನೆಲ್ಲಾ ಸ್ವಲ್ಪವೂ ಕುಂದಿಲ್ಲದಂತೆ ನಿರ್ವೇರಿಸಿಕೊಳ್ಳುವ ಶಕ್ತಿಯನ್ನು ಉಂಟುಮಾಡುವದೇ ವಿದ್ಯಾಭ್ಯಾಸದ ಉದ್ದೇಶವು. ಈ ಶಕ್ತಿಯನ್ನು ಸಂಪಾದಿಸಿಕೊಳ್ಳಬೇಕಾದರೆ ಬುದ್ಧಿಯನ್ನು ಚನ್ನಾಗಿ ಕೃಷಿ ಮಾಡಬೇಕು. ನಮ್ಮ ಬುದ್ಧಿಯಲ್ಲುಂಟಾಗುವ ಪ್ರಪಂಚಜ್ಞಾನವೆಲ್ಲವೂ ಇಂದ್ರಿಯಗಳ ಮೂಲಕವೇ ಉಂಟಾಗುವದರಿಂದ ಪ್ರಥಮತಃ ಇಂದ್ರಿಯಗಳ ಶಿಕ್ಷಣವು ಅವಶ್ಯಕವಾಗುತ್ತದೆ. ಪ್ರಾಯಶಃ ಬಹಳಕಾಲದವರೆಗೂ ಶಾಲಾಧಿಕಾರಿಗಳು ವಿದ್ಯಾರ್ಥಿಗಳ ಜ್ಞಾನೇಂದ್ರಿಯಶಿಕ್ಷಣವಿಷಯದಲ್ಲಿ ಸ್ವಲ್ಪವೂ ಶ್ರಮವನ್ನು ತೆಗೆದುಕೊಳ್ಳುತಿದ್ದಂತೆ ತಿಳಿದುಬರುವದಿಲ್ಲ. ಈಚೀಚೆಗೆ ಈ ಸಂಸ್ಕರಣದ ಅವಶ್ಯಕತೆಯು ಪಂಡಿತರಿಗೆ ಗೊತ್ತಾಗುತ್ತಾ ಬಂದು ಪಾಠಶಾಲೆಗಳಲ್ಲಿ ಪ್ರಚಾರಕ್ಕೆ ಬರುತ್ತಿವೆ ಆದುದರಿಂದಲೇ ಈಗೀಗ ಆಕ್ಷನ್ ಸಾಂಗ್ಸ್ (Action Songs) ಕಿಂಡರ್‌ಗಾರ್ಟನ್, (Object Lessons) ಅಥವಾ ವಸ್ತುಪಾಠ ಎಂಬಿವು ಪ್ರತಿ ಪಾಠಶಾಲೆಯಲ್ಲಿಯೂ ಬೋಧಿಸಲ್ಪಡುತ್ತಿವೆ ಇವುಗಳಲ್ಲಿ 'Action Songs' ಎಂಬಿವು ಕೇವಲ ಅಂಗಸಾಧನರೂಪವಾಗಿ ಇರುತ್ತವೆ. ಕಿಂಡರ್‌ಗಾರ್ಟನ್ ಎಂಬುದು ಕಣ್ಣನ್ನೂ ಬುದ್ಧಿಯನ್ನೂ ಸ್ವಲ್ಪವಾಟ್ಟಿಗೆ ಕೃಷಿ ಮಾಡುತ್ತದೆ. ಇದರಿಂದ ಬುದ್ಧಿಕೌಶಲವಾತ್ರ ಉಂಟಾಗುತ್ತದೆ. ವಸ್ತುಪಾಠಗಳಿಂದ ಪರೀಕ್ಷಾಕ್ರಮವೂ, ಬುದ್ಧಿಕೌಶಲವೂ, ಇಂದ್ರಿಯಸಂಸ್ಕಾರವೂ ಅಲ್ಲದೆ ನಮಗೆ ಉಪಯುಕ್ತವಾದ ಪದಾರ್ಥವಿಜ್ಞಾನವೂ ಉಂಟಾಗುತ್ತದೆ. ಆದುದರಿಂದಲೇ ಈ ಪಾಠಗಳಿಗೆ ಇಷ್ಟು ಪ್ರಾಮುಖ್ಯತೆಯುಂಟಾಯಿತು.

ಈ ವಸ್ತುಪಾಠಗಳನ್ನು ಬೋಧಿಸುವ ಕ್ರಮವನ್ನು ತಿಳಿಸುವದಕ್ಕಾಗಿ ಇಂಗ್ಲಿಷ್ ಮೊದಲಾದ ಭಾಷೆಗಳಲ್ಲಿ ಅನೇಕ ಗ್ರಂಥಗಳು ಹುಟ್ಟಿವೆ ದೇಶಭಾಷೆಯಲ್ಲಿ ಕೆಲ ಕೆಲವು ಗ್ರಂಥಗಳು ಈಗೀಗ ಬರೆಯಲ್ಪಡುತ್ತಿವೆ ಈ ಗ್ರಂಥಗಳಲ್ಲಿ ವಿವರಿಸಿರುವ ವಿಷಯಗಳನ್ನೆಲ್ಲಾ ಬಾಲಕರಿಗೆ ಪ್ರತ್ಯಕ್ಷವಾಗಿ ತೋರಿಸುವದು ಎಲ್ಲಾ ಕಡೆಯಲ್ಲಿಯೂ ಸಾಧ್ಯವಾಗುವದಿಲ್ಲ. ಅವುಗಳಲ್ಲಿ ವರ್ಣಿತವಾಗಿರುವ ಆನೆ, ಹುಲಿ ಮೊದಲಾದ ದೊಡ್ಡ ದೊಡ್ಡ ವೃಗಗಳನ್ನೂ, ತಿಮಿಂಗಿಲವೇ ಮೊದಲಾದ ಜಲಚರಪ್ರಾಣಿಗಳನ್ನೂ ಬೇರೆ ಬೇರೆ ದೇಶಗಳಲ್ಲಿಯೂ, ಅರಣ್ಯಗಳಲ್ಲಿಯೂ ಬೆಳೆಯುವ ವೃಕ್ಷಗಳನ್ನೂ, ಬೇರೆಬೇರೆ ದೇಶಗಳಲ್ಲಿ ದೊರಕುವ ನಾನಾವಿಧವಾದ ಧಾತು ವಿಶೇಷಗಳನ್ನೂ ತಂದು ತೋರಿಸುವದು

ವಾಗಿ, ಕೂಗುಧ್ವನಿಯವಾಡಿ ದೆವ್ವವು ಪ್ರತ್ಯಕ್ಷಬಂದಂತೆ ನಟ್ಟಿಸಿ ಅವರ ಮನಸ್ಸನ್ನೊಳ್ ಧೈರ್ಯಬರಿಸಿ, ಅಧೈರ್ಯವನ್ನು ಶಾಶ್ವತಗೊಳಿಸುವರು.

ಹೆಚ್ಚು ಚೇಷ್ಟೆಗಳನ್ನು ಮಾಡಿದಾಗಾಗಲಿ ಇಲ್ಲವೆ, ಬೆದರಿಸಿದಕಾರಣ ಹೆಚ್ಚು ಅಳುತ್ತಿದ್ದಾಗಾಗಲಿ ಆ ರೋದನ ಶಾಂತ್ಯರ್ಥವಾಗಿ, ಮತ್ತೊಂದು ಭಯವನ್ನು, ಕಲ್ಪಿಸುವರು.

ಅದೇನೆಂದರೆ ಮಕ್ಕಳನ್ನು ಕುರಿತು ನೀನು ಹೆಚ್ಚು ಅಳಬೇಡ. ನೋಡು ನಾಳೆ ಪಾಠಶಾಲೆಗೆ ಕಳುಹಿಸುತ್ತೇನೆ ಮಾಸ್ಟರನ್ನು ಕರೆಯಲೋ ಶಾಲೆಗೆ ನಿನ್ನನ್ನೊ ಕರೆದುಕೊಂಡು ಹೋಗಿ ಮೇಲೆಕೆಟ್ಟ ಹೊಡಿಸುತ್ತೇನೆ ಎಂಬದಾಗಿ ಬೆದರಿಕೆ ತೋರಿಸುವದು ಈರೀತಿ ಮಾಡುತ್ತಾರೆ.

ಹೀಗೆ ಮಾಡುವದರಿಂದ, ಮುಂದೆ, ಮಕ್ಕಳು, ಶಾಲೆಗೆ, ಹೋಗಬೇಕೆಂಬ ಸಂಭವ ಬಂದಕೂಡಲೆ ಶಾಲೆ ಎಂಬುವದು, ಒಂದು ಶಿಕ್ಷಾಸ್ಥಳವೆಂತಲೂ ಉಪಾಧ್ಯಾಯರೇ ಮೃತ್ಯುಸ್ವರೂಪವೆಂತಲೂ ಬಾಲಕರು ತಿಳಿದು ಬರಲು, ಹಠಮಾಡುವರು ಹೀಗೆ ಹಠಮಾಡಿದ ಮಕ್ಕಳನ್ನು ಸಮಾಧಾನಕ್ಕೆ ತರಲು, ತಂದೆತಾಯಿಗಳಿಗೆ ಯುಕ್ತಿಸಾಲದೆ, ಹೊಡೆಯುವದು ಬೈಯುವದು, ಮಾಡತೊಡಗುವರು. ಆದರೂ, ಶಾಲೆಗೆ ಹೋಗಲು ಬಾಲಕರು ಕಳ್ಳತಪ್ಪಿಸಿಕೊಳ್ಳಬೇಕೆಂದು, ಕಾಡುಹತ್ತಿಯೂ, ಕಳ್ಳಕೊಳ್ಳಗಳಲ್ಲಿ ಧುಮುಕುವದೂ ಮಾಡಿದ್ದನ್ನು ನೋಡಿ ತಂದೆತಾಯಿಗಳ, ಶಾಲೆಗೆ ಬಂದು ಉಪಾಧ್ಯಾಯರೇ ನಮ್ಮ ಮಕ್ಕಳು, ಶಾಲೆಗೆ ಬರಲು ತುಂಬಾ ಹಠಮಾಡುತ್ತಾರೆ ಹ್ಯಾಗಾದರೂ ಮಾಡಿ, ಕರಿಸಿಕೊಳ್ಳಿ ಎಂದು, ಹೇಳುವರು. ನಂತರ ಉಪಾಧ್ಯಾಯರು ಕರಿಸಿಕೊಂಡು ಮೊದಲಿನಂತೆ ಅವರನ್ನು ಆಟಪಾಟಗಳಲ್ಲಿ ಕಾಲಕಳೆಯಲು ತೊಡಗಿಸಿ : ನಂತರ ಬಾಲ್ಯವಿದ್ಯಾಭ್ಯಾಸ ಮಾಡಿಸಬೇಕಾಗುವದು.

ಈ ವಿಷಯ ಬಾಹುಳ್ಯವಾಗುವದೆಂಬದರ ಮೇಲೆ ಹೆಚ್ಚು ಬೆಳಸಲು ಅನುಕೂಲಿಸಲಿಲ್ಲವಾಗಿ ಸಂಗ್ರಹಿಸಿರುತ್ತೇನೆ.

ಎಮ್. ಶ್ರೀನಿವಾಸರಾವ್
ಗಾ ॥ ಕನ್ನಡಾ ಸ್ಕೂಲ್
ಕಳ್ಳೇ ಕಟ್ಟೆ.

ವಾತ್ರ ತೋರಿಸುವವಲ್ಲದೆ, ಅವುಗಳ ನಿಜವಾದ ಎತ್ತರ, ದಪ್ಪ ಮೊದಲಾದವುಗಳನ್ನು ತೋರಿಸಲಾರವು ಆದರೂ ಚಿತ್ರಗಳ ಪಕ್ಕದಲ್ಲಿ ಎಲ್ಲರಿಗೂ ತಿಳಿದಿರುವ ನಿಯತವಾದ ಮನುಷ್ಯನೇ ಮೊದಲಾದ ಒಂದು ಆಕೃತಿಯನ್ನು ಬರೆಯುವದರಿಂದಲೂ, 'Scale' ಎಂಬ ಪರಿವೇಷವಿಶೇಷವನ್ನು ತೋರಿಸುವದರಿಂದಲೂ ಚಿತ್ರದಲ್ಲಿ ಕುಂದಕವನ್ನು ಬಹಳಮಟ್ಟಿಗೆ ಕಡಮೆ ಮಾಡಬಹುದಾದರೂ ಬಾಲಕರು ಈ ವಿಷಯಗಳನ್ನು ತಿಳಿದು ಕೊಂಡು ನಿಜವಾದ ಸನ್ನಿವೇಶವನ್ನು ಊಹಿಸಿಕೊಳ್ಳುವಷ್ಟು ಶಕ್ತಿಯು ಳ್ಳವರಲ್ಲವಾ ದುದರಿಂದ ಇವುಗಳಿಂದಲೂ ಪ್ರಯೋಜನವು ಮಿತವಾಗಿಯೇ ಇರುವದು. ಅಲ್ಲದೆ ಇವುಗಳೂ ಶಿಲಾದಿನಿರ್ಮಿತ ಪ್ರತಿಮಾದಿಗಳಂತೆಯೇ ಶಿಲ್ಪಿಯ ಅವಜ್ಞಾತೆಯೇ ಮೊದ ಲಾದವುಗಳಿಂದ ಸಂಭವಿಸುವ ದೋಷದಿಂದ ದೂಷಿತವಾಗಿರುವವು.

ಆದರೆ ಈಗ ಚಿತ್ರಗಳಲ್ಲಿ ಮಾತ್ರ ಶಿಲ್ಪಿಯು ದೋಷವನ್ನು ನಿವಾರಿಸುವ ಶಕ್ತಿಯು ದೊರಕಿರುವದು. ಈ ಸಾಧನವೇ ಫೊಟೋಗ್ರಾಫ್ ಎಂಬ ಛಾಯಾಗ್ರಾಹಿ ಯಂತ್ರವು ಈ ಯಂತ್ರದ ಸಹಾಯ ದಿಂದ ವಸ್ತುಗಳ ಯಥಾವತ್ತಾದ ಚಿತ್ರವನ್ನು ಅತಿ ಕ್ಷಿಪ್ರವಾಗಿಯೇ ಎತ್ತಿ ಅಚ್ಚಿನಮೂಲಕವಾಗಿ ಬೇಕಾದಷ್ಟು ಪ್ರತಿಗಳನ್ನು ಸಿದ್ಧ ಪಡಿಸಿಕೊಳ್ಳಬಹುದು. ಈ ಛಾಯಾಗ್ರಾಹಿಯಂತ್ರವು ಇಷ್ಟು ಅನುಕೂಲ್ಯವನ್ನು ಉಂಟುಮಾಡಿಕೊಟ್ಟರೂ ಇವರಲ್ಲಿ ಪ್ರತಿಕೃತಿಗಳು ಬಣ್ಣವಿಲ್ಲದವುಗಳಾಗಿಯೂ ಬಹಳ ಚಿಕ್ಕವಾಗಿಯೂ ಇರುತ್ತವೆ ಈಗ ವರ್ಣವಿಶಿಷ್ಟವಾದ ಪ್ರತಿಕೃತಿಗಳನ್ನೇ ಎತ್ತುವ ವಿಧಾನವನ್ನು ಈಚೆಗೆ ಕಂಡುಹಿಡಿದಿರುವರು. ಇದು ಪ್ರಚಾರಕ್ಕೆ ಬಂದ ಬಳಿಕ ಈ ಒಂದು ದೋಷವು ತಪ್ಪಿಹೋಗುವದು. ಸೆಂಕುಚಿತವಾದ ಆಕೃತಿಯನ್ನು ವಿಸ್ತರಿಸಿ ತೋರಿಸುವದಕ್ಕೂ, ಒಂದೇ ಪ್ರತಿಯನ್ನು ನೂರಾರು ಜನರು ಏಕಕಾಲದಲ್ಲಿ ನೋಡು ವದಕ್ಕೂ ಅನುಕೂಲವಾಗುವಂತೆ ಮ್ಯಾಜಿಕ್‌ಲಾಂಟರ್ನ್ ಎಂಬ ಯಂತ್ರವನ್ನು ನಿರ್ಮಿಸಿ ಪ್ರಚಾರಕ್ಕೆ ತಂದಿರುವರು

(ಸಸೇಷ;)

ಸಾಧ್ಯವಲ್ಲ. ಆದಕಾರಣ ಈ ವಸ್ತುಪಾಠಗಳ ಪ್ರಯೋಜನವು ಬಹಳಮಟ್ಟಿಗೆ ಸಂಕುಚಿತವಾಗಿ ಹೋಗುತ್ತದೆ.

ಯದ್ಯಪಿ ಈ ಕುಂದಕವನ್ನು ಬೆಂಗಳೂರಿನಲ್ಲಿರುವ ಲಾಲ್‌ಬಾಗ್ ಮೊದಲಾದ ನಾನಾವಿಧವಾದ ವೃಕ್ಷಜಾತಿಗಳನ್ನು ಬೆಳೆಯುವ ತೋಟಗಳೂ, ನಾನಾವಿಧವಾದ ವೃಗ ಪಕ್ಷಿ ಮೊದಲಾದವುಗಳನ್ನು ಇಟ್ಟಿರುವ ಜೀವಿಪ್ರದರ್ಶನಶಾಲೆಗಳೂ ಸಕ್ತುಹೋದ ಮೃಗ ಪಕ್ಷಿ ಮೊದಲಾದವುಗಳ ಚರ್ಮಗಳಿಗೆ ಸಂಸ್ಕಾರವನ್ನು ಮಾಡಿ (Stuffed) ಅವುಗಳನ್ನೂ, ನಾನಾವಿಧವಾದ ಪಾಷಾಣ, ಲೋಹ, ಮೊದಲಾದ ಧಾತು ವಿಶೇಷಗಳನ್ನು ಒಂದೇಕಡೆಯಲ್ಲಿ ಸೇರಿಸಿ ಇಟ್ಟಿರುವ ಸರ್ವಪ್ರದರ್ಶನಶಾಲೆ (Museum) ಗಳೂ, ಅಯಾದೇಶಗಳಲ್ಲಿ ಆಗಾಗ್ಗೆ ನಡೆಯಿಸುತ್ತಿರುವ (Exhibitions) ಎಂಬ ವಸ್ತುಪ್ರದರ್ಶನ ಸನ್ನಿವೇಶಗಳೂ, ಬಹಳಮಟ್ಟಿಗೂ ಹೋಗಲಾಡಿಸುತ್ತಿದ್ದರೂ, ಈ ಅನುಕೂಲ್ಯಗಳು ಎಲ್ಲಾ ಕಡೆಯಲ್ಲಿಯೂ ದೊರಕುವದಿಲ್ಲವಾದುದರಿಂದಲೂ ಎಲ್ಲಾ ಬಾಲಕರನ್ನೂ ಅವುಗಳಿರುವ ಕಡೆಗೆ ಕರೆದುಕೊಂಡುಹೋಗಿ ತೋರಿಸುವದು ಅಸಾಧ್ಯವಾದುದರಿಂದಲೂ ಇವುಗಳಿಂದುಂಟಾಗುವ ಪ್ರಯೋಜನವು ಕಾದಾಚಿತ್ಕವಾಗಿಯೂ, ಮಿತವಾಗಿಯೂ ಇರುತ್ತದೆ

ಆದುದರಿಂದಲೇ ಈ ಪದಾರ್ಥವಿಜ್ಞಾನವನ್ನು ಬಾಲಕರಿಗೆ ಸುಲಭವಾಗಿ ಉಂಟುಮಾಡುವದಕ್ಕೆ ಉಪಾಯಾಂತರವನ್ನು ಅವಲಂಬಿಸಬೇಕಾಯಿತು. ಇದಕ್ಕಾಗಿ ಲೋಹ, ಶಿಲೆ, ಗಾಜು, ಮರ ಮೊದಲಾದವುಗಳಿಂದ ಮಾಡಿದ ಪ್ರತಿಕೃತಿಗಳನ್ನು ಉಪಯೋಗಿಸಿಕೊಳ್ಳಬಹುದು, ಆದರೆ ಇವುಗಳನ್ನು ಮಾಡುವ ಶ್ರಮವೂ, ಇವುಗಳಿಗಾಗುವ ಬೆಲೆಯೂ ಬಹಳ ಅಧಿಕವಾಗುವದರಿಂದಲೂ, ಇವೂ ಸರ್ವಸುಲಭವಾಗಲಾರವು. ಅಲ್ಲದೆ ಇವು ಶಿಲ್ಪಿಯ ಅಜ್ಞಾನ, ಪ್ರಮಾದ ಮೊದಲಾದವುಗಳಿಂದಲೂ, ಅನೇಕ ದೋಷದಿಂದ ದೂಷಿತವಾಗಿರುವವು.

ಇವುಗಳಿಗೆ ಪ್ರತಿಯಾಗಿ ಚಿತ್ರಗಳನ್ನು ಉಪಯೋಗಿಸಿಕೊಳ್ಳಬಹುದು, ಇವು ಸುಲಭಸಾಧ್ಯವಾಗಿಯೂ, ಈಚಿಗೆ ನಿರ್ಮಿಸಿರುವ ಯಂತ್ರಸಾಧನಸಂಪತ್ತಿನಿಂದ ಸುಲಭಕ್ರಯಕ್ಕೆ ದೊರೆಯುತಕ್ಕವುಗಳಾಗಿಯೂ ಇವೆ. ಮೇಲೆಯೂ ಇವುಗಳಲ್ಲಿ ಆಯಾ ವಸ್ತುಗಳಿಗೆ ತಕ್ಕಂತೆ ಕೂಡಿದಮಟ್ಟಿಗೆ ಬಣ್ಣವನ್ನೂ ಹಾಕಬಹುದು. ಇಷ್ಟಾದರೂ ಇವುಗಳೂ ಶಿಲಾಪ್ರತಿಮಾದಿಗಳಂತೆಯೇ ಮೃಗಾದಿಗಳ ಅವಯವಸನ್ನಿವೇಶಗಳನ್ನು

ರುತ್ತೆ. ಎಷ್ಟು ಕೂಲಿಯಾಳುಗಳು, ಎಷ್ಟುಮಂದಿ ಯಜಮಾನರು, ಯಾವಯಾವ ವರ್ತಕರು, ಎಂಥ ಎಂಥ ಕೆಲಸಗಾರರು ಆವಶ್ಯಕವೋ ಅದನ್ನು ಲೆಕ್ಕಮಾಡಿ ಹೇಳಲಿ ಕ್ಕಾಗುವದಿಲ್ಲ. ಹೀಗೆ ನಾವು ಉಂಡು, ಉಟ್ಟು, ಕೊಟ್ಟು ಅನುಭವಿಸುವ ಒಂದೊಂ ದು ಪದಾರ್ಥವೂ ನಮಗೆ ಉಪಯೋಗವಾಗುವುದಕ್ಕೆ ಮುಂದೆ ಬಹುಮಂದಿ ಜನಗಳ ಕೈಸಹಾಯವನ್ನು ಅಪೇಕ್ಷಿಸುತ್ತೆ. ನಾವು ಬೆಳಕನ್ನು ಹಚ್ಚಿಸುವ ದೀಪದಕಡ್ಡಿಯು ಸಾ ವಿರಾರು ಕೈದಾಟಿ ನಮಗೆ ಸುಲಭ ಕ್ರಯಕ್ಕೆ ದೊರೆಯುವುದು. ಒಂದು ದೀಪದ ಕಡ್ಡಿ ಯನ್ನೇ ಆಗಲಿ, ಒಂದು ತುಂಡು ಬಟ್ಟೆಯನ್ನೇ ಆಗಲಿ, ಒಂದು ಕೈಪೆಟ್ಟಿಗೆಯನ್ನೇ ಆಗ ಲಿ, ಯಾವದಾದರೂ ಪಾತ್ರೆಯನ್ನೇ ಆಗಲಿ ಮೊದಲಿಂದಲೂ ಒಬ್ಬನೆ ಇತರರ ಸಹಾ ಯ ಕಿಂಚಿತ್ತೂ ಅಪೇಕ್ಷಿಸದೆ ಮಾಡುವೆನೆಂಬುದು ಬಹುಶ್ರಮಸಾಧ್ಯ. ಅಸಾಧ್ಯವೆಂ ತಲೇ ಹೇಳಬೇಕು. ಹೀಗೆ ಮಾಡುವೆನೆಂದು ಪ್ರಯತ್ನಪಡತಕ್ಕವನೂ ವಿವೇಕಿಯಲ್ಲವು. ಅವನು ವೃಥಾ ಕಾಲಹರಣ ಮಾಡುವನು ಆದುದರಿಂದ ಪರಸ್ಪರ ಸಹಾಯವು ಅತ್ಯಾ ವಶ್ಯಕವು. ಹೀಗೆ ಪರಸ್ಪರ ಸಹಾಯದಿಂದ ಸಕಲರಿಗೂ ಉಂಟಾಗತಕ್ಕ ಪ್ರಯೋಜನ ವನ್ನು ಕುರಿತು ಸಂಪತ್ ಶಾಸ್ತ್ರವು ಚರ್ಚಿಸುವುದು.

ಉ ಕ್ತ ಲೇ ಖ ನ.

ಪ್ರೈಮರಿ ತರಗತಿಯಲ್ಲಿ ಓದುವ ಬಾಲಕರು ಮಾಡುವ ತಪ್ಪುಗಳು.

ಬರೆಯುವ ವಿಷಯವನ್ನು ಉಪಾಧ್ಯಾಯರು ಹೇಳುವುದಕ್ಕೆ ಮುಂದೆಯೇ ಬಾಲಕರು ಕೆಲವರು ಬರೆಯಲು ಸಿದ್ಧರಾಗಿರುವುದಿಲ್ಲ. ಹಾಗೆ ಸಿದ್ಧರಾಗಿದ್ದ ಕೆಲವು ಮಂದಿ ಬಾಲಕರು ಉಪಾಧ್ಯಾಯರು ಹೇಳುವುದನ್ನು ಚೆನ್ನಾಗಿ ಕೇಳದೆ ಬರೆಯಲು ಆ ರಂಭಿಸುವರು ಇದರಿಂದ ಅಕ್ಷರ ವ್ಯತ್ಯಾಸ, ಹ್ರಸ್ವ ದೀರ್ಘಗಳ ಭೇದಗಳು ಉಂಟಾಗು ವುವು. ಅ, ಇ, ಉ, ಎಕಾರಗಳಿಗೆ ಬದಲಾಗಿ, ಹ, ಹಿ, ಹುಕಾರಗಳನ್ನೂ, ಇವುಗಳು ಇರುವ ಸ್ಥಳಗಳಲ್ಲಿ ತಪ್ಪದೆ ಅವುಗಳನ್ನೂ ಬರೆದಿಡುವರು. ಅಲ್ಪಪ್ರಾಣ ಮಹಾಪ್ರಾ ಣಗಳ ಭೇದವರಿಯದೆ ತಪ್ಪುಮಾಡುವರು. ಶ, ಷಕಾರಗಳಿರುವ ಸ್ಥಳದಲ್ಲಿ ಸಕಾರಗಳೇ

ಸಂಪತ್ತಿನ ಶಾಸ್ತ್ರ.

ಜನಸಂಘಾತಗಳ ಪರಸ್ಪರಾವೇಕ್ಷೆಯು.

ಒಂದು ದೇಶದಲ್ಲಿ ವಾಸವಮಾಡುವ ಜನರು ಪರಸ್ಪರಾಪೇಕ್ಷೆಯುಳ್ಳವರಾಗಿರುವರು. ಒಬ್ಬೊಬ್ಬರೂ ಮತ್ತೊಬ್ಬರ ಸಹಾಯವನ್ನು ಪಡದೇ ಜೀವಿಸುವರು. ಸ್ವಲ್ಪ ಆಲೋಚಿಸಿದಲ್ಲಿ ನಮ್ಮ ಗಳ ಸುಖದುಃಖಗಳಿಗೆ ಎಷ್ಟು ಇತರರು ಕಾರಣಭೂತರಾಗಿರುವರೆಂಬುದೂ ವ್ಯಕ್ತಗೊಳ್ಳುವುದು. ನಾವು ಇತರರ ಸಹಾಯ ಕಿಂಚಿತ್ತೂ ಅಪೇಕ್ಷಿಸದೆ ಜೀವಿಸಬೇಕೆಂದು ಸಂಕಲ್ಪವಮಾಡಿಕೊಂಡು, ಹಾಗೆಯೆ ನಡೆಯುವುದಕ್ಕೆ ಯತ್ನಿಸಿದರೆ ಮೂರು ದಿವಸ ಕೂಡ ನಡೆಯುವಂತಿರದು. ನಾವು ಹೊದೆಯುತಕ್ಕ ಬಟ್ಟೆಯನ್ನೇ ನಿದರ್ಶನವಾಗಿ ತೆಗೆದುಕೊಳ್ಳೋಣ. ಅದು ನಮ್ಮ ಮಾನ ಸಂರಕ್ಷಣೆಗಾಗಿಯೂ, ಚಳಿಗೆ ಹೊದ್ದಿಕೆಯಾಗಿಯೂ ಉಪಯೋಗಿಸಲ್ಪಟ್ಟು ನಮ್ಮ ಮೈಯನ್ನು ಉಲ್ಲಾಸವಾಗಿ ಅಲಂಕರಿಸುವುದಕ್ಕೆ ಮುಂದೆ ಎಷ್ಟು ಮಂದಿ ಕೆಲಸಗಾರರ ಕೈಗೆ ಈಡಾಗಿರಬೇಕು ಆದಿಯಲ್ಲಿ ಹತ್ತಿಯ ಬೀಜವನ್ನು ಬಿತ್ತಿ ಕಾಲವನ್ನು ಅರಿತು ಬೆಳೆದ ರೈತಾಂಬಗಾರನನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ತಿನ್ನವಲ್ಲಿ, ಬಳ್ಳಾರಿ, ಕಡಪೆ, ಕೊಯಿಮತ್ತೂರು, ಸೀಮೆಯಲ್ಲಿ ಕೆಲಸಮಾಡುವ ಕೌಂಡರು, ಗೌಡರು ಬಡಗರು, ಕಷ್ಟಪಟ್ಟು ಹತ್ತಿಯನ್ನು ಬಿತ್ತಿ ಕಾವಲಿದ್ದು, ಅದು ಬಿರಿಯುವ ಕಾಲದಲ್ಲಿ ತಮ್ಮ ಮಕ್ಕಳು ಮರಿಯೊಡನೆ ಬಿರಿದ ಹತ್ತಿಗಳನ್ನು ಎತ್ತುವರು. ತರುವಾಯ ಹತ್ತಿಯು ಈ ದೇಶದಲ್ಲೂ ಇತರ ದೇಶಗಳಲ್ಲೂ ಇರುವ ಕಾರಖಾನ್ಗೆಗೋಸ್ಕರ, ಸಂಚಕಾರಕೊಟ್ಟು ಕಾದಿರುವ ಚಿಲ್ಲರೆ ವ್ಯಾಪಾರಿಗಳ ಕೈಸೇರಿ ಬಂಡಿಬಂಡಿಯಾಗಿ ಪಟ್ಟಣಗಳಿಗೆ ತೆಗೆದುಕೊಂಡು ಹೋಗಿ, ಅಲ್ಲಿ ರಾಟೆಗೆ ಸಿಕ್ಕಿ, ಹತ್ತಿಯು ಬೇರೆ ಬೀಜ ಬೇರೆಯಾಗಿ ಮಾಡಲ್ಪಟ್ಟು, ಗಟ್ಟಿಯಾದ ಮೂಟೆ ಮೂಟೆಗಳಾಗಿ ಕಟ್ಟಲ್ಪಟ್ಟು ನಾನಾದೇಶಗಳಿಗೆ ಅದು ಕಳುಹಿಸಲ್ಪಡುವುದು. ನಂತರ ಇತರ ಯಂತ್ರಗಳಿಗೆ ಸಿಕ್ಕಿ ವಿಧವಿಧವಾದ ಗಟ್ಟಿಯಾದ ನೂಲಾಗಿ ಎಳೆಯಲ್ಪಟ್ಟು ಸ್ಥಳಾಂತರಗಳನ್ನು ಸೇರುವುದು. ಅಲ್ಲಿ ಈ ನೂಲುಗಳಿಗೆ ಬಣ್ಣವನ್ನು ಕಟ್ಟಿ, ಅನೇಕ ವಿಧವಾದ ಬಟ್ಟೆಯಾಗಿ ನೆಯಲ್ಪಡುವುದು. ಈ ರೀತಿಯಲ್ಲಿ ಈ ಬಟ್ಟೆಯಾಗಬೇಕಾದರೂ ಎಷ್ಟು ಕೆಲಸವಾಗಬೇಕಾಗಿ

ಉಚ್ಚರಿಸಿ, ಬಾಲಕರಿಂದ ಬರೆಯಿಸಿ, ಕ್ಲುಪ್ತಕಾಲದಲ್ಲಿ ಹೇಳತಕ್ಕ ಭಾಗವನ್ನು ಪೂರೈಸಿ, ನಂತರ ಬಾಲಕರು ಮಾಡಿದ ತಪ್ಪನ್ನು ಶೋಧಿಸಿ, ಅದನ್ನು ಬಾಲಕರಿಗೆ ತಿಳಿಸಬೇಕು ಹೀಗೆ ಮಾಡುವುದರಲ್ಲಿ ತುಂಬಾಪ್ರಯೋಜನ ವುಂಟು.

ಗ್ರಂಥವಿಮರ್ಶೆ.

ನಿರ್ಭಾಗ್ಯಮುರಾದ್, ಎಂಬ ಒಂದು ಹೊಸದಾದ ಕಥೆಯು, ಪ್ರಸಿದ್ಧಳಾದ ಎಡ್ಜ್‌ವರ್ತ್ ಎಂಬುವಳು ಬರೆದಿರುವ, ಅನೇಕ ಜನಗಳಿಗೆ ಸಮ್ಮತವಾದ ಕಥೆಗಳಲ್ಲಿ ಒಂದರ ಸಾರಾಂಶವು. ಇದರಲ್ಲಿ ನಿರ್ಭಾಗ್ಯಮುರಾದ್ ಎಂಬುವನ ಚರಿತ್ರೆಯನ್ನೇ ಮುಖ್ಯವಾಗಿ ಹೇಳಿರುವದರಿಂದ ಈ ಗ್ರಂಥಕ್ಕೂ ನಿರ್ಭಾಗ್ಯಮುರಾದ್ ಎಂಬ ಹೆಸರನ್ನೇ ಇಟ್ಟಿರುವದು. ಇದನ್ನು ಮೈಸೂರು ಶ್ರೀಮನ್ಮಹಾರಾಜರವರ ಕಾಲೆಜ್ ಅಸಿಸ್ಟೆಂಟ್ ವಾಸ್ತರಾದ ಮು॥ ರಾ॥ ಬಿ ಸುಬ್ರಾವ್, ಬಿ. ಎ. ಯವರು ಕನ್ನಡಿಗರಿಗೆ ತಿಳಿಯುವಂತೆ ಸುಲಭಶೈಲಿಯಿಂದ ಕರ್ಣಾಟಕಭಾಷೆಯಲ್ಲಿ ಬರೆದು, ಎಲ್ಲರಿಗೂ ಓದುವದಕ್ಕನುಕೂಲವಾಗಿ, ಮೈಸೂರು ಗ್ಯಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರಸ್ಸಿನಲ್ಲಿ ಒಳ್ಳೇ ಕಾಗದದಲ್ಲಿ ಚಿಕ್ಕದಾಗಿ ಚನ್ನಾಗಿ ಅಚ್ಚು ಮಾಡಿಸಿ ಒಂದು ಪುಸ್ತಕವನ್ನು ದಯವಿಟ್ಟು ನನ್ನಲ್ಲಿ ಕಳುಹಿಸಿಕೊಟ್ಟರು. ಇದನ್ನು ನಾನು ಆಮೂಲಾಗ್ರವಾಗಿ ಓದಿನೋಡಿದೆನು. ಇದು ವಾಚಕರಿಗೆ ನಿರ್ಭಾಗ್ಯಮುರಾದನ ವೃತ್ತಾಂತದಿಂದ ಎಲ್ಲಕ್ಕೂ ಅದೃಷ್ಟವೇ ಮುಖ್ಯಕಾರಣವೆಂದು ಯಾವಪ್ರಯತ್ನವನ್ನೂ ಮಾಡದೆ ಸುಮ್ಮನಿರಬಾರದೆಂಬ ಅಂಶವನ್ನೂ, ಇವನ ತಮ್ಮ ಶ್ರೀಮಂತಸಾಲಾದೀನನ ವೃತ್ತಾಂತದಿಂದ, ಎಲ್ಲಕ್ಕೂ ವಿವೇಕವೇ ಕಾರಣನಾದುದರಿಂದ ಅದೃಷ್ಟವನ್ನು ನಂಬದೆ ವಿವೇಕದಿಂದ ಕಾರ್ಯ ಪ್ರಾರಂಭಮಾಡಬೇಕೆಂಬ ಅಂಶವನ್ನೂ ಬೋಧಿಸುವದು. ಇದರಿಂದ ಪುರುಷಪ್ರಯತ್ನಕ್ಕೂ ಅದೃಷ್ಟಕ್ಕೂ ಇರುವ ತಾರತಮ್ಯವು ಚೆನ್ನಾಗಿ ತಿಳಿಯುವದು. ಈ ಗ್ರಂಥವು ನಾಲ್ಕು ಅಧ್ಯಾಯಗಳಿಂದ ಕೂಡಿದ್ದಾಗಿರುವದು. ಓದುವದಕ್ಕೆ ಬಹಳ ಚನ್ನುತ್ತಾರವಾಗಿರುವದು. ಇನ್ನು ಓದಿರದ ಎಲ್ಲಾ ಸೋದರಿಗಳಿಗೂ ಕಾರ್ಯದಲ್ಲಿ

ಕಾಣಬರುವುವು. ಎಕಾರಕ್ಕೆ ಬದಲಾಗಿ ಯಕಾರವೂ, ಇಕಾರವಿರುವ ಸ್ಥಳದಲ್ಲಿ ಯಿ ಕಾರವೂ ಬರೆಯಲ್ಪಡುವುದು. ಒತ್ತುಗಳನ್ನು ಕೊಡುವುದರಲ್ಲಿಯೂ, ಕವರ್ಗ ಚವರ್ಗ ಗಳ ಅನುನಾಸಿಕವನ್ನು ಬರೆಯುವುದರಲ್ಲಿಯೂ, ಅನುಸ್ವಾರಗಳನ್ನು ಬರೆಯುವ ಸ್ಥಳ ದಲ್ಲಿ ಅನುಸ್ವರವನ್ನು ಮತ್ತು ಪಂಚಮಾಕ್ಷರದ ದ್ವಿತ್ವವನ್ನು ಇಡುವುದರಲ್ಲಿಯೂ ಬಾಲಕರು ತಪ್ಪಿಹೋಗುವರು. ಸಂಯುಕ್ತಾಕ್ಷರಗಳು ಕ್ಲಿಷ್ಟವಾಗಿದ್ದರೆ ತಪ್ಪಾಗು ವುದು ಹೆಚ್ಚು.

ಬಾಲಕರು ಮಾಡುವ ಇಂಥಾ ತಪ್ಪುಗಳನ್ನು ಹೋಗಲಾಡಿಸುವುದಕ್ಕಾಗಿ ಅವಶ್ಯಕವಾಗಿ ಮಾಡುವ ತಿದ್ದುಪಾಟುಗಳು —

೧. ಆದಿಯಲ್ಲಿ ಬಾಲಕರಿಗೆ ಕಾಗುಣಿತವನ್ನು ಚೆನ್ನಾಗಿ ಕಲಿಸುವುದು.

೨ ಪದಗಳ ಉಚ್ಚಾರಣೆಯನ್ನು ಬಾಲಕರಿಂದ ಸ್ಪಷ್ಟವಾಗಿ ಮಾಡಿಸುವುದು.

೩ ಹ, ಹಿ, ಹುಕಾರಗಳು ಉಳ್ಳ ಕೆಲವು ಪದಗಳನ್ನೂ ಅ, ಇ, ಉಕಾರಗ ಳುಳ್ಳ ಕೆಲವು ಪದಗಳನ್ನು ಬರೆಯಿಸಿ, ಪರಸ್ಪರ ಇರತಕ್ಕ ಭೇದವನ್ನು ವ್ಯಕ್ತಪಡಿಸಿ, ಸಂದೇಹಕ್ಕೆ ಅಸ್ಪದವಿಲ್ಲದಂತೆ ಪದೇಪದೇ ಬಾಲಕರಿಗೆ ಹೇಳಿ ಮುಂದಟ್ಟು ಮಾಡಿಸು ವುದು.

೪. ನಿತ್ಯವೂ ಓದಿದ ಪಾಠಗಳನ್ನು ಬರೆಯಿಸಿ, ಬರೆದುದರಲ್ಲಿರತಕ್ಕ ತಪ್ಪುಗ ಳನ್ನು ತಿದ್ದಿ, ಹುಡುಗರು ಅಂಥಾ ತಪ್ಪು ಮಾಡುವುದಕ್ಕೆ ಉಂಟಾದ ಕಾರಣವನ್ನು ಉಪಾಧ್ಯಾಯರು ಊಹಿಸಿ, ಪುನಃ ಅಂಥಾ ತಪ್ಪು ಮಾಡದಂತೆ ಹುಡುಗರಿಗೆ ಬೋಧಿಸ ಬೇಕು. ಸಾಧಾರಣವಾಗಿ ಪಾಠಶಾಲೆಗಳಲ್ಲಿ ಉಕ್ತಲೇಖನಕ್ಕೆ ಉಪಾಧ್ಯಾಯರು ಸಾ ಕಾದಷ್ಟು ಗಮನ ಕೊಡುವುದಿಲ್ಲ. ಬಾಲಕರು ಕೇಳಿದಷ್ಟು ಅವೃತ್ತಿಯೇ ಆಗಲಿ, ಒಂದೇ ಆವೃತ್ತಿಯಾಗಲಿ ಹೇಳಿ ಬರೆಯಿಸಿ, ಅವುಗಳನ್ನು ತಿದ್ದುವಾಗ ತಪ್ಪಿದ್ದ ಅಕ್ಷರ ಗಳಮೇಲೆ ಒಂದೊಂದು ಗೀಟು ಎಳೆದುಕೊಟ್ಟು, ಒಂದೊಂದು ತಪ್ಪಿಗೆ ಒಂದೊಂದು ಏಟು ಕೊಟ್ಟರೆ ಉಕ್ತಲೇಖನವು ಉಪಾಧ್ಯಾಯರು ಕಲಿಸಿಕೊಟ್ಟಂತೆ ಆಗಲಿಲ್ಲ. ಉಪಾ ಧ್ಯಾಯರು ಹೇಳುವುದಕ್ಕೆ ಮುಂದೆಯೇ ಬಾಲಕರ ಗಮನವನ್ನು ಆಕರ್ಷಿಸಿ, ಬರೆಯ ತಕ್ಕದ್ದನ್ನು ಒಂದಾವರ್ತಿ ಬಾಲಕರೆಲ್ಲರೂ ಚೆನ್ನಾಗಿ ಕೇಳುವಂತೆ ಓದಿ, ನಂತರ ಅವರು ಸಿದ್ಧರಾದಮೇಲೆ ಒಂದೇಆವರ್ತಿ ಅಥವಾ ಎರಡಾವರ್ತಿ ಸ್ಪಷ್ಟವಾಗಿ ಹೇಳಿ, ಬರೆಯ ಲಿಕ್ಕೆ ಸಾಕಾದಷ್ಟು ವಿರಾಮಕೊಟ್ಟು, ಉಪಾಧ್ಯಾಯರು ಹೇಳತಕ್ಕದ್ದನ್ನು ಚೆನಾಗ್ಗಿ

ರುವುಲಿನಲ್ಲಿ ಮುಚ್ಚಿಟ್ಟದ್ದಕ್ಕೆ ಆ ರುಮಾಲು ಸುಲ್ತಾನಂದಾಡುದರಿಂದ ಇವನ ತಲೆಯನ್ನು ಕತ್ತರಿಸಬೇಕೆಂದು ಅಪ್ಪಣೆಮಾಡಲು ಕಟುಗರುಎಳೆದುಕೊಂಡು ಹೋದಂತೆಯೂ ಕಂಡಮಾತ್ರಕ್ಕೆ ತಂದೆಯೂ ದೇಶಭ್ರಷ್ಟನಾಗಿ ೩-೪ ವರುಷಗಳವರೆಗೂ ಊರಿಗೆ ಬಾರದೆ ಅನಂತರ ಬಂದು ನೋಡುವಲ್ಲಿ ಸ್ವಪ್ನದಲ್ಲಿ ಕಂಡಂತೆ ನನಗೆ ಯಾವ ವಿಕಾರವೂ ಇಲ್ಲದ್ದನ್ನು ನೋಡಿ ಮನಸ್ಸನ್ನು ಸಮಾಧಾನಕ್ಕೆ ತಂದುಕೊಂಡು ಪೂರ್ವದಂತೆ ಸಂಸಾರದಲ್ಲಿರಲು, ನನ್ನ ತಮ್ಮ ಶ್ರೀಮಂತಸಾಲಾದೀನನು ಹುಟ್ಟಿದನು. ಅವನು ಹೂಟ್ಟದಕೂಡಲೆ ನನ್ನತಂದೆಗೆ ಕೈಹಾಕಿದ ಕೆಲಸವೆಲ್ಲಾ ಕೈಗೂಡಿ ದೊಡ್ಡ ಸಾಹುಕಾರನಾಗಿ ಎಲ್ಲರಿಗೂ ಬೇಕಾದವನಾಗಿದ್ದನು. ಹೀಗೆ ಮಹಾ ವೈಭವದಲ್ಲಿದ್ದರೂ ದುರದೃಷ್ಟದಿಂದ ನನ್ನ ತಂದೆಗೂ ನನ್ನಲ್ಲಿ ವಿಶ್ವಾಸವಿರಲಿಲ್ಲ. ಮತ್ಯಾರಿಗೂ ಇರಲಿಲ್ಲ. ಎಲ್ಲರೂ ನನ್ನನ್ನು ನಿಭಾರ್ಗ್ಯಮುರಾದನೆಂದೇ ಕೂಗುತ್ತಿದ್ದರು. ಅದು ಹ್ಯಾಗಾದರೂ ಇರಲಿ. ತಂದೆಯು ಸಾಯುವಾಗ ಅವನು ಆಸ್ತಿಯನ್ನೆಲ್ಲಾ ಮಿತಿಮೀರಿ ವೆಚ್ಚಮಾಡಿ ಕಳೆದು ಎರಡು ಚೀಣಾತಟ್ಟೆಯನ್ನು ಮಾತ್ರ ಇಟ್ಟುಕೊಂಡಿದ್ದನು. ಅವೆರಡನ್ನೂ ನನ್ನ ತಮ್ಮನಿಗೆ ಕೊಟ್ಟು ಸತ್ತನಿ ಹೊರ್ತು ನನಗೆ ಒಂದಾದರೂ ಕೊಡಲಿಲ್ಲ ನನ್ನನ್ನು ಮಾತನಾಡಿಸಲೂ ಇಲ್ಲ ನನ್ನ ಜೀವನದ ವಿಷಯವಾಗಿ ನನ್ನ ತಮ್ಮನಿಗೂ ಏನೂ ಹೇಳಲಿಲ್ಲ. ಇದಕ್ಕೆಲ್ಲಾ ನನ್ನ ದುರದೃಷ್ಟವೇ ಕಾರಣವು. ಹೀಗಿದ್ದರೂ ನನ್ನ ತಮ್ಮನು ಒಳ್ಳೆಯವನಾದುದರಿಂದ ಪ್ರೇಮದಿಂದ ರಕ್ಷಿಸುತ್ತಿದ್ದನು. ಮತ್ತು ಯಾವುದಾದರೂ ಕೆಲಸಕ್ಕೆ ನನಗೆ ಪ್ರೋತ್ಸಾಹಗೊಳಿಸುತ್ತಿದ್ದನು. ಆದರೂ ನಾನು ಅದೃಷ್ಟವೇ ಎಲ್ಲಕ್ಕೂ ಕಾರಣವೆಂದು ಎಲ್ಲರೂ ಹೇಳುವದನ್ನು ಕೇಳಿಕೇಳಿ ಮನಸ್ಸಿನಲ್ಲಿಯೂ ಹಾಗೆಯೇ ತಿಳಿದುಕೊಂಡು ಯಾವಕೆಲಸಕ್ಕೂ ಪ್ರವರ್ತಿಸದೆ ಉದಾಸೀನನಾಗಿದ್ದೆನು. ನನ್ನ ತಮ್ಮನು ಮಾತ್ರ ಸ್ವಲ್ಪವೂ ಬೇಸರಿಕೆ ಇಲ್ಲದೆ ಕಾಲೋಚಿತವಾದ ಕಾರ್ಯಗಳನ್ನು ಮಾಡಿ ದೇಶದೇಶದಲ್ಲಿ ಪ್ರಖ್ಯಾತಿಯನ್ನು ಪಡೆದನು. ನಾನು ದುರ್ಬುದ್ಧಿಯಿಂದ ತಮ್ಮನ ಮನೆಯನ್ನು ಬಿಟ್ಟು ಯಾರಿಗೂ ಹೇಳದೆ ಹೊರಟು ನೋಡಬಾರದ ದೇಶವನ್ನೆಲ್ಲಾ ನೋಡಿ ಪಡಬಾರದ ಕಷ್ಟವನ್ನೆಲ್ಲಾ ಪಟ್ಟು ಕೊನೆಗೆ ನನ್ನ ತಮ್ಮನನ್ನು ನೋಡುವದಕ್ಕಾಗಿ ಬಂದೆನು ನನ್ನ ತಮ್ಮನು ಸರಳಹೃದಯನಾದುದರಿಂದ ತಾನು ದೊಡ್ಡಪದವಿಯಲ್ಲಿದ್ದರೂ, ನಾನು ಇಷ್ಟು ದುರವಸ್ಥೆಯಲ್ಲಿದ್ದರೂ ಭ್ರಾತೃವಾತ್ಸಲ್ಯದಿಂದ ಅದರಿಸಿ ತಾನು ನನಗಾಗಿ ಇಟ್ಟಿದ್ದ ಚೀಣಾತಟ್ಟೆಯನ್ನು

ಚಾಕಚಕ್ಯವೆನ್ನುಂಟುಮಾಡದಿರದು. ಈ ಪುಸ್ತಕವು ಮೈಸೂರು ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ನಲ್ಲಿ ಬೆಲೆಗೆ ಸಿಕ್ಕುವುದು. ಇದರ ಕ್ರಯ ೦-೧೦-೦ ಆಣೆ.

ಗ್ರಂಥದ ಸಾರಾಂಶ.

ಪೂರ್ವಕಾಲದ ಪದ್ಧತಿಯಂತೆ ತುರ್ಕಿದೇಶದ ರಾಜನು ರಾತ್ರಿವೇಳೆಯಲ್ಲಿ ಮಂತ್ರಿಯೊಡನೆ ಗೂಢವೇಷದಿಂದ ಪ್ರಜೆಗಳ ವೃತ್ತಿಯನ್ನು ತಿಳಿಯುವದಕ್ಕಾಗಿ ಸಂಚರಿಸುತ್ತಿರಲು, ಒಂದಾನೊಂದು ದಿವಸ, ತಾನುಪೂರ್ವದಲ್ಲಿ ಸೌರುಷವು ಹೆಚ್ಚೋ ಅದೃಷ್ಟವು ಹೆಚ್ಚೋ, ಎಂದು ಸಮಾಜದಲ್ಲಿ ಚರ್ಚೆ ನಡೆದು, ಎಲ್ಲಕ್ಕೂ ಅದೃಷ್ಟವೇ ಮುಖ್ಯವೆಂದು ಸಿದ್ಧಾಂತಮಾಡಿಕೊಂಡಿದ್ದದ್ದು ರಾಜನಿಗೆ ಜ್ಞಾಪಕಕ್ಕೆ ಬಂದು, ಹತ್ತಿರದಲ್ಲಿದ್ದ ಮಂತ್ರಿಯಲ್ಲಿ ಪ್ರಸ್ತಾಪಿಸಿದನು. ಮಂತ್ರಿಯು ರಾಜನ ಸಿದ್ಧಾಂತವನ್ನು ಕೇಳಿ, ಶಾಸ್ತ್ರದೃಷ್ಟಿಯಿಂದ ಪುರುಷ ಪ್ರಯತ್ನವೇ ಕಾರ್ಯಸಿದ್ಧಿಗೆ ಮುಖ್ಯಕಾರಣವೆಂಬುದನ್ನು ಅನೇಕ ದೃಷ್ಟಾಂತಗಳನ್ನು ಕೊಟ್ಟು ಸಮರ್ಥಿಸಿದರೂ ಒಪ್ಪದಿರಲು, ಅಯ್ಯ ! ನನ್ನವಾತಿನಲ್ಲಿ ತಮಗೆ ನಂಬುಗೆ ಇಲ್ಲದಿದ್ದರೆ ಈ ವೂರಲ್ಲೇ ತಮಗೆ ಒಂದು ದೃಷ್ಟಾಂತವನ್ನು ತೋರಿಸುವೆನು. ತಾವು ಪ್ರತ್ಯಕ್ಷೀಕರಿಸಿ ಮನಸ್ಸು ಬಂದಂತೆ ನಿಷ್ಕರ್ಷಿಸಿಕೊಳ್ಳಬಹುದು; ಎಂದು ಹೇಳಿ ಎಲ್ಲೆಲ್ಲೂ, ನಿರ್ಭಾಗ್ಯಮುರಾದನು ಅದೃಷ್ಟ ಹೀನನೆಂತಲೂ, ಶ್ರೀಮಂತಸಾಲಾದೀನನು ಅದೃಷ್ಟಶಾಲಿಯೆಂತಲೂ, ಪ್ರಸಿದ್ಧಿಯನ್ನು ಪಡೆದಿರುವ ಅಣ್ಣತಮ್ಮಂದಿರನ್ನು ತೋರಿದನು.

ರಾಜನು ಇದನ್ನು ಪ್ರತ್ಯಕ್ಷಿಸಿ ನೋಡಬೇಕೆಂಬ ಕುತೂಹಲದಿಂದ ನಿರ್ಭಾಗ್ಯ ಮುರಾದನಿದ್ದೆಡೆಗೆ ಹೋಗಲು ಅವನು ಒಂದು ಚೀಣಾ ತಟ್ಟೆಯ ಚೂರುಗಳನ್ನು ಮುಂದಿಟ್ಟುಕೊಂಡು ಹಣೆಯನ್ನು ಬಡಿದು ಕೊಳ್ಳುತ್ತ, ಗಟ್ಟಿಯಾಗಿ ಅಳುತ್ತಿದ್ದನು. ಅದನ್ನು ನೋಡಿ ಕನಿಕರದಿಂದ ದುಃಖಕಾರಣವನ್ನು ಪ್ರಶ್ನೆಮಾಡಲು ಮುರಾದನು ತನ್ನ ದುಃಖವನ್ನು ತಾನೇ ಸಮಾಧಾನಕ್ಕೆ ತಂದುಕೊಂಡು, ರಾಜನಿಗೆರಗಿ, ಸ್ವಾಮಿ ! ಮಹನೀಯರೆ ! ,—ನಾನು ಮಹಾಪಾಪಿ, ಅದೃಷ್ಟಶಾಲಿಯೂ ಅಲ್ಲ, ನಾನು ಜನಿಸುವದಕ್ಕೆ ಮುಂಚಿತನಾಗಿಯೇ ನನ್ನತಾಯಿಯು ಸ್ವಪ್ನದಲ್ಲಿ, ನಾಯಿಯ ತಲೆಯೂ, ಸಿಂಹದ ಬಾಲವೂ, ಉಳ್ಳ ಒಂದು ವಿಕಾರಸ್ವರೂಪನಾದ ಶಿಶುವಾಗಿ ಕಾಣಿಸಿಕೊಂಡಂತೆಯೂ, ನನ್ನ ತಂದೆ ಈ ವಿಕಾರವನ್ನು ಮುಚ್ಚುವದಕ್ಕಾಗಿ ಸಮಾಪದಲ್ಲಿದ್ದ ಒಂದು

ಪ್ರೀತಿಯನ್ನು ತೋರಿಸುತ್ತ ಸುಖದಿಂದಿದ್ದನು.

ಕುಂಡಲಗಿರ್ಯಾಚಾರ್ಯ.

ಕ ಥೆ.

ಕಾಶೀಪಟ್ಟಣದಲ್ಲಿ ಒಂದು ದೊಡ್ಡ ಪಾಠಶಾಲೆ ಇತ್ತು. ಆ ಪಾಠಶಾಲೆಯಲ್ಲಿ ಓದಲಿಕ್ಕೆ ದೂರದೇಶಗಳಿಂದ ಹುಡುಗರು ಬರುತಿದ್ದರು. ಇವರುಗಳಲ್ಲಿ ಕೆಲವರು ಉಪಾಧ್ಯಾಯರ ಮನೆಯಲ್ಲಿಯೇ ಅವರ ಮನಸೊಪ್ಪುವಂತೆ ಇದ್ದುಕೊಂಡು ವಿದ್ಯೆಯನ್ನು ಕಲಿಯುತಿದ್ದರು. ಅನೇಕಮಂದಿ ಹಣಗಾರರು, ತಮ್ಮ ಮಕ್ಕಳನ್ನು ಕಾಶಿಗೆ ಕರೆದು ಕೊಂಡು ಬಂದು ಅವರಿಗೆ ವಿದ್ಯೆಯನ್ನು ಹೇಳಿಸಲು ಉಪಾಧ್ಯಾಯರಲ್ಲಿಯೇ ಬಿಡುತಿದ್ದರು.

ಒಬ್ಬ ಉಪಾಧ್ಯಾಯರಲ್ಲಿ ಒಬ್ಬ ಸಾಹುಕಾರನ ಮಗನಿದ್ದನು. ಅವನು ಬಹಳ ಚಟವಟಿಕೆಯುಳ್ಳವನಾಗಿಯೂ, ಸ್ವಲ್ಪ ತುಂಟನಾಗಿಯೂ ಇದ್ದನು. ಅವನನ್ನು ಒಳ್ಳೇ ಮಾರ್ಗಕ್ಕೆ ತರಬೇಕೆಂದು ಉಪಾಧ್ಯಾಯನು ಜತೆಯಲ್ಲಿಯೇ ಅವನನ್ನು ಕರೆದು ಕೊಂಡು ಹೋಗುತ್ತ, ಸಮಯ ಬಂದಹಾಗೆಲ್ಲ ವಿವೇಕವನ್ನು ಕಲಿಸುತ್ತಾ ಇದ್ದನು.

ಒಂದುದಿನ ಸಾಯಂಕಾಲ ಆ ಹುಡುಗನೊಡನೆ ಗಂಗಾನದಡದಮೇಲೆ ಹೋಗುತಲಿರುವಾಗ ದಾರಿಯಲ್ಲಿ ಒಂದು ಮರದ ಕೆಳಗೆ ಒಂದು ಜತೆ ಜೋಡು, ಮೇಲುಗಡೆ ಕೊಂಬೆಯುಮೇಲೆ ಒಂದು ಕಂಬಳಿ ಇದ್ದುದನ್ನು ಈ ಹುಡುಗನು ನೋಡಿದನು. ಆಗ ಹುಡುಗನು ಉಪಾಧ್ಯಾಯರಕಡೆ ತಿರುಗಿ, ಈ ಜೋಡು ಯಾರೋ ರೈತನದು ಇರಬಹುದು. ಅವನು ಇವನ್ನು ಇಲ್ಲಿ ಬಿಟ್ಟು ಗದ್ದೆಯಮೇಲೆ ಎಲ್ಲೋ ಹೋಗಿರಬಹುದು. ನಾವು ಇದನ್ನು ಈ ಮಗ್ಗಲ ಬೇಲಿ ಹಿಂದೆ ಎಲ್ಲಾದರೂ ಬಚ್ಚಿಟ್ಟು, ಅವನು ಬಂದು, ಜೋಡು ಸಿಕ್ಕದೆ ಪರದಾಡುವಗನ್ನು ನೋಡೋಣ, ಎಂದನು. ಅದಕ್ಕೆ ಉಪಾಧ್ಯಾಯನು ಬಡವರಿಗೆ ಹಿಂಸೆಗೊಟ್ಟು ನಾವು ಸಂತೋಷಪಡಬಾರದು. ನಿನ್ನಲ್ಲಿ ಹಣವಿದೆ,

ನನ್ನ ಕೋರಿಕೆಯಂತೆ ಕೊಟ್ಟು ನನ್ನ ಜೀವನಕ್ಕಾಗಿ ತನ್ನ ಅಂಗಡಿಯಲ್ಲಿ ಒಂದು ಅಂಗಡಿಯನ್ನೂ ನನ್ನ ವಶಕ್ಕೆ ಬಿಟ್ಟು ಸಹಾಯಕ್ಕಾಗಿ ಬಹು ಬುದ್ಧಿಶಾಲಿಯಾದ ಒಬ್ಬನನ್ನೂ ನಿಯಮಿಸಿ ತಾನೂ ಆಗಾಗ್ಗೆ ಬಹು ಜಾಗರೂಕನಾಗಿ ನೋಡಿಕೊಳ್ಳುತ್ತಿದ್ದನು.

ಹೀಗಿರುವಾಗ ನನ್ನ ತಮ್ಮನು ತನ್ನಲ್ಲಿದ್ದ ತಟ್ಟೆಯನ್ನು ಸುಲ್ತಾನರ ಮನೆಯಲ್ಲಿದ್ದ ಒಬ್ಬ ಹೆಂಗಸಿಗೆ ಹತ್ತುಸಾವಿರ ವರಹಕ್ಕೆ ವಿಕ್ರಯಮಾಡಿದನು. ಅವಳು ಈ ನನ್ನ ತಟ್ಟೆಯನ್ನೂ ನೋಡಿದ್ದಕಾರಣ, ಇದಕ್ಕೆ ಜತೆಯಾಗಿ ಅದನ್ನೂ ಕೊಡಿಸೆಂದು ನನ್ನ ತಮ್ಮನನ್ನು ಬಲಾತ್ಕರಿಸಿ ಕೇಳಿದಳು. ಅದಕ್ಕೆ ನನ್ನ ತಮ್ಮನು ನನಗೆ ಹೇಳಿ ಕಳುಹಿಸಿದನು. ನಾನು ಕೊಡುವದಕ್ಕೆ ಮನಸ್ಸಿಲ್ಲದಿದ್ದರೂ ತಮ್ಮನಿಗೆ ಕೋಪಬರುವದೋ ಏನೋ ಎಂಬ ಭಯದಿಂದ ನಾನೇ ತೆಗೆದುಕೊಂಡು ಬರುತ್ತೇನೆಂದು ಹೇಳಿ ಕಳುಹಿಸಿ, ಅಟ್ಟದಮೇಲಿದ್ದ ಆ ತಟ್ಟೆಯನ್ನು ತೆಗೆದು ದೂಳು ಹೊಡೆದು ಸಂದಿಸಂದಿಯಲ್ಲಿನ್ನ ಕೊಳೆಯನ್ನೆಲ್ಲಾ ತೊಳೆಯಬೇಕೆಂದು ಬಿಸಿನೀರನ್ನು ಹಾಕಿದೆನು. ಒಂದು ಕ್ಷಣಮಾತ್ರದಲ್ಲಿ ಒಡೆದು ಚೂರುಚೂರಾದವು. ಇದರಿಂದ ನನ್ನ ಅದೃಷ್ಟವೇ ಇಷ್ಟೆಂದು ತೋರುವದು. ಎಂದು ಮುರಾದನು ಹೇಳುವಷ್ಟರೊಳಗೆ, ಸಾಲಾದೀನನು ಅಣ್ಣ ಬರುವನೆಂದು ಬಹಳಹೊತ್ತು ಕಾದಿದ್ದರೂ ಬಾರದಿರಲು ತಾನೇ ಬಂದು ಅಣ್ಣನ ಅವಸ್ಥೆಯನ್ನೂ ವೇಷಧಾರಿಗಳಾದ ಅವರಿಬ್ಬರನ್ನೂ ನೋಡಿ ತಟ್ಟೆಯ ನಾಶದಿಂದ ದುಃಖ ಬಂದರೂ ಅದನ್ನು ತಡೆದು ಅಲ್ಲಿ ಬಿದ್ದಿದ್ದ ತಟ್ಟೆಯ ಚೂರುಗಳನ್ನು ಬಹುಚಮತ್ಕಾರದಿಂದ ಸೇರಿಸಿ ಇದನ್ನು ಪೂರ್ವದಂತೆಯೇ ಮಾಡುವದು ಸುಲಭವೆಂದು ಅಣ್ಣನಿಗೆ ಸಮಾಧಾನಪಡಿಸಲು, ಮುರಾದನು ಸಂತೋಷಪಟ್ಟು ಆ ವೇಷಧಾರಿಗಳ ಕಡೆಗೆ ತಿರಿಗಿ, ಅಯ್ಯಾ ತಮ್ಮನೆ! ಇವರು ನನ್ನ ಕಥಾಶ್ರವಣದಿಂದ ಬಹಳ ಖಿನ್ನರಾಗಿರುವಂತಿದೆ. ಇವರಿಗೆ ನಿನ್ನ ಕಥೆಯನ್ನು ಹೇಳಿ ಸಂತೋಷವನ್ನುಂಟುಮಾಡೆಂದು ಹೇಳಲು, ಸಾಲಾದೀನನು ತನ್ನ ಪೂರ್ವೋತ್ತರವನ್ನೆಲ್ಲಾ ಹೇಳಿ ಈ ನನ್ನ ಐಶ್ವರ್ಯಕ್ಕೆ ನನ್ನ ಯತ್ನವೇ ಕಾರಣವೆಂದು ತನ್ನ ಅನುಭವವನ್ನೆಲ್ಲಾ ತಿಳಿಸಲು, ರಾಜನು ಸಂತೋಷಪಟ್ಟು ತನ್ನ ವೇಷವನ್ನು ತೆಗೆದು ಮಂತ್ರಿಯನ್ನು ನೋಡಿ, ಅಯ್ಯಾ ಮಂತ್ರಿಶ್ರೇಷ್ಠನೇ! ನಾನು ಇದುವರೆಗೂ ತಿಳಿದಿದ್ದದ್ದು ತಪ್ಪು, ಈ ಇಬ್ಬರ ಚರಿತ್ರೆಯು ನಿನ್ನ ಮತವನ್ನೇ ವ್ಯಕ್ತಪಡಿಸುವದು. ವಿವೇಕವೇ ಎಲ್ಲಕ್ಕೂ ಮುಖ್ಯಕಾರಣ, ಎಂದು ಹೇಳಿ ಸಾಲಾದೀನನಲ್ಲಿ

ವಿ

ಎಡಿಟರವರ ನೋಟ್ಸ್.

ಸ್ ೧೯೧೭—೧೮ನೆಯು ಇಸವಿಯು ಮದ್ರಾಸ್ ಆಧಿಪತ್ಯದ ರಾಜ್ಯಭಾರ ಕ್ರಮದ ರಿಪೋರ್ಟಿನಿಂದ ಮದ್ರಾಸ್ ಆಧಿಪತ್ಯದಲ್ಲಿ ಆ ಸಂವತ್ಸರದ ವಿದ್ಯಾಭಿವೃದ್ಧಿಯ ಸ್ಥಿತಿಯು ಅಷ್ಟು ತೃಪ್ತಿಕರವಾಗಿಲ್ಲವೆಂದು ತೋರಿಬರುವುದು. ಪಾಠಶಾಲೆಗಳ ಒಟ್ಟು ಸಂಖ್ಯೆಯು ಹಿಂದಣ ವರ್ಷಕ್ಕಿಂತ ಸ್ವಲ್ಪಮಟ್ಟಿಗೆ ಕಡಿಮೆಯಾಗಿದ್ದರೂ ವಿದ್ಯಾರ್ಥಿಗಳ ಸಂಖ್ಯೆಯು ೨೦೦೦ ಹೆಚ್ಚಾಗಿರುವುದು. ಸರ್ಕಾರದ ಸಹಾಯವಿಶೇಷ ವಿಲ್ಲದೆ ಜನರು ತಾವಾಗಿಯೇ ಇಟ್ಟಿರುವ ಪಾಠಶಾಲೆಗಳು ಹೋದ ವರ್ಷಕ್ಕಿಂತ ೨೦೦ ಹೆಚ್ಚಾಗಿಯೂ ಈ ಪಾಠಶಾಲೆಗಳಲ್ಲಿ ಓದತಕ್ಕ ಬಾಲಕರ ಸಂಖ್ಯೆಯು ನಾಲ್ಕು ಸಾವಿರ ಹೆಚ್ಚಾಗಿಯೂ ಇರುವುದು. ಆ ಸಂವತ್ಸರ ಕ್ಷಾಮವು ಕೆಲಕೆಲಭಾಗಗಳಲ್ಲಿ ತಲೆದೋರಿತ್ತು. ಅದುದರಿಂದ ವಿದ್ಯಾಭಿವೃದ್ಧಿಗೆ ಕುಂದಕ ಉಂಟಾಯಿತೆಂಬುವುದು ಸಮಂಜಸವಾಗಿಲ್ಲನೆಂದು ಮದ್ರಾಸ್ ಸರ್ಕಾರದವರೇ ಸೂಚಿಸಿರುವರು. ಏತಕ್ಕೆಂದರೆ ಕ್ಷಾಮವಿಲ್ಲದ ಭಾಗಗಳಲ್ಲಿಯೂ, ಆ ಸಂವತ್ಸರ ವಿದ್ಯಾಭಿವೃದ್ಧಿಯ ಸ್ಥಿತಿಯು ತೃಪ್ತಿಕರವಾಗಿಲ್ಲ. ಸರ್ಕಾರದ ಪಾಠಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆಗಿಂತಲೂ ಇತರ ಪಾಠಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆಯು ಇಮ್ಮಡಿಯಾಗಿರುವುದು.

***

ಚಿಕ್ಕಚಿಕ್ಕ ಹುಡುಗರನ್ನು ಪರೀಕ್ಷೆಗೆ ಶಿಕ್ಷೆ ಮಾಡುವ ವಿಷಯದಲ್ಲಿ ಈಚೆಗೆ ಮದ್ರಾಸ್‌ಕಡೆ ವಿಶೇಷ ಜರ್ಜೆ ನಡೆಯುತ್ತಿರುವುದೆಂದು ನಮ್ಮ ವಾಚಕರಿಗೆ ತಿಳಿಸಿರುತ್ತೇವಷ್ಟೆ. ಲೋವರ್ ಸೆಕೆಂಡರಿ ಪರೀಕ್ಷೆಗೆ ಕೇವಲ ಚಿಕ್ಕ ವಯಸ್ಸಿನ ಬಾಲಕರು ಓದುವರೆಂತಲೂ, ಇದರಿಂದ ಪ್ರೌಢವಿದ್ಯಾಭ್ಯಾಸಕ್ಕೆ ಶಕ್ತಿ ಕುಂದುವುದೆಂತಲೂ, ಆದ ಕಾರಣ ಲೋವರ್ ಸೆಕೆಂಡರಿ ಪರೀಕ್ಷೆಯನ್ನೇ ತೆಗೆದುಹಾಕಬೇಕೆಂತಲೂ ಅನುಭವಶಾಲಿ

ಅದನ್ನು ಇವನಿಗೆ ಕೊಡೋಣವರಿಂದ ಹೆಚ್ಚಾದ ಸಂತೋಷವನ್ನು ಪಡೆಯಬಹುದು. ಈಗ ಇಲ್ಲಿರುವ ಒಂದು ಜತೆ ಜೋಡಿನಲ್ಲೂ ಒಂದೊಂದು ರೂಪಾಯಿಯನ್ನು ಹಾಕು. ನಾವು ಇಲ್ಲಿಯೇ ಎಲ್ಲಾದರೂ ಬಚ್ಚಿಟ್ಟುಕೊಂಡು, ರೂಪಾಯಿಯನ್ನು ನೋಡಿ ಅವನ ಮುಖವು ಹ್ಯಾಗಾಗುವದೋ ನೋಡೋಣವೆಂದನು. ಆ ಹುಡುಗನು ಹಾಗೆಯೇ ಮಾಡಿ ಉಪಾಧ್ಯಾಯನೊಡನೆ ಬೇಲಿಯ ಹಿಂದುಗಡೆ ಬಚ್ಚಿಟ್ಟುಕೊಂಡನು. ಸ್ವಲ್ಪ ಹೊತ್ತಿನಲ್ಲಿಯೇ ಆ ರೈತನು ಬಂದು, ಕಂಬಳಿಯನ್ನು ಒದರಿ ಹೊದ್ದುಕೊಂಡು, ಜೋಡಿಗೆ ಕಾಲನ್ನು ಹಾಕಿದನು. ಕಾಲಿಗೆ ಏನೋ ಒತ್ತಿದಹಾಗೆ ಆಗಲು, ಒಡನೆಯೇ ಕೈಯಿಂದ ತೆಗೆದು ಮೊಬ್ಬು ಕತ್ತಲೆಯಲ್ಲಿ ಅದನ್ನು ಚೆನ್ನಾಗಿ ನೋಡಿ, ರೂಪಾಯಿ ಎಂದು ತಿಳಿದು ಸಂತೋಷಪಡುತ್ತಾ, ಸುತ್ತುಮುತ್ತಲೂ ನೋಡಿ ಯಾರೂ ಇಲ್ಲದಿರಲು ನಡುವಿಗೆ ಸಿಕ್ಕಿದನು. ಆಮೇಲೆ ಇನ್ನೊಂದು ಜೋಡಿಗೆ ಕಾಲನ್ನು ಹಾಕಲು ಅದರಲ್ಲಿಯೂ ಒಂದು ರೂಪಾಯಿ ಸಿಕ್ಕಲು ಅವನ ಸಂತೋಷವು ಉಕ್ಕಿತು. ಅವನ ಮನಸ್ಸು ಕರಗಿತು. ಒಡನೆಯೇ ಉದ್ದಕ್ಕೆ ನಮಸ್ಕಾರಮಾಡಿ ದೇವರನ್ನು ಕುರಿತು, ಸ್ವಾಮಿ! ಅನ್ನವಿಲ್ಲದೆ ಕಷ್ಟಪಡುತಿರುವ ನನ್ನ ಹೆಂಡತಿ ಮಕ್ಕಳ ಸಂಕಟವನ್ನು ನೋಡಿ ನನಗೆ ಈ ಭಾಗ್ಯವನ್ನು ದೊರೆಯಿಸಿ ಕಾಪಾಡಿದೆಯಲ್ಲಾ, ಸ್ವಾಮಿ! ಅನಾಥರಕ್ಷಕ, ನನಗೆ ಹೀಗೆ ಧರ್ಮವಾಡಿದ ಆ ಮಹರಾಯನನ್ನು ಚೆನ್ನಾಗಿ ಕಾಪಾಡು ಸ್ವಾಮಿ! ಎಂದು ದೇವರನ್ನು ಕೇಳಿಕೊಂಡು ಸಂತೋಷದಿಂದ ಮನೇಕಡೆ ತಿರುಗಿದನು. ಇದೆಲ್ಲವನ್ನೂ ನೋಡುತಿದ್ದ ಆ ಗುರು ಶಿಷ್ಯರು ಬೇಲಿಯಿಂದ ಇತ್ತಲಾಗಿ ಬರಲು, ಶಿಷ್ಯನು, ಗುರುವಿಗೆ ನಮಸ್ಕಾರಮಾಡಿ ಇವತ್ತು ನನಗೆ ತಾವು ಕಲಿಸಿದ ವಿವೇಕವನ್ನು ನಾನು ಎಂದಿಗೂ ಮರೆಯಲಾರೆನು. ಅವನಿಗೆ ನಾನು ಹಿಂಸೆ ಮಾಡಿದ್ದರೆ ಇಂಥಾ ಸಂತೋಷವು ನನಗೆ ಉಂಟಾಗುತ್ತಿರಲಿಲ್ಲ. ನನ್ನ ಸಂತೋಷಕ್ಕೆ ನೀವೇ ಕಾರಣರು. ಈ ವಿವೇಕಕ್ಕೆ ಬೆಲೆಯೇ ಇಲ್ಲ, ಎಂದು ಹೇಳಿ, ಅಂದಿನಿಂದ ಬಹಳ ವಿವೇಕಿಯಾಗಿ ನಡೆದುಕೊಳ್ಳುತ್ತಾ ಬಂದನು.

ಗದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದರಿಂದ, ಮೇಲೆ ಹೇಳಿದ ಪದ್ಧ
ಯನ್ನು ಅನುಸರಿಸೋಣದರಲ್ಲಿ ಆ ಅಧಿಪತ್ಯದ ಸ್ಕೂಲ್ ಇನ್‌ಸ್ಪೆಕ್ಟರ್‌ಗಳ ಅಕ್ಷೇಪ
ಯಾರೂ ಗುರಿಯಾಗಲಾರರು.

ಪೆಸ್ಟಲಾಟ್ಸೀಯವರ ಚರಿತ್ರೆ

ಗ್ರಾನುಸ್ಥರು ಯಾವರೀತಿಯಲ್ಲಿ ಬದಕುತ್ತಾರೋ ಅವರು ಇಹಪರಗಳೆಷ್ಟು
ಸಾಧಿಸಬೇಕಾದರೆ ಏನುಮಾಡಬೇಕೋ ಈ ಸಂಗತಿಗಳನ್ನು ತಿಳಿಸುವದಕ್ಕೋಸ್ಕರ ಪೆಸ
ಲಾಟ್ಸೀಯವರು ಲೆನರ್ಡ್ ಮತ್ತು ಜರಟ್ರೂಡ್ ಎಂಬುವರ ಕಥೆಯನ್ನು ಬರೆದರು
ಲೆನರ್ಡ್ ಎಂಬುವನು ಪ್ರಾಮಾಣಿಕನಾಗಿಯೂ ಭೂತದಯೆಯುಳ್ಳವನಾಗಿಯೂ ಇದ್ದ
ನು. ಆದಾಗ್ಯೂ ಇವನು ಅತ್ಯಂತ ಪಾನಾಸಕ್ತಿಯುಳ್ಳವನು ಇವನು ಹೆಂಡತಿ
ಮಕ್ಕಳಲ್ಲಿ ಬಹಳ ಪ್ರೇಮವುಳ್ಳವನಾಗಿದ್ದನು. ಆದಾಗ್ಯೂ ಪಾನಾರ್ಥವಾಗಿ ತಾನು
ವಿನಿಯೋಗಿಸುತ್ತಿದ್ದ ದ್ರವ್ಯವನ್ನು ಅವರ ಕ್ಷೇಮಾರ್ಥವಾಗಿ ವಿನಿಯೋಗಿಸಲಾರದೇ
ಇದ್ದನು. ಪಾನಮಾಡುವದನ್ನು ಬಿಟ್ಟು ಕುಟುಂಬ ರಕ್ಷಣೆಯಲ್ಲಿ ತನ್ನ ಆಯುಷ್ಯವನ್ನು
ವಿನಿಯೋಗಿಸಬೇಕೆಂದು ದೃಢವಾದ ಸಂಕಲ್ಪಗಳನ್ನು ಮಾಡುತ್ತಿದ್ದನು. ಈ ಸಂಕ
ಲ್ಪಗಳೆಲ್ಲಾ ಪಾನಕಾಲವು ಪ್ರಾಪ್ತವಾದಕೂಡ್ಲೆ ಮಧ್ಯಾಹ್ನದ ಬಿಸಲಿನಿಂದ ಹಿಮ
ಕೋಪಾದಿಯಲ್ಲಿ ಮಾಯವಾಗುತ್ತಿದ್ದವು. ಇವನ ಹೆಂಡತಿಯು ಜರಟ್ರೂಡ್ ಎಂಬು
ಳು. ಇವಳ ಸೌಶೀಲ್ಯಾದಿ ಗುಣಗಳು ಅತ್ಯದ್ಭುತವಾಗಿದ್ದವು. ಈಕೆಯು ಬುದ್ಧಿ
ವಲಿಯಾಗಿಯೂ ಕಷ್ಟಪಟ್ಟು ಕೆಲಸಮಾಡತಕ್ಕವಳಾಗಿಯೂ ಬಹಳ ಜಾಣೆಯಾಗಿ
ಯೂ ಇದ್ದಳು. ಚತುರೋಪಾಯಗಳಿಂದಲೂ ಗಂಡನನ್ನು ಪಾನವಿಷಯದಲ್ಲಿ ಪರಾ
ಙ್ಮುಖನನ್ನಾಗಿ ಮಾಡಬೇಕೆಂಬದಾಗಿಯೂ ಅವನಿಗೆ ಪಾಯಿಗಳ ಸ್ನೇಹವನ್ನು ತಪ್ಪಿಸ
ಬೇಕೆಂಬದಾಗಿಯೂ ಪ್ರಯತ್ನಮಾಡುತ್ತಿದ್ದಳು. ಈ ಪ್ರಯತ್ನವು ಗೃಹಕೃತ್ಯದಲ್ಲಿ ಬಹಳ
ರಿಕಿರಿಯನ್ನುಂಟುಮಾಡುತ್ತಿತ್ತು. ಆದಾಗ್ಯೂ ಅನ್ಯಾದೃಶವಾದ ಸಾಹಸವನ್ನುತ್ತೋ
ಸಿ ಈ ಪಾನದಿಂದ ಉಂಟಾಗತಕ್ಕ ಅನರ್ಥಗಳನ್ನು ಗಂಡನಿಗೆ ದೃಷ್ಟಾಂತರೂಪಕ್ಕೆ
ಯಾವ ರೀತಿಯಲ್ಲಿ ಬಂದೀತೆಂದು ಯೋಚಿಸುತ್ತಾ " ಕಳವು ಕೊಲೆ ಮುಂತಾದ

ಗಳಾದ ಕೆಲವು ಅಧಿಪತ್ಯಗಳವರು. ಆದರೆ ಸಾಧ್ಯವಿದ್ಯಾಭ್ಯಾಸವು ಸಾಮಾನ್ಯ ಪ್ರಜೆಗಳಿಗೆಲ್ಲಾ ಸಾಧ್ಯವಲ್ಲವಾದುದರಿಂದ ಲೋವರ್ ಸೆಕೆಂಡರಿ ಪರೀಕ್ಷೆಗೆ ಓದತಕ್ಕ ವಿಷಯಗಳು ತಿಳಿಯಲವಶ್ಯಕವಾದುದರಿಂದ ಬಡಜನರಿಗೋಸ್ಕರ ಇವಶ್ಯಕವೆಂದು ಅಭಿಪ್ರಾಯಪಡುವರು.

***

ಇದರಮೇಲೆ ಈ ವಿಷಯವಾಗಿ, ಮದ್ರಾಸ್ ಅಧಿಪತ್ಯಕ್ಕೆ ಸೇರಿದ ಒಂದು ಕಾಲೇಜಿನ ಪ್ರಿನ್ಸಿಪಾಲ್‌ರವರು ಯುಕ್ತವಾದ ಮೇಲುಪಜ್ಞೆಯೊಂದನ್ನು ಹಾಕಿರುವರು. ತಮ್ಮ ಪಾಠಶಾಲೆಯು ಮೂರನೆ ತರಗತಿಯುಲ್ಲಿ ಓದತಕ್ಕ ಬಾಲಕರ ತಂದೆ ಅಥವಾ ಪೋಷಕರಲ್ಲಿ ಅವರವರ ಹುಡುಗರನ್ನು ಲೋವರ್‌ಸೆಕೆಂಡರಿಯಾದೊಡನೆ ಇತರ ಕೆಲಸಕ್ಕಾಗಿ ಪಾಠಶಾಲೆಯನ್ನು ಬಿಡಿಸಲು ಇಚ್ಛೆಯುಳ್ಳವರು ಯಾರ್ಯಾರೋ ಅವರು ದಯವಿಟ್ಟು ತಿಳಿಸಬೇಕೆಂದು ಪ್ರಿನ್ಸಿಪಾಲ್‌ರವರು ಕೇಳಿರುವರು. ಮೆಟ್ರಿಕ್ಯುಲೇಷನ್ ಅಥವಾ ಇನ್ನೂ ಹೆಚ್ಚಾಗಿ ಓದಿಸಲು ಇಚ್ಛೆಯುಳ್ಳವರು ಮತ್ತು ಅನುಕೂಲವಾಗಿರುವರು ತಮ್ಮ ತಮ್ಮ ಹುಡುಗರನ್ನು ಲೋವರ್‌ಸೆಕೆಂಡರಿ ಪರೀಕ್ಷೆಗೆ ಕಳುಹಿಸುವುದರಲ್ಲಿ ಹೆಚ್ಚಾದ ನಷ್ಟವೇ ಹೊರ್ತು ಅನುಕೂಲ ಕಡಿಮೆಯುಂತಲೂ, ಸಣ್ಣ ಸಣ್ಣ ನೌಕರಿ ಅಂದರೆ, ಮುಚ್ಚಿ, ಜವಾನಿ, ಅಟೆಂಡೆಂಟ್, ಇಂಥಾ ನೌಕರಿಯನ್ನು ಪಡೆಯುವಿಕ್ಕಾಗಿ ಲೋವರ್ ಸೆಕೆಂಡರಿಯುಲ್ಲಿ ತೇರ್ಗಡೆಯುನ್ನು ಹೊಂದಬೇಕಾದ್ದು ಅವಶ್ಯಕವೆಂತಲೂ ವ್ಯಕ್ತಪಡಿಸಿರುವರು. ಅಲ್ಲದೆ ಸಾಧ್ಯವಿದ್ಯಾಭ್ಯಾಸವನ್ನು ಮಾಡಬೇಕೆಂಬ ಕುತೂಹಲವುಳ್ಳ ತಮ್ಮ ವಿದ್ಯಾರ್ಥಿಗಳ ಹಿತಚಿಂತಕರಾಗಿ, ಲೋವರ್‌ಸೆಕೆಂಡರಿ ಪರೀಕ್ಷೆಯುನ್ನು ದೂರವಾಡುವಂತೆ ಆ ವಿದ್ಯಾರ್ಥಿಗಳಿಗೆ ವಿವೇಕವನ್ನು ಹೇಳಿತಿರುವರು.

***

ಈ ಮಾರ್ಗವನ್ನೇ ಮದ್ರಾಸ್ ಅಧಿಪತ್ಯದ ಇತರ ಪಾಠಶಾಲೆಗಳ ಅಧ್ಯಕ್ಷರು ಅನುಸರಿಸೋಣದರಿಂದ ಲೋವರ್‌ಸೆಕೆಂಡರಿ ಪರೀಕ್ಷೆಯುನ್ನು ತೆಗೆದುಹಾಕಿ ಬಿಡಬೇಕೆಂಬ ಮತವುಳ್ಳವರ ಮನಸ್ಸಿಗೆ ಸ್ವಲ್ಪ ತೃಪ್ತಿಯುಂಟಾಗುವುದು. ಅಲ್ಲದೆ ಲೋವರ್‌ಸೆಕೆಂಡರಿ ಪರೀಕ್ಷೆಯಿಂದ ಸಂಭವಿಸುವ ಕೇಡನ್ನೂ ಕಡಮೆಮಾಡಿದಂತಾಗುವುದು. ಮದ್ರಾಸ್ ಸರ್ಕಾರದ ಡೈರೆಕ್ಟರ್ ಆಫ್, ಪಬ್ಲಿಕ್ ಇನ್‌ಸ್ಟ್ರಕ್ಷನ್‌ರವರು ಲೋವರ್ ಸೆಕೆಂಡರಿ ಪರೀಕ್ಷೆಯುಲ್ಲಿ ತೇರ್ಗಡೆಯುನ್ನು ಹೊಂದೋಣ ಅವಶ್ಯಕವೆಂದು ಭಾವಿಸಲಾ

ಹೋಗುವದು. ನಮ್ಮ ಸಂಭಾಷಣೆಯಿಂದ ನೀನು ಮಾಡಿರತಕ್ಕ ಸಂಕಲ್ಪವೂ ನಿಷ್ಠೆಯೂ ಇದೇರೀತಿಯಲ್ಲಿ ಪರಿಣಮಿಸದೇ ಎಂದಿಗೆತಾನೇ ಹೋದೀತು. ನಮ್ಮ ದೌರ್ಭಾಗ್ಯದ ದೆಸೆಯಿಂದ ನಿನಗೆ ಈ ದುರಭ್ಯಾಸವು ಉಂಟಾಯಿತು. ಇದನ್ನು ನೀನು ಬಿಡುವದಾಗಿ ಮಾಡಿರತಕ್ಕ ನಿಷ್ಕರ್ಷೆಯು ನಿಜವಾಗಬೇಕಾದಪಕ್ಷದಲ್ಲಿ ನಮಗೂ ಸಂತ ತವಾದ ಪುಣ್ಯವೇನೋ ಇರಬೇಕೆಂದು ಯೋಚಿಸಬೇಕಾಗಿದೆ ಎಂದು ಹೇಳಿದಳು. ಕ ವಿಮತುಗಳು ಮರ್ಮಭೇದಕವಾಗಿದ್ದಾಗ್ಯೂ ಲೆನರ್ಡಿನ ನಿಷ್ಕರ್ಷೆಯನ್ನು ಸಂಪೂರ್ಣ ವಾಗಿ ದೃಢೀಕರಿಸತಕ್ಕ ಶಕ್ತಿಯುಳ್ಳದ್ದಾಯಿತು. ಆತನು ಮನಸ್ಸನ್ನು ಗಟ್ಟಿಮಾಡಿ ಕೊಂಡು ಪಾನಶಾಲೆಯನ್ನು ಪಾಯಿಗಳ ಸಹವಾಸವನ್ನು ಪರಿತ್ಯಾಗಮಾಡಿದನು. ತನ್ನ ಅರ್ಜನೆಯನ್ನೆಲ್ಲಾ ಗೃಹಕೃತ್ಯಕ್ಕೆ ವಿನಿಯೋಗಿಸಿ ಹೆಂಡತಿ ಮಕ್ಕಳ ಅನ್ನವಸ್ತ್ರಗಳಿಗೆ ಯಾವನ್ಯೂನತೆಯೂ ಬಾರದಂತೆ ಮಾಡಿದ್ದಲ್ಲದೆ ಮಕ್ಕಳ ವಿದ್ಯಾಭ್ಯಾಸಕ್ಕೂ ಅವರ ನೀತಿವಂತರಾಗಿ ಆತ್ಮಾವಲಂಬಿಗಳಾಗತಕ್ಕ ಏರ್ಪಾಡುಗಳಿಗೂ ತಕ್ಕ ಸಹಾಯವನ್ನು ಮಾಡಿದನು. ಅದುವೊದಲು ವಿದ್ಯಾವಂತರಾಗಿಯೂ ಧನಿಕರಾಗಿಯೂ, ಭೂತದ ಯೆಯುಳ್ಳವರಾಗಿಯೂ, ಪ್ರಾಮಾಣಿಕರಾಗಿಯೂ ಇರತಕ್ಕ ಜನಗಳನ್ನು ಉದಹರಿಸ ಬೇಕಾದರೆ ಜನರು ಲೆನರ್ಡ್ ಮತ್ತು ಜುಟ್ರೂಡ್‌ರನ್ನೂ, ಅವರ ಮಕ್ಕಳನ್ನೂ ಉದಹರಿಸುತ್ತಿದ್ದರು. ಸ್ವಿಟ್ಜರಲೆಂಡ್ ದೇಶದಲ್ಲೆಲ್ಲಾ ಪೆಸ್ಟಲಾಟ್ಸೀಯವರು ಇವರ ವಿಷಯದಲ್ಲಿ ಬರೆದಿರತಕ್ಕ ಗ್ರಂಥವು ಪ್ರಚಾರಕ್ಕೆ ಬಂದು ಈ ಗ್ರಂಥವನ್ನು ಅವಲೋಕಿ ಸಿದವರಲ್ಲಿ ಅನೇಕರು ಸನ್ಮಾರ್ಗಪ್ರವರ್ತಕರಾಗುತ್ತಾ ಬಂದರು. ಪೆಸ್ಟಲಾಟ್ಸೀಯವರು ಹೀಗೆಯೇ ನೀತಿಬೋಧಕವಾದ ನಾಲ್ಕು ಗ್ರಂಥಗಳನ್ನು ಬರೆದು (೧೭೮೭) ನೇ ಇಸವಿಯಲ್ಲಿ ಈ ನಾಲ್ಕು ಗ್ರಂಥಗಳನ್ನು ಮುದ್ರಿಸಿ ಪೂರೈಸಿದರು. ತರು ವಾಯ ಜನಗಳು ತಮ್ಮ ಕರ್ತವ್ಯಗಳನ್ನು ತಿಳಿದುಕೊಳ್ಳಲಿ ಎಂದು ಯುಕ್ತಿಯು ಕ್ತವಾದ ಅನೇಕ ಉಪದೇಶಗಳನ್ನೊಳಗೊಂಡಿರುವಂತೆ ಒಂದು ವಾರಪತ್ರಿಕೆಯನ್ನು ಮುದ್ರಿಸುವದಕ್ಕೆ ಉಪಕ್ರಮಿಸಿದರು. ಈ ಪತ್ರಿಕೆಯಲ್ಲಿ ಅನೇಕ ಸಂಗತಿಗಳನ್ನು ಬರೆ ದಿದಾರೆ. ಅದರೆ ಯಾವಸಂಗತಿಯನ್ನು ಓದಿದಾಗ್ಯೂ ದುರ್ಮಾರ್ಗವನ್ನು ಬಿಟ್ಟು ಸನ್ಮಾರ್ಗವನ್ನುಅವಲಂಬಿಸಿ ಅದರಿಂದ ಇಹಪರಗಳನ್ನುಸಾಧಿಸಿಕೊಳ್ಳುವದಕ್ಕೆ ಬೇಕಾದ ಬುದ್ಧಿವಾದಗಳು ತುಂಬಾ ಇರುತ್ತವೆ ಅವುಗಳಲ್ಲಿ ಕೆಲವನ್ನು ಇಲ್ಲಿ ತಿಳಿಸುತ್ತೇವೆ.

ದೇಶದ ಉನ್ನತಿಗೆ ಪ್ರಜೆಗಳ ಆತ್ಮಾವಲಂಬನೆಯು ಕಾರಣಭೂತವಾ

ಸಾಧಕವಾದ ಯಾವದಾದರೂ ಒಂದೆರಡು ಕಲೆಗಳಲ್ಲಿ ಸಮಗ್ರವಾದ ಪ್ರವೇಶವನ್ನು ಹೊಂದಿ ಸ್ವತಂತ್ರರಾಗಿ ಬದುಕುವರು. ಈ ರೀತಿಯಲ್ಲಿ ಜನರು ಬದುಕುವದರಿಂದ ದೇಶವು ಉನ್ನತಸ್ಥಿತಿಗೆ ಬರುವದು.

ಒಂದು ವಾರಪತ್ರಿಕೆಯಲ್ಲಿ ಪೆಸ್ಟಲಾಟ್ಸೀಯವರು ವಿದ್ಯಾರ್ಥಿಗಳಿಗೆ ಪೂರ್ವಾಪರ ಜ್ಞಾನವೂ, ನಯವಿನಯಗಳೂ, ಭೂತದಯೆಯೂ, ದೇಹದಾರ್ಢ್ಯವೂ, ಸ್ವತಂತ್ರವಾದ ಜೀವನವೂ, ಯಶಸ್ಸೂ ಉಂಟಾಗುವ್ದಕ್ಕೆ ಸಾಧಕಗಳಾದ ಅನೇಕ ಸಂಗತಿಗಳನ್ನು ಬರೆದಿರುವರು. ಇವರು ದರಿದ್ರರ ವಿಷಯದಲ್ಲಿ ಅನ್ಯಾದೃಶವಾದ ಕನಿಕರವುಳ್ಳವರಾಗಿದ್ದರು. ಪ್ರಪಂಚದಲ್ಲಿ ಅನ್ನವಸ್ತ್ರಗಳಿಗೆ ಇಲ್ಲದೇ ಇರತಕ್ಕ ಬಡವರು ಒಬ್ಬರೂ ಇಲ್ಲದಂತೆ ಮಾಡಬೇಕೆಂಬುವುದು ಇವರ ಮುಖ್ಯ ಉದ್ದೇಶವಾಗಿತ್ತು. ಈ ಉದ್ದೇಶಾರ್ಥವಾಗಿ, ದಾನಧರ್ಮಗಳು, ಹಿತೋಪದೇಶಗಳು, ಕಾನೂನುಗಳು ಇವುಗಳಲ್ಲಿ ಯಾವದೂ ಪ್ರಯೋಜನವಿಲ್ಲವೆಂಬದಾಗಿಯೂ ದಾರಿದ್ರ್ಯನಿವಾರಣೆಗೆ ವಿದ್ಯಾಭ್ಯಾಸವೂ ಕಲಾಭ್ಯಾಸವೂ ಇವೆರಡೇ ಸಾಧಕಗಳಾದವು ಎಂಬದಾಗಿಯೂ, ಈ ಎರಡರಲ್ಲಿಯೂ ಜನರಿಗೆ ಪಾಂಡಿತ್ಯವನ್ನುಂಟುಮಾಡುವ್ದಕ್ಕೋಸ್ಕರ ವಿದ್ಯಾಭ್ಯಾಸವನ್ನೂ ಕಸಬುಗಳಲ್ಲಿ ಅಭ್ಯಾಸವನ್ನೂ ಜೊತೆಯಲ್ಲಿ ಮಾಡಿಸುತ್ತಾ ಬರಬೇಕೆಂಬದಾಗಿಯೂ, ಹೀಗೆ ಮಾಡಿಸುವುದರಿಂದ ಪ್ರಪಂಚದಲ್ಲಿ ದಾರಿದ್ರ್ಯವಿಚ್ಛಿತ್ತಿಯಾಗ.ವದಲ್ಲದೆ, ಜನಗಳಲ್ಲಿ ಸೌಜನ್ಯವೂ ಹೆಚ್ಚಿ, ಸರಕಾರದವರಿಗೆ ರಾಜ್ಯಭಾರಮಾಡುವದರಲ್ಲಿಯೂ ಕೂಡ ಸುಲಭವಾಗುವದೆಂಬದಾಗಿಯೂ ತಾತ್ಪರ್ಯಪಟ್ಟ್ದರು. ಇಂಥಾ ತಾತ್ಪರ್ಯವು ಪ್ರಭುಗಳಿಗೆ ಉಂಟಾದರೆ ಅದು ಶೀಘ್ರವಾಗಿ ಆಚರಣೆಯುಲ್ಲಿ ಬರುವದಕ್ಕೆ ಅವಕಾಶವಿರುತ್ತದೆ. ಪೆಸ್ಟಲಾಟ್ಸೀಯವರ ಅಭಿಪ್ರಾಯಗಳಿಗೆ ಜಾರಿಯಲ್ಲಿ ಬರುವದಕ್ಕೆ ಅಂಥಾ ಅವಕಾಶ ಯಾವದೂ ಇರಲಿಲ್ಲ. ಆದರೆ ಪೆಸ್ಟಲಾಟ್ಸೀಯವರು ಲೋಕೋಪಕಾರಕ್ಕೆ ಸಾಧಕವಾದ ಈ ಅಭಿಪ್ರಾಯಗಳು ತಮ್ಮಲ್ಲೇ ಲಯವಾಗುವದಕ್ಕೆ ಅವಕಾಶಕೊಡಲಿಲ್ಲ. ಇವರು ಈ ವಿಷಯಗಳನ್ನೆಲ್ಲಾ ಗರ್ಭೀಕರಿಸಿ ಅನೇಕ ಗ್ರಂಥಗಳನ್ನು ಬರೆದು ಇಟ್ಟರು ಆದರೆ ಹೀಂಗೆ ಬರಿಯೋಣವರಿಂದ ಮಾತ್ರವೇ ತೃಪ್ತಿಯಾಗಲಿಲ್ಲ. ತಮ್ಮ ಗ್ರಂಥಗಳಲ್ಲಿ ತಾವು ಸೇರಿಸಿದ್ದ ಎಲ್ಲಾ ಸಂಗತಿಗಳನ್ನು ಸಾಂಪ್ರದಾಯಿಕರೂಪವಾಗಿಯೂ, ಕಥೆಗಳ ರೂಪವಾಗಿಯೂ, ಉಪನ್ಯಾಸಗಳ ರೂಪವಾಗಿಯೂ ಪ್ರಚಾರಪಡಿಸಿದರು. ಸರಿಯಾದ ಕ್ಷೇತ್ರದಲ್ಲಿ ಬಿದ್ದ ಬೀಜವು ಹ್ಯಾಗೆ ಪಂಚಭೂತಗಳಿಂದಲೂ ತನ್ನ ಬೆಳವಳಿಕೆಗೆ ಬೇಕಾದ

ದದ್ದು. ಪ್ರಜೆಗಳು ಪರಾವಲಂಬನೆಯನ್ನು ಬಿಟ್ಟು ಸ್ವೇಶಕ್ತಿಯಿಂದ ಬದುಕಬೇಕಾ ದರೆ ಅದಕ್ಕೆ ಸಾಧಕವಾದ ಯೋಗ್ಯತೆಯನ್ನು ಹೊಂದಬೇಕು. ಈ ಯೋಗ್ಯತೆ ಯು ಬರುವದಕ್ಕೆ ಸದ್ವಿದ್ಯಾಭ್ಯಾಸವು ಅವಶ್ಯಕನಾದದ್ದು. ಸದ್ವಿದ್ಯಾಭ್ಯಾಸವಂದರೆ ಯಾವ ವಿದ್ಯಾಭ್ಯಾಸದ ಬಲದಿಂದ ಮನುಷ್ಯನು ಪರಾಪೇಕ್ಷೆ ಇಲ್ಲದೆ ಬದುಕಬಹು ದೋ ಯಾವದರಿಂದ ಅವನು ಉಪಪನ್ನನಾಗಿಯೂ, ಯಶೋವಂತನಾಗಿಯೂ ಶಕ್ತ್ಯನುಸಾರ ಲೋಕೋಪಕಾರಿಯಾಗಿಯೂ ಇರಬಹುದೋ ಯಾತರ ಸಹಾಯ ದಿಂದ ಅನಾಯಾಸವಾಗಿ ಇಹಪರಗಳನ್ನು ಸಾಧಿಸಬಹುದೋ ಅಂಥಾ ವಿದ್ಯೆಯೆಂದು ತಾತ್ಪರ್ಯವು. ಇಂಥಾ ವಿದ್ಯೆಯು ಗುರುಮುಖವಾಗಿಯೂ ಮಾತಾಪಿತೃಗಳ ಉಪದೇಶ ದಿಂದಲೂ, ಸತ್ಸಹವಾಸದಿಂದಲೂ ಬರತಕ್ಕದ್ದಾಗಿರುತ್ತದೆ. ಇಂಥಾ ವಿದ್ಯಾರ್ಜ ನೆಗೆ ಬಾಲ್ಯವೇ ಅತ್ಯಂತ ಅನುಕೂಲವಾದ ಕಾಲವು. ಆ ಕಾಲದಲ್ಲಿ ಪಾಠಪ್ರವಚನ ರೂಪವಾಗಿಯೂ, ಕಥಾಶ್ರವಣರೂಪವಾಗಿಯೂ, ಪದಾರ್ಥಪ್ರದರ್ಶನರೂಪವಾಗಿಯೂ ಹಿತೋಪದೇಶದರೂಪವಾಗಿಯೂ ಅನೇಕ ವಿಷಯಗಳನ್ನು ತಿಳಿಸುವದು ಗುರು ಹಿರಿ ಯರಿಗೆ ಕರ್ತವ್ಯವಾದದ್ದು. ಈ ಕರ್ತವ್ಯವನ್ನು ಜನರು ಬೇಜಾರಿಲ್ಲದೆ ಎಷ್ಟರಮಟ್ಟಿಗೆ ಮಾಡುವರೋ ದೇಶವು ಅಷ್ಟು ಉನ್ನತಸ್ಥಿತಿಗೆ ಬರುವದು. ಈ ವಿಷಯದಲ್ಲಿ ಜನರು ಉದಾಸೀನವಾಡಿದರೆ ತಂದೆ ತಾಯಿಗಳು ಎಷ್ಟು ಆಸ್ತಿ ಇಟ್ಟಾಗ್ಯೂ ಮಕ್ಕಳು ಅದ ನ್ನು ಕಾಪಾಡಿಕೊಳ್ಳಲಾರರು. ತಂದೆ ತಾಯಿಗಳು ಎಷ್ಟು ಕೀರ್ತಿಯನ್ನು ಸಂಪಾದಿ ಸಿದಾಗ್ಯೂ ಮಕ್ಕಳು ಆ ಕೀರ್ತಿಯನ್ನು ಉಳಿಸಿಕೊಳ್ಳಲಾರರು. ಮಕ್ಕಳಿಗೆ ವಿದ್ಯಾ ಭ್ಯಾಸವು ನುಮವಿನುಮಾದಿ ಸದ್ಗುಣಗಳು, ನವನಿಧಿಗಳಿಗಿಂತಲೂ ಉತ್ತಮವಾದ ಸಂ ಪತ್ತೆಂದು ಭಾವಿಸಬೇಕು. ವಿದ್ಯೆಯು ಈ ಗುಣಾತಿಶಯಗಳೂ ಇಲ್ಲದೇ ಇದ್ದರೆ ಸಕಲ ಸಂಪತ್ತುಗಳೂ ಅನರ್ಥಕಾರಿಗಳಾಗಿ ಪರಿಣಮಿಸುವವು. ಆದ್ದರಿಂದ ಗುರುಹಿರಿಯರು ಬಾಲಕರಿಗೆ ಯುಕ್ತಾಯುಕ್ತ ಪರಿಜ್ಞಾನಕ್ಕೆ ಸಾಧಕವಾದ ವಿದ್ಯೆಯನ್ನು ಪರತಂತ್ರರಾ ಗದೇ ಬದುಕುವದಕ್ಕೆ ಸಾಧಕಗಳಾದ ನಾನಾವಿಧಗಳಾದ ಕಲೆಗಳಲ್ಲಿ ಯಾವದಾದರೂ ಒಂದೆರಡರಲ್ಲಿ ಅದರೂ ಪ್ರಶಸ್ತವಾದ ಪಾಂಡಿತ್ಯವನ್ನು ಉಂಟುಮಾಡಬೇಕು. ಇಂಥಾ ಪಾಂಡಿತ್ಯವನ್ನುಂಟುಮಾಡುವದು ದೇಶಕಾಲಜ್ಞರಾಗಿಯೂ ಅನುಭವಶಾಲಿಗಳಾಗಿ ಯೂ ಇರತಕ್ಕ ಗುರುಹಿರಿಯರ ಕೆಲಸವಾಗಿರುತ್ತೆ. ಅವರ ಕರ್ತವ್ಯವನ್ನು ಅವರು ಸರಿಯಾಗಿ ಮಾಡಿದರೆ ಬಾಲಕರು ಜ್ಞಾನಕ್ಕೆ ಸಾಧಕವಾದ ವಿದ್ಯೆಯನ್ನು ಜೀವನಕ್ಕೆ

ಭಾಷಾಭೂಷಣಕಾರನು, ಸಂಬಂಧಸಾಮಾನ್ಯವೂ ಕಾರಕವೆಂದು ಭ್ರಮಿಸಿ ಏಳು ಕಾರಕಗಳೆಂದು ಹೇಳಿರುವನು ಇದು ಶಾಸ್ತ್ರವಿರುದ್ಧವಾದುದು; ಏತಕ್ಕೆಂದರೆ, ಯಾವುದಕ್ಕೆ ಕ್ರಿಯೆಯಲ್ಲಿ ಅನ್ವಯ ಬರುವುದೋ ಅದೇ ಕಾರಕವೆಂದು, ಶಬ್ದಾನುಶಾಸನೆ, ಶಬ್ದಮಣಿದರ್ಪಣಗಳಲ್ಲೂ, ಪಾಣಿನಿ ಮೊದಲಾದವರಿಂದ ಪ್ರಣೀತವಾದ ಸಂಸ್ಕೃತ ವ್ಯಾಕರಣಗಳಲ್ಲೂ ಹೇಳಿರುವದರಿಂದ ಸಂಬಂಧಸಾಮಾನ್ಯವು ಕ್ರಿಯೆಯಲ್ಲಿಯೇ ಅನ್ವಿತನಾಗುವದೆಂಬ ನಿಯಮವಿಲ್ಲ. ಆದುದರಿಂದ ಕಾರಕಗಳು ಆರೇ ಎಂದು ಹೇಳಬೇಕು.

ಇಂಥಾ ಆರು ಕಾರಕಗಳಲ್ಲಿ, ಯಾವದು ಕ್ರಿಯೆಯನ್ನು ಹುಟ್ಟಿಸುವದರಲ್ಲಿ ಮುಖ್ಯವೆಂದೆಣಿಸುವಿವೋ ಅದನ್ನೇ ಕರ್ತೃವೆಂದು ತಿಳಿಯಬೇಕು.

॥ಉ॥ ರಾಮನು ಕಟ್ಟಿಗೆಯಿಂದ ಪಾತ್ರೆಯಲ್ಲಿ ಅಕ್ಕಿಯನ್ನು ಬೇಯಿಸುತ್ತಾನೆ. ಇಲ್ಲಿ ಬೇ ಧಾತುಕ್ರಿಯೆಯು ಹುಟ್ಟುವದಕ್ಕೆ ಕಟ್ಟಿಗೆ ಮೊದಲಾದ ಕಾರಕಗಳಿದ್ದರೂ ರಾಮನ ವ್ಯಾಪಾರವಿಲ್ಲದೆ ಅವುಗಳಲ್ಲಿ ಸ್ವತಂತ್ರವಾಗಿ ವ್ಯಾಪಾರವಾವುದೂ ಹುಟ್ಟುವದಿಲ್ಲವಾದುರಿಂದ ರಾಮನೇ ಕರ್ತೃವಾಗಿರುವನು. ಉಳಿದವುಗಳು ತಮ್ಮತಮ್ಮ ವ್ಯಾಪಾರಗಳಲ್ಲಿ ಅವವು ಸ್ವತಂತ್ರವಾಗಿದ್ದರೂ ಇಲ್ಲಿ ಮುಖ್ಯವಾದ ಬೇಧಾತು ಕ್ರಿಯಾನಿಷ್ಪತ್ತಿಯಲ್ಲಿ ರಾಮನೇ ಮುಖ್ಯನಾಗಿರುವನು. ಇತರಗಳೂ ಮುಖ್ಯಗಳೆಂದು ವಿವಕ್ಷೆ ಮಾಡಿದಾಗ ಅವುಗಳನ್ನೂ ಕರ್ತೃಪದಗಳೆಂದು ಹೇಳಬಹುದು. ಆದರೆ ಅಗ ರಾಮನೆಂಬ ಮುಖ್ಯ ಕರ್ತೃಪದವನ್ನು ಪ್ರಯೋಗಿಸಬಾರದು. ಇಂಥಾ ಕರ್ತೃ ಕಾರಕವು ಸ್ವತಂತ್ರಪ್ರಯೋಜಕ ಪ್ರಯೋಜ್ಯಗಳೆಂದು ಮೂರುತೆರವಾಗಿರುವುದು. ಇದರಲ್ಲಿ,—ಅಕ್ಕಸಾಲೆಯು ಪದಕವನ್ನು ಮಾಡಿದನು, ಎಂಬ ವಾಕ್ಯದಲ್ಲಿ, ಅಕ್ಕಸಾಲೆಯು ಇತರ ಪ್ರೇರಣೆಯಿಲ್ಲದೆ ಕ್ರಿಯೆಯಲ್ಲಿ ಪ್ರವರ್ತಿಸಿರುವನೆಂದು ತೋರುವುದರಿಂದ, ಅವನು ಸ್ವತಂತ್ರ ಕರ್ತನೆಂದು ತಿಳಿಯಬೇಕು. ಅರಸನು ಅಕ್ಕಸಾಲೆಯಿಂದ ಪದಕವನ್ನು ಮಾಡಿಸಿದನು. ಎಂಬ ವಾಕ್ಯದಲ್ಲಿ, ಅರಸನೆಂಬುವನು ಅಕ್ಕಸಾಲೆಗೆ ಹೇಳಿ ಪದಕವನ್ನು ಮಾಡಿಸಿದನು ಎಂದು ಅರ್ಥವಾಗುವ್ದರಿಂದ ಅರಸನೇ ಪ್ರಯೋಜಕ ಕರ್ತನು, ಅಕ್ಕಸಾಲೆಯೇ ಪ್ರಯೋಜ್ಯಕರ್ತನು ಎಂದು ತೋರುವುದು.

ಇಂಥಾ ತ್ರಿವಿಧವಾದ ಕರ್ತೃಕಾರಕಗಳಲ್ಲಿ ಕರ್ತ್ರರ್ಥಕವಾದ ಆಖ್ಯಾತ ಪ್ರತ್ಯಯಗಳನ್ನು ಹೊಂದಿದ ಧಾತುಗಳ ಪ್ರಯೋಗವಿದ್ದರೆ ಸ್ವತಂತ್ರಕರ್ತೃವಾಚಕ ಪದದಮೇಲೂ, ಪ್ರಯೋಜಕ ಕರ್ತೃವಾಚಕದಮೇಲೂ ಪ್ರಥಮಾವಿಭಕ್ತಿಯೂ,

ಸಮಸ್ತ ದ್ರವ್ಯಗಳನ್ನು ಆಕರ್ಷಿಸಿಕೊಂಡು ಬಹಳ ದೊಡ್ಡದಾದ ವೃಕ್ಷವಾಗಿ ಅನೇಕ ಪ್ರಾಣಿಗಳಿಗೆ ಫಲವನ್ನೂ ಆಶ್ರಯವನ್ನೂ ಕೊಡುತ್ತದೊ ಹಾಗೆಯೇ ಮನುಷ್ಯಜನ್ಮವನ್ನು ಎತ್ತಿದವರೂ ಕೂಡ, ಗುರುಹಿರಿಯರ ಉಪದೇಶವನ್ನೂ, ಸತ್ಸಹವಾಸವನ್ನೂ ಸದ್ವಿದ್ಯಾಭ್ಯಾಸವನ್ನೂ ಹೊಂದಿದರೆ ಅವುಗಳ ಸಹಾಯದಿಂದ ತಾವು ಆತ್ಮವಲಂಬಿಗಳಾಗುವದಲ್ಲದೆ ತಮ್ಮ ಸಂಸರ್ಗದಲ್ಲಿರತಕ್ಕವರನ್ನು ಕೂಡ ಉತ್ತಮಸ್ಥಿತಿಗೆ ತರುವದಲ್ಲದೆ ಪರೋಪಕಾರಿಗಳನ್ನಾಗಿಯೂ ಮಾಡುವರು.

ಪೆಸ್ಟಲಾಟ್ಸೀಯವರು, ವಿಶೇಷ ದ್ರವ್ಯವಂತರಾಗದೇ ಇದ್ದಾಗ್ಯೂ ಬಹಳ ಪ್ರಬಲರಲ್ಲದೆ ಇದ್ದಾಗ್ಯೂ ಸಮಸ್ತರ ಯೋಗಕ್ಷೇಮದ ವಿಷಯದಲ್ಲಿಯೂ, ಆರ್ದ್ರವಾದ ಮನಸ್ಸುಳ್ಳವರಾದ್ದರಿಂದ ಇವರ ಹಿತೋಪದೇಶದ ವಿಷಯದಲ್ಲಿ ಅನೇಕರಿಗೆ ವಿಶ್ವಾಸ ಹುಟ್ಟಿತ್ತು. ಇವರ ಸಂಕಲ್ಪಗಳು ಆಚರಣೆಯುಲ್ಲಿ ಬರುವದಕ್ಕೆ ಆ ವಿಶ್ವಾಸವೇ ಬಹಳ ಸಾಧಕವಾಯಿತು.

ವ್ಯಾಕರಣಶಾಸ್ತ್ರಂ.

ನಾಮವಿಭಕ್ತ್ಯಪ್ರಕರಣಂ.

ಹಿಂದಿನ ಸಂಚಿಕೆಗಳಲ್ಲಿ, ಹೇಳಿರುವ ನಾನಾತೆರದ ಲಿಂಗಗಳಿಗೆ ಪರವಾಗಿ ನಾಮವಿಭಕ್ತ್ಯಿಗಳು ಎಂದರೆ,—ಹಳೆಗನ್ನಡದಲ್ಲಿ, ಮ್ಂ ಳ್ಗಮ್, ಇಮ್, ಕೆ, ಅತ್ತಣಿಂ, ೞ್, ಒಳ್, ಎಂಬ ಪ್ರತ್ಯಯಗಳೂ, ಹೊಸಗನ್ನಡದಲ್ಲಿ, ಗು, ಅನ್ನು, ಇಂದ, ಓಸ್ಕರ ನಿಸೆಯಿಂದ, ಅ, ಅಲ್ಲಿ, ಎಂಬ ಪ್ರತ್ಯಯಗಳೂ, ಸಾಮಾನ್ಯವಾಗಿ ಬರುವುವು. ಸಂಸ್ಕೃತವ್ಯಾಕರಣದವರು ನಾಮಪ್ರತ್ಯಯಗಳಿಗೆ ಹೆಸರಿಟ್ಟಿರುವಂತೆ, ಕನ್ನಡವ್ಯಾಕರಣದವರೂ, ಇವುಗಳಿಗೆ, ಪ್ರಥಮೆ, ದ್ವಿತೀಯೆ, ಮೊದಲು, ಸಪ್ತಮಿವರೆಗೂ ಕ್ರಮವಾಗಿ ಏಳು ವಿಭಕ್ತಿಗಳೆಂದು ಹೆಸರಿಟ್ಟಿರುವರು ಹೀಗೆ ವ್ಯವಹರಿಸುವ ಪ್ರತ್ಯಯಗಳು,—ಕರ್ತೃ, ಕರ್ಮ, ಕರಣ, ಸಂಪ್ರದಾನ ಅಪಾದಾನ, ಅಧಿಕರಣವೆಂಬ ಷಟ್ಕಾರಕಗಳಲ್ಲು ಸಂಬಂಧ ಸಾಮಾನ್ಯಾರ್ಥದಲ್ಲೂ, ಬರುವವೆಂದು ತಿಳಿಯಬೇಕು. ಆದರೆ ಕರ್ಣಾಟಕ

ಸಸ್ಯಗಳು ಮತ್ತು ಅವುಗಳ ಆಹಾರ

ಭೂಮಿಯ ಮೇಲೆ ಬೆಳೆಯುವ ಸಸಿಗಳು ತಮ್ಮ ಆಹಾರವಸ್ತುಗಳನ್ನು ವಾಯುವಿನಿಂದಲೂ ಮಣ್ಣಿನಿಂದಲೂ ತೆಗೆದು ಕೊಳ್ಳುತ್ತವೆ. ಅನೇಕ ಮೂಲವಸ್ತುಗಳು ಸಸ್ಯಗಳಿಗೆ ಆಹಾರವಾಗುತ್ತವೆ. ಅವುಗಳಲ್ಲಿ ಕೆಲವು ಯಾವವೆಂದರೆ—ಇಂಗಾಲ (ಕಾರ್ಬನ್), ಜಲಜನಕ (ಹೈಡ್ರೊಜನ್), ಆಮ್ಲಜನಕ (ಆಕ್ಸಿಜನ್), ಸಾರಜನಕ (ನೈಟ್ರೊಜನ್), ಗಂಧಕ (ಸಲ್ಫರ್), ರಂಜಕ (ಫಾಸ್ಫೊರಸ್), ಪೊಟಾಸಿಯಂ, ಕೆಲ್ಸಿಯಂ, ಮೆಗ್ನೀಸಿಯಂ, ಕಬ್ಬಿಣ (ಐರನ್); ಮತ್ತು ಸೋಡಿಯಂ, ಸಿಲಿಕಾಂ, ಇವುಗಳಲ್ಲದೆ ಇನ್ನೂ ಅನೇಕ. ಇವುಗಳಲ್ಲಿ ಕೆಲವುಮಾತ್ರ ಸಸ್ಯಗಳಿಗೆ ಮುಖ್ಯ ಆಹಾರವಸ್ತುಗಳು. ಅವುಗಳು ಯಾವವೆಂದರೆ—ಇಂಗಾಲ, ಜಲಜನಕ, ಆಮ್ಲಜನಕ, ಸಾರಜನಕ, ಗಂಧಕ, ರಂಜಕ, ಪೊಟಾಸಿಯಂ, ಕೆಲ್ಸಿಯಂ, ಮೆಗ್ನೀಸಿಯಂ, ಕಬ್ಬಿಣ, ಈ ಹತ್ತು ಮೂಲವಸ್ತುಗಳುಮಾತ್ರ ಸಸ್ಯಗಳಿಗೆ ಮುಖ್ಯಾಹಾರವಸ್ತುಗಳಾಗಿವೆ.

ಈ ಹತ್ತು ವಸ್ತುಗಳಲ್ಲಿ ಇಂಗಾಲವಾಯುವಿನಿಂದ ಬರುತ್ತದೆ. ಸಸ್ಯಗಳ ಎಲೆಗಳಲ್ಲಿ ಅತ್ಯಂತ ಸೂಕ್ಷ್ಮವಾದ ರಂಧ್ರಗಳಿವೆ. ಒಂದು ಎಲೆಯ ಚದುರಂಗುಲ ದಷ್ಟು ಭಾಗದಲ್ಲಿ ಇಂತಹ ರಂಧ್ರಗಳು ಸಾವಿರಾರು ಇರುವುವು. ಈ ರಂಧ್ರಗಳು ವಾಯುವಿನಲ್ಲಿರುವ ಇಂಗಾಲಾಮ್ಲವನ್ನು ಹೀರಿಕೊಂಡು ಸಸ್ಯಗಳ ಬೆಳೆವಳಿಕೆಗೆ ಉಪಯೋಗವಾಗುವಹಾಗೆ ಮಾಡುತ್ತವೆ. ಹೀರಲ್ಪಟ್ಟ ಇಂಗಾಲಾಮ್ಲದಲ್ಲಿರುವ ಇಂಗಾಲವು ಸಸ್ಯಗಳಲ್ಲಿ ನಿಲ್ಲುತ್ತದೆ. ಆಮ್ಲಜನಕವು ಹೊರಕ್ಕೆ ಬಂದು ವಾಯುಮಂಡಲವನ್ನು ಸೇರುತ್ತದೆ. ಎಲೆಗಳಲ್ಲದೆ ಸಸ್ಯಗಳ ಇತರ ಹಸುರಾದ ಭಾಗಗಳೂ ಸಹ ವಾಯುವಿನಿಂದ ಇಂಗಾಲಾಮ್ಲವನ್ನು ಹೀರಿಕೊಳ್ಳುತ್ತವೆ.

ಉಳಿದ ಮೂಲವಸ್ತುಗಳು ಎಂದರೆ—ಜಲಜನಕ, ಆಮ್ಲಜನಕ, ಸಾರಜನಕ, ಗಂಧಕ, ರಂಜಕ, ಪೊಟಾಸಿಯಂ, ಕೆಲ್ಸಿಯಂ, ಮೆಗ್ನೀಸಿಯಂ, ಮತ್ತು ಕಬ್ಬಿಣ, ಇವುಗಳು ಸಸ್ಯಗಳಿಗೆ ಮಣ್ಣಿನಿಂದ ಬರುತ್ತವೆ ಜಲಜನಕ ಆಮ್ಲಜನಕಗಳು ನೀರಿನ ರೂಪದಲ್ಲಿ ಮಣ್ಣಿನಿಂದ ಬರುತ್ತವೆ. ಉಳಿದ ಒಳು ವಸ್ತುಗಳ ಸಂಯೋಗಜನ್ಯ ಪದಾರ್ಥಗಳು ಸ್ವಲ್ಪವಿಂದು ಮಣ್ಣಿನಲ್ಲಿಯೂ ಇರಬೇಕು. ಯಾವ ಮಣಿ ನಲ್ಲಾದರೂ

ಪ್ರಯೋಜ್ಯಕರ್ತೃವಾಚಕದಮೇಲೆ, ತೃತೀಯಾವಿಭಕ್ತಿಯೂ, ಬರುವುದು.

ಅಕ್ಕಸಾಲೆಯಿಂದ ಪದಕವು ಮಾಡಲ್ಪಟ್ಟಿತು. ಅರಸನಿಂದ, ಅಕ್ಕಸಾಲೆಯಿಂದ ಪದಕವು ಮಾಡಿಸಲ್ಪಟ್ಟಿತು ಎಂಬ ವಾಕ್ಯಗಳಲ್ಲಿ, ಕರ್ಮಾರ್ಥಕಾಖ್ಯಾತಪ್ರತ್ಯಯವಿರುವುದರಿಂದ ಮೇಲೆ ಹೇಳಿರುವ ಮೂರು ವಿಧವಾದ ಕರ್ತೃವಿನಲ್ಲೂ ತೃತೀಯಾವಿಭಕ್ತಿಯು ಬಂದಿರುವುದು.

ಆದರೆ ಪ್ರೇರಣಾರ್ಥದಲ್ಲಿ ಬರುವ ಇಸುಪ್ರತ್ಯಯಾಂತಧಾತುಗಳ ಪ್ರಯೋಗವಿದ್ದಾಗ ದ್ವಿತೀಯಾದಿ ವಿಭಕ್ತಿಗಳು ಕೆಲವು ಸಂದರ್ಭದಲ್ಲಿ ಬರುವುದುಂಟು, ಅದನ್ನು ದ್ವಿತೀಯಾವಿಭಕ್ತಿಪ್ರಕರಣದಲ್ಲಿ ವಿವರಿಸುವೆವು.

ಪ್ರಕೃತದಲ್ಲಿ ಹಿಂದಿನ ಸಂಚಿಕೆಯಲ್ಲಿ ಹೇಳಿರುವಂತೆ ಸಾಮಾನ್ಯವಾಗಿ ಕಾರಕಗಳಿಗೆಲ್ಲಾ ತಮ್ಮ ತಮ್ಮ ವ್ಯಾಪಾರಗಳಲ್ಲಿ ಕರ್ತೃತ್ವವಿದ್ದರೂ ಇತರ ಕಾರಕಗಳ ಪ್ರವೃತ್ತಿನಿವೃತ್ತಿಗಳು ಯಾವದರ ವ್ಯಾಪಾರಕ್ಕೆ ಅಧೀನಗಳಾಗಿರುವವೋ, ಮತ್ತು ಸಕಲ ಕಾರಕ ಸಮುದಾಯದಿಂದ ಸಾಧ್ಯವಾದ ಕ್ರಿಯೆಯಲ್ಲಿ ಯಾವದು ಸ್ವತಂತ್ರವಾಗಿ ಇತರ ಕಾರಕಕ್ಕೆ ಯಥಾಯೋಗ್ಯವಾಗಿ ತಾನೇ ಪ್ರವರ್ತಕವಾಗಿಯೂ, ನಿವರ್ತಕವಾಗಿಯೂ ಆಗುವುದೋ, ತಾನು ಇನ್ನಾವುದರಿಂದಲೂ ಅಪ್ರಯುಕ್ತವಾಗಿರುವುದೋ, ಅದೇ ಸ್ವತಂತ್ರಕರ್ತೃವೆಂದೂ, ಉಳಿದದ್ದು ಸಾಧಕತಮತ್ವ ಮೊದಲಾದ ಧರ್ಮವಿವಕ್ಷೆಯಿಂದ ಕರಣಾದಿ ವ್ಯವಹಾರವುಳ್ಳದ್ದೆಂದೂ ಅರಿಯುವದು. ಇದೇ ಅರ್ಥವನ್ನು ಪಾಶ್ಚಾತ್ಯ ವೈಯ್ಯಾಕರಣರು,—

ಶ್ಲೋಕ ॥ ಸ್ವವ್ಯಾಪಾರೇಷು ಕರ್ತೃತ್ವಂ ಸರ್ವತ್ರೈವಾಸ್ತಿ ಕಾರಕೇ ॥
ವ್ಯಾಪಾರಭೇದಾಸೇಕ್ಷಾಯಾಂ ಕರಣತ್ವಾದಿಸಂಭವಃ ॥

ಎಂಬ ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಿರುವರು. ಆದುದರಿಂದ ಯಾವಕಾರಕವನ್ನೇ ಆಗಲಿ ಕರ್ತೃವನ್ನಾಗಿ ವಿವಕ್ಷೆಮಾಡಿದರೆ ಅದರಮೇಲೆ ಪ್ರಥಮಾವಿಭಕ್ತಿ, ತೃತೀಯಾವಿಭಕ್ತಿಗಳು ಬರುವುವೆಂದು ಊಹಿಸತಕ್ಕದ್ದು.

ಗಳು ಉಂಟಾಗುತ್ತವೆ ನೀರು ಮತ್ತು ಇಂಗಾಲಾಮ್ಲವು ಸೇರುವುದರಿಂದ (ಪಿಷ್ಟ) ಉಂಟಾಗುತ್ತದೆ. ಪಿಷ್ಟದಲ್ಲಿ ಇಂಗಾಲ, ಜಲಜನಕ, ಆಮ್ಲಜನಕ, ಇವುಗಳು ಇವೆ.

(ಪಿಷ್ಟ = $C_6 H_{10} O_5$ ಈ ಪಿಷ್ಟವು ಸಕ್ಕರೆಯಾಗಿ ಸಸ್ಯಗಳ ನಾ

ನಾ ಭಾಗಗಳಿಗೆ ಹೋಗುತ್ತದೆ. ಪಿಷ್ಟಸಕ್ಕರೆಗಳಲ್ಲದೆ ತೊಡಕುರಚನೆಯುಳ್ಳ ಇನ್ನೂ ಅನೇಕ ಸಂಯೋಗ ಜನ್ಯಪದಾರ್ಥಗಳು ಈ ಸಕ್ಕರೆ ಮತ್ತು ಬೇರುಗಳ ಮೂಲಕ ಬಂದ ಸಾರಜನಕ, ರಂಜಕ, ಗಂಧಕ, ಇವುಗಳಿಂದ ಉಂಟಾಗುತ್ತವೆ. ಹೀಗೆ ಉಂಟಾದ ತೊಡಕು ರಚನೆಯುಳ್ಳ ಪದಾರ್ಥಗಳ ವಿಭಾಗದಿಂದ ಸುಲಭ ರಚನೆಯುಳ್ಳ ಬೇರೆಬೇರೆ ಸಂಯೋಗ ಜನ್ಯವಸ್ತುಗಳು ಉಂಟಾಗುತ್ತವೆ. ಇವುಗಳಲ್ಲಿ ಕೆಲವನ್ನು ಸಸ್ಯಗಳು ಉಪಯೋಗಿಸಿಕೊಳ್ಳುವುವು, ಉಳಿದವುಗಳನ್ನು ಉಪಯೋಗಿಸಿಕೊಳ್ಳುವುದಿಲ್ಲ.

ಸಸ್ಯಗಳು ತಾವು ಬೇರು ಮತ್ತು ಎಲೆಗಳ ಮೂಲಕ ಹೀರಿಕೊಂಡ ವಸ್ತುಗಳನ್ನೇ ಆಹಾರವಾಗಿ ಉಗಯೋಗಿಸಿಕೊಳ್ಳುವುದಿಲ್ಲ ; ಆದರೆ ಇವುಗಳಿಂದ ಉಂಟಾದ ತೊಡಕುರಚನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿಕೊಳ್ಳುವುವು ಎಂದು ಜ್ಞಾಪಕದಲ್ಲಿಡಬೇಕು.

ಗಿಡಗಳು ತಮ್ಮ ಆಹಾರಕ್ಕಾಗಿ ಉಪಯೋಗಿಸಿಕೊಳ್ಳುವ ಪದಾರ್ಥಗಳ ಒಂದು ಭಾಗವು ಅವುಗಳ ಬೆಳೆವಳಿಕೆಗೋಸ್ಕರ ಉಪಯೋಗವಾಗಿ, ಉಳಿದ ಭಾಗವು ಬೀಜ, ಹಣ್ಣು, ಬೇರು, ಗುಪ್ತಕಾಂಡ, ಮೊದಲಾದವುಗಳಲ್ಲಿ ಸೇರಿಸಿ ಇಡಲ್ಪಡುವುದು. ಹೀಗೆ ಸಸ್ಯಗಳು ಕೂಡಿಟ್ಟ ವಸ್ತುಗಳೇ ಸಕ್ಕರೆ, ಎಣ್ಣೆ, ಪಿಷ್ಟ ಮೊದಲಾದವುಗಳು. ಇವುಗಳನ್ನು ಪ್ರಾಣಿಗಳು ತಿನ್ನುತ್ತವೆ. ಪ್ರಾಣಿಗಳ ಆಹಾರವನ್ನು ಸಸ್ಯಗಳು ಉಂಟುಮಾಡುತ್ತವೆ ಎಂದು ತಿಳಿಯಬೇಕು. ಸಸ್ಯಗಳಲ್ಲಿ ಉಂಟಾಗಿ ಅವುಗಳ ಉಪಯೋಗಕ್ಕೆ ಬಾರದ ಅನೇಕ ವಸ್ತುಗಳಿವೆ. ಅವುಗಳನ್ನು ಮನುಷ್ಯರು ಉಪಯೋಗಿಸುವರು. ಅವುಗಳಲ್ಲಿ ಕೆಲವು ಯಾವವೆಂದರೆ—ಕ್ವೀನಿನ್ ಅಥವಾ ಕೊಯಿನಾ, ಅಫೀಮು.

ಸಸ್ಯಗಳು ಮಣ್ಣಿನಿಂದ ಹೀರಿಕೊಂಡ ನಿರವಯವ ಪದಾರ್ಥಗಳಲ್ಲಿ ಗಂಧಕ, ರಂಜಕ, ಸಾರಜನಕ, ಈ ಮೂರು ವಸ್ತುಗಳಿಂದ ಮಾತ್ರ ಪದಾರ್ಥಗಳು ಉಂಟಾಗುತ್ತವೆ. ಉಳಿದ ಪೊಟಾಸಿಯಂ, ಕೆಲ್ಸಿಯಂ, ಮೆಗ್ನೀಸಿಯಂ, ಕಬ್ಬಿಣ, ಇವು

ಈ ನಿಳರಲ್ಲಿ ಒಂದು ಇಲ್ಲದಿದ್ದರೂ ಆ ಮಣ್ಣು ಬಂಜರಾಗುತ್ತದೆ.

ಮಣ್ಣಿನಲ್ಲಿರುವ ನೀರಿನಲ್ಲಿ ಆಹಾರಪದಾರ್ಥಗಳೆಲ್ಲಾ ಕರಗಿ ಬೇರುಗಳ ಮೂಲಕ ಸಸ್ಯಗಳ ಒಳಕ್ಕೆ ಹೋಗುವವು. ಸಸ್ಯಗಳ ತೆಳುವಾದ ಬೇರುಗಳು ಆಹಾರ ವಸ್ತುಗಳನ್ನು ತೆಗೆದುಕೊಳ್ಳುತ್ತವೆ. ಈ ಬೇರುಗಳಲ್ಲಿ ರಂಧ್ರಗಳಿಲ್ಲ; ಆದರೆ ಅವುಗಳ ಸೂಕ್ಷ್ಮವಾದ ಚರ್ಮದಲ್ಲಿ ಆಹಾರವಸ್ತುಗಳು ಕರಗಿರುವ ನೀರು ಪ್ರವೇಶಮಾಡುತ್ತದೆ.

ಮೇಲೆ ಹೇಳಿದ ಹತ್ತು ಮೂಲವಸ್ತುಗಳಲ್ಲದೆ, ಇತರ ಮೂಲವಸ್ತುಗಳಾದ ಸಿಲಿಕಾನ್, ಸೋಡಿಯಂ, ಕ್ಲೋರಿನ್, ಮೊದಲಾದ ವಸ್ತುಗಳೂ, ಸಸ್ಯಗಳಿಗೆ ಆಹಾರವಾಗುವುವು. ಆದರೂ ಇವುಗಳು ಸಸ್ಯಗಳ ಜೀವನಕ್ಕೂ ಮತ್ತು ಬೆಳೆವಳಿಕೆಗೂ ಅವಶ್ಯವಿಲ್ಲ. ಇವು ಮಣ್ಣಿನಲ್ಲಿ ಇಲ್ಲದಿದ್ದರೂ ಸಸ್ಯಗಳು ಚೆನ್ನಾಗಿ ಬೆಳೆಯುವುವು.

ಈ ಮೂಲವಸ್ತುಗಳೆಲ್ಲಾ ಬಗೆಬಗೆಯ ಸಂಯೋಗಜನ್ಯಪದಾರ್ಥಗಳ ರೂಪದಲ್ಲಿ ಮಣ್ಣಿನಲ್ಲಿರುತ್ತವೆ. ಯಾವ ರೂಪದಲ್ಲಿದ್ದರೂ ನೀರಿನಲ್ಲಿ ಕರಗದ ವಸ್ತುವನ್ನು ಸಸ್ಯಗಳು ತೆಗೆದುಕೊಳ್ಳಲಾರವು. ಮಣ್ಣಿನಲ್ಲಿರುವ ಮುಖ್ಯ ಮತ್ತು ಮುಖ್ಯವಲ್ಲದ ಮೂಲವಸ್ತುಗಳೆಲ್ಲಾ ಕರಗಿ ಸಸ್ಯಗಳ ಬೇರುಗಳನ್ನು ಪ್ರವೇಶಿಸುವುವು.

ಮುಖ್ಯ ಮೂಲವಸ್ತುಗಳಲ್ಲಿ ಸಾರಜನಕವು ಸಾಧಾರಣವಾಗಿ ನೈಟ್ರೇಟುಗಳ ರೂಪದಲ್ಲಿ ನೀರಿನಲ್ಲಿ ಕರಗಿ ಸಸ್ಯಗಳನ್ನುಸೇರುವುವು. ಪೊಟಾಸಿಯಂ, ಕೆಲ್ಸಿಯಂ, ಮೆಗ್ನೀಸಿಯಂ, ಕಬ್ಬಿಣ, ಇವುಗಳು ನೈಟ್ರಿಕ್ (ಅಗ್ನಿದ್ರಾವಕ), ಸಲ್ಫ್ಯೂರಿಕ್ (ಗಂಧಕಾಮ್ಲ), ಪಾಸ್ಫೊರಿಕ್ (ರಂಜಕಾಮ್ಲ) ಮೊದಲಾದ ಆಮ್ಲಗಳೊಡನೆ ಸೇರಿ ಲವಣಗಳಾಗಿ ಬೇರುಗಳನ್ನು ಸೇರುವುವು. ಅಲೋಹಗಳಾದ ಗಂಧಕ ರಂಜಕಗಳು ಆಮ್ಲಗಳಾಗಿ, ಲೋಹಗಳೊಡನೆ ಸೇರಿ ಲವಣಗಳಾಗಿ, ಸಸ್ಯಗಳನ್ನು ಸೇರುವುವು. ಉಳಿದ ಮುಖ್ಯವಲ್ಲದ ಮೂಲವಸ್ತುಗಳೆಲ್ಲಾ ಮುಖ್ಯವಸ್ತುಗಳಂತೆಯೇ ನಾನಾಬಗೆಯಾದ ಲವಣಗಳಾಗಿ ಸಸಿಗಳನ್ನು ಸೇರುವುವು.

ಬೇರುಗಳ ಮೂಲಕ ಮಣ್ಣಿನಿಂದ ಬಂದ ನೀರೂ, ಮತ್ತು ಅದರಲ್ಲಿ ಕರಗಿರುವ ಆಹಾರ ವಸ್ತುಗಳೂ, ಕಾಂಡಗಳಿಗೂ ಎಲೆಗಳಿಗೂ ಮತ್ತು ಇತರ ಹಸುರಾದ ಭಾಗಗಳಿಗೂ ಹೋಗುತ್ತವೆ. ಈ ವಸ್ತುಗಳು ಮತ್ತು ಎಲೆಗಳಿಂದ ಹೀರಲ್ಪಟ್ಟ ಇಂಗಾಲಾಮ್ಲವು ಎಲೆಗಳಲ್ಲಿಯೂ ಸಸ್ಯಗಳ ಹಸುರಾದ ಭಾಗಗಳೆಲ್ಲಿಯೂ ಸೇರಿ ನಾನಾ ಬಗೆಯಾವಣೆಗಳನ್ನು ಹೊಂದುವುದರಿಂದ ಅನೇಕ ಸಂಯೋಗ ಜನ್ಯಪದಾರ್ಥ

ಇದ್ದಲು ವಿನಹಾ ಇನ್ಯಾವದೂ ಸಿಕ್ಕುತ್ತಿರಲಿಲ್ಲ. ಅನ್ನಪಾನಗಳಿಲ್ಲದೆ ಅನೇಕ ಸಹಸ್ರ ಜನಗಳು ಸತ್ತರು. ಉಳಿದವರೂ ಕೂಡಾ, ದಾಹ ಶಮನವಾಡಿಕೊಳ್ಳುವದಕ್ಕೆ ಸ್ವಲ್ಪನೀರು ಯಾರಾದರೂ ತಂದುಕೊಟ್ಟರೆ ಅವರಿಗೆ ತಾವು ತಂದಿರತಕ್ಕ ದ್ರವ್ಯವನ್ನೆಲ್ಲಾ ಕೊಡುವದಾಗಿ ಸಂಕಲ್ಪವಾಡಿದರು. ಲಕ್ಷವರಾಹಗಳು ಕೊಟ್ಟಾಗ್ಯೂ ಒಂದು ತುತ್ತು ಅನ್ನವೇ ಆಗಲಿ ಒಂದು ಗುಟುಕು ನೀರೇ ಆಗಲಿ ಸಿಕ್ಕುವದಕ್ಕೆ ಅವಕಾಶವಾಗಲಿಲ್ಲ. ಈ ಆಶಕ್ತಿಯಲ್ಲಿ ಈ ಹಣವನ್ನು ಯಾರು ಹೊತ್ತಾರು ಎಂದು, ತಾವು ಲೂಟಿಮಾಡಿಕೊಂಡು ಬಂದ ದ್ರವ್ಯವನ್ನೆಲ್ಲಾ ಅಲ್ಲಲ್ಲಿಯೇ ಬಿಸಾಟು, ಅನ್ನಪಾನಗಳನ್ನು ಸಂಪಾದಿಸಿಕೊಂಡು ಬದುಕುವ ರೀತಿಯನ್ನು ಮಾತ್ರ ನೋಡುತ್ತಿದ್ದರು ಇದರಿಂದಲೇ ದ್ರವ್ಯವು, ದ್ರವ್ಯರೂಪವಾಗಿಯೇ ಪ್ರಯೋಜನವಾದದ್ದಲ್ಲವೆಂದು ಗೊತ್ತಾಗುತ್ತದೆ. ಆದರೆ ಯುದ್ಧಾದಿಗಳು ಇಲ್ಲದೇ ರಾಜ್ಯಭಾರವು ಕ್ರಮವಾಗಿ ನಡೆಯುತ್ತಾ ಸರಕಾರದವರು ಪ್ರಜೆಗಳ ಹಿತವನ್ನು ಆಚರಿಸುತ್ತಾ ಪ್ರಜೆಗಳು ರಾಜರಲ್ಲಿ, ಭಕ್ತಿಯುಳ್ಳವರಾಗಿರುತ್ತಾ, ಇರತಕ್ಕ ಪಾಶ್ಚಾತ್ಯಗಳಲ್ಲಿ ಈ ನಾಣ್ಯಗಳಿಗೂ, ನೋಟುಗಳಿಗೂ ವಿಶೇಷ ಬೆಲೆಯುಂಟು. ಒಂದಾನೊಂದು ಕಾಲದಲ್ಲಿ ನಾಣ್ಯಗಳು ಇರಲಿಲ್ಲ. ಜನರು ಕೃಷಿ, ಕೈಗಾರಿಕೆ ಮೊದಲಾದವುಗಳಿಂದ, ಭೋಗೋಪಯೋಗವಾದ ಅನೇಕ ದವಸಧಾನ್ಯಗಳನು ಬೆಳೆಯುತ್ತಲೂ, ಇತರ ಪದಾರ್ಥಗಳನ್ನೂ ನಿರ್ಮಾಣಮಾಡುತ್ತಲೂ ಇದ್ದರು. ಕೈತರು ತಮಗೆ ಬೇಕಾದ ಕಬ್ಬಿಣದ ಸಾಮಾನುಗಳು, ಮರಾ ಮುಟ್ಟು ಮೊದಲಾದವುಗಳನ್ನು ಕೊಂಡುಕೊಳ್ಳಬೇಕಾದರೆ ತಾವು ಬೆಳೆದ ದವಸಧಾನ್ಯಗಳನ್ನು ತೆಗದುಕೊಂಡು ಹೋಗಿ, ಬಡಿಗಿಗೆ ಕೊಟ್ಟು ಅದಕ್ಕೆ ಪ್ರತಿಯಾಗಿ ಮರದ ಸಾಮಾನುಗಳನ್ನೂ, ಕಬ್ಬಿಣದ ಸಾಮಾನುಗಳನ್ನೂ, ತೆಗದುಕೊಳ್ಳುತ್ತಿದ್ದರು. ಹೀಗೆ ಗೃಹಕೃತ್ಯವನ್ನು ನಡೆಸಿಕೊಳ್ಳಬೇಕಾದರೆ ಅನೇಕ ಪದಾರ್ಥಗಳು ಬೇಕು. ಅವುಗಳನ್ನೆಲ್ಲಾ ಸಂಪಾದಿಸಿಕೊಳ್ಳುವದಕ್ಕೆ ತನಗೆ ಬೇಕಾದ ಪದಾರ್ಥಗಳನ್ನು ಯಾರುಯಾರು ಹೊಂದಿರುತ್ತಾರೋ ಅವರಲ್ಲಿಗೆಲ್ಲಾ ಹೋಗಿ ಅವರಿಗೆ ತನ್ನಲ್ಲಿರತಕ್ಕ ಪದಾರ್ಥಗಳನ್ನು ಕೊಟ್ಟು ಅವರಿಂದ ತನಗೆ ಬೇಕಾದ ಪದಾರ್ಥಗಳನ್ನು ತೆಗದುಕೊಳ್ಳುವದು ಬಹಳ ಶ್ರಮಸಾಧ್ಯವಾಗಿತ್ತು. ಈ ಶ್ರಮವನ್ನು ತಪ್ಪಿಸಿಕೊಳ್ಳುವದಕ್ಕೋಸ್ಕರ ಜನರು ನಾನಾವಿಧವಾದ ನಾಣ್ಯಗಳನ್ನು ಕಲ್ಪಿಸಿಕೊಂಡು, ಈ ನಾಣ್ಯಗಳಿಗೆ ಬದಲಾಗಿ ತಾವು ಉತ್ಪತ್ತಿಮಾಡಿದ

ಸಸ್ಯಗಳಲ್ಲಿ ಉಂಟಾಗುವ ಪದಾರ್ಥಗಳಲ್ಲಿ ಸೇರುವುದಿಲ್ಲ ; ಆದರೆ ಸಸಿಗಳಲ್ಲಿ ಪದಾರ್ಥಗಳು ಉಂಟಾಗುವುದಕ್ಕೆ ಇವುಗಳು ಇರಬೇಕು. (ಊ) ಸಕ್ಕರೆ ಉಂಟಾಗುವುದಕ್ಕೆ ಪೊಟಾಸಿಯಂ ಸಂಬಂಧ ವಸ್ತುಗಳಿರಬೇಕು ; ಆದರೆ ಸಕ್ಕರೆಯಲ್ಲಿ ಪೊಟಾಸಿಯಂ ಇಲ್ಲ. ಪೊಟಾಸಿಯಮ್ಮಿನ ಹಾಗೆಯೇ ಕಬ್ಬಿಣ, ಕಿಲ್ಪಿಯಂ, ವೆ.ಗ್ನೀಸಿಯಂ ಇವುಗಳು ಉಪಯೋಗವಾಗುತ್ತವೆ.

ಸಸ್ಯಗಳಿಗೆ ಬೇಕಾದ ಹತ್ತು ಮೂಲವಸ್ತುಗಳಲ್ಲಿ ಇಂಗಾಲ, ಜಲಜನಕ, ಅಮ್ಲಜನಕ, ಸಾರಜನಕ, ಗಂಧಕ, ರಂಜಕ ಈ ಆರು ಮೂಲವಸ್ತುಗಳು ಮಾತ್ರ ಅವುಗಳಲ್ಲಿ ಉಂಟಾಗುವ ವಸ್ತುಗಳಲ್ಲಿ ಸೇರುತ್ತವೆಂದು ತಿಳಿಯಬೇಕು.

ನಾಣ್ಯಗಳು:—

ಕವಡೆ, ಕಾಗದಾ, ತಾಂಮ್ರ, ಚಿನ್ನಾ, ಬೆಳ್ಳಿ ಮೊದಲಾದ ಅನೇಕ ಪದಾರ್ಥಗಳನ್ನು ನಾಣ್ಯಗಳಂತೆ ಉಪಯೋಗಿಸುತ್ತಾರೆ. ಇವುಗಳೆಲ್ಲಾ ಸ್ವತಃ ಪ್ರಯೋಜನಕಾರಿಗಳು. ಇವುಗಳು ತಿನ್ನತಕ್ಕ ಪದಾರ್ಥಗಳಲ್ಲ. ಹೊದಿಯತಕ್ಕ ಪದಾರ್ಥಗಳೂ ಅಲ್ಲ. ಅಂಥಾ ಪದಾರ್ಥಗಳನ್ನ ಕೊಂಡುಕೊಳ್ಳುವುದಕ್ಕೆ ಇವುಗಳು ಸಹಾಯ ಮಾಡುವದರಿಂದ ಇವುಗಳಿಗೆ ಒಂದು ಬೆಲೆಯು ಉಂಟಾಗಿದೆಯೇ ಹೊರ್ತು ಹಾಗಿಲ್ಲದ ಪಕ್ಷದಲ್ಲಿ ಇವುಗಳು ಎಂದಿಗೂ ಅಪೇಕ್ಷಣೀಯಗಳಾಗುತ್ತಿರಲಿಲ್ಲ. ನೇಪೋಲಿಯನ್ನು ರಷ್ಯಾದೇಶಕ್ಕೆ ದಂಡೆತ್ತಿ ಹೋಗಿ ಅವರ ರಾಜಧಾನಿಯನ್ನು ಗೆದ್ದು ಕೊಳ್ಳೆಯನ್ನು ಹೊಡೆದು ವಾಪಸು ಬರುವಾಗ್ಯೆ ಪ್ರತಿಯೊಬ್ಬ ಸಿಪಾಯಿಯು ತಾನು ಹೊರುವಷ್ಟು ದ್ರವ್ಯವನ್ನು ತೆಗೆದುಕೊಂಡು ಬರುತ್ತಿದ್ದನು. ಆಗ ಈ ಫ್ರೆಂಚರಿಗೆ ಪ್ರತೀಕಾರವಾಡಬೇಕೆಂದು ರಷ್ಯಾದೇಶದವರು ಇವನ ಹಾದಿಯಲ್ಲಿ ಸಿಕ್ಕತಕ್ಕ ಗ್ರಾಮಗಳಿಗೆ ಬೆಂಕಿಹಾಕಿ, ಸರೋವರಗಳೇ ಮೊದಲಾದ ಜಲಾಶಯಗಳಿಗೆ ವಿಷವನ್ನು ಹಾಕಿ, ನೇಪೋಲಿಯನ್ನಿನ ಮಾರ್ಗವನ್ನು ಬಿಟ್ಟು ಬಹಳ ದೂರಾ ಹೊರಟುಕೊಂಡರು. ಈ ಸೈನ್ಯಕ್ಕೆ ಅನ್ನೋದಕಗಳಿಗೆ ಗತಿಯಿಲ್ಲದಂತಾಯಿತು. ಯಾವ ನೀರು ಕುಡಿದಾಗ್ಯೂ ಅಲ್ಲಿಯೇ ಮೃತಪಡುತ್ತಾ ಬಂದರು. ದಾರಿಯಲ್ಲಿ, ಯಲ್ಲಿ ನೋಡಿದಾಗ್ಯೂ, ಬೂದಿ, ಕೆಂಡ

ಲಾದವುಗಳನ್ನು ಹೊಂದಿದವರು ಮಾತ್ರವೇ ಅಲ್ಲಾ ಯಾರು ಈ ನಾಣ್ಯರೂಪವಾದ ದ್ರವ್ಯವನ್ನು ಹೊಂದಿರುತ್ತಾರೋ ಅವರೂ ಐಶ್ವರ್ಯವಂತರೆನ್ನಿಸಿಕೊಳ್ಳುತ್ತಾರೆ. ದವಸ ಧಾನ್ಯಗಳೇ ಮೊದಲಾದವುಗಳನ್ನು ಹೊಂದಿದವರು ಅವುಗಳನ್ನು ವಿಕ್ರಯಿಸಿ, ನಾಣ್ಯವನ್ನು ಹೊಂದುವದು ಹ್ಯಾಗೆ ಸುಲಭವೋ, ಹಾಗೆ ನಾಣ್ಯವುಳ್ಳವರು ತಮಗೆ ಬೇಕಾದ ಪದಾರ್ಥಗಳನ್ನು ಹೊಂದುವದು ಸುಲಭ. ಈ ನಾಣ್ಯಗಳು ಕ್ರಯವಿಕ್ರಯುಗಳಿಗೆ ಬಹಳ ಸುಲಭವಾದದ್ದೆಂದು ಹೇಳಿದೆಯಷ್ಟೆ. ಇವುಗಳೂಕೂಡ ವ್ಯಾಪಾರಕ್ಕೆ ವಿಶೇಷ ಸುಲಭವಾದದ್ದಲ್ಲವೆಂದು ಭಾವಿಸಿ, ನೋಟುಗಳನ್ನೂ, ಹುಂಡಿಚೀಟುಗಳನ್ನೂ ಏರ್ಪಡಿಸಿ ಇದಾರೆ. ಇವುಗಳಿಂದ ವ್ಯಾಪಾರಕ್ಕೆ ಅಸಾಧಾರಣವಾದ ಪ್ರಯೋಜನವು ಉಂಟಾಗುತ್ತಲಿದೆ

ಪರಿಶಿಷ್ಟ.

ಭೂಗೋಳ.

ತರಗತಿ IV] [ಕಾಲ 45 ನಿಮಿಷಗಳು

ವಿಷಯ	ಬೋಧನ ಕ್ರಮ
ದಕ್ಷಿಣ ಅರ್ಕಾಡು ಸಾಮಾನ್ಯ ವಿಷಯ ೧ ಇದು ಬಂಗಾಳಾಕೊಲ್ಲಿಗೆ ಪಶ್ಚಿಮದಲ್ಲಿರುವುದು. (೧) (೨) (೩) ೨ ಮೇರೆಗಳು, ವಿಸ್ತೀರ್ಣ, ಜನಸಂಖ್ಯೆ	ಪ್ರಶ್ನೆ ಮಾಡಿ ವ್ಯಾಪಿನ ಸಹಾಯದಿಂದ ಬಾಲಕರಿಂದಲೇ ಉತ್ತರವನ್ನು ಹೇಳಿಸುವದು.

ಪದಾರ್ಥಗಳನ್ನು ಮೂರವದೆಂದು ನಿಷ್ಕರ್ಷೆ ಮಾಡಿದರು. ಈ ಸಂಕೇತದಿಂದ ಕ್ರಯ ವಿಕ್ರಯಗಳಿಗೆ ಅತ್ಯಂತ ಸೌಲಭ್ಯವುಂಟಾಯಿತು. ಲೋಕದಲ್ಲಿ ಲಕ್ಷಾಂತರವೃತ್ತಿಗಳು ಇರುತ್ತವೆ. ಎಲ್ಲಾ ವೃತ್ತಿಯನ್ನು ಅವಲಂಬಿಸಿದವರೂ ಕೂಡಾ ತಾವು ಉತ್ಪತ್ತಿಮಾ ಡಿದ ಪದಾರ್ಥಗಳನ್ನು ವಿಕ್ರಯಿಸಿ ದ್ರವ್ಯವನ್ನು ಪಡೆಯುತ್ತಾರೆ ಆ ದ್ರವ್ಯವನ್ನು ಕೊ ಟ್ಟು ತಮಗೆ ಬೇಕಾದ ಪದಾರ್ಥಗಳನ್ನು ಹೊಂದಿರುತ್ತಾರೆ. ಈ ನಾಣ್ಯಗಳ ಉಪ ಯೋಗವು ಕ್ರಯವಿಕ್ರಯಗಳನ್ನು ಸುಲಭವಾಗಿ ಮಾಡತಕ್ಕದ್ದಾಗಿದೆ. ಪೂರ್ವದಲ್ಲಿ ನಾಣ್ಯಕ್ಕೆ ಬದಲಾಗಿ ದನಕರುಗಳನ್ನೂ ಕುರಿಗಳನ್ನೂ ಉಪಯೋಗಿಸುತ್ತಿದ್ದರು ಆಗ ನಮುಷ್ಯರ ಐಶ್ವರ್ಯವನ್ನು ಲೆಕ್ಕ ಮಾಡಬೇಕಾಗಿದ್ದರೆ ಅವನ ದನಕರುಗಳನ್ನೂ ಮಂದೆ ಗಳನ್ನೂ ಗೊತ್ತುಮಾಡಿ ಅದರಿಂದ ಅವನ ಉಪಪನ್ನತೆಯನ್ನು ಗೊತ್ತುಮಾಡುತ್ತಿ ದ್ದರು. ಆದರೆ ದವಸಧಾನ್ಯಗಳು, ದನಕರುಗಳು, ಕುರಿಮೊದಲಾದ ಪ್ರಾಣಿಗಳು, ಇವುಗಳನ್ನೆಲ್ಲಾ ಸಂರಕ್ಷಿಸುವುದೂ, ಭದ್ರವಾಗಿಟ್ಟುಕೊಳ್ಳುವುದೂ ಕಷ್ಟವಾಗುತ್ತಿ ದ್ದವು. ದವಸಧಾನ್ಯಗಳು, ಹುಳಗಳು, ಶೈತ್ಯ ಮೊದಲಾದವುಗಳಿಂದ ಕೆಡುತ್ತಿದ್ದವು. ದನಕರಗಳೇ ಮೊದಲಾದವುಗಳು, ರೋಗಾದಿಗಳಿಂದಲೂ, ಕ್ಷುದ್ರಜಂತುಗಳಿಂದಲೂ ನಷ್ಟವಾಗುತ್ತಿದ್ದವು. ಇದಲ್ಲದೆ ಇವುಗಳನ್ನೆಲ್ಲಾ ನೋಡಿಕೊಳ್ಳ ವುದಕ್ಕೆ ಅಗಾಧ ವಾದ ಕಣಜಗಳೂ ಕೊಟ್ಟಿಗೆಗಳೂ, ಆಳುಕಾಳುಗಳೂ ಬೇಕಾಗುತ್ತಿದ್ದವು. ಕಷ್ಟ ಗಳನ್ನೆಲ್ಲಾ ಪರಿಹಾರ ಮಾಡಿಕೊಳ್ಳುವುದಕ್ಕೋಸ್ಕರ ಜನರು ಲೋಹಗಳಿಗೆ ಬೆಲೆ ಯನ್ನು ಕಲ್ಪಿಸಿ ಅವುಗಳನ್ನು ನಾಣ್ಯಗಳನ್ನಾಗಿ ಮಾಡಿಸಿ ಕ್ರಯವಿಕ್ರಯಗಳಿಗೆ ಉಪ ಯೋಗಿಸುವಂತೆ ಮಾಡಿದರು. ಈ ಲೋಹಗಳಲ್ಲಿ ವಿಶೇಷವಾಗಿ ಸಿಕ್ಕತಕ್ಕವುಗಳಿಗೆ ಕಡಮೆ ಬೆಲೆಯೂ, ಬಹಳ ಅಪೂರ್ವವಾದ ನಾಣ್ಯಗಳಿಗೆ ಹೆಚ್ಚು ಬೆಲೆಯೂ ಏರ್ಪಾಡು ಮಾಡಲ್ಪಟ್ಟಿತು. ಚಿನ್ನವು ಬಹಳ ಅಪೂರ್ವವಾಗಿಯೂ ಬಹಳ ಶ್ರಮದಿಂದ ಸಂಪಾ ದಿಸತಕ್ಕದ್ದಾಗಿಯೂ ಇರುವುದು. ಆದುದರಿಂದ ಚಿನ್ನದ ನಾಣ್ಯಗಳಿಗೆ ವಿಶೇಷ ಬೆಲೆ ಯೂ ಉಂಟಾಯಿತು ಬೆಳ್ಳಿಯು ಇದಕ್ಕಿಂತ ಸ್ವಲ್ಪ ಸುಲಭಸಾಧ್ಯವಾದದ್ದು. ಅದು ದರಿಂದಲೇ ಇದರ ಬೆಲೆಯು ಸ್ವಲ್ಪ ಚಿನ್ನಕ್ಕಿಂತ ಕಡಮೆಯಾಯಿತು. ತಾಮ್ರಮೊದ ಲಾದ ಲೋಹಗಳ ಬೆಲೆಯು ಇದೇ ಕಾರಣದಿಂದ ಬೆಳ್ಳಿಗಿಂತಲೂ ಕಡಮೆಯಾಯಿತು. ಈ ಲೋಹಗಳಲ್ಲೆಲ್ಲಾ ನಾಣ್ಯಗಳನ್ನು ಮಾಡಿ, ಕ್ರಯವಿಕ್ರಯಾದಿಗಳಿಗೆ ಉಪಯೋ ಗಿಸುವರು. ಈಗ ಐಶ್ವರ್ಯವಂತರೆಂದರೆ, ಭೂಮಿ, ಕಾಣಿ, ದವಸಧಾನ್ಯ, ದನಕರು ಮೊದ

ಮುಖ್ಯವಾದ ನದಿಯೆಂದೂ ವೆಲ್ಲಾರು ನದಿಯು ಈ ಜಿಲ್ಲೆ ದಕ್ಷಿಣಕ್ಕೆ ಹರಿಯುವದೆಂದೂ ತಿಳಿಸುವದು.

ಜನಸಂಚಾರಕ್ಕೆ ವರ್ಗಗಳು

(೧) ಮದ್ರಾಸಿನಿಂದ ತಂಜಾವೂರಿಗೆ ಹೋಗುವ ರೈಲುರಸ್ತೆಯು ಈ ಜಿಲ್ಲೆ ದಕ್ಷಿಣವಲ್ಲಿ ಹೋಗಿದೆ.

(೨) ಪಲ್ಲಪ್ಪುವ ಬಳಿ ಇದರ ಶಾಖೆಯು ಪೂರ್ವಕ್ಕೆ ಪುದುಚೇರಿಗೆ ಹೋಗಿದೆ

(೩) ಇನ್ನೊಂದು ಶಾಖೆಯು ವಾಯವ್ಯಕ್ಕೆ ತಿರುಣಾಮಲೆ, ವೇಲೂರು, ಗುಂತಕಲ್ಲು ಪಟ್ಟಣಕ್ಕೂ ಹೋಗಿದೆ.

೪ ಹವಾ, ಬೆಳೆಗಳು

ಸಮುದ್ರತೀರ ವಿನಹ ಇತರ ಭಾಗಗಳು ಅನಾರೋಗ್ಯಸ್ಥಳಗಳು. ಮತ್ತು ಬೇಸಿಗೆಯಲ್ಲಿ ಶಖೆ ಹೆಚ್ಚು. ಚಳಿಗಾಲವಲ್ಲ ಚಳಿ ಹೆಚ್ಚು. ಭತ್ತ, ನೀಲಿ, ಎಣ್ಣೆಕಾಳು, ರಾಗಿ, ಜೋಳ, ಕಬ್ಬು.

೫ ಕೈಗಾರಿಕೆ

ನೀಲಿ, ಉಪ್ಪು, ಎಣ್ಣೆ, ಚಾಪೆಗಳೂ, ಜವಳಿ, ತೆಂಗಿನನಾರು ತಯಾರ್ಮಾಡುವರು ವ್ಯವಸಾಯವನ್ನು ಚೆನ್ನಾಗಿ ಮಾಡುವರು. ದನಗಳನ್ನೂ ಸಾಕುತ್ತಾರೆ. ವ್ಯಾಪಾರ ಹೆಚ್ಚು.

೬ ಪಟ್ಟಣಗಳು, ಪ್ರಸಿದ್ಧ

(೧) ಕಡಲೂರು ರಾಜಧಾನಿ, ಕಲೆಕ್ಟರು ಯೂರೋಪಿಯನ್ ಅಧಿಕಾರಿಗಳು ಇರುವರು. ವ್ಯಾಪಾರದಬಂದರು.

(೨) ಚಿದಂಬರವು ಪೂರ್ವದಲ್ಲಿ ಕಟ್ಟಿದ ಸುಂದರವಾದ ಪಾರ್ವತಿ ಪರಮೇಶ್ವರರ ದೇವಾಲಯದಿಂದ ಪ್ರಸಿದ್ಧ.

ಪಡುವದು. ಬೇರೆಯವಾಗಿರುವ ಪಠದಲ್ಲಿ ಗುರ್ತುಮಾಡಬೇಕು.

ಇದನ್ನು ಬಾಲಕರಿಗೆ ವ್ಯಾಪನಲ್ಲಿ ತೋರಿಸಿ ಅವರಿಂದಲೂ ಹೇಳಿಸುವದು. ಮತ್ತು ಈ ಮೂರು ದಾರಿಗಳನ್ನು ಬೇರೆಯಾಗಿ ಬರೆದಿರುವ ವ್ಯಾಪಿನಲ್ಲಿ ಗುರ್ತುಮಾಡಬೇಕು, ಮತ್ತು ಹಲಗೆಯಮೇಲೂ ಬರೆದು ಪುನಃ ೨—೩ ಜನ ವಿದ್ಯಾರ್ಥಿಗಳಿಂದ ಹೇಳಿಸುವದು.

ವ್ಯಾಪಿನಸಹಾಯದಿಂದ ತಿಳಿಸುವದು ಮತ್ತು ಉಷ್ಣವಲಯದಲ್ಲಿ ಬೆಳೆಯುವ ಬೆಳೆಗಳನ್ನು ಚರ್ಚಿಸಿ ಇಲ್ಲಿಯ ಬೆಳೆಗಳನ್ನೂ ಪಠದ ಸಹಾಯದಿಂದಲೇ ಹೇಳಿಸುವದು ಮತ್ತು ಇದು ಇರುವ ವಲಯವನ್ನು ತಿಳಿಸುವದು.

ಇದನ್ನು ತಿಳಿಸಿ ಬಾಲಕರಿಂದಲೂ ಹೇಳಿಸುವದು. ಮತ್ತು ಭೂಸ್ವರೂಪದಿಂದ ಮಂದಟ್ಟುಮಾಡಿ ಹಲಿಗೆಯ ಮೇಲೆ ಬರೆಯುವದು.

ಈ ಪಟ್ಟಣಗಳನ್ನು ವ್ಯಾಪಿನಲ್ಲಿ ಬಾಲಕರಿಗೆ ತೋರಿಸಿ ಅವುಗಳ ಪ್ರಸಿದ್ಧಿಯನ್ನು ತಿಳಿಸಿ ಹಲಿಗೆಯಮೇಲೆ ಬರೆದು ೨—೩ ಮಂದಿ ಬಾಲಕರಿಂದ ಹೇಳಿಸುವದು.

(೧)

ಪೂರ್ವಕ್ಕೆ—ಬಂಗಾಳಾಕೊಲ್ಲಿ,
ದಕ್ಷಿಣಕ್ಕೆ—ತಂಜಾವೂರು, ತಿರುಚನಾಪಲ್ಲಿ ಜಿಲ್ಲೆಗಳು.
ಉತ್ತರಕ್ಕೆ—ಚೆಂಗಲ್ಪಟ್ಟು, ಉತ್ತರ ಆರ್ಕಾಟುಜಿಲ್ಲೆಗಳು.
ಪಶ್ಚಿಮಕ್ಕೆ—ಶಾಲ್ಯದ ಜಿಲ್ಲೆಯೂ,

(೦)

ಸುಮಾರು ೫೦೦೦ ಚದರಮೈಲಿಗಳು ಮೈಸೂರು ದೇಶದ ವಿಸ್ತೀರ್ಣದಲ್ಲಿ ಸುಮಾರು ೫॥ ಭಾಗದಲ್ಲಿ ಒಂದುಭಾಗವಿರುವುದು.

(೩)

ಜನಗಳ ಸಂಖ್ಯೆಯು ೨೧॥ ಲಕ್ಷವು, ಸುಮಾರು ಮೈಸೂರು ದೇಶದ ಜನಸಂಖ್ಯೆ ೬॥ಯಲ್ಲಿ ಒಂದು ಭಾಗವಾಗಿರುವದು.

೩ ಭೂಸ್ವರೂಪ

ಪಶ್ಚಿಮ ವಾಯವ್ಯಭಾಗಗಳು ಗುಡ್ಡಗಳಿಂದ ಕೂಡಿರುವದು. ಈ ಭಾಗದಲ್ಲಿ ಬೆಟ್ಟಗಳು ಇಲ್ಲದಿದ್ದರೆ ಭೂಮಿಯು ತಟ್ಟೆಯಾಗಿರುತ್ತಿತ್ತು.

ಮುಖ್ಯವಾದ ಬೆಟ್ಟಗಳು

ಕಲ್‌ರೆಯ್ಯ್, ಜವಾಜಿ, ತಿರುಣಾಮಲೆ (ಇವು ಪೂರ್ವಘಟ್ಟದಲ್ಲೇ ಇರುವವು)

ಪಶ್ಚಿಮವಾಯುವ್ಯದಲ್ಲಿ ಬಿದ್ದ ನೀರೆಲ್ಲಾ ಪೊನ್ನೇರ್ ಎಂಬ ನದಿಯಾಗಿ ಬಂಗಾಳಕೊಲ್ಲಿಗೆ ಬೀಳುವದು. ಮತ್ತು ಕಾವೇರಿನದಿಯ ಶಾಖೆಯಾದ ಕೊಲ್ಲಿಡ ಎಂಬುದೇ

ವ್ಯಾಪಿನ ಸಹಾಯದಿಂದ ಹೇಳಿಸಿ ಇಬ್ಬರು ಮೂವರಿಂದ ಪುನಃ ಹೇಳಿಸುವದು. ಈರೀತಿ ಮಂದಟ್ಟಾಗುವಂತೆ ಮಾಡಿ ಹಲಗೆಯ ಮೇಲೆ ಬರೆಯುವದು.

ಭೂಪಠದಲ್ಲಿ ಮೈಸೂರು ಸಂಸ್ಥಾನಕ್ಕೆ ಹೋಲಿಸುವದರಿಂದ ಮೈಸೂರು, ಮತ್ತು ದಕ್ಷಿಣಆರ್ಕಾಟಿನ ವಿಸ್ತೀರ್ಣವನ್ನು ಅವರಿಂದಲೇ ಹೇಳಿಸಿ ಹಲಗೆಯಮೇಲೆ ಬರೆಯುವದು.

ಮೈಸೂರು ಸಂಸ್ಥಾನದ ಪ್ರಜಾಸಂಖ್ಯೆಯನ್ನು ಪ್ರಶ್ನೆ ಮೂಲಕ ಹೇಳಿಸಿ ಅನಂತರ ಇದನ್ನು ತಿಳಿಸಿ ಹಲಗೆಯಮೇಲೆ ಬರೆಯುವದು.

ಭೂಪಠದಲ್ಲಿ ಈ ಭಾಗಗಳನ್ನು ಬಾಲಕರಿಗೆ ತೋರಿಸಿ ಇಲ್ಲಿ ಹಬ್ಬಿರುವ ಬೆಟ್ಟದ ಸಾಲಿಗೆ ಇರುವ ಹೆಸರನ್ನು ತಿಳಿಸುವದು. ಹಲಗೆಯಮೇಲೆ ಬರೆಯುವದು.

ಇವುಗಳನ್ನು ಭೂಪಠದಲ್ಲಿ ತೋರಿಸಿ ಹಲಗೆಯಮೇಲೆ ಬರೆಯುವದು ಬೇರೆಯಾಗಿರುವ ಭೂಪಠದಲ್ಲಿ ಇವೆನ್ನು ಗುರ್ತುಮಾಡಬೇಕು.

ಪ್ರತಿನದಿಗಳನ್ನೂ ವ್ಯಾಪಿನಲ್ಲಿ ತೋರಿಸಿಕೊಟ್ಟು ಈ ವಿಷಯವನ್ನು ತಿಳಿಸಿ ಕೊಳ್ಳಡವೆಂಬುದು ಮುಖ್ಯವಾಗಿ ಈ ಜಿಲ್ಲೆಗೆ ಆಧಾರವಾದುದೆಂದು ತಿಳಿಸಿ ಮಂದಟ್ಟುಮಾ

ಅನಂತರ ಅಲಂಕರಿಸಲ್ಪಟ್ಟಿದ್ದ ಸ್ಕೂಲ್‌ಕಟ್ಟಡದಲ್ಲಿ ಸಭೆಸೇರಿತು. ಪಾಠಶಾಲಾಧ್ಯಕ್ಷರೇ ಮೊದಲಾದ ವೈದಿಕಸಮಾಜನಗಳು, ಸ್ಕೂಲ್ ಕಮಿಟಿಮೆಂಬರುಗಳು, ಸಭೆಯನ್ನಲಂಕರಿಸಿದ್ದರು. ಈ ಸ್ಕೂಲ್ ಬಾಲಕರು ಗರಲ್‌ಸ್ಕೂಲ್ ಬಾಲಕಿಯರು ಮತ್ತು ಎಲ್ಲಾ ಉಪಾಧ್ಯಾಯರುಗಳು ನೆರೆದಿದ್ದರು. ಸಭಾಸದರ ಕೋರಿಕೆಯುಮೇರೆ ಮಾ|| ರಾ|| ಬಾಬೂರಾವ್ ಬಿ. ಎ ಯವರು ಅಗ್ರಾಸನಾಧಿಪತ್ಯವನ್ನು ವಹಿಸಿದರು.

ಡೆಪ್ಯುಟಿಇನ್‌ಸ್ಪೆಕ್ಟರ್ ಮಾ|| ರಾ|| ಎಂ. ಶ್ರೀನಿವಾಸರಾವ್ ಬಿ. ಎ. ಯವರ ಅಪ್ಪಣೆಮೇರೆ ಸ್ಕೂಲ್ ರಿಪೋರ್ಟ್ ಓದಲ್ಪಟ್ಟಿತು. ಅನಂತರ ಸಭಿಕರಿಗೆ ಕರ್ಣಾರ್ನಂದವಾಗುವಂತೆ ಬಾಲಕರು ಮತ್ತು ಬಾಲಕಿಯರು ಗಾನಮಾಡಿದರು. ಮಾ|| ರಾ|| ಡೆಪ್ಯುಟಿ ಇನ್‌ಸ್ಪೆಕ್ಟರವರು ಲೋವರ್‌ಸೆಕೆಂಡರೀ ಪ್ಯಾಸ್‌ಮಾಡಿದವರೇ ಮೊದಲಾದ ಸ್ಕೂಲ್ ವಿದ್ಯಾರ್ಥಿಗಳಿಗೆ ಬಹುಮಾನ ಪುಸ್ತಕಗಳನ್ನು ಅಗ್ರಾಸನಾಧಿಪತಿಗಳ ಸ್ವಹಸ್ತದಿಂದಲೇ ಕೊಡಿಸಿದರು.

ಅಗ್ರಾಸನಾಧಿಪತಿಗಳು ಈಗ ಓದಿದ ರಿಪೋರ್ಟಿನಿಂದ ಈ ಸ್ಕೂಲ್ ಅಭಿವೃದ್ಧಿಸ್ಥಿತಿಯಲ್ಲಿರುತ್ತೆಂದು ಗೊತ್ತಾಗುತ್ತೆ. ವರ್ತಕರಿಗೂ ಕೃಷಿಜೀವಿಗಳಿಗೂ ವಿದ್ಯಾವ್ಯಾಸಂಗವು ಅವಶ್ಯಕವಾದುದರಿಂದ ಇವರು ತಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸುವದರ ಮೂಲಕ ಬಾಲಕರ ಸಂಖ್ಯೆಯನ್ನು ಹೆಚ್ಚಿಸಿ ಸ್ಕೂಲನ್ನು ಇನ್ನೂ ಉತ್ತಮ ಸ್ಥಿತಿಗೆ ತಂದಾರೆಂದು ನಂಬುತ್ತೇನೆ ಇದೇ ಮೊದಲಾದ ವಾಕ್ಯಗಳಿಂದ ಸಭಿಕರ ಮನಸ್ಸಿನಲ್ಲಿ ಈ ವಿಷಯವು ನೆಲೆಯಾಗಿ ನಿಲ್ಲುವಂತೆ ಉಪನ್ಯಾಸಮಾಡಿದರು.

ಅನಂತರ ಮಾ|| ರಾ|| ಡೆಪ್ಯುಟಿಇನ್‌ಸ್ಪೆಕ್ಟರವರು ಗರಲ್‌ಸ್ಕೂಲಿಗೆ ಅನುಕೂಲವಾದ ಕಟ್ಟಡ ಇಲ್ಲದಿರುವದರಿಂದ ಸ್ಕೂಲ್‌ಮುಚ್ಚಿತ್ತೆಂದು ತಿಳಿಸಲು ಬಹಳ ವಿಷಾದಿಸುತ್ತೇನೆ. ಗ್ರಾಮಸ್ಥರು ಕಟ್ಟಡವನ್ನು ಒದಗಿಸಿಕೊಟ್ಟೊಡನೆ ಸ್ಕೂಲ್ಮಾಡಲ್ಪಡುತ್ತೆಂದು ಅಪ್ಪಣೆಕೊಡಿಸಿದರು.

ಸಭಾಸದರು ಮಾ|| ರಾ|| ಅಸಿಸ್ಟೆಂಟ್‌ಕವಿಷನರವರಿಗೂ ಮಾ|| ರಾ|| ಡೆಪ್ಯುಟಿಇನ್‌ಸ್ಪೆಕ್ಟರವರಿಗೂ ಮಾ|| ರಾ|| ಅಮಲ್ದಾರ್ರವರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಿ ಕರತಾಡನವನ್ನು ಮಾಡಿದರು.

ಗಂಧಪುಷ್ಪತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟವು. ಸಭೆಯು ಉಪಸಂಹರಿಸಲ್ಪಟ್ಟಿತು.

ಸಾಯಂಕಾಲ ೬ ಗಂಟೆಗೆ ಅದೇ ಕಟ್ಟಡದಲ್ಲಿ ಪುನಃ ಸಭೆಸೇರಲು ಯಂ. ಡಿ.

(೩) ಪೋರ್ಟುನೋವೊ-ಇಲ್ಲಿ ವೇಲಾರು ನದಿ ಬಂಗಾಳಾಕೊಲ್ಲಿಗೆ ಸೇರುತ್ತದೆ. ರೈಲ್ವೇಸ್ಟೇರ್ಷನ್ನುಳ್ಳದ್ದು. ಇದಕ್ಕೂ ಲಂಕಾದ್ವೀಪಕ್ಕೂ ವ್ಯಾಪಾರ ನಡೆಯುತ್ತದೆ.

(೪) ತಿರುಣಾಮಲೆ-ಯುದ್ಧನಡೆದಸ್ಥಳ

(೫) ವಿಲ್ಲುಪುರ-ಭಾರಿ ರೈಲ್ವೇಸ್ಟೇರ್ಷನ್ ಇದೆ.

(೬) ಪುದುಚೆರಿ-ಇಂಡಿಯಾದಲ್ಲಿ ಫ್ರೆಂಚರಿಗೆ ಮುಖ್ಯಸ್ಥಳ.

ರಾಜ್ಯಭಾರ— ಮದ್ರಾಸಾಧಿಪತ್ಯದ ಗವರ್ನರ್ ಆಳಿಕೆಯಲ್ಲಿದೆ. ಈ ಆಧಿಪತ್ಯವು ೨೨ ಜಿಲ್ಲೆಗಳಾಗಿ ವಿಭಾಗಿಸಿರುವದು. ಇವು ಗವರ್ನರವರ ವಿಚಾರಣೆಯಲ್ಲಿದೆ.

ಮತ್ತು ಬೇರೆಯಾಗಿ ಬರೆದಿರುವ ಪಠದಲ್ಲಿ ಈ ಪಟ್ಟಣಗಳನ್ನು ಗುರ್ತುಮಾಡಿ ಬಾಲಕರಿಗೆ ವ್ಯಾಪಿನಲ್ಲೂ ಮತ್ತು ಇದರಲ್ಲೂ ಬಹಳ ವ್ಯತ್ಯಾಸ ಬರದಂತೆ ಬರೆದು ತೋರಿಸಬೇಕು.

ವ್ಯಾಪಾರವೂ ಚೆನ್ನಾಗಿ ನಡೆಯುತ್ತದೆ ರಾಜ್ಯಭಾರ ಚೆನ್ನಾಗಿದೆ. ಸಮುದ್ರತೀರಸ್ಥಳ ಎಂದು ತಿಳಿಸಬೇಕು. ಮತ್ತು ೨೨ ಜಿಲ್ಲೆಗಳನ್ನು ಹೇಳಿಸಬೇಕು.

ಪುನರಾವರ್ತನೆ ಮಾಡಬೇಕು.

ಎಚ್. ಸೂರ್ಯನಾರಣಪ್ಪ.

ಅ॥ ಮೊಸ್ಟರು ನಹರ್‌ತಾಲ್ಲೂಕು

ಕನ್ನಡಾಸ್ಕೂಲ್ ಮೈಸೂರು.

ತಲಕಾಡು ಸ್ಕೂಲ್.

ಪಾರಿತೋಷಕಮಹೋತ್ಸವವು.

ಈ ಉತ್ಸವವು ಕಳೆದ ಮಾರ್ಚಿ ೧೭ನೇ ತಾರೀಖಿನದಿವಸ ಅತಿವಿಜೃಂಭಣೆಯಿಂದ ನಡೆಯಿತು. ಪ್ಲೇಗ್‌ಅಸಿಸ್ಟೆಂಟ್ ಕವಿಷನರ್ ಪು॥ ರಾ॥ ಬಾಬೂರಾವ್ ಬಿ. ಎ. ಯವರು ಮತ್ತು ಡೆಪ್ಯೂಟಿಇನ್‌ಸ್ಪೆಕ್ಟರ್ ಪು॥ ರಾ॥ ಎಂ. ಶ್ರೀನಿವಾಸರಾವ್ ಬಿ. ಎ. ಯವರು, ಮತ್ತು ಈ ತಾಲ್ಲೂಕು ಅಮಲ್ದಾರ್ ವ ॥ ರಾ॥ ಸುಂದರರಾಜಯ್ಯಂಗಾರ್ಯರವರು ದಯವಮಾಡಿಸಿದ್ದರು. ಇವರುಗಳ ಆಗಮನ ಕಾಲದಲ್ಲಿ ಸ್ಕೂಲ್ ಕಟ್ಟಡದ ಹೊರಭಾಗದಲ್ಲಿ ಬಾಲಕರು ನೇತ್ರಾನಂದಕರವಾಗಿ ಅಂಗಸಾಧನೆಗಳನ್ನು ಮಾಡುತ್ತಿದ್ದರು.

ಅವಕಾಶ ದೊರೆಯುವಿಲ್ಲ. ಈ ಕಾರಣದಿಂದ ಈಗ Vನೇ ತರಗತಿ ವಿದ್ಯಾರ್ಥಿಗಳ ಸಂಖ್ಯೆಯು ವ ಸಾರುವಾತ್ರ ಇರುತ್ತೆ.

೨೦೦೦ ಪ್ರಜೆಗಳ ಪೈ ಈ ಊರಿನಲ್ಲಿ ವಿದ್ಯಾಭ್ಯಾಸಕ್ಕೆ ಅರ್ಹರಾದವರು ೨೦೦ ಮಂದಿ ಇರುತ್ತಾರೆ. ಇವರಲ್ಲಿ ೬೦ಮಂದಿ ಮಾತ್ರ ಪಾಠಶಾಲೆಗೆ ಬರುತ್ತಾರೆ. ಇದರಿಂದ ವಿದ್ಯಾಭ್ಯಾಸಕ್ಕೆ ಅರ್ಹರಾದವರಲ್ಲಿ ಶೇಕಡ ೩೦ಮಂದಿ ಮಾತ್ರ ವಿದ್ಯಾವ್ಯಾಸಂಗ ಮಾಡುತ್ತಿರುತ್ತಾರೆಂದು ಹೇಳಲು ವಿಷಾದಿಸುತ್ತೇವೆ.

ಈ ಸ್ಕೂಲಿನಲ್ಲಿ ಕೆಲಸಮಾಡುವ ಎಲ್ಲಾ ಮ್ಯಾಸ್ಟರುಗಳು ತಮ್ಮತಮ್ಮ ಕೆಲಸವನ್ನು ಮುತವರ್ಜಿಯಿಂದಲೂ ವಿಚಕ್ಷಣೆಯಿಂದಲೂ ಮಾಡಿರುವದರಿಂದ ಈ ಸ್ಕೂಲ್ ಉತ್ತಮತರದ ಸ್ಕೂಲ್‌ಗಳಲ್ಲಿ ಒಂದಾಗಿರುತ್ತೆಂಬ ಅಂಶವನ್ನು ಕಳೆದ ಸಾಲಿನ ಲೋವರ್‌ಸೆಕೆಂಡರಿ ಪರಿಕ್ಷೆಯ ಫಲಿತಾಂಶವು ಸೂಚಿಸುತ್ತದೆ.

ನೂತನವಿದ್ಯಾಭ್ಯಾಸದ ಕ್ರಮದಂತೆ ವಸ್ತುಪಾಠ, ಕಿಂಡರ್‌ಗಾರ್ಟ್ನ್‌ಗಳನ್ನು ಬೋಧಿಸುವದಕ್ಕೆ ಬೇಕಾದ ಉಪಕರಣಗಳನ್ನು ಸಂಗ್ರಹಿಸುವ ವಿಷಯಗಳಲ್ಲಿಯೂ ಬಾಲಕರನ್ನು ಜವಾಬಿಸುವ ವಿಷಯದಲ್ಲಿಯೂ ಸ್ಕೂಲ್ ಕಮಿಟಿ ಮೆಂಬರು ಮೊದಲಾದ ಗಾ್ರಮಸ್ಥರು ಮುಂತಾದವರೂ ಸಹಾಯವಾಡುತ್ತಾರೆಂದು ನಿರೀಕ್ಷಿಸುತ್ತೇನೆ.

ಜಿ. ರಾಮಯ್ಯ,
ತಲಕಾಡುಸ್ಕೂಲ, ಆಕ್ಟಿಂಗ್ ಹೆಡ್‌ಮ್ಯಾಸ್ಟರ್
ತಿರ್ಮಕೂಡ್ಲುನರಸೀಪುರದ ತಾಲ್ಲೂಕು.

ಕಥೆ.

ಹೆದರಿಕೆ ಇಲ್ಲದ ಹುಡುಗ.

ಏದುವರ್ಷ ವಯಸ್ಸಿನ ಒಬ್ಬ ಚಿಕ್ಕಹುಡುಗನು ಬೇರೊಂದು ಊರಿನಲ್ಲಿದ್ದ ತನ್ನ ಅಜ್ಜಿಯ ಮನೆಗೆ ಹೋಗಿದ್ದನು. ಒಂದು ದಿವಸ ಆಡಲಿಕ್ಕೆ ಹೋದವನು ಎಷ್ಟು ಹೊತ್ತಾದರೂ ಬರಲೇ ಇಲ್ಲ. ಮನೆಯ ದಾರಿ ತಪ್ಪಿ ಎಲ್ಲೆಲ್ಲೋ ಅಲೆಯುತಲಿದ್ದನು. ಮಗುವು ಬಹಳ ಹೊತ್ತಾದರೂ ಬಾರದೆ ಇದ್ದುದರಿಂದ ಮನೆಯವರೆಲ್ಲರೂ ಗಾಬರಿಯಾಗಿ ಎಲ್ಲೆಲ್ಲೂ ಹುಡುಕುವುದಕ್ಕೆ ಮೊದಲುಮಾಡಿದರು ಎಲ್ಲರಿಗೂ ಹುಡಿಕಿ ಹುಡಿಕಿ ಬೇಜಾರಾಗಿರಲು ಕೊನೆಗೆ ಎಷ್ಟೋಹೊತ್ತಿನ ಮೇಲೆ, ಜೋರಾಗಿ ಹರಿಯುತಲಿದ್ದ ಒಂದು ಹೊಳೆಯ ದಡದಮೇಲೆ, ದಾಟಲು ಸ್ವಲ್ಪವೂ ಅಂಜಿಕೆ ಇಲ್ಲದೆ ನಿಂತಿದ್ದುದನ್ನು

ಕೃಷ್ಣಸ್ವಾಮಯ್ಯಂಗಾರ್ಯರವರು ಮ್ಯಾಜಿಕ್‌ಲ್ಯಾಂಟರ್ನ್ ಎಂಬ ತಮ್ಮ ವಿದ್ಯಾಸಾಮರ್ಥ್ಯದಲ್ಲಿ ಸ್ವಲ್ಪಭಾಗವನ್ನು ವ್ಯಕ್ತಪಡಿಸಿದರು. ಯಂತ್ರಸಹಾಯದಿಂದ ಬಿಳಿಬಟ್ಟೆಯಮೇಲೆ ಚರಿತ್ರೆ, ಭೂಗೋಳ, ವಸ್ತುಪಾಠಮೊದಲಾದವುಗಳಲ್ಲಿ ಹೇಳಿರುವ ವಿಷಯಗಳನ್ನು ದೃಢಪಡಿಸಿಕೊಳ್ಳಲಿಕ್ಕೂ ಸುಲಭವಾಗಿ ಜ್ಞಾಪಕವಿಟ್ಟುಕೊಳ್ಳಲಿಕ್ಕೂ ಅವಶ್ಯಕವಾಗಿರುವ ಅರಮನೆ, ದೇವಸ್ಥಾನ, ಪಟ್ಟಣ, ಬೆಟ್ಟ, ನದಿ, ಜಲಪಾತ ಮತ್ತು ಪ್ರಾಣಿಗಳ ಚಿತ್ರಪಟಗಳನ್ನು ತೋರಿಸಿದರು. ಇದನ್ನು ನೋಡಿ ಸಭಾಸದರು ವಿದ್ಯಾರ್ಥಿಗಳು ಆತ್ಯಾಶ್ಚರ್ಯಪಟ್ಟರು

ಸ್ಕೂಲ್‌ರಿಪೋರ್ಟ್.

ಈ ಸ್ಕೂಲಿನಲ್ಲಿ ೧೮೯೬—೯೭ನೇ ಇಸವಿಯಲ್ಲಿ ಬಾಲಕರ ಸರಾಸರಿ ರಿಜಿಸ್ಟರ್ ದಾಖಲೆ ೬೪; ದಿನವಹಿ ಸರಾಸರಿ ಸಂಖ್ಯೆ ೩೨; ಲೋವರ್‌ಸೆಕೆಂಡರಿ ಪರೀಕ್ಷೆಗೆ ಹೋಗಿದ್ದವರು ಮೂರುಮಂದಿ, ಪ್ಯಾಸಾದವರು ಇಬ್ಬರು; ೧೮೯೭—೯೮ನೇ ಇಸವಿಯಲ್ಲಿ ರಿಜಿಸ್ಟರ್‌ದಾಖಲೆ ೬೬; ದಿನವಹಿ ಸರಾಸರಿ ೪೩; ಲೋವರ್‌ಸೆಕೆಂಡರಿ ಪರೀಕ್ಷೆಗೆ ಹೋಗಿದ್ದವರು ೪ ಮಂದಿ; ಇವರಲ್ಲಿ ಒಬ್ಬ Iನೇ ತರಗತಿಯಲ್ಲಿಯೂ ೬ ಮಂದಿ IIನೇ ತರಗತಿಯಲ್ಲಿಯೂ ಉತ್ತೀರ್ಣರಾದರು.

೧೮೯೬—೯೭ನೆ ಇಸವಿಗಿಂತ ೯೭—೯೮ನೇ ಇಸವಿಯಲ್ಲಿ ಸರಾಸರಿ ಹಾಜರಿಸಂಖ್ಯೆ ೧೧ ಹೆಚ್ಚಿರುವದಲ್ಲದೆ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಸಂಖ್ಯೆ ೫ ಹೆಚ್ಚಿತು. ಸರಾಸರಿ ರಿಜಿಸ್ಟರ್‌ದಾಖಲೆ ಸಂಖ್ಯೆಯು ಸ್ವಲ್ಪ ಕಮ್ಮಿಯಾಗಲು ಸ್ಕೂಲಿಗೆ ಕ್ರಮವಾಗಿ ಬಾರದ ಬಾಲಕರನ್ನು ವಜಾಮಾಡಿದ್ದೇ ಕಾರಣವಾಗಿರುತ್ತೆ.

ಈ ವರುಷ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರಲ್ಲಿ ಬ್ರಾಹ್ಮಣರು ೫ ಮಂದಿ; ಲಿಂಗಾಯತರಲ್ಲಿ ಒಬ್ಬ; ಗೌಡರಲ್ಲಿ ಒಬನು; ಒಂದನೇ ತರಗತಿಯಲ್ಲಿ ಪ್ಯಾಸಾದದ್ದು ಶ್ಲಾಘ್ಯತರವಾದದ್ದೇ ಸರಿ.

ವರ್ತಕರಲ್ಲಿ ಅನೇಕರು ತಮ್ಮ ಮಕ್ಕಳು ಪ್ರೈಮರಿಡಿಪ್ಲೊಮ ಅಂದರೆ IIIನೇ ಕ್ಲಾಸಿಗೆ ಬಂದೊಡನೆಯೆ ಸ್ಕೂಲಿನಿಂದ ಬಿಡಿಸುತ್ತಾರೆ. ಗೌಡಗಳಲ್ಲಿ ಸ್ಕೂಲಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆಯು ಆ ಜನಾಂಗದ ಪ್ರಜೆಗಳ ಸಂಖ್ಯೆಗೆ ಹೋಲಿಸಿ ನೋಡಿದರೆ ಕೇವಲ ವಿಷಾದಕರವಾಗುತ್ತೆ. IIIನೆ ತರಗತಿಯಿಂದ ಮೇಲಕ್ಕೆ ವಿದ್ಯಾಭ್ಯಾಸಮಾಡಿಸದೇ ಇರುವದರಿಂದಲೇ ಕಳೆದ ಯಗಾಬ್ದದಿನೇಮಕ್ಕನಲ್ಲಿ IVನೇ ತರಗತಿಯನ್ನಿಡಲು

ವಿದ್ಯಾದಾಯಿನಿ

ಭಾಗ ೭.] ಜುಲೈ ೧೯೨೯. [ಸಂಚಿಕೆ ೬.

ಎಡಿಟರವರ ನೋಟ್ಸ್.

ಪದೇಪದೇ ಪರೀಕ್ಷೆಗಳಿಗೆ ಸಿದ್ಧವಾಡಿಕೊಳ್ಳುವುದು ವಿದ್ಯಾಭ್ಯಾಸವಾಡುವವರಿಗೆ ಬಹಳ ಕ್ಲೇಶಕರವೆಂದು ಹಿಂದಿನಸಂಚಿಕೆಗಳೊಂದರಲ್ಲಿ ತಿಳಿಸಿದ್ದೆವಷ್ಟೆ. ಈ ಕಾರಣದಿಂದ ಮದರಾಸಿನಲ್ಲಿರುವ ವಿದ್ಯಾಭಿಮಾನಿಗಳಲ್ಲನೇಕರು ಈಗ ನಡೆಯುತಿರುವಲೋವರ್ ಶೆಕೆಂಡರಿ ಪರೀಕ್ಷೆಯು ಎಷ್ಟುಮಟ್ಟಿಗೆ ಅವಶ್ಯಕವೆಂದು ಯೋಚಿಸುತಿರುವರೆಂದೂ ತಿಳಿಸಿದ್ದೆವು. ಈಗ ಕೆಲವು ದಿವಸಗಳಿಂದೀಚೆಗೆ ನಾಯುವ್ಯೆಪಾಂತ್ಯದಲ್ಲೂ ಇದೇರೀತಿಯಾದ ಅಭಿಪ್ರಾಯವು ನೆಲೆಗೊಳ್ಳುತಿದೆ. ಅಲ್ಲಿನ ಸರ್ಕಾರದವರು ಈಗ ಆ ದೇಶದಲ್ಲಿ ನಡೆಯುತಿರುವ ಪರೀಕ್ಷೆಗಳ ವಿಷಯವನ್ನು ಕುರಿತು, ಚರ್ಚಿಸಿ ಮುಂದೆ ಏನುಮಾಡಬೇಕೆಂದು ನಿರ್ಣಯಿಸುವುದಕ್ಕೆ ಕೆಲವು ಜನ ವಿದ್ವಾಂಸರನ್ನು ಸೇರಿಸಿದಾರೆ. ಇವರೆಲ್ಲ ಸೇರಿ ಆ ವಿಷಯವಾಗಿ ಪರ್ಯಾಲೋಚಿಸುತ್ತಿದಾರೆಂದು ತಿಳಿದುಬಂದಿದೆ. ನೂತನವಾದ ವಿದ್ಯಾಭ್ಯಾಸವು ರೂಢಿಗೆ ಬಂದಿಂದೀಚೆಗೆ ಪರೀಕ್ಷೆಗಳಿಗೆ ಪ್ರಾಮುಖ್ಯತೆಯು ಹೆಚ್ಚಾಗಿದೆ. ವಿದ್ಯಾಭ್ಯಾಸದ ಉದ್ದೇಶವು ಸರಿಯಾಗಿ ನೆರವೇರಿದೆಯೋ ಎಂದು ನಿರ್ಣಯಿಸುವುದಕ್ಕೆ ಪರೀಕ್ಷೆಗಳಿ ಅವಶ್ಯಕವೇನೋಸರಿ ಆದರೆ ಇವುಗಳು ಮಾತ್ರವೇ ಸಾಲದು. ಇವುಗಳನ್ನೇ ಮುಖ್ಯವಾಗಿ ಎಣಿಸುತಬಂದರೆ ಕ್ರಮೇಣ ಉಪಾಧ್ಯಾಯರೆ ತಮ್ಮ ಕೆಲಸವನ್ನು ಹೇಗೆ ಮಾಡಬೇಕೋ ಹಾಗೆ ಮಾಡದೆ ಪರೀಕ್ಷೆಯಲ್ಲಿ ತಮ್ಮ ಶಿಷ್ಯರು ತೇರ್ಗಡೆಯಾಗುವುದೊಂದನ್ನೇ ಮುಖ್ಯವಾಗಿ ತಿಳಿಯುವಂತಾಗುವುದು. ಇದರಿಂದ ಕುರುಡುಪಾಠಮಾಡಿಸುವುದು ಮುಂತಾದ ದುರಭ್ಯಾಸಗಳು ಪ್ರಬಲಗಳಾಗುವುವು. ಆದುದರಿಂದ ಪರೀಕ್ಷೆಗಳ ಪ್ರಯೋಜನವನ್ನು ಕುರಿತು ಹೀಗೆ ಪರ್ಯಾಲೋಚಿಸುವುದಕ್ಕೆ ಆರಂಭಿಸಿರುವುದು ನಮ್ಮ ದೇಶದ ವಿದ್ಯಾಭ್ಯಾಸಕ್ರಮವು ಕೆಡದಿರುವುದಕ್ಕೆ

ಯಾರೋ ಕಂಡು ಮನೆಗೆ ಕರೆದುಕೊಂಡು ಬಂದರು. ಮನೆಗೆ ಬಂದೊಡನೆಯೇ ಅಜ್ಜಿಯು ಬಂದು 'ಯಾರನ್ನೂ ಕರೆದುಕೊಳ್ಳದೆ ಒಬ್ಬನೆ ಯಾಕೆ ಹೋದೆಯೆಂದು ಸ್ವಲ್ಪ ಕೋಪಮಾಡಿ, ಹೆದರಿಕೆಯಿಂದಲಾದರೂ ನೀನು ಮನೆಗೆ ಬರದೆಹೋದೆಯಾ? ಎಂದು ಕೇಳಿದಳು. ಅದಕ್ಕೆ ಆ ಹುಡುಗನು 'ಅಪ್ಪಾ—ಹೆದರಿಕೆಯೆ! ಹೆದರಿಕೆಯನ್ನು ನಾನು ಕಂಡೇ ಇಲ್ಲವಲ್ಲ' ಎಂದನು. ಹೆದರಿಕೆಯಂಬುವದನ್ನೇ ಕಾಣದ ಈ ಹುಡುಗನೆ ಮಹಾಶೂರನೆಂದು ಹೆಸರುಪಡೆದು ಹೋರೇಷಿಯೋನೆಲ್ಸ್ನ ಎಂಬುವನು. ಇವನು ಇಂಗ್ಲೆಂಡ್ ದೇರಸ್ಥನು.

ಮಾರ್ಚಿ ತಿಂಗಳು ವಿದ್ಯಾದಾಯಿನಿಯಲ್ಲಿ ಪ್ರಕಟಿಸಿರುವ ಒಗಟಿಗಳಿಗೆ ಉತ್ತರ

"ನುಕುನಾರಿ"

ಹಿರಿಯಣ್ಣ,
ಹೋಬಳಿಸ್ಕೂಲ್ ವಿದ್ಯಾರ್ಥಿ.
ಅಳಲುಗಟ್ಟ, ಗುಬ್ಬಿ ತಾಲ್ಲೂಕು.

ಒಗಟಿ.

ಹಿಂದೂಸ್ಥಾನದ ಒಂದು ಪಟ್ಟಣದ ಹೆಸರು ಆರು ಅಕ್ಷರಗಳುಳ್ಳದ್ದು.

೧, ೨, ೩ ನೇ ಅಕ್ಷರ = ಹಿಂದೂ ಸಂವತ್ಸರದ ಹೆಸರು
೪, ೫, ೬ ನೇ ಅಕ್ಷರ = ಪುರ
೫, ೧ ನೇ ಅಕ್ಷರ = ಗುಹೆ
೩, ೨, ೪ ನೇ ಅಕ್ಷರ = ಯಜ್ಞ
೬, ೧ ನೇ ಅಕ್ಷರ = ಸೂರ್ಯ
೬, ೩ ನೇ ಅಕ್ಷರ = ವೇಗ
೪, ೫ ನೇ ಅಕ್ಷರ = ಒಡವೆ
೫, ೩ ನೇ ಅಕ್ಷರ = ಬಂಗಾಳದಲ್ಲಿ ಒಂದು ಪುಣ್ಯಕ್ಷೇತ್ರ
೪, ೬ ನೇ ಅಕ್ಷರ = ಮನುಷ್ಯ

ಇದು ಯಾವಪಟ್ಟಣದ ಹೆಸರು?

ಜಿ. ಮುನಿಯಪ್ಪ, ಅ॥ ಮಾ॥
ಗೌರ್ನಮೆಂಟ್ ಕನ್ನಡ ಬಾಯಸ್ ಸ್ಕೂಲ್.
ಉಪ್ಪಾರಹಳ್ಳಿ, ಬೆಂಗಳೂರು ಟವ್ನ.

ಅವರು ಅದನ್ನು ಸರಿಯಾಗಿ ಗ್ರಹಿಸುವರೆಂಬುದು ಗೊತ್ತಾಗುವುದು. ತಾನು ಕಲಿಯುವುದನ್ನು ಬಿಟ್ಟ ಉಪಾಧ್ಯಾಯನಿಗೆ ಇತರರಿಗೆ ಬೋಧಿಸುವುದೂ ಮರೆಯುತಬರುವುದೆಂದು ಒಬ್ಬ ಅನುಭವಶಾಲಿಯಾದ ಉಪಾಧ್ಯಾಯನು ಹೇಳಿದಾನೆ.

ಪೆಸ್ಟಲಾಟ್ಸೀಯವರ ಚರಿತ್ರೆ.

ಸಾವಿರದ ಏಳನೂರ ಎಂಬತ್ತೇಳ (೧೭೮೭) ನೇ ಇಸವಿಯಿಂದ ಸಾವಿರದ ಏಳನೂರತೊಂಬತ್ತೇಳ (೧೭೯೭) ನೇ ಇಸವಿವರೆವಿಗೂ ಪೆಸ್ಟಲಾಟ್ಸೀಯವರು ಲೋಕೋಪಕಾರಾರ್ಥವಾಗಿ ತಾವು ಬರೆದ ಗ್ರಂಥಗಳಲ್ಲಿ ಯಾವದನ್ನು ಮುದ್ರಿಸಲಿಲ್ಲ. ಇವಕ್ಕೆ ದ್ರವ್ಯಸಹಾಯ ಇಲ್ಲದ್ದೇ ಮುಖ್ಯಕಾರಣ. ಈಕಾಲದಲ್ಲಿ ಇವರು ಜೀವನಾರ್ಥವಾಗಿ ಕೈಗಾರಿಕೆ ಕೆಲಸಗಳನ್ನು ಮಾಡುತ್ತಿದ್ದರು. ಈ ಕಾಲದಲ್ಲಿ ಫ್ರೆಂಚ್‌ದೇಶದ ರಾಜ್ಯಭಾರದಲ್ಲಿ ಬಹಳ ಅನರ್ಥಗಳುಂಟಾದವು. ಆಗಿನ ಫ್ರೆಂಚ್ ಚಕ್ರವರ್ತಿಯವರು, ಚಕ್ರವರ್ತಿನಿಯವರು ಇವರ ಪರಿವಾರಕ್ಕೆ ಸೇರಿದ ಅನೇಕ ದೊಡ್ಡಮನುಷ್ಯರೂ ದೊರೆಸಾನಿಯರೂ ಇಂದ್ರಿಯ ಗ್ರಾಮಗಳಿಗೆ ಅಧೀನರಾಗಿ ಉಚ್ಚೃಂಖಲಪ್ರವೃತ್ತಕರಾಗಿದ್ದರು. ಆಗ ಪ್ರಜೆಗಳಿಗೆ ಇವರಲ್ಲಿ ಗೌರವವು ತಪ್ಪಿತು. ಪ್ರಜೆಗಳು ಒಟ್ಟಾಗಿ ತಮ್ಮ ಪ್ರಭುವನ್ನು ಚಕ್ರವರ್ತಿನಿಯವರೆನ್ನು ಮರಣದಂಡನೆಗೆ ಗುರಿಮಾಡಿದ್ದು ಅಲ್ಲದೇ ಇವರ ದುರ್ಮಾರ್ಗಪ್ರವರ್ತನೆಗೆ ಕಾರಣಭೂತರಾದ ಅನೇಕ ಜನರನ್ನು ಗಲ್ಲಿಗೆ ಹಾಕಿದರು. ರಾಜ್ಯಭಾರಾರ್ಥವಾಗಿ ಪ್ರಜೆಗಳ ಪ್ರತಿನಿಧಿಗಳುಳ್ಳ ಸಭೆಯನ್ನು ಏರ್ಪಡಿಸಿ ಚಕ್ರವರ್ತಿಗಳಿಂದ ನಡೆಯುತಕ್ಕ ಪ್ರಭುತ್ವವನ್ನೇ ತೆಗೆದುಹಾಕಿದರು. ಈ ಪ್ರವರ್ತನೆಗೆ ಕಾರಣ ಭೂತರು ಅನೇಕರು ಇದ್ದರು. ಇವರುಗಳು ಪೆಸ್ಟಲಾಟ್ಸೀಯವರಂತೆ ಸನ್ಮಾರ್ಗಪ್ರವರ್ತನೆಯೇ ಸಕಲ ಪದವಿಗಳಿಗೂ ಅಲಂಕಾರವಾದುದೆಂಬದಾಗಿಯೂ ದುರ್ಮಾರ್ಗಪ್ರವರ್ತಕರಾದ ಪ್ರಭುಗಳೂ ಕೂಡಾ ಪುರಸ್ಕಾರಕ್ಕೆ ಅರ್ಹರಾಗುವದಿಲ್ಲವೆಂಬದಾಗಿಯೂ ಹೀನಸ್ಥಿತಿಯುಳ್ಳರತಕ್ಕ ಜನರು ದುರ್ಮಾರ್ಗಪ್ರವರ್ತಕರಾದರೆ ಅನರ್ಥಗಳುಂಟಾಗುತ್ತೆಂಬದಾಗಿಯೂ ಪ್ರಬಲರಾಧವರು ಈ ರೀತಿಯಲ್ಲಿ ಪ್ರವರ್ತಿಸಿದರೆ ಧರ್ಮ

ಬಹಳ ಸಾಹಾಯ್ಯವನ್ನು ಮಾಡುವುದು.

***

ಪಂಜಾಬ್ ದೇಶದಲ್ಲಿ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರಾಗಿರುವ ಮೆ॥ ಸ್ಯಮ್ ಸಾ॥ ರವರು ನಾರ್ಮಲ್‌ಸ್ಕೂಲ್‌ಗಳಲ್ಲಿ ತುಯಾರಾದ ಉಪಾಧ್ಯಾಯರ ಸಂಖ್ಯೆಯು ಹೆಚ್ಚುತ ಹೆಚ್ಚುತ ವಿದ್ಯಾಭ್ಯಾಸಕ್ರಮವು ತೃಪ್ತಿಕರವಾಗುತ ಬಂದಿರುವುದೆಂಬ ತಮ್ಮ ಅಭಿಪ್ರಾಯವನ್ನು ತಿಳಿಸಿ, ಪ್ರತಿಯೊಂದು ಪಾಠಶಾಲೆಯಲ್ಲೂ ಉಪಾಧ್ಯಾಯರೆಲ್ಲರೂ ಸೇರಿ ಒಂದು ಸಂಘವನ್ನು ಏರ್ಪಾಡು ಮಾಡುವುದು ಬಹಳ ಒಳ್ಳೇದೆಂದು ಹೇಳಿದಾರೆ. ಈ ಸಂಘದವರು ಆಗಾಗ್ಗೆ ಸೇರಿ ಬಾಲಕರಿಗೆ ವಿಷಯಗಳನ್ನು ಬೋಧಿಸುವ ಕ್ರಮವೇ ಮುಂತಾದ ವಿಷಯವಾಗಿ ಚರ್ಚಿಸುತ್ತಿದ್ದರೆ ಸರ್ವರಿಗೂ ಪ್ರಯೋಜನವಾಗುವುದು. ನಾರ್ಮಲ್‌ಸ್ಕೂಲ್‌ಗಳಲ್ಲಿ ಓದದೇ ಇರುವವರಿಗೆ ತಿಳುವಳಿಕೆಯು ಇದರಿಂದ ಹೆಚ್ಚುವುದು ; ಹಾಗೆ ಓದಿಬಂದಿರುವವರಿಗೆ ನಾರ್ಮಲ್‌ಸ್ಕೂಲ್‌ಗಳಲ್ಲಿ ತಾವು ಕಲಿತದ್ದು ಮರೆಯದಿರುವುದು. ಈಂಥ ಸಭೆಗಳಿಂದ ಉತ್ತರೋತ್ತರ ದೇಶದಲ್ಲಿ ವಿದ್ಯಾಭ್ಯಾಸ ಹೆಚ್ಚುವುದರಲ್ಲಿ ಸಂಶಯವಿಲ್ಲ. ಅನುಕೂಲವಿದ್ದಕಡೆ ನಮ್ಮ ದೇಶದಲ್ಲೂ ಸಹ ಉಪಾಧ್ಯಾಯರು ಹೀಗೆಮಾಡಾರೆಂದು ನಂಬುತ್ತೇವೆ.

***

ಪ್ರತಿಯೊಬ್ಬ ಉಪಾಧ್ಯಾಯನು ತಾನು ಬೋಧಿಸುವುದರ ಜತೆಗೆ ತನ್ನ ಬುದ್ಧಿಗೆ ಉತ್ತೇಜಕವಾದ ಬೇರೊಂದುಕೆಲಸವನ್ನಿಟ್ಟುಕೊಂಡಿರುವುದು ಅವಶ್ಯಕ. ಉಪಾಧ್ಯಾಯನಾದವನು ತನಗಿಂತಲೂ ಬುದ್ಧಿಶಕ್ತಿಯಲ್ಲಿ ಕಡಮೆಯವರಾದ ಬಾಲಕರೊಡನೆ ಸೇರಿ ಕೆಲಸ ಮಾಡುತಿರಬೇಕು. ಇದರಿಂದ ಆತನಿಗೆ ಅಭಿವೃದ್ಧಿಗೆ ಅವಕಾಶ ಕಡಮೆಯಾಗುವುದು. ಕೀಳಾಗಿರುವವರ ಸಂಬಂಧವು ವಿಶೇಷವಾಗಿರುವುದರಿಂದ ತನ್ನ ಕೊರತೆಗಳು ಮರೆತುಹೋಗಬಹುದು ಆದುದರಿಂದ ಉಪಾಧ್ಯಾಯರು ಬೇರೊಂದು ಕೆಲಸವನ್ನು ಸರಿಯಾಗಿ ಮಾಡುತಿರುವುದರಿಂದ ಅಂದರೆ ಶಾಸ್ತ್ರಾಂತರಗಳನ್ನಾಗಲಿ ಅಥವಾ ಓದಿರುವ ಶಾಸ್ತ್ರಗಳಲ್ಲೇ ಉದ್ಗ್ರಂಥಗಳನ್ನು ನೋಡುತಿರುವುದರಿಂದಾಗಲಿ ತಮ್ಮ ಬುದ್ಧಿಯ ಪರಿಪಾಕವು ಮಲಿನವಾಗದಂತೆ ನೋಡಿಕೊಳ್ಳಬೇಕು. ಇದರಿಂದ ತನ್ನ ಬೋಧನೆಗೂ ಸಹ ಪ್ರಯೋಜನವಾಗುವುದು. ತಾನು ಹೊಸವಿಷಯಗಳನ್ನು ಗ್ರಹಿಸುತ್ತಿರುವುದರಿಂದ, ಬಾಲಕರಿಗೆ ಹೊಸ ವಿಷಯಗಳನ್ನು ಹೇಗೆ ಬೋಧಿಸಿದರೆ

ತಕ್ಕದ್ದೇನು ? ತಂದೆತಾಯಿಗಳು ಮಕ್ಕಳಿಗೆ ಒಳ್ಳೆ ಮೇಲು ಪಜ್ಞೆಯನ್ನು ಹಾಕಿ ಸರಿಯಾದ ಶಿಕ್ಷೆಯನ್ನು ಮಾಡಿ ಧರ್ಮವಾದ ಮಾರ್ಗದಲ್ಲಿ ಅವರನ್ನು ನಡಿಯುವಂತೆ ಮಾಡುವದಲ್ಲದೆ ಯಾವಾಗಲ್ಯೂ ಅವರಿಗೆ ಕೆಟ್ಟ ಸಹವಾಸ ಸಿಕ್ಕದಂತೆ ಮಾಡಿದರೆ ಅವರು ಸನ್ಮಾರ್ಗಪ್ರವರ್ತಕರಾಗಿಯೂ ದೊಡ್ಡ ಮನುಷ್ಯರಾಗಿಯೂ ಆಗಿರುವರು. ಹಾಗಿಲ್ಲದೆ ಕೆಟ್ಟ ಮೇಲು ಪಜ್ಞೆಯನ್ನು ಹಾಕಿ ಕೆಟ್ಟ ಸಹವಾಸದಿಂದ ಅವರನ್ನು ತಪ್ಪಿಸದೇ ಇದ್ದರೆ ಅವರು ದುರ್ಮಾರ್ಗದಲ್ಲಿ ಅಗ್ರಗಣ್ಯರಾಗುವರು. ಇಂಥಾ ಜನರು ಹೆಚ್ಚಿದ ಹಾಗೆಲ್ಲಾ ಧರ್ಮಗಳು ಕ್ಷೀಯಿಸುವವು. ಅಧರ್ಮಗಳು ಹೆಚ್ಚುವವು. ದೇಶವು ಹೀನಸ್ಥಿತಿಗೆ ಬರುವದು. ಆದ್ದರಿಂದ ಜನರು ಕುದುರೆಯೇ ಮೊದಲಾದ ಪ್ರಾಣಿಗಳಿಗೆ ಕಲ್ಪಿಸುವಷ್ಟು ಶಿಕ್ಷೆಯನ್ನಾದರೂ ತಮ್ಮ ಮಕ್ಕಳಿಗೂ ಕಲ್ಪಿಸುವದು ಅತ್ಯಂತ ಅವಶ್ಯಕವಾದದ್ದು.

೨. ಒಂದು ನದೀ ತೀರದಲ್ಲಿ ಕೆಲವು ಕಾಡುಗಿಡಗಳು, ಕೆಲವು ತ್ಯಾಗದ ಗಿಡಗಳೂ ಬೆಳೆದುಕೊಂಡಿದ್ದವು. ಕಾಡು ಗಿಡಗಳು ಬಹಳ ಕೋಮಲವಾಗಿ ಬೆಳೆದಿದ್ದವು. ತ್ಯಾಗದ ಗಿಡಗಳು ಚೆನ್ನಾಗಿ ಬೆಳೆದಿರಲಿಲ್ಲ. ಇವುಗಳನ್ನು ಒಬ್ಬ ವಿದ್ಯಾರ್ಥಿಯು ನೋಡಿ ತ್ಯಾಗದ ಗಿಡಕ್ಕಿಂತಲೂ ಕಾಡು ಗಿಡಗಳಿಂದ ಸರ್ವೋತ್ಕೃಷ್ಟವಾದ ಮರ ಮುಟ್ಟು ಆಗಬಹುದೆಂದು ಭಾವಿಸಿದನು ಅದೇ ರೀತಿಯಲ್ಲಿ ಆ ಗಿಡಗಳನ್ನು ಕತ್ತರಿಸಿ ಮರ ಮುಟ್ಟುಗಳಿಗೆ ಉಪಯೋಗಿಸಬೇಕೆಂದು ಪ್ರಯತ್ನ ಮಾಡಿದಾಗ ಬಹಳ ಕೋಮಲವಾಗಿ ಬೆಳೆದಿದ್ದ ಕಾಡುಗಿಡಗಳು ಸೌದೆಗೆ ಹೊರತು ಶ್ರೇಷ್ಠವಾದ ಇತರ ಕೆಲಸಗಳಿಗೆ ಉಪಯೋಗಿಸುವುದಿಲ್ಲವೆಂದು ಗೊತ್ತಾಯಿತು. ತ್ಯಾಗದ ಗಿಡವು ಎಲ್ಲಾ ಕೆಲಸಗಳಿಗೂ ಉಪಯೋಗವಾಗುವದೆಂಬದಾಗಿ ಗೊತ್ತಾಯಿತು. ಹುಡುಗರಲ್ಲಿಯೂ ದೊಡ್ಡವರಲ್ಲಿಯೂ ಸಂಸ್ಕಾರ ಬಲದಿಂದ ತ್ಯಾಗದ ಮರದಂತೆ ಸರ್ವೋತ್ಕೃಷ್ಟವಾದ ಅನೇಕ ಕೆಲಸಗಳಿಗೆ ಉಪಯೋಗವಾಗತಕ್ಕ ಜನರು ಇರತಾರೆ. ಬಹಳ ಚೆನ್ನಾಗಿ ಬೆಳೆದಿದ್ದಾಗ್ಯೂ ಸೌದೆಗೆ ವಿನಹಾ ಇನ್ನಾವ ಕೆಲಸಕೂ ಉಪಯೋಗವಾಗದೇ ಇರತಕ್ಕ ಕಾಡು ಗಿಡಗಳಂತೆ ಇರತಕ್ಕ ಜನರೂ ಇರುತ್ತಾರೆ ಆದರೆ ಅಂಥಾ ಜನರಿಗೂ ಕಾಡುಗಿಡಗಳಿಗೂ ಒಂದು ವೈಲಕ್ಷಣ್ಯ ಉಂಟು. ಕಾಡು ಗಿಡಗಳೂ ಕೂಡಾ ಅನೇಕ ವಿಧವಾಗಿ ಜನರಿಗೆ ಉಪಯೋಗಕ್ಕೆ ಬರುವದು. ಅಶಿಕ್ಷಿತರಾಗಿ ಕೆಟ್ಟ ಸಹವಾಸದಲ್ಲಿ ಬೆಳೆದು ಒಳ್ಳೇ ಸಂಸ್ಕಾರವಿಲ್ಲದೆ ದುರ್ಮಾರ್ಗಪ್ರವರ್ತ